ಚಿತ್ರದುರ್ಗ ಜಿಲ್ಲೆ ಸಂಪ್ರದಾಯ ಶಿಲ್ಪಕಲೆ:
ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದ ರಥ ಶಿಲ್ಪಗಳನ್ನು ಅನಲಕ್ಷಿಸಿ.

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸಿದ ಫೆಲೋಷಿಪ್ ಪ್ರಬಂಧ)

ಸಂಶೋಧಕ:
ಸಾಣೀಕೆರೆರಘು(ಪಿ.ಆರ್.ರಘುನಾಥ್)

ಮಾರ್ಗದರ್ಶಕರು:
ಡಾ: ಎಸ್.ಸಿ. ಪಾಟೀಲ್

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಚಾಲುಕ್ಯ ವಿಭಾಗ, ಜೆ.ಸಿ.ರಸ್ತೆ,
ಬೆಂಗಳೂರು-560002
ಮಾರ್ಚ್-2017

" ಓಂ ಶ್ರೀ ವಿಘ್ನೇಶ್ವರಾಯ ನಮಃ "

ಚಿತ್ರದುರ್ಗ ಜಿಲ್ಲೆ ಸಂಪ್ರದಾಯ ಶಿಲ್ಪಕಲೆ: ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದ ರಥ ಶಿಲ್ಪಕಲೆಗಳನ್ನು ಅನುಲಕ್ಷಿಸಿ.

" ಕರ್ನಾಟಕ. ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸಿದ ಪ್ರಬಂಧ "

ಸಂಶೋಧಕ :

ಸಾಣೇಕೆರೆ ರಘು(ಪಿ.ಆರ್.ರಘುನಾಥ್)

ಮೊ: 9880768631.

ಮಾರ್ಗದರ್ಶಕರು:

ಡಾ॥ ಎಸ್.ಸಿ. ಪಾಟೀಲ್

ಮೊ: 9448563687

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಚಾಲುಕ್ಯ ವಿಭಾಗ, ಜೆ.ಸಿ.ರಸ್ತೆ,

ಬೆಂಗಳೂರು–560002.

ಮಾರ್ಚ್–2017

ಕರ್ನಾಟಕ ಸರಕಾರ

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬಾದಾಮಿ

ಪ್ರಾದೇಶಿಕ ಕಛೇರಿ : ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ

ಅಭಯ ಸಂಕೀರ್ಣ ಭವನ, ಕೆಳಮಹಡಿ-05, ನಂ.55, ರಿಸಾಲ್ದಾರ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

ದೂ. 080-23460019 ಮೊ. +91 94485 63687 ಇ-ಮೇಲ್ : karnatakafineartuniversity@gmail.com,

ಪ್ರೊ. ಎಸ್. ಸಿ. ಪಾಟೀಲ
ವಿಶೇಷಾಧಿಕಾರಿಗಳು

ಸಂಖ್ಯೆ: ಕಲವಿವಿ:೨೦:ದೈ.ಪ:೨೦೧೬-೧೭/೧೬೩ ದಿನಾಂಕ : ೧೩.೦೪.೨೦೧೭

ಇವರಿಗೆ,
ರೆಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು

ಮಾನ್ಯರೆ,

ವಿಷಯ : ವಿಶೇಷ ಘಟಕ ಯೋಜನೆಯಡಿ ೨೦೧೫-೧೬ನೇ ಸಾಲಿನ ಫೆಲೋಶಿಪ್ ಅಧ್ಯಯನವನ್ನು ಪೂರ್ಣಗೊಳಿಸಿದ ಕುರಿತು ದೃಢೀಕರಣ ಪತ್ರ

ಉಲ್ಲೇಖ: ಕಶಿಕಅ:೪೭:ವಿ.ಘ.ಯೋ.ಫೆಲೋಷಿಪ್:೨೦೧೫-೧೬ ದಿನಾಂಕ : ೧೩.೦೩.೨೦೧೭

ಈ ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ನನ್ನ ಮಾರ್ಗದರ್ಶನದಲ್ಲಿ **ಶ್ರೀ. ಪಿ. ಆರ್. ರಘುನಾಥ (ಸಾಣೇಕೆರೆ ರಘು)** ಅವರು ಕಿರುಸಂಶೋಧನಾ ಯೋಜನೆ : **"ಚಿತ್ರದುರ್ಗ ಜಿಲ್ಲೆಯ ಸಂಪ್ರದಾಯ ಶಿಲ್ಪಕಲೆ : ಚಳ್ಳಕೆರೆ ತಾಲೂಕಿನ ಮರ ಮಾಧ್ಯಮದ ರಥ ಶಿಲ್ಪಗಳನ್ನು ಅನುಲಕ್ಷಿಸಿ"** ಎಂಬ ಯೋಜನೆಯನ್ನು ಪೂರ್ಣಗೊಳಿಸಿದ್ದು, ಅವರು ಹಸ್ತಪ್ರತಿಯನ್ನು ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸುತ್ತಿದ್ದಾರೆ. ಅವರಿಗೆ ಫೆಲೋಷಿಪ್ ಅನ್ನು ನಿಯಮಾನುಸಾರ ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತಿದ್ದೇನೆ. ಪ್ರಕಟಣೆಯ ಹಂತದಲ್ಲಿ ಒಂದಿಷ್ಟು ಪರಿಷ್ಕರಣೆಯನ್ನು ಮಾಡಿ ಮುದ್ರಣ ಮಾಡಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ
[signature] 13/4/2017
(ಪ್ರೊ. ಎಸ್. ಸಿ. ಪಾಟೀಲ)

ಪ್ರತಿ
೧. ಕಛೇರಿ ಪ್ರತಿ

<u>ಪ್ರಮಾಣ ಪತ್ರ</u>

ಚಿತ್ರದುರ್ಗ ಜಿಲ್ಲೆ ಸಂಪ್ರದಾಯ ಶಿಲ್ಪಕಲೆ: ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದ ರಥ ಶಿಲ್ಪಕಲೆಗಳನ್ನು ಅನುಲಕ್ಷಿಸಿ. ಎಂಬ ಶೀರ್ಷಿಕೆಯ ಪ್ರಬಂಧವನ್ನು ಫೆಲೋಶಿಪ್‌ಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಡಾ: ಎಸ್.ಸಿ. ಪಾಟೀಲ್ ರವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಲಾಗಿದೆ, ಪ್ರಸ್ತುತ ಈ ಪ್ರಬಂಧವನ್ನು ಯಾವುದೇ ಅಕಾಡೆಮಿಗೆ ಅಥವಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : –04–2017

ಸ್ಥಳ : ಬೆಂಗಳೂರು

ಸಾಣೀಕೆರೆರಘು(ಪಿ.ಆರ್.ರಘುನಾಥ್)

ಸಾಣೀಕೆರೆ–577522, ಚಳ್ಳಕೆರೆ ತಾಲ್ಲೂಕು,

ಚಿತ್ರದುರ್ಗ ಜಿಲ್ಲೆ, ಮೊ: 9880768631.

ಪರಿವಿಡಿ

ಚಿತ್ರದುರ್ಗ ಜಿಲ್ಲೆ



ಜಿಲ್ಲೆಯಲ್ಲಿರುವ ನದಿಗಳು :

1). ವೇದಾವತಿ

2). ಚಿನ್ನಹಗಿರಿ(ಜಿನ್ನಾಗರಿ)

3). ಸುವರ್ಣ ಮುಖಿ

ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳು :

1). ಚಿತ್ರದುರ್ಗ

2). ಹೊಸದುರ್ಗ

3). ಹೊಳಲ್ಕೆರೆ

4). ಚಳ್ಳಕೆರೆ

5). ಹಿರಿಯೂರು

6). ಮೊಳಕಾಲ್ಮೂರು

ಅಧ್ಯಾಯ – 1

ವಿಷಯ ಪ್ರವೇಶ

1. ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ
2. ಅಧ್ಯಯನದ ಭೌಗೋಳಿಕ ಕ್ಷೇತ್ರ
3. ಭೌಗೋಳಿಕ ಲಕ್ಷಣಗಳು
4. ಸಂಪ್ರದಾಯ ಶಿಲ್ಪಕಲೆಗಳ ಅಧ್ಯಯನ ಕ್ರಮ
5. ಚಿತ್ರದುರ್ಗ ಜಿಲ್ಲೆಯ ಅಧ್ಯಯನ
6. ಶಿಲ್ಪಕಲೆಯ ಹಿನ್ನೆಲೆ
7. ಕಲೆಯ ವಿವಿಧ ಆಯಾಮಗಳು
8. ಸಂಪ್ರದಾಯ ಶಿಲ್ಪಕಲೆಯ ವ್ಯವಸ್ಥೆ
9. ಸಂಪ್ರದಾಯ ಶಿಲ್ಪಿಗಳ ಹಿನ್ನೆಲೆ
10. ಸಂಪ್ರದಾಯ ಶಿಲ್ಪಕಲಾವಿದರ ವ್ಯವಸ್ಥೆ
11. ಪೂರ್ವ ಇತಿಹಾಸದ ಶಿಲ್ಪಕಲಾವಿದರು

ವಿಷಯ ಪ್ರವೇಶ

ಕನ್ನಡ ನಾಡು ಕಲಾವಿದರ ಬೀಡು, ಕಲೆಗಳ ನಾಡು, ಕಲೆ ಪ್ರತಿಯೊಬ್ಬ ಮನುಷ್ಯನಲ್ಲೂ ಅಡಕವಾಗಿರುತ್ತದೆ, ಆದರೆ ವ್ಯತ್ಯಾಸ, ಗುಣವಿಶೇಷತೆಗಳು ವಿಭಿನ್ನವಾಗಿರುತ್ತವೆ, ಶಿಲ್ಪಕಲೆ, ಚಿತ್ರಕಲೆ, ರಂಗಭೂಮಿ ಕಲೆ, ಸಾಹಿತ್ಯ ರಚನಾ ಕಲೆ, ಕ್ರೀಡಾಕಲೆ, ಜಾನಪದ ಕಲೆ ಮುಂತಾದವುಗಳು.

ಮಾನವನಿಗೆ ಕಲೆ ವಂಶ ಪಾರಂಪರ್ಯವಾಗಿ, ಸಮೂಹಗಳ ಸಹವಾಸದಿಂದ ಬಂದಿರಬಹುದು, ಅಥವಾ ಸೃಷ್ಟಿಯ ವಿಶೇಷತೆಗಳ ನೋಟದಿಂದ, ತನ್ನ ಬುದ್ದಿ ಕೌಶಲ್ಯತೆಯಿಂದ ಕಲೆ ಹಾಸುಹೊಕ್ಕಾಗಿರಲೂ ಬಹುದು, ಏನೇ ಆಗಲಿ ಮನುಷ್ಯನನ್ನು ಬಿಟ್ಟು ಕಲೆ ಇಲ್ಲ, ಕಲೆಯನ್ನು ಬಿಟ್ಟು ಮನುಷ್ಯನಿಲ್ಲ, ಕಲೆ ಹಾಗೂ ಮಾನವ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಮಾನವನ ಕೈಚಳಕ ಮತ್ತು ಬುದ್ದಿಯಿಂದ ರಚಿತವಾದ ಅನೇಕ ರೀತಿಯ ಕಲಾಪ್ರಕಾರಗಳಲ್ಲಿ ಶಿಲ್ಪ ಕಲೆಯೂ ಒಂದಾಗಿದೆ, ಶಿಲ್ಪಕಲೆಗೆ ನಮ್ಮ ನಾಡು ಅತ್ಯಂತ ಹಿರಿದಾಗಿದೆ ಮತ್ತು ಮನೋಘ್ನವಾಗಿದೆ, ಕಲೆಯ ತವರೂರು ಕನ್ನಡನಾಡು ಎಂದು ಕೆಲವರು ವ್ಯಾಖ್ಯಾನಿಸಿದ್ದಾರೆ.

ಹಿಂದಿನಿಂದ ಇಂದಿನವರೆಗೂ ಮಾನವನ ಬುದ್ಧಿ, ಕೈಚಳಕದಿಂದ ರೂಪುಗೊಂಡ ಶಿಲ್ಪಕಲೆ, ಕಲಾ ಪ್ರಕಾರಗಳು ನಾಡಿನ ಕೀರ್ತಿಕಳಶಗಳು, ಮನುಷ್ಯ ಹವ್ಯಾಸಕ್ಕಾಗಿ, ವೃತ್ತಿಯಾಗಿ, ಸಂಪ್ರದಾಯವಾಗಿ, ಸಂತೋಷಕ್ಕಾಗಿ, ತನ್ನ ಜೀವನ ಶೈಲಿಯ ಪರಿಚಯಕ್ಕಾಗಿ, ಇನ್ನೊಬ್ಬರ ನೆನಪಿಗಾಗಿ ಹೀಗೆ ಅನೇಕ ಕಾರಣಗಳಿಂದ ಚಿತ್ರಕಲೆ ಹಾಗೂ ಶಿಲ್ಪಕಲೆಯನ್ನು ಮಾಡುತ್ತಾ ಬಂದಿದ್ದಾನೆ, ಇಂತಹ ಪ್ರಕಾರಗಳಲ್ಲಿ ಒಂದಾದ "ಸಂಪ್ರದಾಯ ಶಿಲ್ಪಕಲೆ"ಯ ಬಗ್ಗೆ ಸಂಶೋಧನೆ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಸಂಪ್ರದಾಯ ಶಿಲ್ಪಕಲೆ, ಕಲಾವಿದರ ಅಧ್ಯಯನ, ಹಾಗೂ ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದಿಂದ ರಚನೆಗೊಂಡ ರಥ ಶಿಲ್ಪಕಲೆ ಹಾಗೂ ರಥೋತ್ಸವದ ವೈವಿಧ್ಯತೆಯನ್ನು ಒಳಗೊಂಡಂತೆ ಅಧ್ಯಯನ ಮಾಡುವುದಾಗಿದೆ, ಸಂಪ್ರದಾಯ ಶಿಲ್ಪಕಲೆಯ ಪ್ರಕಾರಗಳು ಮತ್ತು ಸಂಪ್ರದಾಯ ಶಿಲ್ಪಕಲೆಯಲ್ಲಿ ನಿರತರಾಗಿರುವ ಕಲಾವಿದರ ವಿವರ, ಜೀವನ ಶೈಲಿ, ಶಿಲ್ಪಕಲೆಗಳು, ಕಲಾವಿದರ ಸಮುದಾಯಗಳು, ಅವರ ವಾಸಸ್ಥಳ, ಸ್ಥಳ ವಿಶೇಷ, ಶಿಲ್ಪಗಳ ವಿಭಿನ್ನತೆ, ಮರ ಮಾಧ್ಯಮದಲ್ಲಿ ಬಳಸಬಹುದಾದ ಮರಗಳು ಮುಂತಾದವುಗಳ ಬಗ್ಗೆ ವಿವರಣೆ ಅಧ್ಯಾಯದಲ್ಲಿದೆ.

ಶಿಲ್ಪ ಕಲೆಯಲ್ಲಿ ವಿವಿಧ ಪ್ರಕಾರಗಳಿದ್ದು, ಶಿಲ್ಪಕಲೆಯನ್ನು ಮಾಡುವ ವಿಧಿ-ವಿಧಾನಗಳು, ಶಿಲ್ಪಕಲೆಗೆ ಬಳಸುವ ಮಾಧ್ಯಮಗಳು, ಕಚ್ಚಾ ವಸ್ತುಗಳು, ಬಳಕೆಯ ವಿಧಾನ, ಕಚ್ಚಾ ವಸ್ತುಗಳು ಸಿಗುವ ಸ್ಥಳ, ತರಿಸಿಕೊಳ್ಳುವ ಬಗೆ, ಶಿಲ್ಪಕಲೆಗಳನ್ನು ಮಾಡುವ ಸ್ಥಳಗಳು, ಶಿಲ್ಪಕಲಾವಿದರ ಸಮಸ್ಯೆಗಳು ಮುಂತಾದ ಸಂಪೂರ್ಣ ವಿವರಣೆಯನ್ನು ಈ ಅಧ್ಯಯನದಲ್ಲಿ ದಾಖಲಿಸಲಾಗಿದೆ.

ಚಳ್ಳಕೆರೆ ತಾಲ್ಲೂಕಿನಲ್ಲಿ ಮರ ಮಾಧ್ಯಮದಿಂದ ಮಾಡಿರುವ ರಥಗಳು, ಅವುಗಳ ವಿಭಿನ್ನತೆ, ರಥೋತ್ಸವ ಆಚರಣೆ, ಶಿಲ್ಪ ಕಲಾವಿದರ ಜೀವನ ಶೈಲಿ, ಶಿಲ್ಪ ಕಲೆಗಳ ವಿಭಿನ್ನತೆ, ಇಂದಿನ ಹಾಗೂ ಹಿಂದಿನ ಶಿಲ್ಪಕಲೆ, ಹಿಂದಿನಿಂದಲೂ ಇಂದಿನವರೆವಿಗೂ ನಡೆದುಕೊಂಡು ಬಂದಿರುವ ಸಂಪ್ರದಾಯ ಶಿಲ್ಪಕಲೆ ಹಾಗೂ ಸಂಪ್ರದಾಯ ಶಿಲ್ಪಕಲಾವಿದರ ವಿವರಣೆಯನ್ನೂ ನೀಡಲಾಗಿದೆ.

ಇತಿಹಾಸ ಪೂರ್ವಕಾಲದ ಕಲಾವಿದರ ವಿವರಣೆ, ಅನೇಕ ರಾಜ ವಂಶಗಳವರು ಶಿಲ್ಪಕಲೆಯ ಬಗ್ಗೆ ಕೈಗೊಂಡ ಕ್ರಮಗಳು ಹಾಗೂ ಅವರು ನಿರ್ಮಾಣ ಮಾಡಿಸಿದ ಶಿಲ್ಪಕಲೆಯನ್ನೊಳಗೊಂಡ ದೇವಾಲಯಗಳ ವಿವರಣೆಯನ್ನೂ ಇಲ್ಲಿ ವಿವರಿಸಲಾಗಿದೆ.

1. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಶಿಲ್ಪಕಲೆಯನ್ನು ಹಿಂದಿನಿಂದಲೂ ಹಲವಾರು ಸಮುದಾಯದವರು ಮುಂದುವರಿಸಿಕೊಂಡು ಬಂದಿದ್ದಾರೆ, ಶಿಲ್ಪಕಲೆಯಲ್ಲಿ ಸಂಪ್ರದಾಯ ಕಲೆಯೂ ಒಂದಾಗಿದ್ದು ಕೆಲವರು ಅದನ್ನು ತಮ್ಮ ವೃತ್ತಿಯಾಗಿ ಮಾಡುತ್ತಿದ್ದಾರೆ, ಕೆಲವರು ಆಧುನಿಕ ಜೀವನ ಶೈಲಿಗೆ ಬದಲಾಗಿ ತಮ್ಮ ಸಂಪ್ರದಾಯಗಳನ್ನೇ ಮರೆತು ತಮಗೆ ರುಚಿಸಿದ ವೃತ್ತಿಯನ್ನು ಆಯ್ಕೆಮಾಡಿಕೊಂಡು ಸಂಪ್ರದಾಯ ಕಲೆಯನ್ನು ಮರೆಯುತ್ತಿದ್ದಾರೆ, ಆದರೆ ಕೆಲವರು ತಮ್ಮ ಸಂಪ್ರದಾಯ ಕಲೆಗೆ ಆಧುನಿಕ ಮೆರಗನ್ನು ಕೊಟ್ಟು ಶಿಲ್ಪಗಳನ್ನು ಮಾಡುತ್ತಿದ್ದಾರೆ, ಕೆಲವರು ವೃತ್ತಿ ಮಾಡಲು ಬೇಕಾದ ಕಚ್ಚಾವಸ್ತುಗಳು ಸಿಗದೇ ಅಥವಾ ತರುವ ಶಕ್ತಿಯಿಲ್ಲದೆ ಯೋಚನೆಯಲ್ಲಿದ್ದಾರೆ, ಪರಿಸ್ಥಿತಿಯ ಕಾರಣವೂ ಹೊರತಾಗಿಲ್ಲ, ಆದ್ದರಿಂದ ಈ ಅಧ್ಯಯನದ ಉದ್ದೇಶವೇನೆಂದರೆ, ಸಂಪ್ರದಾಯ ಕಲಾವಿದರ ಸಂಪೂರ್ಣ ವಾಸ್ತವವನ್ನು ಅರಿಯುವ ಮತ್ತು ಸಹಾಯ ಹಸ್ತವನ್ನು ಕಲ್ಪಿಸುವುದು, ಜೊತೆಗೆ ಮುಂದಿನ ಪೀಳಿಗೆಗೆ ಪರಿಚಯಿಸುವುದಾಗಿದೆ.

ಪ್ರಸ್ತುತ ಈ ಅಧ್ಯಯನದಲ್ಲಿ ಸಂಪ್ರದಾಯ ಕಲೆಯ ವಿಧಾನ, ಸಂಪ್ರದಾಯ ಶಿಲ್ಪಕಲಾವಿದರ ಜೀವನ ಕ್ರಮಗಳು, ಸಾಮಾಜಿಕ ಸ್ಥಾನಮಾನ, ಕಲೆ ಹಾಗೂ ಸಾಂಸ್ಕೃತಿಕ ಆಚರಣೆಗಳು, ಕುಟುಂಬ ನಿರ್ವಹಣೆ ವಿಧಿ ವಿಧಾನಗಳು, ಆರ್ಥಿಕ ಪರಿಸ್ಥಿತಿ, ಆಧ್ಯಾತ್ಮಿಕ ಆಚರಣೆ, ರಾಜಕೀಯ ಸ್ಥಾನಮಾನಗಳು, ಶಿಕ್ಷಣ ವ್ಯವಸ್ಥೆ, ಸಮುದಾಯ ಭಾಗಿತ್ವ ಮುಂತಾದ ವಿಚಾರಗಳನ್ನು ಅರಿಯುವ ಮತ್ತು ಅವರ ಸಮಸ್ಯೆಗಳನ್ನು ಕಂಡುಕೊಂಡು ಅವರುಗಳಿಗೆ ಒಂದು ವ್ಯವಸ್ಥೆ ಮತ್ತು ಸರಿಯಾದ ಅಥವಾ ಒಳ್ಳೆಯ ಭವಿಷ್ಯದೆಡೆಗೆ ಕೊಂಡೊಯ್ಯಲು ಇರುವ ಅಡೆತಡೆಗಳನ್ನು ನಿವಾರಿಸಿ, ಮಾರ್ಗದರ್ಶನ ನೀಡುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ.

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಗೆ ಸೇರಿರುವ ತಾಲ್ಲೂಕುಗಳ ಸಂಪ್ರದಾಯ ಶಿಲ್ಪಕಲೆಯ ಬಗ್ಗೆ ಅಧ್ಯಯನ ಮಾಡುವುದು, ಸಮೀಕ್ಷೆ ಮಾಡುವುದು, ದಾಖಲೆ ಅಥವಾ ಅಗತ್ಯ ಭಾವ ಚಿತ್ರಗಳನ್ನು ಸಂಗ್ರಹಿಸುವುದು, ಸಂಪ್ರದಾಯ ಶಿಲ್ಪಕಲೆಯ, ಕಲಾವಿದರ ಮಾಹಿತಿಯನ್ನು ತಿಳಿಯುವುದು, ಮುಖ್ಯವಾಗಿ ಚಳ್ಳಕೆರೆ ತಾಲ್ಲೂಕಿನಲ್ಲಿ ಮರ ಮಾಧ್ಯಮದಿಂದ ನಿರ್ಮಾಣ ಮಾಡಿರಬಹುದಾದ ರಥಗಳ ಬಗ್ಗೆ ವಿವರಣೆ ಈ ಅಧ್ಯಯನದ ವ್ಯಾಪ್ತಿಗೆ ಸೇರಿದೆ.

ಸಂಪ್ರದಾಯ ಶಿಲ್ಪಕಲೆ ಮತ್ತು ಸಂಪ್ರದಾಯ ಶಿಲ್ಪಕಲಾವಿದರು ಎರಡೂ ಒಂದೇ ಎಂಬುದು ಮತ್ತು ಇವೆರಡೂ ಪರಸ್ಪರ ಅಗಲಿ ಇರಲು ಸಾಧ್ಯವಿಲ್ಲ ಎಂಬುದನ್ನು ತೋರಿಸಲು, ಹಿಂದಿನ ಮತ್ತು ಇಂದಿನ ಶಿಲ್ಪಕಲೆಯ ಭಿನ್ನತೆಗಳು, ಪ್ರಭಾವವನ್ನು ಅರಿಯುವುದು ಅಧ್ಯಯನದ ಉದ್ದೇಶವಾಗಿದೆ. ಪ್ರಸ್ತುತ ಸಂಪ್ರದಾಯ ಶಿಲ್ಪಕಲೆ ಎತ್ತಸಾಗುತ್ತಿದೆ, ಇಂದಿನ ಸಾಮಾಜಿಕ ಸಾಮ್ಯತೆ ಹೇಗಿದೆ ಎಂಬುದನ್ನು ಸೂಕ್ಷ್ಮವಾಗಿ ಅರಿಯುವುದು ಮತ್ತು ಉಳಿವಿಗಾಗಿ ಕೈಗೊಳ್ಳಬೇಕಾಗಿರುವ ಕಾರ್ಯವಿಧಾನ, ಸಂದರ್ಶನ ವಿಧಾನ, ಅವಲೋಕನ, ಸಮೀಕ್ಷೆ ವಿಧಾನ, ಭಾವಚಿತ್ರಗಳ ಸಂಗ್ರಹ ವಿಧಾನ, ಅಂಕಿ ಅಂಶಗಳ ವಿಧಾನ ಮತ್ತು ಸಂಹಭಾಗಿತ್ವದ ವಿಧಾನಗಳನ್ನು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಲಭ್ಯವಿರುವ ತಾಲ್ಲೂಕುಗಳಲ್ಲಿ ಕ್ಷೇತ್ರ ಕಾರ್ಯವನ್ನು ಮಾಡಿ, ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದ ಹಾಗೂ ತೊಡಗಿರುವ ಕಲಾವಿದರ ಮತ್ತು ಸಂಪ್ರದಾಯ ಶಿಲ್ಪಕಲೆಗೆ ಸಂಬಂಧಿಸಿದವರನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚಿಸಿ, ಮಾತುಕತೆಗಳ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿದೆ, ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದಿಂದ ನಿರ್ಮಾಣ ಮಾಡಿರುವ ರಥಗಳ ಬಗ್ಗೆ ಮತ್ತು ಅದರಲ್ಲಿ ಅಳವಡಿಸಿರುವ ಶಿಲ್ಪಗಳ ವಿವರಣೆಯನ್ನು ನೀಡಲಾಗಿದೆ, ಸಂಪ್ರದಾಯ ಶಿಲ್ಪಕಲೆಯನ್ನು ಗಟ್ಟಿಗೊಳಿಸಲು ವಿವಿಧ ರೀತಿಯ ಶಿಲ್ಪಕಲೆಗಳ, ದೇವಸ್ಥಾನಗಳಲ್ಲಿರುವ ಶಿಲ್ಪಕಲೆ, ಮರ ಮಾಧ್ಯಮದಿಂದ

ಮಾಡಿರುವ ಶಿಲ್ಪಕಲೆ, ವಿವಿಧ ಮಾಧ್ಯಮಗಳಲ್ಲಿ ಮಾಡಿರುವ ಶಿಲ್ಪಕಲೆಗಳ ಭಾವ ಚಿತ್ರಗಳನ್ನು ತಯಾರಿಸಿ, ಕೆಲವು ಕಡೆ ರೇಖಾ ಚಿತ್ರಗಳನ್ನು ಮಾಡಿ ಈ ಸಂಶೋಧನಾ ಪ್ರಬಂಧದಲ್ಲಿ ಅವೆಲ್ಲವುಗಳನ್ನು ಯಥಾವತ್ತಾಗಿ ಜೋಡಿಸಿ ಸಂಭಂದಿಸಿದ ಕಡೆಗಳಲ್ಲಿ ಅದರ ವಿಚಾರಣೆಗಳನ್ನು ಅಳತೆ ಆಯಗಳನ್ನು ತಿಳಿಸಲಾಗಿದೆ, ಶಿಲ್ಪಕಲೆಗಳ ಮಾದರಿ ಫೋಟೋಗಳನ್ನು ಕೂಡ ಇದರಲ್ಲಿ ಸಂಗ್ರಹಿಸಲಾಗಿದೆ, ಚಳ್ಳಕೆರೆ ತಾಲ್ಲೂಕಿನ ರಥಗಳನ್ನು ಕಟ್ಟುವವರ ವಿವರಣೆ ಮತ್ತು ಕೆಲವು ರಥಗಳ ಭಾವಚಿತ್ರಗಳನ್ನೂ ದಾಖಲಿಸಲಾಗಿದೆ.

ಪರಿಮಿತ ಅವಧಿಯೊಳಗೆ ಕ್ಷೇತ್ರಕಾರ್ಯವನ್ನು ಮಾಡಿ ಲಭ್ಯವಿರುವ ಕಡೆಗಳಿಂದ ಮಾಹಿತಿಯನ್ನು, ಭಾವಚಿತ್ರಗಳನ್ನು ಸಂಗ್ರಹಿಸಿದೆ, ಕೆಲವು ಹಿರಿಯರಿಂದ, ಸಂಪ್ರದಾಯ ಕಲಾವಿದರಿಂದ, ಇನ್ನೂ ಕೆಲವು ಮಾಹಿತಿ ಉಳ್ಳವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳಲ್ಲಿ ಕೆಲವು ಗ್ರಾಮಗಳ, ನಗರಗಳ, ಸ್ಥಳಗಳ ಶಿಲ್ಪಕಲೆಯನ್ನು ಮತ್ತು ಪರಿಮಿತ ಅವಧಿಯೊಳಗೆ ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿರುವ ಕಲಾವಿದರ ಶಿಲ್ಪಕಲೆಗಳ ವಿವರಣೆಯನ್ನು ಅದರಲ್ಲೂ ಚಳ್ಳಕೆರೆ ತಾಲ್ಲೂಕನ್ನು ವಿಶೇಷವಾಗಿ ಗಮನಿಸಿ ವಿವಿಧ ಗ್ರಾಮಗಳಲ್ಲಿ ಇರುವ ಮರ ಮಾಧ್ಯಮದ ರಥ ಶಿಲ್ಪಕಲೆಗಳು, ಉಚ್ಚಯ, ರಥೋತ್ಸವದ ಬಗ್ಗೆ ಅಧ್ಯಯನ ಮಾಡಲಾಗಿದೆ, ಜಿಲ್ಲೆಯಲ್ಲಿ ಅಲ್ಲದೇ ತಾಲ್ಲೂಕು ಮಟ್ಟದಲ್ಲೂ ವಿವಿಧ ಮಾಧ್ಯಮದ ಶಿಲ್ಪಕಲೆಗಳ ಸಾಕಷ್ಟು ಮಾಹಿತಿ ದೊರೆಯುತ್ತದೆ, ಆದ ಕಾರಣ ಲಭ್ಯವಿರುವ ವಿವಿಧ ಮಾಧ್ಯಮದ ಶಿಲ್ಪಕಲೆಗಳ ಬಗ್ಗೆ ಇನ್ನು ಕೆಲವರು ಅಧ್ಯಯನವನ್ನು ಮಾಡಬಹುದು.

2. ಅಧ್ಯಯನದ ಭೌಗೋಳಿಕ ಕ್ಷೇತ್ರ

ಚಿತ್ರದುರ್ಗ ಜಿಲ್ಲೆ ಹಾಗೂ ವಿಶೇಷವಾಗಿ ಚಳ್ಳಕೆರೆ ತಾಲ್ಲೂಕುಗಳಲ್ಲಿನ ರಥಗಳಿರುವ ಪ್ರತಿಯೊಂದು ಗ್ರಾಮಗಳಿಗೂ ಬೇಟಿಕೊಟ್ಟು ಮಾಹಿತಿಯನ್ನು ಸಂಗ್ರಹಿಸಲಾಗಿದೆ, ಅನೇಕ ವಿಧದ ಕಲಾ ಪ್ರಕಾರಗಳಲ್ಲಿ ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ, ಕರಕುಶಲ ಹೀಗೆ, ವಿವಿಧ ರೀತಿಯ ಕಲೆಗಳಿವೆ, ಒಂದೊಂದು ಕಲೆಗಳಲ್ಲು ವಿಭಿನ್ನತೆ, ವಿಶಿಷ್ಟತೆ, ವಿವಿಧ ಭಾಗಗಳೂ ಇವೆ, ಇಂತಹ ಕಲಾ ಪ್ರಕಾರಗಳಲ್ಲಿ ಶಿಲ್ಪಕಲೆಗೆ ಸಂಬಂಧಿಸಿದಂತಹ ಸಂಪ್ರದಾಯ ಶಿಲ್ಪಕಲೆ, ಸಂಪ್ರದಾಯ ಶಿಲ್ಪಕಲಾವಿದರ ಕುರಿತು ಅಧ್ಯಯನ ಮತ್ತು ಮರ ಮಾಧ್ಯಮದಲ್ಲಿ ಮಾಡಿದ ರಥ ಶಿಲ್ಪಕಲೆಯ ಅಧ್ಯಯನವನ್ನು ಮಾಡುವುದು ನಮ್ಮ ಮುಖ್ಯ ಉದ್ದೇಶ.

ಸಂಪ್ರದಾಯ ಶಿಲ್ಪಕಲೆ ಪ್ರಾಚೀನವಾದ ಕಲೆಯಾಗಿದೆ, ಇದರಲ್ಲಿ ಅನೇಕ ವಿಧಗಳುಂಟು, ಕಲ್ಲಿನ ಶಿಲ್ಪಕಲೆ, ಮಣ್ಣಿನ ಶಿಲ್ಪಕಲೆ, ಮರಗಳ ಶಿಲ್ಪಕಲೆ, ಸಿಮೆಂಟು, ಫೈಬರ್, ವಿವಿಧ ಲೋಹಗಳಲ್ಲಿ ಶಿಲ್ಪಕಲೆಯನ್ನು ಕಾಣಬಹುದಾಗಿದೆ.

ಮೊದಲೆಲ್ಲಾ ಇಂತಹ ಕಲೆಯಲ್ಲಿ ನಿರತರಾಗಿದ್ದವರು ಬಹುಸಂಖ್ಯೆಯಲ್ಲಿದ್ದರು, ಆಧುನಿಕತೆಯ ಪ್ರಭಾವದಿಂದ ಬೆರಳೆಣಿಕೆಯಷ್ಟೇ ಜನರು ಇಂತಹ ಕಲೆಯನ್ನು ಮುಂದುವರೆಸುತ್ತಿದ್ದಾರೆ, ಸಂಪ್ರದಾಯ ಶಿಲ್ಪಕಲೆಯನ್ನು ಮುಖ್ಯವಾಗಿ ದೇವಸ್ಥಾನಗಳಲ್ಲಿ, ಅರಮನೆಗಳಲ್ಲಿ, ಗುರುದ್ವಾರಗಳಲ್ಲಿ, ಉಳ್ಳವರ ಮನೆಗಳಲ್ಲಿ ಕಾಣಬಹುದಾಗಿದೆ, ಹೆಚ್ಚಾಗಿ ದೇವಸ್ಥಾನಗಳು ಶಿಲ್ಪ ಕಲೆಯ ಅವಿಭಾಜ್ಯ ಅಂಗಗಳು, ಮೊದಲೆಲ್ಲಾ ಕಲ್ಲುಗಳಲ್ಲಿ, ಮರದಲ್ಲಿ, ಗಾರೆಯಲ್ಲಿ, ಮಣ್ಣಿನಲ್ಲಿ ಮತ್ತು ವಿವಿಧ ಲೋಹಗಳನ್ನು ಬಳಸಿ ಮಾಡುತ್ತಿದ್ದರು, ಆದರೆ ಆದುನಿಕ ಯುಗದಲ್ಲಿ ಸಿಮೆಂಟ್, ಫೈಬರ್, ಮಣ್ಣು, ಪಿ.ಓ.ಪಿ. ಪೌಡರ್, ವಿವಿಧ ಲೋಹಗಳು ಮತ್ತು ಮುಂತಾದವುಗಳಿಂದ ಮಾಡುತ್ತಾರೆ.

ಹಿಂದಿನ ಹಾಗೂ ಇಂದಿನ ಸಂಪ್ರದಾಯ ಶಿಲ್ಪಕಲೆಯಲ್ಲಿನ ವ್ಯತ್ಯಾಸ ವಿವಿಧತೆಗಳನ್ನು ಸಂಗ್ರಹಿಸುವುದು, ಅದನ್ನು ಮುಂದಿನ ಪೀಳಿಗೆಗೆ ಉಳಿಸುವ ಕಾರ್ಯ ಮಾಡಬೇಕಿದೆ, ಸಂಪ್ರದಾಯ ಶಿಲ್ಪ ಕಲೆಯನ್ನು ಮುಂದುವರೆಸಲು ಉತ್ತೇಜಿಸುವುದು ಮತ್ತು ಶಿಲ್ಪ ಕಲೆಯು ಇರುವ ಸ್ಥಳಗಳು ಶಿಲ್ಪ ಕಲೆಯ ವಿಧಾನ ಮತ್ತು ಶಿಲ್ಪಕಲೆಯ ಸಂಪೂರ್ಣ ಮಾಹಿತಿಯನ್ನು ಅರಿಯುವುದು ಅದನ್ನು ಪ್ರಕಟಿಸುವುದು ಸಂಶೋಧನೆಯ ಮುಖ್ಯ ಉದ್ದೇಶ, ಇಂತಹ ಸಂಪ್ರದಾಯ ಶಿಲ್ಪಕಲೆ ಉಳಿಯುವ ನಿಟ್ಟಿನಲ್ಲಿ ಕಾರ್ಯ ನಿರತರಾಗಲು ಸಂಶೋಧನೆ ನಡೆಸಲು ಸರ್ಕಾರ, ಸಂಘ, ಸಂಸ್ಥೆಗಳು ಕಾರ್ಯಪ್ರವೃತ್ತರಾಗಬೇಕಿದೆ, ಇದೆಲ್ಲದಕ್ಕೂ ಮುಖ್ಯವಾಗಿ ಸಂಪ್ರದಾಯ ಶಿಲ್ಪ ಕಲಾವಿದರನ್ನು ಪತ್ತೆಹಚ್ಚಿ ಅವರ ಸಂಪ್ರದಾಯ, ಸಂಸ್ಕೃತಿ, ಜೀವನ ವಿಧಾನ, ರಥ ಕಟ್ಟುವ ಕೆಲಸ ಮತ್ತು ಸಂಪ್ರದಾಯ ಶಿಲ್ಪಕಲೆಯನ್ನು ಮುಂದುವರಿಸಲು ಸಹಾಯ, ಸಹಕಾರ, ಪ್ರೋತ್ಸಾಹ ನೀಡಬೇಕಿದೆ, ಇದು ಈ ಸಂಶೋಧನೆಯ ಉದ್ದೇಶವೂ ಕೂಡ ಆಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸಂಪ್ರದಾಯ ಶಿಲ್ಪಕಲಾವಿದರನ್ನು ಪತ್ತೆ ಹಚ್ಚಿ ಅವರಿಂದ ಶಿಲ್ಪಕಲೆಯ ಬಗ್ಗೆ ವಿವರಣೆಯನ್ನು ಕೇಳುವಾಗ ಕೆಲವೊಂದು ಕಡೆ ಸಮಸ್ಯೆಗಳು ಎದುರಾಗುವುದುಂಟು, ನಮಗೂ ಎದುರಾಗಿದ್ದುಂಟು, ಕಲಾವಿದರನ್ನು ಹುಡುಕಿಕೊಂಡು ಅವರಿರುವಲ್ಲಿಗೆ ಹೋದಾಗ ಅವರು ಬೇರೆಲ್ಲಿಗೋ ಹೊರಡುವ ತರಾತುರಿಯಲ್ಲಿದ್ದರು, ಇನ್ನೂ ಕೆಲವರು ಮಾಹಿತಿಯನ್ನು, ಕಲೆಯ ಬಗ್ಗೆ ವಿವರಣೆಯನ್ನು ನೀಡಲು ನಿರಾಕರಿಸಿದರು, ಅಂತಹ ಸಮಯದಲ್ಲಿ ಅವರ ಮನವೊಲಿಸಿ, ಅವರ ಬಿಡುವಿನ ವೇಳೆಯನ್ನು ತಿಳಿದುಕೊಂಡು ಮಾಹಿತಿಯನ್ನು ಪಡೆಯಲಾಯಿತು, ಸಂಶೋಧಕರಿಗೆ ಮುಖ್ಯವಾಗಿ ತಾಳ್ಮೆ, ಸಹನೆ ಬೇಕು, ಅಗತ್ಯವಾಗಿ ಸಂಶೋಧಕರಿಗೆ ಕ್ಷೇತ್ರಕಾರ್ಯ ಮಾಡಲು ಉತ್ತಮ ಲೇಖನಿ, ನೋಟ್ ಪುಸ್ತಕಗಳು, ಕ್ಯಾಮೆರಾ, ರೆಕಾರ್ಡಿಂಗ್ ಮಾಡಲು ಅದರ ವ್ಯವಸ್ಥೆ ಇರುವ ಮೊಬೈಲ್ ಅಥವಾ ರೆಕಾರ್ಡಿಂಗ್ ಸಿಸ್ಟಂ, ನಕ್ಷೆ, ಮುಂಗಡವಾಗಿ ಸಿದ್ಧಪಡಿಸಿಕೊಂಡ ಪ್ರಶ್ನಾವಳಿಗಳು, ಸಂದರ್ಶನ ಕೈಪಿಡಿ, ಸಮಯ ಪಾಲನೆ, ಸೂಕ್ತ ಸಮಯಕ್ಕೆ ತಲುಪಲು ಸಂಚಾರಕ್ಕಾಗಿ ವಾಹನದ ವ್ಯವಸ್ಥೆ, ಖರ್ಚಿಗಾಗಿ ಹಣ, ಜೊತೆಗೆ ಒಂದಿಬ್ಬರು ಸಹಾಯಕರು ಇರಬೇಕು, ಈ ಎಲ್ಲಾ ವ್ಯವಸ್ಥೆ ಸರಿಯಾಗಿದ್ದರೆ ಸಂಶೋಧಕರ ಗುರಿ ಮತ್ತು ಉದ್ದೇಶಗಳು ಸಾರ್ಥಕವಾಗುತ್ತದೆ, ಈ ಎಲ್ಲಾ ಸಂಕಷ್ಟಗಳ ನಡುವೆ ಕೆಲವು ಆಯ್ದ ಶಿಲ್ಪಕಲೆಗಳನ್ನುಳ್ಳ ಸ್ಥಳಗಳು, ಶಿಲ್ಪಕಲಾವಿದರನ್ನು ಬೇಟಿಯಾಗಿ ಅವರಿಂದ ಸಂಗ್ರಹಿಸಲಾದ ಮಾಹಿತಿಯನ್ನು ಇಲ್ಲಿ ದಾಖಲಿಸಿದೆ, ಚಳ್ಳಕೆರೆ ತಾಲ್ಲೂಕಿನ ರಥಗಳಿರುವ ಊರುಗಳಿಗೆ ಹೋಗಿ ಆಯಾ ರಥಗಳ ವಿವರಣೆ, ರಚನಾ ಸಾಮಗ್ರಿಗಳು, ರಚನಾ ವಿಧಿ ವಿಧಾನಗಳು, ಕಲಾವಿದರು, ಕಲಾವಿದರ ಸ್ಥಿತಿ–ಗತಿ, ರಥಗಳ ನಿರ್ಮಾಣದ ವಿಧಾನ, ರಥದಲ್ಲಿ ಮಾಡಿರುವ ಶಿಲ್ಪಗಳ ಕಥೆಗಳು, ನಗ್ನ ಶಿಲ್ಪಗಳು, ಸ್ಥಳೀಯ ಆಧಾರಿತ ಶಿಲ್ಪಗಳು, ಆಯಾ ಊರಿನ ದೇವರುಗಳ ವಿಶೇಷತೆ, ರಥೋತ್ಸವದ ವಿವರ, ಜಾತ್ರೆಯ ವಿವರಣೆಯನ್ನು ಸಂಗ್ರಹಿಸಲಾಗಿದೆ.

3. ಅಧ್ಯಯನದ ಭೌಗೋಳಿಕ ಲಕ್ಷಣಗಳು

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿ ಚಿತ್ರದುರ್ಗ ಜಿಲ್ಲೆಯ ಭೂಭಾಗ ಉತ್ತರ ಅಕ್ಷಾಂಶ 13^0–15^0ಡಿಗ್ರಿಯಿಂದ 15^0–20^0ಡಿಗ್ರಿ ಅಕ್ಷಾಂಶದವರೆಗೆ, ಪೂರ್ವ ರೇಖಾಂಶ 75^0–31^0ಡಿಗ್ರಿಯಿಂದ 77^0–20^0ಡಿಗ್ರಿಯ ವರೆಗೂ ವಿಸ್ತೀರ್ಣವಿದೆ, ಒಟ್ಟು ಭೂ ಪ್ರದೇಶ 08,388 ಚದರ ಕಿಲೋ ಮೀಟರ್ ವಿಸ್ತೀರ್ಣವನ್ನು ಹೊಂದಿದೆ, ಜಿಲ್ಲೆಯ ಪೂರ್ವಕ್ಕೆ ಆಂದ್ರ ರಾಜ್ಯ, ಪಶ್ಚಿಮಕ್ಕೆ ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳಿವೆ, ಉತ್ತರ ದಿಕ್ಕಿಗೆ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಿದ್ದರೆ ದಕ್ಷಿಣಕ್ಕೆ ತುಮಕೂರು ಜಿಲ್ಲೆ ಇದೆ, ಈ ಜಿಲ್ಲೆಯಲ್ಲಿ ತುಂಗಭದ್ರಾ ಮುಖ್ಯ ನದಿಯಾಗಿದ್ದು ಉಪ ನದಿಗಳಾಗಿ ವೇದಾವತಿ ಮತ್ತು ಚಿಕ್ಕಾದಾದ

ಸುವರ್ಣಮುಖಿ ನದಿಗಳಿವೆ, ಕರ್ನಾಟಕ ರಾಜ್ಯದಲ್ಲಿಯೇ ಅತೀ ಕಡಿಮೆ ಮಳೆ ಬೀಳುವ ಜಿಲ್ಲೆ ಇದು, ಆದರೂ ಇಲ್ಲಿನ ಭೂಮಿ ಹೆಚ್ಚಿನದಾಗಿ ಮಳೆಯನ್ನೇ ಆಶ್ರಯಿಸಿದ್ದು ಕೃಷಿ ಇಲ್ಲಿನ ಪ್ರಧಾನ ಕಸುಬಾಗಿದೆ.

ಮೊಳಕಾಲ್ಮೂರು, ಹೊಸದುರ್ಗ, ಚಿತ್ರದುರ್ಗ, ಹಿರಿಯೂರು ತಾಲ್ಲೂಕುಗಳಲ್ಲಿ ಹೆಚ್ಚಿನ ಬೆಟ್ಟ ಸಾಲುಗಳು, ಉಳಿದ ತಾಲ್ಲೂಕುಗಳಲ್ಲಿ ಅಲ್ಪ ಪ್ರಮಾಣದ ಬೆಟ್ಟಸಾಲುಗಳಿವೆ, ಪದರು ಶಿಲೆ ಅಥವಾ ಸ್ಪಟಿಕಶಿಲೆ, ವಿವಿಧ ಜಾತಿಯ ಬೆಣಚು ಕಲ್ಲುಗಳು, ಕಪ್ಪು ಕಲ್ಲು, ಬಳಪದ ಕಲ್ಲು, ಹಿಟ್ಟು ಕಲ್ಲು, ನುಣುಪು ಕಲ್ಲು, ಸುಣ್ಣದ ಕಲ್ಲು ಮತ್ತು ಅದಿರನ್ನು ಒಳಗೊಂಡಿರುವ ಶಿಲಾ ಪದರುಗಳು ಕಂಡುಬರುತ್ತವೆ, ಗೋನೂರು, ಆನೆಸಿದ್ರಿ, ಜವನಗೊಂಡನಹಳ್ಳಿ, ದಿಂಡಾವರ ಗ್ರಾಮಗಳ ಬಳಿ ಪ್ರಾಚೀನ ಕಾಲದಲ್ಲಿ ಚಿನ್ನದ ಅದಿರು ಸಿಗುತ್ತಿದ್ದು, ಇಂಗಳದಾಳು, ಕುಂಚಿಗನಾಳು ಎಂಬ ಊರುಗಳಲ್ಲಿ ತಾಮ್ರದ ನಿಕ್ಷೇಪಗಳಿವೆ, ಹೊಸದುರ್ಗ, ಹೋಳಲ್ಕೆರೆ ಮತ್ತು ಚಿತ್ರದುರ್ಗದ ಕೆಲವು ಊರುಗಳಲ್ಲಿ ಮತ್ತು ಸ್ಥಳಗಳಲ್ಲಿ ಹೆಮಟೈಟ್ ಮತ್ತು ಲಿಮೋನೈಟ್‌ನ ನಿಕ್ಷೇಪಗಳು ದೊರೆತಿವೆ ಎನ್ನುತ್ತಾರೆ ಸಂಶೋಧಕರು.

ಸಂಶೋಧಕರು ಮತ್ತು ಇತಿಹಾಸಕಾರರು, ಪ್ರಾಚ್ಯ ವಸ್ತು ಇಲಾಖೆಯವರು ಸರ್ವೇಕ್ಷಣಾ ಕಾರ್ಯ ಮತ್ತು ಉತ್ಖನನ ಕಾರ್ಯಗಳನ್ನು ಮಾಡಿದ ಸಂದರ್ಭಗಳಲ್ಲಿ ಇತಿಹಾಸ ಪೂರ್ವದ ಅವಶೇಷಗಳು, ಮಡಿಕೆ, ಕುಡಿಕೆ, ಆಟಿಕೆ ವಸ್ತುಗಳು ದೊರೆತಿವೆ, ಕೆಲವು ಗುಹೆಗಳಲ್ಲಿ ವರ್ಣಚಿತ್ರಗಳು ಮುಂತಾದವುಗಳು ದೊರೆತಿವೆ, ಇವುಗಳಿಂದ ಅಧ್ಯಯನ ಮಾಡಲು ಸಂಪ್ರದಾಯ ಶಿಲ್ಪ ಕಲೆಗೆ ಒಂದಿಷ್ಟು ಮಾಹಿತಿ ಅಥವಾ ಇತರೆ ವಸ್ತುಗಳು ದೊರೆಯಬಹುದು.

4. ಸಂಪ್ರದಾಯ ಶಿಲ್ಪಕಲೆಯ ಅಧ್ಯಯನ ಕ್ರಮ:

ಕಲೆ ಎಂದಾಕ್ಷಣ ಮನುಷ್ಯನ ವಿಕಾಸದ ಮಾಹಿತಿಯನ್ನು ನೀಡುವ ವಿಶಿಷ್ಟ ಮಾಧ್ಯಮವೆಂದು ತಿಳಿಯಬೇಕಾಗಿದೆ, ಮನುಷ್ಯನ ಭಾವನೆಗಳು, ಜೀವನ ಶೈಲಿ, ಗುರಿ–ಸಾಧನೆಗಳನ್ನು ಚಿತ್ರಕಲೆ ಮತ್ತು ಶಿಲ್ಪಕಲೆಗಳ ರೂಪದಲ್ಲಿ ತೋರಿಸುವುದು ಮತ್ತು ಸಾಮಾಜಿಕ ಪರಿವರ್ತನೆ, ರಾಜಕೀಯ, ಕೆಲವು ಆಚರಣೆಗಳು, ಸಾಂಸ್ಕೃತಿಕ ಘಟನೆಗಳನ್ನು ತೋರಿಸಲು ಮನುಷ್ಯ ಆಯ್ಕೆಮಾಡಿಕೊಂಡ ಕಲೆಯ ಪ್ರಕಾರಗಳು ಚಿತ್ರಕಲೆ ಮತ್ತು ಶಿಲ್ಪಕಲೆ, ಮುಖ್ಯವಾಗಿ ಶಿಲ್ಪಕಲೆ ಒಂದು ವಿಶೇಷತೆ ಹೊಂದಿರುವ ವಿಭಾಗವಾಗಿದೆ, ಇದು ಆದಿ ಮಾನವನ ಕಾಲದಿಂದಲೂ ನಡೆದು ಬಂದದ್ದಾಗಿದ್ದು, ಅಂದಿನಿಂದಲೂ ಮನುಷ್ಯ ಹವ್ಯಾಸಕ್ಕಾಗಿ, ವೃತ್ತಿಗಾಗಿ ಇನ್ನೊಬ್ಬರ ಆಸೆ, ತೃಪ್ತಿಗಾಗಿ ಮತ್ತು ಸಂಪ್ರದಾಯವಾಗಿಯೂ ನಡೆಸಿಕೊಂಡು ಬರುತ್ತಿದ್ದಾರೆ, ಎಂತಹ ಕಲಾ ಪ್ರಕಾರಗಳಲ್ಲಿ ಶಿಲ್ಪಗಳನ್ನು ತಯಾರಿಸಬೇಕು, ಅಳತೆ ಆಯಗಳು, ವಿಧಿವಿಧಾನಗಳು ಮುಂತಾದವುಗಳನ್ನು ಗ್ರಂಥಗಳು ವಿವರಿಸುತ್ತವೆ.

ಶಿಲ್ಪಕಲೆಯನ್ನು ಹೆಚ್ಚಾಗಿ ಕಾಣುವ ಸ್ಥಳಗಳೆಂದರೆ ದೇವಾಲಯಗಳು, ಗುರುದ್ವಾರಗಳು, ಶಿಲ್ಪಕಲಾವಿದನೂ ಕೂಡ ಇದೇ ಜಾಗವನ್ನು ತನ್ನ ಕಲೆಯನ್ನು ಪ್ರದರ್ಶಿಸಲು ಮತ್ತು ಕಲೆಯನ್ನು ಮಂದುವರಿಸಲು ಆರಿಸಿಕೊಂಡ ಜಾಗ, ದೇವಾಲಗಳು ವಿಶಾಲವಾದ ಜಾಗದಲ್ಲಿ ಇರುವುದರಿಂದ ಮತ್ತು ಕಲೆಗಳಿಗೆ ಇಂತಹ ಜಾಗವು ಪ್ರಶಸ್ತ, ಶಿಲ್ಪಿಯು ತನ್ನ ಶಿಲ್ಪಕಲಾ ಕೆತ್ತನೆ ಕಾರ್ಯ ಮಾಡಲು ಅವಶ್ಯ ವಿರುವಷ್ಟು ವಿಶಾಲ ಜಾಗವಿರುತ್ತದೆ, ದೇವರ ವಿವಿಧ ರೂಪಗಳು, ಭಂಗಿಗಳು, ಅಳತೆಗಳು, ವಿವಿಧ ಆಕಾರಗಳು ಮುಂತಾದ ಶಿಲ್ಪಗಳನ್ನು ಮಾಡಲು ಅನುಕೂಲವಾದ ವಾತಾವರಣ ದೇವಸ್ಥಾನದ ಆವರಣದಲ್ಲಿ ಸಿಗುತ್ತದೆ, ಅದಲ್ಲದೇ ದೇವಸ್ಥಾನದಲ್ಲಿ ನಿಶ್ಯಬ್ದತೆ ಇರುತ್ತದೆ, ಯಾವುದೇ, ಯಾರದೇ ಗೊದಲಗಳು, ಕಿರಿಕಿರಿ ಮುಂತಾದ ಸಮಸ್ಯೆಗಳಿರುವುದಿಲ್ಲ, ಇದಕ್ಕೆ ಸಾಕ್ಷಿಯಾಗಿ ಹಿಂದಿನಿಂದಲೂ ಈಗಿನ ವರೆವಿಗೂ ದೇವಾಲಯಗಳ ಬಳಿ ಶಿಲ್ಪಕಲೆಯ ಕೆತ್ತನೆಯನ್ನೂ, ಕೆತ್ತನೆಯಲ್ಲಿ ತೊಡಗಿರುವ ಶಿಲ್ಪಿಗಳನ್ನೂ

ಮತ್ತು ಕೆತ್ತನೆಗಳಿಂದ ರೂಪುಗೊಂಡಿರುವ ದೇವಾಲಯಗಳನ್ನು ಕಾಣಬಹುದಾಗಿದೆ, ಮರ ಮಾಧ್ಯಮದ ಶಿಲ್ಪಕಲೆಗಳನ್ನು ಮಾಡಲು ಸೂಕ್ತವಾದದ್ದೆಂದರೆ ದೇವಸ್ಥಾನಗಳ ಬಾಗಿಲುಗಳು, ತೊಲೆ, ಕಂಬಗಳು ಮತ್ತು ರಥಗಳು, ರಥಗಳಲ್ಲಿ ಯಾವ ರೂಪದ ಶಿಲ್ಪಗಳನ್ನು ಬೇಕಾದರೂ ಮಾಡಬಹುದು, (ಆಯಾ ದೇವಾಲಯ ಹಾಗೂ ಸ್ಥಳೀಯ ವಿಶೇಷತೆಯನ್ನು ಪರಿಗಣಿಸಿ) ಮರ ಮಾಧ್ಯಮದಿಂದ ರಥದಲ್ಲಿ ಕೆತ್ತನೆಯನ್ನು ಮಾಡಬಹುದು.

ದೇವಾಲಯಗಳು, ಶಿಲ್ಪಗಳು, ಪುರಾತನ ಘಟನಾವಳಿಗಳನ್ನು ತಿಳಿಸುವ ಮಾಧ್ಯಮಗಳಾಗಿವೆ, ಶಿಲ್ಪಕಲಾವಿದ ಅಥವಾ ಭಕ್ತರ ಒಡನಾಟಗಳನ್ನು ಸೂಚಿಸುವ ಹಿಂದಿನ ಇತಿಹಾಸವನ್ನೇ ತಿಳಿಸುವ ದೇವಾಲಯಗಳಿವೆ, ಈ ದೇವಾಲಯಗಳಿಗೆ ಪ್ರತಿಯೊಂದಕ್ಕೂ ಇತಿಹಾಸವಿದೆ, ಇವುಗಳ ಕಾಲಮಾನವನ್ನು ಅಲ್ಲಿರುವ ಶಿಲ್ಪಗಳ ಮುಖಾಂತರ ತಿಳಿಯಬಹುದು, ಶಿಲ್ಪಕಲೆ ಉಗಮ ಮತ್ತು ಶಿಲ್ಪಕಲೆ ಬೆಳೆದು ಬಂದ ಹಂತಗಳನ್ನು ಅಧ್ಯಯನ ಮಾಡಬಹುದಾಗಿದೆ, ಇತಿಹಾಸ ಪೂರ್ವಕಾಲವನ್ನೂ ತಿಳಿಸುವ ದೇವಾಲಯಗಳಿವೆ, ಕಲ್ಯಾಣದ ಚಾಲುಕ್ಯರು, ಹರಪ್ಪರು, ಮೌರ್ಯರು, ಗುಪ್ತರು, ಪಲ್ಲವರು, ಹೊಯ್ಸಳರು ಮತ್ತು ವಿಜಯನಗರದವರ ಕಾಲದಲ್ಲಿ ನಿರ್ಮಾಣಗೊಂಡಿರುವ ಶಿಲ್ಪಕಲೆಗಳನ್ನು ಹೊಂದಿರುವ ದೇವಾಲಯಗಳು ಹಾಗೂ ಈ ದೇವಾಲಯಗಳಲ್ಲಿನ ವ್ಯಾತ್ಯಾಸಗಳನ್ನು ಮತ್ತು ಬದಲಾವಣೆಗಳನ್ನು ತಿಳಿಯಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿರುವ ಶಿಲ್ಪಕಲೆಯನ್ನು ಹೊಂದಿರುವ ದೇವಾಲಯಗಳು ಮತ್ತು ಸಂಪ್ರದಾಯ ಶಿಲ್ಪಕಲಾವಿದರ ಬಗ್ಗೆ ಅದರಲ್ಲೂ ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದಿಂದ ನಿರ್ಮಾಣಮಾಡಿರುವ ರಥಗಳ ಮತ್ತು ರಥ ಶಿಲ್ಪಗಳ ಬಗ್ಗೆ ವಿಶೇಷವಾದ ಅಧ್ಯಯನ ನಡೆಸುವುದಾಗಿದೆ, ಶಿಲ್ಪಕಲೆಗಳಲ್ಲಿನ ವಿಭಾಗಗಳು, ಶೈಲಿಗಳು, ಪ್ರಕಾರಗಳು, ರಥಗಳ ನಿರ್ಮಾಣ ವಿಧಾನ, ರಥಗಳಲ್ಲಿ ಕೆತ್ತನೆಗೊಂಡಿರುವ ಶಿಲ್ಪಗಳು, ಕಲಾವಿದರ ಪರಿಚಯ, ಕಲಾವಿದರ ಜೀವನ ಶೈಲಿ ಮತ್ತು ಸಂಪ್ರದಾಯ ಶಿಲ್ಪಕಲಾವಿದರು ನಡೆದುಬಂದ ದಾರಿ ಹಾಗೂ ಅವರ ಪರಿಚಯ, ಅವರು ಇದುವರೆವಿಗೂ ಮಾಡಿರುವ ಶಿಲ್ಪಕಲೆಯ ಪರಿಚಯ ಮುಂತಾದ ವಿಚಾರಗಳ ಬಗ್ಗೆ ಸ್ವಲ್ಪ ಮಟ್ಟಿನ ಅಧ್ಯಯನವನ್ನು ಮಾಡಲಾಗಿದ್ದು, ಇನ್ನು ಹೆಚ್ಚಿನ ಅಧ್ಯಯನವನ್ನು ಆಸಕ್ತರು, ಸಂಶೋಧಕರು ಮಾಡಬೇಕಾಗಿದೆ.

5. ಚಿತ್ರದುರ್ಗ ಜಿಲ್ಲೆಯ ಅಧ್ಯಯನ:

ಚಿತ್ರದುರ್ಗ ಜಿಲ್ಲೆಯ ಅಧ್ಯಯನದಿಂದ ಅನೇಕ ವಿಚಾರಗಳು, ಶಿಲ್ಪಕಲೆಯ ಬಗ್ಗೆ ತಿಳಿದುಬರುತ್ತದೆ, ಈ ಜಿಲ್ಲೆಯಲ್ಲಿ ಮೌರ್ಯರ ಕಾಲದಿಂದಲೇ ಶಿಲ್ಪಕಲೆಯ ಚಟುವಟಿಕೆಗಳು ನಡೆದಿರಬಹುದೆಂದು ಇತಿಹಾಸ ಅಧ್ಯಯನಕಾರರು ಅಂದಾಜಿಸುತ್ತಾರೆ, ಮೌರ್ಯರ ನಂತರ ಚಾಲುಕ್ಯರು ಮತ್ತು ಹೊಯ್ಸಳರಿಂದಲೂ ನಿರಂತರವಾಗಿ ಶಿಲ್ಪಕಲಾ ಕೆತ್ತನೆಗಳು, ದೇವಸ್ಥಾನಗಳ ನಿರ್ಮಾಣಗಳು ನಡೆದುಕೊಂಡು ಬಂದಿದೆ, ಇದಕ್ಕೆ ಪೂರಕವಾಗಿ ಮೌರ್ಯರ ನಂತರ ಚಾಲುಕ್ಯರು ಮತ್ತು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಿವೆ, ಹೆಗ್ಗೆರೆ ಗ್ರಾಮದ ಪಾರ್ಶ್ವನಾಥ ಬಸದಿ, ಬ್ರಹ್ಮಗಿರಿಯ ಅಕ್ಕತಂಗಿ ದೇವಸ್ಥಾನ, ಆನೆಕೊಂಡದ ಈಶ್ವರ ದೇವಾಲಯ, ನೀಲಗುಂದ ಗ್ರಾಮದ ಭೀಮೇಶ್ವರ ದೇವಸ್ಥಾನ ಇನ್ನು ಮಂತಾದ ಕಡೆಗಳಲ್ಲಿರುವ ಹಲವು ದೇವಸ್ಥಾನಗಳು ಹೊಯ್ಸಳ ಮತ್ತು ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಾಗಿವೆ, ಇವರ ತರುವಾಯ ಕಲ್ಯಾಣದ ಚಾಲುಕ್ಯರು, ಉಚ್ಚಂಗಿಯ ಪಾಂಡ್ಯರು, ನೊಳಂಬರು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೆಯಗಾರರು ಕ್ರಮವಾಗಿ ಶಿಲ್ಪಕಲೆಗಳನ್ನೊಳಗೊಂಡ ದೇವಾಲಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣಮಾಡಿದ್ದಾರೆ.

ವಾಸ್ತು ಶೈಲಿಯ ದೃಷ್ಟಿಯಿಂದ ನುರಿತ ಶಿಲ್ಪಿಗಳ ಮುಖಾಂತರ ದೇವಸ್ಥಾನಗಳನ್ನು ನಿರ್ಮಾಣ ಮಾಡಿದ್ದಾರೆ ಎಂದು ಇತಿಹಾಸ ಸಂಶೋಧಕರು ಉಲ್ಲೇಖಿಸಿದ್ದಾರೆ. ಇಲ್ಲಿ ನುರಿತ ಶಿಲ್ಪಿಗಳೆಂದರೆ ಬಹುತೇಕವಾಗಿ ಅವರು ಸಂಪ್ರದಾಯ ಶಿಲ್ಪಿಗಳೇ ಆಗಿದ್ದಾರೆ. ತಮ್ಮ ಕುಟುಂಬದ ಬಳುವಳಿ, ಸಂಪ್ರದಾಯ, ಕಸುಬು ಯಾವುದೇ ಆಗಿದ್ದರೂ ಅದನ್ನು ಸಾಕಷ್ಟು ಜನರು ಮುಂದುವರಿಸಿಕೊಂಡು ಬರುತ್ತಿರುತ್ತಾರೆ. ಈ ರೀತಿಯ ಸಂಸ್ಕೃತಿ, ಕಲೆಯನ್ನು ಮುಂದುವರಿಸುತ್ತಾ ಅನೇಕರು ಅದರಲ್ಲಿ ಸಾಕಷ್ಟು ಪರಿಣಿತರಾಗಿ ನುರಿತ ಸಂಪ್ರದಾಯ ಶಿಲ್ಪಕಲಾವಿದರಾಗಿರುತ್ತಾರೆ. ಇಂತಹ ನುರಿತ ಸಂಪ್ರದಾಯ ಶಿಲ್ಪಕಲಾವಿದರಿಂದ ರೂಪುಗೊಂಡ ಶಿಲ್ಪಕಲೆ ಇಂದು ನಾವು ನೋಡಲು ಕಾಣಸಿಗುತ್ತದೆ. ಸಂಶೋದಕರಿಗೆ ಉಪಲಬ್ಧವಾಗಿವೆ. ಕೆಲವು ದೇವಸ್ಥಾನಗಳನ್ನು ಈ ದೃಷ್ಟಿಯಲ್ಲಿ ಅಧ್ಯಯನ ಮಾಡಿದಾಗ ಈ ಎಲ್ಲಾ ದೇವಾಲಯಗಳು ವಾಸ್ತು ಶೈಲಿಯಲ್ಲಿಯೇ ರಚಿತವಾದಂತಹವುಗಳಾಗಿವೆ.

ಹಿರಿಯೂರಿನ ಅಂಬಲಗೆರೆ ಗ್ರಾಮದ ಶ್ರೀ ರಂಗನಾಥಸ್ವಾಮಿ ದೇವಾಲಯ ಮೊಳಕಾಲ್ಮೂರು ತಾಲ್ಲೂಕಿನ ಅಶೋಕ ಸಿದ್ದಾಪುರದ ಅಕ್ಕ–ತಂಗಿ ದೇವಾಲಯಗಳು 12, 15 ಮತ್ತು 16 ನೇ ಶತಮಾನದಲ್ಲಿ ರಚಿತಗೊಂಡವುಗಳಾಗಿವೆ. ಚಿತ್ರದುರ್ಗ ತಾಲ್ಲೂಕಿನ ಇಸಾಮುದ್ರ ಗ್ರಾಮದ ಕಲ್ಲೇಶ್ವರ ದೇವಾಲಯವು 12ನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ. ಇದೇ ಸಮಯದಲ್ಲಿ ನಿರ್ಮಾಣವಾದ ಹೊಸದುರ್ಗ ತಾಲ್ಲೂಕಿನ ಕೆಲ್ಲೋಡು ಗ್ರಾಮದ ಮಲ್ಲಿಕಾರ್ಜುನ ದೇವಾಲಯ, ಇದರ ನಂತರ ರಚನೆಗೊಂಡ ಚಳ್ಳಕೆರೆ ತಾಲ್ಲೂಕಿನ ಎನ್.ಗೌರೀಪುರದ ಉಮಾಮಹೇಶ್ವರ ದೇವಾಲಯ, 17ನೇ ಶತಮಾನದಲ್ಲಿ ನಿರ್ಮಾಣವಾಗಿರುವ ಚಿತ್ರದುರ್ಗ ನಗರದ ದೊಡ್ಡಪೇಟೆಯ ಉಚ್ಚಂಗಿ ಯಲ್ಲಮ್ಮ ದೇವಾಲಯ, 14,15ನೇ ಶತಮಾನದಲ್ಲಿ ನಿರ್ಮಾಣವಾದ ಏಕನಾಥೇಶ್ವರಿ ದೇವಸ್ಥಾನವು ಚಿತ್ರದುರ್ಗದ ಬೆಟ್ಟದಲ್ಲಿದೆ.

ಮೊಳಕಾಲ್ಮೂರು ತಾಲ್ಲೂಕಿನ ಭೈರವೇಶ್ವರ ದೇವಾಲಯ ನುಂಕಿಮಲೆ ಬೆಟ್ಟದಲ್ಲಿದ್ದು 15–16ನೇ ಶತಮಾನದಲ್ಲಿ ನಿರ್ಮಾಣಗೊಂಡದ್ದಾಗಿದೆ. ಚಳ್ಳಕೆರೆ ತಾಲ್ಲೂಕಿನ ನಾಯನಹಟ್ಟಿ ಸಮೀಪದಲ್ಲಿರುವ ರಾಮಲಿಂಗೇಶ್ವರ ಗುಹಾಂತರ ದೇವಾಲಯವೂ ಸಹ 15–16ನೇ ಶತಮಾನದಲ್ಲಿ ರಚನೆಯಾದದ್ದಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆ ದೇವರಪುರ ಗ್ರಾಮದ ಶ್ರೀ ರಂಗನಾಥ ಸ್ವಾಮಿಯ ದೇವಾಲಯ ಕ್ರಿ. ಶ. 12ನೇ ಶತಮಾನದ್ದಾಗಿದೆ. ಈ ಎಲ್ಲಾ ದೇವಾಲಯಗಳು ಹೊಯ್ಸಳ ಶೈಲಿಯಲ್ಲಿಯೆ ನಿರ್ಮಾಣಗೊಂಡಂತವುಗಳಾಗಿವೆ.

ಚಿತ್ರದುರ್ಗ ಜಿಲ್ಲೆಯ ದೇವಾಲಯಗಳು ವಿವಿಧ ರೂಪ, ಶೈಲಿ ಮತ್ತು ನಿರ್ಮಾಣಗೊಂಡಿರುವ ಸಮಯವನ್ನು ಸೂಚಿಸುತ್ತವೆ. ಈ ದೇವಾಲಯಗಳು ಸರಳ ಮತ್ತು ವೈಭವದ ಕಲಾ ಪ್ರಕಾರಗಳಿಂದ ಕೂಡಿದವುಗಳಾಗಿವೆ. ಮುಖ್ಯ ದೇವರುಗಳ ಮೂರ್ತಿಗಳ ಜೊತೆಗೆ ಪರಿವಾರ ದೇವರುಗಳ ಶಿಲ್ಪಗಳು, ಮಂಟಪಗಳ ವಿನ್ಯಾಸ, ಗರ್ಭಗುಡಿ, ಬಾಗಿಲುಗಳು, ಗೋಡೆಗಳು, ಕಂಬಗಳು, ಮೇಲ್ಛಾವಣಿ, ದ್ವಾರಬಾಗಿಲು, ಪ್ರಾಂಗಣ ಮುಂತಾದವುಗಳು ವಿವಿಧ ಕಲೆ ಹಾಗೂ ಕೆತ್ತನೆಗಳಿಂದ ಕೂಡಿದ್ದು ಆಕರ್ಷಕವಾಗಿವೆ. ಇಂತಹ ದೇವಾಲಯಗಳ ನಿರ್ಮಾಣವನ್ನು ಯಾರೇ ಮಾಡಿಸಿದ್ದರೂ, ಮಾಡಿದ್ದರೂ ಕೂಡ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಶಿಲ್ಪಗಳು ಆಕರ್ಷಕವಾಗಿ ಕಾಣುವಂತೆ ಕೆತ್ತನೆಮಾಡಿರುವ ಶಿಲ್ಪಿಗಳು ಮತ್ತು ಅವರ ಕೈಚಳಕ, ಕಲೆಗಿಂತ ಕಲಾವಿದ ಮುಖ್ಯನಾಗುತ್ತಾನೆ. ಆದ್ದರಿಂದ ಇಂತಹ ಶಿಲ್ಪಿಗಳು ಬಹುತೇಕ ಸಂಪ್ರದಾಯ ಶಿಲ್ಪಿಗಳಾಗಿರುತ್ತಾರೆ. ಆದರೆ ಈ ಶಿಲ್ಪಿಗಳಿಗೆ ಗೌರವ ಸಂಭಾವನೆ ಅಥವಾ ನಿರ್ಧಿಷ್ಟ ಸಂಭಾವನೆ ದೇವಸ್ಥಾನ ನಿರ್ಮಾಣಕಾರರಿಂದ ಸಿಗುತ್ತಿತ್ತು. ಶಿಲ್ಪಿಗಳು ತಮ್ಮ ನಿರೀಕ್ಷೆಗೆ ತಕ್ಕಷ್ಟು ಸಂಭಾವನೆಯನ್ನು ಪಡೆದುಕೊಳ್ಳದೆ ಅವರು ಕೊಟ್ಟಷ್ಟು ಪಡೆದುಕೊಂಡು ಕೆತ್ತನೆ ಕೆಲಸವನ್ನು ಮಾಡುತ್ತಿದ್ದರು. ತಮ್ಮ ಕೆಲಸಕ್ಕೆ ತಕ್ಕ ಹಾಗೆ ಹಣ ಸಿಗದಿದ್ದರೂ ಕೆತ್ತನೆಯಲ್ಲಿ ಮಾತ್ರ ದ್ರೋಹ

ಬಗೆಯದೇ ಶಾಸ್ತ್ರೋಕ್ತವಾಗಿ, ನಿಯಮ, ಆಯ ಹಾಗೂ ಅಳತೆಗೆ ತಕ್ಕಂತೆ ಕೆಲಸವನ್ನು ಮಾಡುತ್ತಿದ್ದರು, ಇದು ತಮ್ಮ ಹಿಂದಿನ ತಲೆಮಾರುಗಳಿಂದ ಶಿಲ್ಪಕಲಾವಿದರು ನಡೆಸಿಕೊಂಡು ಬರುತ್ತಿರುವ ಸಂಪ್ರದಾಯ, ಇದಕ್ಕೆ ಕುಟುಂಬದವರ, ಸಂಬಂಧಿಕರ, ಸಮುದಾಯದವರ ಪ್ರೋತ್ಸಾಹವೂ ದೊರೆಯುತ್ತಿತ್ತು, ಇಷ್ಟೊಂದು ಜವಾಬ್ದಾರಿಯಿಂದ ಮಾಡುತ್ತಿದ್ದ ತಮ್ಮ ಕೆತ್ತನೆಯ ಮೇಲೆ ಅಥವಾ ಶಿಲ್ಪಗಳಲ್ಲಿ ಯಾವುದೇ ಶಿಲ್ಪಿಗಳು ತಮ್ಮ ಹೆಸರು, ಊರು ಇತ್ಯಾದಿಗಳನ್ನು ನಮೂದಿಸಿರುವುದಿಲ್ಲ, ನಮೂದಿಸಲು ಇಷ್ಟವೂ ಪಡುತ್ತಿರಲಿಲ್ಲ.

ಭಾರತ ದೇಶದಲ್ಲಿರುವಷ್ಟು ಮೂರ್ತಿ ಶಿಲ್ಪಗಳು ಮತ್ತು ಶಿಲ್ಪಕಲೆ ಬೇರಾವುದೇ ದೇಶಗಳಲ್ಲಿಯೂ ಕಾಣಿಸುವುದಿಲ್ಲ, ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿಯೂ ಸಹ ಶಿಲ್ಪಕಲೆಯನ್ನು ಕಾಣಬಹುದಾಗಿದೆ, ಹಾಗೆಯೇ ಹಳ್ಳಿಗಳಲ್ಲೂ, ನಗರಗಳಲ್ಲೂ, ಬೆಟ್ಟಗುಡ್ಡಗಳ ಮಧ್ಯೆ ಬದುಕುತ್ತಿರುವ ಶಿಲ್ಪಕಲಾವಿದರೂ ಇದ್ದಾರೆ, ಕೆಲವು ಊರುಗಳಲ್ಲಿ ಅಥವಾ ಸ್ಥಳಗಳಲ್ಲಿ ಶಿಲ್ಪಕಲೆಯನ್ನು ಮಾಡಿರುವ ಕುರುಹುಗಳನ್ನು ಜೋಪಾನ ಮಾಡಲಾಗಿದೆ, ಕೆಲವು ಕಡೆಗಳಲ್ಲಿ ಹಾಳಾಗುತ್ತಿರುವ, ನಶಿಸುತ್ತಿರುವ ಕಲೆಗೆ ಜೀರ್ಣೋದ್ಧಾರ ಕೆಲಸ ನಡೆಯುತ್ತಿದ್ದರೆ, ಕೆಲವಾರು ಕಡೆ ಹಳೆಯ ಶಿಲ್ಪಕಲೆ ಸಂಪೂರ್ಣವಾಗಿ ಹಾಳಾಗಿದೆ, ಹಾಳಾಗುತ್ತಿದೆ ಕೂಡ, ಆದರೆ ಕೆಲವಾರು ಕಡೆ ಹೊಸ ಬಗೆಯ ಶಿಲ್ಪಕಲೆ ಜನ್ಮತಾಳುತ್ತಿದೆ, ನವೀನ ಕಲಾವಿದರೂ ಹುಟ್ಟಿಕೊಳ್ಳುತ್ತಿದ್ದಾರೆ, ಇನ್ನು ಕೆಲವರು ತಮ್ಮ ಕುಟುಂಬದ ಸಂಪ್ರದಾಯವಾಗಿ ಬಂದಿರುವ ಕಲೆಯನ್ನು ಮುಂದುವರೆಸುತ್ತಿದ್ದಾರೆ, ಇದೆಲ್ಲವುದರ ಬಗ್ಗೆಯೂ ಅಧ್ಯಯನ ನಡೆಯಬೇಕಿದೆ.

ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದಿಂದ ನಿರ್ಮಾಣ ಮಾಡಲಾಗಿರುವ ರಥಗಳು, ರಥ ಶಿಲ್ಪಗಳು ಹಾಗೂ ರಥೋತ್ಸವಗಳ ಬಗ್ಗೆ ಅಧ್ಯಯನವನ್ನು ಮಾಡಲಾಗಿದೆ.

6. ಶಿಲ್ಪ ಕಲೆಯ ಹಿನ್ನೆಲೆ:

ಮನುಷ್ಯನಿಗೆ ಮತ್ತು ಶಿಲ್ಪಕಲೆಗೆ ಬಹು ಹಿಂದಿನ ಸಂಬಂಧವಿದೆ, ಮನುಷ್ಯ ಕಲಾ ಜೀವಿಯಾಗಿದ್ದು ಹುಟ್ಟಿದಂದಿನಿಂದಲೂ ಕಲೆ ಮನುಷ್ಯನ ಜೊತೆಗೇ ಜನ್ಮ ತಾಳಿದೆ, ಮನೋರಂಜನೆಗಾಗಿಯೋ ಅಥವಾ ಹವ್ಯಾಸಕ್ಕಾಗಿಯೋ ಇನ್ನಾವುದೋ ಕಾರಣದಿಂದ ಕಲೆ ಹುಟ್ಟಿರಬಹುದು, ಬೆಟ್ಟಗುಡ್ಡಗಳಲ್ಲಿ, ಕಾಡುಮೇಡುಗಳಲ್ಲಿ ವಾಸವಾಗಿದ್ದ ಮನುಷ್ಯ ತನ್ನ ಅಗತ್ಯಕ್ಕೆ ಬೇಕಾದ ಆಯುಧಗಳನ್ನು, ವೇಷಭೂಷಣಗಳನ್ನು ಅಥವಾ ವಾಸಕ್ಕಾಗಿ ಮಾಡಿಕೊಂಡ ಮನೆಗಳಲ್ಲಿ, ಗುಹೆಗಳಲ್ಲಿ ತನ್ನ ಶಿಲ್ಪಕಲೆಯನ್ನು ಮಾಡಲು ಪ್ರಾರಂಭಿಸಿದ, ಬೇಟೆಯಾಡಲು ಬೇಕಾದ ಕಲ್ಲಿನ ಆಯುಧಗಳನ್ನು ಕಲಾತ್ಮಕವಾಗಿಯೇ ತಯಾರಿಸುತ್ತಿದ್ದ, ತಯಾರಿಕೆಯ ಸಂದರ್ಭಗಳಲ್ಲಿ ಅವುಗಳು ವಿಶೇಷ ರೂಪಗಳನ್ನು ಅವನಿಗೆ ಅರಿವಿಲ್ಲದೆಯೇ ಪಡೆದುಕೊಳ್ಳುತ್ತಿದ್ದವು, ತಾನು ಕಂಡು ಕೇಳಿದ, ನಡೆದ ಘಟನಾವಳಿಗಳನ್ನು ಅಥವಾ ಇನ್ನಾವುದೇ ಕಾರಣವಿರಬಹುದು ಅವೆಲ್ಲವುಗಳನ್ನು ತನ್ನ ಕಲೆಯಲ್ಲಿ ಮೂಡಿಸುತ್ತಿದ್ದನು.

ಬಣ್ಣಗಳನ್ನು ಬಳಸಿ ಗೆರೆಗಳ ಸಹಾಯದಿಂದಲೇ ಸುಲಭವಾಗಿ ಮೇಲ್ಕಂಡ ಘಟನಾವಳಿಗಳನ್ನು ಅಥವಾ ಸಂದರ್ಭಗಳನ್ನು ಕಲೆಯ ಮುಖಾಂತರವಾಗಿ ಮಾಡಬಹುದಾಗಿದ್ದರೂ ಕೆಲವೇ ಕೆಲವು ಕಡೆಗಳಲ್ಲಿ ಸಲಭ ರೀತಿಯ ಚಿತ್ರಕಲೆಯನ್ನು ಮಾಡಿದ್ದಾನೆ, ಆದರೆ ಅಂದು ಅವನು ಕಂಡುಕೊಂಡ ಅಂಶವೆಂದರೆ ಸುಲಭ ರೀತಿಯಲ್ಲಿ ಮಾಡಬಹುದಾದ ಚಿತ್ರಕಲೆ ಕೆಲವು ದಿನಗಳ ಬಳಿಕ ಅಥವಾ ಕೆಲವು ವರ್ಷಗಳ ಬಳಿಕ ಹಾಳಾಗಬಹುದು ಅಥವಾ ಸಂಪೂರ್ಣವಾಗಿ ನಶಿಸಿಹೋಗಬಹುದು ಎಂದು ಅಥವಾ ಬೇರಾವುದೋ ವಿಶೇಷತೆಯ ಸತ್ಯವನ್ನು ಕಂಡುಕೊಂಡು ಸುಲಭ ರೀತಿಯ ಚಿತ್ರಕಲೆಗಿಂತ ಶಿಲ್ಪಕಲೆ ಕಷ್ಟತರವಾಗಿದ್ದರೂ ಕೂಡ ಶಾಶ್ವತವಾಗಿ ಮತ್ತು ಹೆಚ್ಚು ಆಕರ್ಷಕವಾಗಿ ಇರುತ್ತದೆ ಎಂಬುದನ್ನು ಕಂಡುಕೊಂಡ, ತಾನು ಕಂಡ, ಕೇಳಿದ, ನಡೆದ ಘಟನೆಗಳು, ಸಂಸ್ಕೃತಿಯನ್ನು, ಆಟಗಳನ್ನು ತಮ್ಮ ಜೀವನ

ಶೈಲಿಯನ್ನು ಶಿಲ್ಪಕಲೆಯ ಮುಖಾಂತರವಾಗಿಯೇ ಮಾಡಿದ್ದಾನೆ, ಅದನ್ನು ಇಂದು ನಾವು ನೋಡಿ ಆನಂದ ಪಡುತ್ತಿದ್ದೇವೆ ಮತ್ತು ಸಂಶೋಧನೆಗೆ ಒಳಪಡುವ ಸಾಧನಗಳಾಗಿಸಿಕೊಂಡಿದ್ದೇವೆ.

ಮಾನವನು ವಿಕಾಸ ಹೊಂದಿದಂತೆ ಅವನ ಜೊತೆ ಸಂಪ್ರದಾಯ ಶಿಲ್ಪಕಲೆಯೂ ಸ್ವಲ್ಪ ಮಟ್ಟಿಗೆ ವಿಕಾಸಹೊಂದಿದೆ, ಮನಷ್ಯನ ಸಂಸ್ಕೃತಿ, ಸಂಪ್ರದಾಯ ಮುಂತಾದವುಗಳಲ್ಲಿ ಬದಲಾವಣೆಗಳಾದಂತೆ ಶಿಲ್ಪಕಲೆಯಲ್ಲಿಯೂ ಹಲವು ಬದಲಾವಣೆಗಳಾಗುತ್ತಾ ಬೆಳೆದು ಬಂದಿದೆ.

ಅಂದು ದೊರೆಯುತ್ತಿದ್ದ ವಿವಿಧ ರೀತಿಯ ಕಲ್ಲುಗಳ ವಿಧಗಳಿಂದ, ಹಲವು ಬಗೆಯ ಮಣ್ಣು, ವಿವಿಧ ಪ್ರಕಾರದ ಮರದ ಕಟ್ಟಿಗೆಗಳು, ಹಲವಾರು ಬಗೆಯ ಲೋಹಗಳಿಂದ ಶಿಲ್ಪಕಲೆ ರಚಿತಗೊಂಡು ಬೆಳೆಯುತ್ತಾ ಬಂದಿದೆ, ಮನುಷ್ಯನಲ್ಲಿ ವಿವಿಧ ಜಾತಿ, ಬುಡಕಟ್ಟುಗಳು ಹುಟ್ಟಿಕೊಂಡಂತೆ ಶಿಲ್ಪಕಲೆಯಲ್ಲೂ ವಿವಿಧ ಬಗೆಯ ಕಲೆ ಹುಟ್ಟಿಕೊಂಡಿದೆ, ಕಲ್ಲಿನ ಮಾಧ್ಯಮದಿಂದ ಶಿಲ್ಪಕಲೆಯನ್ನು ಒಂದು ಸಮುದಾಯ ಅಥವಾ ಕುಟುಂಬದವರು ಮಾಡಿದರೆ, ಇನ್ನೊಂದು ಕುಟುಂಬ ಅಥವಾ ಗುಂಪಿನವರು ಮರದ ಮಾಧ್ಯಮವನ್ನು ಶಿಲ್ಪಕಲೆಗೆ ಉಪಯೋಗಿಸಿದರು, ಮಗದೊಂದು ಗುಂಪು ಲೋಹದಿಂದ ಶಿಲ್ಪಕಲೆಗಳನ್ನು ರಚಿಸುತ್ತಿದ್ದರು, ಹೀಗೆ ಒಂದೊಂದು ಗುಂಪು ಅಥವಾ ಸಮುದಾಯಗಳವರು ಒಂದೊಂದು ಬಗೆಯ ಮಾಧ್ಯಮವನ್ನು ಆಯ್ಕೆಮಾಡಿಕೊಂಡು/ಉಪಯೋಗಿಸಿ ಶಿಲ್ಪಕಲೆಯನ್ನು ಮಾಡಿಕೊಂಡು ಬಂದಿದ್ದಾರೆ, ಅವರವರು ಅವರದೇ ಆದ ರೀತಿ ರಿವಾಜುಗಳಿಂದ ತಮ್ಮ ಹಿಂದಿನ ಕಲೆ, ಸಂಸ್ಕೃತಿಯನ್ನು ಇಂದಿನವರೆವಿಗೂ ಮಾಡುತ್ತಾ ಬಂದಿದ್ದಾರೆ.

7. **ಕಲೆಯ ವಿವಿಧ ಆಯಾಮಗಳು :**

ಜಾತ್ರೆ, ಉತ್ಸವ, ಊರ ಹಬ್ಬಗಳನ್ನು ನೋಡಿದೊಡನೆಯೇ ಮನಸೂರೆ ಗೊಳಿಸುವ ಅದ್ಭುತ ಶಕ್ತಿ ಇರುವುದು ರಥಕ್ಕೆ, ಜನಮನದಲ್ಲಿ ಧಾರ್ಮಿಕವಾಗಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿರುವ ರಥ ಕಲಾತ್ಮಕ ನೋಟದಿಂದಲೂ ಗಮನ ಸೆಳೆಯುವಂತದ್ದು, ಆ ರಥಗಳ ತಯಾರಿಕೆಯಲ್ಲಿ ಕುಶಲ ಕರ್ಮಿಗಳ ಕಲಾವಿದರ ಕೈ ಚಳಕ ಅಡಗಿರುತ್ತದೆ.

ಶಿಲ್ಪಕಲೆ ಎನ್ನುವುದೊಂದು ಕನಸು, ತಪಸ್ಸು ಇದ್ದಂತೆ, ಅದು ಸುಲಭವಾಗಿ ಸಿದ್ದಿಸುವುದಿಲ್ಲ, ಎಲ್ಲರಿಗೂ ಒಲಿಯುವುದಿಲ್ಲ, ಕೆಲವೇ ಕೆಲವರಿಗೆ ಮಾತ್ರ ಅದು ಫಲಿಸುವುದು, ಇದಕ್ಕೆ ದೈವದತ್ತವಾದ ಅನುಗ್ರಹವೂ ಇರುತ್ತದೆ, ಇದಕ್ಕೆ ಸರಿಯಾಗಿ ಕಲಾವಿದ ಶ್ರದ್ಧೆಯಿಂದ ಕೆತ್ತನೆ ಕೆಲಸ ಮಾಡಬೇಕು, ಈ ರೀತಿಯಾಗಿ ಸಿದ್ದಿಯಾದ ಕಲೆಯಿಂದ ಉತ್ತಮವಾಗಿ ಮಾಡಿ ಅದನ್ನು ಜನರಿಗೆ ತೋರಿಸಿದಾಗ, ಜನರು ಕಲಾವಿದನಿಗೆ ಕೊಡುವ ಗೌರವ, ಪ್ರೋತ್ಸಾಹ ವಿಶೇಷ, ಇದರಿಂದ ಕಲಾವಿದನಿಗೆ ಅಂದು ಆಗುವ ಸಂತೋಷ ಅಪಾರ.

ಕೆತ್ತನೆ ಕೆಲಸ ಅತ್ಯಂತ ಸೂಕ್ಷ್ಮ ಮತ್ತು ಕಷ್ಟದಾಯಕ ಕೆಲಸವಾಗಿರುವುದರಿಂದ ಕಲಾವಿದ ಹೆಚ್ಚು ತಾಳ್ಮೆಯಿಂದ, ಶ್ರದ್ಧೆಯಿಂದ ಕೆತ್ತನೆಯ ಕೆಲಸವನ್ನು ಮಾಡಬೇಕು, ಶಿಲ್ಪಿ ಸದಾ ನಗುಮೊಗ ಹೊಂದಿರಬೇಕು ಮತ್ತು ಸೂಕ್ಷ್ಮಗ್ರಾಹಿಯಾಗಿರಬೇಕು, ಹೀಗಿದ್ದರೆ ಮಾತ್ರ ಶ್ರೇಷ್ಠ ಕಲಾವಿದ ಅಥವಾ ಶಿಲ್ಪಗಾರನಾಗ ಬಹುದು, ಕಲಾವಿದ ತನ್ನ ಆಸೆ, ಕನಸುಗಳನ್ನು ಮತ್ತು ಭಾವನೆಗಳನ್ನು ಶಿಲ್ಪಕಲೆಯಲ್ಲಿ ತೋರಿಸುವುದರಿಂದ ಕಲಾವಿದನ ಮನಸ್ಸು ಹಗುರಾಗುತ್ತದೆ ಮತ್ತು ಪ್ರಶಾಂತವಾಗುತ್ತದೆ.

ಹಿಂದಿನ ಕಾಲದ ಶಿಲ್ಪಕಲಾವಿದರು ಕಲೆ ಎನ್ನುವುದು ಒಂದು ರೀತಿಯ ಸೇವೆ, ಭಕ್ತಿ, ದೇವರ ಆರಾಧನೆ ಎಂಬ ಭಾವನೆಯನ್ನು ಹೊಂದಿದ್ದರು, ಈ ಕಾರಣದಿಂದ ಹಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಿರಲಿಲ್ಲ, ರಥ ತಯಾರಿಕೆ ಅಥವಾ ದೇವಸ್ಥಾನದ ಕಲ್ಲು, ಗಾರೆ, ಮರ ಇನ್ನಾವುದೇ

ಮಾಧ್ಯಮದಿಂದ ಶಿಲ್ಪಕಲೆಯನ್ನು ತಯಾಸುವುದಿದ್ದರೂ ತಮ್ಮ ಊರಿನಿಂದ ಬೇರೆ ಊರಿನಲ್ಲಿ ಕೆಲಸ ಮಾಡುವ ಪ್ರಮೇಯ ವಿದ್ದರೆ ಆಯಾ ಊರಿನ ದೇವಸ್ಥಾನವೇ ಶಿಲ್ಪಕಲಾವಿದರಿಗೆ ಅಲ್ಲಿರುವಷ್ಟೂ ದಿನ ವಾಸದ ಸ್ಥಳವಾಗಿರುತ್ತದೆ, ಕಲೆಯನ್ನು ಮಾಡಿಸುವ ಊರವರು ಅಥವಾ ದೇವಸ್ಥಾನದವರು ಶಿಲ್ಪ ಕಲಾವಿದರ ಮೇಲೆ ಅಪಾರ ಗೌರವಾಧರಗಳನ್ನು ಹೊಂದಿದ್ದು ಪ್ರೀತಿಯಿಂದ ಕೊಟ್ಟ ಹಣ, ಧವಸ-ಧಾನ್ಯಗಳನ್ನು ತೆಗೆದುಕೊಂಡು ಶಿಲ್ಪಕಲಾವಿದರು ಸುಮ್ಮನಾಗುತ್ತಿದ್ದರು, ಇದರಿಂದಲೇ ತೃಪ್ತಿಯನ್ನು ಪಡುತ್ತಿದ್ದರು.

ಮರದ ಮಾಧ್ಯಮದಿಂದ ಶಿಲ್ಪಕಲೆಯುಳ್ಳ ರಥವನ್ನು ತಯಾರಿಸಲು ಸೂಕ್ತವಾದ ಮರಗಳೆಂದರೆ ಸಿಹಿಬೇವು, ಶ್ರೀಗಂಧ, ಬನ್ನಿ, ಹೊನ್ನೆ, ಅಂಕೋಲೆ, ತೇಗ ಇಂತಹ ಮರಗಳಿಂದ ರಥದ ಮುಖ್ಯಭಾಗ ತಯಾರಿಸಲಾಗುತ್ತದೆ, ಇತರೆ ಭಾಗದ ಕೆಲಸಕ್ಕೆ ತೇಗದ ಮರವನ್ನು ಬಳಸುತ್ತಾರೆ, ಇಂತಹ ಮರಗಳಿಂದ ತಯಾರಿಸಿದ ರಥವು ಹೆಚ್ಚು ಕಾಲ ಬಾಳಿಕೆ ಬರುತ್ತದೆ ಮತ್ತು ಶಿಲ್ಪ ಕೆತ್ತನೆಗೂ ಸುಲಭವಾಗಿರುತ್ತದೆ ಅಲ್ಲದೇ ನೋಡಲೂ ತುಂಬಾ ಚನ್ನಾಗಿರುತ್ತದೆ, ಚಳ್ಳಕೆರೆ ತಾಲ್ಲೂಕಿನಲ್ಲಿ ನಿರ್ಮಾಣಗೊಂಡಿರುವ ಮರ ಮಾಧ್ಯಮದ ರಥಗಳಲ್ಲಿ ಕಪ್ಪು ಜಾಲಿ, ಬೇವು, ತೇಗ, ಹೊನ್ನೆ, ನೇರಳೆ, ಹತ್ತಿ, ಕಮರ, ಮತ್ತಿ ಮುಂತಾದ ಮರಗಳನ್ನು ಬಳಸಿದ್ದಾರೆ.

8. ಸಂಪ್ರದಾಯ ಶಿಲ್ಪಕಲೆಯ ವ್ಯವಸ್ಥೆ :

ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿರುವ ಕಲಾವಿದರಿಗೆ ಅಗತ್ಯವಾಗಿ ಬೇಕಾದ ಸಹಕಾರ, ಪ್ರೋತ್ಸಾಹ ಸಿಕ್ಕಲ್ಲಿ ಖಂಡಿತಾ ಉತ್ತಮವಾದ ಶಿಲ್ಪಕಲೆ ರೂಪುಗೊಳ್ಳುತ್ತದೆ, ನುರಿತ ಕಲಾವಿದರು ಹುಟ್ಟಿಕೊಳ್ಳುತ್ತಾರೆ, ಸಂಪ್ರದಾಯ ಶಿಲ್ಪಕಲೆ ಶಾಶ್ವತವಾಗಿ ಉಳಿಯುತ್ತದೆ, ಯಾವುದೇ ಕಲೆ ಶಾಶ್ವತವಾಗಿ ಉಳಿಯಬೇಕು ಮತ್ತು ನಿರಂತರವಾಗಿ ಬೆಳೆಯುತ್ತಿರಬೇಕಾದರೆ ಕಲೆಯ ತಯಾರಿಕೆಗೆ ಬೇಕಾದ ಸೂಕ್ತ ವಾತಾವರಣ, ಕಚ್ಚಾ ವಸ್ತುವಿನ ಗುಣಮಟ್ಟ, ಕಲಾವಿದರ ಕೈಚಳಕ, ಕಲಾವಿದರಿಗೆ ಬೇಕಾದ ಹಿರಿಯರ ಮಾರ್ಗದರ್ಶನ, ಅಗತ್ಯದಷ್ಟು ಸಮಯ ಮುಂತಾದ ವ್ಯವಸ್ಥೆಗಳು ಸರಿಯಾದ ರೀತಿಯಲ್ಲಿ ಮತ್ತು ಸೂಕ್ತ ಸಮಯದಲ್ಲಿ ದೊರೆಯಬೇಕು, ಹಾಗಿದ್ದಲ್ಲಿ ಮಾತ್ರ ಕಲೆಯು ಗುಣಮಟ್ಟ ಹೊಂದುತ್ತದೆ ಮತ್ತು ಶಾಶ್ವತವಾಗಿ, ಗಟ್ಟಿಯಾಗಿ ನಿಲ್ಲುತ್ತದೆ, ಸಂಘ ಸಂಸ್ಥೆಗಳು, ಸರ್ಕಾರ, ಆಸಕ್ತರು ಸ್ವಲ್ಪ ಮಟ್ಟಿಗಾದರೂ ಕಲಾವಿದರಿಗೆ, ಕಲೆಗೆ ಮಾನ್ಯತೆ ಕೊಟ್ಟು ಅಗತ್ಯವಾದ ರೀತಿಯಲ್ಲಿ ಸಹಕಾರ ನೀಡಬೇಕೆಂಬುದು ಸಂಶೋಧಕರ ಕಳ ಕಳಿ.

ಸಂಪ್ರದಾಯ ಶಿಲ್ಪಕಲೆಯು ಬಹು ಪ್ರಾಚೀನ ಶಾಸ್ತ್ರವನ್ನು ಒಳಗೊಂಡಿದ್ದಾಗಿದೆ, ಸಂಪ್ರದಾಯ ಶಿಲ್ಪಕಲೆಗೆ ಅದರದೇ ಆದ ಒಂದು ಚೌಕಟ್ಟು ಇದೆ, ಇದನ್ನು ಸರಿಯಾದ ಮಾರ್ಗದರ್ಶಕರಿಂದ ಅಥವಾ ಉತ್ತಮ ಗ್ರಂಥಶಾಸ್ತ್ರಗಳಿಂದ ಕಲಿಯಬೇಕಾಗಿದೆ, ದೇವಾಲಯ ಶಿಲ್ಪಕಲೆ, ಸಂಪ್ರದಾಯ ಶಿಲ್ಪಕಲೆ, ಪಾರಂಪರಿಕ ಶಿಲ್ಪಕಲೆ ಉಳಿದು, ಬೆಳೆಯಲು ಆಸಕ್ತರು ಇತ್ತ ಗಮನ ಹರಿಸಿ ಅದರ ಬಗ್ಗೆ ಜವಾಬ್ದಾರಿ ವಹಿಸಿಕೊಂಡು ಬೆಳೆಸುವತ್ತ ಆಸಕ್ತಿ ತೋರಬೇಕಾಗಿದೆ, ಇಲ್ಲವಾದಲ್ಲಿ ಈ ಕಲೆಯು ಗುಣಮಟ್ಟ, ಶಾಸ್ತ್ರ ಸಂಪ್ರದಾಯವನ್ನು ಕಳೆದುಕೊಂಡು ಬರೀ ಸಾಧಾರಣ ಕಲೆಯು ಮಾತ್ರ ಉಳಿಯಬಹುದು, ಇಂತಹ ಸಾಧಾರಣ ಕಲೆಯು ರುಪವಿಲ್ಲದ ಕಗ್ಗಲ್ಲಿದ್ದಂತೆ.

9. ಸಂಪ್ರದಾಯ ಶಿಲ್ಪಿಗಳ ಹಿನ್ನೆಲೆ :

ಶಿಲ್ಪಕಲೆ ಮತ್ತು ಶಿಲ್ಪಕಲಾವಿದರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಪೂರ್ವದಲ್ಲಿ ಮನುಷ್ಯ ತನಗೆ ಬುದ್ಧಿ ಬಂದಾಗಿನಿಂದಲೂ ಶಿಲ್ಪಕಲೆಯ ನಂಟು ಬೆಳೆಸಿಕೊಂಡು ಬಂದಿದ್ದಾನೆ, ತನಗೆ

ಕಂಡದ್ದನ್ನು ತನ್ನ ದೇಹಕ್ಕೆ ಅಲಂಕಾರದ ವಸ್ತುಗಳನ್ನಾಗಿ ಮಾಡಿಕೊಂಡನು, ನಂತರ ತನ್ನ ಮನೆಯವರಿಗೂ ಕೆಲವಾರು ವಸ್ತುಗಳನ್ನು ಕೊಟ್ಟು ಅಲಂಕರಿಸಲು ಹೇಳಿದ, ತದನಂತರ ತಾನು ವಾಸಿಸುವ ಮನೆಗೂ ಪರಿಸರದಲ್ಲಿ ಸಿಗುತ್ತಿದ್ದ ವಿಶೇಷ ಮತ್ತು ಆಕರ್ಷಕವಾಗಿ ಕಾಣಿಸುತ್ತಿದ್ದ ಹಲವಾರು ವಸ್ತುಗಳನ್ನು ತಂದು ಅವುಗಳಿಗೆ ತನ್ನ ಕೈಚಳಕದಿಂದ ತಿದ್ದಿ ತೀಡಿ ಮನೆಗೆ ಅಳವಡಿಸಿ ಮನೆಯನ್ನು ಅಲಂಕರಿಸಿದ, ಹೀಗೆ ಪ್ರತಿಯೊಂಧಕ್ಕೂ ಅಲಂಕಾರ ಮಾಡುತ್ತಾ ಅವನೂ ಸಹ ಅಲಂಕಾರ ಪ್ರಿಯನಾದನು, ತಾನು ಮನೋರಂಜನೆಗಾಗಿ, ಹವ್ಯಾಸಕ್ಕಾಗಿ ಮಾಡುತ್ತಿದ್ದ ಕಲೆಯಲ್ಲಿಯೂ ಅಲಂಕಾರ ಮಾಡುತ್ತಾ ವಿಶೇಷತೆಯನ್ನು ತೋರಿಸಿದನು. ಹವ್ಯಾಸಕ್ಕಾಗಿ, ಮನಸ್ಸಿನ ಸಂತೋಷಕ್ಕಾಗಿ ಪ್ರಾರಂಭಿಸಿದ ಕಲೆ ತದನಂತರದ ದಿನಗಳಲ್ಲಿ ವೃತ್ತಿಕಲೆಯಾಗಿ ಬದಲಾಯಿತು, ಇಂತಹ ವೃತ್ತಿಕಲೆಯಲ್ಲಿ ತೊಡಗಿರುವವರು ತಮ್ಮ ಕುಟುಂಬದಲ್ಲಿ ಕೆಲವರಿಗೆ ಕಲೆಯನ್ನು ಕಲಿಸಿದ್ದು ಹಿರಿಯರ ಮರಣಾನಂತರ ಕಲೆಯನ್ನು ಸಂಪ್ರದಾಯ ಕಲೆಯನ್ನಾಗಿ ಮುಂದುವರಿಸಿದರು, ಈಗಲೂ ಇಂತಹ ಸಂಪ್ರದಾಯ ಕಲಾವಿದರು ತಮ್ಮ ಕಲೆಯನ್ನು ಮಾಡುತ್ತಿದ್ದಾರೆ, ಆದರೆ ಶಿಲ್ಪಕಲೆಯ ವಿಧಗಳು ಹಲವಾರು ಇದ್ದು ತಮಗೆ ಇಷ್ಟವಾದ ಮಾಧ್ಯಮದಲ್ಲಿ ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

10. ಸಂಪ್ರದಾಯ ಶಿಲ್ಪ ಕಲಾವಿದರ ವ್ಯವಸ್ಥೆ

ಪುರಾತನ ಕಾಲಕ್ಕೂ ಇಂದಿನ ಕಾಲಕ್ಕೂ ಬಹಳ ವ್ಯತ್ಯಾಸವಿದೆ, ದುಂಡನೆಯ ಕಗ್ಗಲ್ಲನ್ನು ಕಡೆದು ಒಂದು ನಿರ್ಧಿಷ್ಟವಾದ ರೂಪಕೊಡುವ ಸೃಷ್ಟಿಕರ್ತನೆಂದೂ, ದೇವರ ಮೂರ್ತಿಯನ್ನು ಸೃಷ್ಟಿ ಮಾಡಿದವರು ಎಂದು ದೇವರಿಗೆ ತೋರುತ್ತಿದ್ದ ಭಯ ಭಕ್ತಿಯನ್ನು ಶಿಲ್ಪಿಗಳಿಗೆ ತೋರುತ್ತಿದ್ದರು, ಯಾರೇ ಉಳ್ಳವರು, ಆಸಕ್ತಿ ಇರುವವರು ತಮಗೆ ಇಷ್ಟವಾದ ಕಲಾಕೃತಿಗಳನ್ನು ಕಲಾವಿದರಿಂದ ಮಾಡಿಸಿಕೊಂಡು ಅವರಿಗೆ ಒಂದಿಷ್ಟು ಸಂಭಾವನೆಯನ್ನು ಮತ್ತು ಉಡುಗೊರೆಯನ್ನು ಕೊಟ್ಟು ಸನ್ಮಾನಿಸುತ್ತಿದ್ದರು, ಆದರೆ ಶಿಲ್ಪ ಕಲಾವಿದರಿಗೆ ಅಂದಿನ ಸಹಾಯ, ಸಹಕಾರ, ಪ್ರೋತ್ಸಾಹ ಇಂದು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿದೆ, ಮೊದಲಿದ್ದ ಆದರ, ಆತಿಥ್ಯಗಳೂ ಸಹ ಇಂದು ಕಡಿಮೆಯಾಗುತ್ತಿವೆ ಎಂಬೊಂದು ಕೊರಗು ಸಂಪ್ರದಾಯ ಶಿಲ್ಪಕಲಾವಿದರದು.

ಹಿಂದಿನ ಕಾಲದಲ್ಲಿ ಸುಂದರ ಕಲಾಕೃತಿಗಳು ಅಥವಾ ವಾಸ್ತುಶಿಲ್ಪ ಹಿನ್ನೆಲೆಯ ದೇವಾಲಯಗಳನ್ನು ಬರೀ ಕೈಯಲ್ಲಿ ಮಾತ್ರ ನಿರ್ಮಾಣ ಮಾಡುತ್ತಿದ್ದರು, ತಮ್ಮದೇ ಆದ, ತಾವುಗಳೇ ತಯಾರು ಮಾಡಿಕೊಂಡ ಕೆತ್ತನೆಯ ಸಲಕರಣೆಗಳಿಂದ ತಮ್ಮ ಕೈಚಳಕದಿಂದ ಕೆತ್ತನೆ ಮಾಡುತ್ತಿದ್ದರು, ಇದು ಅವರಿಗೆ ಅನಿವಾರ್ಯವೂ ಕೂಡ ಆಗಿತ್ತು, ಕೆತ್ತನೆಯ ಸಮಯದಲ್ಲಿ ಕೆಲವೊಮ್ಮೆ ಕಲಾವಿದರ ದೇಹದ ಯಾವುದೇ ಭಾಗಕ್ಕೆ ಕಲ್ಲಿನ ಚೂರುಗಳಿಂದ ಹಾನಿಯಾದರೂ ಆಗಬಹುದಿತ್ತು, ಇಂತಹ ಹತ್ತು ಹಲವಾರು ಸಮಸ್ಯೆಗಳನ್ನು ಶಿಲ್ಪಕಲಾವಿದರು ಎದುರಿಸುತ್ತ ತಾವುಗಳು ಕೈಗೊಂಡ ಕೆಲಸ ಪೂರ್ಣಗೊಳಿಸುತ್ತಿದ್ದರು. ಒಂದು ವೇಳೆ ಮೂರ್ತಿಗಳ ಕೆತ್ತನೆ ಕಾರ್ಯ ಪೂರ್ಣ ಹಂತಕ್ಕೆ ಬಂದಿದ್ದು ಅಚಾತುರ್ಯದಿಂದ ಶಿಲ್ಪಕ್ಕೆ ಏನಾದರೂ ತಂದರೆಯಾದರೆ, ಅಷ್ಟೂ ದಿನಗಳು ಕೆತ್ತನೆ ಮಾಡಿದ ಕೆಲಸ ವ್ಯರ್ಥವಾಗುತ್ತಿತ್ತು, ಇದರ ಸಂಪೂರ್ಣ ಖರ್ಚು ಶಿಲ್ಪಿಯದೇ ಆಗಿರುತ್ತದೆ, ಆದರೆ ಇಂದು ಸ್ವಲ್ಪ ಮಟ್ಟಿಗೆ ಈ ರೀತಿಯ ತೊಂದರೆ ಕಡಿಮೆಯಾಗುತ್ತಿದೆ, ಯಾಕೆಂದರೆ ಶಿಲ್ಪ ಕೆತ್ತನೆಗೆ ಇಂದು ಆಧುನಿಕ ಯಂತ್ರೋಪಕರಣಗಳು, ಸಲಕರಣೆಗಳು ಇಂದಿನ ಕಲಾವಿದರಿಗೆ ಉತ್ತಮ ಸಹಾಯ ಒದಗಿಸುತ್ತಿವೆ, ಎಂತಹ ದೊಡ್ಡ ಗಾತ್ರದ ಕಲ್ಲನ್ನೇ ಆಗಲಿ ಬೇಕಾದ ಅಳತೆ ಹಾಗೂ ಕ್ಷಣ ಮಾತ್ರದಲ್ಲಿ ಕತ್ತರಿಸುವ ಮತ್ತು ಬೇಕಾದ ತಗ್ಗು(ಆಳದ) ವರೆಗೂ ರಂಧ್ರ ಕೊರೆಯುವ ವಿದ್ಯುತ್ ಮತ್ತು ಬ್ಯಾಟರಿ ಸಹಾಯಕ ಯಂತ್ರಗಳು ಲಭ್ಯವಿವೆ.

ಹಿಂದಿನ ಕಾಲದಲ್ಲಿ ತಿಂಗಳಾನುಗಟ್ಟಲೇ ಮಾಡುತ್ತಿದ್ದ ಕೆತ್ತನೆ ಕೆಲಸವನ್ನು ಇಂದು ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಬಹುದಾಗಿದೆ, ಅಲ್ಲದೇ ಹಿಂದಿನ ಕಾಲದಲ್ಲಿ ಬೃಹತ್ ಗಾತ್ರದ ಕಲ್ಲು ಅಥವಾ ಕೆತ್ತನೆ ಶಿಲ್ಪಗಳನ್ನು ಎತ್ತರವಾದ ಜಾಗಕ್ಕೆ ಸೇರಿಸಬೇಕಾದರೆ ಮನುಷ್ಯ ಅಥವಾ ಪ್ರಾಣಿಗಳ ಸಹಾಯದಿಂದ ಬುದ್ದಿವಂತಿಕೆ ಉಪಯೋಗಿಸಿ ತುಂಬಾ ಕಷ್ಟದಾಯಕ ವಿಧಾನದಲ್ಲಿ ಮಾಡಬೇಕಾಗಿತ್ತು, ಇದರಿಂದ ಅಪಾಯವೂ ಹೆಚ್ಚಿರುತ್ತಿತ್ತು, ಆದರೆ ಈಗ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ (ಕ್ರೇನ್)ಸಾಧನಗಳ ಸಹಾಯದಿಂದ ಎಷ್ಟೇ ಎತ್ತರವಾದ ಜಾಗಕ್ಕೆ, ಬೇಕಾದ ಸ್ಥಳಕ್ಕೆ, ಬೇಕಾದ ಸಮಯದಲ್ಲಿ ಬಹು ಸುಲಭವಾಗಿ ಸಾಗಿಸಬಹುದಾಗಿದೆ, ಹೆಚ್ಚಿನ ಸಮಯ, ಹೆಚ್ಚಿನ ಕೆಲಸದಾಳುಗಳು ಮತ್ತು ಕಷ್ಟದಾಯಕ ರೀತಿಯ ವ್ಯವಸ್ಥೆಯಿಂದ ಕಲಾವಿದರು ಇಂದು ಮುಕ್ತಿ ಹೊಂದಿದ್ದಾರೆ, ಆದರೆ ಶಿಲ್ಪ ಕಲಾವಿದರಿಗೆ ಬೇಕಾದ ಶಿಲ್ಪಗಳು(ಕಲ್ಲಿನ ವಿಧಗಳು) ಸರಿಯಾದ ಸಮಯಕ್ಕೆ ಇಂದು ದೊರೆಯುತ್ತಿಲ್ಲ, ಸಾಗಾಣಿಕೆಯ ವ್ಯವಸ್ಥೆಯಲ್ಲಿ ಸಮಸ್ಯೆಯಾಗುತ್ತದೆ, ಕಲಾವಿದರಿಗೆ ಬೇಕಾದ ಸಾಧನಗಳಿದ್ದರೂ ಸರಿಯಾದ ಮಾರ್ಗದರ್ಶನದ ಕೊರತೆಯಿದೆ, ಈ ಕಾರಣದಿಂದ ಎಷ್ಟೋ ಕಲಾವಿದರು ಸಂಪ್ರದಾಯವನ್ನು ಬಿಟ್ಟು ಸುಲಭ ರೀತಿಯ ಕೆಲಸಗಳಿಗೆ ಮಾರುಹೋಗುತ್ತಿದ್ದಾರೆ, ಆದ್ದರಿಂದ ಸರ್ಕಾರ, ಅಕಾಡೆಮಿಗಳು, ವಿಶ್ವವಿದ್ಯಾಲಯಗಳು ಇತ್ತ ಗಮನ ಹರಿಸಿ, ಅಳಿವಿನ ಅಂಚಿಗೆ ಹೋಗುತ್ತಿರುವ ಕಲೆಯನ್ನು ಉಳಿಸುವ ಪ್ರಯತ್ನ ಮಾಡಬೇಕಿದೆ.

ಕಲೆ ಮತ್ತು ಸಂಪ್ರದಾಯ ಕಲೆಯಿಂದ ದೂರ ಸರಿಯುತ್ತಿರುವ ಕಲಾವಿದರ ಕುಟುಂಬಗಳಿಗೆ ಮಾರ್ಗದರ್ಶನ, ಪ್ರೋತ್ಸಾಹ ನೀಡಬೇಕು, ಯಾವುದೇ ಸಂಪ್ರದಾಯ ಕಲೆ ಉಳಿಯಲು ಮತ್ತು ಬೆಳೆಯಲು ಪ್ರತಿಯೊಬ್ಬರೂ ಸಹಕರಿಸಬೇಕಿದೆ, ಅಂದರೆ ಶಿಲ್ಪ ಕೆತ್ತನೆಗೆ ಬೇಕಾದ ಕಲ್ಲು(ಶಿಲ್ಪ)ನ್ನು ಇರುವ/ದೊರೆಯುವ ಜಾಗದಿಂದ ಕಲಾವಿದರಿಗೆ ಬೇಕಾದ ಸ್ಥಳಕ್ಕೆ ಸುಲಭವಾಗಿ ಸರಬರಾಜು ಮಾಡಿಕೊಳ್ಳಲು, ಅನುಕೂಲತೆಗಳನ್ನು ಒದಗಿಸುವುದು, ಇನ್ನಾವ ರೀತಿಯಿಂದಲಾದರು ಶಿಲ್ಪಗಳನ್ನು ಒದಗಿಸಿಕೊಡುವುದು ಅಥವಾ ಕೆತ್ತನೆಗೆ ಬೇಕಾದ ಇತರೆ ಅನುಕೂಲತೆಗಳನ್ನು ಮಾಡುವುದರಿಂದ ಕಲಾವಿದರಿಗೆ ಸ್ವಲ್ಪ ಮಟ್ಟಿನ ಸಹಾಯ, ಸಹಕಾರ ದೊರೆತಂತಾಗಿ ಕಲೆಯಲ್ಲಿ ಆಸಕ್ತಿ ಹುಟ್ಟುತ್ತದೆ, ಕಲೆಯನ್ನು ಮುಂದುವರಿಸುತ್ತಾರೆ, ಇದಲ್ಲದೆ ಹೊಸ ಹೊಸ ಕಲಾವಿದರನ್ನು ತಯಾರು ಮಾಡಲು ಮತ್ತು ಸಂಪ್ರದಾಯ ಶಿಲ್ಪ ಕಲಾವಿದರ ಕುಟುಂಬದವರಿಗೆ ಅಥವಾ ಇನ್ನಾವುದೇ ರೀತಿಯ ಆಸಕ್ತರಿಗೆ ಕಲಾ ಶಾಲೆಗಳನ್ನು, ಕಲಾ ತರಬೇತಿ ಶಾಲೆಗಳನ್ನು, ಶಿಬಿರಗಳನ್ನು ನಡೆಸಿದರೆ ಸಂಪ್ರದಾಯ ಶಿಲ್ಪಕಲೆ ಸ್ವಲ್ಪ ಮಟ್ಟಿಗಾದರೂ ಉಳಿಯಬಲ್ಲದು.

11. ಪೂರ್ವ ಇತಿಹಾಸದ ಶಿಲ್ಪ ಕಲಾವಿದರು

ಪುನರುಜ್ಜೀವನ ಕಾಲದ ನಂತರದಲ್ಲಿ ಹಲವಾರು ಸಂಪ್ರದಾಯ ಶಿಲ್ಪ ಕಲಾವಿದರೂ, ಹವ್ಯಾಸಿ ಕಲಾವಿದರೂ ಸಾಕಷ್ಟು ಜನರಿದ್ದರು. ಮೈಕೆಲ್ ಎಂಜಿಲೋ ಎಂಬ ಕಲಾವಿದನು ಬುಚ್ಚೂಸ್ ಮೂರ್ತಿ ಶಿಲ್ಪದಿಂದ ಹೆಚ್ಚು ಜನಮನ್ನಣೆ ಪಡೆದಿದ್ದನು, ಸಂಗಮವರಿ ಎಂಬ ಕಲ್ಲಿನಿಂದ ಈ ಶಿಲ್ಪವನ್ನು ಮಾಡಿದ್ದಾನೆ, ನೈಜರೂಪದಲ್ಲಿ ನಗ್ನ ಆಕಾರದಲ್ಲಿ ಕೆತ್ತಿದ ಮೂರ್ತಿ ಶಿಲ್ಪ ಇದಾಗಿದೆ, ಜಿಕೋಫ್‌ಗಲ್ ಎಂಬ ವ್ಯಕ್ತಿಯೊಬ್ಬನ ಜ್ಞಾಪಕಾರ್ಥವಾಗಿ ಹೂವಿನತೋಟ(ಉದ್ಯಾನವನ)ದಲ್ಲಿ ನಿಲ್ಲಿಸಿದ ಈ ಶಿಲ್ಪದ ಪ್ರತಿಯೊಂದು ಅಂಗಗಳು ನೋಡುಗನ ಮನಸೂರೆಗೊಳ್ಳುತ್ತದೆ, ಸಮಾರು 80ಅಡಿ ಎತ್ತರವಿರುವ ಈ ಶಿಲ್ಪವು ಒಂದು ಕೈಯಲ್ಲಿ ಪಾತ್ರೆ ಹಿಡಿದಿದ್ದು ಇನ್ನೊಂದು ಕೈಯನ್ನು ಕೆಳಗಡೆ ಇಳಿಬಿಟ್ಟಿದೆ, ಈ ವಿಗ್ರಹವು ಫ್ಲೋರೆನ್ಸ್ ಪಟ್ಟಣದ ರಾಷ್ಟ್ರೀಯ ಸಂಗ್ರಹಾಲಯದಲ್ಲಿದೆ, ಇದೇ ಕಲಾವಿದನು ಸಂಗಮವರಿ ಕಲ್ಲಿನಲ್ಲಿ ಕೆತ್ತಿರುವ ಮತ್ತೊಂದು ಡೇವಿಡ್‌ನ ಮೂರ್ತಿಯನ್ನು 1498ರಲ್ಲಿ ಕೆತ್ತಲ್ಪಟ್ಟಿದೆ, ಇದೇರೀತಿ ರ್‍ಯಾಪೆಲ್, ತಿಥಾನ್, ಅಲಮೇಲಕರ್, ಕೆ.ವೆಂಕಟಪ್ಪ,

ಎನ್.ಹನುಮಯ್ಯ, ಎಸ್.ಎಂ.ಪಂಡಿತ್, ಸಂಕೂಚೌದ್ರಿ, ಪ್ರಮೋದ್‌ದಾಸ್ ಗುಪ್ತಾ, ಮುಂತಾದ ಅನೇಕ ಕಲಾವಿದರು ನಾಡಿನಾದ್ಯಂತ ತಮ್ಮ ಕಲೆಯಿಂದ ಪ್ರಸಿದ್ಧರಾಗಿದ್ದರು, ಇಂದು ಅವರಿಲ್ಲದಿದ್ದರೂ ಅವರು ತಯಾರಿಸಿದ ಕಲೆಗಳು, ಶಿಲ್ಪಗಳು ಇಂದಿಗೂ ನೋಡುಗರನ್ನು ಚಕಿತಗೊಳಿಸುತ್ತವೆ.

ಪರಾಮರ್ಶನ ಗ್ರಂಥಗಳು :-

1). ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ: ಡಾ॥ ಎನ್.ಎಸ್. ಮಹಂತೇಶ.

2). ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು: ಡಾ॥ ಬಿ. ಸುರೇಶ.

3). ವಿಶ್ವಕರ್ಮ ಶಿಲ್ಪ ಶಾಸ್ತ್ರಂ.

4). ಕಲಾ ಚರಿತ್ರೆ : ಅಶೋಕ ಟಿ.ಅಕ್ಕಿ.

5). ದಿನ ಪತ್ರಿಕೆಗಳು

ಅಧ್ಯಾಯ – 2

ಶಿಲ್ಪಕಲಾವಿದರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ

1. ಪರಿಶಿಷ್ಟ ಪಂಗಡ(ಸಮುದಾಯ)ದವರ ಒಂದು ವಿಶ್ಲೇಷಣೆ
2. ವಿವಿಧ ಗುಂಪುಗಳಲ್ಲಿ ಕಂಡು ಬರುವ ಭಾಷೆಗಳ ಚಿತ್ರಣ
3. ಬೇಡರು ಮತ್ತು ಗಿರಿಜನರಲ್ಲಿನ ಶಿಲ್ಪಕಲಾ ವಿಭಿನ್ನತೆ
4. ಸಂಪ್ರದಾಯ ಶಿಲ್ಪಕಲಾವಿದರ ಭಾಷೆ ಮತ್ತು ಕಲೆ
5. ಶಿಲ್ಪಕಲೆ ಬೆಳೆದು ಬಂದ ದಾರಿ
6. ಶಿಲ್ಪಕಲೆಯ ವಿಧಿ ವಿಧಾನಗಳು
7. ಮೂರ್ತಿ ಕೆತ್ತನೆಯ ಭಾಗಗಳು, ಲಕ್ಷಣಗಳು ಮತ್ತು ಅಳತೆ
8. ಶಿಲ್ಪ ಶಾಸ್ತ್ರ ಪರಿಚಯ
9. ಲಿಂಗದ ಶಿಲ್ಪ

ಶಿಲ್ಪಕಲಾವಿದರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ

1. ಪರಿಶಿಷ್ಟ ಪಂಗಡ (ಸಮುದಾಯದವರ)ಒಂದು ವಿಶ್ಲೇಷಣೆ :

(ಗಿರಿಜನರು, ನಾಯಕ, ಬೇಡ, ಮ್ಯಾಸ ಬೇಡ, ಜೇನು ಕುರುಬ, ಊರು ಬೇಡ)

ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಆಚರಣೆ : ಗ್ರಾಮೀಣ ಆಟ–ಪಾಠಗಳಲ್ಲಿ ವಿಭಿನ್ನತೆ, ವಿಶೇಷತೆ ಇರುತ್ತದೆ, ದನಗಳನ್ನು ಕಾಯುವವರು ಉದ್ದನೆಯ ಪಟಾಪಟಿ ನಿಕ್ಕರು, ಕಚ್ಚೆ ಪಂಚೆ, ಜುಬ್ಬಾ, ತಲೆಗೆ ರುಮಾಲು ಮುಂತಾದವುಗಳನ್ನು ಧರಿಸಿಕೊಂಡು ಪಿಳ್ಳಂಗೋವಿ(ಕೊಳಲು) ನುಡಿಸುವುದು, ದೇವರ ಉತ್ಸವಗಳು ಮತ್ತು ಹಬ್ಬ ಹರಿದಿನಗಳಲ್ಲಿ ವಿವಿಧ ವೇಶಭೂಷಣಗಳಿಂದ ಕೇಕೆ ಹಾಕುತ್ತಾ, ಚಪ್ಪಾಳೆ ತಟ್ಟುತ್ತಾ ಕುಣಿದಾಡುವುದು, ಒಬ್ಬರ ಕೈ ಮತ್ತೊಬ್ಬರು ಹಿಡಿದುಕೊಂಡು ಎಳೆದಾಡುತ್ತ ಕುಣಿಯುವುದು ವಿಶೇಷವಾಗಿರುತ್ತದೆ, ಪರಿಶಿಷ್ಟ ಪಂಗಡ ಸಮುದಾಯದವರಲ್ಲಿ ನಾಯಕ, ಬೇಡರು, ಮ್ಯಾಸಬೇಡರು, ಕಾಡುಗೊಲ್ಲರು, ಗಿರಿಜನರು, ಹಕ್ಕಿ ಪಿಕ್ಕಿ, ಜೇನು ಕುರುಬ, ವಾಲ್ಮೀಕಿ, ಕಾಡುಕುರುಬರು, ಬೇಡರು ಮುಂತಾದವರಿದ್ದು, ಇವರು ಭಾಷೆ, ಸಂಸ್ಕೃತಿ ಹಾಗೂ ಕಲೆಗಳಲ್ಲಿ ಹತ್ತಿರದ ಸಂಬಂಧವನ್ನು ಹೊಂದಿರುತ್ತಾರೆ, ಬೇರೆ ಬೇರೆಯಾಗಿ ಇವರೆಲ್ಲರೂ ಬದುಕಿದರೂ ಕೂಡ ಈ ಎಲ್ಲಾ ಬುಡಕಟ್ಟಿನವರ ಜೀವನ ವಿಧಾನದಲ್ಲಿ ಮುಖ್ಯವಾಗಿ ಬೇಟೆ, ಪಶುಪಾಲನೆ, ಕಲೆ–ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮಿಕತೆ ಮುಂತಾದವುಗಳು ಸರಿಸುಮಾರು ಒಂದೇ ತೆರನಾಗಿರುತ್ತವೆ, ಹಳ್ಳಿ ಜೀವನ ಮತ್ತು ಕೃಷಿ ಮಾಡಿದ ಗುರುತುಗಳು, ಮಾಡಿದ ಶಿಲ್ಪಕಲೆ, ಇತ್ಯಾದಿ ಕಲೆಗಳು, ಇತರೆ ವಿಶೇಷತೆ ಮತ್ತು ಜೀವನ ವಿಧಾನ, ವೃತ್ತಿ ಬದುಕು ಮುಂತಾದ ಅನೇಕ ವಿಚಾರಗಳನ್ನು ತಿಳಿಸುವ ಸಲುವಾಗಿ ಅಥವಾ ಮುಂದಿನ ಪೀಳಿಗೆ ಅದನ್ನು ಅನುಸರಿಸಲಿ, ಮುಂದುವರಿಸಲಿ ಎಂಬ ಕಾರಣಕ್ಕಾಗಿ ಚಿತ್ರಗಳಲ್ಲಿ, ಶಿಲ್ಪಗಳಲ್ಲಿ, ದೇವಸ್ಥಾನಗಳ ನಿರ್ಮಾಣದಲ್ಲಿ, ಗುಹೆಗಳಲ್ಲಿ ಮತ್ತು ಅಲ್ಲಲ್ಲಿ ಸಿಕ್ಕ ಕಲ್ಲು ಬಂಡೆಗಳಲ್ಲಿ ಚಿತ್ರಗಳ ಮುಖಾಂತರ, ಉಬ್ಬು ಕೆತ್ತನೆ ಶಿಲ್ಪಗಳ ಮುಖಾಂತರ ಗುರುತುಗಳನ್ನು ಮಾಡುವುದರ ಮುಖಾಂತರ ದಾಖಲಿಸಿದ್ದಾರೆ.

ಭಾಷೆಗಳ ವಿಭಾಗಗಳು : ಭಾಷೆಗಳನ್ನು ಅರಿಯಲು ನಾಯಕರಲ್ಲಿ ಎರಡು ಅಥವಾ ಮೂರು ರೀತಿಯ ವರ್ಗಗಳನ್ನು ಕಾಣಬಹುದು, ಇದನ್ನು ಬುಡಕಟ್ಟುಗಳು ಎನ್ನಲಾಗಿದೆ.

ನಾಯಕ ಸಮುದಾಯದಲ್ಲಿ ಪರಿಶಿಷ್ಟ ಗುಂಪು, ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಪಂಗಡ ಎಂಬ ಬುಡಕಟ್ಟು ಇದ್ದು ಇವರಲ್ಲಿ ಬೇಡರು, ಮ್ಯಾಸ ಬೇಡರು, ಗಿರಿಜನರು, ಕಾಡು ಜನರು ಮುಂತಾದ ಗುಂಪುಗಳಿವೆ, ಇವರೆಲ್ಲರ ಭಾಷೆ, ಸಂಸ್ಕೃತಿ, ಆಚರಣೆ ಹಾಗೂ ಕಲೆ ಬಹುಪಾಲು ಒಂದೇ ತೆರನಾಗಿರುತ್ತವೆ.

ಗಿರಿಜನರು: ಬೆಟ್ಟ–ಗುಡ್ಡ, ಗಿರಿ–ಗುಹೆಗಳು, ಕಾಡು–ಮೇಡುಗಳಲ್ಲಿ ವಾಸಿಸುವವರು ಗಿರಿಜನರು, ಇವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ, ಇದರಲ್ಲಿ ಹಳ್ಳಿಯ ಸೊಗಡು, ಹಳ್ಳಿಯ ಸಂಸ್ಕೃತಿ ತುಂಬಿರುತ್ತದೆ, ಇದನ್ನು ಶುದ್ಧವಾದ ಗ್ರಾಮ್ಯ ಭಾಷೆ ಎನ್ನಬಹುದು, ವ್ಯವಸಾಯ, ಪಶುಪಾಲನೆ ಇವರ ಕಸುಬಾಗಿದ್ದು, ಕಷ್ಟದ ಕೆಲಸವನ್ನೂ ಮಾಡಲು ಹಿಂಜರಿಯುವುದಿಲ್ಲ, ಕಲ್ಲನ್ನು ಕಡಿದಾದರೂ ಜೀವನ ಸಾಗಿಸುತ್ತಾರೆ, ಬೆಟ್ಟದ ಕಲ್ಲು, ಮಣ್ಣು, ಮರ ಮುಟ್ಟುಗಳನ್ನು ಕಡಿದು ಅವನ್ನು ಮಾರಿ ಜೀವನ ಸಾಗಿಸುತ್ತಿದ್ದರು, ಈಗ ಬೇರೆ ಜೀವನಕ್ಕೆ ಬದಲಾಗಿದ್ದಾರೆ, ಮಾಂಸಾಹಾರಿಗಳಾಗಿದ್ದು ಬೇಟೆಯಾಡುವುದನ್ನು ಬಹಳವಾಗಿ ಇಚ್ಛೆ ಪಡುತ್ತಿದ್ದರೂ ಈಗ ಇದರಿಂದಲೂ ದೂರ ಉಳಿಯುತ್ತಿದ್ದಾರೆ.

ಜೇನು ಕುರುಬರು(ಕಾಡು ಜನರು,ಕಾಡು ಕುರುಬರು): ಇವರು ಹೆಚ್ಚಾಗಿ ದೊಡ್ಡ ದೊಡ್ಡ ಊರು, ಪಟ್ಟಣ ಅಥವಾ ನಗರಗಳಿಂದ ದೂರವೇ ವಾಸಿಸಲು ಬಯಸುತ್ತಿದ್ದರು, ಮಾಂಸಾಹಾರವನ್ನು ಬಹಳ ಇಷ್ಟ ಪಡುತ್ತಾರೆ, ಕಾಡು ಪ್ರಾಣಿಗಳನ್ನು ಬೇಟೆಯಾಡುವುದು, ಜೇನು ಸಂಗ್ರಹಣೆ ಇವರ ಇಷ್ಟದ ಕೆಲಸವಾಗಿತ್ತು,

ಆದರಿಂದು ನಾಗರೀಕತೆಯ ಪ್ರಭಾವದಿಂದ ತಮ್ಮಗಳ ಜೀವನ ಶೈಲಿಯನ್ನು ಬದಲಾಯಿಸಿಕೊಂಡಿದ್ದಾರೆ. **ಬೇಡರಲ್ಲಿ ಮ್ಯಾಸ ಬೇಡರು ಮತ್ತು ಊರ ಬೇಡರು ಎಂಬ ಎರಡು ಗುಂಪುಗಳಿವೆ.**

1). **ಊರು ಬೇಡರು:** ಮಾಂಸಾಹಾರವನ್ನು ಹೆಚ್ಚಾಗಿ ಇಷ್ಟ ಪಡುತ್ತಾರೆ, ಮಾಂಸಕ್ಕಾಗಿ ಪ್ರಾಣಿಗಳನ್ನು ಸಾಕುವುದು, ಮಾರುವುದು ಇವರ ಹೆಚ್ಚಿನ ಹವ್ಯಾಸ, ಇವರನ್ನು ಹಟ್ಟಿ ಜನರು ಅಥವಾ ಊರು ನಾಯಕರು ಎನ್ನುತ್ತಾರೆ, ಬೇರೆ ಯಾವುದೇ ಸಮುದಾಯಗಳವರೊಂದಿಗೆ ಸುಲಭವಾಗಿ ಬೆರೆಯುತ್ತಾರೆ, ಇವರು ಎಂದಿಗೂ ಒಂಟಿಯಾಗಿ ಇರುವುದು ಅಥವಾ ಒಂಟಿಯಾಗಿ ವಾಸಿಸುವುದಿಲ್ಲ, ಯಾವಾಗಲೂ ಗುಂಪು ಗುಂಪಾಗಿಯೇ ಇರಲು ಇಷ್ಟ ಪಡುತ್ತಾರೆ ಮತ್ತು ಗುಂಪಾಗಿಯೇ ವಾಸಿಸುತ್ತಾರೆ, ಇವರು ಮಾಂಸಹಾರಿಗಳಾಗಿ, ಬೇಟೆಯಾಡಿದರೂ ಅಷ್ಟೊಂದು ಆಸಕ್ತಿ ವಹಿಸದೇ ವ್ಯವಸಾಯಕ್ಕೆ ಹೆಚ್ಚಿನ ಒತ್ತು ಕೊಟ್ಟು ಅದರಲ್ಲಿ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ, ಇವರು ನರಸಿಂಹಸ್ವಾಮಿ ದೇವರ ಆರಾಧಕರು, ಈ ದೇವರಿಗೆ ಕೋಳಿ ನಿಷಿದ್ಧವಾಗಿದೆ ಆದ್ದರಿಂದ ಇವರೂ ಸಹ ಕೋಳಿಯನ್ನು ಮುಟ್ಟುವುದಾಗಲಿ ತಿನ್ನುವುದಾಗಲಿ ನಿಷಿದ್ಧ.

2). **ಮ್ಯಾಸ ಬೇಡರು:** ಮ್ಯಾಸ ಬೇಡರು ಊರು ಊರು ಅಲೆಯುತ್ತ ಅಲೆಮಾರಿಗಳಾಗಿ ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳನ್ನು ಮಾತನಾಡುತ್ತಾರೆ, ಕೆಲವು ಗುಂಪಿನವರು ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳನ್ನು ಮಿಶ್ರಮಾಡಿಕೊಂಡು ಮಾತನಾಡುತ್ತಾರೆ, ಮ್ಯಾಸ ಬೇಡರು ಎಂದರೆ ಬೇಡರಲ್ಲಿಯ ಒಂದು ಗುಂಪು ಅಷ್ಟೇ, ಆದರೆ ಈ ಮ್ಯಾಸ ಬೇಡರ ಗುಂಪು ಹೆಚ್ಚಾಗಿ ಸುತ್ತಾಡುವುದನ್ನು ಇಷ್ಟ ಪಡುತ್ತಾರೆ, ಬೇಟೆಯಾಡುತ್ತಾ ಸದಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಮ್ಮ ಸಾಕು ಪ್ರಾಣಿಗಳಾದ ಕುರಿ-ಮೇಕೆಗಳು, ದನಗಳು, ಸಾಕು ನಾಯಿಗಳು ಮತ್ತು ತಮ್ಮ ಕುಟುಂಬದವರೊಡನೆ ಅಲೆದಾಡುವುದೇ ಇವರ ಕಾಯಕವಾಗಿರುತ್ತದೆ, ಯಾವ ಸ್ಥಳದಲ್ಲಿ ವಾಸಕ್ಕೆ ಬೇಕಾದ ಆಹಾರ ಮತ್ತು ಜೀವನ ಸಾಗಿಸಲು ಬೇಕಾದ ಸವಲತ್ತುಗಳು ಅಧಿಕವಾಗಿ ಸಿಗುತ್ತವೆಯೋ ಅಲ್ಲಿ ವಾಸಮಾಡುತ್ತಾರೆ, ಹೆಚ್ಚು ಧೈರ್ಯ ಶಾಲಿಗಳು, ಕಳ್ಳಕಾಕರಿಗೆ, ಮೃಗ ಪಕ್ಷಿಗಳಿಗೆ ಹೆದರುವುದಿಲ್ಲ, ಮಾಂಸಾಹಾರವನ್ನು ಹೆಚ್ಚಾಗಿ ಇಷ್ಟ ಪಡುತ್ತಾರೆ.

ಮ್ಯಾಸಬೇಡರು, ಊರುಬೇಡರು, ಜೇನುಕುರುಬರು ಇವರುಗಳ ಜೀವನ ವಿಧಾನದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸವನ್ನು ಕಾಣಬಹುದು, ಮೊದಲು ಇವರೆಲ್ಲರೂ ಬೇರೆ ಬೇರೆಯಾಗಿ ಜೀವಿಸುತ್ತಿದ್ದರು, ಈ ಗುಂಪುಗಳಲ್ಲಿ ಮಧುವೆಯಂತಹ ಸಂಬಂಧವನ್ನು ಮಾಡುತ್ತಿರಲಿಲ್ಲ, ಒಂದು ಗುಂಪಿನವರ ಮನೆಯ ಒಳಗೆ ಮತ್ತೊಂದು ಗುಂಪಿನವರು ಹೋಗುತ್ತಿರಲಿಲ್ಲ, ಆದರೆ ಈಗ ಎಲ್ಲರೂ ಸಂಬಂಧಗಳನ್ನು ಮಾಡುವುದು, ಹೆಣ್ಣುಗಳನ್ನು ಕೊಟ್ಟು ತೆಗೆದುಕೊಳ್ಳುವುದನ್ನು ಮಾಡುತ್ತಿದ್ದಾರೆ. ನಾಗರೀಕತೆಗೆ ಎಲ್ಲಾ ಗುಂಪುಗಳವರು ಬದಲಾಗುತ್ತಿದ್ದಾರೆ. ಬೇಡರು-ಮ್ಯಾಸಬೇಡರು ಗ್ರಾಮೀಣ ಸೊಗಡನ್ನು ಹೊಂದಿರುವ ಚಿತ್ರಗಳು ಮತ್ತು ಶಿಲ್ಪಕಲೆಯನ್ನು ಮಾಡಿದರೆ, ಗಿರಿಗುಹೆಗಳಲ್ಲಿ ಮತ್ತು ಕಾಡು ಮೇಡುಗಳಲ್ಲಿ ವಾಸಿಸುವ ಗಿರಿಜನರು-ಕಾಡುಜನರು ಕಾಡು ಮೇಡುಗಳ, ಗುಡ್ಡಬೆಟ್ಟಗಳ, ಪ್ರಾಣಿ ಪಕ್ಷಿಗಳ ಚಿತ್ರಗಳನ್ನು, ಬೇಟೆಯಾಡುವ ಚಿತ್ರಗಳನ್ನು ಚಿತ್ರಗಳಲ್ಲಿ ಮತ್ತು ಶಿಲ್ಪಗಳಲ್ಲಿ ರಚಿಸಿದ್ದಾರೆ, ಈ ಎಲ್ಲಾ ಬುಡಕಟ್ಟಿನವರು ರಚಿಸುವ ಚಿತ್ರಗಳಲ್ಲಿ ಮತ್ತು ಶಿಲ್ಪಗಳಲ್ಲಿ ಸ್ವಲ್ಪ ವಿಧದ ವ್ಯತ್ಯಾಸವಿರುತ್ತದೆ ಅಷ್ಟೇ ಉಳಿದಂತೆ ಒಂದೇ ರೀತಿಯಾಗಿರುತ್ತವೆ.

2. ವಿವಿಧ ಗುಂಪುಗಳಲ್ಲಿ ಕಂಡು ಬರುವ ಭಾಷೆಗಳ ಚಿತ್ರಣ :

ನಾಯಕ(ಪರಿಶಿಷ್ಟ ಪಂಗಡ) :

ಬೇಡರು–	–ಮ್ಯಾಸ ಬೇಡರು	ಗಿರಿಜನರು–	–ಕಾಡು ಕುರುಬ(ಜೇನು ಕುರುಬ)
ಊರು ಬೇಡರು–	–ಅಲೆಮಾರಿ ಬೇಡರು	ಗಿರಿಗುಹೆಗಳಲ್ಲಿ ವಾಸಿಸುವವರು–	–ಕಾಡುಗಳಲ್ಲಿ ವಾಸಿಸುವವರು
ಕನ್ನಡ ಭಾಷೆ–	–ತೆಲುಗು+ಕನ್ನಡ ಭಾಷೆ	ಕನ್ನಡ ಭಾಷೆ–	–ಕನ್ನಡ ಭಾಷೆ

ಈ ಎರಡೂ ಗುಂಪಿನವರಲ್ಲಿ ಮ್ಯಾಸಬೇಡರು ಮಾತ್ರ ತೆಲುಗು ಮಿಶ್ರಿತ ಕನ್ನಡ ಮಾತನಾಡುತ್ತಾರೆ.

ಇವೆರಡೂ ಗುಂಪಿನವರು ಮಾತನಾಡುವ ಕನ್ನಡ ಭಾಷೆಯಲ್ಲಿ ಹಳೆಯ ಗ್ರಾಮ್ಯ ಭಾಷೆ ಮತ್ತು ಕಾಡು ಜನರ ಭಾಷೆ ಇದ್ದು ವಿಶೇಷ ಪದ ಪುಂಜಗಳಿರುತ್ತವೆ.

ಬೇಡರು–ಮ್ಯಾಸ ಬೇಡರು, ಗಿರಿಜನರು–ಕಾಡುಜನರು ಅವರದೇ ಆದ ಪರಂಪರೆ ಹಾಗೂ ಸಂಸ್ಕೃತಿಯಿಂದ ಭಾಷೆಯನ್ನು ಕಲಿತಿದ್ದು ಇಂದಿನ ನಾಗರೀಕತೆ ಮತ್ತು ನಗರದ ಸಂಬಂಧಗಳನ್ನು ಬೆಳೆಸುತ್ತಿರುವುದರಿಂದ ಆಧುನಿಕ ಶೈಲಿಯ ಭಾಷೆಗಳನ್ನು ಕಲಿತಿದ್ದಾರೆ, ಆದರೆ ಹಿರಿಯರು ಮಾತ್ರ ತಮ್ಮ ಹಳೇ ಶೈಲಿಯಲ್ಲಿಯೇ ಮಾತನಾಡುತ್ತಾರೆ.

ಉದಾಹರಣೆ : ಶಾಲೆ ಇದಕ್ಕೆ ಬದಲಾಗಿ ಇಂದಿನ ಭಾಷೆಯ ಧಾಟಿಯಲ್ಲಿ ಮಠ, ಸಾಲೆ ಎಂದು ಉಚ್ಚಾರಣೆ ಮಾಡುತ್ತಾರೆ ಇದೇರೀತಿ ಈ ಕೆಳಕಂಡಂತೆ ಭಾಷೆಗಳ ಧಾಟಿ ಇರುತ್ತದೆ.

1).ಪಟ್ಟಣ–ಪಟ್ನ 2).ದೇವರು–ದ್ಯಾವರು, ದ್ಯಾವ್ರು 3).ಹೊರಡು–ಒಲ್ಡು 4).ಬೇಗ–ಬ್ಯಾಗ 5).ಜಗಳ–ಕ್ಯಾತೆ

ಹೀಗೆ ಮುಂತಾದ ಕೆಲವಾರು ವಿಶೇಷ ಪದಗಳನ್ನು ಬಳಸುತ್ತಾರೆ, ಈ ರೀತಿಯಾಗಿ ಊರಬೇಡರು, ಮ್ಯಾಸಬೇಡರು, ಗಿರಿಜನರು, ಕಾಡುಜನರುಗಳ ಕಲೆ ಮತ್ತು ಶಿಲ್ಪಕಲೆಯಲ್ಲಿಯೂ ವಿಭಿನ್ನತೆಯನ್ನು ಕಾಣಬಹುದು.

3. ಬೇಡರು ಮತ್ತು ಗಿರಿಜನರಲ್ಲಿನ ಶಿಲ್ಪಕಲಾ ವಿಭಿನ್ನತೆ :

ನಾಯಕ(ಪರಿಶಿಷ್ಟ ಪಂಗಡ):

ಬೇಡರು		–	ಗಿರಿಜನರು	
ಊರು ಬೇಡರು –	ಮ್ಯಾಸ ಬೇಡರು	–	ಗಿರಿಜನರು –	ಕಾಡುಕುರುಬ(ಜೇನು ಕುರುಬ)
(ಹಟ್ಟಿಗಳ ವಾಸ)	– (ಅಲೆಮಾರಿ ಜೀವನ)	–	(ಗಿರಿಗುಹೆಗಳಲ್ಲಿ ವಾಸ) –	(ಕಾಡು ಕಣಿವೆಗಳಲ್ಲಿ ವಾಸ)
ದೇವಸ್ಥಾನ ಶಿಲ್ಪಗಳು, ದೇವರ ಶಿಲ್ಪಗಳು	ಬೇಟೆಯಾಡುತ್ತಿರುವ ದೃಶ್ಯಗಳು, ಪ್ರಾಣಿ ಪಕ್ಷಿಗಳ ಆಕೃತಿಗಳು		ಪ್ರಾಣಿ ಪಕ್ಷಿಗಳ ಮತ್ತು ಬೇಟೆಯ ಚಿತ್ರಗಳು	ಮರಗಳು,ಕಾಡು ಪ್ರಾಣಿಗಳ, ಬೇಟೆಯ ಚಿತ್ರಗಳು
ಕೃಷ್ಣ ಶಿಲೆ, ಕಪ್ಪು ಶಿಲೆ	ಸ್ಥಳೀಯವಾಗಿ ದೊರೆಯುವ–ಕಲ್ಲುಗಳು		ಗುಹೆಗಳ ಗೋಡೆಗಳು, ಬಂಡೆ ಕಲ್ಲುಗಳು	ಕಪ್ಪುಕಲ್ಲು,ದೊಡ್ಡಕಲ್ಲುಗಳು

ಈ ನಾಲ್ಕು ಬುಡಕಟ್ಟುಗಳವರು ಕೆತ್ತನೆ ಮಾಡಿರುವ ಶಿಲ್ಪಕಲೆಗಳಲ್ಲಿ, ಮತ್ತು ಚಿತ್ರಕಲೆಗಳಲ್ಲಿ ಒಂದಕ್ಕೊಂದು ಸಂಬಂಧವಿರುತ್ತದೆ, ಅವರು ಬಳಸಿರುವ ಗೆರೆಗಳು, ಮುಖದ ಲಕ್ಷಣ ಮತ್ತು ಉಡುಪುಗಳು ಒಂದೇ ತೆರನಾಗಿರುತ್ತವೆ, ಕೆತ್ತನೆ ಕಲೆಗೆ ಬಳಸುವ ಕಲ್ಲಿನ ಮಾಧ್ಯಮ ಬೇರೆ ಬೇರೆಯಾಗಿದ್ದರೂ, ಕೆತ್ತನೆಯ ವಿಧಾನದಲ್ಲಿ ಸಾಕಷ್ಟು ಹೋಲಿಕೆ ಇರುತ್ತದೆ, ಪೂರ್ವದಲ್ಲಿ ಕಪ್ಪುಕಲ್ಲು, ಸಂಗಮವರಿ ಕಲ್ಲು, ಬಳಪದ ಕಲ್ಲು, ಮೃದು ಕಲ್ಲು, ಕೃಷ್ಣ ಶಿಲೆ ಮುಂತಾದ ಕಲ್ಲುಗಳಿಂದ ಕೆತ್ತನೆ ಮಾಡಿದ್ದಾರೆ.

ಮ್ಯಾಸಬೇಡರ ಕಲೆ : ಇವರು ವಾಸ್ತು ಶಿಲ್ಪ, ಮೂರ್ತಿ ಶಿಲ್ಪಗಳಿಗೆ ಸ್ವಲ್ಪಮಟ್ಟಿನ ಪ್ರಾಮುಖ್ಯತೆಯನ್ನು ಕೊಟಿದ್ದರೂ ಸುಲಭವಾಗಿ ದೊರೆಯುತ್ತಿದ್ದ ಕಲ್ಲುಗಳಲ್ಲಿ ಹೆಚ್ಚಾಗಿ ತಮಗೆ ಅನ್ನಿಸಿದ್ದನ್ನು ಕೆತ್ತನೆ ಮಾಡುತ್ತಿದ್ದರು, ತಾವುಗಳು ಮಾಡಿದ ಮೂರ್ತಿಗಳಲ್ಲಿ ನಡ, ತೋಳು, ಕತ್ತು, ಮೂಗಿನ ನತ್ತು ಮತ್ತು ಕಿವಿಯ ಓಲೆಗಳನ್ನು ಅಲಂಕೃತವಾಗಿ ಕೆತ್ತನೆ ಮಾಡಿದ್ದಾರೆ. ಶಿಲ್ಪಕ್ಕೆ ತಕ್ಕಂತೆ ಮತ್ತು ಆ ಶಿಲ್ಪದ ಮೇಲೆ ಕೆತ್ತನೆ ಮಾಡಿರುವ ಸ್ತ್ರೀ ಆಕಾರದ ಮತ್ತು ಪುರುಷನ ಆಕಾರಗಳಿಗೆ ತಕ್ಕಂತೆ ಆಭರಣಗಳು, ಉಡುಪುಗಳನ್ನು ತಮ್ಮ ಕೆತ್ತನೆಯಲ್ಲಿ ತೋರಿಸಿರುತ್ತಾರೆ.

ಊರು ಬೇಡರ ಶಿಲ್ಪಕಲೆ : ದೇವಾಲಯಗಳಲ್ಲಿ ಅರಮನೆ ಮತ್ತು ಗುರುಮನೆಗಳಲ್ಲಿ ಮಾಡುತ್ತಿದ್ದ ಕೆತ್ತನೆಗಳು, ವಾಸ್ತು ಶಾಸ್ತ್ರದಿಂದ ಕೆತ್ತನೆ ಮಾಡಿರುವ ಶಿಲ್ಪಗಳು ಆಕರ್ಷಕ ವಾಗಿರುತ್ತವೆ, ಸುಂದರ ದೇವರ ವಿಗ್ರಹಗಳು, ದೇವರುಗಳ ಚೆಲುವು, ವೈಯಾರ, ನಗುಮೊಗ, ಕೆಲವು ಭಾವನೆಗಳನ್ನು ವಿಗ್ರಹಗಳ ಮುಖಭಾವದಿಂದ ಕಾಣಬಹುದಾಗಿದೆ ಅಂದರೆ ಶಾಂತ ಸಂದರ್ಭ, ಶುಭ ಸಂದರ್ಭಗಳಲ್ಲಿ ಶಾಂತಮುಖ, ಯುದ್ಧ ಹಾಗೂ ಭಯವನ್ನು ತೋರಿಸಲು ಮುಖದಲ್ಲಿ ಸಿಟ್ಟು ತುಂಬಿರುವುದನ್ನು ಕಾಣಬಹುದು, ಇನ್ನುಳಿದಂತೆ ಉಡುಪುಗಳು, ಆಭರಣಗಳು ಮ್ಯಾಸಬೇಡರ ಉಡುಪಿನಂತೆಯೇ ಇರುತ್ತವೆ.

ಗಿರಿಜನರ ಶಿಲ್ಪಕಲೆ : ಗಿರಿಕಂದರಗಳಲ್ಲಿ ವಾಸಿಸುತ್ತಿದ್ದ ಇವರು ತಮ್ಮ ಕಲೆಯಲ್ಲಿ ಮಹಿಳೆಯರು, ಪುರುಷರ ಉಡುಪುಗಳು ಮತ್ತು ಧರಿಸಿರುವ ಒಡವೆಗಳು ಸಾಧಾರಣ ರೀತಿಯಲ್ಲಿ ಇರುತ್ತಿದ್ದವು, ನೇರವಾದ ಮುಖ ತೋರಿಸದೆ ಒಂದು ಕಡೆಯ ಮುಖವನ್ನು (ಓರೆಮುಖ)ತಮ್ಮ ಕೆತ್ತನೆಯಲ್ಲಿ ತೋರಿಸುತ್ತಿದ್ದರು, ಕೆತ್ತನೆಯಲ್ಲಿ ಅನುಕೂಲದ ದೃಷ್ಠಿಯಿಂದಲೋ ಏನೋ ಇವರು ಕೆತ್ತಿದ ಶಿಲ್ಪಗಳಲ್ಲಿ ಬಹಳ ಸೂಕ್ಷ್ಮತೆ ಮತ್ತು ಸರಳತೆ ಎದ್ದು ಕಾಣುತ್ತದೆ.

ಕಾಡು ಕುರುಬರು (ಜೇನು ಕುರುಬರು) : ಇವರು ಹೆಚ್ಚಾಗಿ ಕಾಡು ಪ್ರಾಣಿಗಳು, ಕುರಿಮೇಕೆಗಳ ಸಾಕಾಣಿಕೆ, ದನಗಳ ಪೋಷಣೆ ಮಾಡುತ್ತಿದ್ದರಿಂದ ಪ್ರಾಣಿಗಳ ಬೇಟೆಯಾಡುತ್ತಿರುವ ಚಿತ್ರಗಳನ್ನು ಅಧಿಕವಾಗಿ ಕಲ್ಲಿನಲ್ಲಿ ಕೆತ್ತುತ್ತಿದ್ದರು, ಮನುಷ್ಯರಲ್ಲಿ ಸ್ತ್ರೀ ಮತ್ತು ಪುರುಷರ ಚಿತ್ರಗಳನ್ನು ದೊಡ್ಡ ದೊಡ್ಡ ಬಂಡೆಕಲ್ಲುಗಳಲ್ಲಿ ಕೆತ್ತಿದ್ದರೂ ಕೂಡ ಸಾಧಾರಣವಾದ ಉಡುಗೆಗಳನ್ನು ತೋರಿಸಿದ್ದಾರೆ, ಕೃಷಿ ಮತ್ತು ಜೀವನ ಕ್ರಮಗಳ ಚಿತ್ರಗಳನ್ನು ಕೆತ್ತನೆಮಾಡಿದ್ದಾರೆ.

4. ಸಂಪ್ರದಾಯ ಶಿಲ್ಪಕಲಾವಿದರ ಭಾಷೆ ಮತ್ತು ಕಲೆ

ಕರ್ನಾಟಕ ರಾಜ್ಯದ ಗಡಿಭಾಗದ ಗುಡ್ಡಗಾಡುಗಳಲ್ಲಿ, ಕಣಿವೆ, ಕಾಡುಗಳಲ್ಲಿ, ಗಿರಿಶಿಖರಗಳಲ್ಲಿ ಮತ್ತು ಜೀವನ ಕ್ರಮಕ್ಕೆ ಅಗತ್ಯವಿರುವ ಸಂಪನ್ಮೂಲಗಳು ಅಧಿಕವಾಗಿ ದೊರೆಯುತ್ತಿದ್ದ ಪ್ರದೇಶಗಳಲ್ಲಿ ಗಿರಿಜನರು ನೆಲೆಸಿರುತ್ತಿದ್ದರು, ಪೂರ್ವದಲ್ಲಿ ನಾಗರೀಕತೆ ಅಷ್ಟಾಗಿ ಗೊತ್ತಿಲ್ಲದ್ದರಿಂದ ಅವರ ಭಾಷೆಗಳಲ್ಲಿ ಸಾಕಷ್ಟು ವ್ಯತ್ಯಾಸವಿರುತ್ತಿತ್ತು, ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ಪೂರಾ ಹಿಂದುಳಿದಿರುವಂತಹ ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ, ಗುಡ್ಡಗಾಡುಗಳಲ್ಲಿ ವಾಸಿಸುವ ಜನರ ಭಾಷೆಯಲ್ಲಿ ಹಿಂದಿನ ಸೊಗಡು ತುಂಬಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಉದಾಹರಣೆಗೆ : ಊಟಮಾಡುವುದು ಈ ಮಾತಿಗೆ ಅಂದಿನ ಭಾಷೆಯಲ್ಲಿ ಉಣ್ಣುವುದು, ಉಂಬುವುದು, ಊಟಮಾಡಿದ ಎಂದು ಕೇಳಲು, ಉಂಡ ಎಂದು ಕೇಳುತ್ತಾರೆ, ಇದೇ ರೀತಿಯಾಗಿ ಅನೇಕ ಪದಗಳನ್ನು ನೋಡಬಹುದಾಗಿದೆ.

1).ಚಿಂತೆ–ಸಿಂತೆ, 2).ಅಣ್ಣ–ಯಣ್ಣ, 3).ಅಕ್ಕ–ಯಕ್ಕ, 4).ಅಮ್ಮ–ಯವ್ವ, 5).ಅಪ್ಪ–ಯಪ್ಪ, 6).ಎರಡು–ಎಲ್ಡು,ಯಲ್ಡು

ಮುಂತಾದ ಅನೇಕ ಪದಗಳು ಬಳಕೆಯಲ್ಲಿವೆ. ಅದರಲ್ಲೂ ಚಿಕ್ಕ ಮಕ್ಕಳ ಸಂಗಡ ಮಾತನಾಡುವಾಗ ಇನ್ನೂ ಬಹಳ ವ್ಯಾತ್ಯಾಸದ ಪದಗಳಿರುತ್ತವೆ.

ಉದಾಹರಣೆಗೆ : 1).ನೀರು ಎನ್ನವುದಕ್ಕೆ ಇಜ್ಜಿ ಅಥವಾ ಉಗ್ಗ 2).ಊಟಕ್ಕೆ-ಬುಯ್ಯ ಅಥವಾ ಮಮ್ಮು 3).ಕುಳಿತುಕೋ-ಕುಕ್ಕ, ಕುಂತ್ಗ, ಕುಕ್ಕರಿಸು 4).ಮಲಗು-ಮಕ್ಕ, ಪಚ್ಚ

ಈ ರೀತಿಯಾಗಿ ಅವರದೇ ಆದ ಭಾಷೆಗಳ ವೈವಿಧ್ಯತೆಯನ್ನು ಕಾಣಬಹುದು, ಕೆಲವರು ಆಯಾ ಪ್ರದೇಶ, ಸ್ಥಳಕ್ಕೆ ಅನುಗುಣವಾಗಿ ಮಾತನಾಡುತ್ತಾರೆ, ಇನ್ನೂ ಕೆಲವು ಕಡೆ ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳ ಮಿಶ್ರಣದಿಂದ ಮಾತನಾಡುತ್ತಾರೆ, ಕನ್ನಡ ಮೂಲ ಭಾಷೆಯಾಗಿದ್ದರೂ ಕನ್ನಡ ಭಾಷೆಯ ಜೊತೆಗೆ ತೆಲುಗಿನ ಭಾಷೆಯನ್ನೂ ಸಾಕಷ್ಟು ಪ್ರಮಾಣದಲ್ಲಿ ಸೇರಿಸಿಕೊಂಡು ಮಾತನಾಡುತ್ತಾರೆ, ಇವೆರಡೂ ಭಾಷೆಗಳ ಮಿಶ್ರಣದ ಪರಿಣಾಮವಾಗಿ ಹೊಸ ರೀತಿಯ ಪದಗಳು ಹುಟ್ಟಿಕೊಂಡಿವೆ, ಈ ಮಿಶ್ರಣದ ಪದಗಳ ಉಚ್ಚಾರಣೆಯನ್ನು ಅವರದೇ ಆದ ಭಾಷೆಯಲ್ಲಿ ಕೇಳಲು ಚೆನ್ನ.

5. ಶಿಲ್ಪ ಕಲೆ ಬೆಳೆದು ಬಂದ ದಾರಿ :

ಕಲೆಯು ಮನುಷ್ಯನ ಅಭಿವೃದ್ಧಿಯನ್ನು, ಗೌರವಾಧರಗಳನ್ನು ಹಾಗೂ ಜೀವನ ನಡೆಸಲು ಬೇಕಾದ ಸಹಾಯ ದೊರೆಯುವಂತೆ ಮಾಡುವುದು ಮತ್ತು ಪ್ರೀತಿ ವಿಶ್ವಾಸದ ಉತ್ತಮ ದಾರಿಯಾಗಿದೆ, ಕಲೆ, ಕ್ರೀಡೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಮತ್ತು ಶಿಲ್ಪಕಲೆ, ವಾಸ್ತು ಶಿಲ್ಪ ಕಲೆಗಳ ವೈವಿಧ್ಯತೆ ಆಯಾ ರಾಜ್ಯ ಹಾಗೂ ರಾಷ್ಟ್ರಗಳ ಸಾಹಿತ್ಯ ಮತ್ತು ಸಂಸ್ಕೃತಿಯ ಗುಣಮಟ್ಟವನ್ನು, ಗೌರವಾಧರಗಳನ್ನು ತೋರಿಸುವ ಸಂಪನ್ಮೂಲಗಳಾಗಿವೆ ಮತ್ತು ಒಂದು ಹೆಮ್ಮೆಯ ವಿಷಯ.

ಮನುಷ್ಯ ಸಂಘಜೀವಿಯಾಗಿದ್ದು, ಕಲೋಪಾಸಕನೂ ಕೂಡ ಆಗಿದ್ದಾನೆ, ಪ್ರಾಣಿಗಳು ತಿನ್ನುವುದಕ್ಕಾಗಿಯೇ ಬದುಕುತ್ತವೆ ಆದರೆ ಮನುಷ್ಯ ಜೀವಿಸುವುದಕ್ಕಾಗಿ ಮಾತ್ರ ತಿನ್ನುತ್ತಾನೆ ಎಂಬ ಸತ್ಯ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ, ಮನುಷ್ಯ ಯಾವಾಗಲೂ ಏನಾದರೊಂದು ಕಾರ್ಯದಲ್ಲಿ ನಿರತನಾಗಿರುತ್ತಾನೆ, ಸಾಹಿತ್ಯ, ಕಲೆ, ಕ್ರೀಡೆ, ಸಂಗೀತ, ಜಾನಪದಕಲೆ, ಆಧ್ಯಾತ್ಮದ ಆಚರಣೆ ಮುಂತಾದ ಕಾರ್ಯಗಳಲ್ಲಿ ಸದಾ ತೊಡಗಿರುತ್ತಾನೆ. ಶಿಲಾಯುಗದ ಮಾನವನು ಗುಹೆಗಳಲ್ಲಿನ ಗೋಡೆಗಳ ಮೇಲೆ ತಮ್ಮ ಬದುಕಿನ, ಜೀವನ ಶೈಲಿಯ ವಿಧಾನಗಳನ್ನು ಚಿತ್ರಗಳು ಮತ್ತು ಉಬ್ಬು ಶಿಲ್ಪಗಳ ಮೂಲಕವಾಗಿ ಕೆತ್ತನೆ ಮಾಡಿದ್ದಾನೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶಕ್ಕೆ ಅಗಾಧವಾದ ಹೆಸರು ಇದೆ ಹಾಗಯೇ ನಮ್ಮ ದೇಶದ ಹೊರಗಿನವರು ಈ ದೇಶಕ್ಕೆ ಹೆಚ್ಚಿನ ಪ್ರಾಶಸ್ತ್ಯ, ವಿಶ್ವಾಸ ಹಾಗೂ ಗೌರವಾಧರಗಳನ್ನು ನೀಡುತ್ತಿದ್ದಾರೆ ಯಾಕೆಂದರೆ ನಮ್ಮ ದೇಶದಲ್ಲಿ ಅವರಿಗೆ ಸಾಕಷ್ಟು ಕಲೆ, ಸಂಸ್ಕೃತಿ, ಕ್ರೀಡೆಗಳ ಮಾಹಿತಿ ಸಿಗುತ್ತದೆ ಮತ್ತು ಸುಂದರ ಶಿಲ್ಪಕಲಾ ದೇಗುಲಗಳು, ತಾಣಗಳು ಅವರನ್ನು ಆಕರ್ಷಿಸುತ್ತವೆ ಮತ್ತು ಬೇಕಾದ ರಸದೌತಣ ನೀಡುತ್ತವೆ.

ಬಹು ಹಿಂದಿನ ಕಾಲದಿಂದಲೂ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಲ್ಪಕಲೆ ಮತ್ತು ಜಾನಪದ ಕಲೆ, ಕ್ರೀಡೆಗಳಿಗೆ ಮಾನ್ಯತೆಕೊಟ್ಟು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸಾಗುತ್ತ ಬಂದಿರುವ ಇಂತಹ ಕಲೆ, ಸಂಸ್ಕೃತಿಗೆ ಸರ್ಕಾರಗಳು, ಅಕಾಡೆಮಿಗಳು, ಸಂಘ, ಸಂಸ್ಥೆಗಳು ಹೆಚ್ಚು ಪ್ರೋತ್ಸಾಹ ಕೊಡಬೇಕಾಗಿದೆ, ಏಳು ಬೀಳುಗಳ ನಡುವೆ ಬೆರೆಳೆಣಿಕೆಯಷ್ಟು ಕಲಾವಿದರು ಶಿಲ್ಪಕಲೆ ಹಾಗೂ ಸಂಪ್ರದಾಯ ಶಿಲ್ಪಕಲೆಯಲ್ಲಿ ನಿರತರಾಗಿದ್ದಾರೆ, ಅವರ ಬುದ್ದಿ, ಕೌಶಲ್ಯಕ್ಕೆ ತಕ್ಕಂತೆ ಸಂದರವಾದ ಕಲೆ, ವಾಸ್ತುಶಿಲ್ಪಕಲೆ ಮತ್ತು ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ಇವರಿಗೆ ಬೇರೆ ರಾಜ್ಯಗಳ ಕಲಾವಿದರಿಗೆ ಸಿಗುವಷ್ಟು ಸಹಕಾರ, ಪ್ರೋತ್ಸಾಹ ಇವರಿಗೂ

ಸಿಕ್ಕರೆ ನಮ್ಮ ನಾಡಿನ ಕಲಾವಿದರೂ ಹಾಗೂ ಶಿಲ್ಪಕಲೆ ಮತ್ತು ಇನ್ನಿತರೆ ಕಲೆ ಅಗಾಧವಾಗಿ ಬೆಳೆಯುತ್ತದೆ, ಉಳಿಯುತ್ತದೆ.

ಕನ್ನಡ ನಾಡಿನಲ್ಲಿ ಸುಂದರವಾದ ಕಲೆಗಳುಳ್ಳ ದೇವಾಲಯಗಳು, ಶಿಲ್ಪಗಳು, ರಥ ಶಿಲ್ಪಗಳು ಮತ್ತು ದೇವರ ಮೂರ್ತಿಗಳು ಮಾನವನ ಕಲೆ ಮತ್ತು ಉತ್ತಮ ಜೀವನದ ಪ್ರಮುಖ ಅಂಗಗಳಾಗಿವೆ, ಶಿಲ್ಪಕಲೆ, ವಾಸ್ತು ಶಿಲ್ಪಕಲೆಗೆ ಅದರದೇ ಆದ ಕಾಲ, ಇತಿಹಾಸವಿದೆ, ನಮ್ಮ ದೇಶದ ಕಲೆ ಹಾಗೂ ಶಿಲ್ಪಕಲೆಯು ಬೆಳೆದು ಬಂದ ರೀತಿಯನ್ನು ವಿವಿಧ ಆಯಾಮಗಳಲ್ಲಿ, ವಿವಿಧ ಪ್ರಾಕಾರಗಳಲ್ಲಿ ಕಾಣಬಹುದಾಗಿದೆ.

ಮಾನವನ ನಾಗರೀಕತೆಯ ವಿಕಾಸಗಳು ಹಂತ ಹಂತವಾಗಿ ಬೆಳವಣಿಗೆ ರೂಪಾಂತರಗಳಿಂದ ಕೂಡಿದ್ದಾಗಿದೆ, ಮುಖ್ಯವಾಗಿ ಪ್ರಾಚೀನ ಶಿಲಾಯುಗ, ನೂತನ ಶಿಲಾಯುಗ, ಲೋಹಯುಗ(ಕಬ್ಬಿಣ, ತಾಮ್ರ, ಕಂಚು) ಮತ್ತು ಆಧುನಿಕ ಯುಗ, ಈ ನಾಲ್ಕು ವಿವಿಧ ಹಂತಗಳಲ್ಲಿ ಮಾನವನ ಬೆಳವಣಿಗೆಯನ್ನು ಗುರುತಿಸಬಹುದಾಗಿದ್ದು ಶಿಲ್ಪಕಲೆ ಆಯಾಯ ಯುಗಗಳಲ್ಲಿ ವಿವಿಧ ರೀತಿಯನ್ನು ರೂಪಗಳನ್ನು ಹೊಂದಿ ಸ್ವಲ್ಪ ಮಟ್ಟಿನ ಬದಲಾವಣೆಯನ್ನು ಹೊಂದುತ್ತಾ ಸಾಗಿ ಬಂದಿದೆ.

1). **ಪ್ರಾಚೀನ ಶಿಲಾಯುಗ** : ಈ ಯುಗವು ಕ್ರಿ. ಪೂ. 12,000ರಿಂದ 35,000(ಹನ್ನೆರಡು ಸಾವಿರದಿಂದ ಮೂವತ್ತೈದು ಸಾವಿರ) ವರ್ಷಗಳ ಅವಧಿಯದ್ದಾಗಿದೆ, ಕ್ವಾರ್ಟಸೈಟ್ ಎಂಬ ಶಿಲೆಯಿಂದ ಸಲಕರಣೆಗಳನ್ನು ಮಾಡಿಕೊಂಡಿದ್ದರು, ತಮ್ಮ ಜೀವನದ ಅನುಕೂಲತೆಗಾಗಿ ಅವುಗಳನ್ನು ಉಯೋಗಿಸಿಕೊಂಡಿದ್ದು ಇಂದು ಅವುಗಳು ಸಂಶೋಧಕರಿಗೆ ಆಶ್ಚರ್ಯಗೊಳಿಸುವಂತಹ ಸಲಕರಣೆಗಳಾಗಿವೆ, ಕೃಷ್ಣಾ, ಗೋದಾವರಿ ಮುಂತಾದ ನದಿ ದಂಡೆಗಳಲ್ಲಿ ಈ ಶಿಲೆಗಳಿಂದ ತಯಾರಿಸಿದ ಅವಶೇಷಗಳು ಸಂಶೋಧಕರಿಗೆ ದೊರೆತಿವೆ.

2). **ಶಿಲಾಯುಗ** : ಈ ಯುಗವು ಸುಮಾರು 75 ರಿಂದ 80,000(ಎಪ್ಪತ್ತೈದರಿಂದ ಎಂಬತ್ತು ಸಾವಿರ) ವರ್ಷಗಳ ಮುನ್ನವೇ ಪ್ರಾರಂಭವಾದದ್ದಾಗಿದೆ, ಕಲ್ಲು(ಶಿಲೆ)ಗಳಿಂದ ಅಂದು ತಮ್ಮ ಅನುಕೂಲತೆಗಾಗಿ, ವಿವಿಧ ಕೆಲಸಗಳಿಗೆ ಬೇಕಾದ ಆಯುಧಗಳನ್ನು, ಬೇಟೆಗಾಗಿ ಅನೇಕ ರೀತಿಯ ಉಪಕರಣಗಳನ್ನು ಮಾಡಿಕೊಂಡಿದ್ದರು, ಅವುಗಳು ಕಲಾತ್ಮಕವಾಗಿ ಕಾಣುತ್ತಿದ್ದವು ಯಾಕೆಂದರೆ ಅವುಗಳ ಮೇಲೆ ಸಣ್ಣ ಸಣ್ಣ ಉಬ್ಬು ಚಿತ್ತಾರಗಳನ್ನು ಕೆತ್ತಿರುತ್ತಾರೆ, ಇವೆಲ್ಲವೂ ಸುಂದರವಾಗಿ ಬಹಳ ಉಪಯುಕ್ತವಾಗಿರುತ್ತಿದ್ದವು, ಇಂದು ಸಂಗ್ರಹಾಲಯಗಳಲ್ಲಿ ಇಂತಹ ಕಲಾತ್ಮಕವಾದ ಉಪಕರಣಗಳನ್ನು ಕಾಣಬಹುದಾಗಿದೆ.

3). **ಮಧ್ಯ ಶಿಲಾಯುಗ** : ಪ್ರಾಚೀನ ಶಿಲಾಯುಗದಿಂದ ನೂತನ ಶಿಲಾಯುಗ ಪ್ರಾರಂಭವಾಗುವ ಈ ಮಧ್ಯಮ ಅವಧಿಯನ್ನು ಮಧ್ಯ ಶಿಲಾಯುಗ ಎನ್ನುತ್ತಾರೆ, ಈ ಕಾಲದ ಮನುಷ್ಯರು ತಮ್ಮ ಆಹಾರಕ್ಕಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು, ಮಾಂಸಾಹಾರ ಬಲು ಇಷ್ಟವಾದ ಆಹಾರ ಪದ್ಧತಿಯಾಗಿದೆ, ಇವರು ಮಾಂಸಾಹಾರಕ್ಕಾಗಿ ಪ್ರಾಣಿಗಳನ್ನು ತಿನ್ನುತ್ತಿದ್ದರು, ಅದರಲ್ಲೂ ಹೆಚ್ಚಾಗಿ ಕಾಡು ಪ್ರಾಣಿಗಳನ್ನು ಕೊಂದು ತಿನ್ನುವುದು ಇವರ ಹವ್ಯಾಸ, ಇದಕ್ಕಾಗಿ ಕಾಡು ಪ್ರಾಣಿಗಳನ್ನು ಕೊಲ್ಲಲು ಹರಿತವಾದ ಆಯುಧಗಳನ್ನು ತಯಾರಿಸುತ್ತಿದ್ದರು, ಇವುಗಳು ಬಹು ಚೂಪಾಗಿ ಪ್ರಾಣಿಗಳನ್ನು ಕೊಲ್ಲಲು ಸುಲಭವಾಗಿ ಉಪಯೋಗಕ್ಕೆ ಬರುತ್ತಿದ್ದವು, ಇವುಗಳೂ ಸಹ ಇಂದು ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಕಾಣಿಸುತ್ತವೆ.

4). **ನೂತನ ಶಿಲಾಯುಗ** : ಕ್ರಿ. ಪೂ. 1200ರಿಂದ 4000 ವರ್ಷಗಳ ಈ ಕಾಲಾವಧಿಯನ್ನು ನೂತನ ಶಿಲಾಯುಗ ಎನ್ನಲಾಗಿದೆ, ಈ ಯುಗದ ಜನರು ಧೈರ್ಯಶಾಲಿಗರು, ಸಾಹಸಿಗರಾಗಿದ್ದರು, ತಮಗೆ ಬೇಕಾದ ವಿವಿಧ ರೀತಿಯ ಆಯುಧಗಳನ್ನು ಇವರೇ ತಯಾರಿಸಿಕೊಳ್ಳುತ್ತಿದ್ದರು, ತಮ್ಮ ವಾಸದ ಮನೆಗಳು, ಕಟ್ಟಡಗಳನ್ನು ತಮಗೆ ಬೇಕಾದ ರೀತಿಯಲ್ಲಿ ತಯಾರಿಸಿಕೊಳ್ಳುತ್ತಿದ್ದರು, ತಮ್ಮ ಜೀವನ ನಿರ್ವಹಣೆಗೆ

ಬೇಕಾದ ಕೆಲವಾರು ವಸ್ತುಗಳನ್ನೂ ಕೂಡ ತಯಾರಿಸಿಕೊಳ್ಳುತ್ತಿದ್ದರು, ಇವರು ಹೆಚ್ಚಾಗಿ ಮಣ್ಣಿನಿಂದ ವಸ್ತುಗಳನ್ನು, ಅಗತ್ಯ ಪರಿಕರಗಳನ್ನು ತಯಾರಿಸಿಕೊಳ್ಳುತ್ತಿದ್ದು ಹಾಗೆ ತಯಾರಿಸುತ್ತಿದ್ದ ಮಣ್ಣಿನ ಪಾತ್ರೆಗಳಿಗೆ ವಿವಿಧ ರೀತಿಯ ಪ್ರಾಣಿ ಹಾಗೂ ಪಕ್ಷಿಗಳ ಆಕಾರಗಳನ್ನು, ಮಣ್ಣಿನಿಂದ ಅಲಂಕಾರಿಕ ಗೊಂಬೆಗಳನ್ನು ಮಾಡುತ್ತಿದ್ದರು, ಉದಾಹರಣೆಗೆ ಕುಡಿಯುವ ನೀರಿನ ಹೂಜಿಯನ್ನು ಪ್ರಾಣಿ ಅಥವಾ ಯಾವುದಾದರೊಂದು ಪಕ್ಷಿಯ ಆಕಾರವನ್ನು ಮಾಡಿ ಆ ಪ್ರಾಣಿ ಅಥವಾ ಪಕ್ಷಿಯ ಬಾಯಿಂದ ನೀರು ಬರುವಂತೆ ಮಾಡಿರುತ್ತಾರೆ, ಈ ರೀತಿಯ ಅಲಂಕಾರಿಕ ಪರಿಕರಗಳು ದೊಡ್ಡ ದೊಡ್ಡ ಮನೆಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಅರಮನೆಗಳಲ್ಲಿ ಕಾಣಬಹುದಿತ್ತು, ಆದರಿಂದು ಇವುಗಳು ಸಂಗ್ರಹಾಲಯಗಳಲ್ಲಿ ಇಡುವ ವಸ್ತುಗಳಾಗಿವೆ.

5). ಧಾತು ಶಿಲಾಯುಗ(ಲೋಹ ಯುಗ) : ನೂತನ ಶಿಲಾಯುಗ ಮುಕ್ತಾಯವಾದ ಬಳಿಕವೇ ಈ ಧಾತುಯುಗ ಪ್ರಾರಂಭವಾಗಿದ್ದು, ತಾಮ್ರ ಲೋಹದಿಂದ ಇವರು ಬಹು ಆಕರ್ಷಕವಾದ, ಸುಂದರವಾದ, ಕಲಾತ್ಮಕವಾದ ವಸ್ತುಗಳನ್ನು ತಯಾರಿಸುತ್ತಿದ್ದರು, ಇದಲ್ಲದೇ ತಾಮ್ರ ಹಾಗೂ ಸತು ಎಂಬ ಮತ್ತೊಂದು ಲೋಹವನ್ನು ಮಿಶ್ರಣಮಾಡಿ ಇದರಿಂದ ಬಂದ ಹೊಸ ಕಂಚು ಎಂಬ ಲೋಹದಿಂದ ಕೆಲವಾರು ಮೊನಚಾದ ಆಯುಧಗಳನ್ನು ದೇವರುಗಳ ಮೂರ್ತಿಗಳನ್ನು ಆಕರ್ಷಕವಾಗಿ ತಯಾರಿಸುತ್ತಿದ್ದರು, ಹೀಗೆ ತಯಾರಿಸುತ್ತಿದ್ದ ಕಲಾತ್ಮಕ ಮೂರ್ತಿಗಳು ದೇವಸ್ಥಾನ ಹಾಗೂ ಅರಮನೆಗಳಲ್ಲಿ ಕೆಲವು ಪೂಜಾರ್ಹ ಸ್ಥಾನ ಪಡೆದರೆ, ಇನ್ನೂ ಕೆಲವು ಮೂರ್ತಿಗಳು ಆಕರ್ಷಣೆಗೆ ಮತ್ತು ನೋಡುಗರ ಕಣ್ಣಿಗೆ ಆನಂದ ನೀಡುವ ಶಿಲ್ಪಕಲಾ ವಸ್ತುಗಳಾಗಿವೆ, ಈಗ ಇವುಗಳು ವಸ್ತು ಸಂಗ್ರಹಾಲಯದಲ್ಲಿ ಇವೆ.

ತಾಮ್ರ, ಕಂಚು, ಹಿತ್ತಾಳೆಯ ಲೋಹಗಳನ್ನು ಬಳಕೆ ಮಾಡುತ್ತಿದ್ದ ಕಾಲವನ್ನು **ಕಂಚು ಯುಗ** ಎಂದೂ, ತರುವಾಯ ತಾಮ್ರ, ಕಂಚು ಇತರೆ ಅನೇಕ ವಿದಧ ಲೋಹಗಳನ್ನು ಬಳಕೆ ಮಾಡುತ್ತಿದ್ದ ಕಾಲವನ್ನು **ತಾಮ್ರ ಯುಗ** ಎಂದೂ ಕರೆದರು, ಕಂಚುಯುಗದಲ್ಲಿ ತಾಮ್ರ, ಕಂಚು ಮತ್ತು ಹಿತ್ತಾಳೆಯ ಲೋಹಗಳಿಂದ ಅಗತ್ಯ ಪರಿಕರಗಳು, ಜೀವನದ ನಿರ್ವಹಣೆಗೆ ಬೇಕಾದ ವಸ್ತುಗಳು, ಶಿಲ್ಪಕಲಾಕೃತಿಗಳನ್ನು ಮಾಡಿದರೆ, ತಾಮ್ರಯುಗದಲ್ಲಿ ತಾಮ್ರ, ಕಂಚು ಮತ್ತು ಇತರೆ ಲೋಹಗಳಿಂದ ಸುಂದರ ಶಿಲ್ಪಕಲೆಗಳನ್ನು, ಅಗತ್ಯ ವಸ್ತುಗಳನ್ನು ತಯಾರಿಸಿದ್ದಾರೆ, ಇದಾದ ನಂತರ ಶಾಸನ ಶಾಸ್ತ್ರಯುಗ, ನಾಣ್ಯ ಶಾಸ್ತ್ರಯುಗ, ತದನಂತರ ಆಧುನಿಕ ಯುಗ ಪ್ರಾರಂಭಗೊಂಡಿತು.

ಆಧುನಿಕ ಯುಗದಲ್ಲಿ ಶಿಲ್ಪಗಳು, ಲೋಹಗಳು, ಮರಗಳು, ಮಣ್ಣು, ಸಿಮೆಂಟ್, ಫೈಬರ್, ಪ್ಲಾಸ್ಟಿಕ್, ಪಿ.ಓ.ಪಿ. ಮುಂತಾದ ವಸ್ತುಗಳಿಂದ ಶಿಲ್ಪ ಕಲಾ ಕೃತಿಗಳನ್ನು, ಜೀವನ ನಿರ್ವಹಣೆಯ ಅಗತ್ಯ ವಸ್ತುಗಳನ್ನು, ಆಯುಧಗಳನ್ನು ನಿರ್ಮಿಸುತ್ತಿದ್ದಾರೆ, ಹೀಗೆ ಹಿಂದಿನ ಕಾಲದಿಂದಲೂ ಈ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ, ಆದರೆ ಇವುಗಳಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸ ಮತ್ತು ವಿವಿಧ ಪ್ರಾಕಾರಗಳನ್ನು ಪಡೆಯುತ್ತಾ ಹಿಂದಿನ ಸಂಪ್ರದಾಯ ಮುಂದುವರೆಯುತ್ತಿದೆ, ಇದರಲ್ಲಿ ಮುಖ್ಯವಾಗಿ ಸಂಪ್ರದಾಯ ಶಿಲ್ಪಕಲೆಯೂ ಸೇರಿದ್ದು ಇದೂ ಸಹ ಅನೇಕ ರೀತಿಯ ಬದಲಾವಣೆಗಳನ್ನು ಪಡೆಯುತ್ತಾ ಸಾಗುತ್ತಿದೆ, ಈ ಎಲ್ಲಾ ಯುಗಗಳಲ್ಲಿಯೂ ಶಿಲ್ಪಕಲೆಯ ಕುರುಹುಗಳು ಇಂದಿಗೂ ನೋಡುಗರಿಗೆ ಲಭ್ಯವಿರುವುದು ಸಂತಸದಾಯಕವಾಗಿದೆ.

6. ಶಿಲ್ಪ ಕಲೆಯ ವಿಧಿ ವಿಧಾನಗಳು:

ಶಿಲ್ಪ ಕಲೆಯಲ್ಲಿ ಅನುಸರಿಸ ಬಹುದಾದ ವಿಧಿ ವಿಧಾನಗಳು, ನಿಯಮಗಳು ಹಾಗೂ ಅಳತೆಗಳು ಹಾಗೂ ಕೆತ್ತನೆಯಲ್ಲಿ ಬಳಸಬಹುದಾದ ವಸ್ತುಗಳು.

ಶ್ರೀ ವಿಶ್ವ ಕರ್ಮ ಪರಮೇಶ್ವರ




ಶಿಲ್ಪ ಕಲಾವಿದರು ಕೆತ್ತನೆಗೆ ಮುನ್ನ ನಮಿಸುವ ದೇವರು :

ಸಕಲ ಶಿಲ್ಪ ದೇವರುಗಳಿಗೆ ಮುಖ್ಯ ದೇವನಾದ ಶ್ರೀ ವಿಶ್ವಕರ್ಮ ದೇವನ ವರ್ಣನೆ :

ಪ್ರಾರ್ಥನಾ :

ಶ್ರೀ ವಾಣ್ಯಶ್ರೀತ ಪಾದ ಪದ್ಮಯುಗಳಂ ವಿದ್ಯುತ್ಪ್ರಭಾ ಭಾಸುರಮ್
ಗಾಯತ್ರೀಯುತ ಮವ್ಯಯಂ ದಶಭುಜಂ ಮೇರ್ವಗ್ರ ಪೀಠೋಜ್ವಲಮ್
ದೇವರ್ಷಿಸ್ತುತ ಪಂಚವಕ್ತ್ರಮ ಭವಂಮಂದಸ್ಮಿತಾಸ್ಯಂ ಶಿವಮ್
ವಂದೇ ಶಿಲ್ಪ ಸಹಸ್ರ ಮೂಲಪುರುಷಂ ಶ್ರೀ ವಿಶ್ವಕರ್ಮ ಪ್ರಭುಮ್

ಶ್ರೀ ವಿನಾಯಕ ಮೂರ್ತಿ ಕೆತ್ತನೆಯ ರೇಖಾ ಚಿತ್ರ ಮತ್ತು ಅಳತೆ :



ವಿನಾಯಕ ಲಕ್ಷಣಮ್ :

ಅಥವಕ್ಷ್ಯೇ ವಿಶೇಷೇಣ ವಿನಾಯಕಸ್ಯ ಲಕ್ಷ್ಮಣಮ್
ಪಾದಾದ್ಯುಷ್ಣೀಷ ಸೀಮಾಂತಂ ಚತುಷ್ಷಷ್ಟ್ಯಂಶಕಂ ಭವೇತ್
1ಮೂರ್ಧ್ನಾ ಮಸ್ತಕ ಸೀಮಾಂತಂ ಅಂಗುಲ ದ್ವಯಮುಚ್ಯತೇ
ತಸ್ಮಾದ್ವೈ 2ನೇತ್ರ ಸೂತ್ರಾಂತಂ ಚತುರ್ಮಾತ್ರ ಮುದಾ ಹೃತಮ್
3ನೇತ್ರಸೂತ್ರಾನ್ಮು 4ಖಾಂತ ದೀರ್ಘ ಮಷ್ಟಾಂಗುಲ ಮುದೀರಿತಮ್
ಗಳಾಯಾ ಮಂತ್ರ್ಯಂಗುಳಂ ಸ್ಯಾತ್ ಹೃದಯಾನ್ತಂ ಷಡಂಗುಲಮ್
ಹೃದಯನ್ನಾಭಿ ಪರ್ಯಂತಂ ಷೋಡಶಾಂಗುಳ ಮುಚ್ಯತೇ
ನಾಭೇಸ್ತು ಮೇಢ್ರಮೂಲಾಂತಂ ಷಡಂಗುಳ ಮುದಾಹೃತಮ್
ಊರು 5ದೀರ್ಘಂ ಷಡರ್ಧಂ ಸ್ಯಾತ್ ಜಾನು ದೀರ್ಘಂ ಗುಣಾಂಗುಲಮ್
ಜಂಘಾಚೋರು ಸಮಂ ದೀರ್ಘಂ ಗುಣಾಂಶಂ 6ಸ್ಯಾತ್ತಲೋದಯಮ್.

ಈ ಶ್ಲೋಕವು ವಿನಾಯಕ ಮೂರ್ತಿಯ ಲಕ್ಷಣಗಳನ್ನು ಹೇಳುತ್ತದೆ, ವಿನಾಯಕ ಮೂರ್ತಿಯನ್ನು ಕೆತ್ತನೆ ಮಾಡುವಾಗ ಅನುಸರಿಸಬೇಕಾದ ಕ್ರಮವನ್ನು ಈ ಶ್ಲೋಕದಿಂದ ತಿಳಿಯಬಹುದಾಗಿದೆ, ಪಾದದಿಂದ ಉಷ್ಣೀಷದ (ಪಾದದಿಂದ ಪ್ರಾರಂಭಿಸಿ ತಲೆಯ)ವರೆವಿಗೆ ಮೂರ್ತಿಯನ್ನು ಕೆತ್ತನೆ ಮಾಡಲು ದೇಹವನ್ನು ಒಟ್ಟು 64 ಭಾಗಗಳಾಗಿ ವಿಭಜಿಸಬೇಕು, ಅಂದರೆ ಮೂರ್ತಿಯನ್ನು ಉತ್ತಮ ಪಂಚತಾಲದಲ್ಲಿ ರೂಪಿಸಬೇಕು, ವಿನಾಯಕನು ಎಲ್ಲಾ ದೇವತೆಗಳಿಗೂ ಪ್ರದಾನ ದೇವನಾಗಿರುವುದರಿಂದ ವಿನಾಯಕನ ಮೂರ್ತಿಯನ್ನು ಪಂಚತಾಲದಲ್ಲಿಯೇ ರೂಪಿಸಬೇಕೆಂಬ ನಿಯಮವಿದೆ, ಆದ್ದರಿಂದ ಈ ನಿಯಮವನ್ನು ಪ್ರತಿಯೊಬ್ಬ ಶಿಲ್ಪಿಯೂ ಪಾಲಿಸಬೇಕು.

ಮೂರ್ತಿಯ ಎತ್ತರವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಆಯಾ ಕ್ಷೇತ್ರಕ್ಕೆ ಮತ್ತು ಪ್ರತಿಷ್ಠಾಪನೆಯ ಜಾಗವನ್ನು ಗಣನೆಗೆ ತೆಗೆದುಕೊಂಡು ನಿರ್ಧಿಷ್ಟ ಅಳತೆ ಮತ್ತು ಆಯಕ್ಕೆ ಸರಿಯಾಗಿ ಕೆತ್ತನೆ ಕೆಲಸ ಮಾಡಬೇಕು, ಪ್ರತಿಯೊಂದು ಸ್ಥಳ ಹಾಗೂ ದೇವಾಲಯಗಳಲ್ಲಿ ವಿವಿಧ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುವ ಮೊದಲು ವಿನಾಯಕನ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕು, ಯಾಕೆಂದರೆ ಪ್ರತಿ ಕೆಲಸಕ್ಕೂ ವಿನಾಯಕನನ್ನು ನಮಿಸುವುದು ನಿಯಮ ಆದ್ದರಿಂದ ಶಿಲ್ಪಿಯು ಶಿಲ್ಪ ಕೆತ್ತನೆಯ ಮೊದಲು ವಿನಾಯಕ ದೇವನನ್ನು ಶಾಂತಗೊಳಿಸಿ, ಆತನ ಅಪ್ಪಣೆ ಪಡೆದು ಮುಂದಿನ ಕೆತ್ತನೆ ಕೆಲಸದಲ್ಲಿ ಯಾವುದೇ ವಿಘ್ನಗಳು ಬರಬಾರದೆಂದು ನಮಿಸಬೇಕು.

ವಿನಾಯಕನ ಮೂರ್ತಿಯನ್ನು ಕೆತ್ತನೆ ಮಾಡುವ ಮೊದಲು ಈ ಕೆಳಕಂಡ ಭಾಗಗಳನ್ನು ಮಾಡಿಕೊಂಡು ಆಯಾ ಭಾಗಗಳಿಗೆ ಇರುವ ನಿರ್ಧಿಷ್ಟ ಅಳತೆಯ ಪ್ರಕಾರವಾಗಿ ಕೆತ್ತನೆಯನ್ನು ಮಾಡಬೇಕು.

7. ಮೂರ್ತಿ ಕೆತ್ತನೆಯ ಭಾಗಗಳು, ಲಕ್ಷಣಗಳು ಮತ್ತು ಅಳತೆ :

ಮೂರ್ತಿ ಕೆತ್ತನೆಯ ಮುಖ್ಯ ಭಾಗಗಳು ಮತ್ತು ಅಳತೆ :

1). ಕೇಶಾಂಶ :–––––––––––––––2.0

2). ಭ್ರೂ ಸೂತ್ರ :––––––––––––––4.0

3). ಹಿಕ್ಕಾ ಸೂತ್ರ :––––––––––––––10.0

4). ಹನ್ವಂತ ಸೂತ್ರ :–––––––––––––8.0

5). ಸ್ತನ ಸೂತ್ರ :–––––––––––––––6.0

6). ಶ್ರೋಣಿ ಸೂತ್ರ :–––––––––––––16.0

7). ಮೇಢ್ರ ಮೂಲ :–––––––––––––6.0

8). ಊರ್ಧ್ವಂತ ಸೂತ್ರ :––––––––––––6.4

9). ಜಾನು :––––––––––––––––––3.0

10). ಜಂಘ :–––––––––––––––––6.4

11). ಪಾದ :––––––––––––––––––3.0

ಇವುಗಳು ಮುಖ್ಯವಾದ ಭಾಗಗಳಾಗಿ ಉಳಿದಂತೆ ದೇಹದ ಪ್ರತಿಯೊಂದು ಭಾಗಗಳಿಗೂ ಅಳತೆಗಳಿದ್ದು ಅವುಗಳನ್ನು ಈ ಕೆಳಗಿನಂತೆ ವಿಭಾಗಿಸಲಾಗಿದೆ.

ಮೂರ್ತಿ ಕೆತ್ತನೆಯ ಉಪ ಭಾಗಗಳು ಮತ್ತು ಅವುಗಳ ಅಳತೆ :
(ಇದು ಅಗಲ ಅಳತೆಯ ಕ್ರಮವುಳ್ಳದ್ದು)

1). ಕಿರೀಟ :-------------------100

2). ಕಿವಿ :----------------------9.0

3). ಕುತ್ತಿಗೆ :--------------------32.0

4). ಎದೆಯ ಮಧ್ಯದಿಂದ :----------19.0

5). ನಡ -----------------------15.0

6). ಸೊಂಟ :--------------------22.0

7). ತೊಡೆ :---------------------12.0

8). ಮೊಣಕಾಲು :----------------9.0

9). ಮೊಣಕಾಲಿನ ಕೆಳಭಾಗ :---------7.0

10). ಕಡಗದ ಭಾಗ :---------------3.5

11). ತೋಳು(ರಟ್ಟೆಯ)ಭಾಗ :---------6.4

12). ಕೈ ಕಡಗದ ಭಾಗ :-------------2.5

13). ಮುಂಗೈ :---------------------4.0

14). ಕೈ ಬೆರಳುಗಳು :---------------2.0

ಮೂರ್ತಿ ಕೆತ್ತನೆಯ ಲಕ್ಷಣಗಳು ಮತ್ತು ವಿಧಿ ವಿಧಾನಗಳು

1). ಪ್ರಾರ್ಥನ

2). ಪರಿವಾರ

3). ವಿನಾಯಕ ಲಕ್ಷಣಂ

4). ಪರಿವಾರ ದೇವತಾ

5). ಶಿವಲಿಂಗ ದರ್ಶನಾ

6). ಲಿಂಗ ಪೀಠ ಲಕ್ಷಣಂ

7). ಪಾದ ಶೈಲಾದಿ ಲಕ್ಷಣಂ

8). ಲಕ್ಷಮೋದ್ಧಾರ ಲಕ್ಷಣಂ

9). ಪ್ರತಿಮಾ ಲಕ್ಷಣಂ

10). ತಾಲಾಬೇಧ ಕಥನಂ

11). ಉತ್ತಮ ದಶತಾಲ ಪುರುಷಮಾನಂ

12). ಮಧ್ಯಮ ದಶಾತಾಲೇ ಸ್ತ್ರೀಮಾನ ಕಥನಾಂ

13). ಅಧಮಾ ದಶತಾಲೇ ಪುರುಷಮಾನಂ

14). ಉತ್ತಮ ನವತಾಲ ಲಕ್ಷಣಂ

15). ಮಧ್ಯಮ ನವತಾಲ ಲಕ್ಷಣಂ

16). ಅಧಮ ನವತಾಲ ಲಕ್ಷಣಂ

17). ಉತ್ತಮ ಅಷ್ಟತಾಲ ಲಕ್ಷಣಂ

18). ಉತ್ತಮ ಸಪ್ತತಾಲ ಲಕ್ಷಣಂ

19). ಸಕಲ ಮುರ್ತಿ ಸ್ಥಾಪನಾವಿಧಿ
20). ಸುಖಾಸನ ಮೂರ್ತಿ ಲಕ್ಷಣಂ
21). ಸೋಮಾಸ್ಕಂದ ಮೂರ್ತಿ ಲಕ್ಷಣಂ
22). ಚಂದ್ರಶೇಖರ ಮೂರ್ತಿ ಲಕ್ಷಣಂ.

8. ಶಿಲ್ಪ ಶಾಸ್ತ್ರ ಪರಿಚಯ :

ಯಾವುದೇ ಒಂದು ಮೂರ್ತಿಯ ಪ್ರತಿಯೊಂದು ಭಾಗಗಳು ಆಯಾ ಮೂರ್ತಿಯ ಇಡೀ ದೇಹವೂ ನಿರ್ಧಿಷ್ಟ ಅಳತೆಗೆ ತಕ್ಕಂತೆ ಇರಬೇಕು, ಮಾಡಿದ ಅಳತೆಗಳು ತೋರ ಬರುವಂತೆ ರೂಪಿಸಿದಾಗ ಆ ಮೂರ್ತಿಯ ಅಭಾಸ ದೊರೆತಾಗ ಅದು ಚಿತ್ರ ಭಾಸವಾಗುತ್ತದೆ, ಈ ತರಹದ ವಿಭಜನೆಯನ್ನು ಇದೇ ರೀತಿಯ ಹೆಸರುಗಳಿಂದ ಹಲವಾರು ಶಿಲ್ಪ ಶಾಸ್ತ್ರಗಳು ಹೇಳುತ್ತವೆ, ಈ ಎಲ್ಲಾ ಅಂಶಗಳಿಂದ ತಿಳಿದುಬರುವುದೇನೆಂದರೆ ಚಿತ್ರ ಎಂದರೆ ಶಿಲ್ಪ, ಶಿಲ್ಪ ಎಂದರೆ ಚಿತ್ರ ಎಂಬ ಎರಡೂ ಅರ್ಥಗಳು ಒಂದೇ.

ಶಿಲ್ಪ, ಶಿಲ್ಪ ಶಾಸ್ತ್ರ ಅಥವಾ ಚಿತ್ರಶಾಸ್ತ್ರ ಎನ್ನುವುದು ಇಂದು ನಿನ್ನೆಯದಲ್ಲ ಬಹಳ ಹಳೆಯದಾದುದು(ಪ್ರಾಚೀನವಾದುದು). ಇದರ ವಿಧಿವಿಧಾನಗಳು, ಸೂತ್ರ ಶೈಲಿಯಿಂದ ಬೃಹತ್ತಾದ ತಾಂತ್ರಿಕ ಭಾಷೆಯಿಂದ ತುಂಬಾ ಪ್ರಾಚೀನವೆಂದು ತಿಳಿಯ ಬಹುದಾಗಿದೆ, ಶಿಲ್ಪ ಶಾಸ್ತ್ರದಲ್ಲಿ ಶಯನ, ಆಸನ, ಸ್ಥಾನಿಕ ಲಕ್ಷಣಗಳು ಗೋಚರಿಸುತ್ತವೆ, ಪೂರ್ವದಲ್ಲಿ ಗುರುಕುಲ, ಮಠಗಳು ಇದ್ದು ಅಲ್ಲಿ ಶಿಲ್ಪ ಶಾಸ್ತ್ರವು ಬೋಧಿಸಲ್ಪಡುತ್ತಿತ್ತು.

ಶಿಲ್ಪ ಶಾಸ್ತ್ರದ ಬಗ್ಗೆ ಸಂಪೂರ್ಣ ವಿವರಣೆ ಹಾಗೂ ಅರ್ಥವನ್ನು ಶ್ರೀ ಕೃಷ್ಣನು ದಶಾವತಾರದಲ್ಲಿ ತಿಳಿಸಲ್ಪಟ್ಟಿದ್ದಾನೆ, ಇದರಿಂದ ಶಿಲ್ಪ ಶಾಸ್ತ್ರವು ಬಹಳ ಪ್ರಾಚೀನವಾದದ್ದು ಎಂದು ಅರಿಯಬೇಕು, ದಶಾವತಾರದಲ್ಲಿ ಬುದ್ದನನ್ನು ಬಹಳವಾಗಿ ಬಳಸಿಕೊಂಡಿರುವುದರಿಂದ ಮತ್ತು ಬುದ್ದನಿಗೆ ಮಹತ್ತರವಾದ ಸ್ಥಾನವನ್ನು ಕೊಟ್ಟಿರುವುದರಿಂದ ಮೊದಲನೇ ಪುರಾಣವೇ ಭಾಗವತ ಪುರಾಣವಾಗಿದೆ, ಭಾಗವತ ಪುರಾಣವು ಕ್ರಿ.ಶ. 5ನೇ ಕಾಲಮಾನದಲ್ಲಿ ರಚನೆಯಾದದ್ದಾಗಿದೆ.

9. ಲಿಂಗದ ಶಿಲ್ಪ :


ಲಿಂಗದ ತಾರವನ್ನು (ಎಂದರೆ ಅಗಲ–ಅರ್ಧ ವ್ಯಾಸವನ್ನು) ತ್ರಿಜ್ಯವನ್ನು (1/4) ನಾಲ್ಕು ಸಮ ಭಾಗಗಳನ್ನಾಗಿ ಮಾಡಿ ಅದರಲ್ಲಿ (2)ಎರಡು ಭಾಗಗಳನ್ನು ಕೆತ್ತುವುದು, ಈ ವಿಧಾನಕ್ಕೆ ಕುಕ್ಕುಟಾಂಡ ವರ್ತನವೆಂದು ಹೇಳುತ್ತಾರೆ, ಅದೇ ತ್ರಿಜ್ಯವನ್ನು (ಅಗಲವನ್ನು) (8)ಎಂಟು ಭಾಗಗಳನ್ನಾಗಿ ವಿಭಾಗಿಸಿ ಇದರಲ್ಲಿ (2)ಎರಡು ಭಾಗಗಳನ್ನು ಕೆತ್ತುವುದರಿಂದ ಛತ್ರಕಾರ ವರ್ತನವೆಂದೂ, ಮತ್ತದೇ ತ್ರಿಜ್ಯವನ್ನು (3)ಮೂರು ಭಾಗಗಾಗಿ ವಿಭಾಗಿಸಿ ಅದರಲ್ಲಿ (2)ಎರಡು ಭಾಗಗಳನ್ನು ಕೆತ್ತುವುದರಿಂದ ಅದನ್ನು ಅರ್ಧ ಚಂದ್ರಾಕಾರ ವರ್ತನವೆಂದು ಹೇಳುತ್ತಾರೆ, ಇದೇ ತ್ರಿಜ್ಯವನ್ನು (6)ಆರು ಭಾಗಗಳಾಗಿ ವಿಭಾಗಿಸಿ ಇದರಲ್ಲಿ (2–1/2)ಎರಡೂವರೆ ಭಾಗವನ್ನು ಕೆತ್ತುವುದರಿಂದ ತ್ರಪುಷಾರ ವರ್ತನವೆಂದೂ ಕರೆಯಲಾಗುತ್ತದೆ.

ಈ ಪ್ರಕಾರವಾಗಿ ಶಿರೋವರ್ತನಕ್ಕಾಗಿ ಲಿಂಗದ ಶಿರಸ್ಸಿನಲ್ಲಿ ತೆಗೆಯುವ ಮಾನಗಳನ್ನು ಇದುವರೆಗೆ ಹೇಳಲಾಗಿದೆ, ಅಷ್ಟೂ ಭಾಗಗಳು ಆಳದಲ್ಲಿ ತೆಗೆಯಬೇಕಾಗಿಲ್ಲ, ಒಂದೇ ಅಳತೆಯನ್ನು ಹೇಳಿರುವುದರಿಂದ ಕೊನೆಯ (ಅಂಚಿನ)ಭಾಗದಿಂದ ಎಲ್ಲಿಯ ತನಕ ತೆಗೆಯಬಹುದೆಂಬ ಅಳತೆ ಇದೆ, ಈ ಅಂತರವನ್ನು ಧನಸ್ಸಿನ(ಬಿಲ್ಲಿನ), ಅರ್ಧ ಚಂದ್ರಾಕಾರ ಅಥವಾ ಕಮಾನು ಆಕಾರದಲ್ಲಿ ತೆಗೆಯಬೇಕು ಅಥವಾ ಕೆತ್ತನೆ ಮಾಡಬೇಕು, ಈ ರೀತಿ ಕೆತ್ತನೆ ಮಾಡುವುದರಿಂದ ಲಿಂಗದ ಮೇಲಿನ ಭಾಗವು ದುಂಡಾಗಿ ಕೋಳಿ ಮೊಟ್ಟೆಯ ಆಕಾರದಂತೆ ಕಾಣಿಸುತ್ತದೆ.

ಒಬ್ಬೊಬ್ಬ ಶಿಲ್ಪಿಯು ಒಂದೊಂದು ರೀತಿಯ ಅಳತೆ ಮತ್ತು ಆಯಗಳನ್ನು ಇಟ್ಟುಕೊಂಡು ಕೆತ್ತನೆ ಮಾಡಿದ್ದರೂ, ಮಾಡುತ್ತಿದ್ದರೂ ಆ ಎಲ್ಲಾ ನಿಯಮಗಳು ಶಾಸ್ತ್ರೋಕ್ತವಾಗಿರುತ್ತವೆ, ಯಾವ ಶಿಲ್ಪಿಯೇ ಆಗಿರಲಿ ಶಾಸ್ತ್ರೋಕ್ತವಾಗಿ ಮೂರ್ತಿಯ ಕೆತ್ತನೆಯನ್ನು ಮಾಡುತ್ತಾರೆ, ಮಾಡಲೇ ಬೇಕು ಕೂಡ, ಯಾಕೆಂದರೆ ಶಾಸ್ತ್ರವನ್ನು ಬಿಟ್ಟು ಕೆತ್ತನೆ ಮಾಡಿದವನು ಅಪಹಾಸ್ಯಕ್ಕೆ ಮತ್ತು ಟೀಕೆಗೆ ಗುರಿಯಾಗುತ್ತಾನೆ, ಶಿಲ್ಪ ಶಾಸ್ತ್ರದ ಪ್ರಕಾರ ಶಿಲ್ಪಿಯು ಮೂರ್ತಿಯ ಕೆತ್ತನೆಯನ್ನು ಮಾಡಿಲ್ಲದಿದ್ದರೆ ಅಂತಹ ಮೂರ್ತಿಯು ಪ್ರತಿಷ್ಠಾಪನೆಗೆ ಮತ್ತು ಪೂಜೆಗೆ ನಿಷಿದ್ಧ ಮಾಡಬಹುದಾದ ಸಾಧ್ಯತೆಗಳು ಇರುತ್ತವೆ, ಆದ ಕಾರಣ ಶಿಲ್ಪಿಯು ಶಾಸ್ತ್ರೋಕ್ತವಾಗಿ ನಿರ್ಧಿಷ್ಟ ಅಳತೆ ಮತ್ತು ಆಯಗಳಿಂದ ಮೂರ್ತಿ ಕೆತ್ತನೆಯನ್ನು ಮಾಡಬಹುದಾಗಿದೆ, ಇದಕ್ಕೆ ಯಾರದೇ, ಯಾವುದೇ ನಿರ್ಬಂಧ ಇರುವುದಿಲ್ಲ.


ಇಲ್ಲಿ ಮುಖ್ಯವಾಗಿ ಗಮನದಲ್ಲಿ ಇಟ್ಟುಕೊಳ್ಳ ಬೇಕಾದ್ದೇನೆಂದರೆ ಯಾವುದೇ ಶಿಲ್ಪಿಯು, ಯಾವುದೇ ಪ್ರಕಾರದ ಅಳತೆಗಳನ್ನು ತಮ್ಮ ಕೆತ್ತನೆಯಲ್ಲಿ ಅಳವಡಿಸಿಕೊಂಡು ಕೆತ್ತನೆ ಮಾಡಿದ್ದರೂ ಚಿಂತಿಸುವ ಅಗತ್ಯತೆ ಇರುವುದಿಲ್ಲ, ಯಾಕೆಂದರೆ ಒಂದೊಂದು ಸಲ ಶಿಲ್ಪಿಯು ಲಿಂಗದ ಕೆತ್ತನೆಯನ್ನು ಮಾಡುವಾಗ ಕೊನೆಯದಾಗಿ ಲಿಂಗವು ಅರ್ಧ ಚಂದ್ರಾಕಾರ, ಅರ್ಧ ಛತ್ರಾಕಾರ, ಕೋಳಿಮೊಟ್ಟೆಯ ಆಕಾರ, ಸೌತೇಕಾಯಿಯ ಆಕಾರ ಬರಬಹುದು ಅಥವಾ ಬರದೆಯೂ ಇರಬಹುದು ಇದಕ್ಕಾಗಿ ಚಿಂತಿಸುವ ಅಗತ್ಯತೆ ಇಲ್ಲ, ಯಾಕೆಂದರೆ ಲಿಂಗದ ಕೆತ್ತನೆಯನ್ನು ಮಾಡುವಾಗ ನಿರ್ಧಿಷ್ಟವಾದ ಒಂದು ಅಳತೆಮಾನದಲ್ಲಿ ಮಾಡಿರುವುದರಿಂದ ಅದು ಬಿಲ್ಲಿನ ಆಕಾರ ಅಥವಾ ಕಮಾನು ಆಕಾರ ಖಂಡಿತವಾಗಿ ಬಂದೇ ಬಂದಿರುತ್ತದೆ, ಯಾವುದೇ ರೂಪದಲ್ಲಿ ಲಿಂಗದ ಆಕಾರ ಬಂದಿರಬಹುದು, ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ ಕೆತ್ತನೆಯಲ್ಲಿ ಅನುಸರಿಸಿರುವ ಅಳತೆ ಮತ್ತು ಮಾನಗಳು ಮುಖ್ಯವೇ ಹೊರತು ರೂಪ ಮುಖ್ಯವಲ್ಲ ಎಂಬುದನ್ನು ಶಿಲ್ಪಿಗಳು ಚನ್ನಾಗಿ ಗಮನದಲ್ಲಿ ಇಡಬೇಕು.

ಚತುರ್ಮುಖ ಲಿಂಗ ಮತ್ತು ಶಿವಲಿಂಗದ ಶಿರೋವರ್ತನ




ಲಿಂಗ ಕೆತ್ತನೆಯ ವಿಧಗಳು:

ಲಿಂಗದ ಪೀಠಗಳ ವಿಧಗಳು:



ಪ್ರತಿಭದ್ರ, ಪ್ರತಿಸುಂದರ, ಸೌಭದ್ರ ಮತ್ತು ಕಲ್ಯಾಣಕಾರಣ ಪೀಠಗಳು

ಜಲ ಮಾರ್ಗಗಳು (ನಾಳಿ)



ಸಿಂಹ ತಲೆಯ ನಾಳಿ, ಮೊಸಳೆ ತಲೆಯ ನಾಳಿ, ನಂದಿ ತಲೆಯ ನಾಳಿ:

ಶಿವಲಿಂಗ ಶಿರೋವರ್ತನ ಕ್ರಮ: ವೈಷ್ಣವ ಧರ್ಮದಲ್ಲಿ ಹಲವಾರು ಪ್ರಬೇಧಗಳಿದ್ದರೂ, ದೇವರ ಮೂರ್ತಿಗಳ ಶಿಲ್ಪದ ಕಾರಣದಿಂದ ಕೆಲವು ಸುಕ್ಷ್ಮವಾದ ಅಂತರಗಳು ಮಾತ್ರವೇ ಇವೆ.

ಶಾಸ್ತ್ರದಲ್ಲಿ ರೂಪವು ಎಷ್ಟೇ ವಿವರವಾಗಿ ವರ್ಣಿತವಾದರೂ ಅದನ್ನು ಕಣ್ಣಮುಂದೆ ಸಾಕ್ಷಾತ್ಕಾರ ಮಾಡಿಕೊಳ್ಳಲು ರೇಖೆಗಳ ನೆರವು ಮುಖ್ಯವಾಗಿ ಬೇಕೇ ಬೇಕು, ಆದ್ದರಿಂದ ಇಲ್ಲಿ ಮುಖ್ಯವಾಗಿ ಗಮನಿಸ ಬೇಕಾದದ್ದೇನೆಂದರೆ ಶಿಲ್ಪ ಶಾಸ್ತ್ರಗಳಲ್ಲಿ ಚಿತ್ರಗಳು ಹೆಚ್ಚಾಗಿರುವಷ್ಟು ವಿಚಾರವನ್ನು, ಶಾಸ್ತ್ರವನ್ನು ಅರ್ಥಮಾಡಿಕೊಳ್ಳುವುದು ಸರಳ, ಆದರೆ ಶಾಸ್ತ್ರಬದ್ಧವಾದ ವಿಧಾನವನ್ನು ಅನುಸರಿಸಿ ರೇಖಾ ಚಿತ್ರಗಳನ್ನು ಬರೆಯುವುದು ಕಷ್ಟ ಹಾಗೂ ಬರೆಯುವವರು ವಿರಳ, ಆದರೆ ಇದರ ಬದಲಾಗಿ ಕೈಯಲ್ಲಿ ಗೆರೆಗಳ ಮುಖಾಂತರ ಚಿತ್ರಗಳನ್ನು ಬರೆಯುವವರು ಇದ್ದಾರೆ.

ಪರಾಮರ್ಶನ ಗ್ರಂಥಗಳು :-

1). ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ: ಡಾ॥ಸಾಣೇಕೆರೆ ಸಣ್ಣೋಬಯ್ಯ.

2). ಕಲಾ ಚರಿತ್ರೆ: ಅಶೋಕ ಟಿ. ಅಕ್ಕಿ.

3). ಆರನೇ ಆರ್ಥಿಕ ಗಣತಿ ಕೈಪಿಡಿ:

4). ವಿಶ್ವಕರ್ಮ ಶಿಲ್ಪ ಶಾಸ್ತ್ರಂ.

5). ಚಿತ್ರದುರ್ಗ ಜಿಲ್ಲಾ ದರ್ಶಿನ: ಟಿ. ಗಿರಿಜ

ಅಧ್ಯಾಯ – 3

ಚಿತ್ರದುರ್ಗ ಜಿಲ್ಲೆಯ ಶಿಲ್ಪಕಲಾ ಇತಿಹಾಸ ಮತ್ತು ಶಿಲ್ಪ ವೈವಿಧ್ಯತೆಗಳು

1. ದೆವಸ್ಥಾನಗಳ ನಿರ್ಮಾಣ ಹಾಗೂ ಶಿಲ್ಪಕಲೆ
2. ಚಿತ್ರದುರ್ಗ ಜಿಲ್ಲೆಯ ಶಿಲ್ಪಕಲೆಯ ಇತಿಹಾಸ
3. ದೇವಾಲಯಗಳು ಹಾಗೂ ಇತರೆಡೆಗಳಲ್ಲಿ ಸಂಪ್ರದಾಯ ಶಿಲ್ಪಿಗಳಿಂದ ಕೆತ್ತನೆಗೊಂಡ ಶಿಲ್ಪ ವೈವಿಧ್ಯತೆಗಳು
4. ಚಿತ್ರದುರ್ಗದಲ್ಲಿ ನಿರ್ಮಿತವಾಗಿರುವ ದೇವಾಲಯಗಳು ಹಾಗೂ ಕೆತ್ತನೆಯ ಕೆಲವು ಭಾಗಗಳು

5). ಚಿತ್ರದುರ್ಗ ಜಿಲ್ಲೆಯ ಶಿಲ್ಪಕಲೆಗಳನ್ನೊಳಗೊಂಡ ದೇವಾಲಯಗಳು

ಚಿತ್ರದುರ್ಗ ಜಿಲ್ಲೆಯ ಶಿಲ್ಪಕಲಾ ಇತಿಹಾಸ ಮತ್ತು ಶಿಲ್ಪ ವೈವಿಧ್ಯತೆಗಳು

1. ದೇವಸ್ಥಾನಗಳ ನಿರ್ಮಾಣ ಹಾಗೂ ಶಿಲ್ಪಕಲೆ:

ದೇವಸ್ಥಾನಗಳ ನಿರ್ಮಾಣದಲ್ಲಿ ವಾಸ್ತುಶಿಲ್ಪ :

ದೇವಸ್ಥಾನಗಳ ನಿರ್ಮಾಣದಲ್ಲಿ ಈ ಕೆಳಗಿನ ವಾಸ್ತುಶಿಲ್ಪ ಶೈಲಿಯನ್ನು ಅಳವಡಿಸಿರುತ್ತಾರೆ :

1). ನಾಗರ ಶೈಲಿ

2). ವೇಸರ ಶೈಲಿ

3). ದ್ರಾವಿಡ ಶೈಲಿ

4). ಹೊಯ್ಸಳ ಶೈಲಿ

ಮೇಲ್ಕಂಡ ನಾಲ್ಕು ಪ್ರಕಾರದ ವಾಸ್ತು ಶಿಲ್ಪ ಶೈಲಿಗಳನ್ನು ಅನುಸರಿಸುತ್ತಾರೆ, ಈ ನಾಲ್ಕು ಶೈಲಿಗಳಲ್ಲೂ ಬೇಕಾದ, ಆಕರ್ಷಕವಾದಂತಹ ಕುಸುರಿ ಶಿಲ್ಪಕಲೆಗಳನ್ನು ದೇವಸ್ಥಾನದ ವಿವಿಧ ಜಾಗಗಳಲ್ಲಿ ದೇವಸ್ಥಾನ ನಿರ್ಮಾಣ ಸಮಯದಲ್ಲಿ ಮಾಡಬಹುದಾಗಿದೆ.

ದೇವಸ್ಥಾನಗಳ ನಿರ್ಮಾಣದ ಆಕಾರಗಳು :

1). ಆಯತಾಕಾರ

2). ನಕ್ಷತ್ರಾಕಾರ

3). ಚೌಕಾಕಾರ

4). ವೃತ್ತಾಕಾರ

ದೇವಸ್ಥಾನಗಳನ್ನು ನಿರ್ಮಾಣ ಮಾಡಲು ಈ ನಾಲ್ಕು ಅಕಾರಗಳನ್ನು ಅನುಸರಿಸಲಾಗುತ್ತದೆ, ಆಯಾ ಪ್ರದೇಶ ಮತ್ತು ಲಭ್ಯವಿರುವ ಜಾಗಕ್ಕೆ ಅನುಸಾರವಾಗಿ ದೇವಸ್ಥಾನಗಳ ಮತ್ತು ಶಿಖರಗಳ ಆಕಾರಗಳನ್ನು ಅಳವಡಿಸಲಾಗಿರುತ್ತದೆ.

ದೇವಸ್ಥಾನಗಳ ನಿರ್ಮಾಣದ ಭಾಗಗಳು :

1).ಗರ್ಭಗುಡಿ

2).ವಿಮಾನ

3).ಸುಕನಾಸಿ

4).ನವರಂಗ

5).ಬೃಂದಾವನ

6).ಗರುಡ ಮಂದಿರ

7).ಪ್ರಾಕಾರ

8).ರಾಜಗೋಪುರ


9).ಗರ್ಭಗುಡಿ ಗೋಪುರ

10).ಕಲ್ಯಾಣಿ

11).ಪರಿವಾರ ದೇವರುಗಳ ಉಪಗುಡಿಗಳು.

ಮುಂತಾದ ಭಾಗಗಳನ್ನು ಶಿಲ್ಪ ಶಾಸ್ತ್ರದ ಪ್ರಕಾರವಾಗಿ ನುರಿತ ಶಿಲ್ಪಕಲಾವಿದರು ನಿರ್ಮಾಣ ಮಾಡಿರುತ್ತಾರೆ.

ಅಷ್ಟ ಪರಿವಾರ ದೇವತೆಗಳ ಸ್ಥಾನ ನಿರ್ಣಯದ ನಕ್ಷೆ




ಪರಿವಾರ ದೇವತೆಗಳ ಪ್ರತಿಷ್ಠಾಪನಾ ಸ್ಥಾನದ ನಕ್ಷೆ:


ಗಣಪತಿಯ ಒಂದೇ ಮೂರ್ತಿ ಇದ್ದರೆ ನೈರುತ್ಯದಲ್ಲಿ ಪ್ರತಿಷ್ಠಾಪಿಸಬೇಕು (ಸಪ್ತ ಮಾತೃಕೆಯರೊಂದಿಗೆ ಇರುವ ಗಣಪತಿಯನ್ನು ಇದರಲ್ಲಿ ಪರಿಗಣಿಸಬಾರದು).

ಉತ್ತರದಿಕ್ಕಿನ ಮಧ್ಯಜಾಗದಲ್ಲಿ ವಿಷ್ಣು ವಿಗ್ರಹವಾದರೆ ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಬೇಕು, ಗೌರೀ ದೇವಿ ಮೂರ್ತಿಯಾದರೆ ದಕ್ಷಿಣಾಭಿಮುಖವಾಗಿ ಪ್ರತಿಷ್ಠಾಪಿಸಬೇಕು.

ಶಿಲ್ಪ ಕೆತ್ತನೆಯ ವಿವಿಧ ತಾಲಗಳು:



ಮಧ್ಯಮ ನವತಾಲ:



ಮಧ್ಯಮ ದಶತಾಲ–ಸ್ತ್ರೀ:

2. ಚಿತ್ರದುರ್ಗ ಜಿಲ್ಲೆಯ ಶಿಲ್ಪಕಲಾ ಇತಿಹಾಸ :

ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಮನೆತನದವರು, ರಾಜರುಗಳು ಆಳ್ವಿಕೆ ಮಾಡಿದ್ದು ತಮ್ಮ ಆಳ್ವಿಕೆಯ ಸಮಯಗಳಲ್ಲಿ ಅನೇಕ ರೀತಿಯ ಶಿಲ್ಪಕಲೆಯನ್ನು ಮಾಡಿದ್ದಾರೆ, ದೇವಾಲಯಗಳು, ಗುಹಾಂತರ ದೇವಾಲಯಗಳು, ಅರಮನೆ, ಗುರುಮನೆಗಳು ಮುಂತಾದ ಕಡೆಗಳಲ್ಲಿ ಶಿಲ್ಪಕಲೆಯನ್ನು ಮಾಡಿದ್ದಾರೆ.

ಮೌರ್ಯರ ಕಾಲದ ಆಳ್ವಿಕೆಯಿಂದ ಹಿಡಿದು ಕೊನೆಯ ಪಾಳೇಯಗಾರರ ರಾಜ ಮನೆತನಗಳವರ ಆಳ್ವಿಕೆಯವರೆವಿಗೂ ಈ ಜಿಲ್ಲೆಯಲ್ಲಿ ಶಿಲ್ಪಕಲೆ ಹಿನ್ನೆಲೆಯನ್ನು ಹೊಂದಿರುವ ದೇವಾಲಯಗಳನ್ನು ಇಂದಿಗೂ ನೋಡಬಹುದಾಗಿದೆ, ಈ ದೇವಾಲಯಗಳು ಇಂದಿಗೂ ಇತಿಹಾಸಕಾರರಿಗೆ, ಸಂಶೋಧಕರಿಗೆ, ಶಿಲ್ಪಕಲಾಸಕ್ತರಿಗೆ ಹಾಗೂ ನೋಡುಗರಿಗೆ ಸ್ಫೂರ್ತಿಯ ನೆಲೆಗಳಾಗಿವೆ.

ಮೌರ್ಯರ ರಾಜನಾದ ಸಾಮ್ರಾಟ ಅಶೋಕನ ಆಳ್ವಿಕೆಯ ಸಮಯವು ಕ್ರಿ. ಪೂ. 3ನೇ ಶತಮಾನದ್ದಾಗಿದ್ದು ಅಂದು ಈ ಪ್ರದೇಶವು ಸಾಮ್ರಾಟ ಅಶೋಕನ ಅಧೀನಕ್ಕೆ ಸೇರಿತ್ತು, ಅಶೋಕನಿಗೆ ಶಿಲ್ಪಕಲೆಯಲ್ಲಿ ಹೆಚ್ಚಿನ ಆಸಕ್ತಿ ಇದ್ದು ಶಿಲ್ಪಕಲಾವಿದರ ಕೊರತೆಯೋ ಅಥವಾ ಬೇರಾವ ಕಾರಣದಿಂದಲೋ ಕಡಿಮೆ ಪ್ರಮಾಣದಲ್ಲಿ ಮಾಡಿರುವ ಶಿಲ್ಪಕಲೆಯನ್ನು ಕಾಣಬಹುದು, ಅಶೋಕನ ಕಾಲಾ ನಂತರ ಶಾತವಾಹನರು, ಕದಂಬರು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ಮಾಡಿದ್ದು, ಇವರು ತಮ್ಮ ದಿನ ನಿತ್ಯದ ಪರಿಕರಗಳನ್ನು ಕಲಾತ್ಮಕವಾಗಿ ಮಾಡುತ್ತಿದ್ದರು, ಇವರು ಉಪಯೋಗಿಸುತ್ತಿದ್ದ ಕೆಲವಾರು ಕಲಾತ್ಮಕ ವಸ್ತುಗಳು, ಅವಶೇಷಗಳು ಈ ಪ್ರದೇಶಗಳಲ್ಲಿ ದೊರೆತಿವೆ.

ಇವರ ನಂತರ ಬದಾಮಿ ಚಾಲುಕ್ಯರು, ರಾಷ್ಟ್ರಕೂಟರೂ ಆಳ್ವಿಕಯನ್ನು ಮಾಡಿದ್ದು, ಇವರ ಕಾಲಾಂತರದಲ್ಲಿ ಕೆತ್ತನೆ ಮಾಡಿರುವ ಶಿಲ್ಪಕಲೆಯನ್ನು ಹಾಗೂ ಶಾಸನಗಳನ್ನು ಕಾಣಬಹುದು, ಆನಂತರ ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ನೊಳಂಬರು, ಉಚ್ಚಂಗಿ ಪಾಂಡ್ಯರು, ವಿಜಯ ನಗರದ ಅರಸರು ಆಳ್ವಿಕೆಯನ್ನು ಮಾಡಿದ್ದು ಇವರು ತಮ್ಮ ಅನುಕೂಲಕ್ಕಾಗಿ ಬೇಕಾದಂತಹ ಪರಿಕರಗಳನ್ನು ಅವುಗಳಲ್ಲಿ ಶಿಲ್ಪಕಲೆಯ ಚಾಕ-ಚಕ್ಯತೆಯನ್ನು ಕಾಣಬಹುದು, ಇಂತಹ ಕುರುಹುಗಳು ಇಂದು ಸಂಶೋಧನೆಯ ಸಮಯದಲ್ಲಿ ಸಂಶೊಧಕರಿಗೆ ದೊರೆತಿವೆ, ಇವರುಗಳ ತರುವಾಯ ಕೊನೆಯದಾಗಿ ಈ ಪ್ರದೇಶದಲ್ಲಿ ಆಳ್ವಿಕೆಯನ್ನು ಮಾಡಿದ್ದು ಚಿತ್ರದುರ್ಗದ ಪಾಳೆಯಗಾರರು, ಇವರು ತಮ್ಮ ಜ್ಞಾನ ಸಂಪತ್ತಿನಿಂದ ಹಲವಾರು ಕಡೆ ಶಿಲ್ಪಕಲೆಯನ್ನೊಳಗೊಂಡ ದೇವಾಲಯಗಳು, ಮಠಗಳನ್ನು ನಿರ್ಮಾಣ ಮಾಡಿದ್ದಾರೆ.

ಮೌರ್ಯರು ತಮ್ಮ ಕಾಲದಲ್ಲಿ ಕಪ್ಪು ಮಣ್ಣಿನಲ್ಲಿ ಅನೇಕ ರೀತಿಯ ಆಕರ್ಷಕವಾದ ಕಲೆಯುಳ್ಳ ಮನೆ ಬಳಕೆಯ ಪಾತ್ರೆಗಳನ್ನು ಮಾಡುತ್ತಿದ್ದರು ಮತ್ತು ಕೆಲವು ವಿಧದ ಲೋಹಗಳಲ್ಲಿ ಅವರ ಮೆಚ್ಚಿನ ಶಿಲ್ಪಕಲೆಗಳನ್ನು ಮತ್ತು ಮುದ್ರಾಂಕಿತ ನಾಣ್ಯಗಳನ್ನು ಮಾಡಿದ್ದರು. ಶಾತವಾಹನರು ಈ ಪ್ರದೇಶದಲ್ಲಿ ಆಳ್ವಿಕಯನ್ನು ಮಾಡುತ್ತಿದ್ದ ಸಮಯದಲ್ಲಿ ಸೀಸದ ನಾಣ್ಯಗಳನ್ನು ಮತ್ತು ಮಾಡಿಕೆಗಳನ್ನು ಮಾಡಿ ಅದರಲ್ಲಿ ಶಿಲ್ಪಕಲೆಯನ್ನು ಮಾಡುತ್ತಿದ್ದರು.

ಹೊಯ್ಸಳರು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದು ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ, ಇದಕ್ಕೆ ಸಾಕ್ಷಿಯಾಗಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಲ್ಲೇಶ್ವರ ದೇವಾಲಯವನ್ನು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ವಿವಿಧ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ಸೇವುಣರು ಸಹ ತಮ್ಮ ಕಾಲಾವಧಿಯಲ್ಲಿ ಶಿಲ್ಪಕಲೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾರೆ, ವಿಜಯ ನಗರದ ಅರಸರೂ ಕೂಡ ದ್ರಾವಿಡ ಶೈಲಿಯಲ್ಲಿ ದೊಡ್ಡ ದೊಡ್ಡ ದೇವಾಲಯಗಳನ್ನು ನಿರ್ಮಿಸಿದ್ದಾರೆ, ಇವುಗಳು ಹೊಯ್ಸಳ ಹಾಗೂ ಚೇಳವಾಸ್ತು ಶಿಲ್ಪದ ಪ್ರತೀಕವಾಗಿವೆ, ಒಟ್ಟಾರೆ ವಿಜಯ ನಗರದ ಅರಸರು ಕಲಾ ರಸಿಕರು ಕಲೆ ಮತ್ತು ಶಿಲ್ಪಕಲೆಗೆ ಉತ್ತೇಜನ ನೀಡುತ್ತಿದ್ದರು, ಇದರ ಪ್ರತೀಕವಾಗಿ ಹಲವಾರು ಶಿಲ್ಪಕಲೆಯನ್ನೊಳಗೊಂಡ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ.

ಚಿತ್ರದುರ್ಗದ ಪಾಳೆಯಗಾರರೂ ಕೂಡ ಕಲೆ ಮತ್ತು ಶಿಲ್ಪಕಲೆಗೆ ಸಾಕಷ್ಟು ಆಸಕ್ತಿ ವಹಿಸಿದ್ದಾರೆ, ಇವರು ಬೇಡ ಮತ್ತು ಗಿರಿಜನರಾಗಿದ್ದು, ವಾಲ್ಮೀಕಿ ಸಮುದಾಯದವರು, ಕಾಮಗೇತಿ ವಂಶದವರು, ಸಮಾರು 200ಕ್ಕೂ ಹೆಚ್ಚು ವರ್ಷಗಳು ಆಳ್ವಿಕೆಯನ್ನು ಮಾಡಿದ್ದು ಈ ಸಂದರ್ಭದಲ್ಲಿ ಹಳೆಯ ದೇವಸ್ಥಾನಕ್ಕೆ ಇನ್ನಷ್ಟು ಶಿಲ್ಪಕಲೆಯನ್ನು ಮಾಡಿಸಿ ಹಳೆಯ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ ಮತ್ತು ಹೊಸದಾಗಿಯೂ ಶಿಲ್ಪಕಲೆಯನ್ನು ಹೊಂದಿರುವ ದೇವಸ್ಥಾನಗಳನ್ನು ನಿರ್ಮಾಣ ಮಾಡಿದ್ದಾರೆ.

ಇದರ ಕುರುಹಾಗಿ ಚಿತ್ರದುರ್ಗದ ಗೋಪಾಲಕೃಷ್ಣ ದೇವಾಲಯ, ವೆಂಕಟರಮಣ ಸ್ವಾಮಿ ದೇವಾಲಯ, ಮುಂತಾದ ಅನೇಕ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ, ಪಾಳೆಯಗಾರರಲ್ಲಿ ಮುಖ್ಯವಾಗಿ ಬಿಚ್ಚುಗತ್ತಿ ಭರಮಣ್ಣ ನಾಯಕನು ಮೂವತ್ತಕ್ಕೂ ಹೆಚ್ಚು ದೇವಾಲಯಗಳನ್ನು ವಾಸ್ತು ಶಿಲ್ಪಕಲೆಯನ್ನೊಳಗೊಂಡಂತೆ ನಿರ್ಮಾಣ ಮಾಡಿದ್ದಾನೆ, ಮತ್ತೊಂದು ವಿಶೇಷವೆಂದರೆ ವಾಸ್ತು ಶಿಲ್ಪಕಲೆಯನ್ನೊಳಗೊಂಡ ಮುರುಘಾ ಮಠವನ್ನು ನಿರ್ಮಾಣ ಮಾಡಿರುವುದು.

ಚಿತ್ರದುರ್ಗದ ಪಶ್ಚಿಮಕ್ಕೆ ಅಂಕಳಿಮಠವಿದ್ದು ಮಠದ ಪಕ್ಕದಲ್ಲಿ ಪಂಚಲಿಂಗೇಶ್ವರ ದೇವಸ್ಥಾನವನ್ನು ನಿರ್ಮಿಸಿಲಾಗಿದೆ, ಪೂರ್ವದಲ್ಲಿ ಪಾಂಡವರು ಇಲ್ಲಿಗೆ ಬಂದು ಕೆಲವು ದಿನ ವನವಾಸ ಮಾಡಿದರೆಂದೂ ಈ ಸಮಯದಲ್ಲಿ ಅವರು ಐದು ಲಿಂಗಗಳನ್ನು ಅವರುಗಳ ಹೆಸರಿನಿಂದಲೇ ಪ್ರತಿಷ್ಠಾಪಿಸಿದರಂತೆ, ಧರ್ಮರಾಯನ ಹೆಸರಿನ–ಧರ್ಮೇಶ್ವರ, ಭೀಮನ ಹೆಸರಿನಲ್ಲಿ ಭೀಮೇಶ್ವರ, ಅರ್ಜುನನ ಹೆಸರಿನಲ್ಲಿ ಅರ್ಜುನೇಶ್ವರ, ನಕುಲನ ಹೆಸರಿಗೆ ನಕುಲೇಶ್ವರ, ಸಹನ ಹೆಸರಿಗೆ ಸಹದೇಶ್ವರ ಎಂಬ 5ಲಿಂಗಗಳ ದೇವರುಗಳನ್ನು ಪ್ರತಿಷ್ಠಾಪಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯು ಶಿಲಾಯುಗ ಕಾಲದಿಂದಲೂ ಮನುಷ್ಯನಿಗೆ ಆಶ್ರಯ ತಾಣವಾಗಿತ್ತು ಎನ್ನಲಾಗಿದೆ, ಚಿತ್ರದುರ್ಗ ಜಿಲ್ಲೆಯ ಪ್ರದೇಶಗಳಲ್ಲಿ ಆದಿ–ಹಳೆಯ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ಆಧುನಿಕ ಶಿಲಾಯುಗ ಈ ಮೂರು ಶಿಲಾಯುಗಗಳು ಮಾನವನ ಕಲೆ ಮತ್ತು ಸಂಸ್ಕೃತಿಗಳ ನೆಲೆಗಳಾಗಿದ್ದವು, ಹೊಸದುರ್ಗ ತಾಲ್ಲೂಕಿನ ಜಾನಕಲ್ಲು, ಹೊಳಲ್ಕೆರೆ ತಾಲ್ಲೂಕಿನ ತಾಂಡ್ಯಗಳಲ್ಲಿ ಆದಿ ಹಳೆ ಶಿಲಾಯುಗದ ಸಂಸ್ಕೃತಿಯನ್ನು ಕಾಣಬಹುದಾಗಿದೆ, ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ನುಂಕಿಮಲೆ, ಹಳೇಕೆರೆ, ಪೂಜಾರಹಟ್ಟಿ, ಹರಳಯ್ಯಗುಡಿ, ಹಾನಗಲ್ಲು ಇನ್ನು ಕೆಲವು ಕಡೆ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಎರಡು ರೀತಿಯ ದೇವಾಲಯಗಳು ಗಣನೆಗೆ ಬರುತ್ತವೆ, ನೈಜವಾದ ಬಂಡೆಗಳನ್ನಾಧರಿಸಿದ ಅಥವಾ ಒರಟು ಕಲ್ಲಿನಿಂದ ಕಟ್ಟಲಾಗಿರುವ ದೇವಾಲಯಗಳು, ಮತ್ತೊಂದು ಮೃದುವಾದ ಕಪ್ಪು ಕಲ್ಲಿನಿಂದ ನಿರ್ಮಾಣ ಮಾಡಿದ ದೇವಾಲಯಗಳು, ದೇವಾಲಯಗಳ ವಾಸ್ತು ವಿನ್ಯಾಸವೂ ಕಣ ಶಿಲೆಯಿಂದ ನಿರ್ಮಾಣ ಮಾಡಿದ್ದರೆ, ಕಂಬಗಳು, ಶಿಖರ ಮುಂತಾದವುಗಳು ಸಹ ಕಣಶಿಲೆಯಿಂದ ಕೂಡಿದವಾಗಿರುತ್ತವೆ.

ವಿಜಯನಗರ ಕಾಲದಲ್ಲಿ ಇವರು ಶಿಲ್ಪಕಲೆಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು, ಹಲವಾರು ಮಾಧ್ಯಮಗಳನ್ನು ಬಳಸಿ ಕಲಾಪ್ರಕಾರದ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ, ಗರ್ಭಗುಡಿ ಮತ್ತು ದ್ವಾರ ಮಂಟಪಗಳು ಹೆಚ್ಚಿನದಾಗಿ ಶಿಲೆಗಳಿಂದಲೇ ನಿರ್ಮಾಣವಾಗಿದ್ದು, ಗೋಪುರಗಳು ಇಟ್ಟಿಗೆ ಹಾಗೂ ಗಾರೆಯಿಂದ ಕೂಡಿರುತ್ತವೆ, ಗೋಪುರದ ಸುತ್ತಲೂ ಗಾರೆ ಮತ್ತು ಇಟ್ಟಿಗೆಯಿಂದ ತಯಾರಿಸಿದ ಪರಿವಾರ ದೇವತೆಗಳು ಅವುಗಳಿಗೆ ಪ್ರತ್ಯೇಕ ಚಿಕ್ಕ ಮಂಟಪಗಳು, ದೇವತೆಗಳ ವಾಹನಗಳು, ಜೊತೆಗೆ ವಿವಿಧ ಬಳ್ಳಿಗಳು, ಅಲಂಕಾರಿಕಾ ಚಿತ್ರಗಳನ್ನು ಇದೇ ಮಾಧ್ಯಮಗಳಿಂದ ಮಾಡಿದ್ದಾರೆ, ದೇವತಾ ಶಿಲ್ಪಗಳು, ಮಿಥುನ ಶಿಲ್ಪಗಳು, ಹಾರ ತುರಾಯಿಗಳು ಮುಂತಾದ ಕಲೆಗಳನ್ನು ಮಾಡಿರುತ್ತಾರೆ, ಇದಲ್ಲದೇ ಸ್ಥಳೀಯವಾಗಿ ಲಭ್ಯವಿರುತ್ತಿದ್ದ ಗ್ರಾನೈಟ್ ಕಲ್ಲಿನ ಮಾಧ್ಯಮದಿಂದ ಮೂರ್ತಿ ಶಿಲ್ಪಗಳನ್ನು ಸುಂದರವಾಗಿ ಹಾಗೂ ಸೂಕ್ಷ್ಮವಾಗಿ ಕೆತ್ತಲು ಕಷ್ಟವಾಗುತ್ತಿದ್ದರಿಂದ ಸುಲಭ ರೀತಿಯಲ್ಲಿ ದೊಡ್ಡದಾಗಿ ಕೆತ್ತನೆಮಾಡಿರುತ್ತಾರೆ, ಅಂದರೆ ಮೂರ್ತಿಯ ಅಂಗಾಂಗಗಳು ತುಂಬಾ ದೊಡ್ಡ ರೀತಿಯಲ್ಲಿ ಕಾಣುವಂತೆ ಕೆತ್ತನೆ ಮಾಡಿದ್ದಾರೆ, ಇಂತಹ ಕೆಲಸದಲ್ಲಿ ಹೆಚ್ಚಾಗಿ ಸಂಪ್ರದಾಯ ಶಿಲ್ಪಿಗಳು ಕೆಲಸಮಾಡಿರುತ್ತಾರೆ.

3. ವಿವಿಧ ಕಡೆಗಳಲ್ಲಿ ಸಂಪ್ರದಾಯ ಶಿಲ್ಪಿಗಳಿಂದ ಕೆತ್ತನೆಗೊಂಡ ಶಿಲ್ಪ ವೈವಿಧ್ಯತೆಗಳು :

ಚಿತ್ರದುರ್ಗ ಜಿಲ್ಲೆಯಲ್ಲಿ ಬಹುತೇಕ ಸಂಪ್ರದಾಯ ಶಿಲ್ಪಿಗಳೇ ನಿರ್ಮಾಣ ಮಾಡಿರುವ ದೇವಾಲಯಗಳನ್ನು ಹೆಚ್ಚಾಗಿ ಕಾಣಬಹುದು, ಹೊಸದಾಗಿ ಶಿಲ್ಪಕಲೆಯನ್ನು ಕಲಿತ ಕೆಲಸಗಾರರಿಂದ ಹೆಸರಾಂತ ದೇವಸ್ಥಾನಗಳ ನಿರ್ಮಾಣದ ಕೆಲಸಗಳನ್ನು ಮಾಡಲು ಸಂಪ್ರದಾಯ ಶಿಲ್ಪಿಗಳು ಸೇರಿಸಿಕೊಳ್ಳುತ್ತಿರಲಿಲ್ಲ, ಯಾಕೆಂದರೆ ಒಂದು ಬಾರಿ ಮಾಡಿದ ಮೇಲೆ ಆ ಕಲೆ ಶಾಶ್ವತವಾಗಿ ಇರಬೇಕು, ಪದೇ ಪದೇ ಮಾಡುವ ಕೆಲಸವಲ್ಲ, ನೂರಾರು ಜನರು ಶಿಲ್ಪಕಲೆಯನ್ನು ನೋಡುವುದರಿಂದ, ಶಿಲ್ಪಕಲೆಯು ಸುಂದರವಾಗಿರಬೇಕು ಮತ್ತು ಗುಣ ಮಟ್ಟದಲ್ಲಿರಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ನುರಿತ ಶಿಲ್ಪ ಕಲಾವಿದರನ್ನು ಸೇರಿಸಿಕೊಂಡು ಶಿಲ್ಪ ಕಲೆಯನ್ನು ಮಾಡುತ್ತಿದ್ದರು.

1). ಸಂಪ್ರದಾಯ ಶಿಲ್ಪಿ ನಾಗೇಶ್ ಅವರ ಶಿಲ್ಪಕಲೆ : ಚಿತ್ರದುರ್ಗ ನಗರದ ಖಾಯಂ ವಾಸಿಯಾಗಿರುವ ಸಂಪ್ರದಾಯ ಶಿಲ್ಪಿ ನಾಗೇಶ್ ತಮ್ಮ ತಂದೆಯವರಿಂದ ಬಳುವಳಿಯಾಗಿ ಬಂದಿರುವ ಶಿಲ್ಪಕಲೆಯನ್ನು ಮುಂದುವರಿಸುತ್ತಿದ್ದಾರೆ.

ಇವರ ತಂದೆಯೂ ಕೂಡ ಸಂಪ್ರದಾಯ ಶಿಲ್ಪಿಯಾಗಿದ್ದು ತಮ್ಮ ಜೀವಿತಾವಧಿಯ ವರೆವಿಗೂ ಶಿಲ್ಪಕಲೆಯನ್ನು ಮಾಡುತ್ತಲೇ ಇದ್ದರು, ನಾಗೇಶ್ ಕೂಡ ತಂದೆಯವರ ಜೊತೆಗೆ ಸೇರಿಕೊಂಡು ಸಂಪ್ರದಾಯ ಶಿಲ್ಪಕಲೆಯನ್ನು ಕಲಿತರು, ತಂದೆಯವರಿಗೆ ಮಗನನ್ನು ಓದಿಸಬೇಕು ಎಂಬ ಆಸೆಯಿದ್ದರೂ ಶಾಲೆಗೆ ಕಳುಹಿಸಿದರೆ, ನಾಗೇಶ್ ಶಾಲೆಯಿಂದ ಹೊರಗುಳಿಯುತ್ತಿದ್ದರು, ಬಲವಂತಕ್ಕೆ 6ನೇ ತರಗತಿಯವರೆವಿಗೆ ಮಾತ್ರ ಓದಿದ್ದು ಮುಂದೆ ಓದಲು ನಾಗೇಶ್ ಹಿಂದೇಟು ಹಾಕಿದರು, ಇದನ್ನು ಕಂಡ ತಂದೆಯವರು ಮಗನನ್ನು ಬಲವಂತದಿಂದ ಕಳುಹಿಸುವುದು ಬೇಡವೆಂದು ತಾನು ಕೆಲಸಮಾಡುತ್ತಿದ್ದ ಕಡೆ ಮಗನನ್ನು ಕರೆದುಕೊಂಡು ಹೋಗುತ್ತಿದ್ದರು, ಇದಕ್ಕೆ ಕಾರಣವೂ ಇತ್ತು, ಬಡತನ ಇವರ ಕುಟುಂಬದಲ್ಲಿತ್ತು, ಒಬ್ಬರ ದುಡಿಮೆಯಿಂದ ಕುಟುಂಬದ ನಿರ್ವಹಣೆ ಕಷ್ಟವಾಗುತ್ತದೆ ಎಂದು ತಂದೆಯವರು ಮಾಡುತ್ತಿದ್ದ ಶಿಲ್ಪಕಲೆಯನ್ನು ನೋಡಿ ಅದರಲ್ಲಿ ಆಸಕ್ತಿ ಹೊಂದಿ ನಾಗೇಶ್ ಕಲಿತರು.

ತಂದೆಯವರಿಂದ ಚನ್ನಾಗಿ ಕಲಿತು ಇಂದು ಸ್ವಂತವಾಗಿ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ತಂದೆಯವರ ಜೊತೆಗೆ ಸೇರಿ ಹಲವಾರು ಕಡೆ ಶಿಲ್ಪಕಲೆಯನ್ನು ಮಾಡಿದ್ದಾರೆ, ಇವರ ತಂದೆ ಇಂದು ಇವರೊಟ್ಟಿಗೆ ಇಲ್ಲ ಆದರೆ ತಂದೆಯವರು ಕಲಿಸಿದ ಶಿಲ್ಪಕಲೆ ತನ್ನೊಟ್ಟಿಗೆ ಇದೆ ಎನ್ನುತ್ತಾರೆ ನಾಗೇಶ್.

ಚಿತ್ರದುರ್ಗ ಜಿಲ್ಲೆಯ ಕೆಲವಾರು ಊರುಗಳಲ್ಲಿ ಇರುವ ದೇವಸ್ಥಾನಗಳಲ್ಲಿ ಇವರು ಮಾಡಿದ ಶಿಲ್ಪಕಲೆ ಇದೆ, ಚಿತ್ರದುರ್ಗ ಜಿಲ್ಲೆ ಮಾತ್ರವಲ್ಲದೇ ಬೇರೆ ಬೇರೆ ಜಿಲ್ಲೆಗಳಲ್ಲೂ ಇವರು ಮಾಡಿದ ಶಿಲ್ಪಕಲೆ ಇದೆ, ಚಿತ್ರದುರ್ಗ ನಗರಕ್ಕೆ ಹತ್ತಿರವಿರುವ ಕೆಲವು ಊರಿನವರು ನಾಗೇಶ್ ರವರ ಮನೆಯ ಹತ್ತಿರವೇ ಬಂದು ಶಿಲ್ಪಕಲೆಯನ್ನು ಮಾಡಿಸಿಕೊಂಡು ಹೋಗುತ್ತಾರೆ, ದೂರದ ಊರಿನವರು ತಮ್ಮ ಊರುಗಳಿಗೇ ನಾಗೇಶ್‌ರನ್ನು ಕರೆಸಿಕೊಂಡು ಶಿಲ್ಪಕಲೆಯನ್ನು ಮಾಡಿಸುತ್ತಾರೆ.

ಚಿಕ್ಕ ಚಿಕ್ಕ ಅಳತೆಯ ಶಿಲ್ಪಗಳನ್ನಾದರೆ ತಮ್ಮ ಮನೆಯ ಮುಂದೆ ಮಾಡಿಕೊಡುತ್ತಾರೆ, ದೊಡ್ಡ ಗಾತ್ರದ ಶಿಲ್ಪಗಳು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಮಾಡುವ ಶಿಲ್ಪಗಳಿದ್ದರೆ ಅವರ ಊರಿಗೇ ಹೋಗಿ ಮಾಡಿಕೊಟ್ಟು ಬರುತ್ತಾರೆ, ತಮ್ಮ ಸ್ವಂತ ಊರು ಚಿತ್ರದುರ್ಗದಿಂದ ದೂರದ ಊರುಗಳಲ್ಲಿ ಶಿಲ್ಪಕಲೆಯನ್ನು ಮಾಡುವುದಿದ್ದರೆ, ಪ್ರತಿನಿತ್ಯ ತಮ್ಮ ಉರಿಗೆ ಸಂಚಾರ ಮಾಡಲು ಬಸ್ಸಿನ ಸೌಕರ್ಯ ಇಲ್ಲದಿದ್ದರೆ, ಕೆಲಸ ಮಾಡುವ ಊರಿನಲ್ಲಿ ಉಳಿದುಕೊಳ್ಳಬೇಕಾಗುತ್ತದೆ, ದೇವಸ್ಥಾನಗಳೇ ವಾಸಸ್ಥಳವಾಗಿರುತ್ತದೆ, ಅಲ್ಲಿನ ಕೆಲಸ ಮುಗಿಯುವವರೆವಿಗೂ ಅದೇ ಊರಿನಲ್ಲಿ, ದೇವಸ್ಥಾನದಲ್ಲಿ ಉಳಿದುಕೊಂಡು ಅಡುಗೆ, ತಿಂಡಿ ಮಲಗುವ ವ್ಯವಸ್ಥೆಯನ್ನೂ ಮಾಡಿಕೊಳ್ಳುತ್ತಾರೆ, ಚಿತ್ರದುರ್ಗದಿಂದ ಶಿಲ್ಪಕಲೆಯ ಕೆಲಸವನ್ನು ಮಾಡುವ ಊರು ಅಥವಾ ಸ್ಥಳ ಹತ್ತಿರವಿದ್ದರೆ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಕೆಲಸವನ್ನು ಮಾಡಿ ಬರುತ್ತಾರೆ.

ದೇವಸ್ಥಾನದ ಶಿಖರ, ಶಿಖರದಲ್ಲಿರಬೇಕಾದ ಕಲೆಗಳು, ಮೂರ್ತಿಗಳು, ದೇವತಾ ರೂಪಗಳು, ಪ್ರಾಣಿ ಪಕ್ಷಿಗಳು, ಇತರೆ ವಿಧವಾದ ಕಲೆಗಳನ್ನು ಮಾಡುತ್ತಾರೆ, ರಾಜ ಗೋಪುರ, ಸಿಮೆಂಟಿನ ಕಂಬಗಳು, ಕಂಬದಲ್ಲಿ ಬಳ್ಳಿಗಳೂ, ಇತರೆ ಕಲಾತ್ಮಕ ಕೆಲಸವನ್ನೂ ಮಾಡುತ್ತಾರೆ, ಮಾಡಿದ್ದಾರೆ ಕೂಡ.

ಒಂದು ದೇವಸ್ಥಾನವನ್ನು ತಳಮಟ್ಟದಿಂದ ಶಿಖರದ ವರೆವಿಗೂ ಕಟ್ಟುತ್ತಾರೆ, ನಾಗೇಶನ ಜೊತೆಗೆ ಸಹಾಯಕರಾಗಿ ಒಂದಿಬ್ಬರು ಇರುತ್ತಾರೆ, ಅಗತ್ಯವಿದ್ದಾಗ ಇನ್ನೂ ಹೆಚ್ಚಿನ ಕೆಲಸಗಾರರನ್ನು ಸೆರಿಸಿಕೊಳ್ಳುತ್ತಾರೆ, ಸಹಾಯಕರು ಬಾರದಿದ್ದಾಗ ಇವರೊಬ್ಬರೇ ಕೆಲಸ ಮಾಡುತ್ತಾರೆ, ನಿರ್ಮಾಣಕಾರರಿಂದ ಇಷ್ಟೇ ದಿನದಲ್ಲಿ ಕೆಲಸವನ್ನು ಮುಗಿಸಿಕೊಡುತ್ತೇವೆ ಎಂದು ಒಪ್ಪಂದ ಮಾಡಿಕೊಂಡಿರುತ್ತಾರೆ ಆ ಕಾರಣಕ್ಕೆ ಕೆಲಸವನ್ನು ಎಂದಿಗೂ ನಿಲ್ಲಿಸಬಾರದು ಎಂಬುದು ಇವರ ಧ್ಯೇಯ, ಬೇರೆ ಊರಿನಲ್ಲಿ ಕೆಲಸವನ್ನು ಮಾಡುವಾಗ ವಾರಗಟ್ಟಲೇ ಅಥವಾ ತಿಂಗಳಾನುಗಟ್ಟಲೇ ತಮ್ಮ ಊರಿಗೆ ಹೋಗುವುದಿಲ್ಲ, ಹೆಂಡತಿ ಮಕ್ಕಳ ಮುಖವನ್ನೂ ನೋಡಲು ಆಗದೇ ಕೆಲಸದಲ್ಲಿ ತಲ್ಲೀನರಾಗಿ ಕೆಲಸ ಮಾಡುವ ಪರಿಸ್ಥಿತಿ ಇರುತ್ತದೆ.

ಇವರ ಮನೆಯವರು ಯಾರೂ ನಾಗೇಶನ ಕೆಲಸದಲ್ಲಿ ಸಹಾಯಕ್ಕೆ ಬರುವುದಿಲ್ಲ, ಅವರಲ್ಲಿ ಯಾರಿಗೂ ತಂದೆಯ ಸಂಪ್ರದಾಯ ಶಿಲ್ಪಕಲೆಯನ್ನು ಕಲಿಯುವ ಆಸಕ್ತಿ ಇಲ್ಲ, ಇವರ ಹೆಂಡತಿಗೆ ಮನೆಯ ಕೆಲಸ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿಯೇ ಸಮಯ ಸಾಕಾಗುತ್ತದೆ, ಅದೂ ಅಲ್ಲದೇ ಕಲೆಯ ಬಗ್ಗೆ ಅವರಿಗೆ ಅಷ್ಟೊಂದು ಆಸಕ್ತಿ ಇಲ್ಲ, ಮೂರು ಜನ ಮಕ್ಕಳಿದ್ದು ದೊಡ್ಡವನು ಖಾಸಗಿಯಾಗಿ ಕೊಳಾಯಿ ರಿಪೇರಿ ಮಾಡುವ ಕೆಲಸವನ್ನು ಮಾಡುತ್ತಿದ್ದಾನೆ, ಕೆಲಸವಿಲ್ಲದಿದ್ದರೆ ಬರೀ ಕೈಯಲ್ಲಿ ಮನೆಗೆ ಬರಬೇಕು ಇದು ಅವರಿಗೆ ಸವಾಲಿನ ಸಂಗತಿಯೇ ಸರಿ, ಆದರೆ ಸಂಪ್ರದಾಯ ಶಿಲ್ಪಕಲೆಯನ್ನು ಕಲಿತು ಅದರಲ್ಲಿ ನಿರತನಾಗಿದ್ದರೆ ಅದರಲ್ಲಿ ಸಿಗುವ ಸಂತೋಷ, ತೃಪ್ತಿ ಬೇರೆ

ಕಟ್ಟಲಾಗದು, ಈ ಸತ್ಯ ಗೊತ್ತಿಲ್ಲದೇನೂ ಇಲ್ಲ, ಆದರೆ ಯಾಕೋ ಅವರಿಗೆ ಇದರಲ್ಲಿ ಆಸಕ್ತಿ ಇಲ್ಲ, ಇನ್ನು ಎರಡನೆಯವಳು ಹೆಣ್ಣು ಮಗು ಆಕೆಯನ್ನು ಮದುವೆ ಮಾಡಿ ಕೊಟ್ಟಿದ್ದಾರೆ, ಇನ್ನು ಮೂರನೇ ಮಗು ಅಂಗವಿಕಲ, ಹುಟ್ಟಿದಂದಿನಿಂದಲೂ ಈತ ಅಂಗವಿಕಲ, ಇಂದಿಗೆ 25 ವರ್ಷ ವಯಸ್ಸಾಗಿದೆ ಆದರೂ ಎನೂ ಗೊತ್ತಾಗುವುದಿಲ್ಲ, ಬುದ್ದಿ ಭ್ರಮಣೆಯಿಂದ ಯಾವ ಕೆಲಸವನ್ನೂ ಮಾಡಲು ಆತನಿಗೆ ಆಗುತ್ತಿಲ್ಲ, ನಾಗೇಶ್ ಒಬ್ಬರೇ ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದು ಅದರಿಂದ ಬಂದ ಹಣದಿಂದ ಕುಟುಂಬದ ನಿರ್ವಹಣೆ ಮಾಡುತ್ತಿದ್ದಾರೆ.

ಶಿಲ್ಪಕಲೆಯನ್ನು ಮಾಡಲು ಬಳಸುವ ಮಾಧ್ಯಮ : ನಾಗೇಶ್‌ರವರ ತಂದೆಯವರು ಮಾಡುತ್ತಿದ್ದ ಸಂಪ್ರದಾಯ ಶಿಲ್ಪಕಲೆಯ ಮಾಧ್ಯಮ ಸಿಮೆಂಟ್, ಇವರೂ ಸಹ ಸಿಮೆಂಟ್ ಮಾಧ್ಯಮವನ್ನೇ ತಮ್ಮ ಶಿಲ್ಪ ಕಲೆಯನ್ನು ಮಾಡಲು ಬಳಸುತ್ತಿದ್ದಾರೆ, ಸಿಮೆಂಟ್, ಕಬ್ಬಿಣ, ಮರಳು, ಬಿಳಿ ಸಿಮೆಂಟ್ ಮತ್ತು ಮಾರ್ಬಲ್ ಪೌಡರ್‌ಗಳನ್ನು ತಮ್ಮ ಶಿಲ್ಪಕಲೆಯನ್ನು ಮಾಡಲು ಬಳಸುತ್ತಾರೆ, ಶಿಖರವನ್ನು ಕಟ್ಟಲು ಇಟ್ಟಿಗೆ, ಕಬ್ಬಿಣವನ್ನು ಬಳಸಿದರೆ, ಮೂರ್ತಿಗಳನ್ನು ಮಾಡಲು ಅಚ್ಚುಗಳನ್ನು ಕೆಲವು ಸಂದರ್ಭಗಳಲ್ಲಿ ಬಳಸುತ್ತಾರೆ.

ದೇವಸ್ಥಾನ, ಶಿಖರ ಹಾಗೂ ಮೂರ್ತಿ ಶಿಲ್ಪಗಳ ರಚನಾ ವಿಧಾನ : ದೇವಸ್ಥಾನದ ಪೂರ್ಣ ಪ್ರಮಾಣದ ನಿರ್ಮಾಣವನ್ನು ಗುತ್ತಿಗೆ ಪಡೆದು ಕೆಲವೊಂದು ದೇವಸ್ಥಾನವನ್ನು ಮಾಡಿದ್ದಾರೆ, ಇಂತಹ ದೇವಸ್ಥಾನಗಳನ್ನು ನಿರ್ಮಾಣ ಮಾಡುವಾಗ ಮೊದಲು ಜಾಗವನ್ನು ಸಮತಟ್ಟು ಮಾಡಿ, ಇರುವ ಜಾಗಕ್ಕೆ ಸರಿಯಾಗಿ ಅಥವಾ ದೇವಸ್ಥಾನ ನಿರ್ಮಿಸಲು ಊರಿನವರು, ದೇವಸ್ಥಾನ ಕಮಿಟಿಯವರು ನಿಗದಿ ಮಾಡಿದ ಅಳತೆಗೆ ಸರಿಯಾಗಿ ಧ್ವಜಾಯ, ಸಿಂಹಾಯ ಎಂಬ ವಾಸ್ತು ಪ್ರಕಾರದ ಆಯಗಳನ್ನು ಹಾಕಿಕೊಂಡು ತಳವಿನ್ಯಾಸ ಮಾಡುತ್ತಾರೆ, ದೇವಸ್ಥಾನ, ಕೋರ್ಟು, ಸರ್ಕಾರಿ ಕಟ್ಟಡಗಳು, ಪೋಲಿಸ್ ಸ್ಟೇಷನ್ನು, ಆಸ್ಪತ್ರೆ ಮುಂತಾದವುಗಳಿಗೆ ವಾಸ್ತು ಪ್ರಕಾರ ಇಂತದೇ ಆಯಗಳನ್ನು ಹಾಕಬೇಕು, ಮನೆಗಳಿಗೆ ಆದರೆ ಹೆಚ್ಚಾಗಿ ವೃಷಭಾಯ ಹಾಕುತ್ತಾರೆ.

ದೇವಾಲಯವನ್ನು ಕಟ್ಟಿ, ಅದರ ಮೇಲೆ ಶಿಖರವನ್ನು ಇಟ್ಟಿಗೆ ಹಾಗೂ ಕಬ್ಬಿಣ, ಸಿಮೆಂಟ್‌ನ್ನು ಬಳಸಿ ಕಟ್ಟುತ್ತಾರೆ, ದೇವಸ್ಥಾನಗಳಿಗೆ ಹೆಚ್ಚಾಗಿ ಧ್ವಜಾಯ ಅಥವಾ ಸಿಂಹಾಯವನ್ನು ಮಾತ್ರ ಬಳಸುತ್ತಾರೆ, ದೇವಸ್ಥಾನದ ಶಿಖರವನ್ನು ಗರ್ಭಗುಡಿಯ ಮೇಲೆ ಕಟ್ಟಲಾಗುತ್ತದೆ, ಹೀಗೆ ಕಟ್ಟಲಾಗುವ ಶಿಖರಕ್ಕೆ ಬೆಸ ಸಂಖ್ಯೆಯ ಅಳತೆಯನ್ನು ಬಳಸಲಾಗುತ್ತದೆ, 05ಅಡಿಯಿಂದ 25ಅಡಿಯವರೆವಿಗೂ ಶಿಖರವನ್ನು ಕಟ್ಟುತ್ತಾರೆ, ಕೆಲವು ದೇವಸ್ತಾನಗಳಿಗೆ ಮಾತ್ರ ಇದಕ್ಕೂ ಹೆಚ್ಚು ಅಳತೆಯನ್ನು ಬಳಸುತ್ತಾರೆ, ಆದರೆ 25ಅಡಿಗೂ ಹೆಚ್ಚಿನ ಎತ್ತರವಿರುವ ಶಿಖರಗಳನ್ನು ಕಟ್ಟಿರುವ ದೇಸ್ಥಾನಗಳು ತುಂಬಾವಿರಳ, 25ಅಡಿಗಳ ಶಿಖರವನ್ನೇ ಹೆಚ್ಚಾಗಿ ಬಳಸುತ್ತಾರೆ, ಇದರಲ್ಲಿ ಶಿಖರದ ಮೇಲೆ ಇರುವ ಕಳಸವೂ ಸೇರಿರುತ್ತದೆ, ನಾಗೇಶ್ ಮಾಡಿರುವ ದೇವಸ್ಥಾನಗಳಲ್ಲಿ 25ಅಡಿಗಳ ಶಿಖರವನ್ನು ಎಲ್ಲಾ ಕಡೆಗಳಲ್ಲಿ ಮಾಡಿರುವುದು.

ಶಿಖರವನ್ನು ಬೇಕಾದ ಮಾದರಿಯಲ್ಲಿ ಮಾಡಿದ ತರುವಾಯ, ಶಿಖರದ ನಾಲ್ಕು ದಿಕ್ಕಿನ ಕಡೆ ಮೂರ್ತಿಗಳನ್ನು ಮಾಡಲು ಚಿಕ್ಕ ಚಿಕ್ಕ ಗೂಡುಗಳನ್ನು ಮಾಡಿಕೊಂಡು ಆ ಗೂಡುಗಳಲ್ಲಿ ಮೂರ್ತಿಗಳನ್ನು ಮಾಡುತ್ತಾರೆ, ಕೆಲವು ಮೂರ್ತಿಗಳನ್ನು ನೆಲದ ಮೇಲೆ ಮುಕ್ಕಾಲು ಭಾಗದಷ್ಟು ಮಾಡಿಕೊಂಡು 21ದಿನ ನೀರಿನಲ್ಲಿ ಚನ್ನಾಗಿ ಕ್ಯೂರಿಂಗ್ ಮಾಡಿ ಆನಂತರ ಶಿಖರಗಳಲ್ಲಿ ನಿರ್ಧಿಷ್ಟ ಜಾಗದಲ್ಲಿ ಮತ್ತು ಶಿಖರದಲ್ಲಿ ಮೊದಲೇ ಮಾಡಿಕೊಂಡ ಚಿಕ್ಕ ಚಿಕ್ಕ ಗೂಡುಗಳ ಒಳಗೆ

ಮೂರ್ತಿಗಳನ್ನು ಕೂರಿಸಿ ಮೂರ್ತಿಗಳಿಗೆ ಬಿಳಿ ಸಿಮೆಂಟ್‌ನಿಂದ ಅಂತಿಮ ಸ್ಪರ್ಷ(ಟಚಪ್)ಮಾಡುತ್ತಾರೆ.

ಹೀಗೆ ಪ್ರತಿಯೊಂದು ಮೂರ್ತಿಗಳನ್ನು ಶಿಖರದ ಸುತ್ತಲೂ ಮಾಡಿದ ಮೇಲೆ, ಉಳಿದಂತೆ ಮೂಲೆಗಳಲ್ಲಿ ಆಯಾ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಯಾಗಿರುವ ದೇವರುಗಳ ವಾಹನಗಳ ಶಿಲ್ಪಗಳನ್ನು ಮಾಡುತ್ತಾರೆ, ಶಿಖರದಲ್ಲಿ ಖಾಲಿ ಜಾಗ ಇರುವ ಕಡೆಗಳಲ್ಲೆಲ್ಲಾ ವಿವಿಧ ಆಕಾರಗಳು, ಬಳ್ಳಿ, ಹೂವು, ಪ್ರಾಣಿ, ಪಕ್ಷಿಗಳ ಶಿಲ್ಪಗಳನ್ನು, ಇತರೆಕುಸುರಿ ಕೆತ್ತನೆಯನ್ನು ಮಾಡುತ್ತಾರೆ, ಶಿಖರದ ತುಂಬಾ ಶಿಲ್ಪಗಳನ್ನು ಮಾಡಿದ ತರುವಾಯ 21ದಿನಗಳು ನೀರಿನಿಂದ ಕ್ಯೂರಿಂಗ್ ಮಾಡಿ ಆಮೇಲೆ ಒಂದು ತಿಂಗಳು ನೀರಿನ ಅಂಶ ಆರಿದ ಮೇಲೆ ಬಣ್ಣ ಹಾಕುತ್ತಾರೆ, ಅಲ್ಲಿಗೆ ಶಿಖರದ ಕೆಲಸ ಮುಗಿದಂತೆ.

ದೇವಸ್ಥಾನದ ಸಂಪೂರ್ಣ ಕೆಲಸ, ಅಂದರೆ ತಳಪಾಯದಿಂದ ಕಳಸದವರೆವಿಗೂ ಗುತ್ತಿಗೆ ಪಡೆದು ಮಾಡುತ್ತಾರೆ, ಶಿಖರ ಕಟ್ಟುವುದು ಮತ್ತು ಶಿಖರದ ಸುತ್ತಲೂ ವಿವಿಧ ಮೂರ್ತಿಗಳನ್ನು ಮಾಡಿಕೊಡುವುದು, ಅಥವಾ ಶಿಲ್ಪಗಳನ್ನಷ್ಟೇ ಮಾಡಿಕೊಡುವುದು, ಯಾವ ರೀತಿಯ ಕೆಲಸವನ್ನೇ ಆಗಲಿ ಗುತ್ತಿಗೆ ಪಡೆದುಕೊಂಡು ಮಾಡುತ್ತಾರೆ ನಾಗೇಶ್, ಬುನಾದಿಯ ಮಟ್ಟದಿಂದ ಹಿಡಿದು ಕಳಸದವರೆವಿಗೂ ಆಯಾಯ ಭಾಗಕ್ಕೆ ಪ್ರತ್ಯೇಕ ದರವನ್ನು ನಿಗದಿ ಮಾಡುತ್ತಾರೆ, ಮೂರ್ತಿಗಳನ್ನು ಮಾಡಲು ಅದರ ಎತ್ತರ ಹಾಗೂ ಅಗಲವನ್ನು ಪರಿಗಣಿಸಿ ಹಣವನ್ನು ಪಡೆಯುತ್ತಾರೆ.

ಗುತ್ತಿಗೆ ಪಡೆಯುವಾಗ ನಿಗದಿ ಮಾಡಿದ ಮೊತ್ತದಲ್ಲಿ ಮೂರನೇ ಒದು ಭಾಗದಷ್ಟು ಹಣವನ್ನು ಮಂಗಡವಾಗಿ ಪಡೆಯುತ್ತಾರೆ, ಅರ್ಧ ಕೆಲಸ ಮುಗಿದ ಮೇಲೆ ಉಳಿದ ಹಣದಲ್ಲಿ ಕಾಲುಭಾಗದಷ್ಟು ಹಣವನ್ನು ಪಡೆಯುತ್ತಾರೆ, ಅಲ್ಲಿಗೆ ಅರ್ಧದಷ್ಟು ಹಣವನ್ನು ಪಡೆದಿರುತ್ತಾರೆ, ಉಳಿದ ಅರ್ಧದಷ್ಟು ಹಣ ಪೂರ್ತಿ ಕೆಲಸ ಮುಗಿದ ಮೇಲೆ ಪಡೆಯುತ್ತಾರೆ, ಉದಾ: 50,000–00ರೂಗಳಿಗೆ ಗುತ್ತಿಗೆ ಪಡೆದಿದ್ದರೆ, ಒಪ್ಪಂದ ಅಥವಾ ಗುತ್ತಿಗೆ ಪಡೆದ ದಿನ 10,000–00ರೂಗಳನ್ನು ಪಡೆದು, ಅರ್ಧ ಕೆಲಸ ಆದ ಮೇಲೆ 15,000–00ರೂಗಳು, ಉಳಿದ ಹಣ 25,000–00ರೂಗಳನ್ನು ಕೆಲಸ ಪೂರ್ತಿ ಮುಗಿದ ಮೇಲೆ ಪಡೆಯುತ್ತಾರೆ.

ಒಂದೂವರೆ ಅಡಿ ಅಗಲ ಎರಡೂವರೆ ಅಡಿ ಎತ್ತರದ ಮೂರ್ತಿಗೆ(ಶಿಲ್ಪಕ್ಕೆ), 5,000–00ರೂಗಳಿಂದ 6,000–00ರೂಗಳಿಗೆ ದರ ನಿಗದಿ ಇರುತ್ತದೆ, ಬಳ್ಳಿ, ಎಲೆ, ಹೂವು, ಪ್ರಾಣಿ, ಪಕ್ಷಿಗಳು, ವಿವಿಧ ರೀತಿಯ ದೇವತಾ ಮೂರ್ತಿಗಳು, ಮಾನವನಾಕೃತಿಗಳ ಶಿಲ್ಪಗಳಿಗೆ ಬೇರೆ ಬೇರೆ ದರ ನಿಗದಿ ಮಾಡುತ್ತಾರೆ.

ದೇವಸ್ಥಾನದ ಕೆಲಸ ಅಥವಾ ಶಿಖರದ ಕೆಲಸ ಮಾಡಲು ಒಂದು ತಿಂಗಳಿನಿಂದ ಮೂರು ತಿಂಗಳು, ಆರು ತಿಂಗಳು ಅಥವಾ ವರ್ಷಾನುಗಟ್ಟಲೇ ಹಿಡಿಯ ಬಹುದು, ಈ ಕೆಲಸಕ್ಕೆ ನಾಗೇಶನ ಸಹಾಯಕ್ಕೆ ನಾಲ್ಕೈದು ಹುಡುಗರು ಇದ್ದು ಇವರಿಗೆ ಒಂದು ದಿನಕ್ಕೆ ಐದು ನೂರು (500–00)ರೂಗಳಿಂದ ಒಂದು ಸಾವಿರ(1,000–00)ರೂಗಳವರೆವಿಗೂ ಸಂಭಾವನೆಯನ್ನು ಕೊಡುತ್ತಾರೆ, ಜೊತೆಗೆ ಕೆಲಸ ಮುಗಿಯುವವರೆಗೂ ಊಟದ ವ್ಯವಸ್ಥೆಯನ್ನೂ ನೋಡಿಕೊಳ್ಳಬೇಕು, ಇದಲ್ಲದೇ ಸಹಾಯಕರು ಕೆಲಸ ಮಾಡುವ ಸಮಯದಲ್ಲಿ ಏನಾದರೂ ಅನಾಹುತವಾದರೆ ಅದರ ಸಂಪೂರ್ಣ ಜವಾಬ್ದಾರಿಯನ್ನೂ ಗುತ್ತಿಗೆ ಪಡೆದ ಶಿಲ್ಪಿಯೇ ನೋಡಿಕೊಳ್ಳಬೇಕು, ಎಲ್ಲಾ ಖರ್ಚು ವೆಚ್ಚಗಳನ್ನು ತೆಗೆದು ಉಳಿದ ಹಣದಲ್ಲಿ ಶಿಲ್ಪಿಯ ಜೀವನ ನಿರ್ವಹಣೆ ನಡೆಯುತ್ತದೆ, ಒಂದು ಕೆಲಸ ಮುಗಿದ ಮೇಲೆ ಮತ್ತೊಂದು ಕೆಲಸ ದೊರೆತರೆ ಜೀವನ ನಿರ್ವಹಣೆ ನಡೆಯುತ್ತದೆ, ಕೆಲಸ ಸಿಗದಿದ್ದಾಗ

ಜೀವನ ನಡೆಸಲು ಕಷ್ಟವಾಗುತ್ತದೆ, ಒಮ್ಮೊಮ್ಮೆ ಒಂದರ ಹಿಂದೆ ಒಂದು ಕೆಲಸ ದೊರೆಯುತ್ತದೆ, ಕೆಲವು ಸಲ ವರ್ಷಾನುಗಟ್ಟಲೇ ಯಾವುದೇ ಕೆಲಸ ಸಿಗದೆಯೂ ಇರಬಹುದು.

ಕೆಲಸ ಸಿಗದಿದ್ದರೆ ಶಿಲ್ಪಿಗಳ ಕುಟುಂಬ ಕಷ್ಟಕ್ಕೆ ಸಿಲುಕುತ್ತದೆ, ಇಂತಹ ಸಮಯದಲ್ಲಿ ಸರ್ಕಾರ, ಸಂಘ, ಸಂಸ್ಥೆಗಳು, ಅಕಾಡೆಮಿಗಳು ಕಲಾವಿದರಿಗೆ ಸಹಾಯ, ಸಹಕಾರ ನೀಡಿದರೆ ಕಲಾವಿದರ ಜೀವನ ಸಾಧಾರಣ ಮಟ್ಟಿಗೆ ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದೆ ಎನ್ನುತ್ತಾರೆ ಶಿಲ್ಪಿ ನಾಗೇಶ್, ಒಂದು ಬಾರಿ ಕೆಲಸವಿದ್ದರೆ ಸಹಾಯಕರು ಸರಿಯಾದ ಸಮಯಕ್ಕೆ ಬರುವುದಿಲ್ಲ ಅಂತಹ ಸಮಯದಲ್ಲಿ ಗುತ್ತಿಗೆ ಪಡೆದ ಶಿಲ್ಪಿಯೇ ಬಿಡುವಿಲ್ಲದಂತೆ ಒಪ್ಪಿಕೊಂಡ ಕೆಲಸವನ್ನು ಮಾಡಬೇಕಾಗುತ್ತದೆ, ಒಟ್ಟಾರೆ ಶಿಲ್ಪಗಳ ಜೀವನ ಕಷ್ಟದಾಯಕವಾಗಿರುತ್ತದೇ ವಿನಃ ಎಂದೂ ಸುಖವಾಗಿರುವುದಿಲ್ಲ ಎನ್ನುತ್ತಾರೆ ನಾಗೇಶ್, ಆದರೆ ತಾವು ಮಾಡಿದ ಶಿಲ್ಪಕಲೆಯನ್ನು ನೋಡಿ ಜನರು ಹೊಗಳಿಕೆಯ ಮಾತುಗಳನ್ನು ಆಡಿದಾಗ ಆಗುವ ಸಂತೋಷ ದೊಡ್ಡದು, ಜನರ ಮೆಚ್ಚುಗೆ, ಶಹಬ್ಬಾಶ್‌ಗಿರಿ ಶಿಲ್ಪಿಗಳಿಗೆ ಸಿಗುವ ಬೆಲೆ ಕಟ್ಟಲಾಗದ ಮೊತ್ತ, ಇದು ಕಲಾವಿದರಿಗೆ ತೃಪ್ತಿದಾಯಕ ಎನ್ನವುದು ಕಲಾವಿದರ ಮನದಾಳದ ಮಾತುಗಳು.

ನಾಗೇಶ್ ಮಾಡಿರುವ ಶಿಲ್ಪಕಲೆಯುಳ್ಳ ದೇವಸ್ಥಾನಗಳ ವಿವಿರ: ನಾಗೇಶ್ ಎಲ್ಲಾ ರೀತಿಯ ದೇವಸ್ಥಾನಗಳನ್ನು ಮಾಡಿದ್ದು ಚಿತ್ರದುರ್ಗ ನಗರ ವ್ಯಾಪ್ತಿಯಲ್ಲಿ ಅಲ್ಲದೇ ಜಿಲ್ಲೆಯ ಹೊರಗಿನ ಊರುಗಳಲ್ಲೂ, ತಾಲ್ಲೂಕುಗಳಲ್ಲೂ, ಹೊರ ಜಿಲ್ಲೆಗಳಲ್ಲೂ ದೇವಸ್ಥಾನಗಳನ್ನು, ಶಿಲ್ಪಕಲೆಯನ್ನು ಮಾಡಿದ್ದಾರೆ, ಅವುಗಳು ಈ ಕೆಳಗಿನಂತಿವೆ.

1). ಹುಲಿಕೆರೆ, ಕಸವನ ಹಳ್ಳಿ ಹತ್ತಿರ ನಿರ್ಮಾಣ ಮಾಡಿರುವ ಆಂಜನೇಯ ದೇವಸ್ಥಾನ, ಇದು ಮೊದಲಿಗೆ ತನ್ನ ತಂದೆಯವರ ಜೊತೆಯಲ್ಲಿ ಮಾಡಿದ ಶಿಲ್ಪಕಲಾ ಕೆಲಸ.

2). ತುರುವ ನೂರು ಗ್ರಾಮದ ಸರ್ಕಲ್ ಗಣಪತಿ.

3). ಬೆಳಗಟ್ಟ ಗ್ರಾಮದ ಆಂಜನೇಯ ದೇವಸ್ಥಾನ.

4). ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕೆಲವಾರು ಹಳ್ಳಿಗಳ ದೇವಸ್ಥಾನಗಳಲ್ಲಿ ಶಿಲ್ಪಕಲೆಯನ್ನು ಮಾಡಿದ್ದಾರೆ.

5). ಜಾಜೂರು ಗ್ರಾಮದ ದೊಡ್ಡ ಕರಿಯಮ್ಮ ಮತ್ತು ಸಣ್ಣ ಕರಿಯಮ್ಮ ದೇವಸ್ಥಾನದ ಶಿಲ್ಪಕಲೆ.

ಮೊದಲು ಶಿಲ್ಪಕಲಾವಿದರ ಮತ್ತು ಕೂಲಿಕಾರರ ಸಂಘವನ್ನು ಮಾಡಿದ್ದು ಸರಿಯಾದ ಮಾರ್ಗದರ್ಶಕರು ಇಲ್ಲದ ಕಾರಣ ಸಂಘವು ನಿಂತು ಹೋಯಿತು, ಇದುರೆವಿಗೂ ಸರ್ಕಾರದಿಂದಾಗಲಿ, ಸಂಘ ಸಂಸ್ಥೆಗಳಿಂದಾಗಲೀ ಮತ್ತಾರಿಂದಲೂ ಯಾವುದೇ ರೀತಿಯ ಸವಲತ್ತು, ಸಹಕಾರವನ್ನು ಶಿಲ್ಪಿ ನಾಗೇಶ್ ಪಡೆದಿಲ್ಲವಂತೆ, ಸರ್ಕಾರ ನಮ್ಮಂತಹ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ, ನಮ್ಮಂತಹವರನ್ನು ಗುರುತಿಸಿ ನಮಗೆ ಸಹಾಯ ನೀಡಿದರೆ ಕಲಾವಿದರ ಭಾಳು ಸುಧಾರಿಸುತ್ತದೆ ಎಂಬುದು ಎಲ್ಲಾ ಕಲಾವಿದರ ಪರವಾಗಿ ನಾಗೇಶ್ ಅವರ ಕಳ ಕಳಿಯಾಗಿದೆ.

ಮನೆ ಕಟ್ಟಿಕೊಳ್ಳಲು ಸಾಲದ ರೂಪದಲ್ಲಿ ಹಣ, ಅಥವಾ ಅನುದಾನವನ್ನು ನೀಡಬೇಕು. ನಮ್ಮಂತಹ ಕಲಾವಿದರು ಮಾಡಿದ ಕಲೆಗೆ ಪ್ರೋತ್ಸಾಹ ಧನವನ್ನು ನೀಡಬೇಕು, ಅಥವಾ ಕಲಾಕೃತಿಗಳನ್ನು ಖರೀದಿಸಬೇಕು, ವಿವಿಧ ಸ್ಥಳದಲ್ಲಿ ಕಲಾ ಪ್ರದರ್ಶನ ನಡೆಸಿ ಕೊಂಡುಕೊಳ್ಳುವವರಿಗೆ ವ್ಯವಸ್ಥೆ ಮಾಡಬೇಕು, ಜೊತೆಗೆ ಪ್ರೋತ್ಸಾಹ ಧನವನ್ನು ಕಲಾವಿದರಿಗೆ ನೀಡಬೇಕು, ಕಲಾವಿದರು ಕೆಲಸವಿಲ್ಲದೆ ಮನೆಯಲ್ಲಿ ಸುಮ್ಮನೇ ಕುಳಿತಿರುವಾಗ ಸರ್ಕಾರ ಕಲಾವಿದರನ್ನು ಆಹ್ವಾನಿಸಿ, ಶಿಲ್ಪಕಲೆಯನ್ನು ಮಾಡಲು ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಕೊಟ್ಟು ಕೆಲವು ಶಿಲ್ಪಕಲೆಗಳನ್ನು ಮಾಡಿಸಿ, ಕಲಾವಿದರಿಗೆ ಸೂಕ್ತ ಸಂಭಾವನೆಯನ್ನು ಕೊಟ್ಟರೆ ಕಲಾವಿದರೂ ಉಳಿಯುತ್ತಾರೆ, ಕಲೆಯೂ

ಉಳಿಯುತ್ತವೆ ಎನ್ನುತ್ತಾರೆ ನಾಗೇಶ್, ಇವರ ಶಿಲ್ಪಕಲೆಯನ್ನು ಮೆಚ್ಚಿ ದೇವಸ್ಥಾನ ಸಮಿತಿಯವರು, ಸಂಘ, ಸಂಸ್ಥೆಗಳವರು ನೆನಪಿನ ಕಾಣಿಕೆಗಳನ್ನು ನೀಡಿ ಸತ್ಕರಿಸಿದ್ದಾರೆ.

ವಿಳಾಸ : ಶಿಲ್ಪಿ ನಾಗೇಶ್ ಬಿನ್ ಸಣ್ಣ ಪಾಲಯ್ಯ, ಮಾರಿಕಾಂಭ ದೇವಸ್ಥಾನದ ಹತ್ತಿರ, 6ನೇ ಕ್ರಾಸ್,]ಸಿ. ಕೆ. ಪುರ ಬಡಾವಣೆ, ಚಿತ್ರದುರ್ಗ. ಮೊ : 9741259223.

2). ಶಿಲ್ಪಿ ರಾಮು(ಡಿ. ಟಿ. ರಮೇಶ್) ಚಿತ್ರದುರ್ಗ: ಚಿತ್ರದುರ್ಗ ನಗರದ ವಾಸಿ ಕೆ. ಆರ್. ತಿಪ್ಪೇಸ್ವಾಮಿ ಇವರ ಮಗ ಡಿ.ಟಿ. ರಮೇಶ್(ಆರ್ಟಿಸ್ಟ್ ರಾಮು). ತಮ್ಮ ಬಾಲ್ಯದ ದಿನಗಳಿಂದಲೂ ಕಲೆಯನ್ನು ಒಗ್ಗೂಡಿಸಿಕೊಂಡವರು, ಕಲೆಯಲ್ಲಿ ಚಿಕ್ಕ ವಯಸ್ಸಿನಿಂದಲೇ ಎಲ್ಲಿಲ್ಲದ ಆಸಕ್ತಿ, ತಮ್ಮ ತಂದೆಯವರಿಗೆ ಎರಡನೇ ಮಗನಾಗಿ ಜನಿಸಿದ ಇವರು ಇಂದು ಆರ್ಟಿಸ್ಟ್ ರಾಮು ಎಂದೇ ಚಿರಪರಿಚಿತರಾಗಿದ್ದಾರೆ, ಚಿತ್ರದುರ್ಗ ನಗರದ ಸಿ.ಕೆ. ಪುರದ ಸರ್ಕಾರಿ ಶಾಲೆಯಲ್ಲಿ 1ರಿಂದ 7ನೇ ತರಗತಿಯವರೆಗೆ, 8ರಿಂದ 10ನೇ ತರಗತಿಯವರೆವಿಗೆ ಕೆ. ಬೋರಯ್ಯ ಸ್ಕೂಲ್‌ನಲ್ಲಿ, ಕಾಲೇಜು ಶಿಕ್ಷಣವನ್ನು ಸರ್ಕಾರಿ ಕಲಾ ಕಾಲೇಜಿನಲ್ಲಿ ಕಲಿತರು, ತದನಂತರ ಮುರುಘ ರಾಜೇಂದ್ರ ಚಿತ್ರಕಲಾ ಕಾಲೇಜಿನಲ್ಲಿ 05ವರ್ಷದ ಚಿತ್ರಕಲಾ ತರಬೇತಿಯನ್ನು ಪಡೆದು ಚಿತ್ರಕಲಾವಿದರಾದರು.

ಇವರ ಚಿಕ್ಕಪ್ಪ ಸಂಪ್ರದಾಯ ಶಿಲ್ಪಕಲಾವಿದರಾಗಿದ್ದು ಇವರ ಪ್ರೇರಣೆಯಿಂದ ರಾಮು ಕಲಾವಿದನಾಗಿರುವುದು.

ಚಿತ್ರಕಲಾವಿದರಾಗಿ ಕೆಲವು ದಿನ ಮನೆಯಲ್ಲಿದ್ದಕೊಂಡು ಚಿತ್ರಕಲೆಯನ್ನು ಮಾಡುತ್ತಿದ್ದರು, ಬೇರೆಯವರು ಮಾಡುತ್ತಿದ್ದ ಶಿಲ್ಪಕಲೆಯನ್ನು ಒಮ್ಮೆ ನೋಡಿದರು, ಇಂತಹ ಕಲೆಯನ್ನು ತಾನೂ ಕಲಿಯಬೆಕು ಎಂಬ ಆಸೆಯನ್ನು ಹೊಂದಿ ಆನಂತರ ಬೆಂಗಳೂರಿನ ಸಮೀಪದ ಬಿಡದಿಯ ಹತ್ತಿರವಿರುವ ಜೋಗರದೊಡ್ಡಿ ಎಂಬ ಗ್ರಾಮದಲ್ಲಿ ನಡೆಯುತ್ತಿರುವ ಕೆ. ಪಿ. ಜೆ. ಪ್ರಭು ಕರಕುಶಲ ತರಬೇತಿ ಕೇಂದ್ರದತ್ತ ಹೆಜ್ಜೆಹಾಕಿದರು, ಈ ತರಬೇತಿ ಕಲಾ ಕಾಲೇಜಿಗೆ ವಿದ್ಯಾರ್ಥಿಯಾಗಿ ಲೋಹ ಶಿಲ್ಪ ವಿಭಾಗದಲ್ಲಿ ಸಂಪ್ರದಾಯ ರೇಖಾ ಚಿತ್ರಗಳ ರಚನೆಯನ್ನು, ಲೋಹ ಮಾಧ್ಯಮದಲ್ಲಿ ಉಬ್ಬು ಶಿಲ್ಪ ರಚನೆಯ ವಿಧಾನವನ್ನು, ಮೇಣದಲ್ಲಿ ಶಿಲ್ಪಗಳನ್ನು ಮಾಡುವುದು ಮತ್ತು ಮೇಣದಿಂದ ಮಾಡಿದ ಶಿಲ್ಪಗಳಿಗೆ ಎರಕ ಒಯ್ಯುವುದು ಎಂಬಿತ್ಯಾದಿ ಕಲೆಗಳ ತರಬೇತಿಯನ್ನು ಒಂದೂವರೆ ವರ್ಷಗಳ ಕಾಲ ಪಡೆದರು, ರಾಮು ಬಹಳ ಆಸಕ್ತಿಯಿಂದ ಲೋಹದಿಂದ ಶಿಲ್ಪಕಲೆ ತಯಾರಿಸುವುದನ್ನು ಕಲಿತ ವಿಧಾನವನ್ನು ಮನಗಂಡು ಮೇಲ್ಕಂಡ ಕಲಾ ತರಬೇತಿ ಕೇಂದ್ರವು ಇವರಿಗೆ ಶಿಲ್ಪಕಲೆಯನ್ನು ತಯಾರಿಸಲು ಕೆಲವು ಕಡೆ ಕಳುಹಿಸಿಕೊಟ್ಟಿತು, ಅಂದಿನಿಂದ ತಮಗೆ ವಹಿಸಿದ ಶಿಲ್ಪಕಲೆ ತಯಾರಿಕೆಯನ್ನು ತುಂಬಾ ಸುಂದರವಾಗಿ ಮಾಡಿಕೊಟ್ಟು, ಬೇಗನೆ ಕಲಾಸಕ್ತರ ಮತ್ತು ಕಲಾ ಮಾರ್ಗದರ್ಶಕರ ಮನ ಗೆದ್ದರು, ತರುವಾಯ ಶಿಲ್ಪ ರಚನೆಯ ಕೆಲಸ ಇವರನ್ನು ಹುಡುಕಿಕೊಂಡು ಬರಲು ಹತ್ತಿತು, ಬಿಡುವಿಲ್ಲದಂತೆ ಕೆಲವಾರು ದಿನಗಳು ವಿವಿಧ ಊರುಗಳಲ್ಲಿ ಕೆಲವಾರು ಶಿಲ್ಪ ರಚನೆಯನ್ನು ಮಾಡಿದರು, ಈಗಲೂ ಬಿಡುವಿಲ್ಲದಂತೆ ಚಿತ್ರಕಲೆ, ಮಣ್ಣಿನ ಮಾಧ್ಯಮದಿಂದ ಶಿಲ್ಪ ರಚನೆ, ಲೋಹದ ಮಾಧ್ಯಮದಿಂದ ಶಿಲ್ಪಗಳ ರಚನೆ, ಮೇಣ, ಪಿ.ಓ.ಪಿ., ಫೈಬರ್ ಮಾಧ್ಯಮ, ಬೆಳ್ಳಿ, ಕಂಚು, ಹಿತ್ತಾಳೆ ಮುಂತಾದ ಮಾಧ್ಯಮಗಳಿಂದ ಶಿಲ್ಪ ರಚನೆಯನ್ನು ಮಾಡುತ್ತಿದ್ದಾರೆ.

ಇವರ ಜೊತೆಗೆ ನಾಲ್ಕೈದು ಜನ ಕಲಾವಿದರು ಸಹಾಯಕರಾಗಿ ಸೇರಿದ್ದು ದೊಡ್ಡ ಶಿಲ್ಪಗಳ ತಯಾರಿಕೆ ಇದ್ದಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಶಿಲ್ಪಕಲೆಯನ್ನು ಮಾಡುತ್ತಾರೆ, ಕೆಲವು ಕಲಾವಿದರು ಸೇರಿ " ಓಂ ಕಲಾ ಲೋಕ ", ಎಂಬ ಅಂಗಡಿಯನ್ನು ಪ್ರಾರಂಭಿಸಿದ್ದು, ಈ ಅಂಗಡಿಯ ಹೆಸರಿನಲ್ಲಿ ಶಿಲ್ಪ ಕಲೆಯನ್ನು ರಚಿಸುತ್ತಿದ್ದಾರೆ, ಸದ್ಯದಲ್ಲಿ ಸ್ವಂತ ಊರಾದ ಚಿತ್ರದುರ್ಗ ನಗರದಲ್ಲಿ ಕೆಲವಾರು ಕಡೆ

ಶಿಲ್ಪಕಲೆಗಳನ್ನು ಮಾಡಿದ್ದಾರೆ, ಚಿತ್ರದುರ್ಗ ನಗರವಲ್ಲದೆ ಬೇರೆ ಬೇರೆ ಊರುಗಳಲ್ಲೂ ಇವರು ಶಿಲ್ಪಕಲೆಗಳನ್ನು ಮಾಡಿದ್ದಾರೆ, ರಾಮನಗರ, ಧರ್ಮಸ್ಥಳ, ಬೆಂಗಳೂರು, ಮಂಗಳೂರು, ಕೊಲ್ಲೂರು, ಬೆಳ್ತಂಗಡಿ, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ವಿವಿಧ ಮಾಧ್ಯಮಗಳಿಂದ ಶಿಲ್ಪಕಲೆಯನ್ನು ರಚಿಸಿದ್ದಾರೆ.

ವಿವಿಧ ಲೋಹಗಳ ಮಾಧ್ಯಮದಿಂದ ಯಾವುದೇ ರೀತಿಯ ಮೂರ್ತಿಗಳು ಅಥವಾ ಶಿಲ್ಪಕಲೆಯನ್ನು ಮಾಡುತ್ತಾರೆ, ಯಾವುದೇ ಶಿಲ್ಪಗಳನ್ನಾಗಲಿ ಹೆಚ್ಚಾಗಿ ಅಚ್ಚು ಹಾಕದೇ ಕೈಯಲ್ಲಿ ಸುಂದರವಾಗಿ ಮಾಡುತ್ತಾರೆ, ಮಣ್ಣು, ಪಿ.ಓ.ಪಿ. ಮುಂತಾದ ಮಾಧ್ಯಮದಲ್ಲಿ ದೊಡ್ಡ ದೊಡ್ಡ ಶಿಲ್ಪಗಳನ್ನು ಕೈಯಲ್ಲಿ ಮಾಡುತ್ತಾರೆ, ಚಿಕ್ಕ ಚಿಕ್ಕ ದೇವರ ವಿಗ್ರಹಗಳನ್ನು ಬಳ್ಳಿ, ಎಲೆ, ಕಾಯಿ, ಘಂಟೆ ಇತ್ಯಾದಿ ಕುಸುರಿ ಕೆಲಸವನ್ನು ಮಾತ್ರ ಮಾಡಲು ಅಚ್ಚನ್ನು ಉಪಯೋಗಿಸುತ್ತಾರೆ.

ರಾಮು ವಿವಿಧ ಮಾಧ್ಯಮಗಳಿಂದ ಮಾಡಿದ ಶಿಲ್ಪಕಲೆಯ ವಿವರ ಈ ಕೆಳಗಿನಂತಿದೆ:

1).ಕೆಪಿಜೆ ಪ್ರಭು ಕರಕುಶಲ ಕೇಂದ್ರ ರಾಮನಗರದಲ್ಲಿ ಶಿಲ್ಪಕಲೆಯ ಬಗ್ಗೆ ತರಬೇತಿಯನ್ನು ಪಡೆದಿದ್ದು ಗುರುಗಳಾಗಿದ್ದ ಸೋಮಶೇಖರ್ ಇವರ ಮಾರ್ಗದರ್ಶನದಲ್ಲಿ 3ತಿಂಗಳು ಇಲ್ಲಿಯೇ ಪ್ರೊಡಕ್ಷನ್ ಕೆಲಸ ಮಾಡಿದರು.

2).ಕಾರ್ಕಳದ ಸುಧಾಕರ್ ಡೋಂಗ್ರೆ ಮಾರ್ಗದರ್ಶನದಲ್ಲಿ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಗರ್ಭಗುಡಿಯ ಒಳಗೆ ಹಾಗೂ ಗೋಡೆಯ ಮೇಲೆ ಬೆಳ್ಳಿ ಲೋಹದ ಅಷ್ಟಲಕ್ಷ್ಮಿಯರ ಉಬ್ಬು ಶಿಲ್ಪಗಳನ್ನು ಮಾಡಿದ್ದಾರೆ.

3).ಶಿಲ್ಪಿಗಳಾದ ಸುನೀಲ್ ಚಿಂಪ್ಲಿಕಾರ್ ಮರ್ಗದರ್ಶನದಲ್ಲಿ ಧರ್ಮಸ್ಥಳದ ಉಜಿರೆ, ಕನ್ಯಾಡಿ ಕ್ಷೇತ್ರ, ಶ್ರೀರಾಮ ಕ್ಷೇತ್ರಗಳ ದೇವಸ್ಥಾನಗಳಲ್ಲಿ ಬೆಳ್ಳಿ ಲೋಹದಲ್ಲಿ ಶಿಲ್ಪಗಳು, ದ್ವಾರ ಬಾಗಿಲು, ಬೆಳ್ಳಿ ರಥದ ಕೆಲಸವನ್ನು ಮಾಡಿದರು.

4).ಉಡುಪಿಯ ಶ್ರೀ ಕೃಷ್ಣ ಮಠದ ತೀರ್ಥ ಮಂಟಪದಲ್ಲಿರುವ ಕಂಬಗಳಿಗೆ ಬೆಳ್ಳಿ ಕವಚಗಳನ್ನು ಹಾಕುವ ಕೆಲಸ.

5).ಬೆಳ್ತಂಗಡಿ ಗ್ರಾಮದ ನಾರಾಯಣ ಸ್ವಾಮಿ ದೇವಸ್ಥಾನದ ಬಾಗಿಲುಗಳಿಗೆ ಉಬ್ಬು ಶಿಲ್ಪಗಳನ್ನೊಳಗೊಂಡ ಬೆಳ್ಳಿಯ ಕವಚವನ್ನು ಮಾಡುವ ಕೆಲಸ.

6).ಮಂಗಳೂರಿನ ಕಂಕನಾಡಿ ಗರಡಿ, ಪಂಪ್‌ವೇಲ್ ಸರ್ಕಲ್‌ನಲ್ಲಿ ದೇವಸ್ಥಾನದ ಬಾಗಿಲು ಮತ್ತು ರಥದ ಕೆಲಸ.

7).ರಾಮನಗರದ ಶಿಲ್ಪಿ ಶರಣಪ್ಪ, ಕೆ.ರಾಘವೆಂದ್ರ, ಜೆ.ಶಾಂತಕುಮಾರ್ ಜೊತೆಗೂಡಿ ಶಿಲ್ಪ ಕೆಲಸವನ್ನು ವಿವಿಧ ಊರುಗಳಲ್ಲಿ ಮಾಡಿದ್ದಾರೆ.

ಶಿಲ್ಪಿ ರಾಮು ಇವರು ತಾಮ್ರ, ಬೆಳ್ಳಿ, ಕಂಚು, ಮೇಣ, ಮಣ್ಣು, ಫೈಬರ್, ಪಿಓಪಿ, ಕಲ್ಲು ಇವುಗಳೆಲ್ಲದರಲ್ಲೂ ಶಿಲ್ಪಕಲಾಕೃತಿಗಳನ್ನು ಇದುವರೆಗೆ ಮಾಡಿದ್ದಾರೆ, ಮಾಡುತ್ತಿದ್ದಾರೆ ಕೂಡ.

ವಿವಿಧ ಮಾಧ್ಯಮಗಳಿಂದ ಪ್ರತಿಮೆಗಳ ತಯಾರಿಕಾ ವಿಧಾನ :

1).ಮೇಣದ ಪ್ರತಿಮೆ : ಮೊದಲಿಗೆ ಮೇಣದಿಂದ ಬೇಕಾದ ಆಕಾರಗಳನ್ನು ಮಾಡಿ ಆನಂತರ ವಿವಿಧ (ಮೆಟಲ್ ನಿಂದ)ಲೋಹದಿಂದ ಎರಕ ಹೊಯ್ಯುತ್ತಾರೆ. ಮೇಣದಿಂದ ಮಾಡಿದ ಕಲಾಕೃತಿಗಳು ಎಷ್ಟುದಿನ ಬೇಕಾದರೂ ಇರಬಲ್ಲವು. ಮೇಣದಲ್ಲಿ ಎಷ್ಟು ಚಿಕ್ಕದಾದ ಶಿಲ್ಪಗಳನ್ನಾದರೂ ಮಾಡಬಹುದು ಮತ್ತು ಸೂಕ್ಷ್ಮ ಕೆತ್ತನೆಗಳನ್ನು ಮಾಡುವುದು ಬಹಳ ಸುಲಭವಾಗಿರುತ್ತದೆ, ಬೇಕಾದಾಗ ಕರಗಿಸಿ ಮತ್ತೊಂದು ಶಿಲ್ಪವನ್ನು ತಯಾರಿಸ ಬಹುದು, ಅದೂ ಅಲ್ಲದೆ ಮೇಣದಿಂದ ತಯಾರಿಸಿದ ಶಿಲ್ಪಕ್ಕೆ ಬೇರೆ ಯಾವುದೇ ಮಾಧ್ಯಮದಿಂದ ಎರಕ ಹೊಯ್ದರೂ, ಎರಕ ಹೊಯ್ದ ಮೇಲೂ ಮಾಧ್ಯಮದಿಂದ ಮೇಣವನ್ನು ಸುಲಭವಾಗಿ ಕರಗಿಸುವುದರ ಮುಖಾಂತರ ಹೊರ ತೆಗೆಯ ಬಹುದು, ಒಟ್ಟಾರೆ ಯಾವುದೇ ಮಾಧ್ಯಮದ ಶಿಲ್ಪವನ್ನು ತಯಾರಿಸಲು ಮೊದಲು ಪಾಸಿಟಿವ್ ಮೂರ್ತಿಯನ್ನು ಮಾಡಿಕೊಳ್ಳುತ್ತಾರೆ, ಈ ರೀತಿಯ ಪಾಸಿಟಿವ್ ಮೂರ್ತಿಯನ್ನು ಮೇಣದಿಂದ ಬೇಕಾದ ಆಕಾರವನ್ನು ಮಾಡಿಕೊಳ್ಳಲು ಮೇಣವನ್ನು ಉಪಯೋಗಿಸುತ್ತಾರೆ.

2). ಮೇಣದಿಂದ ಮೌಲ್ಡಿಂಗ್, ಎರಕ ಹಾಕುವ ವಿಧಾನ : ಮೊದಲಿಗೆ ಮುಖ್ಯವಾಗಿ ಮಾಡಬೇಕಾದ ಮೂಲ ಮೂರ್ತಿಯ ಆಕಾರವನ್ನು ಅಳತೆಗೆ ತಕ್ಕಂತೆ ಮೇಣದಿಂದ ಮಾಡಿಕೊಂಡು ಆ ನಂತರ

ಇದಕ್ಕೆ ಫೈಬರ್ ರೆಜಿನ್(ಕೆಮಿಕಲ್ಸ್)ನಿಂದ ಮೌಲ್ಡಿಂಗ್ ಮಾಡಿಕೊಂಡು ನಂತರ ಬೇಕಾದ ಮೂಲ ಮೂರ್ತಿಯ ಲೋಹದಿಂದ (ಮೆಟಲ್)ಎರಕ ಹಾಕಬೇಕು, ಅಥವಾ ಫೈಬರ್(ಕೆಮಿಕಲ್ಸ್) ಉಪಯೋಗಿಸದೇ ನೇರವಾಗಿ ಮೇಣದ ಮೂರ್ತಿಗೇ ಎರಕ ಹಾಕಬಹುದು ಇದಕ್ಕೆ ಬಹಳ ಚಾಕ ಚಕ್ಯತೆ ಬೇಕು, ಯಾಕೆಂದರೆ ಮೇಣದಿಂದ ಸೂಕ್ಷ್ಮವಾದ ಮೌಲ್ಡಿಂಗ್ ತೆಗೆದುಕೊಂಡು(ಪಾಸಿಟಿವ್) ಆಗಿ ಪರಿವರ್ತಿಸಿಕೊಂಡು, ಈ ಪಾಸಿಟಿವ್ ಮೌಲ್ಡಿಂಗ್‌ಗೆ ಬೇಕಾದ ಮೆಟಲ್(ಲೋಹದಿಂದ) ಎರಕ ಹೊಯ್ಯಬೇಕು, ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು ಮೇಣದ ಮೌಲ್ಡಿಂಗ್‌ನ್ನು ಉಪಯೋಗಿಸಿ ಚಿಕ್ಕ ಚಿಕ್ಕ ಶಿಲ್ಪಗಳನ್ನು ಮಾಡಬಹುದು, ದೊಡ್ಡ ಪ್ರಮಾಣದ ಶಿಲ್ಪಗಳನ್ನು ಮಾಡಲು ಬೇರೆ ರೀತಿಯ ವಸ್ತವನ್ನು ಉಪಯೋಗಿಸಬೇಕು, ಯಾಕೆಂದರೆ ದೊಡ್ಡ ಪ್ರಮಾಣದ ಮೂರ್ತಿಯನ್ನು ಮಾಡಲು ಹೆಚ್ಚಿನ ಮೇಣವು ಬೇಕಾಗುತ್ತದೆ, ಆದ್ದರಿಂದ ಚಿಕ್ಕ ಪ್ರಮಾಣದ ಶಿಲ್ಪಗಳನ್ನು ಮಾಡಲು, ಅದರಲ್ಲೂ ಸೂಕ್ಷ್ಮವಾದ, ಸಣ್ಣ ಪ್ರಮಾಣದ ಭಾಗಗಳನ್ನು ಲೋಹದಲ್ಲಿ ತೋರಿಸಲು ಮೇಣದ ಮೌಲ್ಡಿಂಗ್ ಹೆಚ್ಚು ಸಹಕಾರಿಯಾಗುತ್ತದೆ.

3).ಮೇಣದ ವಿವರಣೆ: ಅಂಗಡಿಗಳಲ್ಲಿ ಮೇಣವು ದೊರೆಯುತ್ತದೆ, ಇದನ್ನು ಜೇನು ಸಾಕಾಣಿಕೆಯವರು ತಯಾರಿಸುತ್ತಾರೆ, ಇದರ ಜೊತೆಗೆ ರಾಳವನ್ನು ಮಿಶ್ರಣ ಮಾಡುತ್ತಾರೆ, ರಾಳ ಎಂದರೆ ಕೆಲವು ಮರಗಳಲ್ಲಿ ದೊರೆಯುವ ಅಂಟು, ಕಾಡಿನಲ್ಲಿ ಬೆಳೆದಿರುವ ಮರಗಳು, ಇತರೆ ಕಡೆಗಳಲ್ಲೂ ಬೆಳೆದಿರುವ ಮರಗಳ ಅಂಟು, ಜೇನಿನಿಂದ ಸಿಗುವ ಮೇಣ ಇವೆರಡನ್ನೂ ಮಿಶ್ರ ಮಾಡಿದಾಗ ಗಟ್ಟಿಯಾದ ಮೇಣ ದೊರೆಯುತ್ತದೆ, ಇದು ಶಿಲ್ಪ ತಯಾರಿಕೆಗಳಲ್ಲಿ ಮತ್ತು ಬೆಳ್ಳಿ, ಬಂಗಾರದ, ಇತರೆ ಲೋಹಗಳಲ್ಲಿ ಒಡೆಗಳನ್ನು ತಯಾರಿಸುವವರು ಉಪಯೋಗಿಸುತ್ತಾರೆ.

3).ಮಣ್ಣಿನ ಪ್ರತಿಮೆಗಳನ್ನು ಮಾಡುವ ವಿಧಾನ : ಮಣ್ಣಿನ ಮಾಧ್ಯಮದಿಂದ ಯಾವ ಶಿಲ್ಪಗಳನ್ನೇ ಆಗಲಿ ಬಹಳ ಸುಂದರವಾಗಿ ರಚಿಸಬಹುದು, ಮೊದಲಿಗೆ ಮಣ್ಣನ್ನು ಆಯ್ಕೆ ಮಾಡಿಕೊಳ್ಳಬೇಕು, ಯಾಕೆಂದರೆ ಮಣ್ಣಿನಲ್ಲಿ ವಿವಿಧ ಗುಣಗಳ ಮಣ್ಣು ಇದೆ, ಕೆಂಪು ಮಣ್ಣು, ಜೇಡಿ ಮಣ್ಣು, ಜಿಗುಟು ಮಣ್ಣು, ಬೂದು ಮಣ್ಣು, ಎರೆ ಮಣ್ಣು, ಬಿಳಿ ಮಣ್ಣು, ಉಸುಕು ಮಣ್ಣು, ಮರಳು ಮಿಶ್ರಿತ ಮಣ್ಣು, ಜಜ್ಜು ಮಣ್ಣು, ಹಿಟ್ಟು ಮಣ್ಣು ಹೀಗೆ ನಾನಾ ರೀತಿಯ ಮಣ್ಣಿನ ವಿಧಗಳು ಇವೆ.

ಮೊದಲಿಗೆ ಮಣ್ಣನ್ನು ತಂದು ಚನ್ನಾಗಿ ಹದ ಮಾಡುತ್ತಾರೆ, ಹದ ಮಾಡುವುದು ಎಂದರೆ ಮೂರು ದಿನಗಳಿಂದ ಒಂದು ವಾರದವರೆವಿಗೆ ಮಣ್ಣನ್ನು ಒಂದು ಕೋಣೆ ಅಥವಾ ಕಲ್ಲು, ಮಣ್ಣು ಇಲ್ಲದ ಸಮತಟ್ಟಾದ ಜಾಗದಲ್ಲಿ ಹಾಕಿ ಅದಕ್ಕೆ ಸ್ವಲ್ಪ ಸ್ವಲ್ಪ ನೀರನ್ನು ಚಿಮುಕಿಸುತ್ತಾ ಕಾಲಿನಿಂದ ಚನ್ನಾಗಿ ತುಳಿಯುತ್ತಾರೆ, ಹೀಗೆ ತುಳಿದ ಮಣ್ಣು ಮೇಣದಂತೆ ಹದವಾಗುತ್ತದೆ, ಕೆಲವಾರು ದಿನಗಳು ಈ ಮಣ್ಣನ್ನು ಮುಗ್ಗು ಹಾಕುತ್ತಾರೆ, ಅಂದರೆ ತೇವಾಂಶವು ಮಣ್ಣಿನಲ್ಲಿ ಶಿಲ್ಪಗಳನ್ನು ಮಾಡುವವರೆವಿಗೂ ಇರುವಂತೆ ಕಾಯ್ದುಕೊಳ್ಳುತ್ತಾರೆ.

ಕೆಲವರು ಮಣ್ಣಿಗೆ ನುಣುಪಾದ ಜಿಗುಟು ಮಣ್ಣನ್ನು, ಹತ್ತಿಯನ್ನೂ, ಇತರೆ ಕಲ್ಲಿನ ಪೌಡರನ್ನು ಮಿಶ್ರ ಮಾಡಿ ಹದಮಾಡುತ್ತಾರೆ, ಈ ಮಣ್ಣಿಗೆ ನೀರನ್ನು ಚಿಮುಕಿಸುತ್ತಾ ತೇವಾಂಶ ಕಾಯ್ದುಕೊಂಡರೆ ತಿಂಗಳಾನುಗಟ್ಟಲೇ ಹಾಗೇ ಇಟ್ಟು ಬೇಕಾದ ಸಮಯದಲ್ಲಿ ಶಿಲ್ಪಗಳನ್ನು ಮಾಡಲು ಉಪಯೋಗಿಸಬಹುದು.

ಮಣ್ಣಿನ ವಿಧಗಳು :

1). ಕೆಂಪು ಮಣ್ಣು: ಈ ಮಣ್ಣು ಮೂರ್ತಿಗಳನ್ನು ಮಾಡಲು ಸೂಕ್ತವಾಗಿದ್ದು, ಶಿಲ್ಪಗಳನ್ನು ಮಾಡಲು ಬೇಕಾದ ರೀತಿಯಲ್ಲಿ ಈ ಮಣ್ಣನ್ನು ಬಳಸಬಹುದು, ಹಾಗೂ ನುಣುಪು ಮಾಡಲು ಇದು

ಉಪಯುಕ್ತ, ಇದರಲ್ಲಿ ಮರಳು ಅಥವಾ ಕಲ್ಲುಗಳು ಇರುವುದಿಲ್ಲ, ಕೃಷಿ ಕಾರ್ಯಕ್ಕೂ ಉಪಯುಕ್ತವಾಗಿದೆ, ಇದರಲ್ಲಿ ಪೋಷಕಾಂಶಗಳು ಎತೇಚ್ಛವಾಗಿದ್ದು, ಕೃಷಿ ಬೆಳೆಗಳಿಗೆ ಬೇಕಾದ ಪೋಷಕಾಂಶಗಳನ್ನು ಬೇಕಾದ ಪ್ರಮಾಣದಲ್ಲಿ ಒದಗಿಸಲು ನೆರವಾಗುತ್ತದೆ, ಯಾವುದೇ ಬೆಳೆಯಾಗಲಿ ಈ ಮಣ್ಣಿನಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ.

2). ಜೇಡಿ ಮಣ್ಣು: ಈ ಮಣ್ಣು ಕೆರೆಯಲ್ಲಿ ಅಧಿಕವಾಗಿ ದೊರೆಯುತ್ತದೆ, ಮೂರ್ತಿಗಳನ್ನು ಮಾಡಲು ಕೆಲವರು ಈ ಮಣ್ಣನ್ನೂ ಬಳಸುತ್ತಾರೆ, ಈ ಮಣ್ಣಿನಲ್ಲಿ ಅಧಿಕ ಪ್ರಮಾಣದ ಪೋಷಕಾಂಶಗಳಿರುತ್ತವೆ, ಇದರಲ್ಲಿ ಕೆಲವು ವಸ್ತುಗಳು ಬೇಗನೆ ಕೊಳೆಯುತ್ತವೆ, ಮೀನುಗಳಿಗೆ ಬೇಕಾದ ಪೋಷಕಾಂಶದ ಮಣ್ಣು ಇದಾಗಿದೆ, ಹಾಗಾಗಿ ಕೆರೆಯಲ್ಲಿ ಮೀನು ಸಾಕಾಣಿಕೆಗೆ ಸರಿಯಾದ ಸ್ಥಳವಾಗಿರುತ್ತದೆ, ಅದೂ ಅಲ್ಲದೆ ಇದರಲ್ಲಿ ನೀರು ಇರುವ ಸಮಯದಲ್ಲಿ ಅತಿ ಸಣ್ಣ ಜೀವಿಗಳು ಸಂತಾನೋತ್ಪತ್ತಿ ಮಾಡಿಕೊಳ್ಳಲು, ಜೀವಿಸಲು ತುಂಬಾ ಉಪಯುಕ್ತವಾಗಿದೆ, ಮರಳು ಹಾಗೂ ಕಲ್ಲಿನ ಕಣಗಳು ಇರುವುದಿಲ್ಲ ಹಾಗಾಗಿ ಮೂರ್ತಿಗಳನ್ನು ನುಣುಪಾಗಿ ತೀಡಿ ತಿದ್ದಿ ಅಲಂಕಾರಿಕವಾಗಿ ಮಾಡಲು ಉಪಯುಕ್ತ, ಇದು ತೇವಾಂಶವನ್ನು ಕೆಲ ಸಮಯ ಹಿಡಿದಿಟ್ಟುಕೊಳ್ಳುತ್ತದೆ.

3).ಜಿಗುಟು ಮಣ್ಣು: ಈ ಮಣ್ಣು ಹೆಚ್ಚು ಮಳೆ ಬೀಳುವ ಪ್ರದೇಶದ್ದಾಗಿದೆ, ಬಹು ವಿಧದ ಬೆಳೆಗಳನ್ನು ಈ ಮಣ್ಣಿನಲ್ಲಿ ಬೆಳೆಯಬಹುದು, ಮೂರ್ತಿಗಳನ್ನು ಮಾಡಲು ಇದು ಸಹಕಾರಿಯಾಗಿದೆ, ಇದರಲ್ಲಿ ಮಾಡಿದ ಕಲಾಕೃತಿಗಳು ಬೇಗನೆ ಬಿರುಕು ಬರುವುದಿಲ್ಲ, ಒಂದು ರೀತಿಯ ಅಂಟು ಮಣ್ಣು ಇದಾಗಿದೆ.

4).ಬೂದು ಮಣ್ಣು: ಇದರಲ್ಲಿ ಸ್ವಲ್ಪ ಮಟ್ಟಿನ ಪೋಷಕಾಂಶದ ಕೊರತೆ ಇರುತ್ತದೆ ಎನ್ನಲಾಗಿದೆ, ಇದರಲ್ಲಿನ ಮಣ್ಣಿನ ಕಣಗಳು ಒಂದಕ್ಕೊಂದು ಸೇರದೇ ಬಿಡಿ ಬಿಡಿಯಾಗಿರುತ್ತವೆ, ಮೂರ್ತಿಗಳನ್ನು ಮಾಡಲು ಅಷ್ಟೇನೂ ಉಪಯುಕ್ತವಾದ ಮಣ್ಣು ಅಲ್ಲ, ಕೆಲವು ನಿರ್ಧಿಷ್ಟ ಬೆಳೆಗಳನ್ನು ಮಾತ್ರ ಬೆಳೆಯಲು ಸೂಕ್ತವಾಗಿದೆ, ಇಟ್ಟಿಗೆ ತಯಾರಿಕೆಯಲ್ಲಿ ಮಿಶ್ರ ಮಣ್ಣನ್ನಾಗಿ ಬಳಸಬಹುದು.

5).ಎರೆ ಮಣ್ಣು: ಇದು ಕೆರೆಯಲ್ಲಿ ದೊರೆಯುವ ಮಣ್ಣು, ಕೃಷಿ ಕಾರ್ಯಕ್ಕೆ ಉಪಯುಕ್ತವಾಗಿದೆ, ವಾಣಿಜ್ಯ ಬೆಳೆಗಳನ್ನು ಬೆಳೆಯಲು ಸೂಕ್ತವಾದದ್ದು, ಮೂರ್ತಿಗಳನ್ನು ಮಾಡಲೂ ಬಳಸುತ್ತಾರೆ, ಸ್ವಲ್ಪ ಜಿಗುಟಿನ ಅಂಶವೂ ಇದರಲ್ಲಿ ಇರುತ್ತದೆ.

6).ಬಿಳಿ ಮಣ್ಣು: ಇದರಲ್ಲಿ ಮರಳಿನ ಪ್ರಮಾಣ ತುಸು ಹೆಚ್ಚಿದ್ದು ಮೊದಲು ಮೂರ್ತಿಗಳನ್ನು ಮಾಡಲು ಈ ಮಣ್ಣನ್ನು ಮಿಶ್ರಣಕ್ಕಾಗಿ ಬಳಸುತ್ತಿದ್ದರು. ಕಲ್ಲಿನ ಪ್ರಮಾಣವೂ ಇರುವುದರಿಂದ ಈ ಮಣ್ಣನ್ನು ಮೂರ್ತಿಗಳ ತಯಾರಿಕೆಯಲ್ಲಿ ಬಳಕೆ ಕಡಿಮೆ, ತೋಟಗಾರಿಕೆಯ ಬೆಳೆಗಳಿಗೆ ಸೂಕ್ತವಾಗಿದೆ.

7).ಉಸುಕು ಮಣ್ಣು: ಇದು ನೀರು ಇರುವ ಕಡೆ, ನದಿ, ಹಳ್ಳ, ಕೊಳ್ಳಗಳ ದಂಡೆಗಳಲ್ಲಿ ಇರುತ್ತದೆ, ಇದರಿಂದ ಉಪಯೋಗ ಕಡಿಮೆ, ಕೆಲವೊಂದು ಅತಿ ಹೆಚ್ಚು ತೇವಾಂಶದಿಂದ ಬೆಳಯುವ ಸಸ್ಯಗಳನ್ನು ಮಾತ್ರ ಬೆಳೆಯ ಬಹುದು, ಈ ಮಣ್ಣು ಶಿಲ್ಪಕಲಾಕೃತಿಗಳನ್ನು ಮಾಡಲು ಉಪಯೋಗಕ್ಕೆ ಬರುವುದಿಲ್ಲ.

8).ಮರಳು ಮಿಶ್ರಿತ ಮಣ್ಣು: ಈ ಮಣ್ಣು ಬಹಶಃ ಎಲ್ಲಾ ಪ್ರದೇಶಗಳಲ್ಲೂ ಇರುತ್ತದೆ, ಇದರಿಂದ ಮೂರ್ತಿಗಳನ್ನು ಮಾಡಲು ಮಿಶ್ರಣವಾಗಿ ಅಲ್ಪ ಪ್ರಮಾಣದಲ್ಲಿ ಬಳಸುತ್ತಾರೆ, ಮೂರ್ತಿಗಳು ಸ್ವಲ್ಪ ಮಟ್ಟಿಗೆ ಗಟ್ಟಿಬರಲು ಬಳಸಬಹುದು.

9).ಜಜ್ಜು ಮಣ್ಣು: ಇದು ಕೃಷಿ ಉಪಯೋಗಕ್ಕೆ ಮತ್ತು ಮನೆಗಳ ನಿರ್ಮಾಣಗಳಲ್ಲಿ ಬಳಕೆಯಲ್ಲಿದ್ದು, ಗ್ರಾಮೀಣ ಭಾಗದಲ್ಲಿ ಊರುಗಳಲ್ಲಿನ ಬೀದಿ ರಸ್ತೆಗಳಿಗೆ ಬಳಸುತ್ತಾರೆ, ಈ ಮಣ್ಣನ್ನು ರಸ್ತೆಗೆ ಹರಡಿ ಮೇಲೆ ನೀರು ಹಾಕಿ ರೋಲರ್ ಹೊಡೆದರೆ, ರಸ್ತೆ ಗಟ್ಟಿ ಬರುತ್ತದೆ, ಮನೆಗಳ ಅಂಗಳಕ್ಕೆ, ಬುನಾದಿ ಭರ್ತಿ ಮಾಡಲು ಬಳಸುತ್ತಾರೆ.

10).ಪಿಟ್ಟು ಮಣ್ಣು: ಇದು ಹಿಟ್ಟು ಕಲ್ಲಿನಿಂದ ಪುಡಿಯಾದ ಮಣ್ಣು, ಮೂರ್ತಿಗಳನ್ನು ಮಾಡಲು ಬಳಸುವ ಮಣ್ಣಿನೊಂದಿಗೆ ಮಿಶ್ರಣಕ್ಕಾಗಿ ಈ ಮಣ್ಣನ್ನು ಬಳಸುತ್ತಾರೆ, ಈ ಮಿಶ್ರಣದ ಬಳಕೆಯಿಂದ ಶಿಲ್ಪಗಳು ನುಣುಪಾಗಿ ಸುಂದರವಾಗಿ ಮೂಡಿ ಬರುತ್ತವೆ. ಈ ರೀತಿಯಾಗಿ ಇನ್ನು ಅನೇಕ ವಿಧವಾದ, ವಿವಿಧ ಗುಣಗಳ ಮಣ್ಣು ಇದ್ದು ವಿವಿಧ ಸ್ಥಳಗಳಲ್ಲಿ ಬೇರೆ ಬೇರೆ ರೀತಿಯ ಮಣ್ಣು ದೊರೆಯುತ್ತದೆ, ಶಿಲ್ಪಿಗಳು ಸುಲಭವಾಗಿ ಸಿಗುವ, ಶಿಲ್ಪಕಲೆ ತಯಾರಿಕೆಗೆ ಇಷ್ಟವಾದ ಮಣ್ಣನ್ನು ಬಳಸುತ್ತಾರೆ. ಒಬ್ಬೊಬ್ಬ ಶಿಲ್ಪಿಗಳು ಒಂದೊಂದು ವಿಧವಾದ ಮಣ್ಣನ್ನು ಉಪಯೋಗಿಸುತ್ತಾರೆ.

ಮಣ್ಣಿನಿಂದ ಮೌಲ್ಡಿಂಗ್, ಎರಕ ಹಾಕುವ ವಿಧಾನ: ಮಣ್ಣಿನಿಂದ ಪಾಸಿಟಿವ್ ಮೂರ್ತಿಗಳನ್ನು ಮಾಡಿ ಒಂದೆರಡು ದಿನ ಬಿಟ್ಟು POP (ಪಿಓಪಿ)ಪೌಡರ್‌ನಿಂದ ಮೌಲ್ಡ್, ನೆಗೆಟಿವ್ ಮಾಡಿಕೊಳ್ಳುತ್ತಾರೆ, ಅಂದರೆ ಮಣ್ಣಿನಿಂದ ಉಬ್ಬು ಶಿಲ್ಪಗಳನ್ನು ಮಾಡುತ್ತಾರೆ, ನಂತರ ಈ ಉಬ್ಬು ಶಿಲ್ಪಗಳಿಗೆ ಸಮತಟ್ಟಾಗಿರುವ ಪ್ಲೇಟುಗಳಿಂದ ಚೌಕಾಕಾರದ ಪೆಟ್ಟಿಗೆಯೋಪಾದಿ ಮಾಡಿ ಆ ನಂತರ ಮಣ್ಣಿನ ಮೂರ್ತಿಗೆ ಪಿಓಪಿಯಿಂದ ಮೌಲ್ಡ್ ಹಾಕುತ್ತಾರೆ, ಅಂದರೆ POP Powder (ಪಿಓಪಿ ಪೌಡರ)ನ್ನು ನೀರಿನಲ್ಲಿ ಕಲೆಸಿ ಮಣ್ಣಿನ ಶಿಲ್ಪಕ್ಕೆ ಎರಕ ಹಾಕುತ್ತಾರೆ, ಕೆಲವೇ ಸಮಯದಲ್ಲಿ ಪಿಓಪಿಯ ಮೌಲ್ಡ್ ಗಟ್ಟಿಯಾಗುತ್ತದೆ, ಎರಡು ಭಾಗದಂತೆ ಪಿಓಪಿಯ ಮೌಲ್ಡನ್ನು ಹೊರತೆಗೆಯುತ್ತಾರೆ, ಅಥವಾ ಮಣ್ಣಿನ ಮೂರ್ತಿಯನ್ನು ಒಡೆದು ತೆಗೆಯುತ್ತಾರೆ, ತಗ್ಗು ಇರುವ, ನೆಗೆಟಿವ್ ಮೌಲ್ಡನ್ನು ತೆಗೆದು ಆ ನಂತರ Fiber rejin (ಫೈಬರ್ ರೆಜಿನ್), Fiber mould (ಫೈಬರ್ ಮೌಲ್ಡ್) ತೆಗೆಯುತ್ತಾರೆ, Fiber rejin (ಫೈಬರ್ ರೆಜಿನ್)ಎಂದರೆ ಕೆಲವು ಕೆಮಿಕಲ್ಸ್(Cotlist)ಗಳ ಮಿಶ್ರಣದಿಂದ ತಯಾರಾದ ಮೌಲ್ಡಿಂಗ್ ಮಾಧ್ಯಮ. Exlator + Blue + White Mat + Chalk powder ಈ ನಾಲ್ಕು ಕೆಮಿಕಲ್ಸ್‌ಗಳ ಮಿಶ್ರಣವನ್ನು ಮಾಡಿದಾಗ ಫೈಬರ್ ರೆಜಿನ್ ತಯಾರಾಗುತ್ತದೆ, POP ಯಿಂದ ತೆಗೆದ ಮೌಲ್ಡಿಂಗ್‌ಗೆ ಈ ಮೇಲಿನ ಫೈಬರ್ ರೆಜಿನ್‌ನಿಂದ ಮೌಲ್ಡಿಂಗ್ ತೆಗೆಯುತ್ತಾರೆ, ಅಲ್ಲಿಗೆ ಕಂಚು ಪ್ರತಿಮೆಯನ್ನು ಮಾಡುವ ಅತಿಮ ಹಂತದ ಮೌಲ್ಡಿಂಗ್ ತಯಾರಾಗುತ್ತದೆ.

ಭಾವ ಚಿತ್ರ (ಅಂದರೆ ತಲೆ ಮಾತ್ರ) > 2.1/2ಅಡಿ ಅಥವಾ 2.1/4ಅಡಿ ಅಳತೆಯಲ್ಲಿ ಮಾಡುತ್ತಾರೆ, ಪೂರ್ತಿ ವ್ಯಕ್ತಿ ಚಿತ್ರ (ಕಾಲಿನಿಂದ ತಲೆಯ ವರೆಗೆ) > 5. 1/2ಅಡಿ ಅಳತೆಯಲ್ಲಿ ಮಾಡುತ್ತಾರೆ.

ಮೊದಲಿಗೆ ಮಣ್ಣಿನಿಂದ ಬೇಕಾದ ಅಳತೆ, ಆಕಾರದ ಪ್ರತಿಮೆಗಳನ್ನು ಮಾಡಿ, ಇದರ ನಂತರ POPಗೆ ಮೌಲ್ಡಿಂಗ್ ಮಾಡಿ, ಆ ನಂತರ ಒಂದು ವಾರದ ನಂತರ ಫೈಬರ್ ಮೌಲ್ಡ್ ತೆಗೆದು ಆ ನಂತರ ಕೆಲವು ದಿನಗಳ ತರುವಾಯ ಕಂಚಿನ ಪ್ರತಿಮೆಗೆ ಮೌಲ್ಡಿಂಗ್ ತಯಾರು, ಒಟ್ಟಾರೆ 2ತಿಂಗಳೊಳಗೆ ಕಂಚಿನ ಪ್ರತಿಮೆ ಸಿದ್ಧವಾಗುತ್ತದೆ.

ಶಿಲ್ಪಿಯು ಸ್ವಂತಕ್ಕೆ ಒಂದು ಕೆ.ಜಿ.ಯ ಕಂಚಿನ ಪ್ರತಿಮೆಯನ್ನು ಮಾಡಲು ತಗುಲುವ ಒಟ್ಟು ಖರ್ಚು :

ಮಣ್ಣು ಖರ್ಚು	—	300-00
ಪಿಓಪಿ ಖರ್ಚು	--	500–00
ಫೈಬರ್ ಖರ್ಚು	--	700–00
ಲೇಬರ್ ಖರ್ಚು	--	900–00
ಇತರೆ ಮೆಟಲ್ ಖರ್ಚು	--	600–00

ಒಟ್ಟು ಖರ್ಚು—3000–00

ಒಂದು ಕೆ.ಜಿ. ಪ್ರತಿಮೆಯನ್ನು ಮಾಡಲು ಈ ಮೇಲ್ಕಂಡಂತೆ ಖರ್ಚು ತಗುಲಬಹುದಾಗಿದ್ದು ಇದೇ ರೀತಿ ದೊಡ್ಡ ಶಿಲ್ಪಗಳನ್ನು ಮಾಡಲು ಶಿಲ್ಪಿಗಳು ಗುತ್ತಿಗೆ ಪಡೆಯುತ್ತಾರೆ, ಸುಮಾರು 70ಕೆ.ಜಿ. ತೂಕದಂತೆ ಶಿಲ್ಪಗಳನ್ನು ಮಾಡಬಹುದಾಗಿದ್ದು, ಇದಕ್ಕೂ ಹೆಚ್ಚಿನ ತೂಕದ ದೊಡ್ಡ ಶಿಲ್ಪಗಳನ್ನೂ ಮಾಡಬಹುದು, ಇಬ್ಬರು ಅಥವಾ ಅಗತ್ಯತೆ ಇದ್ದರೆ ಇನ್ನೂ ಕೆಲವು ಶಿಲ್ಪಿಗಳನ್ನು ಸಹಕಾರಕ್ಕೆ ಪಡೆದುಕೊಂಡು ಶಿಲ್ಪಗಳನ್ನು ಮಾಡುತ್ತಾರೆ.

ಒಂದು ವರ್ಷಕ್ಕೆ ನಾಲ್ಕೈದು ಶಿಲ್ಪಗಳನ್ನು ರಾಮು ಇತರೆ ಸಹ ಶಿಲ್ಪಿಗಳ ಸಹಾಯದೊಂದಿಗೆ ಕಂಚು, ಹಿತ್ತಾಳೆ, ತಾಮ್ರ, ಬೆಳ್ಳಿ, ಪಿಓಪಿ, ಮಣ್ಣು ಮುಂತಾದ ಮಾಧ್ಯಮಗಳಿಂದ ಮಾಡುತ್ತಾರೆ, ತಮ್ಮ ಸ್ವಂತ ಮನೆಯ ಬಳಿಯೂ, ಬೇರೆ ಊರುಗಳಿಗೆ ಹೋಗಿ ಶಿಲ್ಪಗಳನ್ನು ಮಾಡಿಕೊಟ್ಟು ಬರುತ್ತಾರೆ.

ವಿವಿಧ ಮಾಧ್ಯಮಗಳಿಂದ ಶಿಲ್ಪಗಳ ತಯಾರಿಕೆಗೆ ತಗುಲುವ ಖರ್ಚಿನ ವಿವರದ ಅಂದಾಜು ಪಟ್ಟಿ:

ಕ್ರ.ಸಂ	ವಿವರ	ಬಳಸುವ ಮಾಧ್ಯಮ	ಶಿಲ್ಪದ ಅಳತೆ	ಕೆಲಸದ ದಿನಗಳು	ಸಹಾಯಕ ಶಿಲ್ಪಿಗಳು	ತಗುಲುವ ಒಟ್ಟು ಖರ್ಚು, ಪ್ರಸ್ತುತ
1	ಪಿಓಪಿ ಭಾವಚಿತ್ರದ ಶಿಲ್ಪ	ಪಿಓಪಿ, ತೆಂಗಿನ ನಾರು	2.1/2ಅಡಿ	ಒಂದುವಾರ	02	15,000–00
2	ಮಣ್ಣಿನ ಶಿಲ್ಪ	ಕಪ್ಪು, ಬಿಳಿ ಮಿಶ್ರಿತ ಕೆಂಪು ಮಣ್ಣು	2.1/2ಅಡಿ	10ದಿನ	02	14,000–00
3	ಕಂಚಿನ ಪ್ರತಿಮೆ	ಪಿಓಪಿಯ ಮೌಲ್ಡ್, ನೆಗೆಟಿವ್ ಅಚ್ಚು	2.1/2ಅಡಿ	2ತಿಂಗಳು	02	20,000–00 + ತೂಕಕ್ಕೆ ಪ್ರತ್ಯೇಕ ಬೆಲೆ
4	ಸಿಮೆಂಟ್ ಪ್ರತಿಮೆ	ಸಿಮೆಂಟ್,ಮರಳು,ಮಾರ್ಬಲ್ ಪೌಡರ್, ಕಬ್ಬಿಣ, ಇತ್ಯಾದಿ	2.1/2ಅಡಿ	1ತಿಂಗಳು	03	5,000–00

ಮೇಲಿನಂತೆ ದರ ಇದ್ದು ಎರಡೂ ವರೆ ಅಡಿ ಅಳತೆಗೆ ಮೇಲ್ಪಟ್ಟ ತೂಕಕ್ಕೆ ಪ್ರತ್ಯೇಕ ದರ ಇರುತ್ತದೆ.

ರಾಮು ಕಚ್ಚಾ ವಸ್ತುಗಳನ್ನು ತರುವ ಸ್ಥಳ :

ಮಣ್ಣು: ಹುಲ್ಲೂರು ಕೆರೆ, ಜಾನುಕೊಂಡದ ಕೆರೆಗಳಲ್ಲಿ ದೊರೆಯುತ್ತದೆ, ಈ ಕೆರೆಯಿಂದ ಮಣ್ಣನ್ನು ಮೊದಲೆಲ್ಲಾ ಎತ್ತಿನ ಗಾಡಿಗಳಲ್ಲಿ ತರುತ್ತಿದ್ದರು, ಈಗ ಆಟೋ ಅಥವಾ ಮಿನಿ ಟೆಂಪೊಗಳಲ್ಲಿ ತರುತ್ತಾರೆ, ಆಟೋ ಖರ್ಚು ಪ್ರಸ್ತುತ 300ರಿಂದ 500ರೂಪಾಯಿ ತಗುಲುತ್ತದೆ.

ಪಿಓಪಿ: ನಗರದ ಯಾವುದೇ ಹಾರ್ಡ್‌ವೇರ್‌ಗಳಲ್ಲಿ ಪಿಓಪಿ ಪೌಡರ್ ದೊರೆಯುತ್ತದೆ, ಒಂದು ಚೀಲದಲ್ಲಿ 50ಕೆ.ಜಿ. ಇರುತ್ತದೆ, ಪ್ರಸ್ತುತ ಒಂದು ಕೆ.ಜಿ. ಪಿಓಪಿ ಬೆಲೆ 25ರೂಪಾಯಿ, ಅದೂ ಚೀಲದ ಲೆಕ್ಕದಲ್ಲಿ ತೆಗೆದುಕೊಂಡರೆ, ಒಂದೊಂದು ಕೆ.ಜಿ. ಬಿಡಿಯಾಗಿ ತೆಗೆದುಕೊಂಡರೆ ಒಂದು ಕೆ.ಜಿ.ಗೆ 40ರೂಪಾಯಿ ಹಾಕುತ್ತಾರೆ.

ಮೇಣ(ಜೇನು ಮೇಣ): ಗ್ರಂಥಿಗೆ ಅಂಗಡಿಗಳಲ್ಲಿ ದೊರೆಯುತ್ತದೆ, 40ಕೆ.ಜಿ.ಯ ಒಂದು ಪಾಕೆಟ್ ಸಿಗುತ್ತದೆ, ಪ್ರಸ್ತುತ ಒಂದು ಕೆ.ಜಿ.ಗೆ 10ರೂಪಾಯಿಗಳು, 40ಕೆ.ಜಿ.ಯ ಪಾಕೆಟ್ ಬೆಲೆ 400–00 ಗಳು.

ಫೈಬರ್ ರೆಜಿನ್ : ಫೈಬರ್ ರೆಜಿನ್ ತಯಾರಿಕೆಗೆ ಬೇಕಾದ ಕಚ್ಚಾ ಸಾಮಗ್ರಿಗಳು, ಕೆಮಿಕಲ್ಸ್ ಬೆಂಗಳೂರಿನಲ್ಲಿ ದೊರೆಯುತ್ತದೆ, ಒಂದೊಂದೂ ವಿವಿಧದರಗಳಲ್ಲಿ ದೊರೆಯುತ್ತವೆ, ಒಟ್ಟು ನಾಲ್ಕು ವಿವಿಧ ಕೆಮಿಕಲ್ಸ್ ಬೇಕಾಗುತ್ತದೆ, ಅವುಗಳೆಂದರೆ ಎಕ್ಸ್‌ಲೇಟರ್, ಬ್ಲೂ, ವೈಟ್ ಮ್ಯಾಟ್ ಮತ್ತು ಚಾಕ್ ಪೌಡರ್ ಈ ನಾಲ್ಕು ಮಿಶ್ರಣದಿಂದ ಫೈಬರ್ ತಯಾರಿಸವುದು.

ಲೋಹ : ಬೆಂಗಳೂರಿನಲ್ಲಿ ವಿವಿಧ ಲೋಹಗಳು ತೂಕ, ಗೇಜು, ಮೀಟರ್ ಅಳತೆಯಲ್ಲಿ ದೊರೆಯುತ್ತದೆ, ಇವನ್ನು ತಂದು ಮೌಲ್ಡ್ ಮಾಡುತ್ತಾರೆ, ಲೋಹಗಳು ಒಂದೊಂದೂ ವಿವಿಧ ದರದಲ್ಲಿ ದೊರೆಯುತ್ತವೆ.

ಆಸಿಡ್(ಸೆಲ್ಫರಿಕ್ ಆಸಿಡ್, ನೈಟ್ರಿಕ್ ಆಸಿಡ್): ಕಂಚಿನ ಲೋಹದಿಂದ ಶಿಲ್ಪಗಳನ್ನು ಮೌಲ್ಡಿಂಗ್ ಮಾಡಿದ ನಂತರ ಸೆಲ್ಫರಿಕ್ ಆಸಿಡ್‌ನಿಂದ ಶಿಲ್ಪಕ್ಕೆ ಅಂಟಿಕೊಂಡಿರುವ ಕೊಳೆಯನ್ನು ತೊಳೆಯುತ್ತಾರೆ, ಮಣ್ಣಿನ ಕಣಗಳು, ಪಿಓಪಿಯ ಕಣಗಳು ಅಥವಾ ಇನ್ನಾವುದೇ ರೀತಿಯ ಕೊಳೆ ಇದ್ದರೂ ಸೆಲ್ಫರಿಕ್ ಆಸಿಡ್‌ನಿಂದ ಸಂಪೂರ್ಣ ಕೊಳೆ ಹೋಗುತ್ತದೆ, ನಂತರ ನೈಟ್ರಿಕ್ ಆಸಿಡ್‌ನಿಂದ ಪಾಲಿಷ್ ಮಾಡುತ್ತಾರೆ, ನೈಟ್ರಿಕ್ ಆಸಿಡ್ ಮತ್ತು ಸೆಲ್ಫರಿಕ್ ಆಸಿಡ್ ಈ ಎರಡೂ ಮಿಶ್ರಣದಿಂದ ಪಾಲಿಷ್ ಮಾಡಿದ ಮೇಲೆ ಕಂಚಿನ ಶಿಲ್ಪ ಬಂಗಾರದ ಬಣ್ಣಕ್ಕೆ ಬರುತ್ತದೆ, ಫಳ ಫಳನೇ ಹೊಳೆಯುತ್ತದೆ, ಚಿನ್ನದ ಲೇಪನ ಮಾಡಿದಂತೆ ಕಾಣುತ್ತದೆ.

ರಾಮು ಯಾವುದೇ ಸಂಘ, ಸಂಸ್ಥೆ, ಸರ್ಕಾರದಿಂದ ಅನುದಾನ, ಗೌರವ ಧನವನ್ನು ಪಡೆದಿಲ್ಲ, ಆದರೆ ಚಿತ್ರದುರ್ಗದ ಕೆನರಾ ಬ್ಯಾಂಕಿನವರು ವರ್ಕ್‌ಷಾಪ್ ಮಾಡಲು ಸಹಕಾರ ನೀಡುತ್ತಾರೆ.

ರಾಮು ಮಾಡಿರುವ ಶಿಲ್ಪಕಲಾಕೃತಿಗಳು :

1). ಬುದ್ದನ ಪ್ರತಿಮೆ ಏಳು ಅಡಿ ಎತ್ತರ—ಚಿತ್ರದುರ್ಗ.

2). ಚಿತ್ರದುರ್ಗದ ತೋಟಗಾರಿಕೆ ಇಲಾಖೆಗೆ ಪ್ರತಿ ವರ್ಷ ಫಲ ಪುಷ್ಪ ಪ್ರದರ್ಶನದಲ್ಲಿ ಮಾಡೆಲ್ ಮಾಡಿಕೊಡುತ್ತಾರೆ.

3). ಚನ್ನಪಟ್ಟಣದ ಸರ್ಕಲ್‌ನಲ್ಲಿ ಪ್ರಪಂಚದ 7ನೇ ಅರ್ಥ ಶಾಸ್ತ್ರಜ್ಞ ಪ್ರೊ : ವೆಂಕಟಗಿರಿ ಗೌಡರ 2.1/2ಅಡಿ ಕಂಚಿನ ಪ್ರತಿಮೆ—2006-07ರಲ್ಲಿ ನಿರ್ಮಾಣ—ರಾಮನಗರ.

4). ಆನಂದ ರಾವ್ ಸರ್ಕಲ್‌ನಲ್ಲಿ ರೇಣುಕಾ ಚಾರ್ಯ ಕಾಲೇಜು ಸಂಸ್ಥಾಪಕರಾದ ಬಸಪ್ಪನವರ 2.1/2ಅಡಿ ಕಂಚಿನ ಪ್ರತಿಮೆ--ಬೆಂಗಳೂರು.

5). ತಿರುಪತಿಯ ಕಾಲೇಜಿನ ಬಳಿ ಸರ್.ಎಂ. ವಿಶ್ವೇಶ್ವರಯ್ಯನವರ ಕಂಚಿನ ಪ್ರತಿಮೆ—ತಿರುಪತಿ.

6). ಗಾಯಿತ್ರಿ ಭವನದ ಹತ್ತಿರದ ಸರ್ಕಲ್ ಬಳಿ ಸಂಗೊಳ್ಳಿ ರಾಯಣ್ಣನ ಕಂಚಿನ ಪ್ರತಿಮೆ ಚಿತ್ರದುರ್ಗ.

ಇದಲ್ಲದೇ ದೇವರ ವಿಗ್ರಹಗಳು, ವ್ಯಕ್ತಿ ಚಿತ್ರಗಳು, ಕೈ ಹಾಗೂ ಕಾಲುಗಳಿಗೆ ಹಾಕಿಕೊಳ್ಳುವ ಕಡಗಗಳು, ಪ್ರಾಣಿ, ಪಕ್ಷಿಗಳು ಮುಂತಾದ ಶಿಲ್ಪಗಳನ್ನು ಮಾಡಿದ್ದಾರೆ.

ವಿವಿಧ ತರಬೇತಿಗಳು, ಕ್ಯಾಂಪ್ ಗಳಲ್ಲಿ ಭಾಗವಹಿಸಿದ ವಿವರ :

1). ಸಿಮೆಂಟ್ ಕ್ಯಾಂಪ್, ಮೆಟಲ್ ಕ್ಯಾಂಪ್, ಕಲಾ ಪ್ರದರ್ಶನ, ತೋಟಗಾರಿಕಾ ಫಲ ಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.

2). ಚಿತ್ರಕಲಾ ಶಿಕ್ಷಕರ ತರಬೇತಿ. AMC (Art Master Cource).GD(Graduation Diploma), ಲೋಹ, ಉಬ್ಬು ಶಿಲ್ಪ ಕಲಾ ತರಬೇತಿ ಹಾಗೂ ಸ್ವಂತಕ್ಕೆ ಕಲಾಕೃತಿಗಳ ಪ್ರದರ್ಶನವನ್ನೂ ಏರ್ಪಡಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಕಲಾವಿದ ರಾಮು ಪಡೆದಿರುವ ಪ್ರಶಸ್ತಿ, ಪುರಸ್ಕಾರಗಳು :

1). ಕಲಾ ಚೈತನ್ಯ ಸೇವಾ ಸಂಸ್ಥೆ ಚಿತ್ರದುರ್ಗ ಇವರಿಂದ ಕಲಾ ಉತ್ಸವ-2015-16.

2). ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ಬೆಂಗಳೂರು.

3). ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್, ಚಿತ್ರದುರ್ಗ ಇವರಿಂದ ಪ್ರಶಸ್ತಿ-2015.

4). ಸಿಮೆಂಟ್ ಶಿಲ್ಪಕಲಾಶಿಬರದ ಪ್ರಶಸ್ತಿ.

5). ತಿರುಪತಿ ಕಾಲೇಜಿನ ವತಿಯಿಂದ ಪ್ರಶಸ್ತಿ.

6). ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಹಾಗೂ ಕನಕ ದಾಸರ ಸಂಘ ಸಂಯುಕ್ತವಾಗಿ ನಡೆಸಿದ ಕನಕ ದಾಸರ ಜಯಂತಿಯಂದು ನೀಡಿದ, ಸಂತ ಶ್ರೇಷ್ಠ ಕನಕದಾಸರ ಫಲಕ-2013.

7). ತೋಟಗಾರಿಕೆ ಇಲಾಖೆ ಚಿತ್ರದುರ್ಗ ಇವರಿಗೆ ಪ್ರತಿವರ್ಷ ಕಲಾವಿದ ರಾಮು ಫಲಪುಷ್ಪ ಪ್ರರ್ಶನಕ್ಕೆ ಮಾಡೆಲ್ ಗಳನ್ನು ಮಾಡಿಕೊಡುತ್ತಿದ್ದು, ಇಲಾಖೆಯು ಕಲಾವಿದ ರಾಮು ಇವರಿಗೆ ಪ್ರತಿವರ್ಷ ರೂಪಾಯಿ 50,000-00ದಿಂದ 1,00000-00(ಐವತ್ತು ಸಾವಿರದಿಂದ ಒಂದು ಲಕ್ಷದ ವರೆವಿಗೆ)ರೂಗಳ ವರೆಗೆ ನಗದು ಹಾಗೂ ಫಲಕ ನೀಡಿ ಗೌರವಿಸುತ್ತದೆ.

8). ಇತರೆ ಕೆಲವಾರು ಸಂಘ, ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿವೆ.

ಒಟ್ಟಾರೆ ಕಲಾವಿದ ರಾಮು ಬಹು ಮಾಧ್ಯಮಗಳಲ್ಲಿ ಶಿಲ್ಪಕಲೆಗಳನ್ನು ಮಾಡುತ್ತಾ, ಕೆಲವು ಕಲಾವಿದರಿಗೂ ತಮ್ಮ ಕಲೆಯನ್ನು ಕಲಿಸಿಕೊಡುತ್ತಾ ಸಾಗುತ್ತಿದ್ದಾರೆ, ಇದಲ್ಲದೇ "ಓಂ ಕಲಾ ಲೋಕ" ಎಂಬ ಅಂಗಡಿಯೊಂದನ್ನು ತೆರೆದು ಕಲಿಯುವಂತಹ ಆಸಕ್ತರಿಗೂ ಕಲೆಯನ್ನು ಕಲಿಸುತ್ತಿದ್ದಾರೆ.



ರಾಮು ಮಾಡಿರುವ ಮದಕರಿ ನಾಯಕನ ಮೇಣದ ಪ್ರತಿಮೆ:



ಲೋಹದ ಶಿಲ್ಪಕ್ಕೆ ಮೌಲ್ಡ್ ಮಾಡುವ ಮೇಣದ ಮೌಲ್ಡಿಂಗ್ ಮೂರ್ತಿ:(ಕರಿಬಸಜ್ಜ)



ರಾಮು ಮತ್ತು ಸಹಕಲಾವಿದರು ಮಾಡಿರುವ POP ಮಾಧ್ಯಮದ ಹಸು-ಕರುವಿನ ಶಿಲ್ಪ:



ಶಿಲ್ಪ ಕೆತ್ತನೆಗೆ ಬಳಸುವ ಮರ ಹಾಗೂ ಲೋಹದ ಸಲಕರಣೆಗಳು(Tools):

ವಿಳಾಸ :

ಆರ್ಟಿಸ್ಟ್ ರಾಮು (ಡಿ.ಟಿ. ರಮೇಶ್) ಬಿನ್ ಕೆ.ಆರ್. ತಿಪ್ಪೇಸ್ವಾಮಿ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹತ್ತಿರ,

ಸಿ.ಕೆ. ಪುರ, ಕೆಳಗೋಟೆ, ಚಿತ್ರದುರ್ಗ. ಮೊ: 9886260997.

ಶಿಲ್ಪಿ ಸುರೇಶ್(ಸಿ.ಆರ್.ಸುರೇಶ್): ಚಿತ್ರದುರ್ಗ ಜಿಲ್ಲೆಯಲ್ಲಿ ಕೃಷ್ಣ ಶಿಲೆಯಲ್ಲಿ ಶಿಲ್ಪ ಕೆತ್ತನೆಯಲ್ಲಿ ಹೆಸರುವಾಸಿಯಾಗಿದ್ದಾರೆ, ಇದುವರೆವಿಗೂ ನೂರಾರು ದೇವರ ಮೂರ್ತಿಗಳನ್ನು, ವಿವಿಧ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ. ದಾವಣಗೆರೆ ಜಿಲ್ಲೆಯಿಂದ ಚಿತ್ರದುರ್ಗಕ್ಕೆ ಚಿಕ್ಕ ವಯಸ್ಸಿನಲ್ಲಿ ತಂದೆಯವರ ಜೊತೆ ಬಂದು ನೆಲೆಸಿದರು, ತಮ್ಮ ತಾಯಿಯ ತಂದೆಯವರು ಸಂಪ್ರದಾಯ ಶಿಲ್ಪಿಗಳಾಗಿದ್ದು, ಇವರ ಪ್ರೇರಣೆಯಿಂದಲೇ ಸುರೇಶ್‌ರವರು ಇಂದು ಶಿಲ್ಪಿಗಳಾಗಿರುವುದು. ಪ್ರಾಥಮಿಕ ವಿದ್ಯಾಭ್ಯಾಸವನ್ನು ದಾವಣಗೆರೆಯಲ್ಲಿ ಕಲಿತು, ಹೈಸ್ಕೂಲ್ ವಿದ್ಯಾಭ್ಯಾಸವನ್ನು ಚಿತ್ರದುರ್ಗದಲ್ಲಿ ಮಾಡಿದರು, ಕಾರಣ ತಂದೆಯವರು ಮಾಡುತ್ತಿದ್ದ ಪ್ರಿಂಟಿಂಗ್ ಪ್ರೆಸ್ ಕೆಲಸದಲ್ಲಿ ಲಾಸ್ ಆಗಿ ಜೀವನ ನಿರ್ವಹಣೆ ಕಷ್ಟವಾಯಿತು, ಈ ಕಾರಣದಿಂದ ಚಿತ್ರದುರ್ಗಕ್ಕೆ ಬಂದು ಮುದ್ರಣ ಕೆಲಸವನ್ನು ಪ್ರಾರಂಭಿಸಿದರು ಇದರಿಂದ ಸುರೇಶ್ ಮಾಧ್ಯಮಿಕ ಹಾಗೂ ಹೈಸ್ಕೂಲು ಶಿಕ್ಷಣವನ್ನು ಚಿತ್ರದುರ್ಗದಲ್ಲಿ ಕಲಿಯಬೇಕಾಯಿತು, ಹಾಗೆಯೇ ಕಾಲೇಜು ಶಿಕ್ಷಣವನ್ನೂ ಕೂಡ ಚಿತ್ರದುರ್ಗದಲ್ಲಿಯೇ ಕಲಿತರು, ಬಿ.ಎ. ವರೆವಿಗೂ ವಿದ್ಯಾಭ್ಯಾಸವನ್ನು ಮಾಡಿದ್ದಾರೆ.


ತಂದೆಯವರ ಮೂಲ ವೃತ್ತಿಯಾದ ಮುದ್ರಣ(ಪ್ರಿಂಟಿಂಗ್ ಪ್ರೆಸ್) ಕಾರ್ಯದಲ್ಲಿ ಇವರೂ ತೊಡಗಿಕೊಂಡಿದ್ದು, ಚನ್ನಗಿರಿ ತಾಲ್ಲೂಕಿನ ಅಜ್ಜಿಹಳ್ಳಿ ಗ್ರಾಮದ ವಾಸಿ ತಾಯಿಯ ತಂದೆ ಶಿಲ್ಪಿ ನಿರಂಜನಾ ಅವರು ಮಾಡುತ್ತಿದ್ದ ಕೆತ್ತನೆಯ ಕೆಲಸ ಇವರನ್ನು ಸೆಳೆಯಿತು, ಚಿತ್ರದುರ್ಗದ ಚಂದ್ರವಳ್ಳಿ ದಿನ ಪತ್ರಿಕೆಯೊಂದರ ಸಂಪಾದಕರಾಗಿದ್ದ ತಿಪ್ಪೇರುದ್ರಪ್ಪನವರ ಪ್ರೋತ್ಸಾಹ ಮತ್ತು ಒತ್ತಾಸೆಯಿಂದ ಶಿಲ್ಪಕಲೆಯಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಶಿಲ್ಪಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡರು. ಇಂದು ಇವರು ಕೆತ್ತನೆ ಮಾಡಿರುವ ಶಿಲ್ಪಗಳು ಚಿತ್ರದುರ್ಗ ನಗರದ ಹಲಾವರು ದೇವಸ್ಥಾನಗಳಲ್ಲಿ ಇತರೆ ಸ್ಥಳಗಳಲ್ಲಿ ಪ್ರತಿಷ್ಠಾಪನೆ ಗೊಂಡಿವೆ, ಚಿತ್ರದುರ್ಗ ಜಿಲ್ಲೆಯ ಕೆಲವಾರು ಊರುಗಳಲ್ಲಿ ಇವರು ಮಾಡಿರುವ ಹಲವಾರು ಶಿಲ್ಪಗಳಿವೆ. ಗುಲ್ಬರ್ಗ, ರಾಯಚೂರು, ಹಳೇಬೀಡು, ಹಾಸನ, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲೂ ಇವರು ಕೆತ್ತನೆ ಮಾಡಿರುವ ಶಿಲ್ಪಗಳು ಇವೆ, ಅಲ್ಲದೇ ಆಂದ್ರ ರಾಜ್ಯಕ್ಕೂ ಇವರು ಕೆತ್ತನೆಯ ಮೂರ್ತಿಗಳು ಹೋಗಿವೆ.

ತಮ್ಮ ತಾತನವರಿಂದ ಶಿಲ್ಪಶಾಸ್ತ್ರ ಮತ್ತು ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ, ಮೂರ್ತಿಗಳ ಪ್ರಾಣ-ಪ್ರತಿಷ್ಠಾಪನೆಗಾಗಿ ವೈದಿಕ ವೃತ್ತಿಯನ್ನು ಕಲಿತರು, ಅಂದಿನಿಂದ ಇಂದಿನವರೆಗೂ ಎಲ್ಲಾ ದೇವರುಗಳ ಮೂರ್ತಿಗಳನ್ನು ಕೆತ್ತನೆ ಮಾಡಿದ್ದಲ್ಲದೇ, ಅವುಗಳ ಪ್ರತಿಷ್ಠಾಪನೆಯನ್ನೂ ಮಾಡಿದ್ದಾರೆ, ಈಗಲೂ ಸಹ ನಿರಂತರವಾಗಿ ಮಾಡುತ್ತಲೇ ಇದ್ದಾರೆ. ಕೃಷ್ಣ ಶಿಲೆಯಿಂದ ಮೂರ್ತಿಗಳ ಕೆತ್ತನೆ ಮತ್ತು ಮರದಿಂದ ಕೆತ್ತನೆಯನ್ನೂ ಮಾಡಿದ್ದರು, ಆದರೆ ಮರದ ಕೆತ್ತನೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದರೆ, ಕಲ್ಲಿನ ಕೆತ್ತನೆಯನ್ನು ಪ್ರತಿ ನಿತ್ಯ ಮಾಡುತ್ತಲೇ ಇದ್ದಾರೆ.

ಯಾವುದೇ ಮೂರ್ತಿಯನ್ನು ಮಾಡಲು ಮೊದಲು ಊರು ಇರುವ ಸ್ಥಿತಿ, ಜನಸಂಖ್ಯೆಯ ಆಧಾರದಲ್ಲಿ, ದೇವಸ್ಥಾನದ ಅಳತೆ, ಗರ್ಭಗುಡಿಯ ಅಳತೆ, ಗರ್ಭಗುಡಿಯ ಬಾಗಿಲ ಅಳತೆ ಮತ್ತು ಗರ್ಭಗುಡಿಯ ಮೇಲೆ ನಿರ್ಮಾಣವಾಗಿರುವ ಶಿಖರದ ಅಳತೆಗಳನ್ನು ಮಾನದಂಡವಾಗಿಟ್ಟುಕೊಂಡು ಗರ್ಭಗುಡಿಯ ಒಳಗೆ ಪ್ರತಿಷ್ಠಾಪನೆ ಮಾಡಬೇಕಾಗಿರುವ ಮೂರ್ತಿಯನ್ನು ಶಾಸ್ತ್ರೋಕ್ತವಾಗಿ ಮಾಡುತ್ತಾರೆ. ಕಾಶ್ಯಪ ಶಿಲ್ಪಶಾಸ್ತ್ರ, ಚಿತ್ರಕರ್ಮ ಶಾಸ್ತ್ರ ಇವುಗಳನ್ನು ಶಿಲ್ಪದ ಕೆತ್ತನೆಯಲ್ಲಿ ಅಳವಡಿಸಿಕೊಳ್ಳುತ್ತಾರೆ, ಕಾಶ್ಯಪ ಶಿಲ್ಪಶಾಸ್ತ್ರದಲ್ಲಿ ಎಲ್ಲಾ ರೀತಿಯ ವಾಸ್ತು ಸ್ಥಿತಿ ಇರುತ್ತದೆ, ಕಲ್ಲಿನ ಮಾಧ್ಯಮದಲ್ಲಿ ಪ್ರತಿಷ್ಟಾಪನಾ ಮೂರ್ತಿಗಳನ್ನು ಕೆತ್ತನೆ ಮಾಡುವ ಬಹುತೇಕ ಶಿಲ್ಪಿಗಳು ಹೆಚ್ಚಾಗಿ ಕಾಶ್ಯಪ ಶಿಲ್ಪಶಾಸ್ತ್ರವನ್ನು ಅಳವಡಿಸಿಕೊಂಡೇ ಇರುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಸೂಳೇಕೆರೆಯ ಬಳಿ ಮೂರ್ತಿಗಳ ಕೆತ್ತನೆಗೆ ಬೇಕಾದ ಕಲ್ಲು ಸಿಗುತ್ತಿತ್ತು ಆದರೆ ಈ ಕಲ್ಲು ಒಳ್ಳೆಯ ಗುಣಮಟ್ಟದಲ್ಲಿ ಇರುತ್ತಿರಲಿಲ್ಲವಂತೆ ಈ ಕಾರಣದಿಂದ ಸೂಳೇಕೆರೆಯ ಕಲ್ಲಿನಲ್ಲಿ ಕೆತ್ತನೆ ಮಾಡುವುದನ್ನು ಬಿಟ್ಟರು, ಮೈಸೂರಿನ ಹೆಗ್ಗಡೆ ದೇವನ ಕೋಟೆ ಬಳಿ ಕೃಷ್ಣ ಶಿಲೆಯ ಕಲ್ಲು ಸಿಗುತ್ತಿದ್ದು ಅಲ್ಲಿಂದ ಚಿತ್ರದುರ್ಗಕ್ಕೆ ತರಿಸಿ ಶಿಲ್ಪಗಳ ಕೆತ್ತನೆಯನ್ನು ಮಾಡುತ್ತಾರೆ, ವಾಹನದಲ್ಲಿ ಟನ್ ಗಟ್ಟಲೇ ಹೆಗ್ಗಡೆ ದೇವನ ಕೋಟೆಯಿಂದ ಚಿತ್ರದುರ್ಗಕ್ಕೆ ಸರಬರಾಜು ಮಾಡಿಕೊಳ್ಳುತ್ತಾರೆ, ಆದರೆ ಇತ್ತೀಚೆಗೆ ಕಲ್ಲಿನ ಬೆಲೆ ದುಬಾರಿಯಾಗಿದೆಯಂತೆ, ಶಿಲ್ಪಿಗಳಿಗೆ ಕಲ್ಲನ್ನು ಸರಬರಾಜು ಮಾಡಿಕೊಳ್ಳುವುದೇ ದೊಡ್ಡ ಸವಾಲಿನ ಸಂಗತಿಯಾಗಿದೆ, ಕಲ್ಲಿನ ಏಂಜೆಂಟರಿಗೆ ಅಥವಾ ಕಲ್ಲಿನ ಮಾಲೀಕರಿಗೆ ಕೇಳಿದಷ್ಟು ಹಣ ಕೊಡಬೇಕು, ಸಾರಿಗೆ ವ್ಯವಸ್ಥೆ ಮಾಡಲು, ವಾಹನದವರೂ ಕೇಳಿದಷ್ಟು ಹಣವನ್ನು ಕೊಡಬೇಕು, ಅಲ್ಲದೇ ಕಲ್ಲನ್ನು ಲಾರಿಗೆ ಲೋಡು ಮಾಡಲು ಕ್ರೇನ್ ವಾಹನದವರಿಗೂ ಕೇಳಿದಷ್ಟು ಹಣ ನೀಡಬೇಕು, ನಂತರ ತಮ್ಮ ನಿವಾಸದ ಬಳಿ ಲಾರಿಯಿಂದ ತಂದ ಕಲ್ಲನ್ನು ಇಳಿಸಲು ಮತ್ತೇ ಕ್ರೇನ್ ಮಾಲೀಕರಿಗೆ ಹಣ ನೀಡಬೇಕು, ನಂತರ ಕಲ್ಲನ್ನು ಬೇಕಾದ ಅಳತೆಗೆ ತುಂಡರಿಸಲು, ಶಿಲ್ಪದ ಕೆತ್ತನೆಯನ್ನು ಮಾಡಲು ಸಹಾಯಕ ಶಿಲ್ಪಿಗಳಿಗೆ ಸಂಬಳ ನೀಡಬೇಕು. ಒಂದು ಟನ್ ಕಚ್ಚಾ ಕಲ್ಲಿಗೆ 15,000–00ರೂಗಳ ಸರಬರಾಜು ಖರ್ಚು ತಗುಲುತ್ತದೆ, ಇದರಲ್ಲಿ ಲಾರಿ ಬಾಡಿಗೆ, ಲೋಡ್ ಮತ್ತು ಅನ್ ಲೋಡ್ ಹಾಗೂ ಕ್ರೇನ್‌ನ ಬಾಡಿಗೆ ಸೇರಿರುತ್ತದೆ. ಹೀಗೆ ಕಲ್ಲನ್ನು ಕತ್ತರಿಸಲು ಬೇಕಾದ ಯಂತ್ರದ ಖರ್ಚು, ವಿದ್ಯತ್ ಖರ್ಚು, ಇತರೆ ಕೆತ್ತನೆ ಮಾಡಲು ಸಾಮಗ್ರಿಗಳ ಖರ್ಚು ಮುಂತಾದ ಖರ್ಚುಗಳನ್ನು ನಿಭಾಯಿಸಿಕೊಂಡು ಕೆತ್ತನೆ ಮಾಡಿಸುವವರು ಕೊಟ್ಟ ಸಂಭಾವನೆಯಲ್ಲಿ ಎಲ್ಲಾ ಖರ್ಚನ್ನು ತೆಗೆದು ಉಳಿದ ಹಣದಲ್ಲಿ ತಮ್ಮ ಜೀವನ ನಿರ್ವಹಣೆಯನ್ನು ಮಾಡಿಕೊಳ್ಳಬೇಕು, ಒಂದು ವೇಳೆ ಮೂರ್ತಿಯ ಪೂರ್ತಿ ಕೆತ್ತನೆಯನ್ನು ಮಾಡಿದ್ದು ಕೊನೆಯ ಹಂತದಲ್ಲಿ ಏನಾದರೂ ಶಿಲ್ಪಕ್ಕೆ ತೊದರೆ ಆದರೆ, ಇಡೀ ಶಿಲ್ಪದ ಅಷ್ಟೂ ದಿನದ ಕೆತ್ತನೆ ವಿಫಲವಾದಂತೆ, ಅಷ್ಟೂ ದಿನ ಆ ಶಿಲ್ಪದ ಕೆತ್ತನೆ ಮಾಡಲು ತಗುಲಿದ ಖರ್ಚು ಶಿಲ್ಪಿಗೆ ದೊಡ್ಡ ಆಘಾತವಾದಂತೆ, ಈ ರೀತಿಯಾಗಿ ಪದೇ ಪದೇ ಸಂಭವಿಸಿದರೆ, ಅಂದರೆ ಕೆತ್ತನೆ ಮಾಡಿದ ಶಿಲ್ಪಕ್ಕೆ ಚಿಕ್ಕ ಮಕ್ಕಳಿಂದ, ಮತ್ತಾರೋ ಕಿಡಿಗೇಡಿಗಳಿಂದ, ಅಥವಾ ಆಕಸ್ಮಿಕವಾಗಿ ಶಿಲ್ಪಕ್ಕೆ, ಇತರೆ ಯಾವೂದೋ ಕಾರಣದಿಂದ ತೊಂದರೆ ಉಂಟಾದರೆ ಅದು ಶಿಲ್ಪಿಗೆ ದೊಡ್ಡ ನಷ್ಟವಾದಂತೆ.

ಸಂಪ್ರದಾಯ ಶಿಲ್ಪಿ ಸುರೇಶ್ ರವರ ಕೆತ್ತನೆಯ ಶಿಲ್ಪಗಳು:



ಕೃಷ್ಣ ಶಿಲೆಯಲ್ಲಿ ಎರಡನೇ ಸುತ್ತಿನ ಕೆತ್ತನೆಯ ಮಾರುತಿ ಮೂರ್ತಿ:



ಶಿಲ್ಪ ಕೆತ್ತನೆಗೆ ಮೊದಲ ಸಿಧ್ಧತೆಯಲ್ಲಿರುವ ಕೃಷ್ಣ ಶಿಲೆ(ಕಲ್ಲು):


ಕೆತ್ತನೆಗೊಳ್ಳುತ್ತಿರುವ ಕಲ್ಲುಗಳು(ದೇವಿಯ ಮೂರ್ತಿಗಳು):


ಕೃಷ್ಣ ಶಿಲೆಯಲ್ಲಿ ಕೆತ್ತನೆಗೊಂಡಿರುವ ಈಶ್ವರಿ:


ಸಿಂಹದ ಅರ್ಧ ಕೆತ್ತನೆಗೊಂಡಿರುವ ಕೃಷ್ಣ ಶಿಲೆ :


ಸಿಂಹದ ಕೆತ್ತನೆ ಪೂರ್ಣಗೊಂಡಿರುವ ಕಲ್ಲು:



ಕೃಷ್ಣ ಶಿಲೆಯಲ್ಲಿ ಅರ್ಧ ಕೆತ್ತನೆಗೊಂಡಿರುವ ವಿವಿಧ ದೇವರ ಮೂರ್ತಿಗಳು:



ಕೃಷ್ಣ ಶಿಲೆಯಲ್ಲಿ ಅರ್ಧ ಕೆತ್ತನೆಗೊಂಡಿರುವ ವಿವಿಧ ದೇವರ ಮೂರ್ತಿಗಳು:

ವಿಳಾಸ :

ಶಿಲ್ಪಿ ಸುರೇಶ್ ಬಿನ್ ಆರ್. ರಾಮಚಂದ್ರ, # ಶಿಲ್ಪ ಲೋಕ, ಶ್ರೀ ಕಾಳಿಕಾದೇವಿ ಮಠ
ಕೋಟೆ ಬಾಗಿಲು ಹತ್ತಿರ, ಚಿತ್ರದುರ್ಗ.

ಕೆ.ಆರ್. ಶೇಖರಪ್ಪ: ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆ ದೇವರಪುರದ ವಾಸಿಯಾಗಿರುವ ಇವರು ಸಂಪ್ರದಾಯ ಶಿಲ್ಪಿಗಳು, 10ನೇ ತರಗತಿಯವರವಿಗೆ ಮಾತ್ರ ವಿದ್ಯಾಭ್ಯಾಸವನ್ನು ಮಾಡಿದ್ದಾರೆ, ಚಿಕ್ಕ ವಯಸ್ಸಿರುವಾಗಲೇ ತಂದೆಯ ಜೊತೆ ಮಣ್ಣಿನಿಂದ ಅಲಂಕಾರಿಕಾ ವಸ್ತುಗಳನ್ನು, ಮಣ್ಣಿನ ಮಡಿಕೆ, ಕುಡಿಕೆ, ಸೋರೆಗಳನ್ನು ಚಿತ್ತಾಕರ್ಷಕವಾಗಿ ಮಾಡುತ್ತಿದ್ದರು, ಕುಂಬಾರಿಕೆ ಇವರ ಮೂಲ ವೃತ್ತಿ, ಮಡಿಕೆ, ಕುಡಿಕೆಗಳ ಮೇಲೆ ಎಲೆ, ಬಳ್ಳಿ, ಗೆರೆಗಳು, ಗಂಟೆ, ಗೆಜ್ಜೆ ಸರಗಳ ಉಬ್ಬು ಚಿತ್ರಗಳನ್ನು ತುಂಬಾ ಸುಂದರವಾಗಿ ಚಿತ್ರಿಸುತ್ತಿದ್ದರು, ಹೆಚ್.ಡಿ. ಪುರದ ಮಡಿಕೆ, ಕುಡಿಕೆಗಳೆಂದರೆ ಹೆಸರುವಾಸಿ, ಎತ್ತಿನ ಗಾಡಿಗಳಲ್ಲಿ ಇವುಗಳನ್ನು ಮಾರಾಟ ಮಾಡುತ್ತಿದ್ದರು, ಇವರು ತಯಾರಿಸಿದ ಮಡಿಕೆ, ಕುಡಿಕೆಗಳು ತುಂಬಾ ಗಟ್ಟಿಯಾಗಿದ್ದು, ಬಾಳಿಕೆ ಚೆನ್ನಾಗಿ ಬರುತ್ತವೆ ಎಂದು ಎಲ್ಲರೂ ಈ ಊರಿನ ಮಡಿಕೆಗಳನ್ನೇ ಖರೀದಿಸುತ್ತಿದ್ದರು.

ಎತ್ತಿನ ಗಾಡಿಯ ಚಕ್ರದಂತೆ ಇರುವ ಸಣ್ಣದಾದ ಚಕ್ರವನ್ನು ಇವರೇ ಸ್ವತಃ ತಯಾರಿಸಿಕೊಂಡು ಇದರ ಸಹಾಯದಿಂದ ಮಣ್ಣಿನ ಮಾಧ್ಯಮದಲ್ಲಿ ಕೆಲವಾರು ಉಪಯುಕ್ತ ಮನೆಯ ಸಾಮಾನುಗಳನ್ನು ತಯಾರಿಸುತ್ತಿದ್ದರು.

ಗಾಡಿಯ ಚಕ್ರವನ್ನೇ ಹೋಲುವ 3*3ಅಡಿ ಅಳತೆಯ ದುಂಡನೆಯ ಚಕ್ರವನ್ನು ಮಾಡಿ ಚಕ್ರದ ಮಧ್ಯದಲ್ಲಿ ಕೆಳಗಡೆ ಒಂದು ದಪ್ಪನೆಯ ತಿರುಗುಣಿ ಇರುವ ಗೂಟವನ್ನು ನೆಲದೊಳಗೆ ಹೂತಿದ್ದು, ತಿರುಗುಣಿಯ ಮೇಲೆ ಈ ಚಕ್ರವನ್ನು ಇಟ್ಟು ಚಕ್ರದ ಮಧ್ಯದಲ್ಲಿ ಮುಂಚೆಯೇ ಹದಮಾಡಿಟ್ಟುಕೊಂಡ ಮಣ್ಣನ್ನು ಇಡುತ್ತಾರೆ, ನಂತರ ಚಕ್ರವನ್ನು ತಿರುಗಿಸುವುದು, ಚಕ್ರವು ತಿರುಗುತ್ತಿರುವಾಗ್ಗೆ ಚಕ್ರದ ಮಧ್ಯದಲ್ಲಿ ಇರುವ ಮಣ್ಣು ತಿರುಗುತ್ತಿರುತ್ತದೆ, ಆ ಸಮಯದಲ್ಲಿ ಎರಡೂ ಕೈಗಳ ಹಸ್ತದಿಂದ ಕೆಳಮಟ್ಟದಿಂದ ಒತ್ತುತ್ತಾ ಮೇಲಕ್ಕೆ ಕೈಗಳನ್ನು ತರಬೇಕು, ಈ ಸಮಯದಲ್ಲಿ ಎಲ್ಲಿ ಒಳ ತಗ್ಗು ಬೇಕು, ಎಲ್ಲಿ ಉಬ್ಬು ಬೇಕೋ ಅಲ್ಲಿ ಕೈಗಳಿಂದ ಮಾಡಿಕೊಳ್ಳಬೇಕು, ನಂತರ ದುಂಡನೆಯ ಆಕಾರ ಬಂದ ಮೇಲೆ ಒಳಗಿನ ಮಣ್ಣನ್ನು ತೆಗೆದು ಹಾಕಬೇಕು, ಆಗ ಒಳಗಡೆ ಟೊಳ್ಳಾಗಿ ದುಂಡನೆಯ ಕುಡಿಕೆ ಸಿದ್ದವಾಗುತ್ತದೆ.

ಆನಂತರ ಕುಡಿಕೆ ಹಸಿ ಇರುವಾಗಲೇ ಹೊರ ಮುಖದಲ್ಲಿ, ಕಂಠದ ಕೆಳಗಡೆ ಸುತ್ತಲೂ ತಗ್ಗು ಅಥವಾ ಉಬ್ಬು ಗೆರೆಗಳನ್ನು, ಎಲೆ, ಬಳ್ಳಿ, ಗೆಜ್ಜೆ, ಗಂಟೆ ಹೀಗೆ ಯಾವ ರೀತಿಯ ಚಿತ್ರಗಳನ್ನಾದರೂ ಮಾಡಬಹುದು, ಉಬ್ಬು ಚಿತ್ರಗಳನ್ನು ಕುಡಿಕೆಯ ಮೇಲೆ ಮಾಡುವಾಗ ಬಹಳ ಸುಕ್ಷ್ಮವಾಗಿ ಮತ್ತು ಚಾಣಾಕ್ಷತೆಯಾಗಿ ಮಾಡಬೇಕು, ಈ ಉಬ್ಬು ಚಿತ್ರಗಳನ್ನು ಮಾಡಲು ಬೇರೆ ಮಣ್ಣನ್ನು ಬಳಸಬೇಕು, ಚಿಕ್ಕ ಚಿಕ್ಕ ಚಿತ್ರಗಳನ್ನು ಉದಾ: ಎಲೆ, ಗಂಟೆ, ಗೆಜ್ಜೆ ಇವುಗಳನ್ನು ಮೊದಲು ಬೇರೆ ಮಾಡಿಕೊಂಡಿದ್ದು, ತಯಾರು ಮಾಡಿದ ಮಡಿಕೆ, ಕುಡಿಕೆಗೆ ಅಂಟಿಸಬೇಕು, ನಂತರ ಮಾಡಿದ ಮಡಿಕೆಗಳನ್ನು ಬೆಂಕಿಯ ಶಾಖದಿಂದ ಸುಡಬೇಕು, ಹೀಗೆ ಹದವಾಗಿ ಸುಟ್ಟ ಮಾಡಿಕೆಗಳು ದೀರ್ಘಕಾಲ ಬಾಳಿಕೆ ಬರುತ್ತವೆ, ಸುಡುವಾಗಲೂ ಚಾಣಾಕ್ಷತನದಿಂದ ಸುಟ್ಟರೆ ಕೆಂಪು ಅಥವಾ ಕಂದು ಬಣ್ಣವನ್ನು ಹೋಲುತ್ತವೆ.

ಚಿಕ್ಕ ಚಿಕ್ಕ ಮಡಿಕೆಗಳು, ಕುಡಿಕೆಗಳಿಂದ ಹಿಡಿದು ನಾಲ್ಕು ಬಿಂದಿಗೆ ನೀರನ್ನು ಹಿಡಿಯುವ ದೊಡ್ಡ ಗಾತ್ರದ ಗುಡಾಣ, ಸೋರೆಗಳನ್ನು ಮಾಡುತ್ತಾರೆ, ಇದಲ್ಲದೇ ಧಾನ್ಯಗಳನ್ನು ಬಹಳ ದಿನದ ವರೆವಿಗೂ ಕೆಡದೆ ಇರಲು ದೊಡ್ಡ ಗಾತ್ರದ ಸೋರೆಗಳು ಇನ್ನೊಂದು ಅರ್ಥದಲ್ಲಿ ವಡೇವುಗಳು ಎನ್ನುತ್ತಾರೆ, ಅಂತಹ ವಡೇವುಗಳನ್ನು ಮಾಡುತ್ತಿದ್ದರು, ಈ ರೀತಿಯ ವಡೇವುಗಳನ್ನು ಮನೆಯ ಒಳಗಿನ ಗೋಡೆಗಳ ಮಧ್ಯದಲ್ಲಿ ಇಟ್ಟು ಗೋಡೆಗಳನ್ನು ಕಟ್ಟುತ್ತಿದ್ದರು, ಅಂದರೆ ವಡೇವುಗಳ ಕಂಠದ ಎತ್ತರಕ್ಕೆ ಸರಿಯಾಗಿ ಗೋಡೆಗಳನ್ನು ಕಟ್ಟುತ್ತಿದ್ದರು, ಯಾಕೆಂದರೆ ಮೇಲುಗಡೆ ಧಾನ್ಯಗಳನ್ನು ವಡೇವಿನೊಳಗೆ ಹಾಕುವುದಕ್ಕಾಗಿ, ಆನಂತರ ವಡೇವಿನ ಬಾಯಿ ಮುಚ್ಚುತ್ತಿದ್ದರು, ಕೆಳಗಡೆ ನೆಲದಿಂದ ಒಂದು ಅಡಿ ಎತ್ತರದಲ್ಲಿ ವಡೇವಿಗೆ

ರಂಧ್ರ(ತೂತು) ಬಿಟ್ಟಿರುತ್ತಿದ್ದರು, ಈ ರಂಧ್ರವು ಚಿಕ್ಕದಾಗಿದ್ದು ಮನುಷ್ಯರ ಮುಂಗೈ ಅಷ್ಟೇ ಒಳಗಡೆ ಇಡಬಹುದು, ಧಾನ್ಯವನ್ನು ವಡೇವಿಗೆ ತುಂಬಿದ ನಂತರ ಮೇಲುಗಡೆಯ ದೊಡ್ಡ ಬಾಯಿ ಮತ್ತು ಕೆಳಗಡೆ ಬಟ್ಟಿರುವ ಚಿಕ್ಕ ರಂಧ್ರ ಎರಡನ್ನೂ ಮುಚ್ಚಿರುತ್ತಾರೆ, ಧಾನ್ಯ ಬೇಕಾದಾಗ ಕೆಳಗಡೆಯ ರಂಧ್ರವನ್ನು ತೆಗೆದು ಅಗತ್ಯವಿದ್ದಷ್ಟು ಧಾನ್ಯವನ್ನು ತೆಗೆದುಕೊಂಡು ನಂತರ ಒಂದು ಹಳೆ ಬಟ್ಟೆಯಿಂದ ರಂಧ್ರನ್ನು ಮುಚ್ಚುತ್ತಾರೆ, ಇಂತಹ ವಡೇವುಗಳಲ್ಲಿ ಎರಡು ವಿಧಗಳಿವೆ, ಕೆಲವು ವಡೇವುಗಳು ಸಾದಾ ಇದ್ದು ಇವುಗಳನ್ನು ಗೋಡೆಯ ಜೊತೆ ಇಟ್ಟಿರುತ್ತಾರೆ, ಇನ್ನೂ ಕೆಲವು ವಡೇವುಗಳು ಉಬ್ಬು ಚಿತ್ರಗಳನ್ನು ಒಳಗೊಂಡಿದ್ದು ಮನೆಯ ಒಳಗೆ ಮೂಲೆಗಳಲ್ಲಿ ಇಟ್ಟಿರುತ್ತಾರೆ.

ವಡೇವುಗಳಿಗೆ ಇಂತಿಷ್ಟೇ ಅಳತೆ ಎಂಬುವುದಿರುವುದಿಲ್ಲ, ಒಂದು ಅಡಿಯಿಂದ ಹಿಡಿದು ಎಂಟು ಅಡಿಯವರೆವಿಗೂ ಇರುತ್ತವೆ, ಚಿಕ್ಕ ಗಾತ್ರದವುಗಳನ್ನು ಉಪ್ಪಿನ ಕಾಯಿ ಅಥವಾ ಇದೇ ರೀತಿಯ ಪದಾರ್ಥಗಳನ್ನು ತುಂಬಿಡಲು ಉಪಯೋಗಿಸಿದರೆ, ದೊಡ್ಡ ಗಾತ್ರದ ವಡೇವುಗಳು ಧಾನ್ಯ ಶೇಖರಣೆಗಾಗಿ ಉಪಯೋಗಿಸುತ್ತಿದ್ದರು.

ಮಡಿಕೆ, ಕುಡಿಕೆಗಳಲ್ಲದೇ, ಮನೆಗಳ ಮಾಳಿಗೆ ಮೇಲಿನ ನೀರು ಕೆಳಗೆ ಬೀಳಲು ಅಳವಡಿಸುವ ಮಣ್ಣಿನ ಪೈಪುಗಳನ್ನು, ಎತ್ತರದ ಗದ್ದೆಗಳಿಂದ ಕೆಳಗಿನ ತಗ್ಗಾದ ಗದ್ದೆಗೆ ನೀರು ಹರಿಯಲು ಚೌಕಾಕಾರದ ಗದ್ದೆಯ ಮೂಲೆಯಲ್ಲಿ ಮಣ್ಣಿನ ಪೈಪನ್ನು ಅಳವಡಿಸುತ್ತಾರೆ ಅಂತಹ ಮಣ್ಣಿನ ಪೈಪುಗಳನ್ನು ಇವರು ಮಣ್ಣಿನಿಂದ ಮಾಡುತ್ತಿದ್ದರು.

ಗುರಾಯಿ, ದೀಪಗಳು, ಪ್ರಾಣಿ, ಪಕ್ಷಿಗಳು, ಹೂಜಿ, ಹೂವಿನ ಕುಂಡಗಳು, ನೀರು ಕುಡಿಯುವ ಗುಡಾಣಗಳು, ಸಣ್ಣ ಅಳತೆಯ ಮಡಿಕೆಗಳು ಇದ್ದು ನೀರು ಕುಡಿಯಲು ಉಪಯೋಗಿಸುವುದರಿಂದ ಹಿಡಿದು ಉಪ್ಪಿನಕಾಯಿ ತುಂಬಿಡಲು, ಹಿಟ್ಟು ಹಾಕಿಡಲು, ಉಪ್ಪು ಹಾಕಲು, ಸಾರು ಮಾಡಲು, ಮಜ್ಜಿಗೆ ಹಾಕಿಡಲು ಹೀಗೆ ದಿನ ನಿತ್ಯ ಮನೆಯಲ್ಲಿ ಬಳಸುವ ಪದಾರ್ಥಗಳನ್ನು ಇಡಲು ಮಣ್ಣಿನ ವಸ್ತುಗಳನ್ನು ಹಿಂದೆ ಬಳಸುತ್ತಿದ್ದರು, ಆದರೀಗ ಆಧುನಿಕ ವಸ್ತುಗಳ ಮುಂದೆ ಇವು ನಾಶ ಹೊಂದಿವೆ.

ಇಂತಹ ಸಣ್ಣ ಸಣ್ಣ ಪ್ರಮಾಣದ ವಸ್ತುಗಳನ್ನು ಮಾಡಿದಾಗ ಅವುಗಳು ಆಕರ್ಷಕವಾಗಿ ಕಾಣಲು ಅವುಗಳ ಮೇಲೆ ವಿವಿಧ ರೀತಿಯ ಉಬ್ಬು ಚಿತ್ರಗಳನ್ನು ಮಾಡುತ್ತಿದ್ದರು, ನೀರು ಕುಡಿಯಲು ಉಪಯೋಗಿಸುತ್ತಿದ್ದ ಹೂಜಿ ತುಂಬಾ ಆಕರ್ಷಕವಾಗಿ ಕಾಣುತ್ತಿತ್ತು, ನವಿಲು, ಹಂಸ ಪಕ್ಷಿ, ಬಾತುಕೋಳಿಗಳ ಆಕಾರದ ಹೂಜಿಗಳನ್ನು ಮಾಡಿದ್ದು, ನೀರು ಹೊರ ಬರಲು ಕೊಳಾಯಿ ಪಕ್ಷಿಗಳ ಕೊಕ್ಕಿನ ರೀತಿ ಇರುತ್ತಿತ್ತು, ಸಿಂಹ, ಆನೆ, ಕುದುರೆ ಮುಂತಾದ ಪ್ರಾಣಿಗಳ ತಲೆಗಳನ್ನು ಮಾಡಿ ಅವುಗಳ ಬಾಯಿಯಿಂದ ನೀರು ಹೊರ ಬರುವಂತೆ ಮಾಡಿರುತ್ತಿದ್ದರು, ಇಂತಹ ಕೊಳಾಯಿ ಇರುವ ಹೂಜಿಯಿಂದ ನೀರು ಕುಡಿದರೆ ಆರೋಗ್ಯಕ್ಕೆ ಒಳ್ಳೆಯದು, ನೀರು ತಣ್ಣಗೆ ಇರುತ್ತದೆ, ಪ್ರಾಣಿ, ಪಕ್ಷಿಗಳ ತಲೆಯನ್ನು ಹೋಲುವಂತೆ ಮಾಡಿದ ಹೂಜಿಗಳ ಮೇಲೆ ವಿವಿಧ ಚಿಕ್ಕ ಚಿಕ್ಕ ಉಬ್ಬು ಚಿತ್ರಗಳನ್ನು ಬಿಡಿಸಿರುತ್ತಾರೆ, ಈ ರೀತಿಯ ಹೂಜಿಗಳನ್ನು, ಮಡಿಕೆ, ಕುಡಿಕೆಗಳನ್ನು, ವಡೇವುಗಳನ್ನು ಶೇಖರಪ್ಪ ಇವರು ಈಗಲೂ ಯಾರಾದರೂ ಹೇಳಿದರೆ ಮಾಡಿಕೊಡುತ್ತಾರೆ, ಚಕ್ರದ ಮೇಲೆ ಬರೀ ಮಡಿಕೆ, ಕುಡಿಕೆಗಳಷ್ಟೇ ಅಲ್ಲದೆ ಮೂರ್ತಿಗಳನ್ನೂ ಮಾಡುತ್ತಿದ್ದರು.

ಕೆಲವು ದಿನಗಳ ನಂತರ, ಕೈಯಿಂದ ಮಾಡಿದ ಚಕ್ರದ ಬದಲಾಗಿ ಬಾಲ್ ಬೇರಿಂಗ್ ಚಕ್ರ ಹೊಸದಾಗಿ ಬಂದಿದ್ದು, ಇವರೂ ಆ ಚಕ್ರವನ್ನು ತರಿಸಿ ಅದರ ಮೇಲೂ ಮಣ್ಣಿನ ಮಡಿಕೆ, ಕುಡಿಕೆ, ಮಣ್ಣಿನ ಮೂರ್ತಿಗಳನ್ನು ಮಾಡುತ್ತಿದ್ದರು, ಈಗ ಮಣ್ಣಿನ ಮಡಿಕೆ, ಕುಡಿಕೆಗಳನ್ನು ಯಾರೂ ಖರೀದಿಸದಿರುವುದರಿಂದ ಅವುಗಳನ್ನು ಮಾಡುವುದನ್ನು ಬಿಟ್ಟಿದ್ದಾರೆ, ಆದರೆ ಮಣ್ಣಿನಿಂದ ಇತರೆ

ಮೂರ್ತಿಗಳನ್ನು, ಪ್ರಾಣಿ, ಪಕ್ಷಿಗಳು, ಮನುಷ್ಯನಾಕೃತಿಯ ಚಿತ್ರಗಳನ್ನು ಮಾಡುತ್ತಾರೆ, ಗಣೇಶನ ಹಬ್ಬದ ಸಮಯದಲ್ಲಿ ವಿವಿಧ ರೂಪದ ಗಣೇಶನ ಮೂರ್ತಿಗಳು, ಗಂಗೆ–ಗೌರಿ, ಶಿವ ಪಾರ್ವತಿ, ಸುಬ್ರಮಣ್ಯ ಮುಂತಾದ ಶಿಲ್ಪಗಳನ್ನು ಮಾಡಿ ಶಿವಮೊಗ್ಗ, ಚಿತ್ರದುರ್ಗ ನಗರಗಳಲ್ಲಿ ಮಾರಾಟ ಮಾಡುತ್ತಾರೆ.

ಚಕ್ರದ ಸಹಾಯದಿಂದ, ಚಕ್ರದ ಮೇಲೆ ಕಲೆಗಳನ್ನು ಮಾಡವುದು ತುಂಬಾ ಸುಲಭ, ಮಾಡಿದ ಶಿಲ್ಪಗಳನ್ನು ಬೇಕಾದ ಕಡೆ ತಿರುಗಿಸಿಕೊಂಡು ಬಣ್ಣ ಹಾಕಲು ಚಕ್ರವು ತುಂಬಾ ಸಹಕಾರಿಯಾಗುತ್ತದೆ, ಸುಮಾರು ವರ್ಷಗಳ ಹಿಂದೆ ಇವರ ಊರಿಗೆ ಶಿವಮೊಗ್ಗದಿಂದ ದೇವಸ್ಥಾನದ ಮೇಲೆ ಸಿಮೆಂಟ್‌ನಿಂದ ಶಿಲ್ಪಗಳನ್ನು ಮಾಡಲು ಬಂದಿದ್ದರು ಇದನ್ನು ಪ್ರತಿನಿತ್ಯ ನೋಡುತ್ತಿದ್ದ ಶೇಖರಪ್ಪನವರಿಗೆ ತಾನೂ ಈ ಸಿಮೆಂಟ್‌ನಿಂದ ಶಿಲ್ಪಗಳನ್ನು ಮಾಡಬೇಕೆಂಬ ಆಸೆ ಮೂಡಿತು, ಆ ಕ್ಷಣವೇ ಅವರ ಜೊತೆ ಸೇರಿ ಸಿಮೆಂಟ್‌ನ ಶಿಲ್ಪಗಳನ್ನು ಮಾಡಲು ಕಲಿತರು ಈಗ ಸ್ವತಃ ಇವರೇ ಶಿಲ್ಪಗಳನ್ನು ಮಾಡುತ್ತಾರೆ.

ಶೇಖರಪ್ಪನವರು ಹೊಸದುರ್ಗ ತಾಲ್ಲೂಕು ಜೆ.ಎನ್.ಕೋಟೆ ಗ್ರಾಮದ ದೇವಸ್ಥಾನದಲ್ಲಿ ಶಿಲ್ಪಗಳನ್ನು ಮಾಡಲು ಹೊಸದಾಗಿ ಗುತ್ತಿಗೆ ಪಡೆದುಕೊಂಡು ಹೇಳಿದ ದಿನಕ್ಕೆ ಸರಿಯಾಗಿ ಕೆಲಸವನ್ನು ಮುಗಿಸಿಕೊಟ್ಟರು, ಈ ದೇವಸ್ಥಾನದಲ್ಲಿ ಶೇಖರಪ್ಪನವರು ಮಾಡಿದ ಶಿಲ್ಪಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು, ಇದರ ನಂತರ ಶೇಖರಪ್ಪನವರಿಗೆ ಸಿಮೆಂಟಿನಿಂದ ಶಿಲ್ಪಗಳನ್ನು ಮಾಡಲು ಕರೆಗಳು ಸಾಕಷ್ಟು ಬರತೊಡಗಿದವು, ನಂತರ ದೇವರ ಎಲ್ಲಾ ಶಿಲ್ಪಗಳನ್ನು, ಪ್ರಾಣಿ, ಪಕ್ಷಿಗಳು, ಮನುಷ್ಯನ ಶಿಲ್ಪಗಳು, ಗಿಡ, ಬಳ್ಳಿಗಳು ಮುಂತಾದ ಶಿಲ್ಪಗಳನ್ನೂ ಸೂಕ್ಷ್ಮ ಚಿತ್ರಗಳನ್ನೂ ಮಾಡುತ್ತಾರೆ.

ಸ್ಥಳೀಯವಾಗಿ ಸಿಗುವ ಮಣ್ಣು ಮತ್ತು ಚೀನಾಕ್ಲೇ, ವೈಟ್ ವೇರ್ ಮಣ್ಣುಗಳಲ್ಲೂ ಶಿಲ್ಪಗಳನ್ನು ಮಾಡುತ್ತಾರೆ, ಚೀನಾಕ್ಲೇ ಮಾಧ್ಯಮದಿಂದ ವಿವಿಧ ಅಲಂಕಾರಕಾ ವಸ್ತುಗಳನ್ನು ಮಾಡಿದ್ದಾರೆ, ಲೋಟಗಳೂ, ಸಾಸರ್, ಪ್ರಾಣಿ, ಪಕ್ಷಿ, ಶೋಕೇಸ್‌ಗಳಲ್ಲಿ ಇಡಲು ಅಲಂಕಾರಿಕಾವಸ್ತುಗಳನ್ನು ಮಾಡುತ್ತಾರೆ.

ಮಣ್ಣನ್ನು ಹದಮಾಡುವ ವಿಧಾನ: ಮಣ್ಣಿನಲ್ಲಿ ನಾಲ್ಕೈದು ವಿಧವಿದ್ದು ಶೇಖರಪ್ಪನವರು ಹೆಚ್ಚಾಗಿ ಬಳಸುತ್ತಿದ್ದ ಮಣ್ಣು ಎಂದರೆ, ಕೆಂಪು, ಕಪ್ಪು, ಚೀನಾಕ್ಲೇ ಮಣ್ಣುಗಳನ್ನು, ಸ್ಥಳೀಯವಾಗಿ ಹೊಲದ, ಎರೆಹೊಲದಲ್ಲಿನ ಮಣ್ಣು, ಅಥವಾ ಕೆರೆಯಲ್ಲಿನ ಮಣ್ಣ (ಜಮೀನು/ಕೆರೆಯ ಮಧ್ಯದಲ್ಲಿ ನಾಲ್ಕು ಅಥವಾ ಐದು ಅಡಿ ಆಳ ಗುಂಡಿಯನ್ನು ತೆಗೆದರೆ ಸ್ವಲ್ಪ ಮಟ್ಟಿಗೆ ಜಿಗುಟಾದ ಮಣ್ಣು ಸಿಗುತ್ತದೆ), ಆಳದ ಮಣ್ಣನ್ನು ತಂದು ಇದರ ಜೊತೆಗೆ ಕೆಂಪು ಹಿಟ್ಟು ಮಣ್ಣನ್ನು 1:2ರ ಪ್ರಮಾಣದಲ್ಲಿ ಮಿಶ್ರ ಮಾಡಿ ಆ ಮಣ್ಣನ್ನು 7ಬಾರಿ ಕಾಲಿನಿಂದ ಚನ್ನಾಗಿ ತುಳಿದು ಹದಮಾಡಿ, 15ದಿನಗಳು ಮುಗ್ಗುಹಾಕುತ್ತಾರೆ, ತೇವಾಂಶ ಕಾಪಾಡಿಕೊಳ್ಳುತ್ತಾರೆ, ತದನಂತರ ಮತ್ತೆ ತುಳಿದು ಹದ ಮಾಡಿ ಇದಕ್ಕೆ ಸುಟ್ಟ ಬೂದಿಯನ್ನು ಮತ್ತು ಸಣ್ಣ ನುಣುಪು ಮರಳನ್ನು 3:3ರ ಅಳತೆಯಲ್ಲಿ ಮಿಶ್ರ ಮಾಡಿ ಮತ್ತೆ ಹದ ಮಾಡುತ್ತಾರೆ ಆನಂತರ ವಸ್ತುಗಳನ್ನು ಮಾಡಲು ಉಪಯೋಗಿಸುತ್ತಾರೆ.

ಒಂದು ವಿಧವಾದ ಕಲ್ಲನ್ನು ಚಿಕ್ಕ ಚಿಕ್ಕ ಹರಳುಗಳನ್ನಾಗಿ ಕುಟ್ಟಿ, ನಂತರ ಕಲ್ಲು ಗುಂಡುನಲ್ಲಿ ನುಣ್ಣಗೆ ಅರೆಯಬೇಕು, ಅರೆದಂತೆಲ್ಲಾ ಅದು ಹಿಟ್ಟಿನ ರೂಪದಲ್ಲಿ ಬರುತ್ತದೆ, ಇದಕ್ಕೆ ಸೆರಾಮಿಕ್ ಪೌಡರನ್ನು ಮಿಶ್ರ ಮಾಡಿದರೆ ಶಿಲ್ಪಗಳನ್ನು ಮಾಡಲು ಬಹಳ ಸುಲಭ, ಯಾವರೀತಿಯ ಅಲಂಕಾರಿಕಾ ವಸ್ತುಗಳನ್ನಾದರೂ ಸುಲಭವಾಗಿ ಮಾಡಬಹುದು, ಇದರಿಂದ ಮಾಡಿದ ವಸ್ತುಗಳು ಬಹುದಿನಗಳ ವರೆವಿಗೂ ಬಾಳಿಕೆ ಬರುತ್ತವೆ, ಅಲ್ಲದೇ ಬಿರುಕು ಬರುವುದಿಲ್ಲ.

ಇಂದು ಆಧುನಿಕತೆಯ ಗಾಳಿ ಶಿಲ್ಪಕಲೆಗೂ ತಾಗಿದೆ ಇದರ ಪರಿಣಾಮವಾಗಿ ಪಿ.ಓಪಿ. ಪೌಡರ್‌ನಿಂದ ಮಾಡಿದ ಗಣೇಶನ ಮೂರ್ತಿಗಳಿಗೆ ಬೇಡಿಕೆ ಹೆಚ್ಚಿದೆ, ಯಾಕೆಂದರೆ ಮಣ್ಣಿನಿಂದ ಮಾಡಿದ ಕಲೆಗಳಿಗಿಂತ, ಪಿಓಪಿಯಿಂದ ಮಾಡಿದ ಮೂರ್ತಿಗಳು ಹೆಚ್ಚು ಆಕರ್ಷಕವಾಗಿರುತ್ತವೆ, ನುಣುಪಾಗಿ, ನಯವಾಗಿರುತ್ತವೆ,

ಆದ್ದರಿಂದ ಪೌಡರ್‌ನಿಂದ ಮಾಡಿದ ಮೂರ್ತಿಗಳಿಗೆ ಹೆಚ್ಚಿನ ಬೇಡಿಕೆ ಇದ್ದರೂ, ಈ ಪೌಡರ್‌ನಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂಬುದನ್ನು ಅರಿತ ಶೇಖರಪ್ಪನವರು ಪೌಡರ್‌ಗೆ ಮಾರು ಹೋಗದೆ, ಬೇಡಿಕೆ ಕಡಿಮೆ ಇದ್ದರೂ ಪರಿಸರ ಕಾಳಜಿಯಿಂದ ಮಣ್ಣಿನ ಮೂರ್ತಿಗಳನ್ನು ಮಾತ್ರ ಮಾಡುತ್ತಿದ್ದಾರೆ.

ಮಣ್ಣಿನಲ್ಲಿ ಮೂರ್ತಿಗಳನ್ನು ಕೈಯಿಂದಲೇ ಮಾಡಿ, ಸ್ವಂತಕ್ಕೆ ಇವರೇ ಬ್ರಷ್‌ಗಳನ್ನು ಮಾಡಿಕೊಳ್ಳುತ್ತಿದ್ದರು, ಬಿದಿರಿನ ಸಣ್ಣ ಕಡ್ಡಿಗಳಿಗೆ ಕುದುರೆ ಕೂದಲು, ಅಳಿಲಿನ ಕೂದಲುಗಳಿಂದ ಬ್ರಷ್ಷನ್ನು ಮಾಡುತ್ತಿದ್ದರು, ಅಥವಾ ಕಡ್ಡಿಗೆ ಹತ್ತಿಯನ್ನು ಸುತ್ತಿ ಕೈಯಿಂದಲೇ ಬಣ್ಣವನ್ನು ಹಾಕುತ್ತಿದ್ದು ಇತ್ತೀಚೆಗಷ್ಟೇ ಅಂಗಡಿಯಲ್ಲಿ ಸಿಗುವ ಬ್ರಷ್ ಮತ್ತು ಸ್ಪ್ರೇ ಮುಖಾಂತರ ಬಣ್ಣವನ್ನು ಹಾಕುತ್ತಾರೆ.

ಇದಲ್ಲದೇ ದೇವಸ್ಥಾನದ ಶಿಖರಗಳನ್ನು ಇಟ್ಟಿಗೆಗಳ ಸಹಾಯದಿಂದ ಕಟ್ಟಿ, ಸಿಮೆಂಟ್‌ನಿಂದ ಶಿಲ್ಪಗಳನ್ನು ಮಾಡುತ್ತಾರೆ, ಮೊದಲಿಗೆ ಶಿಖರದಲ್ಲಿ ಚಿಕ್ಕ ಚಿಕ್ಕ ಗೂಡುಗಳನ್ನು ಕಟ್ಟಿ ಆನಂತರ ಕಬ್ಬಿಣ, ಮರಳು, ಸಿಮೆಂಟ್, ಮಾರ್ಬಲ್ ಪೌಡರ್ ಮಿಶ್ರಣದಿಂದ ತಯಾರಿಸಲಾದ ಮೂರ್ತಿಗಳನ್ನು ಬೇಕಾದ ಸ್ಥಳಗಳಲ್ಲಿ ಫಿಕ್ಸ್ ಮಾಡುತ್ತಾರೆ.

ಕಬ್ಬಿಣದ ಸಲಾಕೆಗಳನ್ನು ಬೇಕಾದ ಅಳತೆಗೆ ಕತ್ತರಿಸಿಕೊಂಡು ಮೂರ್ತಿಗಳನ್ನು ಮಾಡುವ ಆಕಾರಕ್ಕೆ ಬಗ್ಗಿಸಿಕೊಂಡು ಅದಕ್ಕೆ ಒರಟು ಮರಳು ಸಿಮೆಂಟ್ ಮಿಶ್ರಣವನ್ನು ರಫ್‌ವರ್ಕ್ ಮಾಡಿ ಎರಡು ದಿನ ಬಿಟ್ಟು ನಂತರ ನುಣುಪು ಮರಳಿನ ಸಿಮೆಂಟ್‌ನ್ನು ಒಂದು ಕೋಟ್ ಮೆತ್ತಿ ಮತ್ತೆರಡು ದಿನ ಡ್ರೈ(ಒಣಗಲು) ಆಗಲು ಬಿಟ್ಟು ಕೊನೆಯ ದಿನ ನುಣುಪು ಮರಳು, ಸಿಮೆಂಟ್, ಮಾರ್ಬಲ್ ಪೌಡರ್‌ನ ಮಿಶ್ರಣದಿಂದ ಮೂರ್ತಿಗೆ ಅಂತಿಮ ಸ್ಪರ್ಷ ನೀಡುತ್ತಾರೆ.

ಶೇಖರಪ್ಪನವರು ಮಾಡುವ ಶಿಲ್ಪಕಲೆಗೆ ಮೊದಲು ಮಗ, ಹೆಂಡತಿ ಮತ್ತು ಮೂರು ಜನ ಹೆಣ್ಣು ಮಕ್ಕಳು ಸಹಕಾರ ನೀಡುತ್ತಿದ್ದು, ಈಗ ಮೂವರು ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗಿದ್ದಾರೆ, ಮಗ ಬೇರೆ ಕೆಲಸವನ್ನು ಮಾಡುತ್ತಿದ್ದಾನೆ, ಹೆಂಡತಿ ಮನೆಯ ಕೆಲಸವನ್ನಷ್ಟೇ ಮಾಡುತ್ತಾರೆ, ಕಾರಣ ಹೆಂಡತಿಗೆ ಆರೋಗ್ಯದ ಸಮಸ್ಯೆ ಇರುವುದರಿಂದ ಕೆಲಸ ಮಾಡಲು ಅಗುವುದಿಲ್ಲ, ಈ ಕಾರಣದಿಂದ ಶೇಖರಪ್ಪ ಒಬ್ಬರೇ ಆರ್ಡರ್ ತಗೊಂಡು ಆ ಕೆಲಸವನ್ನು ಮಾಡುತ್ತಾರೆ, ಅಗತ್ಯವಿದ್ದರೆ ಮಾತ್ರ ಒಂದೆರಡು ಹುಡುಗರನ್ನು ಸಹಾಯಕ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ.

ಶೇಖರಪ್ಪನವರ ಮೂವರು ಹೆಣ್ಣು ಮಕ್ಕಳು ಚಿಕ್ಕವರಿದ್ದಾಗಿನಿಂದಲೂ ತಂದೆಯ ಜೊತೆ ಮಣ್ಣಿನಲ್ಲಿ ಗೌರಿ, ಗಣೇಶ ಮುಂತಾದ ಶಿಲ್ಪಗಳನ್ನು ಮಾಡುವುದನ್ನು ಕಲಿತಿದ್ದರು, ಈಗ ಗಂಡನ ಮನೆಯಲ್ಲೂ ಮಣ್ಣಿನಲ್ಲಿ ಗೌರಿ, ಗಣೇಶ ಮುಂತಾದ ಮೂರ್ತಿಗಳನ್ನು ಮಾಡಿ ಮಾರಾಟ ಮಾಡುತ್ತಾರೆ.

ಮೊದಲೆಲ್ಲಾ ಶೇಖರಪ್ಪನವರ ಜೊತೆ ಮಕ್ಕಳ ಸಹಕಾರ ಇರುತ್ತಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಮೂರ್ತಿಗಳನ್ನು ಮಾಡುತ್ತಿದ್ದರು, ಈಗ ಶೇಖರಪ್ಪ ಒಬ್ಬರೇ ತಮ್ಮ ಕೈಲಾದಂತೆ ಕಡಿಮೆ ಸಂಖ್ಯೆಯಲ್ಲಿ ಮೂರ್ತಿಗಳನ್ನು ಮಾಡುತ್ತಾರೆ.

ಪಿಓಪಿಯಿಂದ ಮಾಡಿದ ಮೂರ್ತಿಗಳನ್ನು ಹೆಚ್ಚಾಗಿ ಖರೀದಿಸುವವರೇ ಹೆಚ್ಚಾಗಿದ್ದಾರೆ. ಕೈಯಿಂದ ಮಣ್ಣಿನಲ್ಲಿ ಮಾಡಿರುವ ಮೂರ್ತಿಗಳನ್ನು ಖರೀದಿಸುವವರು ಕಡಿಮೆ. ಕಷ್ಟ ಪಟ್ಟು ಮಾಡಿ. ಬಣ್ಣ, ಹಲಗೆ. ತಂದು, ದೂರದ ಊರುಗಳಿಗೆ ಮಾರಾಟ ಮಾಡಲು ಸಾಗಾಣಿಕೆ ವ್ಯವಸ್ಥೆ, ವಾರದ ಮಟ್ಟಿಗೆ ಎರಡು ಅಥವಾ ಮೂರು ಜನರ ಊಟ, ತಿಂಡಿ ಇತರೆ ಖರ್ಚುಗಳನ್ನು ನಿಭಾಯಿಸಿಕೊಂಡು ಹೋಗುವುದು ತುಂಬಾ ಕಷ್ಟ ಎನ್ನುತ್ತಾರೆ ಶೇಖರಪ್ಪ, ನಿಗದಿಯ ದರಕ್ಕಿಂತ ಖರೀದಿಸುವವರು ಕಡಿಮೆ ಕೇಳುವುದರಿಂದ ನಮ್ಮಂತಹ ಕಲಾವಿದರು ಬದುಕುವುದು ಕಷ್ಟದಾಯಕ ಎನ್ನುವುದು ಇವರ ಕೊರಗು, ಈ ಕಾರಣದಿಂದ ಸರ್ಕಾರವೇ ಕಲಾವಿದರ ಕೈ ಹಿಡಿದು ನೆರವು ನೀಡಬೇಕು ಎಂಬುದು ಇಂತಹ ಕಲಾವಿದರ ಕರಕೆ.

ಶೇಖರಪ್ಪ ಮಾಡಿರುವ ಶಿಲ್ಪಕಲೆಗಳ ವಿವರ :

1). ಹೊಸದುರ್ಗ ತಾಲ್ಲೂಕು ಜೆ.ಎನ್. ಕೋಟೆ ಗ್ರಾಮದ ಕೆಲವು ದೇವಸ್ಥಾನಗಳಲ್ಲಿ ಸಿಮೆಂಟ್ ಮಾಧ್ಯಮದ ಶಿಲ್ಪಗಳು.
2). ಭದ್ರಾವತಿ ಸಮೀಪದ ಬಸಳಿಕಟ್ಟೆ ಬಳಿ ಸಿಮೆಂಟ್ ಶಿಲ್ಪಗಳನ್ನು ಮಾಡಿದ್ದಾರೆ.
3). ಭದ್ರಾವತಿ ಬಸಳಿಕಟ್ಟೆ ಸಿದ್ದಾಪುರದ ಗಣೇಶನ ದೇವಸ್ಥಾನದಲ್ಲಿ ಸಿಮೆಂಟ್ ಮಾಧ್ಯಮದ ಶಿಲ್ಪಗಳು.
4). ಹೊಸದುರ್ಗ ತಾಲ್ಲೂಕಿನ ಲಕ್ಕಿಹಳ್ಳಿ ದೇವಸ್ಥಾನದಲ್ಲಿ ಸಿಮೆಂಟ್ ಶಿಲ್ಪಗಳು.
5). ಹೊಸದುರ್ಗ ತಾಲ್ಲೂಕಿನ ಮರಿಯಮ್ಮನ ಹಳ್ಳಿ ಗ್ರಾಮದ ಆದಿಶಕ್ತಿ ದೇವಸ್ಥಾನದಲ್ಲಿ ಶಿಲ್ಪಗಳು.
6). ಮಹಾರಾಷ್ಟ್ರದ ಚಾಂದ್ ಜಿಲ್ಲೆಯ ಖಾಂದರ್‌ಸ್ಟೇಷನ್‌ನಲ್ಲಿ ಸಿಮೆಂಟ್ ಮಾಧ್ಯಮದ ಶಿಲ್ಪಗಳು.
7). ಭದ್ರಾವತಿ ಫ್ಯಾಕ್ಟರಿಯಲ್ಲೂ ಇವರು ಸಿಮೆಂಟ್ ಶಿಲ್ಪಗಳನ್ನು ಮಾಡಿದ್ದಾರೆ.

ವಿಳಾಸ :

ಶೇಖರಪ್ಪ ಬಿನ್ ರುದ್ರಪ್ಪ, ಕಲಾವಿದರು, ಹೊಕೆರೆ ದೇವರ ಪುರ
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ನಾಗರಾಜ್ ಚಿತ್ರದುರ್ಗ : ಚಿತ್ರದುರ್ಗದ ಕರುವಿನ ಕಟ್ಟೆ ನಗರದಲ್ಲಿ ವಾಸವಾಗಿರುವ ಇವರು ಕಲೆಯಲ್ಲಿ ದೇಶದಲ್ಲಿ ಅಲ್ಲದೆ ವಿದೇಶದಲ್ಲೂ ಹೆಸರು ಪಡೆದಿದ್ದಾರೆ, ಹಿಂದಿನಿಂದಲೂ ಇವರು ಶಿಲ್ಪಕಲೆಗಳನ್ನು ಮಾಡುತ್ತಾ ಬಂದಿದ್ದು ತಮ್ಮ ಸಂಪ್ರದಾಯ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಚಿತ್ರದುರ್ಗದ ಖಾಯಂ ವಾಸಿಯಾಗಿರುವ ಇವರು ಕಳೆದ ಐದಾರು ದಶಕದಿಂದಲೂ ಮಣ್ಣಿನ ಮಾಧ್ಯಮದಲ್ಲಿ ಗೌರಿ, ಗಣೇಶನ ಮೂರ್ತಿಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ.

ಮರದಿಂದ ವಿವಿಧ ಕೆಲಸಗಳನ್ನು ಮಾಡುತ್ತಿದ್ದಾರೆ, ಕಿಟಕಿ, ಬಾಗಿಲು, ಅಲಂಕಾರಿಕಾ ಮರದ ವಸ್ತುಗಳು, ಮರದ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ, ಗಣೇಶನ ಹಬ್ಬದ ಸಮಯದಲ್ಲಿ ಮರದ ಕೆತ್ತನೆಯ ಕೆಲಸವನ್ನು ಎರಡು ತಿಂಗಳು ನಿಲ್ಲಿಸಿ ಮಣ್ಣಿನ ಮೂರ್ತಿಗಳನ್ನು ಮಾಡುತ್ತಾರೆ, ಇವರ ಕೆಲಸಕ್ಕೆ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಸಹಕರಿಸುತ್ತಾರೆ, ನಾಗಾರಾಜ್ ಅವರಿಗೇ ಪ್ರಸ್ತುತ 66ವರ್ಷ ವಯಸ್ಸಾಗಿದೆ ಆದರೂ ಈ ಇಳಿ ವಯಸ್ಸಿನಲ್ಲೂ ತಮ್ಮ ಮೂಲ ಸಂಪ್ರದಾಯ ಕಲೆಯನ್ನು ಬಿಟ್ಟಿಲ್ಲ, ಬಿಡುವುದೂ ಇಲ್ಲ ಎನ್ನುತ್ತಾರೆ ನಾಗರಾಜ್, ಇಷ್ಟು ವಯಸ್ಸಾಗಿದ್ದರೂ ಕೂಡ ಸದಾ ಚುರುಕುತನದಿಂದಲೇ ಕೆಲಸ ಮಾಡುತ್ತಾರೆ, ಮರದ ಕೆತ್ತನೆಯನ್ನು ಅಷ್ಟೇ ಸಲೀಸಾಗಿ ಮಾಡುತ್ತಾರೆ, ನಿಜಕ್ಕೂ ಇವರು ಮಾದರಿಯಾಗಿದ್ದಾರೆ.

ಕೆರೆಯಿಂದ ಮಣ್ಣು ತಂದು ಅದಕ್ಕೆ ಹತ್ತಿ ಬೆರೆಸಿಕೊಂಡು ಹದ ಮಾಡುವುದು ನಮ್ಮಂತ ಮುದುಕರಿಗೆ ಕಷ್ಟದ ಕೆಲಸ ಆದರೂ ಸಂಪ್ರದಾಯ ಬಿಡಬಾರದು ಎಂಬ ಕಿಚ್ಚಿಗೆ ಮಾಡುತ್ತಿದ್ದೇನೆ ಎಂದು ನಾಗರಾಜ್ ಹೇಳುತ್ತಾರೆ, ಮೊದಲೆಲ್ಲಾ ಚಿಕ್ಕ ಚಿಕ್ಕ ಮೂರ್ತಿಗಳನ್ನು ಮಾಡುತ್ತಿದ್ದು ಈಗ ಐದು ಅಡಿಗಿಂತ ಎತ್ತರವಾದ ಮೂರ್ತಿಗಳನ್ನು ಮಾಡುತ್ತಿದ್ದಾರೆ.

ನಮಗೆ ಬರುವ ಲಾಭ ಮುಖ್ಯವಲ್ಲ, ಮಾಡುವ ಕಾಯಕ ಮುಖ್ಯ ಎನ್ನುತ್ತಾರೆ ಇವರು. ಮೊದ ಮೊದಲು ಹೆಚ್ಚಿಗೆ ಲಾಭ ಸಿಗುತ್ತಿತ್ತು ಆದರೀಗ ಖರ್ಚು ಕಳೆದು ಸ್ವಲ್ಪ ಮಟ್ಟಿನ ಲಾಭ ಮಾತ್ರ ಸಿಗುತ್ತದೆ. ಆದರೂ ಆಸಕ್ತಿ ಕುಂದಿಲ್ಲ, ಲಾಭವೋ ಕಷ್ಟವೋ ಸಂಪ್ರದಾಯವನ್ನು ಬಿಡಬಾರದು ಎಂಬ ಉದ್ದೇಶದಿಂದ ಈ ಕಲೆಯನ್ನು ಮಾಡುತ್ತಿದ್ದೇನೆ ಎಮದು ಹೇಳುತ್ತಾರೆ.

ಚಿತ್ರದುರ್ಗದ ಪ್ರತಿಷ್ಠಿತ ಉದ್ಯಮಿಯಾಗಿದ್ದ ಶ್ರೀಪತಿರಾವ್ ಇವರು ತಮ್ಮ ಕುಟುಂಬ ಸಮೇತ ವಿದೇಶದಲ್ಲಿ ನೆಲೆಸಿದ್ದಾರೆ. ಇವರು ಪ್ರತಿ ವರ್ಷ ಗಣೇಶನ ಹಬ್ಬದ ಸಮಯದಲ್ಲಿ ಚಿತ್ರದುರ್ಗದ ಗಣಪತಿಗಳನ್ನು ತಂದು ಪ್ರತಿಷ್ಠಾಪಿಸಿ ಪೂಜೆ ಮಾಡುತ್ತಾರೆ.

ನಾಗರಾಜ್ ಮಾಡಿದ ಗಣಪತಿಗಳನ್ನು 12ರಿಂದ 15 ಗಣಪತಿಗಳನ್ನು ಖರೀದಿಸಿ ವಿಮಾನದಲ್ಲಿ ವಿದೇಶಕ್ಕೆ ತೆಗೆದುಕೊಂಡು ಹೋಗಿ ತಮ್ಮ ಮನೆಗಳಲ್ಲಿ ಪ್ರತಿಷ್ಠಾಪನೆ ಮಾಡಿ ಒಂದು ವರ್ಷದ ವರೆವಿಗೂ ಪ್ರತಿನಿತ್ಯ ಪೂಜೆ ಮಾಡಿ ಒಂದು ವರ್ಷದ ತರುವಾಯ ಚಿತ್ರದುರ್ಗಕ್ಕೆ ವಾಪಾಸು ತಂದು ವಿಸರ್ಜನೆ ಮಾಡಿ ಮತ್ತೆ ಹೊಸದಾಗಿ ಗಣಪತಿಗಳನ್ನು ತೆಗೆದುಕೊಂಡು ಹೋಗಿ ಪ್ರತಿಷ್ಠಾಪಿಸುತ್ತಾರೆ. ವಿದೇಶದಲ್ಲಿ ನೆಲೆಸಿದ ಮಾತ್ರಕ್ಕೆ ನಮ್ಮ ದೇಶದ ಸಂಸ್ಕೃತಿಯನ್ನು, ಆಚಾರ, ವಿಚಾರಗಳನ್ನು ಮರೆಯುವ ಈ ಕಾಲದಲ್ಲಿ ಶ್ರೀಪತಿಯವರು ಕಳೆದ 12ವರ್ಷಗಳಿಂದಲೂ ತಮ್ಮ ತವರು ದೇಶದ ಗಣಪತಿಗಳನ್ನು ಖರೀದಿಸಿ, ವಿಮಾನದಲ್ಲಿ ವಿದೇಶಕ್ಕೆ ತೆಗೆದುಕೊಂಡು ಹೋಗಿ ಪ್ರತಿಷ್ಠಾಪನೆ ಮಾಡಿ, ವರ್ಷ ಪೂರ್ತಿ ಪೂಜೆ, ಪುನಸ್ಕಾರಗಳನ್ನು ಮಾಡಿ ತದನಂತರ ತಮ್ಮ ತವರೂರಿಗೆ, ಸ್ವದೇಶಕ್ಕೆ ತಂದು ವಿಸರ್ಜನೆ ಮಾಡುವ ಪದ್ಧತಿ, ತುಂಬಾ ಶ್ಲಾಘನೀಯವಾದದ್ದು, ಇದರಲ್ಲಿ ಕಲೆಗೆ ಮಾನ್ಯತೆ ಕೊಡುವುದು, ಕಲಾವಿದರನ್ನು ಗೌರವಿಸುವುದೂ ಸೇರಿದೆ, ವಿದೇಶದಲ್ಲಿರುವವರು ಇವರ ಸ್ವದೇಶದ, ತಯ್ನಾಡಿನ ಮೇಲಿನ ಅಭಿಮಾನವನ್ನು ಕಲಿಯಬೇಕಿದೆ.

ನಾಗರಾಜ್ ರವರು ಮರದಲ್ಲಿ ವಿವಿಧ ರೀತಿಯ ಕೆತ್ತನೆಗಳನ್ನು, ಮಣ್ಣಿನಲ್ಲಿ ವಿವಿಧ ಮೂರ್ತಿಗಳನ್ನು ಬಹಳ ವರ್ಷಗಳಿಂದಲೂ ಮಾಡುತ್ತಾ ಬಂದಿದ್ದಾರೆ.

ವಿಳಾಸ : ನಾಗರಾಜ್, ಕುಕ್ಕುವಾಡೇಶ್ವರಿ ದೇವಾಲಯದ ಹತ್ತಿರ, ಚಿತ್ರದುರ್ಗ.

ಚಿತ್ರಗಾರ ಬಾಬಣ್ಣ : ಚಳ್ಳಕೆರೆ ನಗರದಲ್ಲಿ ವಾಸವಾಗಿರುವ ಇವರು ಸಂಪ್ರದಾಯ ಶಿಲ್ಪಿಗಳು, ಬುದ್ದಿ ಬಂದಾಗಿನ ವಯಸ್ಸಿನಿಂದಲೂ ತಂದೆಯವರ ಜೊತೆ ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದು, ತಂದೆಯವರ ಮರಣಾನಂತರ ಈಗ ಸ್ವತಂತ್ರವಾಗಿ ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದಾರೆ.

ಮಣ್ಣಿನ ಶಿಲ್ಪಕಲೆ, ಮರದ ಕೆತ್ತನೆ, ಬಟ್ಟೆಯಲ್ಲಿ, ವಿವಿಧ ವಸ್ತುಗಳಲ್ಲಿ ಹಾಗೂ ವಿವಿಧ ಲೋಹಗಳಲ್ಲಿ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ಮರದ ಮಾಧ್ಯಮದಲ್ಲಿ ದೇವರ ಮೂರ್ತಿಗಳ ಕೆತ್ತನೆ, ಸೋಮಗಳು, ಮುಖವಾಡ, ದೇವರ ಪೀಠಗಳು, ದೀಪದ ಕಂಬಗಳು, ದೇವರನ್ನಿಡುವ ಮಂಟಪ ಹಾಗೂ ಪೂಜಾ ಮಂಟಪ, ದೇವರ ತೂಗು ಮಂಚ, ಪಲ್ಲಕ್ಕಿ, ತೇರಿನ ವಿವಿಧ ಭಾಗಗಳು, ಛತ್ರಿ ಕೋಲು, ನಂದಿಕೋಲು ಮುಂತಾದ ವಸ್ತುಗಳನ್ನು ಮರದಿಂದಲೇ ಮಾಡುತ್ತಾರೆ.

ಲೋಹದ ಮಾಧ್ಯಮದಿಂದ ದೇವರ ಗಟ್ಟಿ ವಿಗ್ರಹಗಳು, ನಂದಿ ಧ್ವಜ, ಗಗ್ಗರಗಳು, ರಥದ ಪಟಗಳು, ವಜ್ರಾಂಗಿ ಕವಚಗಳು, ದೇವರ ಪ್ರಭಾವಳಿಗಳು, ಶಿಖರದ ಕಳಸಗಳು, ಉರುಮೆಯ ಒಳವುಗಳು, ದೇವರ ಬಟ್ಟೆಯ ಛತ್ರಿಗಳು, ಬೆಳ್ಳಿ, ಬಂಗಾರದ ಛತ್ರಿಗಳು, ಒಡವೆಗಳು, ಇದಲ್ಲದೇ ಬೆಳ್ಳಿ, ಬಂಗಾರ, ಹಿತ್ತಾಳೆ ಮತ್ತು ಪಂಚ ಲೋಹಗಳಲ್ಲಿ ದೇವರ ಯಾವುದೇ ಕೆಲಸಗಳನ್ನು ಮಾಡುತ್ತಾರೆ.

ದೇವರ ಮೂರ್ತಿಗಳು: ಮಾರಮ್ಮನ ಮೂರ್ತಿ ಹಾಗೂ ದುರುಗಮ್ಮ ಈ ಎರಡು ಮೂರ್ತಿಗಳು ನೋಡಲು ಒಂದೇ ತೆರನಾಗಿರುತ್ತವೆ, ದೊಡ್ಡದಾದ ಮುಖ, ಅಗಲವಾದ ಕಣ್ಣುಗಳು, ಉದ್ದನೆಯ ಮೂಗು ಅದಕ್ಕೆ ದೊಡ್ಡದಾಗಿರುವ ಮೂಗುತಿ, ವಿಶಾಲವಾದ ಬಾಯಿ, ಕೋರೆ ಹಲ್ಲುಗಳು ಒಟ್ಟಾರೆ ಭಯವನ್ನು ಹುಟ್ಟಿಸುವಂತೆ ಇರುತ್ತವೆ ಆ ರೀತಿಯಾಗಿ ಕೆತ್ತನೆಯನ್ನು ಮಾಡಿರುತ್ತಾರೆ, ಈ ರೀತಿಯ ಮೂರ್ತಿಗಳನ್ನು ಮೆದುವಾಗಿರುವ ಹತ್ತಿ ಮರದಿಂದ ಮಾಡುತ್ತಾರೆ, ರಥಕ್ಕೆ ಬೇಕಾದ ಕೆತ್ತನೆಗಳನ್ನು ಅಥವಾ ಇತರೆ ಮೂರ್ತಿಗಳನ್ನು ವಿವಿಧ ಮರಗಳಲ್ಲಿ ಕೆತ್ತನೆ ಮಾಡುತ್ತಾರೆ.

ಭೂತಗಳು ಹಾಗೂ ಸೋಮಗಳು : ಇವೂ ಕೂಡ ಸರಿಸುಮಾರು ಒಂದೇ ತೆರನಾಗಿದ್ದು ದೊಡ್ಡ ಕಣ್ಣು, ದೊಡ್ಡ ಮೂಗು, ಕೋರೆ ಹಲ್ಲುಗಳು, ದೊಡ್ಡ ಮತ್ತು ಭಾರೀ ಗಾತ್ರದ ಮೀಸೆಗಳು, ಕಣ್ಣಿನ ಹುಬ್ಬುಗಳು ಹೀಗೆ ಮುಖವಾಡಗಳನ್ನು ಮಾಡಿದ್ದು ಇವೂ ಕೂಡಾ ನೋಡಲು ಭಯ ಹುಟ್ಟಿಸುವಂತೆ ಇರುತ್ತವೆ,

ಇವುಗಳನ್ನು ಮಾಡಲು ಹಗುರವಾದ ಹತ್ತಿ ಮರದಿಂದ ಮಾಡುತ್ತಾರೆ, ಕೆಲವೊಮ್ಮೆ ರಟ್ಟು, ಪೇಪರ್ ಎರಡನ್ನೂ ಸೇರಿಸಿ ಹದ ಮಾಡಿ ಮಾಡುತ್ತಾರೆ.

ದೇವರ ಪೆಟ್ಟಿಗೆ : ದೇವರ ಸಾಲಿಗ್ರಾಮಗಳನ್ನು ಇಡುವ ಪೆಟ್ಟಿಗೆಯು ವಾಸ್ತು ಅಳತೆಯಲ್ಲಿದ್ದು ಆಯತಾಕಾರ, ಚೌಕಾಕಾರ, ದುಂಡನೆಯಾಕಾರದಲ್ಲಿ ಇರುತ್ತವೆ, ಇವುಗಳಿಗೆ ಮುಚ್ಚಳವಿದ್ದು ಹೊರಗಡೆ ಆಯಾ ದೇವರುಗಳ ಉಬ್ಬು ಚಿತ್ರಗಳನ್ನು ಕೆತ್ತನೆ ಮಾಡಲಾಗಿರುತ್ತದೆ.

ಪೀಠಗಳು : ದೇವರನ್ನು ಕೂರಿಸುವ ಪೀಠಗಳು, ಇವುಗಳೂ ಸಹ ವಾಸ್ತು ಅಳತೆಯಲ್ಲಿರುತ್ತವೆ, 2/2, 4/2, 4/6 ಮುಂತಾದ ಅಳತೆಯಲ್ಲಿರುತ್ತವೆ, ಅಂಚಿನ ಸುತ್ತಲೂ ಬಳ್ಳಿ ಅಥವಾ ಎಲೆಗಳು, ಗಂಟೆಗಳು, ದೀಪಗಳು ಮುಂತಾದ ಉಬ್ಬು ಕೆತ್ತನೆಯನ್ನು ಮಾಡಿರುತ್ತಾರೆ, ನಾಲ್ಕು ಮೂಲೆಗಳಿಗೆ ಕೆಳಗಡೆ ಅಲಂಕಾರಿಕವಾಗಿರುವ ನಾಲ್ಕು ಕಾಲುಗಳನ್ನು ಅಳವಡಿಸಿರುತ್ತಾರೆ, ಈ ಪೀಠದ ಮಧ್ಯದಲ್ಲಿ ದೇವರ ಮೂರ್ತಿಯನ್ನು ಕೂರಿಸಿ ನಂತರ ಒಡವೆಗಳಿಂದ ಅಲಂಕರಿಸುತ್ತಾರೆ, ಇದನ್ನು ತಲೆಯ ಮೇಲೆ ಮನುಷ್ಯರು ಹೊರುವಂತೆ ಮಾಡಿರುತ್ತಾರೆ.

ದೀಪದ ಕಂಬಗಳು: ದೇವರ ಗುಡಿಗಳಲ್ಲಿ ಅಥವಾ ವಾಸದ ಮನೆಗಳಲ್ಲಿ ದೇವರ ಮುಂದೆ ದೀಪವನ್ನು ಹಚ್ಚಿಡಲು ಇದನ್ನು ಉಪಯೋಗಿಸುತ್ತಾರೆ, ಅರ್ಧ ಅಡಿ ಎತ್ತರದಿಂದ ಮೂರು ಅಡಿ ಎತ್ತರದವರೆವಿಗೂ ಮರದಿಂದ ಮಾಡಿ ಅದಕ್ಕೆ ದೇವಸ್ಥಾನಗಳಲ್ಲಿರುವ ಕಂಬಗಳ ರೀತಿಯಲ್ಲಿ ಕೆತ್ತನೆಯನ್ನು ಮಾಡಿರುತ್ತಾರೆ.

ದೇವರನ್ನು ಕೂರಿಸುವ ಮಂಟಪಗಳು: ನಾಲ್ಕು ಕಂಬಗಳಿಂದ ಮಾಡಿದ್ದು ದೇವರ ಮೂರ್ತಿಗಳನ್ನು ಇಡುತ್ತಾರೆ, ನಾಲ್ಕು ಕಂಬಗಳನ್ನು ಅಲಂಕಾರಿಕವಾಗಿ ಮಾಡಿದ್ದು ಈ ಕಂಬಗಳಿಗೆ ಕೆಳಗಡೆ ಒಂದು ಹಲಗೆಯನ್ನು ಜೋಡಿಸಿದ್ದು ಇದರ ಮೇಲೆ ದೇವರ ಮೂರ್ತಿಯನ್ನು ಕೂರಿಸುತ್ತಾರೆ, ಮೇಲುಗಡೆ ಗೋಪುರದಾಕೃತಿಯನ್ನು ಮಾಡಿ ತುದಿಯಲ್ಲಿ ಕಳಸವನ್ನು ಮರದಿಂದಲೇ ಮಾಡಿರುತ್ತಾರೆ, ಇದಕ್ಕೆ ಸುತ್ತಲೂ ಚಿಕ್ಕ ಚಿಕ್ಕ ಉಬ್ಬು ಕೆತ್ತನೆಯನ್ನೂ ಸಹ ಮಾಡಲಾಗಿರುತ್ತದೆ.

ದೇವರ ತೂಗು ಮಂಚ : ಒಂದು ನಿರ್ಧಿಷ್ಟ ಅಳತೆಯಲ್ಲಿ ಮಾಡಿದ್ದಾಗಿರುತ್ತದೆ, 2/2, 2/4, 4/2, 2/6 ಮುಂತಾದ ಅಳತೆಯಲ್ಲಿ ಮಾಡಲಾಗಿರುತ್ತದೆ, ಗರ್ಭಗುಡಿಯಲ್ಲಿ ನೆಲದಿಂದ ಎರಡು ಮೂರು ಅಡಿ ಅಂತರದಲ್ಲಿ ಇದನ್ನು ತೂಗು ಬಿಟ್ಟಿರುತ್ತಾರೆ, ಚೌಕಾಕಾರ ಅಥವಾ ಅಯತಾಕಾರದಲ್ಲಿ ಮಾಡಿದ ಮಂಚವಾಗಿದ್ದು, ನಾಲ್ಕು ಮೂಲೆಗಳಿಗೆ ಮೇಲುಗಡೆಯಿಂದ ಇಳಿಬಿಟ್ಟ ಕಬ್ಬಿಣದ ಸರಪಳಿಯನ್ನು ಅಳವಡಿಸಿರುತ್ತಾರೆ, ಪಟ್ಟಿಯ ಸುತ್ತಲೂ ಉಬ್ಬು ಕೆತ್ತನೆಯಿರುತ್ತದೆ.

ತೇರಿನ ವಿವಿಧ ಭಾಗಗಳು: ಮರದಿಂದ ಮಾಡುವ ತೇರು(ರಥ)ಗೆ ಬೇಕಾದ ವಿವಿಧ ಮರದ ಅಲಂಕಾರಿಕಾ ಕೆತ್ತನೆಗಳನ್ನು ರಥವನ್ನು ನಿರ್ಮಾಣ ಮಾಡುವವರಿಗೆ ಮಾಡಿಕೊಡುತ್ತಾರೆ.

ಛತ್ರಿ ಕೋಲು : ದೇವರ ಮುಂದೆ ಹಿಡಿಯಲು ಬಟ್ಟೆಯಿಂದ ಮಾಡಿದ ಛತ್ರಿಯನ್ನು ಎತ್ತರವಾಗಿ ಕಾಣಲು ಆರು ಅಡಿಯಿಂದ ಹನ್ನೆರಡು ಅಡಿಯವರೆವಿಗೂ ನೇರವಾಗಿರುವ ಬಿದಿರಿನ ಕಟ್ಟಿಗೆಯನ್ನು ಛತ್ರಿಕೋಲು ಎನ್ನುತ್ತಾರೆ.

ನಂದಿಕೋಲು: ಸುಮಾರು 15ರಿಂದ 20ಅಡಿಯವರೆವಿಗೂ ನೇರವಾಗಿರುವ ಬಿದಿರಿನ ಕೋಲನ್ನು ನಂದಿಕೋಲನ್ನಾಗಿ ಮಾಡುತ್ತಾರೆ, ಮೇಲಿನ ತುದಿಯಲ್ಲಿ ಲೋಹದ ಕಳಸ, ಅಲ್ಲಿಂದ ಕೆಳಗಿನ ಮೂರು ಅಡಿ ಅಂತರವನ್ನು ಬಿಟ್ಟು ಉಳಿದಂತೆ ಗಗ್ಗರ, ಹಿತ್ತಾಳೆ ಅಥವಾ ಕಂಚಿನ ಲೋಹದಿಂದ ಮಾಡಿದ ದುಂಡನೆಯ ಸುರುಳಿಯಾಕಾರದ ಗೆಜ್ಜೆಗಳನ್ನು ಅಳವಡಿಸಿರುತ್ತಾರೆ ಕೆಳಗಡೆ ಬಸವಣ್ಣ ಅಥವಾ ಇತರೆ ದೇವರ ಲೋಹದ ಮೂರ್ತಿಗಳನ್ನು ಕಟ್ಟಲಾಗಿರುತ್ತದೆ, ಇದನ್ನು ಶಕ್ತಿವಂತರು ದೇವರ ಉತ್ಸವಗಳಲ್ಲಿ ತಮ್ಮ ಹೆಗಲುಗಳಿಗೆ ಹಾಕಿಕೊಂಡು ಕುಣಿಯುತ್ತಾರೆ.

ಈ ಮೇಲ್ಕಂಡ ಎಲ್ಲಾ ಬಗೆಯ ಮರದ ಮತ್ತು ಲೋಹದ ವಸ್ತುಗಳನ್ನು ಶಿಲ್ಪಿ ಬಾಬುರವರು ಮಾಡುತ್ತಾರೆ.

ಮರದಿಂದ ಮೂರ್ತಿಗಳನ್ನು ಮಾಡುವ ವಿಧಾನ : ಮರ ಮಾಧ್ಯಮದಿಂದ ಶಿಲ್ಪಗಳನ್ನು ಮಾಡಲು ಬೇಕಾದ ಮರವನ್ನು ಸಾಮಿಲ್‌ಗಳಲ್ಲಿ ತರುತ್ತಾರೆ, ಒಮ್ಮೊಮ್ಮೆ ಕೆಲಸ ಮಾಡಿಸುವವರೂ ತಂದುಕೊಡುತ್ತಾರೆ, ಮಾರಮ್ಮ, ಗೌರಮ್ಮ, ಸೋಮಗಳನ್ನು ಮೊಡಲು ಮೊದಲು ಒರಟು(ರಫ್ಫಾಗಿ) ಕೆತ್ತನೆ ಮಾಡಿಕೊಂಡು ಆ ನಂತರ, ಸಾಮಿಲ್‌ಗಳಲ್ಲಿ ಮರದ ದಿಮ್ಮಿಗಳನ್ನು ಕೊಯ್ಯುವಾಗ ಉದುರುವ ಮರದ ಹೊಟ್ಟು, ಇದನ್ನು ಮತ್ತು ಹುಣಸೆ ಹೊಟ್ಟು ಎರಡನ್ನೂ ಮಿಶ್ರಮಾಡಿ ಒಂದು ಹದಕ್ಕೆ ಬರುವವರೆಗೂ ಚನ್ನಾಗಿ ನೀರನ್ನು ಚಿಮುಕಿಸಿಕೊಳ್ಳುತ್ತಾ ಕಲ್ಲಿನಿಂದ ಜಜ್ಜುತ್ತಾರೆ, ಅಥವಾ ಗುಂಡು ಕಲ್ಲಿನಿಂದ ರುಬ್ಬುತ್ತಾರೆ, ಇದು ಮೇಣದಂತೆ ಆಗುತ್ತದೆ, ಆನಂತರ ಇದನ್ನು ರಫ್ಫಾಗಿ ಕೆತ್ತನೆ ಮಾಡಿದ ಮರದ ಮೂರ್ತಿಗಳಿಗೆ ಬೇಕಾದ ಕಣ್ಣು, ಮೂಗು, ಕಿವಿ, ಬಾಯಿ ಮುಂತಾದ ಮುಖದ ಭಾಗಗಳನ್ನು, ಮುಖವು ನಯವಾಗಿ ಕಾಣುವಂತೆ ಮೆತ್ತುತ್ತಾರೆ, ಆಗ ಮುಖವಾಡವು ಸುಂದರವಾಗಿ ಬೆಣ್ಣೆಯಂತೆ ಕಾಣುತ್ತದೆ, ಒಂದೆರಡು ದಿನಗಳ ನಂತರ ತೇವಾಂಶ ಆರಿದ ಮೇಲೆ, ಕಾಟನ್ ಬಟ್ಟೆಯನ್ನು ಮುಖವಾಡದ ಮೇಲೆ ಹುಣಸೆ ಸರಿ(ಅಂಟು) ಅಥವಾ ವಜ್ರದ ಸರಿ(ಅಂಟು)ಯನ್ನು ಲೇಪಿಸಿ ಅದರ ಮೇಲೆ ತೆಳ್ಳನೆಯ ಕಾಟನ್ ಬಿಳಿ ಬಟ್ಟೆಯನ್ನು ಅಂಟಿಸುತ್ತಾರೆ, ಇದು ಆರಿದ ನಂತರ ಬೇಕಾದ ಬಣ್ಣವನ್ನು, ಬೇಕಾದ ಆಕಾರಕ್ಕೆ ಮಾಡುತ್ತಾರೆ.

ಲೋಹದ ಶಿಲ್ಪಕಲೆಯನ್ನು ಮಾಡುವ ವಿಧಾನ: ಬೆಂಗಳೂರಿನಲ್ಲಿ ಲೋಹದ ಕಚ್ಚಾ ವಸ್ತುವನ್ನು ತರುತ್ತಾರೆ, 4/4ಅಡಿ ಅಳತೆಯ ಐ.ಸಿ.ಸಿ. ಲೋಹದ ಹಾಳೆ(ಹಿತ್ತಾಳೆ ಶೀಟ್) ದೊರೆಯುತ್ತದೆ, ತೂಕದ ಅಳತೆಯಲ್ಲಿ 650 ಕೆ.ಜಿಯ ಒಂದು ಹಾಳೆ ಇರುತ್ತದೆ, ಗೇಜು ಹೆಚ್ಚಿಗೆ ಇದ್ದರೆ 750 ಕೆ.ಜಿ. ತೂಕ ಬರುತ್ತದೆ.

ಒಂದನೇ ವಿಧಾನ : ಮೊದಲು ಬೇಕಾದ ಅಳತೆಯಲ್ಲಿ ಮೇಣದಿಂದ ಮೂರ್ತಿಗಳನ್ನು ಮಾಡಿ, ಅದನ್ನು ಅಚ್ಚು ಮಾಡಿಕೊಂಡು ಆನಂತರ ಲೋಹದ ತಗಡನ್ನು ಅಳತೆಗೆ ಸರಿಯಾಗಿ ಕತ್ತರಿಸಿಕೊಂಡು ಆ ತಡಗನ್ನು ಹೆಚ್ಚು ಶಾಖದಿಂದ ಬಿಸಿಮಾಡಿ ಮೇಣದ ಅಚ್ಚಿನ ಮೇಲೆ ಹಾಕಿ ಕುಟ್ಟುತ್ತಾರೆ(ಒತ್ತುತ್ತಾರೆ), ಆಗ ತಗ್ಗು ಇರುವ ಜಾಗವೂ ಒಳಗೆ ಹೋಗಿ ಉಬ್ಬು ಹಾಗೇ ಇರುತ್ತದೆ, ಒಂದನೇ ಹಂತದ ಉಬ್ಬು ಶಿಲೆ ಸಿದ್ಧವಾಗುತ್ತದೆ, ಆ ನಂತರ ತಗಡನ್ನು ಬಿಸಿಯಿಂದ ಆರಲು ಬಿಡುತ್ತಾರೆ, ತಗಡು ಬಿಸಿ ಆರಿದ ಮೇಲೆ ಇನ್ನು ಬೇಕಾದ ಆಕಾರದಲ್ಲಿ ತಗ್ಗು, ಉಬ್ಬುಗಳನ್ನು ಸರಿಮಾಡಿಕೊಂಡು, ಉಳಿದ ಸೂಕ್ಷ್ಮವಾದ ಭಾಗವು ಸರಿಯಾಗಿ ಕಾಣಲು, ಬೇಕಾದ ಭಾಗಕ್ಕೆ ಹಿತ್ತಾಳೆ ನೀರಿನಿಂದ ಸರಿಮಾಡಿಕೊಳ್ಳುತ್ತಾರೆ.

ಎರಡನೇ ವಿಧಾನ: ಮೇಣದಿಂದ ನಿರ್ಧಿಷ್ಟ ಅಳತೆಯ ಆಕಾರವನ್ನು ಮಾಡಿಕೊಂಡು ಮೌಲ್ಡ್ ತೆಗೆದು ನಂತರ ಹಿತ್ತಾಳೆ ನೀರಿನಿಂದ ಎರಡನೇ ಮೌಲ್ಡ್ ತೆಗೆದು ರಫ್ ಆಕಾರ ಮಾಡಿ ತದನಂತರ ಸೂಕ್ಷ್ಮ ಭಾಗಗಳನ್ನು ತಿದ್ದಿ, ತೀಡಿ ಸುಂದರ ಶಿಲ್ಪವನ್ನು ಮಾಡುತ್ತಾರೆ.

ಮೂರನೇ ವಿಧಾನ: ಮಣ್ಣಿನಿಂದ ಮೂರ್ತಿಗಳನ್ನು ಮಾಡಿ, ಇದಕ್ಕೆ ಹಿತ್ತಾಳೆ ನೀರಿನಿಂದ ಮೌಲ್ಡ್ ತೆಗೆದು, ರಫ್ ಮೂರ್ತಿಗಳನ್ನು ಮಾಡಿಕೊಂಡು, ಆ ನಂತರ ಸೂಕ್ಷ್ಮ ಶಿಲ್ಪಗಳನ್ನು ಮಾಡುತ್ತಾರೆ, ಕೊನೆಯದಾಗಿ ಕೆಮಿಕಲ್ ಉಪಯೋಗಿಸಿ ಕೊಳೆಯನ್ನು ತೆಗೆದು, ಪಾಲಿಷ್ (ಕೆಮಿಕಲ್ಸ್)ಹಾಕಿದರೆ ಶಿಲ್ಪವು ಫಳ ಫಳನೇ ಹೊಳೆಯುತ್ತದೆ, ಉಪಯೋಗಕ್ಕೆ ಸಿದ್ದವಾಗುತ್ತದೆ.

ಶಿಲ್ಪಿ ಬಾಬು ಕಂಚು, ಹಿತ್ತಾಳೆ, ಬೆಳ್ಳಿ, ತಾಮ್ರ ಮುಂತಾದವುಗಳಿಂದ ಯಾವುದೇ ಆಕಾರದ, ಯಾವುದೇ ಶಿಲ್ಪಗಳನ್ನು ಸುಂದರವಾಗಿ ಮಾಡಿಕೊಡುತ್ತಾರೆ, ವಿವಿಧ ಲೋಹಗಳಿಂದ ಮಾಡಿದ ಶಿಲ್ಪ, ಮೂರ್ತಿಗಳಿಗೆ ಆಯಾ ಲೋಹ ಮತ್ತು ಮೂರ್ತಿಯ ಅಳತೆಗೆ ತಕ್ಕಂತೆ ಬೆಲೆಯನ್ನು ನಿಗದಿ ಮಾಡುತ್ತಾರೆ.

ಮಣ್ಣಿನ ಮೂರ್ತಿಗಳನ್ನು ಮಾಡುವ ವಿಧಾನ: ಚಳ್ಳಕೆರೆಯ ಜಗಲೂರಜ್ಜನ ಕೆರೆಯಿಂದ ಮಣ್ಣನ್ನು ತಂದು ತಿಂಗಳಾನುಗಟ್ಟಲೇ ನೆನೆಹಾಕಿ(ಮುಗ್ಗು ಹಾಕಿ) ಗಣೇಶನ ಹಬ್ಬ ಇನ್ನೂ ಎರಡು ತಿಂಗಳು ಇರುವ ಮುನ್ನವೇ ಮೂರ್ತಿಗಳನ್ನು ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಾರೆ, ಮೊದಲಿಗೆ ಮಣ್ಣನ್ನು ಹದ ಮಾಡಿಕೊಳ್ಳುತ್ತಾರೆ, ಕೆರೆಯಿಂದ ತಂದ ಮಣ್ಣಿಗೆ ಹತ್ತಿ ಹಾಗೂ ಒಂದು ರೀತಿಯ ಹಿಟ್ಟು ಮಣ್ಣನ್ನು ಮಿಶ್ರ ಮಾಡಿ ಕಾಲಿನಲ್ಲಿ ತುಳಿದು ಹದ ಮಾಡುತ್ತಾರೆ.

ನಂತರ ಒಂದೆರಡು ದಿನ ಬಿಟ್ಟು ಮೂರ್ತಿಗಳನ್ನು ಮಾಡಲು ಶುರುಮಾಡುತ್ತಾರೆ, ವಿವಿಧ ರೂಪದಲ್ಲಿರುವ ಗಣೇಶನ ಮೂರ್ತಿಗಳು, ಗಂಗೇ, ಗೌರಿ, ಶಿವ, ಪಾರ್ವತಿ, ನಂದಿ, ಸುಬ್ರಮಣ್ಯ, ಇಲಿ ಮುಂತಾದ ಮೂರ್ತಿಗಳನ್ನು ಮಾಡಿ ಮಾರಾಟ ಮಾಡುತ್ತಾರೆ, ಇವರು ಮೂರ್ತಿಗಳನ್ನು ಕೈಯಲ್ಲಿ ಮಾಡಿ ಬ್ರಷ್‌ಗಳಿಂದಲೇ ಬಣ್ಣವನ್ನು ಹಾಕುತ್ತಾರೆ, ಯಾವುದೇ ಯಂತ್ರಗಳನ್ನು ಉಪಯೋಗಿಸುವುದಿಲ್ಲ, ಅತೀ ಸಣ್ಣ ಮೂರ್ತಿಗಳಾದರೆ ಅಚ್ಚನ್ನು ಉಪಯೋಗಿಸುತ್ತಾರೆ, ಇದಕ್ಕೆ ಮನೆಯ ಹೆಂಡತಿ ಮಕ್ಕಳು ಸಹಕಾರ ನೀಡುತ್ತಾರೆ, ಪರಿಸರ ಪ್ರೇಮಿಗಳ ಅಭಿಲಾಷೆಯಂತೆ ಅವರಿಗೆ ಇಷ್ಟವಾಗುವ ಪರಿಸರ ಸ್ನೇಹಿ ಬಣ್ಣಗಳನ್ನೂ ಕೆಲವು ಮೂರ್ತಿಗಳಿಗೆ ಹಾಕಿಕೊಡುತ್ತಾರೆ.

ಬಟ್ಟೆಯ ಕಲಾಕೃತಿಗಳು: ಬಾಬು ಮಣ್ಣು, ಮರ, ಲೋಹಗಳ ಶಿಲ್ಪಕಲೆಗಳನ್ನಲ್ಲದೇ ಬಟ್ಟೆಯಲ್ಲೂ ವಿವಿಧ ಕಲಾಕೃತಿಗಳನ್ನು ಮಾಡುತ್ತಾರೆ, ಇದಕ್ಕೆ ಮನೆಯ ಹೆಣ್ಣುಮಕ್ಕಳು ಸಹಕಾರಿಯಾಗುತ್ತಾರೆ, ಬಟ್ಟೆಯ ವಿಧಗಳಲ್ಲಿ ಕಾಟನ್, ಉಲ್ಲನ್, ಟೆರಿಕಾಟ್, ನೈಲಾನ್, ವೆಲ್ವೆಟ್, ಪಾಲಿಸ್ಟರ್ ಮುಂತಾದ ಮಾದರಿಯ ಬಟ್ಟೆಗಳಿಂದ ದೇವರ ಛತ್ರಿ, ಚಾಮರ, ತೇರಿನ ಪಟಗಳು, ನಂದಿಕೋಲಿನ ಪಟಗಳು, ಪಲ್ಲಕ್ಕಿ ಪಟಗಳು, ದೇವರ ಅಲಂಕಾರಿಕಾ ದಿಂಬುಗಳು, ಕುಚ್ಚುಗಳು, ಪಲ್ಲಕ್ಕಿಗೆ ಹಾಕುವ ವಿವಿಧ ಚಿತ್ರಗಳನ್ನೊಳಗೊಂಡ ಪಟಗಳು ಮುಂತಾದ ದೇವರ ಅಲಂಕಾರಕ್ಕೆ ಉಪಯೋಗಿಸುವ ವಸ್ತುಗಳನ್ನು ಸಿದ್ದಮಾಡುತ್ತಾರೆ.

ಮೇಲ್ಕಂಡ ವಿವಿಧ ಬಟ್ಟೆಗಳಿಗೆ ಅಲಂಕಾರಿಕಾ ವಸ್ತುಗಳಾದ ಹರಳುಗಳು, ಗ್ಲಾಸು, ಉಲ್ಲನ್, ವಿವಿಧ ಮಣಿಗಳು, ಲೇಸ್, ಮಿಂಚು, ಶಂಖ, ಗಂಟೆ, ಕುಚ್ಚು ಮುಂತಾದ ವಸ್ತುಗಳಿಂದ ದೇವರ ವಸ್ತ್ರಗಳಿಗೆ ಫ್ಯಾನ್ಸಿ ಅಲಂಕಾರ, ಎಂಬ್ರಾಯಿಡರಿ ಅಲಂಕಾರ ಮಾಡುತ್ತಾರೆ.

ವಿಳಾಸ : ಶಿಲ್ಪಿ ಬಾಬಣ್ಣ ಬಿನ್ ಚಿತ್ರಗಾರ್ ತಿಪ್ಪೇರುದ್ರಪ್ಪ,
ತೇರು ಬೀದಿ, ಚಳ್ಳಕೆರೆ-577522. ಮೊ:9448668602

ಚಿತ್ರಗಾರ್ ತಿಪ್ಪೇಸ್ವಾಮಿ: ಚಳ್ಳಕೆರೆ ನಗರದ ವಾಸಿಯಾಗಿದ್ದು, ಸಂಪ್ರದಾಯ ಶಿಲ್ಪಕಲಾವಿದರಾಗಿದ್ದರೆ, ತಲತಲಾಂತರದಿಂದ ಬಂದಿರುವ ಲೋಹಗಳ ಮಾಧ್ಯಮದಿಂದ ಶಿಲ್ಪಕಲೆಗಳನ್ನು ಮಾಡುತ್ತಿದ್ದರು, ಮೂಲ ನಾಯಕನಹಟ್ಟಿ ಗ್ರಾಮದ ವಾಸಿಯಾಗಿದ್ದ ಇವರ ತಂದೆಯವರು ಚಿಕ್ಕವರಿದ್ದಾಗಲೇ ದುಡಿಮೆಗಾಗಿ ಚಳ್ಳಕೆರೆ ನಗರಕ್ಕೆ ಬಂದು ನೆಲೆಸಿದರು, ಚಳ್ಳಕೆರೆಯಲ್ಲಿ ಇವರ ಸಂಪ್ರದಾಯ ಶಿಲ್ಪಕಲೆ ಚನ್ನಾಗಿ ಸಾಗುತ್ತಿತ್ತು, ತಂದೆಯ ಜೊತೆ ಇವರು ಚನ್ನಾಗಿ ಲೋಹದ ಮಾಧ್ಯಮದಿಂದ ಶಿಲ್ಪಗಳನ್ನು ಮಾಡುವುದನ್ನು ಕಲಿತರು, ತಂದೆಯನ್ನು ಮೀರಿಸುವಂತೆ ಸುಂದರವಾಗಿ ಮಾಡುತ್ತಿದ್ದರು.

ನಾಯಕನ ಹಟ್ಟಿಯಲ್ಲಿ ವ್ಯಾಪಾರ ಕಡಿಮೆ ಇದ್ದ ಕಾರಣ ಚಳ್ಳಕೆರೆಗೆ ಬಂದು ಬಾಡಿಗೆ ಮನೆಯನ್ನು ಹಿಡಿದು ನೆಲೆಸಿದ ಇವರು ಕೆಲವೇ ದಿನಗಳಲ್ಲಿ ಚಳ್ಳಕೆರೆಯಲ್ಲಿ ಹೆಸರು ವಾಸಿಯಾದರು, ಇಂದು ಇವರ ತಂದೆ ತಿಪ್ಪೇರುದ್ರಪ್ಪನವರು ಇಲ್ಲ ಆದರೆ ತಂದೆಯವರು ಕಲಿಸಿ ಕೊಟ್ಟ ಕಲೆ ಮಾತ್ರ ಇವರ ಜೀವನ ನಿರ್ವಹಣೆಯ ಮೂಲವಾಗಿದೆ, ಹಿತ್ತಾಳೆ, ಕಂಚು ಮತ್ತು ಪಂಚ ಲೋಹ ಈ ಮೂರು ಮಾಧ್ಯಮದಲ್ಲಿ ಮಾತ್ರ ಹೆಚ್ಚಿಗೆ ಶಿಲ್ಪಗಳನ್ನು ಮಾಡುತ್ತಿದ್ದರು, ದೇವರ ಗಟ್ಟಿ ಮೂರ್ತಿಗಳು, ದೇವರ ಒಡವೆಗಳು, ಪ್ರಭಾವಳಿಗಳು, ಬಾಗಿಲುಗಳಿಗೆ ಅಳವಡಿಸುವ ಕವಚಗಳು ಮುಂತಾದ ಕೆಲಸವನ್ನು ಮಾಡಿದ್ದಾರೆ,

ತಲತಲಾಂತರದಿಂದ ನಡೆದುಕೊಂಡು ಬರುತ್ತಿರುವ ಈ ಸಂಪ್ರದಾಯ ಶಿಲ್ಪಕಲೆಯನ್ನು ಬಿಡಬಾರದು ಎನ್ನುವುದು ತಿಪ್ಪೇಸ್ವಾಮಿಯವರ ಮನದಾಳದ ಮಾತು.

ಒಮ್ಮೆ ಹೆಚ್ಚಿಗೆ ಲಾಭ ಬಂದರೆ ಮಗದೊಮ್ಮೆ ಕಡಿಮೆ ಲಾಭ ಬರುತ್ತದೆ, ಆದರೆ ಇದಕ್ಕೆ ಎದೆಗುಂದದೆ ತಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ದೇವರು ಒಂದಲ್ಲಾ ಒಂದು ದಿನ ಕೈ ಹಿಡಿಯುತ್ತಾನೆ ಎಂದು ಕಲಾವಿದ ತಿಪ್ಪೇಸ್ವಾಮಿ ಹೇಳುತ್ತಾರೆ.

ದೇವರ ಕಲ್ಲಿನ ಶಿಲಾ ಮೂರ್ತಿಗಳಿಗೆ ಬೆಳ್ಳಿ, ಕಂಚು, ಹಿತ್ತಾಳೆ ಮುಂತಾದ ಲೋಹಗಳಿಂದ ಕವಚ ಮತ್ತು ಪ್ರಭಾವಳಿಗಳನ್ನು, ಗರ್ಭಗುಡಿಯ ಬಾಗಿಲುಗಳು, ಕಂಬಗಳಿಗೆ ಹಿತ್ತಾಳೆ ಅಥವಾ ಕಂಚಿನ ಕವಚಗಳನ್ನು ಮಾಡುತ್ತಾರೆ.

ಕಂಬಗಳು/ಬಾಗಿಲುಗಳಿಗೆ ಕವಚಗಳನ್ನು ಅಳವಡಿಸುವ ವಿಧಾನ: ಗರ್ಭಗುಡಿಯ ಬಾಗಿಲುಗಳ ನಿಲುವುಗಳಿಗೆ ಮತ್ತು ಕಂಬಗಳಿಗೆ ಲೋಹದ ಕವಚಗಳನ್ನು ಅಳವಡಿಸುವ ಮೊದಲು ಬಾಗಿಲ ನಿಲುವು, ಕಂಬಗಳಿಗೆ ಮೆದು ಮರದ ಹಲಗೆಗಳನ್ನು ಅಥವಾ ಗಟ್ಟಿ ಪ್ಲೇವುಡ್ಡನ್ನು ಕಂಬದ ಆಕಾರದಂತೆ ಜೋಡಣೆ ಮಾಡಿ, ಕಂಬದ ಸಂದುಗಳಲ್ಲಿ ಮೊಳೆಗಳಿಂದ ಹಲಗೆಯನ್ನು ಅಳವಡಿಸಿ, ಹಲಗೆಯ ಮೇಲೆ ಮೊದಲೇ ಉಬ್ಬು ಚಿತ್ರಗಳಿಂದ ಸಿದ್ದ ಮಾಡಿಕೊಂಡ ಲೋಹದ ತಗಡನ್ನು ಕಂಬಗಳ ಆಕಾರದಂತೆಯೇ ಜೋಡಣೆ ಮಾಡುತ್ತಾರೆ.

ಕಂಚು, ಹಿತ್ತಾಳೆ ಅಥವಾ ಪಂಚ ಲೋಹದ ತಗಡನ್ನು ಕವಚ ಮಾಡಲು ಉಪಯೋಗಸಬಹುದು, ತಿಪ್ಪೇಸ್ವಾಮಿಯವರು ಲೋಹಗಳ ಮಾಧ್ಯಮಗಳಲ್ಲಿ ವಿವಿಧ ಮೂರ್ತಿಗಳನ್ನು ಮಾಡುತ್ತಾರೆ.

ವಿಳಾಸ : ತಿಪ್ಪೇಸ್ವಾಮಿ ಬಿನ್ ತಿಪ್ಪೇರುದ್ರಪ್ಪ, ಚಳ್ಳಕೆರೆ–577 522.

ಬ್ರಹ್ಮಾನಂದ ಸ್ವಾಮಿ: ಚಿತ್ರದುರ್ಗ ತಾಲ್ಲೂಕು, ಜಂಪಣ್ಣ ನಾಯಕನ ಕೋಟೆ ಗ್ರಾಮದ ವಾಸಿಯಾಗಿರುವ ಇವರು ಸಂಪ್ರದಾಯ ಶಿಲ್ಪಕಲಾವಿದರು, ಇವರ ತಂದೆ ಕಮ್ಮಾರಿಕೆಯ ಜೊತೆಗೆ ಶಿಲ್ಪಕಲೆಯನ್ನು ಮಾಡುತ್ತಿದ್ದರು, ತಂದೆಯವರು ಮಾಡುತ್ತಿದ ಕಲೆಯನ್ನು ನೋಡುತ್ತಿದ್ದ ಇವರು ತಾನೂ ಕಲೆಯನ್ನು ಕಲಿತು ಮುಂದೆ ಕಲೆಯಲ್ಲಿ ಜಿಲ್ಲೆಯಾದ್ಯಂತ ಹೆಸರು ಪಡೆಯಬೇಕೆಂಬ ಬಯಕೆ ಉಂಟಾಯಿತು, ತಂದೆಯವರೊಂದಿಗೆ ಚಿಕ್ಕ ವಯಸ್ಸಿನಿಂದಲೇ ಕಲೆಯನ್ನು ಮಾಡಲು ಕಲಿತರು, ವಿವಿಧ ಮಾಧ್ಯಮಗಳಿಂದ ಎಲ್ಲಾ ರೀತಿಯ ಮೂರ್ತಿಗಳನ್ನು ಮಾಡುತ್ತಾರೆ, ಇದುವರೆವಿಗೂ ಅನೇಕ ದೇವಸ್ಥಾನಗಳಲ್ಲಿ ಸಿಮೆಂಟ್ ಮಾಧ್ಯಮದಿಂದ ಹಲವು ಮೂರ್ತಿಗಳನ್ನು ಮಾಡಿದ್ದಾರೆ.

ಕರಿಬಸಜ್ಜ, ಬಸವಣ್ಣ, ನಂದಿ, ಶಿವ, ಪಾರ್ವತಿ, ಆಂಜನೇಯ, ತಿಪ್ಪೇರುದ್ರ ಸ್ವಾಮಿ, ಶ್ರೀರಾಮ, ಸೀತಾದೇವಿ, ಲಕ್ಷ್ಮಣ, ಆನೆ ಕುದುರೆ, ಸಿಂಹ, ಹುಲಿ ಹೀಗೆ ಇನ್ನು ಮುಂತಾದ ಶಿಲ್ಪಗಳನ್ನು ಸುಂದರವಾಗಿ ಮಾಡುತ್ತಾರೆ.

ಇವರ ಮೂಲ ವೃತ್ತಿ ಶಿಲ್ಪಕಲೆ ತಯಾರಿಕೆಯಾಗಿದ್ದರೂ ಕೂಡ ವ್ಯವಸಾಯವನ್ನು ಸದ್ಯದಲ್ಲಿ ಮೂಲ ಕಸುಬನ್ನಾಗಿಸಿಕೊಂಡಿದ್ದು, ಶಿಲ್ಪಕಲೆಯನ್ನು ಉಪ ಕಸುಬಾಗಿ ಮಾಡುತ್ತಿದ್ದಾರೆ, ಮನೆಯ ಮುಂದೆ ಸಿಮೆಂಟ್‌ನ ಶಿಲ್ಪಗಳ ಕೆಲಸ ಮಾಡಿದರೆ, ದೊಡ್ಡ ದೊಡ್ಡ ದೇವಸ್ಥಾನದ ಕೆಲಸಗಳು, ಶಿಖರದ ಕೆಲಸಗಳು ಇದ್ದರೆ ಅಲ್ಲಿಗೇ ಹೋಗಿ ಮಾಡುತ್ತಾರೆ, ಇವರು ಮಾಡಿರುವ ಕೆಲವು ಶಿಲ್ಪಗಳು ಚಿತ್ರದುರ್ಗ ಜಿಲ್ಲೆಯ ಹಲವಾರು ಗ್ರಾಮಗಳ ದೇವಸ್ಥಾನಗಳಲ್ಲಿವೆ, ಜಿಲ್ಲೆಯಲ್ಲಿ ಅಲ್ಲದೆ, ಹೊರ ಜಿಲ್ಲೆಗಳಲ್ಲೂ ಮತ್ತು ಹೊರನಾಡಿನ ಕೆಲವು ಊರುಗಳಲ್ಲೂ ಇವರ ಮಾಡಿರುವ ಶಿಲ್ಪಗಳಿವೆ.

ಮೂರ್ತಿಗಳ ಅಳತೆಗೆ ತಕ್ಕಂತೆ ಬೆಲೆಯನ್ನು ನಿಗದಿ ಮಾಡುತ್ತಾರೆ, ಇತ್ತೀಚೆಗೆ ಸಹಾಯಕ ಕೆಲಸದವರು ಸಿಗುವುದು ಕಷ್ಟ, ಒಂದೊಂದು ವೇಳೆ ಹಿಡಿದ ಕೆಲಸವನ್ನು ಮಾಡುತ್ತಿರುವಾಗ ಸಹಾಯಕರು

ಊರಿಗೆ ಹೋಗಿ ಬರುತ್ತೇವೆ ಎಂದು ಹೋದವರು, ವಾರಗಟ್ಟಲೆ ಆದರೂ ಬರುವುದಿಲ್ಲ, ಇಂತಹ ಸಮಯದಲ್ಲಿ ತಾನೊಬ್ಬನೇ ಕೆಲಸವನ್ನು ಮಾಡಬೇಕಾದ ಪರಿಸ್ಥಿತಿ ಬರುತ್ತದೆ, ಅಂತಹ ಸಮಯದಲ್ಲಿ ತಾನು ಊರಿಗೆ ಹೋಗದೇ ಪರ ಊರಿನಲ್ಲಿ ಹೆಂಡತಿ ಮಕ್ಕಳ ಮುಖವನ್ನು ನೋಡದೇ ತನ್ನ ಕೆಲಸದಲ್ಲಿ ಇರಬೇಕಾದ ಅನಿವಾರ್ಯತೆ ಬರುತ್ತದೆ, ಆದರೂ ಎದೆಗುಂದದೆ ಹಿಡಿದ ಕೆಲಸವನ್ನು ಮಾಡಿಕೊಡುತ್ತೇನೆ ಎಂದು ಬ್ರಹ್ಮಾನಂದರವರು ಹೇಳುತ್ತಾರೆ.

ಶಿಲ್ಪಗಳನ್ನು ಮಾಡುವುದು ಮಾತ್ರವಲ್ಲ ಕಲ್ಲಿನಲ್ಲಿ ಮಾಡಿದ ಶಿಲ್ಪಗಳಿಗೆ ಪ್ರಾಣ, ಪ್ರತಿಷ್ಠಾಪನೆ ಮಾಡುತ್ತಾರೆ, ಅಗತ್ಯವಿದ್ದಾಗ ಮಾತ್ರ ಪ್ರತಿಷ್ಠಾಪನೆಗೆ ಒಂದಿಬ್ಬರನ್ನು ಪೌರೋಹಿತ್ಯಕ್ಕೆ ಕರೆದುಕೊಂಡು ಬರುತ್ತಾರೆ, ಯಾವುದೇ ಒಂದು ದೇವರ ಮೂರ್ತಿಯನ್ನು ಪ್ರತಿಷ್ಟಾಪನೆ ಮಾಡಲು ಇಂತಿಷ್ಟು ಮೊತ್ತವನ್ನು ನಿಗದಿ ಮಾಡುತ್ತಾರೆ.

ಸಿಮೆಂಟ್ ಮಾಧ್ಯಮದಲ್ಲಿ ಮೂರ್ತಿಗಳನ್ನು ಮಾಡುವ ವಿಧಾನ: ಸಿಮೆಂಟ್ ಮಾಧ್ಯಮದಲ್ಲಿ ಮೂರ್ತಿಗಳನ್ನು ಮಾಡಲು ಕೆಲವು ವಿಧಾನಗಳನ್ನು ಅಳವಡಿಸುತ್ತಾರೆ, ಮೊದಲಿಗೆ ಆಯಾ ಮೂರ್ತಿಗಳ ಅಳತೆಗೆ ತಕ್ಕಂತೆ ಕಬ್ಬಿಣದ ಸಲಾಕೆಗಳನ್ನು ಕತ್ತರಿಸಿ ಬೇಕಾದ ಆಕಾರಕ್ಕೆ ಬಗ್ಗಿಸಿಕೊಂಡು, ಬೈಂಡಿಗ್ ವೈರ್‌ನಿಂದ ಕಟ್ಟಿ ಆ ನಂತರ ಅದರ ಮೇಲೆ ಸಿಮೆಂಟ್ ಗ್ರಿಪ್ ಹಿಡಿದುಕೊಳ್ಳುವ ಸಲುವಾಗಿ ಮೆಸ್(ಜಾಲರ)ನ್ನು ಕಟ್ಟಿ ನಂತರ ಮರಳು ಮಿಶ್ರಿತ ಸಿಮೆಂಟನ್ನು ಒಂದು ಕೋಟ್(ಒಂದು ಸುತ್ತು) ಮೆತ್ತಿ, ಒಂದು ದಿನ ಡ್ರೈ ಆಗಲು ಬಿಟ್ಟು ಎರಡನೇ ಕೋಟ್ ಹಾಕುವುದು, ಅಲ್ಲಿಗೆ ಮೂರ್ತಿಯು ಆಕಾರವನ್ನು ಪಡೆದುಕೊಳ್ಳುತ್ತದೆ, ಮತ್ತೆ ಒಂದೆರಡು ದಿನ ಡ್ರೈ ಆಗಲು ಬಿಟ್ಟು ತದನಂತರ ವಾಟರ್ ಪ್ರೂಫ್ ಪೌಡರ್ + ನುಣುಪು ಮರಳು + ವೈಟ್ ಸಿಮೆಂಟ್+ಮಾರ್ಬಲ್ ಪೌಡರ್ ಇವುಗಳ ಮಿಶ್ರಣದ ಸಿಮೆಂಟನ್ನು ಚಿಕ್ಕ ಚಿಕ್ಕ ಕರಣಿ(ಟೂಲ್ಸ್)ಗಳ ಸಹಾಯದಿಂದ ಅಂತಿಮವಾಗಿ ಶಿಲ್ಪಕ್ಕೆ ಟಚಪ್ ಕೊಟ್ಟು ಸುಂದರ ಶಿಲ್ಪ ರೆಡಿಮಾಡುತ್ತಾರೆ, ಆನಂತರ 21ದಿನಗಳು ನೀರಿನಲ್ಲಿ ಕ್ಯೂರಿಂಗ್ ಮಾಡಿ ಕೊನೆಗೆ ಬಣ್ಣದಿಂದ ಅಲಂಕಾರಗೊಳಿಸುತ್ತಾರೆ.

ಸಿಮೆಂಟ್ ಮಾಧ್ಯಮದಿಂದ ತಯಾರು ಮಾಡಿದ ಮೂರ್ತಿಗಳಿಗೆ ಅಳತೆಯ ಆಧಾರದಲ್ಲಿ ಬೆಲೆಯನ್ನು ಇವರು ನಿಗದಿ ಇರುತ್ತದೆ, 1.5 * 2.5ಅಳತೆಯ ಮೂರ್ತಿಗೆ 6,000-00(ಆರು ಸಾವಿರ) ರೂಗಳ ದರವನ್ನು ನಿಗದಿ ಮಾಡುತ್ತಾರೆ, ದೊಡ್ಡ ಗಾತ್ರದ ಮೂರ್ತಿಗಳು, ಶಿಖರ, ದೇವಸ್ಥಾನದ ದ್ವಾರ, ಅಥವಾ ಮುಂತಾದ ಕಡೆಗಳಲ್ಲಿ ಮಾಡುವ ಕೆಲಸಗಳ ಅಳತೆಗೆ ತಕ್ಕಂತೆ ಅದರ ದರವನ್ನು ನಿಗದಿ ಮಾಡಲಾಗುತ್ತದೆ, ಇದರಲ್ಲಿ ಬಳಸುವ ಸಿಮೆಂಟ್, ಮರಳು, ಕಬ್ಬಿಣ, ಮಾರ್ಬಲ್ ಪೌಡರ್ ಮುಂತಾದ ಯಾವುದೇ ವಸ್ತುಗಳನ್ನು ಆಯಾ ದೇವಸ್ಥಾನದಲ್ಲಿ ಮೂರ್ತಿಗಳನ್ನು ಮಾಡಿಸುವವರು ವ್ಯವಸ್ಥೆ ಮಾಡಬೇಕು, ಮೂರ್ತಿಗಳನ್ನು ಮಾಡಿಕೊಡುವುದಷ್ಟೇ ಕಲಾವಿದರ ಕೆಲಸ, ಯಾವುದೇ ಒಂದು ದೇವಸ್ಥಾನದಲ್ಲಿ ಪೂಜೆಗೊಳ್ಳುವ ಮುಖ್ಯ ದೇವರಿಗೆ ಸಂಭಂದಿಸಿದಂತೆ, ಆ ದೇವರ ಪವಾಡಗಳು, ಇತಿಹಾಸ ಮತ್ತು ಚರಿತ್ರೆಯನ್ನು ಕುರಿತಂತೆ ಇರುವ ಮೂರ್ತಿಗಳನ್ನು ದೇವಸ್ಥಾನದ ಆವರಣದಲ್ಲಿ, ಶಿಖರದಲ್ಲಿ ಮಾಡುತ್ತಾರೆ, ಇಷ್ಟೇ ಮೂರ್ತಿಗಳನ್ನು ಒಂದು ದೇವಸ್ಥಾನದಲ್ಲಿ ಮಾಡಬೇಕು ಎಂಬ ನಿಯಮವೇನೂ ಇರುವುದಿಲ್ಲ, ಅಗತ್ಯಕ್ಕೆ ತಕ್ಕಂತೆ ಎಷ್ಟು ಮೂರ್ತಿಗಳನ್ನು ಬೇಕಾದರೂ ಮಾಡಬಹುದು, ಆದರೆ ದೇವಸ್ಥಾನ ಕಮಿಟಿಯವರು, ದೇವಸ್ಥಾನಕ್ಕೆ ಸಂಬಂದಿಸಿದವರು ಅಥವಾ ಮೂರ್ತಿಗಳನ್ನು ಮಾಡಿಸಲು ಹಣ ಹಾಕುವವರು ಮನಸ್ಸು ಮಾಡಬೇಕು, ಅವರು ಹೇಳಿದರೆ ಎಷ್ಟು ಮೂರ್ತಿಗಳನ್ನು ಬೇಕಾದರೂ ಮಾಡಿಕೊಡುತ್ತೇವೆ ಎನ್ನುತ್ತಾರೆ ಶಿಲ್ಪಿ ಬ್ರಹ್ಮಾನಂದ ಸ್ವಾಮಿಗಳು.

ವಿಳಾಸ : ಶಿಲ್ಪಿ ಬ್ರಹ್ಮಾನಂದ ಸ್ವಾಮಿಗಳು, ಜಂಪಣ್ಣ ನಾಯಕನ ಕೋಟೆ,
ಚಿತ್ರದುರ್ಗ ತಾಲ್ಲೂಕು & ಜಿಲ್ಲೆ, ಮೊ : 9945285049.

ಚಿಕ್ಕಣ್ಣಾಚಾರ್: ಬಹುಮುಖ ಕಲಾವಿದ ಚಿಕ್ಕಣ್ಣಾಚಾರ್, ಇವರು ಮೂಲ ಚಳ್ಳಕೆರೆ ತಾಲ್ಲೂಕಿನ ಸಿದ್ದಾಪುರ ಗ್ರಾಮದ ವಾಸಿಗಳು, ವೃತ್ತಿಯಲ್ಲಿ ಶಿಕ್ಷಕರಾಗಿದ್ದು ಪ್ರವೃತ್ತಿಯಲ್ಲಿ ಶಿಲ್ಪಕಲಾವಿದರು, ಇವರ ತಂದೆಯವರು ಶಿಲ್ಪಕಲಾವಿದರಾಗಿದ್ದರು, ಬಹಳ ದಿನಗಳಿಂದಲೂ ಕಲೆಯೇ ಜೀವಾಳವಾಗಿಸಿಕೊಂಡು ಬಂದಿರುವ ಕುಟುಂಬ ಇವರದು, ಇವರ ತಾಯಿ ಕೂಡ ಚಿತ್ರಕಲಾವಿದರು, ಯಾರಿಂದಲೂ ಕಲೆಯನ್ನು ಕಲಿಸಿಕೊಂಡವರಲ್ಲ, ತನ್ನಷ್ಟಕ್ಕೆ ತಾನು ಕಲಿತದ್ದು, ಮನೆಯ ಗೋಡೆಗಳು ಅಥವಾ ಖಾಲಿ ಇರುವ ಸಮತಟ್ಟಾದ ಜಾಗ ಸಿಕ್ಕರೆ ಸಾಕು ಅಲ್ಲೊಂದು ರಂಗೋಲಿಯನ್ನು ಬಿಡಿಸುವ ಕಲೆ ಇವರ ತಾಯಿಯವರದು, ಇದುವರೆವಿಗೂ ಸಾವಿರಾರು ರಂಗೋಲಿಗಳನ್ನು ಬಿಡಿಸಿದ್ದಾರೆ, ರಂಗೋಲಿಗಳಿಗೆ ಬಣ್ಣವನ್ನು ವಿಶೇಷವಾಗಿ ಹಾಕುತ್ತಾರೆ, ನೈಸರ್ಗಿಕವಾಗಿ ದೊರೆಯುವ ಮರದ ಎಲೆಗಳು, ಬೇರು, ಹರಿಶಿನ, ಕುಂಕುಮ ಮತ್ತು ವಿವಿಧ ರೀತಿಯ ಕಲ್ಲುಗಳನ್ನು ತಂದು ಚನ್ನಾಗಿ ಕುಟ್ಟಿ ಪುಡಿ ಮಾಡಿಕೊಂಡು ಅದಕ್ಕೆ ಮೇಕೆ(ಆಡು)ಹಾಲಿನಲ್ಲಿ ಅಥಾವಾ ಹಸು, ಎಮ್ಮೆ ಹಾಲಿನಲ್ಲಿ ಕಲೆಸಿ ಬಣ್ಣವನ್ನು ತಯಾರು ಮಾಡಿ ತಾವು ಬಿಡಿಸಿದ ರಂಗೋಲಿಗಳಿಗೆ ಹಾಕುತ್ತಾರೆ, ಇನ್ನೊಂದು ವಿಶೇಷತೆ ಎಂದರೆ ಒಮ್ಮೆ ಹಾಕಿದ ರಂಗೋಲಿಗಳನ್ನು ಮತ್ತೊಮ್ಮೆ ಹಾಕುವುದಿಲ್ಲ, ಆ ರೀತಿಯ ಕಲಾ ನೈಪುಣ್ಯತೆ ಇವರದು.

ಮನೆಯಲ್ಲಿ ತಂದೆ, ತಾಯಿ, ಅಣ್ಣ ಕಲಾವಿದರಾಗಿದ್ದ ಕಾರಣದಿಂದ ಚಿಕ್ಕಣ್ಣ ಕಲೆಯನ್ನು ಬಹಳ ಇಷ್ಟ ಪಟ್ಟು ಕಲಿತರು, ಇಂದು ತಂದೆಯವರನ್ನೂ ಮೀರಿಸುವಂತಹ ಕಲಾವಿದರಾಗಿದ್ದಾರೆ, ಮಣ್ಣಿನ ಮಾಧ್ಯಮದಿಂದ ವಿವಿಧ ಶಿಲ್ಪಕಲೆಗಳನ್ನು ಕೆತ್ತನೆ ಮಾಡಿದ್ದಾರೆ, ಅಲ್ಲದೆ ಕಿಟಕಿ, ಬಾಗಿಲುಗಳು, ಮನೆಯ ಹಾಗೂ ದೇವಸ್ಥಾನಗಳಲ್ಲಿ ಅಳವಡಿಸಬಹುದಾದ ಮರದ ಕೆತ್ತನೆಯನ್ನು ಮಾಡುತ್ತಾರೆ, ಸಿಮೆಂಟಿನ ಮಾಧ್ಯಮದಿಂದಲೂ ಮೂರ್ತಿಗಳನ್ನು ಮಾಡುತ್ತಾರೆ, ವೃತ್ತಿಯಲ್ಲಿ ಶಿಕ್ಷಕರಾಗಿದ್ದು, ಬಿಡುವಿನ ಸಮಯದಲ್ಲಿ ಮಾತ್ರ ಕಲೆಯಲ್ಲಿ ತೊಡಗುತ್ತಾರೆ, ಚಳ್ಳಕೆರೆ ತಾಲ್ಲೂಕಿನ ಗೋಪನಹಳ್ಳಿ ಗ್ರಾಮದ ಯದವ ನಗರದ ಶ್ರೀ ಈರಣ್ಣನ ದೇವಾಲಯಕ್ಕೆ ಸಿಮೆಂಟಿನ ಬಸವಣ್ಣನ ಮೂರ್ತಿಗಳನ್ನು ಮಾಡಿಕೊಟ್ಟಿದ್ದಾರೆ, ಅವುಗಳು ಜನರ ಮೆಚ್ಚುಗೆಯನ್ನು ಗಳಿಸಿವೆ, ಕಲೆಯನ್ನು ಮಾಡಲು ಬಹಳ ಜನ ಬಂದು ಕೇಳಿದರೂ ತಮ್ಮ ಶಿಕ್ಷಕ ವೃತ್ತಿಯಲ್ಲಿ ಬಿಡುವು ಇರುವುದಿಲ್ಲ ಹಾಗಾಗಿ ಒಂದೋ ಅಥವಾ ಎರಡೋ ಮೂರ್ತಿಗಳನ್ನು ಮಾತ್ರ ಮಾಡಿಕೊಡಲು ಒಪ್ಪಿಗೆ ಕೊಡುತ್ತಾರೆ.

ಮಣ್ಣಿನಲ್ಲೂ ಗಣೇಶ, ಗೌರಿ ನಂದಿ ಮುಂತಾದ ಮೂರ್ತಿಗಳನ್ನು ಬಲು ಸುಂದರವಾಗಿ ಮಾಡಿದ್ದಾರೆ, ಇವುಗಳಿಗೆ ನೈಸರ್ಗಿಕವಾಗಿ ದೊರೆಯುವ ವಸ್ತುಗಳಿಂದ ಬಣ್ಣವನ್ನು ತಯಾರಿಸಿ ಹಾಕುತ್ತಾರೆ, ಚಿತ್ರಕಲೆಯನ್ನೂ ಸಹ ಅಷ್ಟೇ ಸುಂದರವಾಗಿ ಮಾಡುತ್ತಾರೆ, ಇವರ ಇನ್ನೊಂದು ವಿಶೇಷ ಕಲೆ ಎಂದರೆ ಮುಖವಾಡ ಮಾಡುವುದು, ಉಪಯೋಗಿಸಿ ಬಿಸಾಕಿದ ರಟ್ಟು, ಪೇಪರ್ ಮುಂತಾದ ಅನುಪಯುಕ್ತವಾದ ವಸ್ತುಗಳಿಂದ ಮನುಷ್ಯ, ಪ್ರಾಣಿ, ಪಕ್ಷಿ, ದೇವರುಗಳ ಮುಖವಾಡವನ್ನು ಮಾಡುತ್ತಾರೆ.

ಸಿಮೆಂಟ್, ಮಣ್ಣು, ಕಲ್ಲು, ಮರ, ರಟ್ಟು, ಪೇಪರ್, ಅನುಪಯುಕ್ತ ವಸ್ತುಗಳು ಹಾಗೂ ಮುಂತಾದ ಮಾಧ್ಯಮಗಳಿಂದ ವಿವಿಧ ಕಲಾಕೃತಿಗಳನ್ನು ಮಾಡುತ್ತಾರೆ, ದೇವರ ಉತ್ಸವಗಳು, ಜಾತ್ರೆ ಹಾಗೂ ಇತರೆ ಮೆರವಣಿಗೆಗಳಂತಹ ಕಾರ್ಯಕ್ರಮಗಳಲ್ಲಿ ಹಾಸ್ಯ ರೀತಿಯ ವೇಷಗಳನ್ನು ಹಾಕಿಕೊಂಡು ಕುಣಿಯಲು ವೇಷ ಭೂಷಣಗಳನ್ನು ಮಾಡುತ್ತಾರೆ, ದೊಡ್ಡ ಕಣ್ಣು, ದೊಡ್ಡ ಮೂಗು, ತೆರೆದ ನಗುಮುಖದ ಬಾಯಿ, ಅಗಲವಾದ ಕಿವಿಗಳು ಮತ್ತು ಅಗಲವಾದ ಮುಖವನ್ನು ಹೊಂದಿರುವ ಮುಖವಾಡಗಳನ್ನು ತುಂಬಾ ಆಕರ್ಷಕವಾಗಿ ಮಾಡುತ್ತಾರೆ, ಇನ್ನು ಕೆಲವು ಆಕೃತಿಗಳನ್ನು ಮಾಡಿದ್ದಾರೆ, ಪೂರ್ತಿ ಕಾಲಿನಿಂದ ಹಿಡಿದು ತಲೆಯ ವರೆವಿಗೂ ದೊಡ್ಡ ಗಾತ್ರದ ವೇಷವನ್ನು ಮಾಡಿದ್ದಾರೆ, ಮನುಷ್ಯನಿಗಿಂತ ಎತ್ತರವಾದ ವೇಷವನ್ನು ಅಂದರೆ 12ರಿಂದ 15ಅಡಿಗಳ ವರೆಗೂ ಮಾಡಿದ್ದು ಇದನ್ನು ಒಬ್ಬ ಮನುಷ್ಯನು ಹಾಕಿಕೊಂಡು

ಕುಣಿಯುತ್ತಾನೆ. ಹೆಣ್ಣು, ಗಂಡು, ಅಜ್ಜ, ಅಜ್ಜಿ, ಪ್ರಾಣಿ, ಪಕ್ಷಿಗಳ ಬೃಹತ್ತಾದ ವೇಷಗಳನ್ನು ಮಾಡಿದ್ದು, ಮೆರವಣಿಗೆಯಲ್ಲಿ ಇವುಗಳು ಮನಷ್ಯರಿಗಿಂತ ಬಹಳ ಎತ್ತರವಾಗಿದ್ದು ಆಕರ್ಷಕವಾಗಿರುತ್ತವೆ.

ವೇಷಗಳು ಹಾಗೂ ಮುಖವಾಡಗಳನ್ನು ಮಾಡುವ ವಿಧಾನ: ಹಳೆಯ ರಟ್ಟುಗಳು ಹಾಗೂ ದಪ್ಪನೆಯ ಪೇಪರುಗಳನ್ನು ಒಂದು ದಿನ ಪೂರ್ತಿ ನೆನೆಹಾಕಿದರೆ ಮರುದಿನ ಅದು ಚನ್ನಾಗಿ ನೆನೆದು ಮೆತ್ತಗೆ ಆಗಿರುತ್ತದೆ, ಹೇಗೆ ಬೇಕೋ ಹಾಗೆ ಅದನ್ನು ಉಪಯೋಗಿಸಬಹುದು. ಮೊದಲು ಮಣ್ಣಿನಲ್ಲಿ ಮುಖವಾಡ ಅಥವಾ ವೇಷವನ್ನು ಮಾಡಿಕೊಂಡು ಮಣ್ಣಿನ ಮೂರ್ತಿ ಗಟ್ಟಿಯಾದ ಮೇಲೆ ಎರಡು ದಿನ ಬಿಟ್ಟು ಆ ಮಣ್ಣಿನ ಮೂರ್ತಿಗೆ ಅದರ ಮೇಲೆ ನೆನೆದು ಮೆತ್ತಗಾದ ರಟ್ಟನ್ನು ಅದರ ಆಕಾರದಂತೆಯೇ ಕೈನಿಂದ ಮೆತ್ತುತ್ತಾ ಕಣ್ಣು, ಮೂಗು, ಬಾಯಿ ವಿವಿಧ ಅಂಗಾಂಗಗಳನ್ನು, ಆಕಾರಗಳನ್ನು ಮಾಡಿ, ಮತ್ತೆ ಒಂದೆರಡು ದಿನ ಬಿಟ್ಟರೆ ಚನ್ನಾಗಿ ಡ್ರೈ (ಒಣಗಿರುತ್ತದೆ)ಆಗಿರುತ್ತದೆ, ಆಮೇಲೆ ಆಯಿಲ್ ಬಣ್ಣದಿಂದ ಡಿಸೈನ್ ಮಾಡುವುದು, ರಟ್ಟಿನ ಮುಖವಾಡ, ವೇಷ ಗಟ್ಟಿಯಾಗಿರಬೇಕಾದರೆ ತಂತಿ ಅಥವಾ ಕಟ್ಟಿಗೆಯ ತುಂಡುಗಳಿಂದ ಕಟ್ಟಬೇಕು, ಕೊನೆಗೆ ಹೆಣ್ಣು ಮುಖವಾಡಕ್ಕೆ ಮೂಗಿಗೆ ದೊಡ್ಡದಾದ ಮೂಗುತಿ, ಕಿವಿಗಳಿಗೆ ಪ್ಲಾಸ್ಟಿಕ್, ವಿವಿಧ ವಸ್ತುಗಳಿಂದ ಮಾಡಿದ ಅಲಂಕಾರಿಕಾ ಆಭರಣಗಳು, ಅಂಗಡಿಗಳಲ್ಲಿ ಸಿಗುವ ದೊಡ್ಡ ಗಾತ್ರದ ಆಭರಣಗಳಿಂದ ಅಲಂಕಾರ ಮಾಡಿದರೆ ಮುಖವಾಡ ಸಿದ್ದ, ಎತ್ತರವಾದ ಮನುಷ್ಯನ ವೇಷಗಳಿಗೆ ವಿವಿಧ ಬಟ್ಟೆಗಳಿಂದ ಅಲಂಕಾರ ಮಾಡಬೇಕು, ಪ್ರಾಣಿಗಳ, ಪಕ್ಷಿಗಳ ವೇಷಗಳಿಗೂ ಬಟ್ಟೆಗಳಿಂದ ಅಲಂಕಾರ ಮಾಡಿದರೆ ಕುಣಿತಕ್ಕೆ ಶಿಲ್ಪಕಲಾ ವೇಷ ಭೂಷಣಗಳು ಸಿದ್ದವಾದಂತೆ. ಇಂತಹ ಅನೇಕ ವಿಧವಾದ ಮುಖವಾಡಗಳನ್ನು, ವೇಷಭೂಷಣಗಳನ್ನು ಚಿಕ್ಕಣ್ಣಾಚಾರ್ ಮಾಡಿದ್ದಾರೆ. ರಟ್ಟು, ಪೇಪರ್, ಅನುಪಯುಕ್ತ ವಸ್ತುಗಳಿಂದ ಮುಖವಾಡಗಳನ್ನು ಮಾಡಿದ್ದಲ್ಲದೆ, ಫೈಬರ್‌ನಿಂದಲೂ ಮುಖವಾಡ ಹಾಗೂ ವೇಷಭೂಷಣಗಳನ್ನು ಮಾಡಿದ್ದಾರೆ. ಇವರಿಗೆ ಕಲೆಯಲ್ಲಿ ಆಸಕ್ತಿ ಮಾಡಲು ಪ್ರಮುಖವಾದ ಕಾರಣವೆಂದರೆ ಇವರ ತಾಯಿ, ಚಿಕ್ಕವಯಸ್ಸಿನಿಂದಲೂ ತಾಯಿಯವರು ಬಿಡಿಸುತ್ತಿದ್ದ ಚಿತ್ರಕಲೆ ಮತ್ತು ರಂಗೋಲಿ ಕಲೆ ಹಾಗೂ ಅವುಗಳಿಗೆ ತಾವೇ ಸ್ವತಹ ಬಣ್ಣಗಳನ್ನು ಮಾಡುವ ಪರಿ ಇವರಿಗೆ ಬಹಳ ಇಷ್ಟವಾಗಿ ಇಂದು ಇವರೊಬ್ಬ ಪ್ರತಿಭಾವಂತ ಕಲಾವಿದರಾಗಿ ಹೊರ ಹೊಮ್ಮಲು ಮುಖ್ಯ ಕಾರಣವಾಗಿದೆ.

ಕಲೆಯನ್ನು ಮಾಡಲು ಶಿಕ್ಷಕ ವರ್ಗ, ಸ್ನೇಹಿತರು, ಮನೆಯವರ ಸಂಪೂರ್ಣ ಸಹಕಾರವಿದೆ, ಇವರೆಲ್ಲರ ಪ್ರೋತ್ಸಾಹದಿಂದ ಇವರು ಮೃದಂಗ ವಾದ್ಯವನ್ನೂ ಕೂಡ ನುಡಿಸುತ್ತಾರೆ, ಕೆಲವು ಸಂಗೀತ ಕಾರ್ಯಕ್ರಮಗಳನ್ನೂ ನಡೆಸಿಕೊಟ್ಟಿದ್ದಾರೆ. ಇಷ್ಟಕ್ಕೇ ಸುಮ್ಮನಾಗದೇ ಹತ್ತಾರು ಹುಡುಗರನ್ನು ಸೇರಿಸಿಕೊಂಡು ಒಂದು ಕಲಾತಂಡವನ್ನು ಕಟ್ಟಿದ್ದಾರೆ, ಇವರೇ ಸಿದ್ದಮಾಡಿರುವ ಮುಖವಾಡಗಳು ಮತ್ತು ವೇಷಭೂಷಣಗಳನ್ನು ಹಾಕಿಕೊಂಡು ಕುಣಿದು ಜನರ ಮನ ತಣಿಸುತ್ತಾರೆ. ಯಾರಾದರೂ ಬಂದು ಕರೆದರೆ ಚಿಕ್ಕಣ್ಣನವರು ತಮ್ಮ ತಂಡದವರೊಂದಿಗೆ ಹೋಗಿ ಉತ್ಸವ ಹಾಗೂ ಮೆರವಣಿಗೆಯಲ್ಲಿ ಕುಣಿದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾರೆ, ಇಂತಹ ಕಾರ್ಯಕ್ರಮದಲ್ಲಿ ತಮ್ಮ ಮುಖವಾಡಗಳು ಹಾಗೂ ವೇಷಭೂಷಣಗಳೊಂದಿಗೆ ಕುಣಿಯಲು ಇಂತಿಷ್ಟು ಹಣವನ್ನು ಪಡೆಯುತ್ತಾರೆ. ಬಂದ ಹಣದಲ್ಲಿ ಭಾಗವಹಿಸಿದ ಕಲಾವಿದರಿಗೆ ಕೊಟ್ಟು ಉಳಿದ ಹಣದಲ್ಲಿ ಸಮಾಜ ಸೇವೆ ಮಾಡಲು ಉಪಯೋಗಿಸುತ್ತಾರೆ.

ಇತ್ತೀಚೆಗೆ ಇವರ ಅಣ್ಣನ ಜೊತೆ ಸೇರಿ ಸ್ವಂತ ಊರಿನ ಈಶ್ವರ ದೇವರ ಹೊಸದಾದ ಮರದ ರಥವನ್ನು ಬಹಳ ಸುಂದರವಾಗಿ ಮಾಡಿದ್ದಾರೆ.

ಚಿಕ್ಕಣ್ಣಾಚಾರ್ ಕಟ್ಟಿರುವ ಸಂಘದ ಕಲಾವಿದರು ಧರಿಸಿರುವ ಮುಖವಾಡ ಹಾಗೂ ಹೆಣ್ಣು, ಗಂಡು ರೂಪಧಾರಿಗಳು:






ಚಿಕ್ಕಣ್ಣನವರು ರಟ್ಟು ಹಾಗೂ ಪೇಪರ್‌ನಲ್ಲಿ ಮಾಡಿರುವ ಮುಖವಾಡಗಳನ್ನು ಹಾಕಿಕೊಂಡಿರುವ ವೇಷಧಾರಿಗಳು:



ಚಿಕ್ಕಣ್ಣ ಮಣ್ಣಿನಲ್ಲಿ ತಯಾರಿಸಿರುವ ಅಭಯ ಹಸ್ತ ಗಣಪತಿ:



ಚಿಕ್ಕಣ್ಣನವರ ಮರಗೆಲಸ ಮಾಡಲು ಬಳಸುವ ಸಲಕರಣೆಗಳು:



ಚಿಕ್ಕಣ್ಣ ತಯಾರಿಸಿರುವ ಅಜ್ಜ-ಅಜ್ಜಿಯ ಮುಖವಾಡ ಸಹಿತ ವೇಷಭೂಷಣ:



ಚಿಕ್ಕಣ್ಣ ಮಾಡಿರುವ ಮನೆಯ ಬಾಗಿಲಿನ ಕುಸುರಿ ಕೆತ್ತನೆ:



ಚಿಕ್ಕಣ್ಣ ಮಾಡಿರುವ ನಾಲ್ಕು ಅಡಿ ಎತ್ತರದ ನಾಲ್ಕುಗಾಲಿಯ ರಥ:

ವಿಳಾಸ:ಚಿಕ್ಕಣ್ಣಾಚಾರ್ ಬಿನ್ ತಿಪ್ಪೇಸ್ವಾಮಿ,ಸಿದ್ದಾಪುರ,ಚಳ್ಳಕೆರೆ ತಾ, ಚಿತ್ರದುರ್ಗ ಜಿಲ್ಲೆ, ಮೊ: 9686789749.

ಆರ್.ರವೀಂದ್ರಚಾರ್: ಚಳ್ಳಕೆರೆ ಪಟ್ಟಣದಲ್ಲಿ ವಾಸವಾಗಿರುವ ಇವರು ತಂದೆಯವರಿಂದ ಬಂದ ಶಿಲ್ಪಕಲೆಯನ್ನು ಮುಂದುವರಿಸುತ್ತಿದ್ದಾರೆ, ಪಿ.ಯು.ಸಿ. ವರೆಗೆ ಚಳ್ಳಕೆರೆಯಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿದ್ದಾರೆ, ಮುಂದೆ ಓದಲು ಮನಸ್ಸಾಗಲಿಲ್ಲ, ತಂದೆಯವರು ಮಾಡುತ್ತಿದ್ದ ಶಿಲ್ಪಕಲೆ ಇವರನ್ನು ಸೆಳೆಯಿತು, ತಂದೆಯವರಿಗೂ ಸಹ ಮಗ ಶಿಲ್ಪಕಲೆಯನ್ನು ಕಲಿಯಬೇಕು ಎಂಬ ಆಸೆ ಇತ್ತು, ತಮ್ಮ ಕುಂಟುಂಬವು ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿರುವ ಸಂಪ್ರದಾಯ ಶಿಲ್ಪಕಲೆಯನ್ನು ಕಲಿತು ಹಾಗೆ

ಮುಂದುವರೆಸಿಕೊಂಡು ಹೋಗಬೇಕು ಎಂದು ಮಗನಿಗೆ ಚಿಕ್ಕ ವಯಸ್ಸಿನಲ್ಲಿಯೇ ಶಿಲ್ಪಕಲೆಯನ್ನು ಕಲಿಸುತ್ತಿದ್ದರು, ಮಗ ರವೀಂದ್ರನೂ ಸಹ ಅಷ್ಟೇ ಆಸಕ್ತಿಯಿಂದ ಕಲಿಯುತ್ತಿದ್ದನು, ಇಂದು ಉತ್ತಮ ಶಿಲ್ಪಕಲಾವಿದನಾಗಿದ್ದಾನೆ. ರವೀಂದ್ರ ಇವರಿಗೆ ಮೂರು ಜನ ಮಕ್ಕಳಿದ್ದು ಮೂವರೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ರಜಾ ದಿನಗಳಲ್ಲಿ ತಂದೆಯವರೊಂದಿಗೆ ಶಿಲ್ಪಕಲಾ ಕೆಲಸದಲ್ಲಿ ನೆರವಾಗುತ್ತಾರೆ, ಇವರ ಮಡದಿಯೂ ಸಹ ಗಂಡನ ಕೆಲಸದಲ್ಲಿ ಸಹಾಯ ಮಾಡುತ್ತಾರೆ, ಮಣ್ಣಿನಲ್ಲಿ ಮಾಡಿದ ಮೂರ್ತಿಗಳಿಗೆ ಬಣ್ಣಹಾಕುವುದು ಮಣ್ಣನ್ನು ಹದ ಮಾಡುವುದು ಮುಂತಾಗಿ ಸಹಾಯ ಮಾಡುತ್ತಾರೆ.

ಮಣ್ಣು, ಸಿಮೆಂಟ್ ಹಾಗೂ ಮರದಿಂದ ಶಿಲ್ಪಕಲೆಗಳನ್ನು ಮಾಡುತ್ತಿದ್ದಾರೆ, ಇತರೆ ದಿನಗಳಲ್ಲಿ ಮನೆಗೆ ಬೇಕಾದ ಕಿಟಕಿ, ಬಾಗಿಲುಗಳು, ಷೋಕೇಸ್‌ಗಳನ್ನು, ಮರದ ಕುರ್ಚಿ, ಟೇಬಲ್ಲು, ಮಂಚ ಮುಂತಾದ ಮರದ ಸಾಮಾನುಗಳನ್ನೂ, ಗಣೇಶನ ಹಬ್ಬದ ಸಮಯದಲ್ಲಿ ಮಣ್ಣಿನ ಗಣೇಶಗಳನ್ನು ಮಾಡುತ್ತಾರೆ, ಹಬ್ಬ ಇನ್ನೂ ಮೂರು ತಿಂಗಳು ದೂರ ಇರುವಾಗಲೇ ಮಣ್ಣಿನ ಗಣೇಶ ಮೂರ್ತಿಗಳನ್ನು ಮಾಡಲು ಪ್ರಾರಂಭಿಸುತ್ತಾರೆ, ಮೊದಲು ಮಣ್ಣನ್ನು ತಂದು ಒಂದು ತಿಂಗಳು ಪೂರಾ ತೇವಾಂಶ ಇರುವಂತೆ ನೋಡಿಕೊಳ್ಳುತ್ತ ಮುಗ್ಗು ಹಾಕುತ್ತಾರೆ, ಲೋಡುಗಟ್ಟಲೇ ಮಣ್ಣನ್ನು ತರುತ್ತಾರೆ, ಚಳ್ಳಕೆರೆ ತಾಲ್ಲೂಕು ಚಿತ್ರಹಳ್ಳಿ ಗ್ರಾಮಕ್ಕೆ ಸೇರಿದ ಕೆರೆಯಲ್ಲಿ, ಮತ್ತು ಚಿತ್ರದುರ್ಗ ಹತ್ತಿರದ ಕೆರೆಗಳಲ್ಲಿ ಇವರು ಮಣ್ಣನ್ನು ತರುತ್ತಾರೆ, ಸಣ್ಣ ಪ್ರಮಾಣದ ಮೂರ್ತಿಗಳನ್ನು ಮಾಡಲು ಅಚ್ಚನ್ನು ಉಪಯೋಗಿಸಿದರೆ, ದೊಡ್ಡ ಮೂರ್ತಿಗಳನ್ನು ಬರೀ ಕೈಯಿಂದಲೇ ಮಾಡುತ್ತಾರೆ, ಬೇರೆ ಕಡೆಗಳಲ್ಲಿ ಕೆಲಸ ಮಾಡಲು ಕರೆ ಬಂದರೆ ಹೋಗುತ್ತಾರೆ, ಇಲ್ಲವಾದರೆ ಮನೆಯಲ್ಲಿಯೇ ಕೆಲಸ ಮಾಡುತ್ತಾರೆ. ಶಿಲ್ಪಕಲಾ ಶಿಬಿರಗಳು, ಪ್ರದರ್ಶನಗಳು, ತರಬೇತಿಗಳನ್ನು ಸರ್ಕಾರ ನಡೆಸಿದರೆ ಅದರಲ್ಲಿ ಭಾಗವಹಿಸಲು ಸಿದ್ದ ಎನ್ನುತ್ತಾರೆ.

ಒಂದು ಟ್ರ್ಯಾಕ್ಟರ್ ಲೋಡು ಮಣ್ಣಿನಲ್ಲಿ ಮೂರ್ತಿಗಳನ್ನು ಮಾಡಲು ಖರ್ಚಿನ ವಿವರ:

ಕ್ರ.ಸಂಖ್ಯೆ	ವಿವರ	ಖರ್ಚು
1	ಟ್ರ್ಯಾಕ್ಟರ್ ಬಾಡಿಗೆ---	3,500-00
2	ಲೋಡಿಂಗ್ ಮತ್ತು ಅನ್ ಲೋಡಿಂಗ್ ಮಾಡಲು ಕೂಲಿಕಾರರಿಗೆ ಒಬ್ಬರಿಗೆ-700-00ನಂತೆ-- 10 ಜನ ಕೂಲಿಗಳಿಗೆ-7000-00--	7,000-00
3	ಮೂರ್ತಿಗಳ ಕೆಳಗಡೆ ಮಣೆ(ಪೀಠ) ಚಿಕ್ಕ ಮಣೆಗಳಿಗೆ-150-00ನಂತೆ ಒಟ್ಟು 200ಮಣೆಗಳಿಗೆ-- ದೊಡ್ಡ ಮಣೆಗಳಿಗೆ-400-00ನಂತೆ ಒಟ್ಟು 15ಮಣೆಗಳಿಗೆ--	30,000-00 06,000-00
4	ಬಣ್ಣಗಳಿಗೆ-50ಗ್ರಾಂ.ನಿಂದ 20ಕೆಜಿ ವರೆಗಿನ ಡಬ್ಬಿಗಳಿಗೆ--	25,000-00
5	ಬಣ್ಣ ಹಾಕುವ ಬ್ರಷ್-0" ನಿಂದ 20" ವರೆಗೆ---	1,500-00
6	ಮಣ್ಣು ಹದ ಮಾಡಲು ಕೂಲಿಯವರಿಗೆ ಒಬ್ಬರಿಗೆ ಒಂದು ದಿನಕ್ಕೆ-200-00ನಂತೆ 03 ಜನರಿಗೆ 10ದಿನಗಳಿಗೆ---	6,000-00
7	ಇತರೆ ಖರ್ಚು---------	10,000-00
8	ಒಟ್ಟು ಖರ್ಚು---	89,000-00

ಮೇಲ್ಕಂಡಂತೆ ಒಂದು ಲೋಡು ಮಣ್ಣಿನಲ್ಲಿ ಮೂರ್ತಿಗಳನ್ನು ಮಾಡಲು ಖರ್ಚು ಬರಬಹುದಾಗಿದ್ದು, ಇದರಲ್ಲಿ ಶಿಲ್ಪಿಯ ಪ್ರತಿನಿತ್ಯದ ಕೂಲಿ, ಊಟದ ವ್ಯವಸ್ಥೆಯನ್ನು, ವಾರಗಟ್ಟಲೆ ನಗರಗಳಲ್ಲಿ ಮಾರಾಟ ಮಾಡುವಾಗ ತಗುಲಬಹುದಾದ ಖರ್ಚು ಸೇರಿರುತ್ತದೆ.

ಒಂದು ಲೋಡು ಮಣ್ಣಿನಲ್ಲಿ ಮೂರ್ತಿಗಳನ್ನು ಮಾಡಿದಾಗ ಬರುವ ಆದಾಯ :

ಕ್ರ.ಸಂಖ್ಯೆ	ವಿವರ	ಆದಾಯ
1	ದೊಡ್ಡ ಮೂರ್ತಿಗಳು : 3ರಿಂದ 4ಅಡಿ, 1ಕ್ಕೆ- 2500-00-ಒಟ್ಟು 05ಮೂರ್ತಿಗಳಿಗೆ---- 2.5ರಿಂದ4.5ಅಡಿ, 1ಕ್ಕೆ- 2000-00-ಒಟ್ಟು 05ಮೂರ್ತಿಗಳಿಗೆ---- 2ರಿಂದ 3.5ಅಡಿ, 1ಕ್ಕೆ- 1500-00-ಒಟ್ಟು 05ಮೂರ್ತಿಗಳಿಗೆ----	 12,500-00 10,000-00 07,500-00
2	ಚಿಕ್ಕ ಮೂರ್ತಿಗಳು : 2ರಿಂದ 3ಅಡಿ, 1ಕ್ಕೆ-750-00-ಒಟ್ಟು 50ಮೂರ್ತಿಗಳಿಗೆ-------- 1ರಿಂದ 2ಅಡಿ, 1ಕ್ಕೆ-500-00-ಒಟ್ಟು 150ಮೂರ್ತಿಗಳಿಗೆ-------- ಒಂದು ಅಡಿ, 1ಕ್ಕೆ-250-00-ಒಟ್ಟು 250ಮೂರ್ತಿಗಳಿಗೆ------- ಅರ್ಧ ಅಡಿ, 1ಕ್ಕೆ-40-00-ಒಟ್ಟು 500ಮೂರ್ತಿಗಳಿಗೆ-------- ಅರ್ಧಅಡಿ ಗೌರಿ ಮೂರ್ತಿ,1ಕ್ಕೆ-25-00-ಒಟ್ಟು 100ಮೂರ್ತಿಗಳಿಗೆ-	 37,500-00 75,000-00 62,500-00 20,000-00 2,500-00
3	ಒಟ್ಟು----	2,27500-00

1). ಒಂದು ಲೋಡು ಮಣ್ಣಿನಿಂದ ಮೂರ್ತಿಗಳನ್ನು ಮಾಡಿ ಮಾರಾಟ ಮಾಡಿದಾಗ ಬಂದ ಹಣ: 2,27,500-00

2). ಬಣ್ಣ, ಬ್ರಷ್, ಹಲಗೆ, ಕೂಲಿ, ಟ್ರ್ಯಾಕ್ಟರ್ ಬಾಡಿಗೆ, ಇತ್ಯಾದಿ ಖರ್ಚು: --- 089,000-00

ಉಳಿಕೆ :----------- 138,500-00

ಮೇಲ್ಕಂಡಂತೆ ಒಂದು ಟ್ರ್ಯಾಕ್ಟರ್ ಲೋಡ್ ಮಣ್ಣಿನಿಂದ ಮೂರ್ತಿಗಳನ್ನು ಮಾಡಲು ಬಂದ ಆದಾಯದಲ್ಲಿ ಖರ್ಚುನ್ನು ತೆಗೆದು ಉಳಿದ ಹಣದಲ್ಲಿ ಕಲಾವಿದರು ಜೀವನವನ್ನು ಆರಾಮವಾಗಿ ನಡೆಸುತ್ತಾರೆ, ಆದರೆ ಇದು ಒಂದು ವರ್ಷದಲ್ಲಿ ಒಂದು ತಿಂಗಳು ಮಾತ್ರ ಇಂತಹ ಅವಕಾಶ ಸಿಗುತ್ತದೆ, ಒಂದು ವರ್ಷದಲ್ಲಿ ಮೂರ್‍ನಾಲ್ಕು ಬಾರಿ ಇಂತಹ ಅವಕಾಶಗಳು ಸಿಕ್ಕರೆ ಕಲಾವಿದರು ಸುಖವಾದ ಜೀವನವನ್ನು ಮಾಡುತ್ತಾರೆ, ತಲತಲಾಂತರದಿಂದ ಬಂದ ಸಂಪ್ರದಾಯ ಶಿಲ್ಪಕಲೆಯನ್ನು ಮುಂದುವರೆಸಲು ಸಹಕಾರಿಯಾಗುತ್ತದೆ.

ರವೀಂದ್ರ ಅವರು ಮಾಡಿರುವ ಶಿಲ್ಪಕಲೆಗಳ ವಿವರ: ಕೊಲ್ಲಾಪುರದಮ್ಮ, ದುರ್ಗಮ್ಮ, ಗೌರಮ್ಮ, ಚೌಡಮ್ಮ, ಮಾರಮ್ಮ ಮುಂತಾದ ಹೆಣ್ಣು ರೂಪದ ಮೂರ್ತಿಗಳನ್ನು ಮಾಡಿದ್ದಾರೆ, ಹಿರಿಯೂರು ತಾಲ್ಲೂಕಿನ ಆದಿರಾಳು, ಚಳ್ಳಕೆರೆ ತಾಲ್ಲೂಕಿನ ದೇವರ ಮರಿಕುಂಟೆ, ಗೊರ್ಲಕಟ್ಟೆ, ನನ್ನಿವಾಳ ಮುಂತಾದ ಊರುಗಳಲ್ಲಿ ಇವರು ಮಾಡಿರುವ ಶಿಲ್ಪಗಳು ಇವೆ, ಇವರು ಹೆಚ್ಚಾಗಿ ಮರದ ಕತ್ತನೆಗಳನ್ನು ಮಾಡಿದ್ದಾರೆ.

ಮರದಿಂದ ಶಿಲ್ಪಗಳನ್ನು ಮಾಡುವ ವಿಧಾನ: ಸಾಮಿಲ್‌ಗಳಲ್ಲಿ ಮರವನ್ನು ತರುತ್ತಾರೆ, ಕೆಲವೊಂದು ಸಲ ಶಿಲ್ಪಗಳನ್ನು ಮಾಡಿಸುವವರು ತಂದುಕೊಡುತ್ತಾರೆ, ಮೊದಲು ಮರವನ್ನು ಬೇಕಾದ ಅಳತೆಗೆ ಕತ್ತರಿಸಿಕೊಂಡು, ಅದಕ್ಕೆ ಶಾಸ್ತ್ರೋತ್ಸವವಾಗಿ ಪಾಜಾದಿಗಳನ್ನು ಮಾಡಿ ಕೆತ್ತನೆಯನ್ನು ಪ್ರಾರಂಭಿಸುತ್ತಾರೆ, ಉಳಿಗಳಿಂದ ಒರಟು(ರಫ್) ಕೆತ್ತನೆಯನ್ನು ಮಾಡಿ, ರಫ್ ಪೇಪರ್‌ನಿಂದ, ಉಳಿಯಿಂದ ಕೆತ್ತನೆಯಲ್ಲಿ ಮೂಡಿದ ಗೆರೆಗಳನ್ನು ಉಜ್ಜಿ ನಯವಾಗಿ ಕಾಣುವಂತೆ ಮಾಡುತ್ತಾರೆ, ತದನಂತರ ಸಾಮಿಲ್‌ಗಳಲ್ಲಿ ಸಿಗುವ ಮರದ ಹೊಟ್ಟನ್ನು ತಂದು ಅದಕ್ಕೆ ಒಂದು ಅಂಟನ್ನು ಸೇರಿಸಿ ಮೇಣದಂತೆ ಮಾಡಿಕೊಂಡು ಮರದಲ್ಲಿ ಉಳಿಯಿಂದ ಕೆತ್ತನೆಮಾಡಿರುವ ರಫ್ ಶಿಲ್ಪಕ್ಕೆ ಬೇಕಾದ ಹಾಗೆ ವಿವಿಧ ಅಂಗಗಳನ್ನು ಮಾಡುತ್ತಾರೆ, ಮರದ ಹೊಟ್ಟಿನಲ್ಲಿ ಶಿಲ್ಪವು ಕೆತ್ತನೆಯ ಗುರುತುಗಳು ಇಲ್ಲದಂತೆ ನಯವಾಗಿ ಕಾಣುತ್ತದೆ ಆಮೇಲೆ ಇದನ್ನು ಒಂದೆರಡು ದಿನಗಳು ಆರಲು(ಡ್ರೈ) ಬಿಟ್ಟು ಆನಂತರ ಬಣ್ಣವನ್ನು ಹಾಕುತ್ತಾರೆ, ಮರ, ಕಲ್ಲು, ಮಣ್ಣು ಮುಂತಾದ ಲೋಹಗಳ ಮಾಧ್ಯದಿಂದ ಮಾಡಿದ ಮೂರ್ತಿಗಳಿಗೆ ಇವರು ಪ್ರಾಣ ಪ್ರತಿಷ್ಟಾಪನೆಯನ್ನು ಮಾಡಿಕೊಡುತ್ತಾರೆ. ಯಾರ ಸಹಾಯದಿಂದಲೂ, ತರಬೇತಿಯಿಂದಲೂ ಕಲೆಯನ್ನು ಕಲಿತಿಲ್ಲ ತಮ್ಮ

ತಂದೆಯವರು ಮಾಡುತ್ತಿದ್ದ ಕಲೆಯನ್ನು ಬಹಳ ಆಸಕ್ತಿಯಿಂದ ನೋಡಿ ತಮ್ಮಷ್ಟಕ್ಕೇ ತಾವೇ ಕಲಿತಿದ್ದಾರೆ, ಸರ್ಕಾರ ಅಥವಾ ಮತ್ತಾರಿಂದಲೂ ತಮ್ಮ ಕಲೆಯನ್ನು ಮಾಡಲು ಪ್ರೋತ್ಸಾಹ ಧನವನ್ನು ಪಡೆದಿಲ್ಲ, ಕಲೆಯನ್ನು ತಮ್ಮ ಜೀವನೋಪಾಯಕ್ಕೆ ಅಡಿಪಾಯವನ್ನಾಗಿ ಮಾಡಿಕೊಂಡಿದ್ದು ಇದರಿಂದಲೆ ಬದುಕುತ್ತಿದ್ದಾರೆ.



ರವಿ ಅವರು ಮಾಡಿರುವ ಮರದ ಗಣಪತಿ :



ಮರದಿಂದ ಮಾಡಿರುವ ಗೌರಮ್ಮ :



ಮರದ ಬಸವ(ನಂದಿ):

ನಾಗರಾಜಾ ಚಾರ್: ಚಳ್ಳಕೆರೆ ತಾಲ್ಲೂಕು ಸಿದ್ದಾಪುರ ಗ್ರಾಮದಲ್ಲಿ ವಾಸವಾಗಿದ್ದಾರೆ, ಮೂಲತಃ ಸಂಪ್ರದಾಯ ಶಿಲ್ಪ ತಯಾರಿಕೆಯ ಕುಟುಂಬದಲ್ಲಿ ಜನಿಸಿದ ಇವರು ಚಿಕ್ಕ ವಯಸ್ಸಿನಿಂದಲೂ ಶಿಲ್ಪ ತಯಾರಿಕೆಯಲ್ಲಿ ತೊಡಗಿದ್ದಾರೆ, ಮರದ ಮಾಧ್ಯಮದಲ್ಲಿ ಹೆಚ್ಚಾಗಿ ಶಿಲ್ಪಗಳನ್ನು ಮಾಡುತ್ತಾರೆ, ಮರದಿಂದ ಕಿಟಕಿ, ಬಾಗಿಲು, ಷೋಕೇಸ್, ಮನೆಗೆ ಹಾಕುವ ಕೆತ್ತನೆಯ ತೊಲೆ, ಕಂಬಗಳು, ಪಲ್ಲಕ್ಕಿ, ರಥ ಮುಂತಾದ ವಸ್ತುಗಳನ್ನು ಕಲಾತ್ಮಕವಾಗಿ ಮಾಡುತ್ತಾರೆ.

ಸಿಮೆಂಟ್‌ನಲ್ಲೂ ಮೂರ್ತಿಗಳನ್ನು ಮಾಡುತ್ತಾರೆ, ಓದಿನಲ್ಲಿ ಹೆಚ್ಚಾಗಿ ಆಸಕ್ತಿ ಇವರಿಗೆ ಬಾರದ ಕಾರಣ ಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡರು, ಇದರ ಪರಿಣಾಮವಾಗಿ ಮರದಿಂದ ಬಹು ಆಕರ್ಷಕವಾಗಿರುವ ಕೆತ್ತನೆಯನ್ನು ಮಾಡುತ್ತಾರೆ, ಎಷ್ಟೇ ಸೂಕ್ಷ್ಮವಾದ ಹಾಗೂ ಎಷ್ಟೇ ಚಿಕ್ಕದಾದ ಮೂರ್ತಿಗಳಿರಲಿ ಬಹಳ ಸುಂದರವಾಗಿ ಕೆತ್ತನೆ ಮಾಡುತ್ತಾರೆ, ಯಾವುದೇ ಮರವಾಗಲಿ ಅದರಿಂದ ವಿವಿಧ ರೀತಿಯ ಶಿಲ್ಪಗಳನ್ನು ಕೆತ್ತನೆ ಮಾಡುತ್ತಾರೆ.

ದೇವಸ್ಥಾನಗಳ ಬಾಗಿಲುಗಳನ್ನು ಬಹಳ ಸುಂದರವಾಗಿ ಮಾಡಿದ್ದಾರೆ, ಬಾಗಿಲುಗಳ ಮೇಲೆ ವಿವಿಧ ರೂಪದ ದೇವರುಗಳ ಕೆತ್ತನೆ, ತರತರದ ಹೂವುಗಳು, ಎಲೆಗಳನ್ನೊಳಗೊಂಡ ಬಳ್ಳಿಗಳ ಕೆತ್ತನೆ ಹಾಗೂ ಇನ್ನೂ ಅನೇಕ ವಿಧವಾದ ಸುಂದರ ಕುಸುರಿ ಕಲೆಗಳನ್ನು ಮಾಡಿದ್ದಾರೆ, ಮನೆಯ ಕಿಟಕಿ ಬಾಗಿಲುಗಳಿಗೆ ಕಬ್ಬಿಣದ ಸಲಾಕೆಗಳಿಂದ ಅಲಂಕಾರಿಕವಾಗಿ ಮೆಷಿನ್‌ನಿಂದ ವೆಲ್ಡಿಂಗ್ ಮಾಡಿಸಿ ಅದಕ್ಕೆ ಹೋಲುವಂತೆ ಮರದ ಪಟ್ಟಿಗಳಿಂದ ಸುಂದರ ಕೆತ್ತನೆಯನ್ನು ಮಾಡಿ ಅಲಂಕಾರಿಕವಾಗಿ ಕಿಟಕಿ ಹಾಗೂ ಬಾಗಿಲುಗಳನ್ನು ಅಡಿಯ ಲೆಕ್ಕದಲ್ಲಿ ಮಾಡಿ ಹಣಪಡೆಯುತ್ತಾರೆ. ಬಾಗಿಲುಗಳನ್ನು ತುಂಬಾ ಅಲಂಕಾರಿಕವಾಗಿ ಮಾಡಿದ್ದಾರೆ, ಅರ್ಧ ಇಂಚಿನ ಬಾಗಿಲುಗಳ ನಿಲುವುಗಳಿಂದ ಹಿಡಿದು ಎರಡು ಅಡಿಗಳ ಅಗಲದ ಬಾಗಿಲು ನಿಲುವುಗಳನ್ನು ಮಾಡಿದ್ದಾರೆ, ಕೆಲವು ಬಾಗಿಲುಗಳ ನಿಲುವುಗಳಲ್ಲಿ ಒಂದೇ ಮರದಿಂದ ಎರಡು ಅಡಿ ಅಗಲದ ನಿಲುವುಗಳನ್ನು ಮಾಡಿದ್ದು ಅದರಲ್ಲಿ ಬಳ್ಳಿ, ಸರಪಳಿ, ಹಲಸು ಹಣ್ಣಿನ ಚಿತ್ರಗಳನ್ನು ಹೋಲುವಂತಹ ಕೆತ್ತನೆ, ದಿಪದ ಸಾಲುಗಳು, ಶಂಖ, ಚಕ್ರ,. ಹೀಗೆ ಅನೇಕ ವಿಧವಾದ ಕೆತ್ತನೆಗಳನ್ನು ಒಳಗೊಂಡ ಬಾಗಿಲುಗಳನ್ನು ಮಾಡಿದ್ದಾರೆ.

ಇವರ ಕಲೆಯನ್ನು ನೋಡಿದ ಸ್ವಂತ ಊರಿನ ಗ್ರಾಮಸ್ಥರ ಕೋರಿಕೆಯಂತೆ ಈಶ್ವರ ದೇವರ ರಥವನ್ನು ನಾಗರಾಜ್ ತಮ್ಮನ ಸಹಕಾರದೊಂದಿಗೆ 31ಅಡಿಯ ರಥವನ್ನು ಮಾಡಿ ಜನರು ಆಶ್ಚರ್ಯ ಪಡುವಂತೆ ಮಾಡಿದ್ದಾರೆ. ಹಲವಾರು ದೇವರುಗಳ ಪಲ್ಲಕ್ಕಿಯನ್ನು ವಿವಿಧ ಅಲಂಕಾರಗಳೊಂದಿಗೆ ಮಾಡಿದ್ದಾರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಅಲ್ಲದೇ ಹೊರ ಜಿಲ್ಲೆಗಳಲ್ಲೂ ಇವರು ಮಾಡಿದ ಪಲ್ಲಕ್ಕಿಗಳು ಇವೆ.

ರಥವು ಒಟ್ಟು 31ಅಡಿ ಎತ್ತರವಾಗಿದ್ದು, ತೇಗ, ಹೊನ್ನೆ, ಬೇವು ಮರಗಳಿಂದ ಮಾಡಲಾಗಿದೆ, ಚಕ್ರವನ್ನು ಹೊನ್ನೇ ಮರದಿಂದ, ತೊಲೆ, ಅಚ್ಚು ಹಾಗೂ ಕಂಬಗಳನ್ನು ಮತ್ತಿ ಮರದಿಂದ, ರಥದ ತುಂಬಾ ಮಾಡಿರುವ ಮೂರ್ತಿಗಳು ಹಾಗೂ ವಿವಿಧ ಅಲಂಕಾರದ ಕೆತ್ತನೆಯನ್ನು ತೇಗದ ಮರದಿಂದ ಮಾಡಿದ್ದಾರೆ.

ನಾಗರಾಜ್ ಮಾಡಿರುವ ರಥದ ವಿವರಣೆ: ರಥದ ತುಂಬಾ ಕೆತ್ತನೆಯನ್ನು ಮಾಡಿರುವ ಕುಸುರಿ ಕಲೆಗಳು, ವಿವಿಧ ದೇವರ ಮೂರ್ತಿಗಳು, ಪ್ರಾಣಿ, ಪಕ್ಷಿಗಳು ಮುಂತಾದ ಕಲಾತ್ಮಕವನ್ನು ಹೊಂದಿರುವ ರಥವು ಹನ್ನೆರಡೂವರೆ ಅಡಿ ಎತ್ತರವಾಗಿದೆ, ಕಬ್ಬಿಣದ ಸಲಾಕೆಗಳು, ಪಟ್ಟಿಗಳಿಂದ ದುಂಡನೆಯ ಆಕಾರದಲ್ಲಿ ಡೂಮನ್ನು ಮಾಡಿದ್ದು ಇದಕ್ಕೆ ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕಾರ ಮಾಡುತ್ತಾರೆ, ಇದು 17ಅಡಿ ಎತ್ತರವಾಗಿದೆ, ಉಳಿದಂತೆ ಎರಡೂವರೆ ಅಡಿ ಎತ್ತರದ ಲೋಹದ ಕಳಸ ಇದೆ.

ರಥದ ಗಾಲಿಗಳು: ಹೊನ್ನೆ ಮರದಿಂದ ನಾಲ್ಕು ಗಾಲಿಗಳನ್ನು ಮಾಡಿದ್ದು ನಾಲ್ಕೂವರೆ ಅಡಿ ಎತ್ತರ, ಒಂದು ಅಡಿ ಅಗಲವಾದ ಚಕ್ರಗಳಿವೆ, ಈ ಗಾಲಿಗಳಿಗೆ ಕಬ್ಬಿಣದ ತಗಡಿನಿಂದ "ಅಳಿ" ಮರದ ಗಾಲಿ ಸವೆಯಬಾರದೆಂದು ಕಬ್ಬಿಣದ ತಗಡನ್ನು ಕವಚವಾಗಿ ಅಳವಡಿಸಿದ್ದಾರೆ, ಮತ್ತು ಚಕ್ರಕ್ಕೆ ಪ್ಲಸ್ ಆಕಾರವಾಗಿ ಕಬ್ಬಿಣದ ತೆಳ್ಳನೆಯ ಪಟ್ಟಿಯನ್ನು ಹಾಕಿರುತ್ತಾರೆ, ಚಕ್ರದ ಮಧ್ಯದಲ್ಲಿ ಒಂಬತ್ತು ಇಂಚಿನ ಅಚ್ಚನ್ನು ಹಾಕಿದ್ದಾರೆ.

ರಥದ ಕೆತ್ತನೆ ವಿವರ: ಕೆಳಭಾಗದಿಂದ ಮೊದಲುಗೊಂಡು ಸುಮಾರು ಎರಡು ಅಡಿಯ ತೊಲೆಗಳಿಗೆ ನಾಲ್ಕು ಕಡೆ ಎರಡೆರಡು ಚಿತ್ರಗಳನ್ನು ಕೆತ್ತನೆ ಮಾಡಿದ್ದಾರೆ, ರಥವನ್ನು ತನ್ನೆರಡು ಕೈಗಳಿಂದ ಮೆಲಕ್ಕೆ ಎತ್ತಿ ಹಿಡಿದಂತಿರುವ ದಢೂತಿಯ ಮನುಷ್ಯನ ಚಿತ್ರ, ಇದರ ಪಕ್ಕ ಎಡೆ ಬಿಚ್ಚಿ ಕುಳಿತಿರುವ ಸರ್ಪದ ಚಿತ್ರದ ಕೆತ್ತನೆ, ಹೀಗೆ ನಾಲ್ಕು ಕಡೆಗಳಲ್ಲೂ ವಿವಿಧ ಕೆತ್ತನೆಗಳಿವೆ, ಇವುಗಳ ಪಕ್ಕ ಇರುವ ಜೋಡಿ ತೊಲೆಯ ಎರಡೂ ತುದಿಗಳಲ್ಲಿ ಸೊಂಡಿಲನ್ನು ಒಳ ಮಗ್ಗುಲಿಗೆ ಮಡಿಸಿಕೊಂಡು ನಿಂತಿರುವ ಆನೆಯ ಕೆತ್ತನೆ ಇದೆ, ಇದರ ಮೇಲೆ ತೊಲೆಯ ಮಧ್ಯದಲ್ಲಿ ಓಂ ಎನ್ನುವ ಕನ್ನಡದ ಅಕ್ಷರವಿದ್ದು ಇದರ ಸುತ್ತಲೂ ಚಕ್ರದ ಚಿತ್ರವಿದೆ, ಇದರ ಪಕ್ಕ ಅಲಂಕಾರಿಕಾ ಹೂವು, ಇದರ ಬಳ್ಳಿಯ ಆಕಾರದ ಕೆತ್ತನೆ ಇದೆ, ಇದರ ಮೇಲಿನ ಸಾಲು ಓಡುವ ಕುದುರೆಗಳು ನಂತರದ ಸಾಲು ಒಂದು ಬಳ್ಳಿ, ಇದರ ಮೇಲಿನ ಸಾಲಿನ ಮಧ್ಯದಲ್ಲಿ ಎರಡು ಹಂಸ ಪಕ್ಷಿಗಳು, ಅವುಗಳ ಪಕ್ಕದಲ್ಲಿ ಅರಳಿರುವ ಹೂಗಳ ಚಿತ್ರಗಳು, ಇದರ ನಂತರದ ಮೇಲೆ ದುಂಡಾಗಿ ರೋಲಿಂಗ್ ಮಾಡಿಸಿರುವ ಕಂಬಗಳು, ಎರಡು ಜೋಡಿ ಕಂಬಗಳ ಮಧ್ಯದಲ್ಲಿ ಈಶ್ವರನ ಮೂರ್ತಿ, ಇದರ ಪಕ್ಕದಲ್ಲಿ ಮತ್ತೆ ಎರಡು ಜೋಡಿ ಕಂಬಗಳು ನಂತರ ಪಾರ್ವತಿ ಅದರ ಪಕ್ಕ ಎರಡು ಜೋಡಿ ಕಂಬಗಳು ಹೀಗೆ ರಥದ ನಾಲ್ಕೂ ಕಡೆಗಳಲ್ಲಿ ವಿವಿಧ ದೇವರ ಮೂರ್ತಿಗಳನ್ನು ಕೆತ್ತನೆ ಮಾಡಲಾಗಿದೆ, ಇಲ್ಲಿನ ಕೆತ್ತನೆ ವರೆವಿಗೂ ಚೌಕಾಕಾರದ(ನಾಲ್ಕು ಮುಖದಂತೆ) ಇರುವ ತೇರಿನ ಮಾದರಿ, ನಮತರದಲ್ಲಿ ಎಂಟು ಮುಖವನ್ನು ಹೊಂದಿದೆ, ಈ ಎಂಟು ಮುಖಗಳಲ್ಲೂ ವಿವಿಧ ಚಿಕ್ಕ ಪ್ರಮಾಣದ ಉಬ್ಬು ಶಿಲ್ಪಗಳಿವೆ, ಇದರ ಮೇಲಿನ ಸಾಲು ತುಸು ಮುಂದೆ ಹೊರಕ್ಕೆ ಚಾಚಿದ್ದು ಒಂದನೇ ಸಾಲು ಹೆಡೆ ಬಿಚ್ಚಿರುವ ಸರ್ಪಗಳು ಒಂದರ ಪಕ್ಕ ಒಂದು ಇದ್ದು ಈ ರೀತಿ ತೇರಿನ ಸುತ್ತಲೂ ಇವೆ, ಇದರ ಮೇಲೆ ಚಿಕ್ಕ ಪಟ್ಟಿಯಲ್ಲಿ ಅರಳಿರುವ ಹೂವು ಮತ್ತು ಬಳ್ಳಿಯ ಕೆತ್ತನೆ, ನಂತರದ ಮೇಲಿನ ಸಾಲಿನಲ್ಲಿ ಎಂಟು ಮುಖಗಳಲ್ಲೂ ನಂದಿ, ಲಿಂಗ ಮುಂತಾದ ಚಿತ್ರಗಳ ಕೆತ್ತನೆ ಇದೆ, ಅದರ ಮೇಲಿನ ಸಾಲು ಸರಪಳಿಯಂತಿದ್ದು, ತದನಂತರದ ಸಾಲು ನವ ಗ್ರಹಗಳು, ಅಷ್ಟ ದೇವತೆಗಳ ಕೆತ್ತನೆ ಇದೆ, ಇದರ ಮೇಲೆ, ಸ್ವಲ್ಪ ಮುಂದೆ ಚಾಚಿದ ಪಟ್ಟಿ, ಈ ಪಟ್ಟಿಯ ಕೆಳಗೆ ಮರದಿಂದಲೇ ಮಾಡಿರುವ ಇಳಿಬಿದ್ದ ಕುಪ್ಪುಗಳು.

ರಥದ ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಸಿಂಹ ಇದರ ಮುಂದೆ ಇದಕ್ಕಿಂತ ಚಿಕ್ಕದಾದ ಆನೆಯ ಕೆತ್ತನೆ ವಿಶೇಷವಾಗಿದೆ, ಇಲ್ಲಿಯವರೆವಿಗೂ ಎಲ್ಲೂ ಖಾಲಿ ಜಾಗವನ್ನು ಬಿಡದಂತೆ ವಿವಿಧ ಕೆತ್ತನೆಯನ್ನು ತುಂಬಾ ಆಕರ್ಷಕವಾಗಿ ಮಾಡಿದ್ದಾರೆ, ಅಂತಿಮವಾಗಿ ದೇವರನ್ನು ಕೂರಿಸುವ ಪೀಠವಿದ್ದು ಅದರ ಸುತ್ತಲೂ ದುಂಡನೆಯ ಕಂಬಗಳನ್ನು ಅಳವಡಿಸಿದ್ದಾರೆ, ಈ ಕಂಬಗಳ ಮೇಲೆ ಹಲಗೆಗಳನ್ನು ಹಾಸಿದ್ದು, ಇದರ ಮೇಲೆ ಕಬ್ಬಣದ ಸಲಾಕೆಗಳಿಂದ ಮಾಡಿದ ಡೂಮನ್ನು ಅಳವಡಿಸಿ ಅದಕ್ಕೆ ಜಾತ್ರೆಯ ಸಮಯದಲ್ಲಿ ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕಾರ ಮಾಡುತ್ತಾರೆ, ಈ ಕಬ್ಬಿಣದ ಸಲಾಕೆಗಳಿಂದ ಮಾಡಿದ ಡೂಮನ್ನು ಜಾತ್ರೆಯ ನಂತರ ಬಿಚ್ಚಿಟ್ಟು ಮರದ ಕೆತ್ತನೆಯ ರಥವನ್ನು ಬಿಸಿಲು, ಮಳೆ, ಗಾಳಿಗೆ ಹಾನಿಯಗದಂತೆ ತಗಡು ಶೀಟಿನಿಂದ ಮಾಡಿದ ಶೆಡ್ಡಿನ ಒಳಗೆ ಇಟ್ಟು ಬಾಗಿಲು ಹಾಕುತ್ತಾರೆ, ಮತ್ತೆ ಮುಂದಿನ ಜಾತ್ರೆಯ ಸಮಯದಲ್ಲಿ ಹೊರ ತೆಗೆದು ಅಲಂಕರಿಸುತ್ತಾರೆ.

ಚಳ್ಳಕೆರೆ ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ ಗ್ರಾಮದ ಶ್ರೀ ಉಜ್ಜಿನಿ ಸಿದ್ದೇಶ್ವರನ ತೇರನ್ನು ಮಾದರಿಯಾಗಿಟ್ಟುಕೊಂಡು ನಾಗಾರಾಜ್ ರವರು ಮತ್ತು ಇವರ ತಮ್ಮ ಚಿಕ್ಕಣ್ಣ ರವರುಗಳು ಬಹು ಸುಂದರವಾಗಿ ತೇರನ್ನು ಮಾಡಿದ್ದಾರೆ.

ವಿಳಾಸ : ನಾಗರಾಜಾಚಾರ್ ಬಿನ್ ತಿಪ್ಪೇಸ್ವಾಮಿ, ಸಿದ್ದಾಪುರ, ಚಳ್ಳಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ-577 522. ಮೊ : 9740727989.

ಬೋರಯ್ಯ: ಚಳ್ಳಕೆರೆ ತಾಲ್ಲೂಕು ಬುಡ್ನಹಟ್ಟಿ ಗ್ರಾಮದವರಾದ ಇವರು ಶಿಲ್ಪಕಲೆಯಲ್ಲಿ ನಿರತರಾಗಿದ್ದಾರೆ, ಚಿತ್ರಕಲೆಯಲ್ಲಿ ಚಿಕ್ಕ ವಯಸ್ಸಿನಿಂದ ಆಸಕ್ತಿಯನ್ನು ಬೆಳೆಸಿಕೊಂಡು ನಂತರದ ದಿನಗಳಲ್ಲಿ ಶಿಲ್ಪಕಲೆಯನ್ನು ಕಲಿತರು, ಶಿಲ್ಪ ಕಲೆಯನ್ನು ಮಾಡಲು ಬೇಕಾದ ಕಚ್ಚಾ ವಸ್ತುಗಳನ್ನು ಕೊಂಡು ಮಾಡಲು ತಮ್ಮ ಊರಿನಲ್ಲಿ ಸರಿಯಾದ ವ್ಯವಸ್ಥೆ ಇರಲಿಲ್ಲ ಮತ್ತು ಮಾಡಿದ ಕಲೆಗೆ ಸರಿಯಾದ ಬೆಲೆ ಸಿಗದಿದ್ದ ಕಾರಣದಿಂದ ತಮ್ಮ ಸ್ವಂತ ಊರನ್ನು ಬಿಟ್ಟು ಬೆಂಗಳೂರು ಸೇರಿದರು, ಬೆಂಗಳೂರಿನಲ್ಲಿ ತಮ್ಮ ಕಲೆಯನ್ನು ಮಾಡಲು ಬೇಕಾದ ಕಚ್ಚಾವಸ್ತುಗಳು, ಮಾಡಿದ ಕಲೆಗೆ ತಕ್ಕ ಬೆಲೆ ಸಿಕ್ಕು ಜೀವನವನ್ನು ಸುಖವಾಗಿ ನಡೆಸುತ್ತಿದ್ದಾರೆ.

ಇವರು ಲೋಹ ಮಾಧ್ಯಮದಿಂದ ಶಿಲ್ಪಕಲೆಗಳನ್ನು ಮಾಡುವ ತರಬೇತಿಯನ್ನು ಪಡೆದಿದ್ದಾರೆ, ಈಗ ಹೆಚ್ಚಾಗಿ ಲೋಹದ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ಬೆಂಗಳೂರಿನ ಕೆ.ಆರ್. ಮಾರ್ಕೆಟ್‌ನಲ್ಲಿ ಸಿಗುವ ಮೆಟಲ್ ಶೀಟನ್ನು ತಂದು ಅದನ್ನು ಅಳತೆಗೆ ಕತ್ತರಿಸಿಕೊಂಡು ನಂತರ ಹದಮಾಡಿ ಅದರಿಂದ ಬೇಕಾದ ಶಿಲ್ಪಗಳನ್ನು ಮಾಡುತ್ತಾರೆ, ಇದುವರೆವಿಗೂ ಮೆಟಲ್‌ನಿಂದ ಮಾರಮ್ಮ, ದುರುಗಮ್ಮ, ಆದಿಶಕ್ತಿ, ಆಂಜನೇಯ, ಗಣೇಶ, ವೆಂಕಟೇಶ, ಲಕ್ಷ್ಮಿ, ಸರಸ್ವತಿ ಇನ್ನು ಮುಂತಾದ ದೇವರುಗಳ ಮೂರ್ತಿಗಳನ್ನು ಮಾಡಿದ್ದಾರೆ.

ಕ್ಯಾಷ್ಟಿಂಗ್ ವಿಧ, ಇದರಲ್ಲಿ ತ್ರೀಡಿ, ಎಂಬೋಜಿಂಗ್ ವರ್ಕ್ ಮುಂತಾದ ವಿಧಾನದಲ್ಲಿ ದೇವರ ಮೂರ್ತಿಗಳು, ಬಾಗಿಲು ಕವಚ, ಪ್ರಭಾವಳಿಗಳು, ದೇವರ ಕವಚ, ದೇವರ ಪೀಠಗಳು ಮುಂತಾದ ದೇವರ ಅಗತ್ಯ ವಸ್ತುಗಳನ್ನು ಬೇಕಾದ ಹಾಗೆ ಅಲಂಕಾರಿಕವಾಗಿ ಮಾಡಿಕೊಡುತ್ತಾರೆ. ತಾವು ಮಾಡುವ ಕೆಲಸಕ್ಕೆ ಅಡಿಗೆ ಇಂತಿಷ್ಟು ಮೊತ್ತ ಹಾಗೂ ಸಣ್ಣ ಸಣ್ಣ ಕುಸುರಿ ಕೆಲಸಕ್ಕೆ ಅದರದೇ ಆದ ಬೆಲೆಯನ್ನು ನಿಗದಿ ಮಾಡುತ್ತಾರೆ. ಹೆಚ್ಚಿನ ಕೆಲಸವಾದರೆ ದೇವಸ್ಥಾನಕ್ಕೆ ಹೋಗಿ ಮಾಡುತ್ತಾರೆ, ಅಂದರೆ ಬಾಗಿಲುಗಳಿಗೆ ಲೋಹದ ಕವಚವನ್ನು ಅಳವಡಿಸುವುದು, ಕಂಬಗಳಿಗೆ ಕವಚ, ಮುಂತಾಗಿ, ಸಣ್ಣ ಪ್ರಮಾಣದ ಕೆಲಸವಾಗಿದ್ದರೆ ಮನೆಯಲ್ಲಿ ಮಾಡಿಕೊಡುತ್ತಾರೆ, ಕಳಸ, ಪ್ರಭಾವಳಿ, ದೇವರ ಮೂರ್ತಿಗಳನ್ನು ಮನೆಯಲ್ಲಿ ಮಾಡುತ್ತಾರೆ.

ಮೆಟಲ್‌ನಲ್ಲಿ ಇದುವರೆಗೆ ಸಾಕಷ್ಟು ವಿಧವಾದ ಕೆಲಸಗಳನ್ನು ಮಾಡಿದ್ದು ತಮ್ಮ ಜೀವನವನ್ನು ನಡೆಸಲು ಬೇಕಾದ ಆದಾಯ ಸಿಗುತ್ತಿದೆಯಂತೆ, ಕೆಲವೊಮ್ಮೆ ಮಾಡಿದ ಕೆಲಸಕ್ಕೆ ಉತ್ತಮವಾದ ಬೆಲೆ ಸಿಕ್ಕರೆ ಶಿಲ್ಪಿಗಳ ಜೀವನವು ಸುಖಮಯವಾಗಿರುತ್ತದೆ, ಆದರೆ ಕೆಲವೊಮ್ಮೆ ಕಲೆಸ ಇರುವುದಿಲ್ಲ, ಆದರೆ ಮಾಡುವ ಕೆಲಸದಲ್ಲಿ ಶ್ರದ್ಧೆ ಇಟ್ಟು ಉತ್ತಮ ಕಲೆಸವನ್ನು ಮಾಡಿದರೆ, ಹೆಚ್ಚಿನ ಕೆಲಸ ಹುಡುಕಿಕೊಂಡು ಬರುತ್ತದೆ ಎನ್ನುತ್ತಾರೆ ಬೋರಯ್ಯನವರು.

4. ಚಿತ್ರದುರ್ಗದಲ್ಲಿ ನಿರ್ಮಿತವಾಗಿರುವ ದೇವಾಲಯಗಳು, ಕೆತ್ತನೆಯ ಕೆಲವು ಭಾಗಗಳು:

ದೇವಾಲಯಗಳಲ್ಲಿ ಮುಖ್ಯವಾಗಿ ಶಿಲ್ಪಕಲೆ ಹೆಚ್ಚಾಗಿ ಕಾಣುವ ಭಾಗಗಳೆಂದರೆ ರಾಜಗೋಪುರ, ಗರ್ಭಗುಡಿ ಗೋಪುರ, ಮುಖ ಮಂಟಪ, ಕಂಬಗಳು ಇತ್ಯಾದಿ.

ಕಂಬಗಳು: ದೇವಾಲಯಗಳಲ್ಲಿ ಬಿಳಿಯ ಹಾಗೂ ಹೊರಟು ರೀತಿಯ ಕಲ್ಲು ಕಂಬಗಳನ್ನು ಬಳಸಿದ್ದು ಇಂತಹ ಕಂಬಗಳ ಕೆತ್ತನೆಯಲ್ಲಿ ಪೀಠ, ಕಾಂಡ, ನಿರ್ದಿಷ್ಟ ಚೌಕಾಕಾರದ ಮತ್ತು ಆಯಾಕಾರದ ಮುಖಗಳು, ಮಧ್ಯದಲ್ಲಿ ಅಷ್ಟಪೈಲು ಅಥವಾ 16ಮುಖಗಳನ್ನು ಹೊಂದಿರುವ ಕೆತ್ತನೆಯನ್ನು, ಕಂಬಗಳ ಮೇಲು ತುದಿಯಲ್ಲಿ ಕುಂಭ, ತರಂಗ, ಬೋಧಿಗೆಯ ಕೆತ್ತನೆಯನ್ನು ಮಾಡಿರುತ್ತಾರೆ, ಸರಳ ರೀತಿಯಲ್ಲಿ ಕೆತ್ತನೆ ಮಾಡಿದ ಚಿತ್ರಗಳನ್ನು ಹೊಂದಿರುವ ಕಂಬಗಳು ಒಂದೆಡೆಯಾದರೆ ಇನ್ನೂ ಕೆಲವು ಕಂಬಗಳಲ್ಲಿ ವಜ್ರದಾಕಾರ, ಬಳ್ಳಿಗಳ ಆಕಾರ, ವಿವಿಧ ರೀತಿಯ ಎಲೆಗಳ ಆಕಾರದಲ್ಲಿ ಕೆತ್ತನೆ ಮಾಡಿರುವುದನ್ನು ಕಾಣಬಹುದು.

ಗಾರೆ ಮಾಧ್ಯಮದಿಂದ ಮಾಡಿರುವ ಶಿಲ್ಪಕಲೆ: ಸುಲಭ ಹಾಗೂ ಸೂಕ್ಷ್ಮ ರೀತಿಯ ಮೂರ್ತಿಗಳನ್ನು ಮತ್ತು ಇತರೆ ರೀತಿಯ ಶಿಲ್ಪಕಲೆಯನ್ನು ಮಾಡಲು ಅತೀ ಸರಳವಾದ ವಿಧಾನವೆಂದರೆ ಗಾರೆ ಮಾಧ್ಯಮ, ಗಾರೆ ಎಂದರೆ ಸುಣ್ಣದ ಕಲ್ಲಿನ ಹರಳುಗಳು, ಬಿಳಿಯ ನುಣುಪು ಮತ್ತು ಮೃದು ಕಲ್ಲಿನ ಚೂರುಗಳು, ಸ್ವಲ್ಪ ಜಿಗುಟು ಮಣ್ಣು ಈ ಮೂರೂ ವಿಧಗಳನ್ನು ದೊಡ್ಡದಾದ ಕಲ್ಲು ಗುಂಡಿನ ಸಹಾಯದಿಂದ ಚನ್ನಾಗಿ, ನುಣುಪಾಗುವಂತೆ ರುಬ್ಬುತ್ತಾರೆ, ಜಿಗುಟು ಬರಲು, ನುಣುಪು ಬರಲು, ಜೊತೆಗೆ ಬಹಳ ದಿನಗಳ ಕಾಲ ಬಾಳಿಕೆ ಬರಬೇಕು ಎಂಬ ಉದ್ದೇಶದಿಂದ ಬೆಲ್ಲವನ್ನು ಇದರೊಟ್ಟಿಗೆ ಬಳಸಲಾಗುತ್ತಿತ್ತು ಎನ್ನಲಾಗಿದೆ ಆದರೆ ಇದನ್ನು ಕೆಲವು ಕಡೆಗಳಲ್ಲಿ ಬಳಸದೆಯೂ ಇರಬಹುದು, ಹೀಗೆ ರುಬ್ಬಿದ ಪದಾರ್ಥವು ಗೊಂಬೆಗಳನ್ನು, ಮೂರ್ತಿಗಳನ್ನು ಬೇಕಾದ ಆಕಾರದಲ್ಲಿ ಸೂಕ್ಷ್ಮವಾದ ಕಲೆಯನ್ನು ಸುಲಭವಾಗಿ ಮಾಡಬಹುದಾದ್ದರಿಂದ ಕೆಲವು ಸಂಪ್ರದಾಯ ಶಿಲ್ಪಕಲಾವಿದರು ಹೆಚ್ಚಾಗಿ ಈ ರೀತಿಯ ಗಾರೆ ಮಾಧ್ಯಮವನ್ನು ಉಪಯೋಗಿಸಿಕೊಂಡು ಅನೇಕ ದೊಡ್ಡ ದೊಡ್ಡ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ.

ಚಿತ್ರದುರ್ಗ ನಗರದಲ್ಲಿರುವ ದೇವಾಲಯಗಳಲ್ಲದೆ, ಜಿಲ್ಲೆಗಳ ಹಲವಾರು ಗ್ರಾಮಗಳಲ್ಲಿರುವ ಇತರೆ ದೇವಾಲಯಗಳಲ್ಲಿ ಗಾರೆ ಮಾಧ್ಯಮದಿಂದ ಶಿಲ್ಪಕಲೆ ಮಾಡಿರುವುದನ್ನು ಕಾಣಬಹುದು, ದೇವಾಲಯಗಳ ಗರ್ಭಗುಡಿ, ಹಜಾರದ ಗುಡಿ ಮತ್ತು ಮಂಟಪಗಳ ಮಾಳಿಗೆಯ ಬಲ್ಪದ ಸುತ್ತಲೂ, (ಗೋಡೆಗಳ ಮೇಲೆ) ಮತ್ತು ಗೋಪುರಗಳ ಮೇಲೆ, ಗೋಪುರಗಳ ಸುತ್ತಲೂ ಆಕರ್ಷಕವಾದ ಗಾರೆಯ ಮೂರ್ತಿ ಶಿಲ್ಪಗಳನ್ನು ಮಾಡಿದ್ದಾರೆ, ಇಂದಿಗೂ ಗಾರೆ ಮಾಧ್ಯಮದಿಂದ ಮಾಡಿರುವ ಶಿಲ್ಪಕಲೆಯ ಅಳಿದುಳಿದಿರುವ ಕುರುಹುಗಳನ್ನು ಕಾಣಬಹುದು, ಇಂತಹ ಗಾರೆ ಮಾಧ್ಯಮದ ಶಿಲ್ಪಗಳು ಎಷ್ಟೋ ವರ್ಷಗಳು ಮಳೆ-ಗಾಳಿಯಿಂದ ಹಾನಿಯಾಗದೇ ಮೂಲ ಸ್ವರೂಪದಿಂದಲೇ ಕಂಗೊಳಿಸುತ್ತಿವೆ, ಇಂತಹ ಶಿಲ್ಪಕಲೆ ಮೇಲುಕೋಟೆಯ ಚಲುವ ನಾರಾಯಣ ಸ್ವಾಮಿಯ ದೇವಾಲಯದ ಗೋಡೆಯ ಮೇಲುಭಾಗದಲ್ಲಿ ಸತ್ತಲೂ ಕಾಣಬಹುದು ಅಲ್ಲದೆ ನಾಡಿನ ಹಲವಾರು ದೇವಾಲಯಗಳಲ್ಲೂ ಇಂತಹ ಗಾರೆ ಶಿಲ್ಪಕಲೆಯನ್ನು ಕಾಣಬಹುದು, ಆದರೆ ದುರಾದೃಷ್ಟವೆಂದರೆ ಖದೀಮರು ಇವುಗಳಿಗೆ ಹಾನಿಗೊಳಿಸಿ ವಿಕಾರ ಮಾಡಿದ್ದಾರೆ, ಚಿತ್ರದುರ್ಗ ಜಿಲ್ಲೆಯ ದೇವಸ್ಥಾನಗಳನ್ನು ಒಳಗೊಂಡಂತೆ ಕೆಲವು ಹಳ್ಳಿಗಳ ದೇವಸ್ಥಾನಗಳಲ್ಲೂ ಗಾರೆ ಶಿಲ್ಪಗಳನ್ನು ಕಾಣಬಹುದು.

ದೇವಸ್ಥಾನಗಳ ಶಿಖರಗಳಲ್ಲಿ ಮತ್ತು ಗೋಡೆಗಳ ಬಲ್ಪದ ಮೇಲುಗಡೆ ಮೊದಲು ಚಿಕ್ಕ ಚಿಕ್ಕ ಗೂಡುಗಳನ್ನು ಮಾಡಿ ಅವುಗಳ ಒಳಗೆ ವಿವಿಧ ರೀತಿಯ ಮೂರ್ತಿಗಳನ್ನು ಮಾಡುತ್ತಾರೆ, ಈ ಗೂಡುಗಳ ಮುಂಭಾಗದಲ್ಲಿ ಬಗೆ ಬಗೆಯ ಹೂವುಗಳು, ಆಭರಣಗಳು, ಪ್ರಾಣಿ ಪಕ್ಷಿಗಳ ಆಕಾರಗಳನ್ನು ಮಾಡಿದ್ದಾರೆ,

ಶಿಖರಗಳು ಹಾಗೂ ಗೋಡೆಗಳ ಮೇಲೆ ಹಲವು ಬಳ್ಳಿಗಳು, ಪ್ರಾಣಿ ಪಕ್ಷಿಗಳ ಶಿಲ್ಪಗಳು, ಯುದ್ಧದ ಸಾಲುಗಳು ಮುಂತಾದ ಆಕರ್ಷಣೀಯ ಚಿತ್ತಾರಗಳನ್ನು ಬಹಳ ಸೂಕ್ಷ್ಮವಾಗಿ ಸುದರವಾಗಿ ಮಾಡಿದ್ದಾರೆ, ಇಂತಹ ಚಿತ್ತಾಕರ್ಷಕ ಕಲೆಗಳನ್ನು ಸಂಪ್ರದಾಯ ಶಿಲ್ಪಕಲಾವಿದರು ತಮ್ಮ ಸಹ ಕಲಾವಿದರ ಸಹಕಾರದೊಂದಿಗೆ ಮಾಡಿರುತ್ತಾರೆ.

ಮೂರ್ತಿಗಳ ಶಿಲ್ಪಕಲೆಗಳು : ಚಿತ್ರದುರ್ಗದಲ್ಲಿ ಕಂಡು ಬರುವ ಮೂರ್ತಿ ಶಿಲ್ಪಗಳಲ್ಲಿ ಗಂಡು ಆಕೃತಿಯ ದೇವರುಗಳ ಮೂರ್ತಿಗಳು ನೋಡುಗರಿಗೆ ಭಯ ಭಕ್ತಿಯನ್ನು ಹುಟ್ಟಿಸುವಂತೆ ಇರುತ್ತವೆ.

ಉದಾಹರಣೆ: ವೀರಭದ್ರ ದೇವನ ಮೂರ್ತಿಯು ಕಪಾಲ ಭೂಷಿತ, ಕಿರೀಟ, ಸರ್ಪಕುಂಡಲ, ಕೆಂಡಾಭರಣ, ಹೂವಿನ ಹಾರಗಳು ಮತ್ತು ಮನುಷ್ಯನ ರುಂಡಗಳಿಂದ ತಯಾರಿಸಿರುವ ರುಂಡ ಮಾಲೆ ಕೊರಳಲ್ಲಿ ಇರುತ್ತವೆ, ಕೈಗಳಲ್ಲಿ ಖಡ್ಗ, ಡಮರುಗ, ಕೈಕಡಗ, ಕಪೋಲ ಪಾತ್ರೆ ಮುಂತಾದವುಗಳು, ಕಾಲುಗಳಲ್ಲಿ ಗಗ್ಗರ, ಕಾಲಿನ ಖಡಗಳನ್ನು ಧರಿಸಿರುವಂತೆ ಕೆತ್ತನೆಯನ್ನು ಮಾಡಿರುತ್ತಾರೆ, ಹಾಗೇ ಸ್ತ್ರೀರೂಪದ ಮೂರ್ತಿಗಳು ತುಂಬಾ ಆಕರ್ಷಕವಾಗಿದ್ದು ನೋಡುಗರಲ್ಲಿ ಭಕ್ತಿ ಭಾವ ಮೂಡುತ್ತದೆ, ಒಂದು ಕೈಯಲ್ಲಿ ತ್ರಿಶೂಲ, ಅಭಯಹಸ್ತ, ಡಮರುಗ, ಕಮಲದ ಹೂ ಹಿಡಿದು ಕೊರಳಲ್ಲಿ ಆಕರ್ಷಕ ಆಭರಣಗಳನ್ನು ಧರಿಸಿದಂತೆ ಇರುತ್ತವೆ, ಈ ಮೂರ್ತಿಗಳು ಕಪ್ಪು ಮತ್ತು ಬಿಳಿ ಶಿಲೆಗಳಲ್ಲಿ ಇರುತ್ತವೆ, ಇದಲ್ಲದೆ ಗರ್ಭಗುಡಿಯ ಮೇಲ್ಛಾವಣೆಗೆ ನವರಂಗದ ಬಂಡೆಕಲ್ಲುಗಳನ್ನು ಅಳವಡಿಸಿದ್ದು ಆ ಕಲ್ಲುಗಳಲ್ಲಿ ಕೆಳಗೆ ಕಾಣುವಂತೆ ವಿವಿಧ ಚಕ್ರಾಕಾರದ ಚಿತ್ರಗಳು, ಬಳ್ಳಿಗಳ ಚಿತ್ರಗಳನ್ನು ಕೆತ್ತಲಾಗಿದೆ, ಗರ್ಭಗುಡಿಯ ಬಾಗಿಲು ಚೌಕದಲ್ಲಿ ತಳಭಾಗದ ಹೊಸ್ತಿಲಲ್ಲಿ ಬಳ್ಳಿ ಹಾಗೂ ಎಲೆಗಳು ಅಥವಾ ಪಕ್ಷಿಗಳ ಸಾಲು, ನಿಲ್ಲಿಸಿರುವ ಕಲ್ಲುಗಳಲ್ಲಿ ದ್ವಾರಪಾಲಕರು, ದೀಪಗಳು, ಬಳ್ಳಿ ಹಾಗೂ ಎಲೆಗಳ ಚಿತ್ರಗಳು ಮೇಲು ಭಾಗದ ಕಲ್ಲಿನಲ್ಲಿ ಸಿಂಹದ ಮುಖವನ್ನು ಹೋಲುವ ಚಿತ್ರ, ಸೂರ್ಯ ಚಂದ್ರರ ಚಿತ್ರಗಳು, ತ್ರಿಶೂಲ, ಡಮರುಗ ಮತ್ತು ಇತರೆ ಆಕೃತಿಗಳ ಉಬ್ಬು ಚಿತ್ರಗಳನ್ನು ಕೆತ್ತಿರುತ್ತಾರೆ, ಕೆಲವು ದೇವಾಲಯಗಳ ಕಲ್ಲಿನ ಬಾಗಿಲುಗಳ ನಿಲುವುಗಳಲ್ಲಿ ನಾಗರ ಮೂರ್ತಿ, ನಂದಿ, ಗರುಡ, ನವಿಲು, ಮುಂತಾದ ಚಿತ್ರಗಳಿರುತ್ತವೆ.

ದೇವಾಲಯದ ಹೊರಗಡೆ ಸಾಲು ಮಂಟಪಗಳಿದ್ದು ಅವುಗಳಿಗೆ ಅಳವಡಿಸಿರುವ ಕಂಬಗಳಲ್ಲಿ ವಿವಿಧ ಅಲಂಕಾರಿಕ ಬಳ್ಳಿಗಳು, ಪಕ್ಷಿಗಳು, ಪ್ರಾಣಿಗಳು ಮತ್ತು ವಿವಿಧ ದೇವರುಗಳ ಉಬ್ಬು ಚಿತ್ರಗಳನ್ನು ಕೆತ್ತಿರುತ್ತಾರೆ.

ದೇವಾಲಯಗಳಲ್ಲಿರುವ ಸಾಲು ಮಂಟಪದ ರೇಖಾ ಚಿತ್ರ :

ತೆರೆದ ಮಂಟಪದ ಅಧಿಷ್ಠಾನದಲ್ಲಿ ಕಂಬಗಳು ಚೌಕಾಕಾರದಲ್ಲಿರಬಹುದು, ವೃತ್ತಾಕಾರದಲ್ಲೂ ಇರಬಹುದು ಅಥವಾ ವಿವಿಧ ರೀತಿಯ ಅಲಂಕಾರಿಕಾ ಚಿತ್ರಗಳನ್ನು ಒಳಗೊಂಡಿರುವ ಕಂಬಗಳೂ ಇರಬಹುದು, ಯಾವುದೇ ರೀತಿಯ ಕಂಬಗಳೇ ಇದ್ದರೂ ಆ ಕಂಬಕ್ಕೆ ನಿರ್ದಿಷ್ಟ ಅಳತೆ, ಆಕಾರ, ಕಂಬಗಳನ್ನು ನಿಲ್ಲಿಸಲು ನಿರ್ದಿಷ್ಟ ಸ್ಥಳ ಇವಿಷ್ಟೂ ಅವಶ್ಯಕವಾಗಿ ಬೇಕು.

ತೆರೆದ ಮಂಟಪದ ಅಧಿಷ್ಠಾನ (ಕಂಬದಲ್ಲಿ ಇರುವ ಭಾಗಗಳು) :

1) ಕಪೋತ	2). ಪಾದ	3). ವೇದಿಕೆ
4). ಅಧಿಷ್ಠಾನ	5). ಗಳಪಾದ	6). ಕುಮುದ
7). ಪದ್ಮ	8). ಉಪ ಪೀಠ	9). ಉಪಾನ
10). ಕಂಠ	11). ಬೋದಿಗೆ	12). ಕುಂಚಿ
13). ಘಟ	14). ಘಂಟಾ	15). ಚೌಕ
16). ದಂಡ	17). ಪೀಠ	18). ಕೋನಗಳು.

ಒಂದು ಕಂಬವನ್ನು ನಿರ್ಧಿಷ್ಟ ಜಾಗದಲ್ಲಿ ನಿಲ್ಲಿಸಲು ಆ ಕಂಬವು ಮೇಲ್ಕಂಡ ಭಾಗಗಳನ್ನು ಹೊಂದಿರಬೇಕು, ಕಂಬಗಳಲ್ಲಿ ಮೂರು ಮಾದರಿಯ ಕಂಬಗಳಿದ್ದು, ಕೆಲವು ಕಂಬಗಳ ಕಾಂಡ ಭಾಗದಲ್ಲಿ ವೃತ್ತಾಕಾರ, ಚೌಕಾಕಾರ, 08ಕೋನಗಳು, 16ಕೋನಗಳ ರಚನೆ, ಕುಂಟ, ಕಂಠ, ಕಮಲ, ಫಲಕ ಹಾಗೂ ಸರಳ ರೀತಿಯ ಬೋದಿಗೆಗಳು, ಅಲಂಕಾರಿಕಾ ಬೋದಿಗೆಗಳ ರಚನೆಯನ್ನು ಕಾಣಬಹುದು, ಕಂಬಗಳಲ್ಲಿ ದುಂಡನೆಯ ಕಂಬಗಳಿದ್ದು ಈ ಕಂಬಗಳು ವಿವಿಧ ರೀತಿಯ ಚಕ್ರಗಳ ಮಾದರಿಗಳನ್ನು ಮತ್ತು ವಿವಿಧ ರೀತಿಯ ಚಿತ್ತಾರಗಳನ್ನು ಹೊಂದಿರುತ್ತವೆ, ಚೌಕಾಕಾರದ ಕಂಬಗಳು ನಾಲ್ಕು ಮುಖಗಳನ್ನು, (ದಿಕ್ಕುಗಳನ್ನು) ಹೊಂದಿದ್ದು ಈ ನಾಲ್ಕು ಮುಖಗಳಲ್ಲಿ ಒಂದು ಕಡೆ ಕೃಷ್ಣನ ಕಾಳಿಂಗ ಮರ್ಧನದ ಚಿತ್ರ, ಉಳಿದ ಮೂರು ಕಡೆಗಳಲ್ಲಿ ಕ್ರಮವಾಗಿ ಹಸು, ನರ್ತಕಿ, ಆಂಜನೇಯ ಮುಂತಾದ ಉಬ್ಬು ಶಿಲ್ಪಕಲೆಯನ್ನು ಮಾಡಿರುತ್ತಾರೆ, ಕೆಲವು ಕಂಬಗಳಲ್ಲಿ ಸಾಧಾರಣ ಶಿಲ್ಪಕಲೆ ಇರುತ್ತದೆ.

ಕಂಬಗಳ ಮಾದರಿ (ರೇಖಾ ಚಿತ್ರ): ಈ ಕಂಬಗಳ ಚೌಕಾಕಾರದ ಭಾಗದಲ್ಲಿ ಗಂಡ ಬೇರುಂಡ, ನೃತ್ಯಗಾರ್ತಿ, ಗಣಪತಿ, ಚಾಮರ ಹಿಡಿದಿರುವ ಮಹಿಳೆ ಚಿತ್ರ, ಕುಂಭ, ಕಳಶ, ಆಂಜನೇಯ, ನಾಗರ ಮುಂತಾದ ಉಬ್ಬು ಶಿಲ್ಪಗಳನ್ನು ಕೆತ್ತನೆ ಮಾಡಿರುತ್ತಾರೆ.

5. ಚಿತ್ರದುರ್ಗ ಜಿಲ್ಲೆಯ ಶಿಲ್ಪಕಲೆಗಳನ್ನೊಳಗೊಂಡ ದೇವಾಲಯಗಳು:

ಚಿತ್ರದುರ್ಗ ನಗರ, ಚಿತ್ರದುರ್ಗದ ಕೋಟೆ ಹಾಗೂ ಬೆಟ್ಟದ ಆಸುಪಾಸುಗಳಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಿಂದ ಚಿತ್ರದುರ್ಗದ ಪಾಳೆಯಗಾರರ ಕಾಲದ ವರೆಗೂ ಅನೇಕ ಶಿಲ್ಪಕಲೆಯನ್ನೊಳಗೊಂಡ ದೇವಾಲಯಗಳು ನಿರ್ಮಾಣವಾಗಿವೆ, ಕಲ್ಯಾಣಿ ಚಾಲುಕ್ಯರ ಮತ್ತು ಚಿತ್ರದುರ್ಗದ ಪಾಳೆಯಗಾರರ ಕಾಲದ ಆಳ್ವಿಕೆಯ ಮಧ್ಯೆ ಅನೇಕರು ಇಲ್ಲಿ ಆಳ್ವಿಕೆಯನ್ನು ಮಾಡಿದ್ದು ಅವರವರ ಕಾಲದಲ್ಲಿ ಅಭಿರುಚಿಗೆ ತಕ್ಕಂತೆ ಶಿಲ್ಪಕಲೆಯನ್ನು ಪ್ರೋತ್ಸಾಹಿಸುತ್ತಾ ದೇವಾಲಯಗಳನ್ನು ನಿರ್ಮಾಣಮಾಡಿದ್ದಾರೆ ಆದರೆ ಇವೆಲ್ಲವುಗಳಿಗೆ ಒಂದು ಪುಷ್ಠಿ ಸಿಕ್ಕಿದ್ದು ಮತ್ತು ಶಿಲ್ಪಕಲಾವಿದರಿಗೆ ಹೆಚ್ಚಿನ ನೆಲೆ, ಪ್ರೋತ್ಸಾಹ ಸಿಕ್ಕಿದ್ದು ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ಇದಕ್ಕೆ ದೇವಾಲಯಗಳು ಕೆತ್ತನೆಯ ಶಿಲ್ಪಕಲೆಗಳು ಸಾಕ್ಷಿಯಾಗಿವೆ.

1). **ಪದ್ಮ ನಾರಾಯಣ ಸ್ವಾಮಿ ದೇವಾಲಯ:** ಕ್ರಿ. ಶ. 1210ರಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನ ಪಟ್ಟದರಸಿ ಪದ್ಮಲಾದೇವಿ ಕಟ್ಟಿಸಿದ ಪದ್ಮ ನಾರಾಯಣ ಸ್ವಾಮಿ ದೇವಸ್ಥಾನವನ್ನು ಪ್ರಸಿದ್ಧ ಶಿಲ್ಪಿಗಳಿಂದ ನಿರ್ಮಾಣ ಮಾಡಿಸಿದ್ದಾಗಿದೆ, ದೇವಸ್ಥಾನದ ಪ್ರತಿ ಶಿಲ್ಪವೂ ಕಲಾಸಕ್ತರನ್ನು ತನ್ನತ್ತ ಸೆಳೆಯುತ್ತವೆ.

2). **ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ:** ಕ್ರಿ. ಶ. 1217-18ರಲ್ಲಿ ಹೊಯ್ಸಳ ವಂಶದ ನಾಡ ಪ್ರಭು ಅಣ್ಣಮರಸನು ಕಟ್ಟಿಸಿದ ವೀರಭದ್ರ ದೇವಸ್ಥಾನವು ಶಿವನ ಲೀಲೆಗಳನ್ನು ತೋರಿಸುವ ಶಿಲ್ಪಕಲೆಗಳನ್ನು ಒಳಗೊಂಡಿದೆ.

3). **ಶ್ರೀ ಶಾಂತಿನಾಥ ತೀರ್ಥಂಕರ ಬಸದಿ:** ಹೊಳಲ್ಕೆರೆ ನಗರದಲ್ಲಿರುವ ಶಾಂತಿನಾಥ ತೀರ್ಥಂಕರ ಬಸದಿಯಲ್ಲಿರುವ ಶಾಂತಿನಾಥ ತೀರ್ಥಂಕರರ ಮೂರ್ತಿಯು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದ್ದಾಗಿದೆ, ಕಪ್ಪು ಶಿಲೆಯಲ್ಲಿ ಕೆತ್ತನೆಗೊಂಡಿರುವ ಮೂರ್ತಿಯು ಬಹು ಸುಂದರವೂ, ಸುಪ್ರಸನ್ನವೂ, ಕಲಾತ್ಮಕವೂ ಆಗಿದ್ದು 04ಅಡಿ ಎತ್ತರವಾಗಿದೆ, ಶಿಲ್ಪವು ತುಂಬಾ ನುಣುಪಾಗಿದ್ದು ಆಕರ್ಷಕವಾಗಿದೆ, ಇದರ ಜೊತೆಗೆ ಬ್ರಂಹದೇವ ಯಕ್ಷ ಮತ್ತು ಪದ್ಮಾವತಿ, ಯಕ್ಷಿಯವರ ಮೂರ್ತಿಗಳೂ ಇವೆ.

4). **ಬಯಲು ಗಣಪತಿಯ ದೇವಸ್ಥಾನ:** ಹೊಳಲ್ಕೆರೆ ಪಟ್ಟಣದ ಉತ್ತರ ದಿಕ್ಕಿಗೆ ಪ್ರಸಿದ್ಧವಾದ ಬಯಲು ಗಣಪತಿಯ ಮಹಾ ಮೂರ್ತಿ ಇದೆ, ಇದು ಪ್ರಸನ್ನ ಗಣಪತಿಯಾಗಿದ್ದು 09ಅಡಿ ಎತ್ತರವಾಗಿದೆ, ಅತ್ಯಂತ

ಸುದರವಾದ ಶಿಲ್ಪಮೂರ್ತಿಯು ಪೂರ್ವಾಭಿಮುಖವಾಗಿ ಪ್ರತಿಷ್ಠಾಪನೆಗೊಂಡಿದ್ದು ಗ್ರಾನೈಟ್ ಶಿಲೆ (ಗಟ್ಟಿ ಕಪ್ಪು ಕಲ್ಲು)ಯಿಂದ ಕೆತ್ತನೆ ಮಾಡಿದ್ದಾಗಿದೆ, ಈ ಮೂರ್ತಿ ಹೊಳಲ್ಕೆರೆ ಪಟ್ಟಣದಲ್ಲಿರುವುದು ಇಲ್ಲಿನ ಸ್ಥಳೀಯ ಸದ್ಭಕ್ತರೆಲ್ಲರ ಸುದೈವವಾಗಿದೆ, ಇದನ್ನು ಕಾಮಗೇತಿ ಮೆದಕೇರಿ ನಾಯಕರ ಮೈದುನ ಗುಲ್ಯಪ್ಪನಾಯಕನು ಪ್ರತಿಷ್ಠಾಪಿಸಿದ ಬಗ್ಗೆ ಮೂರ್ತಿಯ ಕೆಳಗೆ ಶಾಸನವಿದೆ, ಇದನ್ನು ಬಯಲಿನಲ್ಲಿ ಪ್ರತಿಷ್ಠಾಪಿಸಿರುವುದರಿಂದ ಇದಕ್ಕೆ ಬಯಲು ಗಣಪತಿ ಎಂದು ಕರೆಯುತ್ತಾರೆ, ಮೂರ್ತಿಯ ತಲೆಯ ಹಿಂಬದಿಯಲ್ಲಿ ತುರುಬು ಕುಚ್ಚು ಸೊಗಸಾಗಿ ಕೆತ್ತಲ್ಪಟ್ಟಿದೆ, ಇದರಿಂದ ತೂಗುದಲೆ ಗಣಪತಿ ಎಂದೂ ಮತ್ತೊಂದು ಹೆಸರಿನಿಂದ ಕರೆಯುತ್ತಾರೆ.

5). **ಹೊರಕೆರೆ ದೇವರ ಪುರದ ಲಕ್ಷ್ಮೀ ರಂಗನಾಥ ದೇವಾಲಯ:** ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ದೇವಾಲಯ ಇದಾಗಿದ್ದು, ತಾಲ್ಲೂಕು ಕೇಂದ್ರದಿಂದ 23 ಕಿ.ಮೀಟರ್ ದೂರದಲ್ಲಿದೆ, ಶಿಲ್ಪಕಲೆಗಳನ್ನು ಒಳಗೊಂಡಿರುವ ಈ ದೇವಾಲಯವು ಕಲ್ಲು ಬಂಡೆಗಳಿಂದ ನಿರ್ಮಿತವಾಗಿದೆ, ಕಲ್ಲು ಕಂಬಗಳ ಮೇಲೆ ಸುಂದರವಾದ ಕೆತ್ತನೆಗಳಿವೆ, ಇಡೀ ದೇವಾಲಯವು ಕಲ್ಲು ಕಂಬಗಳು ಮತ್ತು ಕಲ್ಲು ಬಂಡೆಗಹಳಿಂದ ನಿರ್ಮಿತವಾಗಿದೆ, ದೇವಾಲಯದ ಮುಖ್ಯ ರಾಜಗೋಪುರವು ಪಂಚ ಅಂತಸ್ತುಗಳನ್ನು ಒಳಗೊಂಡಿದ್ದು ಪೂರ್ವಾಭಿಮುಖವಾಗಿದೆ, ಸಂಪೂರ್ಣವಾಗಿ ವಾಸ್ತು ಶೈಲಿಯನ್ನು ಹೊಂದಿದೆ, ವಿಶಾಲವಾದ ಪ್ರಾಂಗಣ, ಮಂಟಪ, ಸುಖನಾಸಿ, ನವರಂಗ ಹಾಗೂ ಗಭಗುಡಿಯನ್ನು ಹೊಂದಿದ್ದು ಇವೆಲ್ಲುವುಗಳ ಮೇಲೆ ಸುಂದರ ಉಬ್ಬು ಕೆತ್ತನೆ ಇದೆ, ಗರ್ಭಗುಡಿಯಲ್ಲಿ ಪೂಜೆಗೊಳ್ಳುತ್ತಿರುವ ದೇವರ ಮೂರ್ತಿಯು ಹುತ್ತದ ಮೇಲುಗಡೆ ಒಡಮೂಡಿರುವುದಾಗಿ ನಗು ಮುಖದ ಈ ಮೂರ್ತಿಯು ಪೂರ್ವಾಭಿಮುಖವಾಗಿದೆ, ದೇವಾಲಯವನ್ನು ದುಮ್ಮಿ ಗ್ರಾಮದ ವೀರಪ್ಪನಾಯಕನು ನಿರ್ಮಿಸಿರುವುದಾಗಿದೆ, ದೇವಾಲಯದ ಶಿಖರವು ಪಂಚ ಧರ್ಮಗಳ ಸಂಕೇತವಾಗಿದೆ, ಅಲ್ಲದೇ ಈ ಶಿಖರವು ಜೋಡಿ ಮೀನುಗಳ ಶಿಲ್ಪ ಕಲೆಯನ್ನೂ ಒಳಗೊಂಡಿದೆ, ದೇವಾಲಯಕ್ಕೆ 5–6ಅಡಿ ಎತ್ತರದ ವಿಶಾಲವಾದ ಕಾಂಪೌಂಡ್ ಇದೆ, ದೇವಾಲಯದ ಹೊರ ಆವರಣದಲ್ಲಿ ಆಂಜನೇಯ, ನವಗ್ರಹಗಳ ಮೂರ್ತಿಗಳು ಪಕ್ಕದಲ್ಲಿಯೇ ಲಕ್ಷ್ಮೀದೇವಿಯ ಚಿಕ್ಕದಾದ ಗುಡಿ ಇದೆ.

6). **ಹಿಡಿಂಬೇಶ್ವರ ದೇವಾಲಯ:** ಚಿತ್ರದುರ್ಗ ಬೆಟ್ಟದ ಮೇಲಿರುವ ಈ ದೇವಾಲಯವು ಬಹಳ ಹಳೆಯ ಕಾಲದ್ದೆಂದು ಇತಿಹಾಸಕಾರರು ಹೇಳುತ್ತಾರೆ, ಪೂರ್ವದಲ್ಲಿ ಹಿಡಿಂಬೆಯರು ಇಲ್ಲಿ ವಾಸವಾಗಿದ್ದ ಸಂದರ್ಭದಲ್ಲಿ ತಮ್ಮ ಪೂಜೆಗಾಗಿ ಈ ದೇವಾಲಯವನ್ನು ನಿರ್ಮಾಣ ಮಾಡಿರಬಹುದೆಂದು ಹೇಳುತ್ತಾರೆ, ಹಿಡಿಂಬೆಯರ ಅರಸ ಹಿಡಿಂಬಾಸುರನು ಶಿವನ ಲಿಂಗವನ್ನು ಪೂಜಿಸುತ್ತಿದ್ದರಿಂದ ಹಿಡಿಂಬೇಶ್ವರ ಎಂಬ ಹೆಸರು ಬಂದಿರಬಹುದೆಂಬ ಐತಿಹ್ಯವಿದೆ, ಬೃಹತ್ತಾದ ಬಂಡೆಯೊಂದರ ಮೇಲೆ ಈ ದೇವಾಲಯವನ್ನು ನಿರ್ಮಾಣ ಮಾಡಿದ್ದು ವಿಶೇಷವಾಗಿದೆ, ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗುಡಿ, ಸಭಾಮಂಟಪ, ಮುಖ ಮಂಟಪ ಮತ್ತು ನವರಂಗವನ್ನು ಹೊಂದಿದೆ, ಬಂಡೆಯ ಅಡಿಯಲ್ಲಿರುವ ಗರ್ಭಗುಡಿಯಲ್ಲಿ ಶಿವನ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ, ನವರಂಗದಲ್ಲಿರುವ ನಾಲ್ಕು ಕಂಬಗಳು ಪಾದ, ಪೀಠ, ಆರುಮುಖಗಳ ಚೌಕ, ದುಂಡನೆಯ ಕೆತ್ತನೆ, ಕಲಶ ಹಾಗೂ ಬೋಧಿಗೆಗಳನ್ನು ಹೊಂದಿವೆ, ಇನ್ನುಳಿದಂತೆ ದೇವಾಲಯದಲ್ಲಿ ನಂದಿ, ವೀರಭದ್ರ, ಬ್ರಾಹ್ಮಣ, ಭೈರವ, ಬ್ರಹ್ಮ, ರಾಹುಕೇತುಗಳು, ನಾಗರ ಕಲ್ಲುಗಳು, ಮಹಿಷಾಸುರ ಮರ್ಧಿನಿ, ಗಣೇಶ ಮುಂತಾದ ಕೆತ್ತನೆಯನ್ನೊಳಗೊಂಡ ಶಿಲ್ಪಗಳಿವೆ.

7). **ಉಚ್ಚಂಗಿ ಯಲ್ಲಮ್ಮನ ದೇವಸ್ಥಾನ:** ಈ ದೇವಾಲಯವು ಚಿತ್ರದುರ್ಗ ನಗರದ ಕೋಟೆಯ ಸಮೀಪ ಇರುವ ದೊಡ್ಡ ಪೇಟೆಯ ಬಳಿ ಇದೆ, ದೇವಾಲಯವನ್ನು ಸಂಪೂರ್ಣವಾಗಿ ಕಲ್ಲು ಕಂಬಗಳು ಮತ್ತು ಕಲ್ಲು ಬಂಡೆಗಳಿಂದ ಪೂರ್ವಾಭಿಮುಖವಾಗಿ ನಿರ್ಮಾಣ ಮಾಡಲಾಗಿದೆ, ರಾಜ ಗೋಪುರದ

ದ್ವಾರಬಾಗಿಲು ಇರುವ ನೆಲದ ಮಟ್ಟದಿಂದ ಗರ್ಭಗುಡಿಯು 10-15ಅಡಿ ಎತ್ತರದಲ್ಲಿದೆ, ತಳ ವಿನ್ಯಾಸವನ್ನು ಬಹಳಷ್ಟು ಎತ್ತರ ಮತ್ತು ಅಗಲ ಮಾಡಿ ದೇವಸ್ಥಾನವನ್ನು ನಿರ್ಮಿಸಿದ್ದಾರೆ, ಗರ್ಭಗುಡಿ, ಅಂತರಾಳ, ನವರಂಗ, ರಂಗ ಮಂಟಪ ಹಾಗೂ ತೆರೆದ ಮುಖ ಮಂಟಪವನ್ನು ಹೊಂದಿದೆ, ದೇವಾಲಯಕ್ಕೆ ಹೆಚ್ಚಾಗಿ ಗ್ರಾನೈಟ್ ಕಲ್ಲನ್ನು ಬಳಸಲಾಗಿದೆ, ದೇವಾಲಯದ ಸುತ್ತಲೂ ಎತ್ತರ ಹಾಗೂ ಅಗಲವಾದ ಶಿಲ್ಪಕಲೆಯನ್ನು ಹೊಂದಿರುವ ಪ್ರಾಕಾರ ಮಂಟಪವು ವಿಶೇಷವಾಗಿದೆ, ಇದು ಅತ್ಯಂತ ಹಳೆಯ ದೇವಸ್ಥಾನವಾಗಿದ್ದು ಪಾಳೆಯಗಾರರ ಕಾಲದಲ್ಲಿ ಭರಮಣ್ಣ ನಾಯಕನು ಚಿತ್ರದುರ್ಗದ ಪಟ್ಟದ ರಾಜನಾದ ಸಂದರ್ಭದಲ್ಲಿ ಉಚ್ಚಂಗಿ(ಉತ್ಸವಾಂಬೆ) ದೇವಸ್ಥಾನವನ್ನು ನಿರ್ಮಾಣ ಮಾಡಿದ್ದಾನೆಂದು ತಿಳಿದುಬರುತ್ತದೆ.

ಗರ್ಭಗುಡಿ: ಗರ್ಭಗುಡಿಯು ವಿಶಾಲವಾಗಿದೆ, ಗರ್ಭಗುಡಿಯ ಹೊರಭಾಗದಲ್ಲಿ ಅಧಿಷ್ಟಾನ, ಪೀಠ, ಕುಮುದ, ಪಾದ ಮುಂತಾದ ಭಾಗಗಳಿವೆ, ಇಲ್ಲಿರುವ ಪಾದದ ಬಲ ಪಾರ್ಶ್ವದ ಮೇಲೆ ಹಂಸ, ಮಂಗ, ಆನೆ, ಪರಶುರಾಮ, ಐದು ಮುಖಗಳನ್ನು ಹೊಂದಿರುವ ಹಸುವಿನ ಚಿತ್ರ, ಕಾಳಿಂಗ ಮರ್ಧನದ ಚಿತ್ರ ಇನ್ನೂ ಅನೇಕ ರೀತಿಯ ಉಬ್ಬು ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ.

ರಂಗ ಮಂಟಪ: ರಂಗಮಂಟಪದ ಮಧ್ಯಭಾಗದಲ್ಲಿ ಸುಂದರ ಶಿಲ್ಪಕಲೆಯನ್ನು ಕೆತ್ತನೆ ಮಾಡಿರುವ ಕಂಬಗಳಿವೆ, ಇಲ್ಲಿರುವ ಅಂಕಣದಲ್ಲಿ ಪದ್ಮ ಪುಷ್ಪಗಳ ಸುದರ ಕೆತ್ತನೆ ಇದ್ದು ಇದರ ಮಧ್ಯಭಾಗದಲ್ಲಿ ಸಾಧಾರಣ ಉಡುಗೆ ತೊಡುಗೆಯನ್ನು ಹುಟ್ಟಿರುವಂತಹ ಭುವನೇಶ್ವರಿಯ ಮೂರ್ತಿ ಇದೆ.

ದ್ವಾರ ಮಂಟಪ: ದ್ವಾರ ಮಂಟಪವು ಪೂರ್ತಿಯಾಗಿ ಕಲ್ಲಿನಿಂದಲೇ ನಿರ್ಮಾಣಗೊಂಡಿದ್ದು ಇದರ ಬಾಹ್ಯ ಬಿತ್ತಿಯಲ್ಲಿ ರಾಮ, ವಾಮನ, ವಿಷ್ಣು, ಪರಶುರಾಮ ಮುಂತಾದ ಕೆತ್ತನೆಯ ಶಿಲ್ಪಗಳಿವೆ.

ತೆರೆದ ಮಂಟಪ: ಇದು ಅತ್ಯಂತ ವಿಶಾಲವಾದದ್ದಾಗಿದೆ, 12 ಕಲಾತ್ಮಕ ಕೆತ್ತನೆಯ ಕಂಬಗಳು ಇದ್ದು ಈ ಕಂಬಗಳು ವಿಜಯನಗರದ ಶೈಲಿಯಲ್ಲಿ ಕೆತ್ತನೆಗೊಂಡಂತಹವುಗಳಾಗಿವೆ.

ಪ್ರಾಕಾರ ಮಂಟಪ: ಪ್ರಾಕಾರ ಮಂಟಪವು 117 ಕಂಬಗಳಿಂದ ರಚನೆಗೊಂಡಿದೆ, ಈ ಮಂಟಪದ ಭಿತ್ತಿಯ ಮೇಲುಗಡೆ ನವದೇವತಾ ಮೂರ್ತಿಗಳ ಕೆತ್ತನೆ ಇದೆ, ಕಂಬಗಳು, ಕಲ್ಲು ಬಂಡೆಗಳ ಮೇಲೆ, ದ್ವಾರ ಬಾಗಿಲುಗಳ ಮೇಲೆ ವಿವಿಧ ರೀತಿಯ ಬಳ್ಳಿ, ಎಲೆ, ಹೂವುಗಳ ಕೆತ್ತನೆ ಇದೆ, ಮಂಟಪದ ವಿವಿಧ ಭಾಗದಲ್ಲಿ ಆಂಜನೇಯ, ರಾಮ ಲಕ್ಷ್ಮಣ, ಪರಶುರಾಮ, ಗಣಪತಿ ಮುಂತಾದ ಮೂರ್ತಿಗಳಿವೆ, ಪ್ರಾಕಾರದ ಟೆಂಕಣ(ಉತ್ತರ) ದಿಕ್ಕಿನ ಒಳಗಿನ ಗೋಡೆಗಳ ಮೇಲುಗಡೆ ಚೌಡಿಕೆಯವನು, ಕುದುರೆ ಸವಾರ, ಭರಮಣ್ಣ ನಾಯಕನು ಯುದ್ಧದಲ್ಲಿ ಜಯಗಳಿಸಿದ ಕಾರಣದಿಂದ ಯುದ್ಧದ ದೃಶ್ಯವನ್ನು ಕಲ್ಲುಬಂಡೆಯ ಮೇಲೆ ಕೆತ್ತನೆ ಮಾಡಿದ್ದಾರೆ, ದೇವಾಲಯದ ಮುಖ್ಯ ದ್ವಾರದ ಇಕ್ಕೆಲಗಳಲ್ಲಿ ಎರಡು ಜಗುಲಿ ಕಟ್ಟೆಗಳಿದ್ದು ಕಟ್ಟೆಗಳ ಮೇಲೆ ಕುಸುರಿ ಕೆತ್ತನೆಯ ತಲಾ ಎರಡೆರಡು ಕಂಬಗಳಿದ್ದು ವಿಜಯ ನಗರ ಶೈಲಿಯಲ್ಲಿವೆ.

ಕಂಬಗಳು: ಇಲ್ಲಿನ ಕಂಬಗಳಲ್ಲಿ ಮೂರು ವಿಧಗಳಿದ್ದು ಕೆಲವು ಕಂಬಗಳ ಕಾಂಡ ಭಾಗದಲ್ಲಿ ಚೌಕಾಕಾರ, ಎಂಟು ಅಥವಾ ಹದಿನಾರು ಕೋನಗಳು, ಕಂಭ, ಕಂಠ, ಫಲಕ, ಬೋದಿಗೆಗಳನ್ನು ಹೊಂದಿವೆ, ಕಂಬಗಳ ಮೇಲೆ ಹಸು-ಕರು, ಕೃಷ್ಣನ ಕಾಳಿಂಗ ಮರ್ಧನ, ಆಂಜನೇಯ, ನೃತ್ಯ ಮಾಡುತ್ತಿರುವ ಸ್ತ್ರೀ ಇನ್ನು ಮುಂತಾದ ಶಿಲ್ಪಗಳನ್ನು ಕೆತ್ತನೆಮಾಡಿದ್ದಾರೆ, ಇವು ಒಂದು ವಿಧದ ಕಂಬಗಳಾದರೆ, ಮತ್ತೊಂದು ವಿಧದ ಕಂಬಗಳಲ್ಲಿ ಕಾಂಡ ಮತ್ತು ಪೀಠ ಇದ್ದು ಇದರ ಮೇಲೆ ನಾಗಭಂದವಿದೆ, ಕಂಬದ ಮೇಲು ಭಾಗದಲ್ಲಿ ಹೂವಿನ ಭೋದಿಗೆ, ಕೆಳಗಡೆ ಬಾಗಿದ ಹೂವಿನ ದಳಗಳು ನಾಲ್ಕು ಕಡೆಗಳಲ್ಲೂ ಇದೆ, ಕಂಬಗಳ ಮಧ್ಯಭಾಗದ ನಾಲ್ಕು ಮುಖ ಭಾಗದಲ್ಲಿ ಗಂಡುಬೇರುಂಡ, ಗಣಪತಿ, ಪೂರ್ಣಕುಂಭ, ನೃತ್ಯ ಮಾಡುತ್ತಿರುವ ಸ್ತ್ರೀ, ಆಂಜನೇಯ, ಬೇಡರ ಕಣ್ಣಪ್ಪ ಮುಂತಾದ ಕೆತ್ತನೆಯ ಶಿಲ್ಪಗಳಿವೆ, ಮೂರನೇ ಮಾದರಿಯ ಕಂಬಗಳಲ್ಲಿ ಕುದುರೆ ಶಕ್ತಿಯನ್ನೊಳಗೊಂಡ ಶಿಲ್ಪಗಳು, ಅಂದರೆ ಎರಡು ಕಂಬಗಳ

ಮಧ್ಯದಲ್ಲಿ ದೊಡ್ಡನೆಯದಾದ ತೊಲೆಗಳನ್ನು ಹಾಕಿದ್ದು ತೊಲೆಗಳ ಭಾರವನ್ನು ಹೊತ್ತು ನಿಲ್ಲುವಂತೆ ಕುದುರೆಯು ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿದ್ದು ಕುದುರೆಯ ಮೇಲೆ ವ್ಯಕ್ತಿಯೊಬ್ಬನ ಚಿತ್ರಣವನ್ನು ಕೆತ್ತನೆ ಮಾಡಲಾಗಿದೆ.

ಮೂರ್ತಿ ಶಿಲ್ಪಗಳು: ಗರ್ಭಗುಡಿಯಲ್ಲಿ ಸಿಂಹದ ಮೇಲೆ ಕುಳಿತಿರುವ ಉತ್ಸವಾಂಬೆ ಮೂರ್ತಿ ಇದೆ, ಕೊರಳಲ್ಲಿ ವಿವಿಧ ರತ್ನಾಭರಣಗಳನ್ನು ಧರಿಸಿದ್ದು ಕೈಗಳಲ್ಲಿ ಕತ್ತಿ, ಡಮರುಗ, ತ್ರಿಶೂಲ ಹಾಗೂ ಅಮೃತ ಪಾತ್ರೆಯನ್ನು ಹಿಡಿದಿದೆ, ದೇವಿಯ ಪಕ್ಕದಲ್ಲಿ ಪರಶುರಾಮನ ಮೂರ್ತಿ ಇದ್ದು ಕೈಗಳಲ್ಲಿ ಖಡ್ಗ, ಕೊಡಲಿ ಮತ್ತು ಬಿಲ್ಲು ಬಾಣಗಳನ್ನು ಹಿಡಿದಿದೆ, ಒಟ್ಟಾರೆ ಈ ಉಚ್ಚಂಗಿ ಯಲ್ಲಮ್ಮನ ದೇವಾಲಯವು ಚಿತ್ರದುರ್ಗ ದಲ್ಲಿಯೇ ಭವ್ಯ ಹಾಗೂ ಬೃಹದಾಕಾರದ ದೇವಾಲಯವಾಗಿದೆ.

8).ಉಜ್ಜಿನಿ ಸಿದ್ದೇಶ್ವರನ ದೇವಾಲಯ: ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕಸಬಾ ಹೋಬಳಿ ಹೊಟ್ಟೆಪ್ಪನ ಹಳ್ಳಿ ಗ್ರಾಮದ ಐತಿಹಾಸಿಕ ದೇವಾಲಯವಿದು, ಪೂರ್ವದಲ್ಲಿ ಹೊಟ್ಟಪ್ಪನ ಹಳ್ಳಿ ಗ್ರಾಮವು ಪಶ್ಚಿಮ ದಿಕ್ಕಿಗೆ ಒಂದು ಕಿ.ಮೀ. ದೂರದ ಮಲ್ಡಿ ಎಂಬ ಎತ್ತರವಾದ ಜಾಗದಲ್ಲಿ ಇತ್ತು, ಅಲ್ಲಿ ಉದ್ಭವಿಸಿದ ಶಿವನ ಲಿಂಗವಿರುವ ಚಿಕ್ಕದಾದ ದೇವಾಲಯವಿದೆ, ಕೆಲವು ದಿನಗಳ ತರುವಾಯ ಕಾರಣಾಂತರದಿಂದ ಊರನ್ನು ಈಗ ಇರುವ ಜಾಗಕ್ಕೆ ಸ್ಥಳಾಂತರಿಸಿದರು, ಆನಂತರ ದೇವಾಲಯವನ್ನೂ ಸಹ ಹೊಸದಾಗಿ ನಿರ್ಮಾಣ ಮಾಡಿ, ಉಜ್ಜಿನಿಯಿಂದ ಲಿಂಗವನ್ನು ತಂದು ಪ್ರತಿಷ್ಠಾಪಿಸಿದರಂತೆ, ಇದಾದ ನಂತರ ಮತ್ತೆ ದೇವಸ್ಥಾನವನ್ನು ಪುನರ್ ನಿರ್ಮಾಣ ಮಾಡಿಸಿದರು, ಹೊಸ ದೇವಸ್ಥಾನಕ್ಕೆ ಗೋಡೆಯ ಮೇಲುಗಡೆ ಬಲ್ಪದ ಸುತ್ತಲೂ ಚಿಕ್ಕ ಚಿಕ್ಕ ಗೂಡುಗಳನ್ನು ಮಾಡಿ ಅದರಲ್ಲಿ ದೇವರುಗಳ ಮೂರ್ತಿಗಳನ್ನು ಮಾಡಿಸಿದ್ದಾರೆ, ಮತ್ತು ಗರ್ಭ ಗುಡಿಯ ಮೇಲೆ ಶಿಖರವನ್ನೂ ಮಾಡಿಸಿದ್ದು ಈ ಶಿಖರದಲ್ಲಿ ಸಿಮೆಂಟ್‌ನ ಮಾಧ್ಯಮದಿಂದ ದೇವರ ಮೂರ್ತಿಗಳನ್ನು ಮಾಡಿಸಿದ್ದಾರೆ.

9). ಕಾಳಿಕಾ ಮಠೇಶ್ವರಿ ದೇವಾಲಯ: ಚಿತ್ರದುರ್ಗದ ಕೋಟೆ ಬಾಗಿಲಿನ ಹತ್ತಿರವಿರುವ ದೇವಾಲಯವು ಪೂರ್ವಾಭಿಮುಖವಾಗಿದೆ, ಇದು ಪ್ರಾಚೀನಕಾಲದ ದೇವಾಲಯವಾಗಿದ್ದು ಚಿತ್ರದುರ್ಗದ ಪಾಳೇಗಾರರ ಆಳ್ವಿಕೆಯ ಕಾಲದಲ್ಲಿ ಜೀರ್ಣೋದ್ಧಾರ ಹೊಂದಿದೆ, ದೇವಾಲಯವು ಗರ್ಭಗೃಹ, ನವರಂಗ, ತೆರೆದ ಮಂಟಪ, ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾ ಮಂಟಪ, ಅಂತರಾಳಗಳನ್ನು ಹೊಂದಿದೆ, ಗರ್ಭಗುಡಿಯ ಹಿಂಭಾಗದಲ್ಲಿ ವಿಷ್ಣುದೇವನ ಶಿಲ್ಪ, ಆಮೆ, ಮಿಥುನ ಶಿಲ್ಪಗಳ ಕೆತ್ತನೆ ಇದೆ, ಬಾಗಿಲು ಚೌಕಗಳ ಮೇಲೆ ಎರಡು ದ್ವಾರ ಪಾಲಕರ ಕೆತ್ತನೆ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಪೂಜೆಗೊಳ್ಳುತ್ತಿರುವ ಕಾಳಿಕಾದೇವಿಯ ಮೂರ್ತಿ ಬಹಳ ಮನೋಜ್ಞವಾಗಿ ಕೆತ್ತಲ್ಪಟ್ಟಿದೆ, ಕೈಗಳಲ್ಲಿ ತ್ರಿಶೂಲ, ಖಡ್ಗ, ಢಮರುಗ, ಕಪಾಲವನ್ನು ಹಿಡಿದಿದೆ, ಕೊರಳಲ್ಲಿ ಕಂಠೀಹಾರ, ಪದಕ ಮುಂತಾದ ಒಡವೆಗಳನ್ನು ಧರಿಸಿದೆ, ಈ ದೇವಿಯ ಪಕ್ಕದಲ್ಲಿ ಗಣಪತಿ, ಸಿಂಹಗಳನ್ನು ಕೆತ್ತನೆಮಾಡಲಾಗಿದೆ.

10). ಕರಿವರ್ತಿ ಈಶ್ವರನ ದೇವಸ್ಥಾನ: ಚಿತ್ರದುರ್ಗ ಕೋಟೆ ಪರಿಸರದಲ್ಲಿ ಚಿಕ್ಕದಾದ ದೇವಾಲಯವು ಪೂರ್ವಾಭಿಮುಖವಾಗಿದ್ದು ಗ್ರಾನೈಟ್ ಕಲ್ಲಿನಿಂದ ನಿರ್ಮಾಣವಾದದ್ದಾಗಿದೆ, ಹೊಯ್ಸಳ ಶೈಲಿಯ ದೇವಸ್ಥಾನವಿದು, ಗರ್ಭಗೃಹದಲ್ಲಿ ಶಿವನ ಮೂರ್ತಿ ಮಾತ್ರ ಇದೆ, ಬಾಗಿಲುಗಳ ಮೇಲೆ ದ್ವಾರಪಾಲಕರಾದ ನಂದೀಶ್ವರ ಮತ್ತು ಬೃಂಗೀಶ್ವರರ ಕೆತ್ತನೆ ಶಿಲ್ಪಗಳಿವೆ, ದೇವಾಲಯದ ಒಳಗೆ ಇರುವ ಕಂಬಗಳಲ್ಲಿ ಗಣಪತಿ, ವರಹ ಸ್ವಾಮಿ, ಹಿರಣ್ಯ ಕಷ್ಯಪನ ಸಂಹಾರ ಶಿಲ್ಪ, ವಿಷ್ಣುವಿನ ಕುರ್ಮಾವತಾರ, ಮತ್ಸ್ಯ ಅವತಾರ, ಪರಶುರಾಮ ಅವತಾರ, ವಾಮನ ಅವತಾರ,ಕೃಷ್ಣನ ಲೀಲಾವಿನೋದ, ಕಾಳಿಂಗ ಮರ್ಧನ, ಮಹಿಷಾಸುರ ಮರ್ದಿನಿ, ಗಂಡುಬೇರುಂಡ, ಆಂಜನೇಯ, ಬಲರಾಮ ಮುಂತಾದ ಶಿಲ್ಪಗಳ ಕೆತ್ತನೆಯನ್ನು ಕಾಣಬಹುದು, ಈ ಕಂಬಗಳನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ.

11). ಉಮಾ ಮಹೇಶ್ವರ ದೇವಾಲಯ: ನಾಯಕನ ಹಟ್ಟಿ ಸಮೀಪದ ಎನ್.ಗೌರೀಪುರ ಗ್ರಾಮದಲ್ಲಿ ಈ ದೇವಾಲಯವು ಪೂರ್ವಾಭಿಮುಖವಾಗಿದೆ, ದೇವಾಲಯದ ಗರ್ಭಗುಡಿಯಲ್ಲಿ ಕುಳಿತಿರುವ ಉಮಾಮಹೇಶ್ವರ ಮೂರ್ತಿಯು ನಾಲ್ಕುವರೆ ಅಡಿ ಎತ್ತರವಾಗಿದ್ದು ಕಪ್ಪು ಶಿಲೆಯಲ್ಲಿದೆ, ಗರ್ಭಗುಡಿಯ ಮುಂಭಾಗದ ನವರಂಗವು ನಾಲ್ಕು ಕಪ್ಪು ಶಿಲೆಯ ಕಂಬಗಳಿಂದ ಕೂಡಿವೆ, ಈ ಕಂಬಗಳು ಹೆಚ್ಚೇನೂ ಎತ್ತರವಲ್ಲದೆ ಗಿಡ್ಡನಾಗಿದ್ದು ಪೀಠ, ಪಾದ, ಚೌಕ, ಘಂಟಾಕಾರ, ಕಳಸ, ಬೋಧಿಗೆಗಳನ್ನು ಒಳಗೊಂಡಿವೆ, ಕಂಬಗಳ ತಳಭಾಗದಲ್ಲಿ ಕೆತ್ತನೆಯ ಶಿಲ್ಪಗಳಿದ್ದು ರಾಮ, ಸೀತೆ, ಉಗ್ರನರಸಿಂಹ, ನಾಟ್ಯ ಸ್ತ್ರೀಯರು, ನಾಟ್ಯ ಗಣಪತಿ, ಗಂಡಬೇರುಂಡ, ಇಂದ್ರ, ದೇವಿ, ವಿಷ್ಣುವಿನ ದಶಾವತಾರ, ಮಹಿಷಿಮರ್ಧಿನಿ, ಭೈರವ, ವಾಲಿ–ಸುಗ್ರೀವ, ಸರ್ಪಬಂಧ, ಬೇಡರ ಕಣ್ಣಪ್ಪ, ತಾಂಡವ ಶಿವ, ಪಂಚಮುಖಿ ಹಸು ಮುಂತಾದ ಉಬ್ಬು ಶಿಲೆಗಳನ್ನು ಪ್ರತಿ ಕಂಬಗಳಲ್ಲೂ ಕಾಣಬಹುದು.

12). ಈಶ್ವರ ದೇವಾಲಯ: ಚಿತ್ರದುರ್ಗ ನಗರದ ಕೋಟೆಗೆ ಸೇರಿದ ಐತಿಹಾಸಿಕ ಸ್ಥಳ ಗಾರೆ ಬಾಗಿಲಬಳಿ ಇರುವ ಈ ದೇವಾಲಯವನ್ನು ಗಾರೆ ಬಾಗಿಲ ದೇವಾಲಯವೆಂದೇ ಕರೆಯುತ್ತಾರೆ, ಇದು ಶೈವ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿದೆ, ಗ್ರಾನೈಟ ಶಿಲೆಯಿಂದ ನಿರ್ಮಿಸಿದ್ದು ಗರ್ಭಗೃಹದಲ್ಲಿ ಶಿವಲಿಂಗ ಮಾತ್ರ ಇದೆ, ಬಾಗಿಲಿನ ಚೌಕದಲ್ಲಿ ದ್ವಾರಪಾಲಕರು, ಗರ್ಭಗೃಹದ ಎದುರಿಗಿರುವ ಅಂತರಾಳದಲ್ಲಿ ನಂದಿ ಶಿಲ್ಪ, ಪಕ್ಕದಲ್ಲಿ ನಾಗಕನ್ಯೆ, ಭಕ್ತನ ಮೇಲೆ ಲಗ್ಗೆಮಾಡುತ್ತಿರುವಂತೆ ಕಾಣುವ ಸಿಂಹದ ಶಿಲ್ಪವಿದ್ದು ಮೀನುಗಳ ಕೆತ್ತನೆಯೂ ಅಲ್ಲಲ್ಲಿ ಕಂಡುಬರುತ್ತದೆ, ಈ ದೇವಾಲಯವು ಚಿತ್ರದುರ್ಗ ಪಾಳೇಯಗಾರರ ಕಾಲದಲ್ಲಿ ನಿರ್ಮಿಸಿರಬಹುದಾಗಿದೆ.

13).ರಂಗನಾಥ ದೇವಾಲಯ: ಹಿರಿಯೂರು ತಾಲ್ಲೂಕು ಅಂಬಲಗೆರೆ ಗ್ರಾಮದಲ್ಲಿ ಇರುವ ದೇವಾಲಯವು ವೈಷ್ಣವ ಧರ್ಮಕ್ಕೆ ಸೇರಿದ್ದಾಗಿದೆ, ವಿಜಯ ನಗರ ವಾಸ್ತು ಶೈಲಿಯಲ್ಲಿದ್ದು ಅನೇಕ ವಿಧದ ಶಿಲ್ಪಕಲಾಕೃತಿಗಳನ್ನು ಹೊಂದಿದೆ, ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ನವರಂಗ, ಅಂತರಾಳ ಮತ್ತು ಸಭಾ ಮಂಟಪಗಳನ್ನು ಹೊಂದಿದೆ, ಗರ್ಭಗುಡಿಯಲ್ಲಿ ಶಂಖ ಚಕ್ರಧಾರಿಯಾದ ವಿಷ್ಣು ಮೂರ್ತಿ ಮನೋಘ್ನವಾಗಿದೆ, ಈ ಮೂರ್ತಿಯ ಸುತ್ತಲೂ ಇರುವ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಕೆತ್ತನೆ ಇದೆ, ವಿಷ್ಣು ಮೂರ್ತಿಯ ಪಕ್ಕದ ಎರಡೂ ಕಡೆ ಆತನ ಪತ್ನಿಯರಾದ ಶ್ರೀದೇವಿ ಮತ್ತು ಭೂದೇವಿಯ ಮೂರ್ತಿಗಳು ನಯನ ಮನೋಹರವಾಗಿವೆ, ಬಾಗಿಲು ವಾಡದಲ್ಲಿ ದ್ವಾರಪಾಲಕರ ಮೂರ್ತಿಗಳು, ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ, ದೇವಸ್ಥಾನದಲ್ಲಿರುವ ಪ್ರತಿಯೊಂದು ಕಂಬಗಳ ಮೇಲೂ ಕೆತ್ತನೆಯ ಶಿಲ್ಪಗಳಿವೆ, ಹಂಸ, ವೀರಭದ್ರ, ನಾಟ್ಯ ಮಾಡುತ್ತಿರುವ ಮಹಿಳೆಯ ಶಿಲ್ಪ, ವಾಮನ, ರಾಮ, ಗಜ, ಕೃಷ್ಣ, ಬಾಲ ಮುರುಳಿ ಕೃಷ್ಣ, ಗರುಡ, ವಿಷ್ಣು, ಕಾಮಧೇನು ಇನ್ನು ಮುಂತಾದ ಸುಂದರ ಕೆತ್ತನೆಯ ಶಿಲ್ಪಗಳುಹಾಗೂ ಕುಸುರಿ ಕೆತ್ತನೆ ಕಂಡುಬರುತ್ತದೆ.

ನವರಂಗ ಹಾಗೂ ಸಭಾ ಮಂಟಪಗಳಲ್ಲಿರುವ ಕಂಬಗಳ ಮೇಲೂ ವಿವಿಧ ಶಿಲ್ಪ ಕಲಾ ಕೃತಿಗಳಿವೆ, ಅವುಗಳಲ್ಲಿ ಮುಖ್ಯವಾಗಿ ಹನುಮ, ವಿಷ್ಣು, ಶಂಖ, ಚಕ್ರ, ಗರುಡ, ವಾದ್ಯ ನುಡಿಸುವವನು, ಹಂಸ, ನಾಟ್ಯ ಮಯೂರಿ, ಗಣಪತಿ ಮುಂತಾದ ಶಿಲ್ಪಗಳಿವೆ, ಗರ್ಭಗುಡಿಯ ಮೇಲೆ ಇಟ್ಟಿಗೆ ಹಾಗೂ ಗಾರೆ ಮಾಧ್ಯಮದಿಂದ ನಿರ್ಮಾಣ ಮಾಡಿರುವ ವಿಮಾನ ಗೋಪುರವಿದೆ, ಈ ವಿಮಾನದಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ವಿವಿಧ ರೀತಿಯ ಉಬ್ಬು ಶಿಲ್ಪಗಳಿವೆ, ದೇವಾಲಯಕ್ಕೆ ಮುಖ್ಯ ದ್ವಾರವಿದ್ದು ದ್ವಾರದಲ್ಲಿ ಲತಾ ಸುಂದರಿಯ ಮೂರ್ತಿಯ ಬಲಭಾಗದ ಕೈಯಿಂದ ಹೊರ ಹೊರಟ ನಾಟ್ಯ ಮಾಡುತ್ತಿರುವ ಸ್ತ್ರೀಯರ ಶಿಲ್ಪಗಳು, ಎಡಭಾಗದ ಕೈಯಿಂದ ಹೊರ ಹೊರಟಿರುವ ಪುರುಷಾಕೃತಿಯ ಶಿಲ್ಪಗಳಿವೆ.

ದೇವಾಲಯದ ಮುಂಭಾಗ ಸ್ವಲ್ಪ ಅಂತರದಲ್ಲಿ ದೀಪದ ಸ್ಥಂಭ ಇದ್ದು ಈ ದೀಪದ ಕಂಬವನ್ನು ಗಿಡ್ಡನೆಯ ವ್ಯಕ್ತಿಗಳು ಹೊತ್ತಂತೆ ಕೆತ್ತನೆ ಮಾಡಲಾಗಿದೆ, ಇದರ ಮುಂಭಾಗ ಸ್ವಲ್ಪ ದೂರದಲ್ಲಿ ಮತ್ತೊಂದು ದೀಪಕಂಬವಿದ್ದು ಈ ಕಂಬದ ಮೇಲು ತುದಿಯಲ್ಲಿ ಸುಂದರ ಹಾಗೂ ಬೃಹದಾಕಾರದ ಗರುಡನ ಮೂರ್ತಿ ಇದೆ, ಗರುಡ ಕಂಬದ ಕೆಳಗಡೆ ಎರಡು ಚಿಕ್ಕದಾದ ಗರುಡ ಶಿಲ್ಪಗಳಿವೆ, ಗರುಡ ಗಂಬವು ಒಂದು ವಿಶೇಷತೆಯನ್ನು ಹೊಂದಿದೆ, ಕಂಬದ ತುದಿಯಲ್ಲಿರುವ ಬೃಹದಾಕಾರದ ಗರುಡವು ನೇರವಾಗಿದ್ದರೆ ನಾಡಿಗೆ ಸಮೃದ್ಧಿ ಮಳೆ ಬೆಳೆ ಆಗಿ ಜನರು ಸೌಖ್ಯವಾಗಿರುತ್ತಾರೆಂದು ಸ್ವಲ್ಪ ಕೆಳಗಡೆ ಬಾಗಿದರೆ ಕೇಡುಕಾಗುತ್ತದೆ ಎಂಬ ಸ್ಥಳೀಯರ ನಂಬಿಕೆ ಇದೆ.

14).ಉಮಾ ಮಹೇಶ್ವರ ದೇವಾಲಯ: ಈ ದೇವಾಲಯವು ಚಿತ್ರದುರ್ಗ ನಗರದಲ್ಲಿದ್ದು ಪೂರ್ವಾಭಿಮುಖವಾಗಿದೆ, ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಶಿವಲಿಂಗವಿದೆ, ಗರ್ಭಗೃಹದ ಹೊರಭಾಗದ ಎರಡು ಕಡೆಗಳಲ್ಲಿ ನಾಗರ ಹಾವು, ಮೀನು ಮತ್ತು ಶಿವಲಿಂಗದ ಕೆತ್ತನೆ ಇದೆ, ಬಾಗಿಲು ಚೌಕದ ಮೇಲೆ ದ್ವಾರ ಪಾಲಕರ ಕೆತ್ತನೆ ಇದ್ದು ಇದು ಶೈವ ದೇವಾಲಯವಾಗಿದೆ, ದೇವಾಲಯದಲ್ಲಿರುವ ಕಂಬಗಳು ವಿಜಯ ನಗರ ಶೈಲಿಯಲ್ಲಿವೆ, ಕಂಬಗಳ ಮೇಲೆ ವಿವಿಧ ಆಕಾರದ ಕೆತ್ತನೆಗಳು ಮಂಗ, ವೇಣುಗೋಪಾಲ, ಆನೆ, ಗಣಪತಿ, ಬೇಡರ ಕಣ್ಣಪ್ಪ, ಆಂಜನೇಯ, ಗಂಡು ಬೇರುಂಡ, ನಂದಿ, ಗರುಡ, ವೀರಭದ್ರ, ಮಹಾರಾಜರ ಕುಟುಂಬ ಮುಂತಾದ ಕೆತ್ತನೆಯ ಶಿಲ್ಪಗಳಿವೆ, ಚಿತ್ರದುರ್ಗದ ಪಾಳೆಯ ಗಾರರು ಕ್ರಿ.ಶ. 16–17ನೇ ಶತಮಾನದಲ್ಲಿ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದಾರೆ ಎಂದು ಇತಿಹಾಸಕಾರರು ಹೇಳುತ್ತಾರೆ.

15).ಗೋಪಾಲ ಕೃಷ್ಣ ದೇವಾಲಯ: ಚಿತ್ರದುರ್ಗದ ಬೆಟ್ಟದಲ್ಲಿರುವ ದೇವಾಲಯವು ಗರ್ಭಗುಡಿ, ಅಂತರಾಳ, ತೆರೆದ ಮಂಟಪ ಹಾಗೂ ನವರಂಗವನ್ನು ಹೊಂದಿದೆ, ದೇವಾಲಯವು ಪೂರ್ವಾಭಿಮುಖವಾಗಿದ್ದು ಸಾಂಧಾರ ಶೈಲಿಯಲ್ಲಿದೆ, ಗರ್ಭಗುಡಿಯ ಒಳಗೆ ಕೊಳಲನ್ನು ಊದುತ್ತಿರುವ ಕೃಷ್ಣನ ಮೂರ್ತಿಯ ಸುತ್ತಲೂ ಗೋಪಿಕಾ ಸ್ತ್ರೀಯರು ಹಾಗೂ ಹಸುಗಳ ಶಿಲ್ಪಗಳಿವೆ, ಕೃಷ್ಣನ ಮೂರ್ತಿಯ ಸುತ್ತಲೂ ಇರುವ ಪ್ರಭಾವಳಿಯ ಮೇಲೆ ವಿಷ್ಣುವಿನ ದಶಾವತಾರದ ಕೆತ್ತನೆಯ ಉಬ್ಬು ಚಿತ್ರಗಳಿವೆ, ಗರ್ಭಗುಡಿಯ ಸುತ್ತಲೂ ಇರುವ ಪ್ರದಕ್ಷಿಣಾ ಪಥಕ್ಕೆ ಹೊಂದಿಕೊಂಡಂತೆ ರಂಗಮಂಟಪವಿದ್ದು ಈ ರಂಗಮಂಟಪಕ್ಕೆ ನಿರ್ಮಿಸಿರುವ ಕಂಬಗಳಲ್ಲಿ ಪಾದದಿಂದ ಅಂಚಿನವರೆಗೂ ವಿವಿಧ ರೀತಿಯ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ, ಅವುಗಳಲ್ಲಿ ಯಕ್ಷ, ಆಂಜನೇಯ, ರಾಮ, ರಾವಣ, ಮಹಿಷಾಸುರ ಮರ್ಧಿನಿ, ಕಾಳಿಂಗ ಮರ್ದನ, ನವಿಲು, ಯುದ್ಧಕ್ಕೆ ಸನ್ನದ್ಧನಾಗಿರುವ ಸೈನಿಕ, ನರ್ತಕಿ ಮುಂತಾದ ಕೆತ್ತನೆಯ ಶಿಲ್ಪಗಳನ್ನು ಕಾಣಬಹುದು, ರಂಗಮಂಟಪದ ಇಕ್ಕೆಲಗಳಲ್ಲಿ ವೈಷ್ಣವ ಆಳ್ವಾರ ಕೈಮುಗಿದುಕೊಂಡು ಕುಳಿತಿರುವ ಕೆತ್ತನೆ ಶಿಲ್ಪಗಳಿವೆ, ಗರ್ಭಗುಡಿಯ ಎದುರುಗಡೆ ಭಿತ್ತಿಯ ಶಿಲ್ಪಪಟ್ಟಿಕೆಯಲ್ಲಿ ನಾಲ್ಕು ಸಹಧರ್ಮಿಣೀಯರ(ನಾಲ್ಕು ಸತಿಯರು) ಜೊತೆಗೂಡಿ ಇರುವ ನಾಯಕನ ಶಿಲ್ಪ ಇದೆ, ಇದರ ಸಮೀಪ ವಿಷ್ಣು ರೂಪಿ ಶಿಲ್ಪವೂ ಇದೆ.

ದೇವಾಲಯದ ರಂಗಮಂಟಪಕ್ಕೆ ಹೊಂದಿಕೊಂಡು ಮುಖ ಮಂಟಪವಿದ್ದು ಎರಡು ಪಕ್ಕಗಳಲ್ಲಿ ಜಗತಿ ಕಟ್ಟೆಗಳಿವೆ, ಈ ಕಟ್ಟೆಗಳ ಮೇಲೆ ಇರುವ ಕಂಬಗಳು ವಿಜಯ ನಗರ ಶೈಲಿಯಲ್ಲಿವೆ, ಕಂಬಗಳ ಮೆಲೆ ರಾಮ, ಕಾಳಿಂಗ ಮರ್ಧನ, ನವಿಲು, ಸೈನಿಕ, ರಾವಣ, ಆಂಜನೇಯ, ಹಾವಾಡಿಗ, ಕೃಷ್ಣ, ಗರುಡ ಮುಂತಾದ ಉಬ್ಬು ಕೆತ್ತನೆಯ ಶಿಲ್ಪಗಳಿವೆ.

16).ಚನ್ನಕೇಶವ ದೇವಾಲಯ: ಚಿತ್ರದುರ್ಗದ ಕೆಳಗೋಟೆಯಲ್ಲಿರುವ ಈ ದೇವಾಲಯವನ್ನು ಚಿತ್ರದುರ್ಗದ ಪಾಳೆಯಗಾರರು ನಿರ್ಮಾಣ ಮಾಡಿದ್ದಾಗಿದೆ, ಪೂರ್ವಾಭಿಮುಖವಾಗಿರುವ ಈ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗುಡಿ, ನವರಂಗ, ಅಂತರಾಳ ಮತ್ತು ತೆರೆದ ಮಂಟಪಗಳನ್ನು ಹೊಂದಿದ್ದು

ಗರ್ಭಗುಡಿಯ ಒಳಗೆ ವಿಷ್ಣುವಿನ ಶಿಲಾಮೂರ್ತಿ ಇದೆ, ನಾಲ್ಕು ಕೈಗಳನ್ನು ಹೊಂದಿರುವ ಮೂರ್ತಿಯು ಒಂದು ಕೈಯಲ್ಲಿ ಚಕ್ರ, ಇನ್ನೊಂದರಲ್ಲಿ ಶಂಖ, ಮತ್ತೊಂದರಲ್ಲಿ ಪದ್ಮ, ಮಗದೊಂದರಲ್ಲಿ ಗದೆಯನ್ನು ಹಿಡಿದಿದೆ, ಇದರ ಪಕ್ಕದಲ್ಲಿ ಶ್ರೀದೇವಿ ಮತ್ತು ಭೂದೇವಿಯರ ವಿಗ್ರಹಗಳಿವೆ, ಬಾಗಿಲ ಮೇಲೆ ದ್ವಾರಪಾಲಕರ ಶಿಲ್ಪಗಳು, ಸಣ್ಣದಾದ ಗುಡಿಗಳಲ್ಲಿ ಶಿವಲಿಂಗ, ನಂದಿ ಹಾಗೂ ಆಂಜನೇಯ ಶಿಲ್ಪಗಳು, ಶಂಖುಗಳ ಉಬ್ಬು ಕೆತ್ತನೆಗಳು ನೋಡುಗರಿಗೆ ಕಲಾರಸ ಉಣಿಸುತ್ತವೆ, ಅಂತರಾಳದಲ್ಲಿರುವ ಕಂಬಗಳ ಮೇಲೆ ಕೆತ್ತಿರುವ ಎರಡು ಮುಖದ ನಂದಿ ಶಿಲ್ಪ, ಶಿವಲಿಂಗ, ಗಣೇಶ, ರಾಮ ಮುಂತಾದ ಶಿಲ್ಪಗಳು ದೇವಾಲಯಕ್ಕೊಂದು ಕಳಸಗಳಾಗಿವೆ, ನವರಂಗದ ಪ್ರವೇಶ ದ್ವಾರದಲ್ಲಿ ಎರಡು ತಲೆಯ ಹಸು, ಆನೆಗಳ ಶಿಲ್ಪಗಳಿವೆ, ದೇವಾಲಯದ ಇತರೆ ಕಡೆಗಳಲ್ಲಿ ನಿರ್ಮಿಸಿರುವ ಕಂಬಗಳ ಮೇಲೂ ವಿವಿಧ ರೀತಿಯ ಉಬ್ಬು ಶಿಲ್ಪಗಳನ್ನು ಕಾಣಬಹುದು.

17).ಸಂಪಿಗೆ ಸಿದ್ದೇಶ್ವರ ದೇವಾಲಯ: ಚಿತ್ರದುರ್ಗದ ಬೆಟ್ಟದ ಮೇಲೆ ಇರುವ ದೇವಾಲಯವು ದೊಡ್ಡದಾದ ಬಂಡೆಯ ಮೇಲೆ ನಿರ್ಮಾಣವಾಗಿದೆ, ಗರ್ಭಗುಡಿ, ನವರಂಗ, ಮುಖಮಂಟಪ ಮತ್ತು ಅಂತರಾಳವನ್ನು ಹೊಂದಿದ್ದು, ಗರ್ಭಗುಡಿಯ ಒಳಗೆ ಶಿವನ ಲಿಂಗವಿದೆ, ಗರ್ಭಗುಡಿಯ ಎದುರಿಗೆ ಇರುವ ಅಂತರಾಳದಲ್ಲಿ ಶಿವನ ಲಿಂಗದ ಎದುರಿಗೆ ಕುಳಿತಿರುವ ನಂದಿಯ ಶಿಲ್ಪವು ಶಿವನ ಧ್ಯನದಲ್ಲಿದ್ದಂತೆ ಕಣುತ್ತದೆ, ನವರಂಗದಲ್ಲಿರುವ ಕಂಬಗಳು ಪೀಠ, ಪಾದ, ಚೌಕ, ಕಲಶ ಮತ್ತು ಬೋದಿಗೆಗಳನ್ನು ಹೊಂದಿವೆ, ನವರಂಗದ ಬಳಿ ಚಿಕ್ಕದಾದ ಗರ್ಭಗುಡಿ ಇದ್ದು ಇಲ್ಲಿ ನಾಲ್ಕು ಕೈಗಳ ವೀರಭದ್ರನ ಶಿಲ್ಪವಿದೆ, ಇದರ ಪಕ್ಕದಲ್ಲಿ ಗುಂಡಯ್ಯ ಮತ್ತು ಬ್ರಹ್ಮಯ್ಯರ ಎರಡು ಶಿಲ್ಪಗಳಿವೆ, ಇವರು ಒಂದು ಕೈಯಲ್ಲಿ ಕತ್ತಿ ಮತ್ತೊಂದು ಕೈಯಲ್ಲಿ ಶಿವನ ಲಿಂಗವನ್ನು ಹಿಡಿದಿದ್ದಾರೆ, ನವರಂಗದ ಸುತ್ತಲೂ ಕಟ್ಟೆ ಇದ್ದು ಇಲ್ಲಿ ನಾಗಶಿಲ್ಪ, ಭೈರವ ಮತ್ತು ಇತರೆ ಚಿಕ್ಕ ಚಿಕ್ಕ ಕೆತ್ತನೆಯ ಶಿಲ್ಪಗಳಿವೆ, ಇನ್ನೊಂದು ಕಡೆ ಅಲ್ಲಮ ಪ್ರಭುವಿನ ಶಿಲ್ಪವೂ ಇದೆ.

ದೇವಾಲಯವು ವಿಜಯ ನಗರ ಅಥವಾ ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿರಬಹುದು, ದೇವಾಲಯದ ಸುತ್ತಲು ಪ್ರಾಂಗಣವಿದ್ದು, ಪ್ರಾಂಗಣದಲ್ಲಿ ವಿವಿಧ ದೇವರ ಗರ್ಭಗುಡಿಗಳಿವೆ, ಒಂದರಲ್ಲಿ ಶಿವಲಿಂಗ, ಇನ್ನೊಂದರಲ್ಲಿ ನಂದಿ ಶಿಲ್ಪವಿದೆ, ಮುಖ್ಯ ದೇವಾಲಯದ ಪ್ರವೇಶ ದ್ವಾರಕ್ಕೆ ಶಿಖರವಿದ್ದು, ಶಿಖರದಮೇಲೆ ಕೆಲವು ಪ್ರಾಣಿಗಳ ಕೆತ್ತನೆ ಇದೆ ಅವುಗಳಲ್ಲಿ ನವಲು, ಆನೆ, ಸಿಂಹಗಳು, ದೇವಾಲಯದ ಕೆಲವು ಶಿಲ್ಪಗಳ ಕೆತ್ತನೆಯನ್ನು ಗಮನಿಸಿದರೆ ಈ ದೇವಾಲಯವನ್ನು 11–12ನೇ ಶತಮಾನದಲ್ಲಿ ನಿರ್ಮಾಣ ಮಾಡಿರಬಹುದಾಗಿದೆ.

18).ರಾಮೇಶ್ವರ ದೇವಾಲಯ: ಮೊಳಕಾಲ್ಮೂರು ನಗರಕ್ಕೆ ಹತ್ತಿರದಲ್ಲಿ ದೇವಸಮುದ್ರ ಗ್ರಾಮದ ಬಳಿ ಇರುವ ಬೆಟ್ಟದ ಮೇಲೆ ತುಂಬಾ ಪ್ರಾಚೀನವಾದ ದೇವಾಲಯವಿದೆ, ಚಾಲುಕ್ಯರು, ನೊಳಂಬರು, ಹೊಯ್ಸಳರ ಕಾಲದಲ್ಲಿ ಜೀರ್ಣಕಾರ್ಯ ನಡೆದಿದೆ, ಗರ್ಭಗುಡಿ, ನವರಂಗ, ಅಂತರಾಳಗಳನ್ನು ದೇವಾಲಯವು ಹೊಂದಿದ್ದು, ಗರ್ಭಗುಡಿಯ ಒಳಗೆ ರಾಮೇಶ್ವರನ ಲಿಂಗವಿದೆ, ಮೇಲ್ಛಾವಣಿಯಲ್ಲಿ ಕೆಳಗೆ ಮುಖಮಾಡಿರುವ ಪದ್ಮ ಕೆತ್ತನೆ ಇದೆ, ಬಾಗಿಲುಗಳ ನಿಲುವಿನಲ್ಲಿ ದ್ವಾರ ಪಾಲಕರ ಶಿಲ್ಪಗಳಿವೆ.

19).ತಿಪ್ಪೇರುದ್ರ ಸ್ವಾಮಿ ದೇವಾಲಯ: ಚಳ್ಳಕೆರೆ ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಕ್ಷೇತ್ರ ನಾಯಕನಹಟ್ಟಿ ಗ್ರಾಮದಲ್ಲಿ ಈ ದೇವಾಲಯವಿದ್ದು ಇದರೊಟ್ಟಿಗೆ ಇನ್ನು ಅನೇಕ ಪ್ರಾಚ್ಯಾವಶೇಷಗಳನ್ನು ಉಳಿಸಿಕೊಂಡಿದೆ, ತಿಪ್ಪೇರುದ್ರ ದೇವರಿಗೆ ಗ್ರಾಮದಲ್ಲಿ ಒಟ್ಟು ಮೂರು ದೇವಾಲಯಗಳಿವೆ, ಒಳ ಮಠ (ಲಿಂಗದ ಪ್ರತಿಷ್ಠಾಪನಾ ಮಂದಿರ), ಹೊರ ಮಠ (ಐಕ್ಯವಾದ ಮಂದಿರ), ಏಕಾಂತ ಮಠ (ಧ್ಯಾನ ಮಂದಿರ), ಹೀಗೆ ಮೂರು ದೇವಾಲಯಗಳಿವೆ, ಒಳಮಠವು ದೊಡ್ಡ ದೇವಾಲಯವಾಗಿದ್ದು ಗರ್ಭಗುಡಿ, ಅಂತರಾಳ, ಮುಖ ಮಂಟಪ ಮತ್ತು ವಿಶಾಲವಾದ ಹಜಾರವನ್ನು ಹೊಂದಿದೆ, ಗರ್ಭಗುಡಿಯ ಬಾಗಿಲ ಚೌಕದಲ್ಲಿ ಹೂ

ಬಳ್ಳಿಗಳ ಕೆತ್ತನೆ ಇದ್ದು ದ್ವಾರ ಪಾಲಕರ ಶಿಲ್ಪಗಳು, ಲಲಾಟದಲ್ಲಿ ಗಣಪತಿ, ಶಿವ ಪಾರ್ವತಿ ಮತ್ತು ಗಜಲಕ್ಷ್ಮಿಯ ಕೆತ್ತನೆ ಇದೆ, ದೇವಾಲಯದ ಒಳ ಹಾಗೂ ಹೊರ ಭಾಗದಲ್ಲಿ ಅನೇಕ ಕಲ್ಲಿನ ಶಿಲ್ಪಗಳ ಕೆತ್ತನೆ ಹಾಗೂ ಸಿಮೆಂಟ್ ಮಾಧ್ಯಮದಿಂದ ಮಾಡಿದ ಶಿಲ್ಪಗಳಿವೆ.

ಮುಖ್ಯ ಪ್ರವೇಶ ದ್ವಾರದ ಮೇಲೆ ನಿರ್ಮಿಸಲಾಗಿರುವ ರಾಜ ಗೋಪುರವು ನಾಲ್ಕು ಹಂತಗಳನ್ನು ಒಳಗೊಂಡಿದೆ, ದೇವಾಲಯದ ಕಂಬಗಳ ಶೈಲಿಯಿಂದ ಕ್ರಿ. ಶ. 13–14ನೇ ಶತಮಾನದಲ್ಲಿ ನಿರ್ಮಾಣವಾದ ದೇವಾಲಯವೆಂದು ತಿಳಿಯಬಹುದಾಗಿದೆ, ಪ್ರಾಕಾರವು ವಿಜಯ ನಗರ ಅಥವಾ ಚಿತ್ರದುರ್ಗದ ಪಾಳೆಯಗಾರರ ಶೈಲಿಯಲ್ಲಿರುವುದರಿಂದ ಕ್ರಿ. ಶ. 16–17ನೇ ಶತಮಾನದಲ್ಲಿ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆದಿತ್ತೆಂದು ಹೇಳಲಾಗುತ್ತದೆ, ಸಿಮೆಂಟ್ ಮಾಧ್ಯಮದಿಂದ ವಿವಿಧ ರೀತಿಯ ಶಿಲ್ಪಗಳು ಪ್ರಾಣಿ ಪಕ್ಷಿಗಳು, ಮಾನವನಾಕೃತಿಗಳು, ದೇವರುಗಳು, ಗಿರಿಜಾ ಕಲ್ಯಾಣ, ಅಷ್ಟ ದಿಕ್ಪಾಲಕರು, ಟಗರಿನ ಮೇಲೆ ಕುಳಿತ ಅಗ್ನಿದೇವ, ನಂದಿಯ ಮೇಲೆ ಕುಳಿತ ಈಶಾನ, ಮೇಕೆಯ ಮೇಲೆ ಕುಳಿತ ವಾಯು, ಆನೆಯ ಮೇಲೆ ಕುಳಿತ ಇಂದ್ರ, ನರನ ಮೇಲೆ ಕುಳಿತ ನಿರುತಿ, ವಿವಿಧ ಭಂಗಿಯಲ್ಲಿರುವ ನಗ್ನ ಶಿಲ್ಪಗಳು, ವಿವಿಧ ಲತೆ ಮತ್ತು ಪುಷ್ಪಗಳ ಕಲಾಕೃತಿಗಳನ್ನು ಮಾಡಿದ್ದಾರೆ.

ಹಜಾರದಲ್ಲಿ ಎಂಟು ಕಂಬಗಳಿದ್ದು, ಇದರಲ್ಲಿನ ಮಧ್ಯದ ನಾಲ್ಕು ಕಂಬಗಳು ವಿಶೇಷ ಕೆತ್ತನೆಗಳಿಂದ ಕೂಡಿವೆ, ಪೀಠ, ಪಾದ, ಚೌಕ, ಕಳಸ ಮತ್ತು ಬೋಧಿಗೆಯನ್ನು ಹೊಂದಿದ್ದು, ಕಂಬದ ಮೇಲಿನ ಬೋದಿಗೆಯು ಕಮಲದ ಮೊಗ್ಗುಗಳು ಕೆಳಗಡೆ ನಾಲ್ಕು ಮೂಲೆಗಳಲ್ಲಿ ಇಳಿಬಿದ್ದಿವೆ, ಈ ಕಂಬಗಳ ಚೌಕದ ನಾಲ್ಕು ಮುಖಗಳಲ್ಲಿ ವಿವಿಧ ಕೆತ್ತನೆಯ ಶಿಲ್ಪಗಳಿವೆ, ಅವುಗಳಲ್ಲಿ ಮುಖ್ಯವಾಗಿ ಶಿವ ಪಾರ್ವತಿಯರು, ಗಣಪತಿ, ವೀರಭದ್ರ, ರಾಮ–ಸೀತೆ, ದೇವಿ, ಮಹಿಷಾಸುರ ಮರ್ಧಿನಿ, ವಿಷ್ಣುವಿನ ಅವತಾರಗಳಾದ ವರಾಹ, ಕೂರ್ಮ, ಮತ್ಸ್ಯ, ಪಂಚನಾರಿ, ಪದ್ಮ, ಕುಬೇರ, ನಂದಿ, ನಾಗ ಬಂಧ, ವಿಷ್ಣು, ಆನೆ, ಹನುಮ, ಶಿವತಾಂಡವ, ನೃತ್ಯ ಮಾಡುವವರು, ಬಲರಾಮ, ವ್ಯಾಳ, ಆನೆಯ ಸವಾರ, ಆನೆಯ ದೇಹದಲ್ಲಿ ನವ ದೇವ, ಮಾನವರು, ಪರಶುರಾಮ ಮುಂತಾದ ಕೆತ್ತನೆಯ ಶಿಲ್ಪಗಳಿವೆ.

ಪ್ರಾಕಾರದಲ್ಲಿಯೂ ವಿವಿಧ ಶಿಲ್ಪಗಳ ಕೆತ್ತನೆ ಇದೆ, ಅವುಗಳಲ್ಲಿ ಮೇಲಿನ ಭಾಗದಲ್ಲಿ ಗಿಳಿಗಳ ಸಾಲು, ಇದರ ಮೇಲೆ ಕೋಷ್ಟಗಳಿದ್ದು ಒಂದೊಂದು ಕೋಷ್ಟಗಳಲ್ಲೂ ವಿವಿಧ ರೀತಿಯ ಕೆತ್ತನೆಯ ಶಿಲ್ಪಗಳಿವೆ, ಇದರಲ್ಲಿ ಮುಖ್ಯವಾಗಿ ಗಿರಿಜಾ ಕಲ್ಯಾಣ, ನಾರದ, ವೀರಭದ್ರ, ಷಣ್ಮುಖ, ಶಿವ ಪಾರ್ವತಿ, ವಾಮನ, ಕಾಳಿಂಗ ಮರ್ಧನ, ಬ್ರಹ್ಮ, ನಂದಿ, ಹನುಮ, ವಿಷ್ಣು, ಬೇಡರ ಕಣ್ಣಪ್ಪ, ವರಾಹ, ರಾಧ ಮುಂತಾದ ಆಕರ್ಷಕವಾದ ಶಿಲ್ಪಗಳಿವೆ.

ಗರ್ಭಗುಡಿಯ ಮೇಲ್ಭಾಗದಲ್ಲಿ ಆನೆ, ಕುದುರೆಗಳ ಕೆತ್ತನೆ ಮಾಡಿರುವ ಶಿಲ್ಪಗಳ ಸಾಲು ಇದೆ, ಮುಖಮಂಟಪದ ಮೇಲಿನ ಭಾಗದಲ್ಲಿ ಮುಖ್ಯ ದೇವನಾದ ಪವಾಡ ಪುರುಷ ತಿಪ್ಪೇರುದ್ರ ಸ್ವಾಮಿಯ ಪವಾಡಗಳ ದೃಶ್ಯಗಳನ್ನು ಕೆತ್ತನೆಮಾಡಲಾಗಿದೆ.

20).ಭೈರವೇಶ್ವರ ದೇವಾಲಯ: ಮೊಳಕಾಲ್ಮೂರು ತಾಲ್ಲೂಕು ಕೇಂದ್ರದಿಂದ ಹತ್ತು ಕಿಲೋ ಮೀಟರ್ ಅಂತರದಲ್ಲಿ ನುಂಕಿಮಲೆ ಎಂಬ ಬೆಟ್ಟದ ಮೇಲೆ ಈ ದೇವಾಲಯವಿದೆ, ದಕ್ಷಿಣಾಭಿಮುಖವಾಗಿರುವ ದೇವಾಲಯವು ಗರ್ಭಗುಡಿ, ನವರಂಗ, ಅಂತರಾಳಗಳನ್ನು ಹೊಂದಿದ್ದು, ಗರ್ಭಗುಡಿಯ ಒಳಗೆ ಕತ್ತಿ, ತ್ರಿಶೂಲ, ಡಮರುಗ, ಕಪಾಲವನ್ನು ಹಿಡಿದಿರುವ ಆರು ಅಡಿ ಎತ್ತರದ ಭೈರವನ ಶಿಲ್ಪವಿದೆ, ಲಲಾಟದಲ್ಲಿ ಗಣಪತಿಯ ಕೆತ್ತನೆ ಇದೆ, ದ್ವಾರ ಬಾಗಿಲಿನ ನಿಲುವಿನಲ್ಲಿ ದ್ವಾರ ಪಾಲಕಿಯರ ಕೆತ್ತನೆ ಇದ್ದು ಸ್ತ್ರೀ ರೂಪದ ದ್ವಾರ ಪಾಲಕಿಯರು ಇರುವುದು ಇಲ್ಲಿನ ವಿಶೇಷ, ಈ ರೀತಿಯ ಸ್ತ್ರೀ ದ್ವಾರ ಪಾಲಕಿಯರ ಕೆತ್ತನೆಯ ಬಾಗಿಲುಗಳು ಇರುವ ದೇವಾಲಯಗಳು ತುಂಬಾ ವಿರಳ.

ನವರಂಗದ ವಾಯುವ್ಯ ಮತ್ತು ಈಶಾನ್ಯ ಮೂಲೆಗಳಲ್ಲಿ ವಿವಿಧ ರೀತಿಯ ಕೆತ್ತನೆಯ ಶಿಲ್ಪಗಳು, ವಾಯುವ್ಯದಲ್ಲಿ ಡಮರುಗ, ತ್ರಿಶೂಲ ಮತ್ತು ಕಮಲದ ಪುಷ್ಪಗಳನ್ನು ಹಿಡಿದಿರುವ ಪಾರ್ವತಿಯ ಶಿಲ್ಪ, ನೈರುತ್ಯ ದಿಕ್ಕಿನಲ್ಲಿ ತ್ರಿಶೂಲ, ಕತ್ತಿ, ಡಮರುಗ ಮತ್ತು ಕಮಲದ ಪುಷ್ಪಗಳನ್ನು ಹಿಡಿದು ಕುಳಿತಿರುವ ಶಿಲ್ಪವಿದೆ, ಈ ಎರಡೂ ಶಿಲ್ಪಗಳು ಕೊರಳಲ್ಲಿ ಕಂಠೀಹಾರ, ಕಾಸಿನ ಸರ ಧರಿಸಿದ್ದು ಕಿವಿಗಳಲ್ಲಿ ದೊಡ್ಡ ಗಾತ್ರದ ಕುಂಡಲಗಳು, ಕೈಗಳಲ್ಲಿ ಮತ್ತು ಕಾಲುಗಳಲ್ಲಿ ಕಡಗಗಳನ್ನು ಧರಿಸಿವೆ, ಇಲ್ಲೇ ಸಮೀಪದಲ್ಲಿ ದೇವಋಷಿಯ ಶಿಲ್ಪವಿದೆ, ದೇವಾಲಯದ ಪ್ರವೇಶ ದ್ವಾರದ ಮೇಲೆ ಹೊಸದಾಗಿ ಮೂರು ಕೋಷ್ಟಗಳನ್ನು ಮಾಡಿದ್ದು ಪ್ರತಿಯೊಂದು ಕೋಷ್ಟಗಳಲ್ಲೂ ವಿವಿಧ ಶಿಲ್ಪಗಳಿವೆ, ಒಂದರಲ್ಲಿ ತ್ರಿಶೂಲ, ಡಮರುಗ ಮತ್ತು ರುಂಡದೊಂದಿಗೆ ಕಪಾಲವನ್ನು ಹಿಡಿದಿರುವ ಶಿಲ್ಪವಿದ್ದು, ಈ ಶಿಲ್ಪದ ಕೈಯಲ್ಲಿ ಹಿಡಿದಿರುವ ರುಂಡದಿಂದ ರಕ್ತವು ಕೆಳಕ್ಕೆ ತೊಟ್ಟಿಕ್ಕುತ್ತಿದ್ದು ಆ ರಕ್ತವನ್ನು ನೆಕ್ಕುತ್ತಿರುವ ನಾಯಿ ಮತ್ತು ರಾಕ್ಷಸನ ಶಿಲ್ಪವಿದೆ, ಭೈರವನ ಶಿಲ್ಪದ ಪಕ್ಕದ ಎರಡೂ ಕಡೆಗಳಲ್ಲಿ ತ್ರಿಶೂಲ, ಡಮರುಗವನ್ನು ಹಿಡಿದು ಕುಳಿತಿರುವ ಪಾರ್ವತಿಯರ ಶಿಲ್ಪಗಳಿವೆ, ದೇವಾಲಯ ಶಿಖರದ ಆಧಾರದಿಂದ ಚಾಲುಕ್ಯರ ಅಥವಾ ವಿಜಯನಗರದ ಕಾಲದಲ್ಲಿ ನಿರ್ಮಾಣವಾದ ದೇವಾಲಯವೆಂದು ಹೇಳಲಾಗುತ್ತದೆ.

21). ರಾಮಲಿಂಗೇಶ್ವರ ದೇವಾಲಯ: ಚಳ್ಳಕೆರೆ ತಾಲ್ಲೂಕು ನಾಯಕನ ಹಟ್ಟಿ ಸಮೀಪ ರಾಮದುರ್ಗ ಎಂಬ ಗ್ರಾಮದ ಬಳಿ ಇರುವ ಬೆಟ್ಟದ ಮೇಲೆ ಈ ದೇವಾಲಯವಿದೆ, ಸುಮಾರು ಕ್ರಿ. ಶ. 15–16ನೇ ಶತಮಾನದಲ್ಲಿ ನಿರ್ಮಾಣ ಮಾಡಿದ ದೇವಾಲಯ ಇದಾಗಿದೆ, ದೇವಾಲಯ ಇರುವ ಜಾಗವನ್ನು ಕೆಲವು ಸ್ಥಳೀಯರು ರಾಮಗುಡ್ಡವೆಂದೇ ಕರೆಯುತ್ತಾರೆ, ಬೃಹದಾಕಾರದ ಗ್ರಾನೈಟ್ ಕಲ್ಲಿನ ಬೆಟ್ಟವನ್ನು ಕೊರೆದು ಮಾಡಿದ ಗುಹಾಂತರ ದೇವಾಲಯವಿದು, ಪಶ್ಚಿಮ ದಿಕ್ಕಿನ ಕಡೆಯಿಂದ ಕಲ್ಲಿನ ಗುಡ್ಡವನ್ನು ಕೊರೆಯುತ್ತಾ ದೇವಸ್ಥಾನದ ಪ್ರವೇಶದ್ವಾರ, ಕಟಾಂಜನೆಗಳು, ಎಂಟು ಕಂಬಗಳ ಹಜಾರ, ಗರ್ಭಗುಡಿ, ಗರ್ಭಗುಡಿಯ ದ್ವಾರ ಬಾಗಿಲು, ರಾಮೇಶ್ವರನ ಪೀಠ ಸಹಿತ ಲಿಂಗ ಹೀಗೆ ಎಲ್ಲವನ್ನೂ ಸ್ಥಿರವಾದ ಒಂದೇ ಕಲ್ಲಿನಿಂದ ಕೊರೆದು ಮಾಡಿರುವುದು ವಿಶೇಷ, ದೇವಾಲಯದಲ್ಲಿ ಒಟ್ಟು ಎಂಟು ಕಂಬಗಳಿದ್ದು ಆರು ಅಂಕಣಗಳನ್ನು ಹೊಂದಿದೆ, ಆರು ಅಂಕಣಗಳ ಮೇಲಿನ (ವಿತಾನ)ಭಾಗದಲ್ಲಿ ಕೆಳಗಡೆ ಮುಖಮಾಡಿದ ಪದ್ಮದ ಕೆತ್ತನೆ ಇದೆ, ಈ ಪದ್ಮದ ಕೆತ್ತನೆಯ ಸುತ್ತಲೂ ಗರುಡ, ನಾಟ್ಯಮಾಡುತ್ತಿರುವ ವಿಷ್ಣು, ಲಕ್ಷ್ಮಿ, ವಾದ್ಯ ನುಡಿಸುವವನು, ಅನಂತ ಶಯನ, ಶಿವ ಪಾರ್ವತಿ, ರಾಮ ಸೀತೆ, ಕಾಳಿಂಗ ಮರ್ಧನ, ಮಹಿಷಾಸುರ ಮರ್ಧಿನಿ, ನಂದಿ, ಬ್ರಹ್ಮ, ಲಕ್ಮಣ, ವೀರಭದ್ರ, ವಾಹನದ ಮೇಲೆ ಕುಳಿತಿರುವ ಅಷ್ಟ ದಿಕ್ಪಾಲಕರು ಮುಂತಾದ ಕೆತ್ತನೆಯ ಶಿಲ್ಪಗಳಿವೆ.

ಕಂಬಗಳಲ್ಲಿ ನಾಲ್ಕು ಕಂಬಗಳು ಸಾಧಾರಣವಾಗಿದ್ದು, ಉಳಿದ ನಾಲ್ಕು ಕಂಬಗಳು ಸ್ವಲ್ಪ ದೊಡ್ಡದಾಗಿವೆ, ಈ ಕಂಬಗಳು ಪೀಠ, ಪಾದ, ಚೌಕಾಕಾರ, ಬೋಧಿಗೆಯನ್ನು ಹೊಂದಿವೆ, ಕೆಳಗಡೆ ದಪ್ಪವಿರುವ ಈ ಕಂಬಗಳು ಮೇಲಕ್ಕೆ ಹೋದಂತೆ ಚಿಕ್ಕದಾಗಿ ರಚನೆಗೊಂಡಿವೆ, ಕಂಬದ ಮೇಲಿನ ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ಕೆಳಗೆ ಇಳಿಬಿದ್ದ ಕಮಲದ ಹೂ ಮೊಗ್ಗಿನ ಕೆತ್ತನೆ ಇದೆ, ಹೊರಗಿನಿಂದ ದೇವಸ್ಥಾನವನ್ನು ಪ್ರವೇಶಿಸಲು ನಾಲ್ಕು ಅಡಿ ಕೆಳಗೆ ಇಳಿಯಬೇಕು, ನಂತರ ಹಜಾರಕ್ಕೆ ಪ್ರವೇಶ ಪಡೆಯಲು ಎರಡು ಮೆಟ್ಟಿಲನ್ನು ಇಳಿಯಬೇಕು, ಅಲ್ಲಿಂದ ಗರ್ಭಗುಡಿಗೆ ಹೋಗಲು ಎರಡು ಮೆಟ್ಟಿಲನ್ನು ಹತ್ತಬೇಕು, ಗರ್ಭಗುಡಿಯ ಒಳಗೆ ಹಿಂಬದಿಯ ಒಳಭಿತ್ತಿಯ ಕೋಷ್ಟಕದಲ್ಲಿ ನಾಗಶಿಲ್ಪದ ಕೆತ್ತನೆ ಇದೆ, ಗರ್ಭಗುಡಿಯ ಬಾಗಿಲಿನ ಚೌಕದ ನಿಲುವಿನಲ್ಲಿ ಶೈವ ದ್ವಾರ ಪಾಲಕರಿದ್ದಾರೆ, ಹಜಾರದ ಮುಂಭಾಗ ಶಿವಲಿಂಗಕ್ಕೆ ಎದುರಿಗೆ ಕುಳಿತಿರುವ ನಂದಿಯ ದೊಡ್ಡ ಶಿಲ್ಪವಿದೆ.

ಈ ಗುಹಾಂತ ದೇವಾಲಯವನ್ನು ನುರಿತ ಸಂಪ್ರದಾಯ ಶಿಲ್ಪ ಕಲಾವಿದರು ಸಾಕಷ್ಟು ಶ್ರಮ ವಹಿಸಿ ಕೆತ್ತನೆ ಮಾಡಿದ್ದಾರೆ, ದೇವಾಲಯಕ್ಕೆ ಎಲ್ಲೂ ಬೇರೆ ಯಾವುದೇ ಕಲ್ಲನ್ನು ಬಳಸಿಲ್ಲ, ಒಂದೇ ಕಲ್ಲಿನಲ್ಲಿ ಕೊರೆದು ಮಾಡಿದ್ದಾರೆ, ನೆಲೆ, ಮಾಳಿಗೆ, ಬಾಗಿಲು, ಕಂಬಗಳು, ಕಂಬಗಳ ಮೇಲೆ ಕೆತ್ತನೆ, ಗೋಡೆ, ತೊಲೆ, ಬಾಗಿಲ ವಾಡೆ, ಇದರ ಮೇಲಿನ ಕೆತ್ತನೆ ಹೀಗೆ ಎಲ್ಲವೂ ಸೂಕ್ಷ್ಮವಾಗಿ ಮತ್ತು ಸುಂದರವಾಗಿ ಕೆತ್ತನೆ ಮಾಡಲಾಗಿದೆ, ಶಿಲ್ಪಿಯು ತುಂಬಾ ಶ್ರದ್ಧೆವಹಿಸಿ ಕೆತ್ತನೆ ಮಾಡಿದ್ದಾನೆ, ಯಾಕೆಂದರೆ ಬಹಳ ಎಚ್ಚರಿಕೆಯಿಂದ ಇರಬೇಕು ಸ್ವಲ್ಪ ಎಚ್ಚರಿಕೆ ತಪ್ಪಿದರೂ ಬಹಳ ದಿನಗಳಿಂದ ಮಾಡಿದ ಕೆಲಸ ಹಾಳಾಗುತ್ತದೆ, ಹಾಗಾಗಿ ಮುಂಜಾಗ್ರತೆಯನ್ನು ವಹಿಸಬೇಕು, ಜೊತೆಗೆ ಚಾಣಾಕ್ಯತೆಯೂ ಇರಬೇಕು, ಹೆಜ್ಜೆ ಹೆಜ್ಜೆಗೂ ಬಹಳ ಎಚ್ಚರಿಕೆ ವಹಿಸಬೇಕು, ಹಾಗಿದ್ದಲ್ಲಿ ಮಾತ್ರ ಇಂತಹ ಸೂಕ್ಷ್ಮ ಮತ್ತು ಸುಂದರ ಕೆತ್ತನೆಯ ಗುಹಾಂತ ದೇವಾಲಯ ನಿರ್ಮಾಣ ಸಾಧ್ಯ, ಇದು ತುಂಬಾ ಕಷ್ಟದಾಯಕ ಕೆಲಸ, ಈ ಕಾರಣದಿಂದ ಇಂದು ಇಂತಹ ಗುಹಾಂತ ದೇವಾಲಯದ ನಿರ್ಮಾಣ ಮಾಡುವ ಸಾಹಸಕ್ಕೆ ಯಾರೂ ಕೈ ಹಾಕುವುದಿಲ್ಲ, ದೇವಸ್ಥಾನದ ನವರಂಗದ ಮೇಲ್ಹಾವಣೆಯ ಮೇಲೆ(ವಿತಾನ) ಕೆಳಗಡೆಗೆ ಮುಖಮಾಡಿದ ಪದ್ಮ ಕೆತ್ತನೆಯ ಇದೆ, ಇಲ್ಲಿ ಆರು ಅಂಕಣಗಳಿದ್ದು ಆರು ಅಂಕಣಗಳಲ್ಲೂ ಬೇರೆ ಬೇರೆ ರೀತಿಯ ಪದ್ಮ ಕೆತ್ತನೆ ಇದೆ.

ರಾಮಲಿಂಗೇಶ್ವರ ದೇವಾಲಯದ ನವರಂಗದಲ್ಲಿರುವ ವಿತಾನದ ಪದ್ಮ ಕೆತ್ತನೆ ನೋಟ:





ರಾಮಲಿಂಗೇಶ್ವರ ಗುಹಾಂತರ ದೇವಾಲಯದ ದ್ವಾರ ಬಾಗಿಲು ಬಳಿ ಇರುವ ನಂದಿ :

22). ಸಿದ್ದೇಶ್ವರ ದೇವಾಲಯ: ಹೊಸದುರ್ಗ ತಾಲ್ಲೂಕು ವ್ಯಾಪ್ತಿಯ ನೀರ್ಗುಂದ ಎಂಬ ಕುಗ್ರಾಮದಲ್ಲಿ ಈ ದೇವಾಲಯವಿದೆ, ಪೂರ್ವಾಭಿಮುಖವಾಗಿದ್ದು ಹೊಯ್ಸಳ ಶೈಲಿಯಲ್ಲಿದೆ, ತಳವಿನ್ಯಾಸದಲ್ಲಿ ಗರ್ಭಗುಡಿ, ನವರಂಗ, ಅಂತರಾಳ ಮತ್ತು ಮುಖಮಂಟಪವನ್ನು ಹೊಂದಿದ್ದು ಗರ್ಭಗುಡಿಯ ಒಳಗೆ ಶಿವನ ಲಿಂಗವಿದೆ, ಅಂತರಾಳದ ಮಧ್ಯಭಾಗದಲ್ಲಿ ಜೋಡು ನಂದಿಗಳ ಶಿಲ್ಪ, ದೇವಾಲಯದಲ್ಲಿ ಗಿಡ ಬಳ್ಳಿಗಳ ಕೆತ್ತನೆ, ಪ್ರಾಣಿ ಪಕ್ಷಿಗಳ ಕೆತ್ತನೆ, ನಂದಿ, ಬ್ರಹ್ಮ, ನಟರಾಜ, ವಿಷ್ಣು, ಕಾರ್ತಿಕೇಯ, ಗೋಪಾಲ ಕೃಷ್ಣ, ಇಂದ್ರ, ಅಗ್ನಿ, ಯಮ, ನಿರುತ್ತಿ, ವಾಯು, ವರುಣ, ಕುಬೇರ, ಈಶಾನ ಶಿಲ್ಪಗಳಿದ್ದು, ಜೊತೆಗೆ ಕತ್ತಿ, ಗುರಾಣಿ ಹಿಡಿದಿರುವ ಯೋಧರು ಮುಂತಾದ ಶಿಲ್ಪಗಳಿವೆ, ಮೂರು ಗರ್ಭಗುಡಿಗಳಿರುವ ಈ ದೇವಾಲಯದಲ್ಲಿ ಮೂರಕ್ಕೂ ಒಂದೇ ನವರಂಗವಿದ್ದು ನಾಲ್ಕು ಹೊಯ್ಸಳ ಶೈಲಿಯ ಕಂಬಗಳಿವೆ, ಕಂಬಗಳು ಪೀಠ, ಪಾದ, ಕಾಂಡ, ಚೌಕ ಮುಖಗಳು, ಬೋದಿಗೆಯನ್ನು ಹೊಂದಿವೆ, ದೇವಾಲಯದ ಕಲಾತ್ಮಕ ಕೆತ್ತನೆಯನ್ನು ಗಮನಿಸಿದರೆ ಇದು ಕ್ರಿ.ಶ. 11–12ನೇ ಶತಮಾನದಲ್ಲಿ ನಿರ್ಮಾಣ ಮಾಡಿರಬಹುದಾಗಿದೆ.

23).ಚನ್ನಕೇಶವ ದೇವಾಲಯ: ಹೊಸದುರ್ಗ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ದೇವಾಲಯವಿದ್ದು ಹೊಯ್ಸಳರ ಕಾಲಮಾನದಲ್ಲಿ ನಿರ್ಮಾಣವಾಗಿದೆ, ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದ್ದರೂ ಕೂಡ ಹಂತ ಹಂತವಾಗಿ ವಿಜಯ ನಗರದ ಅರಸರು, ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ಬೆಳವಣಿಗೆಯನ್ನು ಕಂಡಿದೆ, ಜೀರ್ಣೋದ್ಧಾರವಾಗಿದೆ.

ಪೂರ್ವಾಭಿಮುಖವಾಗಿರುವ ದೇವಾಲಯವು ತಳ ವಿನ್ಯಾಸದಲ್ಲಿ ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ ಮತ್ತು ಸಭಾಮಂಟಪಗಳನ್ನು ಒಳಗೊಂಡಿದೆ, ಗರ್ಭಗುಡಿಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ವಿಷ್ಣುವಿನ ಶಿಲ್ಪವಿದೆ, ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮವನ್ನು ಹಿಡಿದಿದ್ದು ಆಕರ್ಷಣೀಯವಾಗಿದೆ, ಈ ದೇವರ ಅಕ್ಕ ಪಕ್ಕದಲ್ಲಿ ಶ್ರೀದೇವಿ ಮತ್ತು ಭೂದೇವಿಯರ ಶಿಲ್ಪಗಳಿವೆ, ಪೀಠದಲ್ಲಿ ಅಂಜಲಿ ಮುದ್ರೆಯ ಗರುಡನ ಸಣ್ಣ ಶಿಲ್ಪವಿದೆ, ಅಂತರಾಳದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯರ ಉತ್ಸವ ಮೂರ್ತಿಗಳಿವೆ, ನವರಂಗದಲ್ಲಿ ನಾಲ್ಕು ಕಂಬಗಳ ಅಂಕಣವಿದೆ, ಈ ಕಂಬಗಳು ಪೀಠ, ಪಾದ, ಚೌಕ ಮುಖ, ಫಲಕ ಮತ್ತು ಬೋದಿಗೆಯನ್ನು ಹೊಂದಿವೆ, ಇಲ್ಲಿರುವ ಒಂದು ಕೋಷ್ಟಕದಲ್ಲಿ ಚಿತ್ರದುರ್ಗದ ಪಾಳೆಯಗಾರನಾದ ಓಬಣ್ಣ ನಾಯಕನು ಮಾಡಿಸಿದ ಆರು ಅಡಿ ಎತ್ತರವಿರುವ ಬಂಗಾರದ ಎರಕದ ಗರುಡನ ಶಿಲ್ಪವಿದೆ.

ತೆರೆದ ಮಂಟಪಕ್ಕೆ ಅಳವಡಿಸಿರುವ ಕಂಬಗಳು ಪೀಠ. ಪಾದ, ಕಲಶ, ಚೌಕ, ಬೋದಿಗೆಗಳನ್ನು ಹೊಂದಿದ್ದು ಎರಡು ಕಂಬಗಳಲ್ಲಿರುವ ನಾಲ್ಕು ದಿಕ್ಕಿನ ಮುಖದ ಮೇಲೆ ವಿವಿಧ ರೀತಿಯ ಕೆತ್ತನೆ ಇದೆ, ಕಾಳಿಂಗ ಮರ್ಧನ, ವರಾಹ, ಅನಂತಶಯನ, ಗೌರಿ, ನರಸಿಂಹ, ರಾಮ, ಪರಶುರಾಮ, ಆನೆ, ಮತ್ಸ್ಯ, ಕೂರ್ಮ, ಗೋಪಾಲಕೃಷ್ಣ, ನಗ್ನರೂಪದ ಪುರುಷ, ನೇಗಿಲನ್ನು ಹಿಡಿದಿರುವ ಮಹಿಳೆ ಮುಂತಾದ ಕೆತ್ತನೆಯ ಶಿಲ್ಪಗಳಿವೆ, ಮುಖ್ಯ ದೇವಾಲಯದ ಎದುರುಗಡೆ ಒಂದು ಚಿಕ್ಕದಾದ ಗುಡಿ ಇದ್ದು ಇದರ ಒಳಗೆ ಎರಡು ಘಟ ಸರ್ಪಗಳನ್ನು ಧರಿಸಿರುವ ಗರುಡನ ಶಿಲ್ಪವಿದ್ದು ಇದನ್ನು ದೃಷ್ಟಿ ಗರುಡ ಎನ್ನುತ್ತಾರೆ, ಮುಖ್ಯ ದೇವಾಲಯದ ವಾಯುವ್ಯ ಭಾಗದಲ್ಲಿ ಒಂದು ತೆರೆದ ಮಂಟಪವಿದ್ದು ಈ ಮಂಟಪಕ್ಕೆ ಇಟ್ಟಿಗೆ ಮತ್ತು ಗಾರೆ ಮಾಧ್ಯಮದಿಂದ ಶಿಖರವನ್ನು ಮಾಡಲಾಗಿದೆ, ಶಿಖರದಲ್ಲಿ ವಿವಿಧ ರೀತಿಯ ಶಿಲ್ಪಗಳಾದ ಶ್ರೀದೇವಿ, ಭೂದೇವಿ, ಅನಂತಶಯನ, ಗಜಲಕ್ಷ್ಮಿ, ವಿಷ್ಣುವಿನ ಶಿಲ್ಪಗಳು, ಆಳ್ವಾರ್‌ರ ಶಿಲ್ಪಗಳಿವೆ, ಇಲ್ಲಿರುವ ಕಂಬಗಳ ಚೌಕಾಕಾರದ ಮುಖಗಳಲ್ಲಿ ಹಲವು ರೀತಿಯ ಉಬ್ಬು ಶಿಲ್ಪಗಳಿವೆ.

ಮುಖ್ಯ ದೇವಾಲಯದ ಬಲಭಾಗದಲ್ಲಿ ಕಲ್ಲಿನ ಪ್ರಾಂಗಣವಿದೆ, ಇಲ್ಲಿ ನಾರಾಯಣನ ಗುಡಿ ಇದ್ದು ಗುಡಿಯ ಒಳಗೆ ಮೇಲಕ್ಕೆ ಹಾರುವಂತೆ ಇರುವ ಗರುಡನ ಮೇಲೆ ಕುಳಿತಿರುವ ವೈಕುಂಠ ನಾರಾಯಣನ

ಶಿಲ್ಪವಿದೆ, ನಾಲ್ಕು ಕೈಗಳನ್ನು ಹೊಂದಿರುವ ನಾರಾಯಣನು ತನ್ನ ಕೈಗಳಲ್ಲಿ ಪದ್ಮ, ಚಕ್ರ, ಗದೆಯನ್ನು ಹಿಡಿದಿದ್ದಾನೆ, ನಾರಯಣನ ತೊಡೆಯ ಮೇಲೆ ಲಕ್ಷ್ಮಿ ಕುಳಿತಿದ್ದಾಳೆ, ನಾರಾಯಣನ ಶಿಲ್ಪದ ಅಕ್ಕ ಪಕ್ಕದಲ್ಲಿ ಕೊರತ್ತಾಳ್ವರು, ಪೆರಿಯಾಳ್ವರು, ನಮ್ಮಾಳ್ವರು, ತೊಂಡರಪ್ಪಾಡಿ ಆಳ್ವಾರು, ತಿರುಮಳೈಶಯ್ಯಾಳ್ವಾರು, ಪೇಯಾಳ್ವರು, ಶ್ರೀಮತಿ ಆಂಡಾಳ್ವರು, ತಿರುಮಂಗಳೈ ಆಳ್ವಾರು, ಮದುರ ಕವಿ ಆಳ್ವಾರು, ತಿರುಪ್ಪನಾಳ್ವಾರು, ಪೊದತ್ತಾಳ್ವಾರು, ಕುಲಶೇಖರಾಳ್ವಾರುಗಳ ಶಿಲ್ಪಗಳು ಕೈ ಮುಗಿದುಕೊಂಡು ಕುಳಿತಿವೆ, ಈ ಶಿಲ್ಪಗಳ ಕಿವಿಗಳು ಸ್ವಲ್ಪ ಉದ್ದವಾಗಿವೆ, ತಲೆಯ ಮೇಲೆ ತುರುಬು ಕಟ್ಟಿದ್ದು, ಕೊರಳಲ್ಲಿ ರುದ್ರಾಕ್ಷಿ ಸರವನ್ನು ಧರಿಸಿವೆ, ದ್ವಾರ ಮಂಟಪದ ಪ್ರವೇಶದ ಬಲಗಡೆ ಮುಖ್ಯ ದೇವಾಲಯಕ್ಕೆ ಎದುರುಗಡೆ ಇರುವ ಒಂದು ಪಟ್ಟಿಕೆಯಲ್ಲಿ ತಲೆಯ ಮೇಲೆ ಉದ್ದನೆಯ ಪೇಟ ಮತ್ತು ಪಂಚೆ ರೀತಿಯ ಉಡುಪು, ಹಲವು ಒಡವೆಗಳನ್ನು ಧರಿಸಿದ್ದು ಕೈ ಮುಗಿದುಕೊಂಡು ನಿಂತಿರುವ ನಾಲ್ಕು ಜನ ಪುರುಷರು ಮತ್ತು ಒಬ್ಬರು ಸ್ತ್ರೀ ರೂಪದ ಶಿಲ್ಪಗಳಿವೆ, ಕೆಲವರು ಈ ಶಿಲ್ಪಗಳನ್ನು ಚಿತ್ರದುರ್ಗದ ಪಾಳೆಯಗಾರರು ಎಂದು ಹೇಳುತ್ತಾರೆ.

24).ತೇರು ಮಲ್ಲೇಶ್ವರ ದೇವಾಲಯ: ಹಿರಿಯೂರು ನಗರದ ಮಧ್ಯಭಾಗದಲ್ಲಿರುವ ಈ ದೇವಾಲಯದ ಮುಖ್ಯ ದ್ವಾರ ಬಾಗಿಲು ಪೂರ್ವ ದಿಕ್ಕಿಗೆ ಇದ್ದು, ಗರ್ಭಗುಡಿಯ ಬಾಗಿಲು ದಕ್ಷಿಣಾಭಿಮುಖವಾಗಿದೆ, ತಳ ವಿನ್ಯಾಸದಲ್ಲಿ ಗರ್ಭಗುಡಿ, ಮಂಟಪ, ಅಂತರಾಳ, ಸಭಾಮಂಟಪ ಹಾಗೂ ನವರಂಗವನ್ನು ಒಳಗೊಂಡಿದೆ, ಗರ್ಭಗುಡಿಯಲ್ಲಿ ಶಿವನಲಿಂಗವಿದೆ, ಇದರ ಎದುರಿಗೆ ಅಂತರಾಳದಲ್ಲಿ ಕುಳಿತಿರುವ ನಂದಿ, ಲಲಾಟದಲ್ಲಿ ಶಿವಲಿಂಗದ ಕೆತ್ತನೆ ಇದ್ದು, ಬಾಗಿಲಿನ ಕೆಳಗೆ ಪೂರ್ಣ ಕಳಸಗಳಿವೆ, ಪೇದ್ಯದಲ್ಲಿ ದ್ವಾರ ಪಾಲಕರಿದ್ದಾರೆ.

ನವರಂಗಕ್ಕೆ ಅಳವಡಿಸಿರುವ ಕಂಬಗಳು ಪೀಠ, ಪಾದ, ಆರು ಆಯತಾ ಮುಖಗಳು, ಬೋದಿಗೆಗಳನ್ನು ಹೊಂದಿದ್ದು, ಕಂಬದ ಪ್ರತಿ ಆಯತಗಳ ಮುಖಗಳ ಮೇಲೆ ವೀರಭದ್ರ, ಇಂದ್ರ, ಕುಬೇರ, ವಾದ್ಯ ನುಡಿಸುವವನು, ನಾಟ್ಯರಾಣಿ, ಹಾವಾಡಿಗ, ಅಗ್ನಿ, ವಾಯು, ವರುಣ, ಹಂಸ, ದೇವಿ, ಕಾಮಧೇನು, ಭೈರವ, ನಂದಿಯ ಮೇಲೆ ಕುಳಿತಿರುವ ಶಿವ, ಗಣಪತಿ, ಬೇಡರ ಕಣ್ಣಪ್ಪ ಮುಂತಾದ ಸುಂದರ ಕೆತ್ತನೆಯ ಶಿಲ್ಪಗಳು ರಾರಾಜಿಸುತ್ತವೆ, ನವರಂಗದ ಮೇಲ್ಛಾವಣೆಯಲ್ಲಿ ಪದ್ಮದ ಅಲಂಕರಣೆ ಇದ್ದು ಈ ಪದ್ಮವನ್ನು ಗಿಣಿಗಳು ಸುತ್ತುವರಿದಿವೆ, ಸಭಾ ಮಂಟಪದಲ್ಲಿ ಇರುವ ಕಂಬಗಳ ಮೇಲೆ ಶಂಖ–ಚಕ್ರ, ವ್ಯಾಳ, ನಂದಿ, ಯತಿ, ನಾಟ್ಯಗಾರರು, ಹಂಸ, ಪುಂಗಿಯನ್ನು ಊದುತ್ತಿರುವವನು, ಪೂರ್ಣ ಕಳಸ, ಗಂಡುಬೇರುಂಡ, ಬೇಡರ ಕಣ್ಣಪ್ಪ ಮುಂತಾದ ಶಿಲ್ಪಗಳಿವೆ.

ದೇವಾಲಯದ ಸುತ್ತಲೂ ಮತ್ತು ಅಲ್ಲಲ್ಲಿ ವಿವಿಧ ರೀತಿಯ ಕೆತ್ತನೆಯ ಶಿಲ್ಪಗಳಿವೆ, ದೇವಾಲಯದ ಸುತ್ತಲೂ ಪ್ರಾಂಗಣವಿದೆ, ಪೂರ್ವ ದಿಕ್ಕಿಗೆ ಇರುವ ದ್ವಾರ ಮಂಟಪಕ್ಕೆ ಅಳವಡಿಸಿರುವ ಕಂಬಗಳಲ್ಲಿ ಗಣಪತಿ, ಯತಿ, ಭೈರವ, ನಾಗಬಂಧ, ಪದ್ಮರವರುಗಳ ಕೆತ್ತನೆ ಇದೆ, ಮುಖ್ಯ ದ್ವಾರ ಮಂಟಪದ ಮೇಲೆ ಐದು ಅಂತಸ್ತುಗಳ ರಾಜ ಗೋಪುರವಿದೆ, ದೇವಾಲಯವನ್ನು ಶಿಲ್ಪಕಲೆಗಳಿಗೆ ಹೆಚ್ಚಿನ ಮಾನ್ಯತೆ ಕೊಟ್ಟು ನಿರ್ಮಾಣ ಮಾಡಿದ್ದಾಗಿದೆ, ದೇವಲಯದ ಮುಂಭಾಗ ನಾಗ ಶಿಲ್ಪಗಳಿರುವ ಕಟ್ಟೆ ಇದೆ, ಇಲ್ಲಿ ದೊಡ್ಡದಾದ ದೀಪಕಂಬವಿದ್ದು ಕಂಬದ ಕೆಳಗೆ ಒಂದು ಕಡೆ ನಂದಿ, ಮತ್ತೊಂದು ಕಡೆ ಒಬ್ಬ ನಾಯಕನ ಶಿಲ್ಪವಿದೆ.

ಹಿರಿಯೂರು ನಗರದ ತೇರುಮಲ್ಲೇಶ್ವರ ದೇವಾಲಯದಲ್ಲಿನ ಶಿಲ್ಪಗಳು:





ದೇವಾಲಯದ ದ್ವಾರಬಾಗಿಲ ನಿಲುವುಗಳಲ್ಲಿ ಕೆತ್ತನೆ ಮಾಡಿರುವ ದ್ವಾರ ಪಾಲಕರ ಶಿಲ್ಪಗಳು :

25). ಬಾಣದ ರಂಗನಾಥ ಸ್ವಾಮಿ ದೇವಸ್ಥಾನ: ಹೊಸದುರ್ಗ ತಾಲ್ಲೂಕು ಮತ್ತೋಡು ಗ್ರಾಮದಲ್ಲಿರುವ ದೇವಾಲಯವು ಗರ್ಭಗುಡಿ, ನವರಂಗ, ಮುಖಮಂಟಪ ಮತ್ತು ಅಂತರಾಳಗಳನ್ನು ಹೊಂದಿದೆ, ಗರ್ಭಗುಡಿಯ ಒಳಗೆ ವಿಷ್ಣುವಿನ ಮೂರ್ತಿ ಇದೆ, ವಿಷ್ಣು ಕುಳಿತಿರುವ ಪೀಠದಲ್ಲಿ ಗರುಡನ ಉಬ್ಬು ಕೆತ್ತನೆ ಇದೆ, ನಾಲ್ಕು ಕೈಗಳನ್ನು ಹೊಂದಿರುವ ವಿಷ್ಣುವು ತನ್ನ ಕೈಗಳಲ್ಲಿ ಶಂಖ ಚಕ್ರ ಮತ್ತು ಬಿಲ್ಲು ಬಾಣಗಳನ್ನು ಹಿಡಿದಿದೆ, ಗರ್ಭಗುಡಿಯ ಬಾಗಿಲಿನ ನಿಲುವುಗಳಲ್ಲಿ ದ್ವಾರ ಪಾಲಕರಿದ್ದಾರೆ, ನವರಂಗಕ್ಕೆ ಅಳವಡಿಸಿರುವ ಕಂಬಗಳು ಪೀಠ, ಪಾದ, ಚೌಕ ಹಾಗೂ ಪುಷ್ಪ ಬೋಧಿಗೆಯನ್ನು ಹೊಂದಿವೆ, ದೇವಾಲಯವನ್ನು ಕ್ರಿ. ಶ. 15–16ನೇ ಶತಮಾನದಲ್ಲಿ ನಿರ್ಮಾಣ ಮಾಡಿರಬಹುದಾಗಿದೆ.

ಪರಾಮರ್ಶನ ಗ್ರಂಥಗಳು :–

1). ವಿಶ್ವಕರ್ಮ ಶಿಲ್ಪ ಶಾಸ್ತ್ರಂ.

2). ಹಿರಿಯೂರು ತಾಲ್ಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು: ವಿಧ್ಯಾಶ್ರೀ ಎಸ್.ಹೆಚ್.

3). ಚಿತ್ರದುರ್ಗ– ದಾವಣಗೆರೆ ಜಿಲ್ಲೆಗಳ ದೇವಾಲಯಗಳು:ಡಾ" ಬಿ. ಸುರೇಶ.

ಅಧ್ಯಾಯ – 4

ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದ ಶಿಲ್ಪಕಲೆ

1. **ಚಳ್ಳಕೆರೆ ತಾಲ್ಲೂಕಿನ ರಥಗಳ (ರಥಶಿಲ್ಪಗಳಿರುವ)ಸ್ಥಳಗಳು**
2. **ಚಳ್ಳಕೆರೆ ತಾಲ್ಲೂಕಿನ ರಥಗಳ ಶಿಲ್ಪ ವೈವಿಧ್ಯತೆಗಳು ಹಾಗೂ ರಥೋತ್ಸವಗಳು**
3. **ಚಿತ್ರದುರ್ಗ ಜಿಲ್ಲೆಯ ಸಂಪ್ರದಾಯ ಶಿಲ್ಪಕಲಾವಿದರ ವಿವರ**

ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದ ಶಿಲ್ಪಕಲೆ

1. ಚಳ್ಳಕೆರೆ ತಾಲ್ಲೂಕಿನ ರಥಗಳು ಹಾಗೂ (ರಥಶಿಲ್ಪಗಳಿರುವ)ಸ್ಥಳಗಳು:

1).ಹೊಟ್ಟೆಪ್ಪನಹಳ್ಳಿ	2).ಮಧುರೆ	3).ಸಿದ್ದಾಪುರ
4).ದುಗ್ಗಾವರ(ದುರ್ಗಾವರ)	5).ನಾಯಕನಹಟ್ಟಿ	6).ತಿಮ್ಮಪ್ಪಯ್ಯನಹಳ್ಳಿ
7).ಎನ್.ಗೌರೀಪುರ	8).ಗಜ್ಜುಗಾನಹಳ್ಳಿ	9).ಪಗಡಲ ಬಂಡೆ
10).ಚೌಳೂರು	11).ಸೂರನಹಳ್ಳಿ	12).ಕಡೇಹುಡೆ
13).ರೇಣುಕಾಪುರ	14).ನೇರ್ಲಗುಂಟೆ	15).ಕುರುಡಿಹಳ್ಳಿ
16).ದೊಡ್ಡ ರಾಮಜೋಗಿಹಳ್ಳಿ	17).ಪಿ.ಗೌರೀಪುರ	18).ಚಳ್ಳಕೆರೆ
19).ಎನ್.ಮಹದೇವಪುರ	20).ಮಲ್ಲೂರಹಳ್ಳಿ	21).ಹಿರೇಹಳ್ಳಿ
22).ಮನ್ನೇಕೋಟೆ	23).ತಳಕು	24).ತಿಮ್ಮನಹಳ್ಳಿ
25).ಭರಮಸಾಗರ	26).ಬಂಜಗೆರೆ	27).ಬೇಡರೆಡ್ಡಿಹಳ್ಳಿ
28).ಟಿ.ಎನ್.ಕೋಟೆ	29).ಹೊನ್ನೂರು	30).ಮಲ್ಲಸಮುದ್ರ
31).ಹನುಮಂತನಹಳ್ಳಿ	32).ದೇವರೆಡ್ಡಿಹಳ್ಳಿ	33).ನಾಗಗೊಂಡನಹಳ್ಳಿ
34).ಕಾಮಸಮುದ್ರ	35).ಕಾಲುವೆಹಳ್ಳಿ	36).ಮತ್ಸಮುದ್ರ
37).ಹರವಿ ಗೊಂಡನಹಳ್ಳಿ	38).ಜುಂಜರಗುಂಟೆ	39).ತಪ್ಪಗೊಂಡನಹಳ್ಳಿ
40).ಕಾಪರ ಹಳ್ಳಿ	41).ಬೆಳಗೆರೆ	42).ಓಬಳಾಪುರ
43).ಕೋಡಿಹಳ್ಳಿ	44).ವಡೇರಹಳ್ಳಿ	45).ಚಿಕ್ಕಹಳ್ಳಿ
46).ಚನ್ನಮ್ಮನಾಗತಿಹಳ್ಳಿ	47).ತಿಪ್ಪರೆಡ್ಡಿಹಳ್ಳಿ	48).ಪಿ.ಮಹದೇವಪುರ

2. ಚಳ್ಳಕೆರೆ ತಾಲ್ಲೂಕಿನ ರಥಗಳ ಶಿಲ್ಪ ವೈವಿಧ್ಯತೆಗಳು ಹಾಗೂ ರಥೋತ್ಸವಗಳು :

1). ಹೊಟ್ಟೆಪ್ಪನ ಹಳ್ಳಿ, ಉಜ್ಜನಿ ಸಿದ್ದೇಶ್ವರನ ರಥ:

ಚಳ್ಳಕೆರೆ ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಗೆ ಸೇರಿದ ಈ ಗ್ರಾಮದಲ್ಲಿ ಹರತಿ ಪಾಳೇಗಾರನಾಗಿದ್ದ ಹೊಟ್ಟೆಪ್ಪನಾಯಕನು ಊರಿನ ಪಶ್ಚಿಮಕ್ಕೆ ಉಜ್ಜನಿ ಸಿದ್ದೇಶ್ವರ ಮಲ್ಡಿ ಬಳಿ ಇದ್ದ ಜನವಸತಿ ಪ್ರದೇಶವನ್ನು ಸ್ಥಳಾಂತರಿಸಿ ಊರನ್ನು ಕಟ್ಟಿದ್ದರಿಂದ ಈ ಹೆಸರು ಬಂದಿರಬಹುದಾಗಿದೆ, ಮರಡಿ ಜಾಗದಿಂದ ಊರು ಸ್ಥಳಾಂತರಗೊಂಡ ಮೇಲೆ ಉಜ್ಜನಿ ಸಿದ್ದೇಶ್ವರನ ದೇವಸ್ಥಾನವನ್ನು ನಿರ್ಮಿಸಿದ್ದಾರೆ.

ಗ್ರಾಮದೇವರಾದ ಉಜ್ಜನಿ ಸಿದ್ದೇಶ್ವರನಿಗೆ ಪ್ರತಿ ಕಾರ್ತಿಕ ಮಾಸದಲ್ಲಿ ಜಾತ್ರೆ ಮಾಡುತ್ತಾರೆ, ಮೊದಲು ಮಲ್ಡಿ ಜಾಗದಲ್ಲಿ ಒಡಮೂಡಿದ ಶಿಲಾ ಮೂರ್ತಿಗೆ ಪೂಜೆ ಸಲ್ಲಿಸಿ, ನಂತರ ಊರೊಳಗಿನ ದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಉತ್ತರ ದಿಕ್ಕಿಗೆ 2 ಕಿ.ಮೀ ಅಂತರದಲ್ಲಿ ಇರುವ ಗರಣಿಹಳ್ಳದಲ್ಲಿ ಗಂಗಾ ಪೂಜೆ ಮಾಡಿ ನಂತರ ಊರೊಳಗೆ "ಉಚ್ಚಯ" (ತೇರಿನಲ್ಲಿ)ಕೂರಿಸಿ ತೇರನೆಳೆಯುತ್ತಿದ್ದರು, ಮೊದಲು ಚಿಕ್ಕದಾದ ತೇರು(ಉಚ್ಚಯ)ಇದ್ದು, ದೊಡ್ಡದಾದ ತೇರೊಂದನ್ನು ಈಗ್ಗೆ ಆರು ವರ್ಷಗಳ ಹಿಂದೆ ಮಾಡಿಸಿದ್ದಾರೆ.

ಉಜ್ಜನಿ ಸಿದ್ದೇಶ್ವರ, ಗೌರ ಸಂದ್ರ ಮಾರಮ್ಮ, ಯರಬಳ್ಳಿ ಮಾರಕ್ಕ, ದುರುಗಮ್ಮ, ಜುಂಜಪ್ಪ, ಮೂಗುಬಸಪ್ಪ ಎಂಬ ದೇವರುಗಳಿದ್ದು, ಇದರಲ್ಲಿ ಕೆಲವು ದೇವರಿಗೆ ಹೊಂಬು ಹೊಡೆಯುವ ಕಾರ್ಯಕ್ರಮವನ್ನು ದಸರಾ ಹಬ್ಬದ ಸಮಯದಲ್ಲಿ ಮಾಡುತ್ತಾರೆ, ಮಾರಮ್ಮ ದುರುಗಮ್ಮ ಮತ್ತು ಯರಬಳ್ಳಿ ಮಾರಕ್ಕ ದೇವರುಗಳಿಗೆ ಬಲಿ, ಹರಕೆ, ಮಾಡುತ್ತಾರೆ, ಉಜ್ಜನಿ ಸಿದ್ದೇಶ್ವರನಿಗೆ ಕಾರ್ತಿಕ ಮಾಸದಲ್ಲಿ ಪೂಜಾ ಕಾರ್ಯವು (ಕಾರ್ತಿಕೋತ್ಸವ)ವಿಶೇಷವಾಗಿದೆ, ಪೂಜಾರಿಗಳ ಅಣ್ಣ ತಮ್ಮಂದಿರ 15 ಕುಟುಂಗಳಿದ್ದು ಪ್ರತಿವರ್ಷ ಒಂದೊಂದು ಕುಟುಂಬದವರು ಪೂಜೆ ಮಾಡುತ್ತಾರೆ, ಯುಗಾದಿ ಹಬ್ಬದಲ್ಲಿ ಪೂಜಾರಿಗಳನ್ನು ನೇಮಕ ಮಾಡುತ್ತಾರೆ.

ಊರಿನಲ್ಲಿ ನೆಲೆಸಿ ಪೂಜೆಗೊಳ್ಳುತ್ತಿರುವ ಉಜ್ಜಿನಿ ಸಿದ್ದೇಶ್ವರ ದೇವರ ಹೆಸರಿನಲ್ಲಿ ಇಲ್ಲಿನ ಭಕ್ತಾದಿಗಳು ತಮ್ಮ ಮಕ್ಕಳಿಗೆ ಉಜ್ಜಿನಪ್ಪ, ಉಜ್ಜಿನಮ್ಮ, ಸಿದ್ದಪ್ಪ, ಸಿದ್ದಮ್ಮ, ಸಿದ್ದೇಶ, ಉಜ್ಜಿನಿ ಸಿದ್ದಪ್ಪ, ಸಣ್ಣಿಸಿದ್ದಪ್ಪ, ದೊಡ್ಡಸಿದ್ದಪ್ಪ, ಸಣ್ಣ ಉಜ್ಜಿನಪ್ಪ, ದೊಡ್ಡಉಜ್ಜಿನಪ್ಪ ಎಂಬ ಹೆಸರುಗಳನ್ನು ಇಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪೂರ್ವದಲ್ಲಿ ನಾಲ್ಕು ಕಲ್ಲಿನ ಗಾಲಿಗಳ ಹಳೆ ದೊಡ್ಡ ತೇರು ಇದ್ದು ತುಂಬಾ ಶಿಥಿಲವಾಗಿತ್ತು ಈ ಕಾರಣದಿಂದ ಗ್ರಾಮದ ಭಕ್ತಾದಿಗಳೆಲ್ಲಾ ಸೇರಿ ಹೊಸ ತೇರನ್ನು ಮಾಡಿಸಿದ್ದಾರೆ, ಒಟ್ಟು 31ಅಡಿ ಎತ್ತರವಾಗಿರುವ ಈ ತೇರು ಸುಂದರ ಶಿಲ್ಪಕಲೆಗಳಿಂದ ಆಕರ್ಷಕವಾಗಿದೆ, ನಾಲ್ಕು ಅಡಿ ಎತ್ತರದ ಮರದ ಗಾಲಿಗಳು, 15ಅಡಿ ಎತ್ತರದ ಮರ ಮಾಧ್ಯಮದಿಂದ ತಯಾರಿಸಿರುವ ಶಿಲ್ಪಗಳ ಕೆತ್ತನೆಯ ಭಾಗ ಹಾಗೂ ದೇವರನ್ನು ಕೂರಿಸುವ ಪೀಠ, ಕಂಬಗಳು, ತೊಲೆಗಳು, ಅಡ್ಡಪಟ್ಟಿಗಳ ಮರದ ರಥ, ಇದರ ಮೇಲೆ, 16–1/2ಅಡಿ ಎತ್ತರವಿರುವ ಕಬ್ಬಿಣದ ಸಲಾಖೆಗಳಿಂದ ಮಾಡಿರುವ ವೃತ್ತಾಕಾರದ ಡೂಮು, ಇದಕ್ಕೆ ರಥೋತ್ಸವದ ಸಮಯದಲ್ಲಿ ಬಣ್ಣ ಬಣ್ಣದ ಬಟ್ಟೆಗಳು, ಕುಸುರಿ ಕೆಲಸದ ಪಟಗಳು, ದೇವರ ಫೋಟೋಗಳು ಮುಂತಾದವುಗಳಿಂದ ಅಲಂಕಾರ ಮಾಡುತ್ತಾರೆ, ಈ ಡೂಮಿನ ಮೇಲೆ 2,1/2ಅಡಿ ಎತ್ತರದ ಲೋಹದ ಕಳಸವನ್ನು ಇಡುತ್ತಾರೆ, ಒಟ್ಟು 31ಅಡಿ ಎತ್ತರದ ರಥ ಇದಾಗಿದೆ.

ಜಾಲಿಮರದಿಂದ ರಥದ ಗಾಲಿಗಳನ್ನು ಹಾಗೂ ರಥದ ಚಕ್ರಕ್ಕೆ ಅಳವಡಿಸಿರುವ ಅಚ್ಚುಗಳನ್ನು ಮಾಡಿದ್ದಾರೆ, (ಜಾಲಿ ಮರ ಇದು ಹೆಚ್ಚಾಗಿ ಕಾಡುಗಳಲ್ಲಿ, ಜಮೀನುಗಳ ಬದುಗಳಲ್ಲಿ, ಬೀಳು ಭೂಮಿಯಲ್ಲಿ ಬೆಳೆಯುತ್ತದೆ, ಕಪ್ಪು ಬಣ್ಣದಿಂದ ಕೂಡಿದ ಮರವಾಗಿದ್ದು ದಪ್ಪನೆಯ ಮುಳ್ಳುಗಳನ್ನು ಹೊಂದಿರುತ್ತದೆ, ಈ ಮರವು ಬಲು ಗಟ್ಟಿಯಾಗಿರುತ್ತದೆ, ಚನ್ನಾಗಿ ಬಲಿತ ಮರವಾದರೆ, ಸೇಗು ಬಂದಿರುತ್ತದೆ, ಬಹುಕಾಲ ಬಾಳಿಕೆ ಬರುತ್ತದೆ, ಇದರ ಮೇಲೆ ಎಷ್ಟೇ ಭಾರವನ್ನು ಹಾಕಿದರೂ ತಡೆಯುವ ಗುಣವನ್ನು ಹೊಂದಿರುತ್ತದೆ) ಈ ರಥಕ್ಕೆ 4ಅಡಿ ಎತ್ತರದ ನಾಲ್ಕು ಗಾಲಿಗಳಿವೆ, ಚಕ್ರಗಳು ಭಾರಕ್ಕೆ ಸೀಳಬಾರದೆಂದು ಕಬ್ಬಿಣದ ಸಲಾಕೆಗಳನ್ನು (ಪಟ್ಟಿಗಳು)ಎರಡೂ ಬದಿಗಳಲ್ಲಿ ನಟ್ಟು, ಬೋಲ್ಟುಗಳಿಂದ ಅಳವಡಿಸಿದ್ದಾರೆ ಹಾಗೂ ಚಕ್ರವು ಸವೆಯ ಬಾರದೆಂದು ಕೊನೆಯ ಅಂಚಿಗೂ ಅಗಲವಾದ ಕಬ್ಬಿಣದ ಪಟ್ಟಿಗಳನ್ನು ಹಾಕಿದ್ದಾರೆ, ಈ ರೀತಿಯಾಗಿ ಮೊದಲು ಹಳ್ಳಿಗಳಲ್ಲಿ ರೈತರು ತಮ್ಮ ಬಂಡಿಗಳ ಚಕ್ರಗಳಿಗೆ ಬಳಸುತ್ತಿದ್ದರು, ಇದಕ್ಕೆ "ಹಳಿ" ಎಂದು ಕರೆಯುತ್ತಾರೆ.

ಹೊಸ ರಥವನ್ನು ಹಿರಿಯೂರು ತಾಲ್ಲೂಕಿನ ಭರಂಪುರ ಗ್ರಾಮದವರು ಮಾಡಿದ್ದಾರೆ, ಒಟ್ಟು ಆರು ತಿಂಗಳುಗಳ ಕಾಲ ರಥದ ನಿರ್ಮಾಣ ಹಾಗೂ ಶಿಲ್ಪಗಳ ಕೆತ್ತನೆ ಕೆಲಸವನ್ನು ಮಾಡಿದ್ದಾರೆ, ನಾಲ್ಕು ತಿಂಗಳು ಶಿಲ್ಪಗಳ ಕೆತ್ತನೆ, ಎರಡು ತಿಂಗಳು ಉಳಿದ ಜೋಡಣೆಯ ಕೆಲಸವನ್ನು ಶಿಲ್ಪಿಗಳು ರಥವನ್ನು ಮಾಡುವ ಊರಿನಲ್ಲಿ ವಾಸ್ತವ್ಯ ಇದ್ದುಕೊಂಡು ಮಾಡಿದ್ದಾರೆ, ಈ ರಥವನ್ನು ನಿರ್ಮಾಣ ಮಾಡಲು ಶಿಲ್ಪಿಗಳು ತೆಗೆದುಕೊಂಡ ಒಟ್ಟು ಸಂಭಾವನೆ ಒಂದು ಲಕ್ಷದ ಎಪ್ಪತ್ತು ಸಾವಿರ ರೂಗಳು, ಜೊತೆಗೆ ಊಟದ ವ್ಯವಸ್ಥೆಯನ್ನು ಗ್ರಾಮದವರೇ ಮಾಡಿದರು, ರಥದ ಕಂಬಗಳನ್ನು ಮತ್ತು ದೊಡ್ಡ ಪ್ರಮಾಣದ ಕೆಲಸ, ಕತ್ತರಿಸುವುದು, ಪ್ಲೈನಿಂಗ್ ಮಾಡುವುದು ಮುಂತಾದ ಕೆಲಸವನ್ನು ಸಾಮಿಲ್‌ಗಳಲ್ಲಿ ಮಾಡಿಸಿ, ಉಳಿದಂತೆ ಶಿಲ್ಪಗಳನ್ನು ಮತ್ತು ಸಣ್ಣ ಪ್ರಮಾಣದ ಕುಸುರಿ ಕೆಲಸವನ್ನು ಕೈಗಳಿಂದಲೇ ಮಾಡಿದ್ದಾರೆ.

ಗಾಲಿಗೆ ಅಳವಡಿಸಿರುವ ಅಚ್ಚು ಎರಡು ಅಡಿಗಳಷ್ಟು ದಪ್ಪನಾಗಿದ್ದು, ಹಿಂದೆ ಮತ್ತು ಮುಂದಿನ ಭಾಗದಲ್ಲಿ ದುಂಡನೆಯ ಚಕ್ರದಂತಿರುವ ಕೆತ್ತನೆ ಇದೆ, ಇದು ಒಂದು ಅರಳಿದ ಹೂವಿನಂತೆಯೂ ಕಾಣುತ್ತದೆ, ಈ ಅಚ್ಚಿನ ಮೇಲೆ ಅಡ್ಡಲಾಗಿ ನಾಲ್ಕು ತೊಲೆಗಳಿವೆ, ಚಕ್ರದ ಪಕ್ಕದಲ್ಲಿರುವ ತೊಲೆಗಳ ತುದಿಗಳಲ್ಲಿ ಅಂದರೆ ಕೊನೆಯ ತೊಲೆಗಳ ಅಂಚಿನಲ್ಲಿ ಆನೆಯ ಕುತ್ತಿಗೆಯವರೆಗೆ ಕೆತ್ತನೆ ಇದ್ದು ಆನೆಯು ಗಂಭೀರವಾದ ನಡಿಗೆಯಲ್ಲಿದ್ದಂತೆ ಕಾಣುತ್ತದೆ, ಮಧ್ಯದ ತೊಲೆಗಳ ತುದಿಗಳಲ್ಲಿ(ಅಂಚಿನಲ್ಲಿ) ಸಿಂಹದ

ಮುಖ ಹಾಗೂ ಕುತ್ತಿಗೆಯವರೆಗೆ ಕೆತ್ತನೆ ಇದೆ, ತೆರೆದ ಬಾಯಿಯನ್ನು ಹೊಂದಿದ್ದು ಕೆರಳಿದಂತೆ ಅಥವಾ ಉಗ್ರರೂಪವಾಗಿರುವಂತೆ ಕಾಣುತ್ತದೆ, ಇದನ್ನು ಭಕ್ತರು ಉಗ್ರನರಸಿಂಹನ ಅವತಾರ ಎನ್ನುತ್ತಾರೆ, ಇದರ ಮೇಲಿನ ಚಿಕ್ಕ ಪಟ್ಟಿಯಲ್ಲಿ ಕುಸುರಿ ಕೆತ್ತನೆ ಇದೆ, ಅದರ ಮೇಲುಗಡೆ ಎರಡು ಅಡಿ ದಪ್ಪನೆಯ ತೊಲೆಗಳು, ಇದರ ಮೇಲೆ ಕುಸುರಿ ಕೆತ್ತನೆಯ ಪಟ್ಟಿ, ಇದರ ನಂತರದಲ್ಲಿ ಕಂಬಗಳು, ಶಿಲ್ಪಗಳು ಇವೆ, ರಥದ ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಸಿಂಹದ ಕೆತ್ತನೆ ಇದ್ದು, ಸಿಂಹವು ಶಾಂತ ಸ್ವರೂಪವನ್ನು ಹೊಂದಿದೆ, ಇದರ ಬಾಯಿಯಿಂದ ಬಳ್ಳಿಯ ಕೆತ್ತನೆಯ ವಸ್ತುವೊಂದು ಕೆಳಗಡೆ ಇಳಿಬಿದ್ದಿದ್ದು ಮುಂದಿನ ಎರಡು ಕಾಲುಗಳಲ್ಲಿ ಇದನ್ನು ಸಿಂಹವು ಹಿಡಿದುಕೊಂಡಿದೆ, ಸಿಂಹದ ತಲೆ ಮೇಲಿನ ಪಟ್ಟಿಯಲ್ಲಿ ಎರಡೂ ಬದಿಗಳಲ್ಲಿ ಒಂದೊಂದು ಕಂಚಿನ ಗಂಟೆಗಳನ್ನು ನೇತು ಹಾಕಿದ್ದಾರೆ, ಸಿಂಹದ ಪಕ್ಕದಲ್ಲಿ ಒಂದು ಜೊತೆ ಜೋಡಿ ಕಂಬಗಳು ತದನಂತರ ದೇವರ ಮೂರ್ತಿ, ಜೋಡಿ ಕಂಬಗಳು ಇದರ ನಂತರ ಮತ್ತೊಂದು ದೇವರ ಮೂರ್ತಿ, ಮತ್ತೆ ಜೋಡಿ ಕಂಬಗಳು, ಹೀಗೆ ರಥದ ನಾಲ್ಕು ದಿಕ್ಕಿನಲ್ಲೂ ಕೆತ್ತನೆ ಇದೆ.

ಮುಂಭಾಗದ ಮಧ್ಯದಲ್ಲಿ ಅಭಯ ಹಸ್ತದ ಗಣೇಶನ, ಇದರ ಪಕ್ಕದಲ್ಲಿ ಶಾಂತ ಸ್ವರೂಪನಾಗಿರುವ ಶಿವನ ಶಿಲ್ಪವಿದ್ದು, ಲಿಂಗದ ಮೇಲೆ ಶಿವನ ತಲೆಯ ಭಾಗದ ಕೆತ್ತನೆ ಮಾತ್ರ ಇದೆ, ಐದು ಎಡೆ ಸರ್ಪ ಶಿವನ ತಲೆಯ ಮೇಲೆ ನೆರಳನ್ನು ನೀಡುವಂತಿದೆ, ಶಿವನ ಮೂರ್ತಿಯ ಸುತ್ತಲೂ ಪ್ರಭಾವಳಿ ಇದೆ, ಗಣೇಶನ ಮತ್ತೊಂದು ಪಕ್ಕದಲ್ಲಿ ಆಸನಾ ರೂಢರಾಗಿರುವ ಶಿವ ಪಾರ್ವತಿಯರ ಶಿಲ್ಪ, ಇದರ ಸುತ್ತಲೂ ಪ್ರಭಾವಳಿ ಇದೆ, ಹೀಗೆ ರಥದ ನಾಲ್ಕೂ ದಿಕ್ಕಿನಲ್ಲಿ ವಿವಿಧ ರೀತಿಯ ದೇವರುಗಳ ಮೂರ್ತಿಗಳನ್ನು ಕೆತ್ತನೆ ಮಾಡಿದ್ದು ಅವುಗಳಲ್ಲಿ ಆಂಜನೇಯ, ಎಡೆಯೂರು ಸಿದ್ಧಲಿಂಗೇಶ್ವರ, ಭಕ್ತಿ ಭಂಡಾರಿ ಬಸವಣ್ಣ, ಲಕ್ಷ್ಮಿ, ಸರಸ್ವತಿ, ಶಿವನ ಲಿಂಗವನ್ನು ಸುತ್ತುವರೆದಿರುವ ನಾಗರಾಜನ, ಧ್ಯಾನ ಮಗ್ನನಾಗಿರುವ ಶಿವನ, ಬ್ರಹ್ಮದೇವ, ನಾಯಕನ ಹಟ್ಟಿ ತಿಪ್ಪೆರುದ್ರಸ್ವಾಮಿಯ ಶಿಲ್ಪಗಳಿವೆ, ಈ ಶಿಲ್ಪಗಳ ಮೇಲೆ ಚಿಕ್ಕದಾದ ಪಟ್ಟಿಯಲ್ಲಿ ಹೂವಿನ ಮಾಲೆಯ ಕೆತ್ತನೆ, ತೋರಣದ ಕೆತ್ತನೆ ಹಾಗೂ ಹೂಬಳ್ಳಿಗಳ ಕೆತ್ತನೆ ಮುಂತಾಗಿ ಕುಸುರಿ ಕೆತ್ತನೆ ಇದೆ, ಉಬ್ಬು ಇರುವ ಪಟ್ಟಿಯಲ್ಲಿ ಅಡಿಗೊಂದರಂತೆ ಚಿಕ್ಕ ಚಿಕ್ಕ ಗಂಟೆಗಳನ್ನು ನೇತು ಹಾಕಿದ್ದಾರೆ, ದೇವರನ್ನು ಕೂರಿಸುವ ಪೀಠದ ಕೆಳಗಡೆ ಅಗಲವಾದ ಪಟ್ಟಿಯಲ್ಲಿ ಕಳಸಕ್ಕೆ ಹೂವನ್ನು ಅರ್ಪಿಸುತ್ತಿರುವ ಎರಡು ಆನೆಗಳ ಮೂರ್ತಿಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ಓಂಕಾರದ ಹಿಂದಿ ಹಾಗೂ ಕನ್ನಡ ಅಕ್ಷರಗಳು ಮತ್ತು ಕುಸುರಿ ಕೆತ್ತನೆ, ಇನ್ನೊಂದು ಕಡೆ ಸರಸ್ವತಿ ಹಾಗೂ ಅದರ ಇಕ್ಕೆಲಗಳಲ್ಲಿ ನವಿಲು ಮತ್ತು ಮೀನಿನ ಕೆತ್ತನೆ ಜೊತೆಗೆ ಕುಸುರಿ ಕೆತ್ತನೆ, ಮತ್ತೊಂದು ಕಡೆ ಹೂಬಳ್ಳಿಗಳು, ಹಂಸ ಪಕ್ಷಿ, ಮಗದೊಂದು ಕಡೆ ಶಿವನ ಲಿಂಗವಿದ್ದು ಇಕ್ಕೆಲಗಳಲ್ಲಿ ಮಲಗಿರುವ ನಂದಿಯ ಮೂರ್ತಿಗಳಿವೆ, ನಾಲ್ಕು ಮೂಲೆಗಳಲ್ಲಿ ಸಿಂಹದ ಮೇಲುಗಡೆ ಚೌಕಾಕಾರದ ಪಟ್ಟಿಯನ್ನು ಮಾಡಿದ್ದು ಈ ಚೌಕಟ್ಟಿನೊಳಗೆ ಪುರುಷ ಹಾಗೂ ಸ್ತ್ರೀ ಇಬ್ಬರೂ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಕೆತ್ತನೆ ಇದೆ, ನಾಲ್ಕೂ ಮೂಲೆಗಳಲ್ಲಿ ಲೈಂಗಿಕ ಕ್ರಿಯೆಯ ವಿವಿಧ ಭಂಗಿಗಳಿವೆ, ಈ ರೀತಿಯ ನಗ್ನ ರೂಪದ ಕೆತ್ತನೆ ಮತ್ತು ಲೈಂಗಿಕ ಕ್ರಿಯೆಯಲ್ಲಿ ನಿರತರಾಗಿರುವ ಸ್ತ್ರೀ ಮತ್ತು ಪುರುಷ ರೂಪದ ಕೆತ್ತನೆ ಅಲ್ಲದೇ ಪ್ರಾಣಿಗಳೂ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಶಿಲ್ಪಗಳು ಹಲವಾರು ದೇವಸ್ಥಾನಗಳ ಆವರಣಗಳಲ್ಲಿ ಮತ್ತು ಶಿಖರಗಳಲ್ಲೂ ಕಾಣಬಹುದಾಗಿದೆ, ಇದಕ್ಕೆ ಶಿಲ್ಪಿಗಳು ಕೊಡುವ ಕಾರಣವೆಂದರೆ ರಥಕ್ಕೆ ಅಥವಾ ದೇವಸ್ಥಾನಕ್ಕೆ ದೃಷ್ಟಿ ಆಗಬಾರದು ಎಂಬುದು.

ರಥವನ್ನು ಮಾಡಲು ಊರಿನ ಭಕ್ತಾದಿಗಳು, ನೌಕರ ವರ್ಗ, ದಾನಿಗಳು ಉದಾರ ದೇಣಿಗೆಯನ್ನು ನೀಡಿದ್ದಾರೆ, ಗ್ರಾಮದ ಮನೆಗೆ ಇಂತಿಷ್ಟು ಹಣವನ್ನು ನಿಗದಿ ಮಾಡಿ ರಥ ನಿರ್ಮಾಣಕ್ಕೆ ಸಂಗ್ರಹಿಸಲಾಗಿದೆ, ಇದಲ್ಲದೆ ದೇವರ ಒಕ್ಕಲು, ಅಣ್ಣ ತಮ್ಮಂದಿರು ಸಹ ದೇಣಿಗೆ ನೀಡಿದ್ದಾರೆ, ಕೆಲವಾರು ರೈತರು ತಮ್ಮ

ಜಮೀನುಗಳಲ್ಲಿ ಬೆಳೆದ ಮರಗಳನ್ನು ರಥ ನಿರ್ಮಾಣಕ್ಕೆ ಕೊಟ್ಟಿದ್ದಾರೆ, ಬೇವು, ಜಾಲಿ ಮುಂತಾದ ಮರಗಳನ್ನು ದಾನವಾಗಿ ಕೊಟ್ಟಿದ್ದು ಉಳಿದ ತೇಗದ ಮರಗಳನ್ನು ದೇವಸ್ಥಾನ ಕಮಿಟಿಯವರು ಖರೀದಿ ಮಾಡಿದ್ದಾರೆ, ತೇರಿನಲ್ಲಿ ದೇವರನ್ನು ಕೂರಿಸುವ ಪೀಠವು ಎರಡೂವರೆ ಅಡಿ ಎತ್ತರ, ಎರಡೂವರೆ ಅಡಿ ಅಗಲವಿದ್ದು ಇದಕ್ಕೆ ಕೆಳಗಡೆ ತಿರುಗುಣಿ(ಬೇರಿಂಗ್) ಅಳವಡಿಸಿದ್ದಾರೆ, ಇದರಿಂದ ರಥವನ್ನು ಪಾದಗಟ್ಟೆಯಿಂದ ವಾಪಾಸ್ಸು ತರುವಾಗ ಇಡೀ ರಥವನ್ನು ತಿರುಗಿಸಬೇಕಾಗುವ ಅವಶ್ಯಕತೆ ಇರುವುದಿಲ್ಲ, ಬೇರಿಂಗ್ ಇರುವ ಪೀಠವನ್ನು ಮಾತ್ರ ತಿರುಗಿಸಿದರೆ ಸಾಕು ದೇವರು ರತದ ಇನ್ನೊಂದು ಮುಖದತ್ತ ತಿರುಗುತ್ತದೆ, ನಂತರ ರಥವನ್ನು ಎಳೆಯುವ ಹಗ್ಗವನ್ನು ಬಿಚ್ಚಿ ಇನ್ನೊಂದು ಬದಿಗೆ ಇರುವ ಕಬ್ಬಿಣದ ಬಳೆಗಳಿಗೆ ಕಟ್ಟಿ ಎಳೆಯುತ್ತಾರೆ.

ಯುಗಾದಿ ಹಬ್ಬ ಮುಗಿದು ಒಂದು ತಿಂಗಳು ಆದ ತರುವಾಯ ಪ್ರತಿವರ್ಷ ರಥೋತ್ಸವ ನಡೆಯುತ್ತದೆ, ರಥೋತ್ಸವಕ್ಕೆ ಸುಮಾರು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸೋಮಗುದ್ದು, ಮಧುರೆ, ಜಂಪಣ್ಣ ನಾಯಕನ ಕೋಟೆ, ಐಮಂಗಲ, ಸಿದ್ದಾಪುರ, ಪಾವಗಡದ ಹತ್ತಿರವಿರುವ ಬೂದಿಬೆಟ್ಟ ಮುಂತಾದ ಗ್ರಾಮಗಳಲ್ಲಿ ಈ ದೇವರ ಭಕ್ತಾದಿಗಳಿದ್ದು ರಥೋತ್ಸವದ ಸಮಯಕ್ಕೆ ಬರುತ್ತಾರೆ.

ಉಜ್ಜಿನಿಯಲ್ಲಿ ಸಿದ್ದೇಶ್ವರನ ಜಾತ್ರೆ ನಡೆಯುವ ದಿನದಂದೇ ಈ ಗ್ರಾಮದಲ್ಲಿನ ಸಿದ್ದೇಶ್ವರನ ಜಾತ್ರೆ ನಡೆಯತ್ತದೆ, ಒಟ್ಟು ಮೂರು ದಿನಗಳು ಜಾತ್ರೆ ನಡೆಯುತ್ತಿದ್ದು ಮೊದಲ ದಿನ ಊರಾಚೆ ಇರುವ ಮಲ್ದಿಗೆ ದೇವರನ್ನು ಕರೆದುಕೊಂಡು ಹೋಗಿ ಅಲ್ಲಿ ಅಂದು ರಾತ್ರಿ ಪೂರ್ತಿ ಪೂಜೆ, ಅಭಿಷೇಕ, ಭಜನೆ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ, ಎರಡನೇ ದಿನ ದೇವರು ಊರೊಳಗೆ ಬರುವುದು, ನಂತರ ಆರುತಿ, ಪ್ರಸಾದ ವಿನಿಯೋಗ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ, ಮೂರನೇ ದಿನ ರಥೋತ್ಸವ ನಡೆಯುತ್ತದೆ, ದೇವಸ್ಥಾನದ ಹತ್ತಿರ ರಥಕ್ಕೆ ಅಲಂಕಾರ ಮಾಡುತ್ತಾರೆ, ಆ ನಂತರ ಪೂಜೆ, ಬಲಿ ಅನ್ನ ಇತ್ಯಾದಿ ಕಾರ್ಯಗಳು ನಡೆದು ನಿಗದಿತ ಸಮಯಕ್ಕೆ ಸರಿಯಾಗಿ ಗುಳಿಕ ಕಾಲದಲ್ಲಿ ಅಂದರೆ ರಾಹುಕಾಲ, ಯಮಗಂಡ ಕಾಲಗಳನ್ನು ಹೊರತು ಪಡಿಸಿ ರಥೋತ್ಸವ ನಡೆಯುತ್ತದೆ, ಪಲ್ಲಕ್ಕಿಯಲ್ಲಿ ದೇವರನ್ನು ತಂದು ರಥದ ಒಳಗೆ ಕೂರಿಸುತ್ತಾರೆ, ಪೂರ್ವಕ್ಕೆ ಹೈವೆ ಬಳಿ ಇರುವ ಪಾದಗಟ್ಟೆಯ ವರೆವಿಗೆ ರಥವು ಹೋಗಿ ಪೂಜೆ ಮುಗಿಸಿಕೊಂಡು ಬರುತ್ತದೆ, ನಂತರ ಪಲ್ಲಕ್ಕಿಯಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ದೇವರ ಮೆರವಣಿಗೆ ಮಾಡುತ್ತಾರೆ, ತದನಂತರ ದೇವರನ್ನು ಗುಡಿ ತುಂಬಿಸುತ್ತಾರೆ, ದೇವರು ಗುಡಿಯ ಒಳಗೆ ಇಡುವ ಕಾರ್ಯಕ್ಕೆ ದೇವರು ಗುಡಿದುಂಬುವುದು ಎನ್ನುತ್ತಾರೆ, ಬಳಿಕ ರಥಕ್ಕೆ ಹಾಕಲಾಗಿದ್ದ ಹೂವಿನ ಹಾರಗಳು, ರಥದ ಮೇಲೆ ಕಟ್ಟಿದ್ದ ಮುಕ್ತಿ ಬಾವುಟ ಹರಾಜು ಮಾಡುತ್ತಾರೆ, ಭಕ್ತಾದಿಗಳು ಹರಾಜು ಕೂಗಿ ಹೂವಿನ ಹಾರಗಳನ್ನು ಮನೆಯಲ್ಲಿಟ್ಟು ಪೂಜಿಸುತ್ತಾರೆ, ಇಂತಹ ಹರಾಜಿನಿಂದ ಬಂದ ಹಣವನ್ನು ಗ್ರಾಮದವರು ಮತ್ತು ದೇವಸ್ಥಾನ ಕಮಿಟಿಯವರು ಸೇರಿ ಚೀಟಿ ಮಾಡುತ್ತಾರೆ, ಚಿಟಿಯಿಂದ ಬಂದ ಲಾಭದ ಹಣವನ್ನು ಮುಂದಿನ ವರ್ಷದ ಜಾತ್ರೆ, ರಥೋತ್ಸವಕ್ಕೆ ಉಪಯೋಗಿಸುತ್ತಾರೆ.

ರಥವನ್ನು ಎಳೆಯುವ ಹಗ್ಗವು ಸುಮಾರು 20ಅಡಿ, ಉದ್ದ 10ಇಂಚು (ಸುತ್ತಳತೆ) ದಪ್ಪವಿರುತ್ತದೆ, ತೆಂಗಿನ ನಾರಿನಿಂದ ಈ ಹಗ್ಗವನ್ನು ತಯಾರಿಸಿರುತ್ತಾರೆ. ರಥವನ್ನು ಮಾಡಿರುವ ಶಿಲ್ಪಿಗಳಿಗೆ ಒಂದು ಲಕ್ಷದ ಎಪ್ಪತ್ತು ಸಾವಿರ(1,70,000–00)ಸಂಭಾನೆಯನ್ನು ಕೊಟ್ಟಿದ್ದು ಉಳಿದಂತೆ ದಾನವಾಗಿ ಕೊಟ್ಟಿರುವ ಮರಗಳ ಬೆಲೆಯನ್ನು ಬಿಟ್ಟು, ರಥದ ನಿರ್ಮಾಣಕ್ಕೆ ತಗುಲಿರುವ ಒಟ್ಟು ಖರ್ಚು ನಾಲ್ಕು ಲಕ್ಷ(4,00000–00) ರೂಗಳು.

ರಥದ ಗಾಲಿಗಳು ಮತ್ತು ಅಚ್ಚು ಸ್ಥಳೀಯವಾಗಿ ಸಿಗುವ ಕಪ್ಪುಜಾಲಿ ಮರಗಳಿಂದ ಮಾಡಿದ್ದು, ತೊಲೆ, ಅಡ್ಡಲಾಗಿ, ಉದ್ದವಾಗಿ ಹಾಕಿರುವ ಪಟ್ಟಿಗಳು ಸ್ಥಳೀಯವಾಗಿ ಸಿಗುವ ಬೇವು ಮರಗಳು,

ಕಂಬಗಳು ಮತ್ತು ವಿವಿಧ ರೂಪದ ಶಿಲ್ಪಗಳು, ಇತರೆ ಕುಸುರಿ ಕೆಲಸದ ಕೆತ್ತನೆಗೆ ಬಳಸಿರುವ ಮರಗಳು ತೇಗದಿಂದ ಮಾಡಲಾಗಿದೆ, ಇದನ್ನು ಬೇರೆ ಕಡೆಯಿಂದ ಖರೀದಿ ಮಾಡಿದ್ದಾರೆ.

ಪಲ್ಲಕ್ಕಿ: ದೇವರ ಉತ್ಸವಕ್ಕಾಗಿ ತೇಗದ ಪಲ್ಲಕ್ಕಿ ಇದ್ದು ಇದರಲ್ಲಿ ದೇವರನ್ನು ಕೂರಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ.

ನಂದಿಕೋಲು: ಸುಮಾರು 20ರಿಂದ 25ಅಡಿಯವರೆವಿಗೂ ಎತ್ತರವಿರುವ ಬಿದಿರಿನ ಬೊಂಬುಗಳಿಂದ ಮಾಡಿದ್ದಾಗಿವೆ, ಕೆಳಗಡೆ ತುದಿಗೆ ದಪ್ಪನೆಯ ಬಟ್ಟೆಯಿಂದ ಮಾಡಿರುವ ಬೆಲ್ಟು, ಪಟ್ಟಿ ಇದ್ದು ಇದನ್ನು ಕುಣಿಯುವವರು ಕೊರಳಿಗೆ, ಸೊಂಟಕ್ಕೆ ಹಾಕಿಕೊಂಡು ಕುಣಿಯುತ್ತಾರೆ, ಬಿದಿರಿನ ಉದ್ದನೆಯ ಕೋಲಿಗೆ ನಂದಿಯ ಲೋಹದ ಶಿಲ್ಪ, ದಪ್ಪನೆಯ ಲೋಹದ ಗಗ್ಗರ(ಗೆಜ್ಜೆಗಳು)ಗಳನ್ನು ಹಾಕಿರುತ್ತಾರೆ, ಕೊನೆ ತುದಿಯಲ್ಲಿ ಲೋಹದ ಕಳಸ ಇದಕ್ಕೆ ನಂದಿ ಮತ್ತು ಓಂ ಸಂಕೇತವಿರುವ ಕೆಂಪು ಬಟ್ಟೆಯಲ್ಲಿ ಮಾಡಿದ ದ್ವಜವನ್ನು ಕಟ್ಟಿರುತ್ತಾರೆ, ಇದನ್ನು ಹಾಕಿಕೊಂಡು ಕುಣಿಯುವವರು ತುಂಬಾ ಶಕ್ತಿವಂತರಾಗಿರಬೇಕು, ಯಾಕೆಂದರೆ ತುಂಬಾ ಎತ್ತರ ಹಾಗೂ ತೂಕ ಇರುವುದರಿಂದ ಅದರ ಭಾರವನ್ನು ಹಿಡಿದು ಕುಣಿಯುವುದು ಕಷ್ಟ, ಈ ತರಹದ ನಾಲ್ಕು ನಂದಿ ಕೋಲುಗಳು ಈ ದೇವಸ್ಥಾನದಲ್ಲಿವೆ, ರಥೋತ್ಸವದ ಸಮಯದಲ್ಲಿ ರಥದ ಮುಂದೆ ವಿವಿಧ ವಾದ್ಯಗಳೊಂದಿಗೆ ಇವುಗಳನ್ನು ಕುಣಿಸುತ್ತಾರೆ, ಕುಣಿಯುವಾಗ ಗಗ್ಗರಗಳು ಮೇಲೆ ಕೆಳಗೆ ಸರಿದಾಡುತ್ತವೆ, ಸರಿದಾಡುವಿಕೆಯಿಂದ ಗಗ್ಗರದ ಒಳಗೆ ಹಾಕಿರುವ ಚಿಕ್ಕ ಚಿಕ್ಕ ಲೋಹದ ಗೋಲಿಗಳು ಗೆಜ್ಜೆಯ ರೀತಿಯಲ್ಲಿ ಶಬ್ದಮಾಡುತ್ತವೆ.

ದೇವಸ್ಥಾನದ ಮರದ ಬಾಗಿಲು: ದೇವಾಲಯದ ಗರ್ಭಗುಡಿಯ ಬಾಗಿಲು ಸ್ವಲ್ಪ ಮಟ್ಟಿಗೆ ಎತ್ತರವಾಗಿದ್ದು ಕಲ್ಲಿನ ಚೌಕಗಳಿಂದ ನಿಲುವುಗಳನ್ನು ಮಾಡಿದ್ದು (ಕದ)ಬಾಗಿಲನ್ನು ತೇಗದ ಮರದಿಂದ ಮಾಡಲಾಗಿದೆ, ಎರಡು ಬಾಗಿಲುಗಳು ತಲಾ ನಾಲ್ಕು ಚೌಕ ಪಟ್ಟಿಗಳಿಂದ ಮಾಡಿದ್ದು ಒಂದೊಂದರಲ್ಲೂ ಕುಸುರಿ ಕೆತ್ತನೆ, ಹೂವು, ಬಳ್ಳಿ, ಗಿಳಿ, ಪೀಠದ ಮೇಲೆ ಕುಳಿತಿರುವ ನಂದಿ ಕೆತ್ತನೆ ಇದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಸಣ್ಣ ಉಜ್ಜಿನಪ್ಪನ ಮಗ ಸಿದ್ದೇಶ್ – ಪೂಜಾರ್

2). ಕಾಂತರಾಜ್ S/O ನಿಂಗಪ್ಪ – ಗ್ರಾಮಸ್ಥರು

3). ಸಿದ್ದೇಶಪ್ಪ S/O ತಿಪ್ಪಯ್ಯ – ಗ್ರಾಮಸ್ಥರು

4). ತಿಪ್ಪೇಸ್ವಾಮಿ S/O ರುದ್ರಪ್ಪ – ಗ್ರಾಮಸ್ಥರು

5). ತಿಪ್ಪೇರುದ್ರಪ್ಪ S/O ತಿಪ್ಪಜ್ಜ. – ಗ್ರಾಮಸ್ಥರು

2). ಮದುರೆ(ಚಿಕ್ಕಮದುರೆ). ಮಲ್ಲೇಶ್ವರ ದೇವರ ರಥ:

ಐತಿಹಾಸಿಕ ಹಿನ್ನೆಲೆ ಮತ್ತು ಪೌರಾಣಿಕ ಹಿನ್ನೆಲೆಯುಳ್ಳ ಹಳ್ಳಿ ಇದು, 9–10ನೇ ಶತಮಾನದಲ್ಲಿ ನೊಳಂಬ ಆಳ್ವಿಕೆಯ ಅರಸರಲ್ಲಿ ಪಲ್ಲವ ಸಂಸ್ಥಾನದ ಗವಗಣಬ್ಬೆ ಮತ್ತು ಗವಗಣಾಧೀಶ್ವರರು ಮಲ್ಲೇಶ್ವರ ದೇವಸ್ಥಾನವನ್ನು ಕಟ್ಟಿಸಿದರು, ಶಾತವಾಹನರು ಮತ್ತು ಮೌರ್ಯರ ಆಳ್ವಿಕೆಯು ಇಲ್ಲಿ ಇತ್ತೆಂಬುದಕ್ಕೆ ಅವರು ಬಳಸುತ್ತಿದ್ದ ನಾಣ್ಯಗಳು ದೊರೆತಿವೆ, ಮರಾಠರು ಮತ್ತು ನಿಡಗಲ್ಲು ಸಂಸ್ಥಾನದವರು ಮತ್ತು ಚಿತ್ರದುರ್ಗದ ಪಾಳೇಗಾರರು ಆಳ್ವಿಕೆ ನಡೆಸಿರುವ ಉಲ್ಲೇಖವಿದೆ, ಚಿತ್ರದುರ್ಗದ ಐತಿಹಾಸಿಕ ಘಟನೆಗಳನ್ನು ಮೆಲುಕು ಹಾಕಿಸುವ ಹೊಸ ಹಗಲು ಮತ್ತು ದೊಡ್ಡೇರಿ ಕಾಳಗ ಎಂಬ ಪುಸ್ತಕಗಳಲ್ಲಿ ಈ ಊರಿನ ಕುರಿತ ಉಲ್ಲೇಖವಿದೆ.

ಕ್ರಿ.ಶ.8–9ನೇ ಶತಮಾನದಲ್ಲಿ ನೊಳಂಬರ ಕಾಲದ ಗವಗಣಬ್ಬೆ ಎನ್ನುವ ರಾಣಿಯಿಂದ ದೇವಸ್ಥಾನವನ್ನು ನಿರ್ಮಾಣ ಮಾಡಲಾಗಿದೆ, ಮಲ್ಲಿಕಾರ್ಜುನಪ್ಪ ಎಂಬ ದೈವಾಂಶ ಕಾಲವಾದ ನಂತರ

ಗವಗಣಬ್ಬೆಯು ಆತನ ಜ್ಞಾಪಕಾರ್ಥವಾಗಿ ಮಲ್ಲೇಶ್ವರಸ್ವಾಮಿ ದೇವಸ್ಥಾನವನ್ನು ನಿರ್ಮಾಣ ಮಾಡಿದರಂತೆ, ದೇವಸ್ಥಾನದ ಆವರಣಲ್ಲಿ ಆಂಜನೇಯ, ಸುಬ್ರಮಣ್ಯ, ನಾಗದೇವತೆ ಹಾಗೂ ಗಣೇಶ ದೇವಸ್ಥಾನಗಳಿವೆ, ಮಲ್ಲೇಶ್ವರ ದೇವಾಲಯದ ಸುತ್ತಲೂ ಹಳೆಯ ವಿಗ್ರಹಗಳು, ಶಾಸನಗಳಿವೆ, ಶಿಥಿಲಾವಸ್ಥೆಯಲ್ಲಿದ್ದ ಮಲ್ಲೇಶ್ವರ ಸ್ವಾಮಿಯ ದೇವಸ್ಥಾನವನ್ನು ಪುನರ್‌ನಿರ್ಮಾಣ ಮಾಡುವ ಸಂದರ್ಭದಲ್ಲಿ ಶಾಸನಗಳು, ಬಸವನ ವಿಗ್ರಹ, ಗಣೇಶನ ವಿಗ್ರಹ, . ನಾಗರಕಲ್ಲುಗಳು ದೊರೆತಿವೆ, ಇವುಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ವಿಗ್ರಹಗಳೂ ಸೇರಿವೆ, ಮೇಲ್ಭಾಗದಲ್ಲಿ ಆನೆ ಚಿತ್ರಗಳುಳ್ಳ ಒಂದು ಪ್ರಭಾವಳಿ ಸಹಿತ ವಿಗ್ರಹವಿದೆ, 7ಮಂದಿ ಅಕ್ಕಂದಿರು ಅಥವಾ ಸಪ್ತ ಮಾತೃಕೆಯರ ಮೂರ್ತಿಗಳು ಒಂದೇ ಕಲ್ಲಿನಲ್ಲಿವೆ, ದೇವಾಲಯವು ಚಿಕ್ಕಮಧುರೆ ಹಾಗೂ ಹಿರೇಮಧುರೆ ಎರಡೂ ಹಳ್ಳಿಗಳಿಗೂ ಸೇರಿದೆ.

ಮೈಲಾರ ಲಿಂಗೇಶ್ವರ, ದುರ್ಗಾಂಬಿಕ, ಭೂತಪ್ಪ, ಮಾರಮ್ಮ ದೇವಸ್ಥಾನಗಳಿದ್ದು, ಮಲ್ಲೇಶ್ವರ ದೇವಸ್ಥಾನ ಊರಾಚೆ ದಕ್ಷಿಣ ದಿಕ್ಕಿಗೆ ಅರ್ಧ ಕಿಲೋಮೀಟರ್ ದೂರದಲ್ಲಿದೆ, ಮಲ್ಲೇಶ್ವರ ದೇವರಿಗೆ ರಥೋತ್ಸವ (ತೇರು ಎಳೆಯುವುದು)ಮಾಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಜಾಲಿಮರದಿಂದ ಮಾತ್ರ ಮಾಡಲಾಗಿದ್ದ ಹಳೆಯ ರಥವು 20ಅಡಿ ಎತ್ತರವಿದ್ದು ಸಾಧಾರಣ ಶೈಲಿಯಲ್ಲಿತ್ತು, ರಥವು ತುಂಬಾ ಶಿಥಿಲವಾಗಿ ರಥೋತ್ಸವ ನಡೆಸಲು ಕಷ್ಟವಾಗಿತ್ತು, ಇದರಿಂದ 2016ರಲ್ಲಿ ಹೊಸ ರಥವನ್ನು ಮಾಡಿಸಿ, 2016ರ ಡಿಸೆಂಬರ್ ತಿಂಗಳಲ್ಲಿ ಹೊಸ ರಥದಿಂದ ಮೊದಲ ರಥೋತ್ಸವ ಮಾಡಿದ್ದಾರೆ, ಹೊಸ ರಥವು 31ಅಡಿ ಎತ್ತರವಿದೆ.

ಭರಂಪುರದ ಶಿಲ್ಪಿಗಳು ರಥವನ್ನು ಮಾಡಿದ್ದಾರೆ, ನಾಲ್ಕು ಅಡಿ ಎತ್ತರದ ಮರದ ಗಾಲಿಗಳನ್ನು ಮಾಡಿದ್ದು ಈ ಗಾಲಿಗಳಿಗೆ ನಾಲ್ಕು ಕಬ್ಬಿಣದ ಪಟ್ಟಿಗಳನ್ನು ನಟ್ಟು ಹಾಗೂ ಬೋಲ್ಟುಗಳಿಂದಳವಡಿಸಿದ್ದು, ಗಾಲಿಯ ಅಂಚಿಗೆ ಅಳಿಗಳನ್ನು ಹಾಕಿದ್ದಾರೆ, ಒಟ್ಟು ಒಂದು ವರ್ಷದ ಕಾಲ ರಥದ ನಿರ್ಮಾಣ ಕೆಲಸವನ್ನು ಮಾಡಿದ್ದಾರೆ, ಇದೇ ಊರಿನಲ್ಲಿ ವಾಸ್ತವ್ಯ ಇದ್ದುಕೊಂಡು ಶಿಲ್ಪಿಗಳು ಕೆತ್ತನೆ ಕೆಲಸವನ್ನು ಮಾಡಿದರು, ಶಿಲ್ಪಿಗಳಿಗೆ ನಾಲ್ಕು ಲಕ್ಷ ರೂಗಳ ಸಂಭಾವನೆಯನ್ನು, ಜೊತೆಗೆ ಊಟದ ವ್ಯವಸ್ಥೆಯನ್ನು ಗ್ರಾಮದವರೇ ಮಾಡಿದ್ದಾರೆ, ರಥದ ಕಂಬಗಳನ್ನು ಮತ್ತು ದೊಡ್ಡ ಪ್ರಮಾಣದ ಕೆಲಸ, ಮರ ಕತ್ತರಿಸುವುದು, ಪ್ಲೈನಿಂಗ್ ಮಾಡುವುದು ಮುಂತಾದ ಕೆಲಸವನ್ನು ಸಾಮಿಲ್‌ಗಳಲ್ಲಿ ಮಾಡಿಸಿದ್ದಾರೆ, ರಥದಲ್ಲಿ ಕೆತ್ತನೆಗೊಂಡಿರುವ ಶಿಲ್ಪಗಳನ್ನು ಮತ್ತು ಸಣ್ಣ ಪ್ರಮಾಣದ ಕುಸುರಿ ಕೆಲಸವನ್ನು ಶಿಲ್ಪಿಗಳು ತಮ್ಮ ಕೈಗಳಿಂದಲೇ ಮಾಡಿದ್ದಾರೆ.

ಗಾಲಿಗೆ ಹಾಕಿರುವ ಅಚ್ಚು ಎರಡು ಅಡಿ ದಪ್ಪವಾಗಿದೆ, ಈ ಅಚ್ಚಿನ ಮೇಲೆ ಅಡ್ಡಲಾಗಿ ನಾಲ್ಕು ತೊಲೆಗಳನ್ನು ಹಾಕಿದ್ದು, ಮಧ್ಯದ ಎರಡು ತೊಲೆಗಳ ತುದಿಯಲ್ಲಿ ನಂದಿ, ಕೊನೆಯ ಎರಡು ತೊಲೆಗಳ ಅಂಚಿನಲ್ಲಿ ಸಿಂಹದ ಮುಖಗಳನ್ನು ಕೆತ್ತನೆ ಮಾಡಿದ್ದಾರೆ, ಈ ತೊಲೆಗಳ ಮೇಲೆ ಅಡ್ಡ ಮತ್ತು ಉದ್ದನಾಗಿ ಅರ್ಧ ಅಡಿ ದಪ್ಪನೆಯ ಮರದ ದಿಮ್ಮಗಳಿವೆ, ಇವುಗಳಲ್ಲೂ ಕುಸುರಿ ಕೆತ್ತನೆ, ಅರಳಿದ ಚಿಕ್ಕ ಪ್ರಮಾಣದ ಹೂವುಗಳು ಮತ್ತು ಬಳ್ಳಿಗಳ ಕೆತ್ತನೆ, ಇದರ ಮೇಲಿನ ಪಟ್ಟಿಯಲ್ಲಿ ಕುಸುರಿ ಕೆತ್ತನೆ ಹಾಗೂ ತೋರಣದ ಕೆತ್ತನೆ ಮಾಡಿದ ಪಟ್ಟಿ ಇದೆ, ಇದರ ಮೇಲೆ ಕಂಬಗಳು, ವಿವಿಧ ಶಿಲ್ಪಗಳಾದ ಕ್ರಾಂತಿಕಾರಿ ಬಸವಣ್ಣ, ಈಶ್ವರ ಪಾರ್ವತಿ ಹಾಗೂ ಗಣೇಶನ ಮೂರ್ತಿ ಒಂದು ಕಡೆ, ಆಂಜನೇಯ, ಕನಕದಾಸರು, ರೇವಣ ಸಿದ್ದೇಶ್ವರ ಮತ್ತೊಂದು ಕಡೆಯಲ್ಲಿ, ಲಕ್ಷ್ಮಿ, ಸರಸ್ವತಿ, ಗಣೇಶ ಇನ್ನೊಂದು ಕಡೆಯಲ್ಲಿ, ಬ್ರಂಹ, ವಿಷ್ಣು, ಮಹೇಶ್ವರ ಮಗದೊಂದು ಕಡೆಯಲ್ಲಿ ಕೆತ್ತನೆ ಮಾಡಿದ್ದು, ನಾಲ್ಕು ಮೂಲೆಗಳಲ್ಲಿ ಶಿವನಲಿಂಗ, ಮಲಗಿರುವ ನಂದಿ, ಗರುಡ, ವಾಲ್ಮೀಕಿ ಮಹರ್ಷಿ, ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿ ಮೂರ್ತಿಗಳನ್ನು ಕೆತ್ತನೆ ಮಾಡಿದ್ದಾರೆ, ಈ ಮೂರ್ತಿಗಳ ಸುತ್ತ ಮತ್ತು ಪಕ್ಕದಲ್ಲಿ ವಿವಿಧ ಅಲಂಕಾರಿಕಾ ಕೆತ್ತನೆ ಬಳ್ಳಿಗಳು, ಹಂಸ,

ಲಿಂಗ, ನಂದಿ, ಗರುಡ, ಸರ್ಪಗಳು, ಮೀನು, ಹೂವು, ಹೂವಿನ ಮೊಗ್ಗು ಮುಂತಾದ ಕೆತ್ತನೆ ಇದೆ. ರಥದ ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಕುದುರೆಯ ಕೆತ್ತನೆ ಇದ್ದು, ಕುದುರೆಯ ಎರಡೂ ಬದಿಗಳಲ್ಲಿ ಒಂದೊಂದು ಗಂಟೆಯನ್ನು ನೇತು ಹಾಕಿದ್ದಾರೆ.

ಎಂಟು ಕಂಬಗಳನ್ನೊಳಗೊಂಡ ದೇವರನ್ನು ಕೂರಿಸುವ ಪೀಠವಿದ್ದು, ಈ ಪೀಠವು ತಿರುಗುಣಿಯನ್ನು(ಬೇರಿಂಗ್) ಹೊಂದಿದೆ, ರಥವು ಮುಂದೆ ಹೋಗಿ ವಾಪಾಸ್ಸು ಬರುವಾಗ ಪೂರ್ತಿ ರಥವನ್ನು ತಿರುಗಿಸುವ ಬದಲು ಬೇರಿಂಗ್ ಇರುವ ದೇವರ ಪೀಠವನ್ನು ತಿರುಗಿಸಿ, ರಥವನ್ನು ಇನ್ನೊಂದು ದಿಕ್ಕಿನಿಂದ ಮುಂದೆ ಸಾಗಿಸಬಹುದು.

ರಥದ ನಿರ್ಮಾಣಕ್ಕೆ ಭಕ್ತಾದಿಗಳು, ನೌಕರರು, ದಾನಿಗಳು ಚಂದಾ ಹಣವನ್ನು(ದೇಣಿಗೆಯನ್ನು) ನೀಡಿದ್ದಾರೆ, ಇದಲ್ಲದೆ ಗ್ರಾಮದಲ್ಲಿರುವ ಕುಂಟುಂಬಗಳಿಗೆ ಅವರ ಆರ್ಥಿಕ ಮಟ್ಟವನ್ನು ಪರಿಗಣಿಸಿ ಇಂತಿಷ್ಟು ಹಣವನ್ನು ನಿಗದಿ ಮಾಡಿ ರಥ ನಿರ್ಮಾಣಕ್ಕೆ ಬಳಸಲಾಗಿದೆ, ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಮರಗಳನ್ನು ರಥ ನಿರ್ಮಾಣ ಮಾಡಲು ಕೊಟ್ಟಿದ್ದಾರೆ, ಉಳಿದಂತೆ ಬೇಕಾಗುವ ವಿವಿಧ ಜಾತಿಯ ಮರಗಳನ್ನು ದೇವಸ್ಥಾನದ ರಥ ನಿರ್ಮಾಣ ಸಮಿತಿಯವರು ಖರೀದಿ ಮಾಡಿದ್ದಾರೆ.

ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ರಥೋತ್ಸವ ನಡೆಯುತ್ತದೆ, ರಥೋತ್ಸವಕ್ಕೆ ಸುಮಾರು ಒಂದು ಸಾವಿರದ ಐದು ನೂರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸುತ್ತಮುತ್ತಲ ಹಳ್ಳಿಗಳಿಂದಲೂ ರಥೋತ್ಸವದ ಸಮಯಕ್ಕೆ ಭಕ್ತಾದಿಗಳು ಬರುತ್ತಾರೆ, ಮೂರು ದಿನಗಳು ಜಾತ್ರೆ ನಡೆಯುತ್ತಿದ್ದು ಮೊದಲ ದಿನ ದೇವರಿಗೆ ಅಭಿಷೇಕ, ಗಂಗಾ ಪೂಜೆ, ರಥಕ್ಕೆ 101ಎಡೆ ಹಾಕುವುದು, ಆರುತಿ ನಂತರ ರಥೋತ್ಸವ, ಎರಡನೇ ದಿನ ಪಲ್ಲಕ್ಕಿ ಉತ್ಸವ, ದೇವರ ಮೆರವಣಿಗೆ, ಮೂರನೇ ದಿನ ಓಕುಳಿ, ಪ್ರಸಾದ ವಿನಿಯೋಗ ಹಾಗೂ ಮಹಾಮಂಗಳಾರುತಿ ನಡೆಯುತ್ತದೆ.

ರಥೋತ್ಸವ ನಡೆಯುವ ದಿವಸ ಮೊದಲಿಗೆ ಪೂಜಾರರ ಮನೆಯಿಂದ ಬಲಿಬಾನ(ಎಡೆ) ಬರುತ್ತದೆ, ಇದನ್ನು ಅಲಂಕಾರ ಮಾಡಿದ ರಥದ ಸುತ್ತಲೂ 12ಕೈವಾಡಸ್ಥರು ಸೇರಿ ಎಡೆ ಹಾಕುತ್ತಾರೆ, ನಂತರ ಪೂಜೆ ನಡೆದು, ದೇವಸ್ಥಾನದಿಂದ ಉಚ್ಚಯದಲ್ಲಿ ದೇವರನ್ನು ತಂದು ರಥದಲ್ಲಿ ಕೂರಿಸುತ್ತಾರೆ, ಗ್ರಾಮದ ಉತ್ತರ ದಿಕ್ಕಿಗೆ ಹೈಸ್ಕೂಲ್ ಬಳಿ ಇರುವ ಪಾದಗಟ್ಟೆಯ ವರೆವಿಗೆ ರಥವು ಹೋಗಿ ಅಲ್ಲಿ ಪೂಜೆ ಮುಗಿಸಿಕೊಂಡು ಬರುತ್ತದೆ, ನಂತರ ರಥದಲ್ಲಿರುವ ದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ, ಗ್ರಾಮಕ್ಕೆ ಹೊಂದಿಕೊಂಡೆ ಇರುವ ಗ್ರಾಮದ ಮತ್ತೊಂದು ಭಾಗ ಎನ್ನುವ ಹಿರೇಮಧುರೆ ಗ್ರಾಮದಲ್ಲಿ ಮೆರವಣಿಗೆ ಮಾಡಿ ನಂತರ ದೇವಸ್ಥಾನದಲ್ಲಿ ದೇವರನ್ನು ಇಡುತ್ತಾರೆ, ರಥಕ್ಕೆ ಹಾಕಿದ್ದ ಹೂವಿನ ಹಾರಗಳು, ರಥದ ಮೇಲೆ ಕಟ್ಟಿದ್ದ ಮುಕ್ತಿ ಬಾವುಟ ಹರಾಜು ಮಾಡುತ್ತಾರೆ, ಭಕ್ತಾದಿಗಳು ಹರಾಜು ಕೂಗಿ ಇವುಗಳನ್ನು ಪಡೆಯುತ್ತಾರೆ, ಈ ವರ್ಷದ ಮುಕ್ತಿ ಬಾವುಟವು 40.000–00(ನಲವತ್ತು ಸಾವಿರ)ರೂಗಳಿಗೆ ಹರಾಜು ಆಗಿದೆ.

ದೇವರ ರಥವನ್ನು ಎಳೆಯುವ ಹಗ್ಗವು ಸುಮಾರು 50ಅಡಿ ಉದ್ದ 10ಇಂಚು ದಪ್ಪವಿದೆ, ತೆಂಗಿನ ನಾರಿನಿಂದ ಈ ಹಗ್ಗವನ್ನು ತಯಾರಿಸಿರುತ್ತಾರೆ, ಇದನ್ನು ತರುವುದು ಇದೇ ಗ್ರಾಮದ ಮಾದಿಗ ಸಮುದಾಯದವರದು, ಮೊದಲು ಹಗ್ಗವನ್ನು ಇವರೇ ತೆಂಗಿನ ನಾರಿನಿಂದ ತಯಾರು ಮಾಡುತ್ತಿದ್ದರು, ಈಗ ಹಗ್ಗವನ್ನು ತಯಾರಿಸುವ ಕಲಾವಿದರು ಇಲ್ಲದ ಕಾರಣ ಬೇರೆ ಕಡೆಯಿಂದ ಖರೀದಿ ಮಾಡಿ ತರುತ್ತಾರೆ.

ರಥವನ್ನು ಮಾಡಿರುವ ಶಿಲ್ಪಿಗಳಿಗೆ ಆರು ಲಕ್ಷ (6,00000–00)ಸಂಭಾನೆಯನ್ನು ಕೊಟ್ಟಿದ್ದಾರೆ, ರಥವನ್ನು ಮಾಡಿಸಲು ಒಟ್ಟು ಹದಿನೆಂಟು ಲಕ್ಷ (18,00000–00)ರೂಗಳು ಖರ್ಚಾಗಿದ್ದು, ಊರಿಗೆ

ಸೇರಿದ ಕೆರೆಯಲ್ಲಿ ನೀರು ಬಂದಾಗ ಮೀನು ಮರಿಗಳನ್ನು ಬಿಟ್ಟು ಹರಾಜು ಮಾಡುತ್ತಾರೆ, ಇದರಿಂದ ಬಂದ ಹಣವನ್ನು ಊರಿನ ಅಭಿವೃದ್ಧಿ ಕೆಲಸ ಹಾಗೂ ದೇವಸ್ಥಾನಗಳ ಅಭಿವೃದ್ಧಿಗಾಗಿ ಬಳಸುತ್ತಾರೆ, ಕಳೆದ ವರ್ಷ ಕೆರೆ ಹರಾಜು ಮಾಡಿದ ಹಣದಲ್ಲಿ ಜೊತೆಗೆ ದೇವಸ್ಥಾನದ ಕಮಿಟಿಯಲ್ಲಿ ಸ್ವಲ್ಪ ಹಣವಿದ್ದು ಇದನ್ನೂ ಸಹ ರಥದ ನಿರ್ಮಾಣಕ್ಕೆ ಬಳಸಿದ್ದಾರೆ.

ಕಪ್ಪುಜಾಲಿ ಮರದಿಂದ ರಥದ ಅಚ್ಚು ಮತ್ತು ನಾಲ್ಕು ಗಾಲಿಗಳನ್ನು ಮಾಡಿದ್ದು ತೊಲೆ, ಪಟ್ಟಿಗಳು, ಕುಸುರಿ ಕೆತ್ತನೆ ಭಾಗ ಮತ್ತು ಮೂರ್ತಿಗಳನ್ನು ಮಾಡಲು ಮತ್ತಿ, ಹೊನ್ನೆ, ಬೇವು, ತೇಗದ ಮರವನ್ನು ಬಳಸಲಾಗಿದೆ.

ಪ್ರತಿವರ್ಷ ಮಾಡುವ ಜಾತ್ರೆಗೆ ಸುಮಾರು 70ರಿಂದ 80ಸಾವಿರ ರೂಗಳ ಖರ್ಚು ತಗುಲುತ್ತದೆ, ಕರಡಿ ಚಮಾಳ, ವೀರಗಾಸೆ, ಡೊಳ್ಳುಕುಣಿತ, ಕೋಲಾಟ, ಆರ್ಕೆಸ್ಟ್ರಾ, ಡ್ರಮ್ ಸೆಟ್ಟು ಮುಂತಾದ ವಾದ್ಯಗಳ ಸಮೇತ ನಂದಿಕೋಲು ಕುಣಿತ, ಕೀಲುಕುದುರೆ ಕುಣಿತವು ರಥೋತ್ಸವದ ಸಮಯದಲ್ಲಿ ಇರುತ್ತದೆ, ನಂತರ ರಾತ್ರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಗೂ ಕಲಾ ತಂಡಗಳಿಂದ ನಾಟಕ ಪ್ರದರ್ಶನವಿರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಮಲ್ಲಿಕಾರ್ಜುನ S/O ಶಿವಣ್ಣ – ಪೂಜಾರ್

2). ರಂಗಪ್ಪ S/O ಈರಪ್ಪ – ಗ್ರಾಮಸ್ಥರು

3). ಮಂಜಣ್ಣ S/O ದುರುಗಪ್ಪ – ಗ್ರಾಮಸ್ಥರು

4). ಸಿದ್ದೇಶ S/O ಉಂಡಾಡಿ ಬಸಪ್ಪ – ಗ್ರಾಮಸ್ಥರು

5). ಬೊಮ್ಮಪ್ಪ S/O ಮಲ್ಲಪ್ಪ – ಗ್ರಾಮಸ್ಥರು

ದೇವಸ್ಥಾನ ಕಮಿಟಿ ಪದಾಧಿಕಾರಿಗಳು:

1). ಬಸವರಾಜ – ಅಧ್ಯಕ್ಷರು

2). ಆರ್. ಮಲ್ಲೇಶಪ್ಪ – ಕಾರ್ಯದರ್ಶಿ

3). ಶಶಿಧರ –ಖಜಾಂಚಿ

4). ಶಿವಲಿಂಗಪ್ಪ – ನಿರ್ದೇಶಕರು

5). ಚಂದ್ರರೆಡ್ಡಿ – ನಿರ್ದೇಶಕರು

6). ಮರಿಯಪ್ಪ – ನಿರ್ದೇಶಕರು

3). ಸಿದ್ದಾಪುರ, ಈಶ್ವರನ ರಥ:

ಚಳ್ಳಕೆರೆ ನಗರಕ್ಕೆ ಸಮೀಪದಲ್ಲಿ ಈ ಗ್ರಾಮವಿದೆ, ಸಿದ್ದರು, ಸಂತರು ಬೇರೆ ಬೇರೆ ಭಾಗಗಳಿಂದ ಇಲ್ಲಿಗೆ ಬಂದು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುತ್ತಿದ್ದರಂತೆ, ಕೆಲವರು ಇಲ್ಲಿಯೇ ನೆಲೆ ನಿಂತು ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಿದ ಕಾರಣದಿಂದ ಸಿದ್ದ ಪುರುಷರ ನೆಲೆ ಸಿದ್ದಾಪುರವಾಗಿರಬಹುದು ಎಂಬುದು ಗ್ರಾಮದವರ ಅಭಿಪ್ರಾಯ.

ಉತ್ತರಕ್ಕೆ ಸ್ವಲ್ಪ ದೂರದಲ್ಲಿ ರಾಜರ ಆಳ್ವಿಕೆಯ ಕೋಟೆ ಬಾಗಿಲು ಇದೆ, ಸುತ್ತಲೂ ಕೋಟೆ ಇದ್ದು ಈಗ ನಶಿಸಿಹೋಗಿದೆ, ಊರಿನಲ್ಲಿ ನೆಲೆಸಿರುವ ಮಾರಮ್ಮ ದೇವರಿಗೆ ಪ್ರತಿ ವರ್ಷ ಆಗಸ್ಟ್‌ನಲ್ಲಿ ಜಾತ್ರೆ ಮಾಡುತ್ತಾರೆ, ಭೂತಪ್ಪ, ಜುಂಜಪ್ಪ, ಆಂಜನೇಯ, ಅಜ್ಜಯ್ಯ, ತಿಮ್ಮಪ್ಪ, ಮಾರಮ್ಮ, ದುರುಗಮ್ಮ, ಕುಕ್ಕಲಾಟಮ್ಮ, ಕುಕ್ಕುವಾಡೇಶ್ವರಿ, ಕರಿಬಸವೇಶ್ವರ, ಸುಂಕಲಮ್ಮ ಮತ್ತು ಈಶ್ವರ ದೇವಾಲಯಗಳಿವೆ, ಪ್ರತಿ ವರ್ಷ ಪೀರಲ ದೇವರಿಗೆ ಕೊಂಡ ಹಾಯುವುದು, ಬಲಿ ಕಾರ್ಯ ನಡೆಯುತ್ತದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಗ್ರಾಮದಲ್ಲಿ ನೆಲೆಸಿರುವ ಈಶ್ವರ ದೇವರಿಗೆ ಮೊದಲು ಶಿಲ್ಪಗಳು ಇಲ್ಲದ ಸಾಧಾರಣವಾದ ರಥವಿದ್ದು ಅದು ಶಿಥಿಲಾಸ್ಥೆಯಲ್ಲಿದ್ದ ಕಾರಣ ಈಗ ಊರಿನವರು, ಭಕ್ತಾದಿಗಳು ಸೇರಿ 2016ರಲ್ಲಿ ಹೊಸದಾದ ರಥವನ್ನು ಮಾಡಿಸಿದ್ದಾರೆ, ಇದೇ ಗ್ರಾಮದ ವಾಸಿಗಳಾಗಿರುವ ಸಂಪ್ರದಾಯ ಶಿಲ್ಪಿಗಳಾದ ಇಬ್ಬರು ಅಣ್ಣತಮ್ಮಂದಿರು ಸೇರಿ ರಥವನ್ನು ಮಾಡಿದ್ದಾರೆ.

ನುಗ್ಗೆಹಳ್ಳಿ ನಾಗರಾಜ್ ಎನ್ನುವವರು ಸಂಪ್ರದಾಯ ಶಿಲ್ಪಿಗಳು ಮತ್ತು ನುರಿತ ಶಿಲ್ಪಕಲಾವಿದರಾಗಿದ್ದು ಸಿದ್ದಾಪುರದ ಶಿಲ್ಪಿಗಳಿಗೆ ಸಂಬಂಧಿಕರು ಕೂಡ, ಆದಕಾರಣ ಅವರ ನೆತೃತ್ವದಲ್ಲಿ ಮತ್ತು ಮಾರ್ಗದರ್ಶನದಲ್ಲಿ ಈ ಗ್ರಾಮದ ಶಿಲ್ಪಿಗಳಾದ ಚಿಕ್ಕಣ್ಣ ಮತ್ತು ನಾಗರಾಜ್ ರವರುಗಳು ಪ್ರಥಮ ಬಾರಿಗೆ ರಥವನ್ನು ಸುಂದರವಾಗಿ ಮಾಡಿದ್ದಾರೆ, ನುಗ್ಗೆಹಳ್ಳಿ ನಾಗರಾಜು ಇವರು ರಥದ ಕೆತ್ತನೆಗೆ ಮೊದಲ ಪೂಜೆ ಮತ್ತು ರಥದ ಕೆಲಸ ಸಂಪೂರ್ಣ ಮುಗಿದ ಮೇಲೆ ಕೊನೆಯ ಪೂಜೆಯನ್ನೂ ಮಾಡಿಕೊಟ್ಟಿದ್ದು ಮಧ್ಯದಲ್ಲಿ ಕೆಲವು ದಿನ ಬಂದು ಕೆಲಸವನ್ನು ನೋಡಿಕೊಂಡು ಸಲಹೆ ಸೂಚನೆಗಳನ್ನು ಕೊಟ್ಟು ಹೋಗುತ್ತಿದ್ದರು, ಒಟ್ಟು 9ತಿಂಗಳುಗಳ ಕಾಲ ರಥವನ್ನು ನಿರ್ಮಾಣ ಮಾಡಿದ್ದಾರೆ, ರಥದ ನಿರ್ಮಾಣಕ್ಕೆ ಹೊನ್ನೆ, ಬೇವು, ತೇಗ ಮರಗಳನ್ನು ಬಳಸಿದ್ದಾರೆ.

ರಥದ ಗಾಲಿಗಳು ನಾಲ್ಕುವರೆ ಅಡಿ (4,1/2ಅಡಿ) ವ್ಯಾಸವುಳ್ಳವುಗಳಾಗಿವೆ, ಇವುಗಳನ್ನು ಹೊನ್ನೆ ಮರದಿಂದ ಮಾಡಿದ್ದಾರೆ, ಈ ಗಾಲಿಗಳಿಗೆ ಅಳವಡಿಸಿರುವ ಅಚ್ಚು ಸಹ ಹೊನ್ನೆ ಮರದಿಂದ ಮಾಡಿದ್ದು ಇದರ ಉದ್ದ 12ಅಡಿ, ದಪ್ಪ 15ಇಂಚು, ಇದರ ಕೋಪು ಅಂದರೆ ಗಾಲಿಗಳನ್ನು ಅಳವಡಿಸುವ ಭಾಗ ಇದು 9ರಿಂದ 10ಇಂಚು ದಪ್ಪ ಇರುತ್ತದೆ, ರಥಕ್ಕೆ ಬೇಕಾದ ಮರಗಳಲ್ಲಿ ಕೆಲವನ್ನು ಸುತ್ತ ಮುತ್ತಲಿನ ಊರುಗಳ ಭಕ್ತಾದಿಗಳು ತಮ್ಮ ಜಮೀನುಗಳಲ್ಲಿ ಬೆಳದ ಬೇವು, ಜಾಲಿ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ, ಇನ್ನುಳಿದಂತೆ ತೇಗ ಒಂದು ಘನ ಅಡಿಗೆ 3,500-00(ಮೂರು ಸಾವಿರದ ಐದುನೂರು)ರೂಗಳಂತೆ ಒಟ್ಟು 100ಅಡಿಗಳ ತೇಗದ ಮರವನ್ನು ಖರೀದಿ ಮಾಡಿ ತಂದಿದ್ದಾರೆ, ಇದರ ಜೊತೆಗೆ ಹೊನ್ನೆ ಮರಗಳನ್ನು ಮತ್ತು ಇತರೆ ಕೆಲವು ಸಾಮಾನುಗಳನ್ನು ದೇವಸ್ಥಾನ ಕಮಿಟಿಯವರು ಖರೀದಿ ಮಾಡಿದ್ದಾರೆ.

ರಥವನ್ನು ಮಾಡಿದ ಶಿಲ್ಪಿಗಳಿಗೆ 5,60,000-00(ಐದು ಲಕ್ಷದ ಅರವತ್ತು ಸಾವಿರ ರೂಗಳು)ನ್ನು ಸಂಭಾವನೆ ಕೊಟ್ಟಿದ್ದಾರೆ, ರಥದ ನಿರ್ಮಾಣಕ್ಕೆ ಒಟ್ಟು 20,00000-00(ಇಪ್ಪತ್ತು ಲಕ್ಷ)ರೂಗಳು ಖರ್ಚಾಗಿದೆ, ರಥದಲ್ಲಿ ಒಟ್ಟು 24ದೊಡ್ಡ ಗಾತ್ರದ, 12ಚಿಕ್ಕ ಗಾತ್ರದ ಶಿಲ್ಪಗಳನ್ನು ಮಾಡಿದ್ದಾರೆ, ಇವುಗಳಲ್ಲಿ ಕರಿಬಸಜ್ಜಯ್ಯ, ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿ, ವೀರಭದ್ರ, ಕಾಳಮ್ಮ, ನಂದಿ, ಲಕ್ಷ್ಮೀ, ಗಣೇಶ, ಸರಸ್ವತಿ ಮತ್ತು ಶಿವನ ವಿವಿಧ ಲೀಲೆಗಳನ್ನು, ಸ್ಥಳೀಯ ದೇವರುಗಳ ಮೂರ್ತಿಗಳನ್ನು ಮಾಡಿದ್ದಾರೆ, ಜೊತೆಗೆ ಆಚಾರ್‌ರವರ ಕುಲದೈವದ ಮೂರ್ತಿಯನ್ನು ಕೆತ್ತನೆ ಮಾಡಿದ್ದು ಇದರ ಜೊತೆಗೆ ರಥಕ್ಕೆ ಅಥವಾ ರಥದಲ್ಲಿರುವ ಶಿಲ್ಪಗಳಿಗೆ ದೃಷ್ಟಿಯಾಗಬಾರದು ಎಂದೂ ರಥಗಳ ನಾಲ್ಕು ಮೂಲೆಗಳಲ್ಲಿ ನಗ್ನ ಹಾಗೂ ಲೈಂಗಿಕ ಕ್ರಿಯೆಯಲ್ಲಿ ತೊಡಗಿದಂತೆ ಇರುವ ಮನುಷ್ಯರ ಕೆತ್ತನೆ ಇದೆ.

ಒಟ್ಟು 31ಅಡಿಗಳ ಎತ್ತರವಿರುವ ರಥದಲ್ಲಿ 4,1/2ಅಡಿ ಎತ್ತರದ ಗಾಲಿಗಳು, ಅಚ್ಚು, ತೊಲೆಗಳು ಅಡ್ಡಪಟ್ಟಿಗಳು, ಕಂಬಗಳು, ಪೀಠ ಮತ್ತು ಶಿಲ್ಪಗಳಿರುವ ಭಾಗ ಸೇರಿ 11,1/2ಅಡಿ ಎತ್ತರ, ಕಬ್ಬಿಣದ ಸಲಾಕೆಯಿಂದ(ಪ್ಲಾಟ್) ಮಾಡಿರುವ ಡೂಮು 12ಅಡಿ ಎತ್ತರ, 3ಅಡಿ ಎತ್ತರದ ಕಳಶ ಎಲ್ಲವೂ ಸೇರಿ 31ಅಡಿ ಎತ್ತದ ರಥ ಇದಾಗಿದೆ, ದೇವರನ್ನು ಕೂರಿಸುವ ಪೀಠವು 2,1/2ಅಡಿ ಎತ್ತರವಾಗಿದ್ದು, ಈ ಪೀಠವನ್ನು ಬೇರೆಡೆಗೆ ಎತ್ತಿ ಇಡಬಹುದಾಗಿದೆ ಹಾಗಾಗಿ ರಥದ ಎರಡೂ ದಿಕ್ಕಿಗೆ ದೇವರನ್ನು ತಿರುಗಿಸಿ ಇಡಬಹುದು, ಪೀಠದ ಕೆಳಗೆ ಅರ್ಧ ಅಡಿ ಮರದ ಕಾಲುಗಳನ್ನು ನಾಲ್ಕು ಮೂಲೆಗಳಲ್ಲಿ ಮಾಡಿದ್ದು

ಪೀಠವನ್ನು ಕೂರಿಸುವ ಜಾಗದಲ್ಲಿ ಕೆಳಗಿನ ಹಲಗೆಗೆ ನಾಲ್ಕು ರಂದ್ರಗಳನ್ನು ಮಾಡಿದ್ದು ಪೀಠದ ಕಾಲುಗಳನ್ನು ಆ ರಂದ್ರದ ಒಳಗೆ ಇಟ್ಟರೆ ದೇವರು ಕೂರಿಸಿದಾಗ ರಥವು ಅಲುಗಾಡಿದರೂ ಪೀಠವು ಅಲುಗಾಡದು, ಪೀಠದಲ್ಲಿ ಕೂರಿಸಿರುವ ದೇವರು ಸಹ ಭದ್ರವಾಗಿರುತ್ತದೆ, ದೇವರನ್ನು ಕೂರಿಸುವ ಜಾಗಕ್ಕೆ ಬ್ರಹ್ಮಾಸನ ಅಥವಾ ದೇವಾಸನ ಎಂದು ಕರೆಯುತ್ತಾರೆ.

ಪ್ರತಿ ವರ್ಷ ಕಾರ್ತಿಕ ಮಾಸದ ಕೊನೆವಾರದಲ್ಲಿ ರತೋತ್ಸವ, ಜಾತ್ರೆ ನಡೆಯುತ್ತದೆ, ಮೂರು ದಿನಗಳು ನಡೆಯುವ ಈ ಜಾತ್ರೆಯಲ್ಲಿ ಮೊದಲ ದಿನ ದೇವರಿಗೆ ಅಭಿಷೇಕ, ಪೂಜೆ, ದೀಪಾಲಂಕಾರ, ಆರುತಿ ನಡೆದರೆ, ಎರಡನೇ ದಿನ ಉಚ್ಚಯ, ರತೋತ್ಸವ, ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಕೊನೆ ದಿನ ಓಕುಳಿ, ಮಹಾಮಂಗಳಾರುತಿ ನಡೆಯುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ನಾಗರಾಜ್ – ಸದರಿ ಗ್ರಾಮದ ಶಿಲ್ಪಿಗಳು

2). ಚಿಕ್ಕಣ್ಣಾಚಾರ್ – ಸದರಿ ಗ್ರಾಮದ ಶಿಲ್ಪಿಗಳು

3). ಸಿದ್ದೇಶ್ – ಗ್ರಾಮದವರು

4). ದುಗ್ಗಾವರ(ದುರ್ಗಾವರ), ರಂಗನಾಥ ದೇವರ ರಥ:

ದುರ್ಗಾಂಬಿಕ ದೇವರು ಈ ಊರಿನಲ್ಲಿ ನೆಲೆಸಿರುವ ಕಾರಣದಿಂದ ಊರಿಗೆ ದುರ್ಗಾವರ ಎಂಬ ಹೆಸರು ಬಂದಿದೆ, ದುರುಗಮ್ಮ, ದುರ್ಗಮ್ಮ, ದುಗ್ಗಮ್ಮ, ದುರ್ಗಾಂಬಿಕ, ದುಗ್ಗಾಂಬಿಕ ಎಂದು ಈ ಊರಿನ ದೇವತೆಯನ್ನು ಕರೆಯುವುದುಂಟು, ದುರ್ಗಾವರ ಕ್ರಮೇಣ ಜನರ ಆಡು ಭಾಷೆಯಲ್ಲಿ ದುಗ್ಗಾಂಬಿಕವರ, ದುಗ್ಗಾವರ ಆಗಿದೆ.

ಗ್ರಾಮದ ಕೆಲಸ ಕಾರ್ಯಗಳ ಬಗ್ಗೆ, ದೇವರ ಕೆಲಸ ಕಾರ್ಯ, ಜಾತ್ರೆ ಹಬ್ಬ ಹರಿದಿನಗಳ ಬಗ್ಗೆ ಚರ್ಚಿಸಲು ಮತ್ತು ಜನಗಳು ವಿಶ್ರಾಂತಿಗಾಗಿ ದುಗ್ಗಮ್ಮ ದೇವಸ್ಥಾನದ ಮುಂದಿನ ಐತಿಹಾಸಿಕ ಕಾಲದ ಚಾವಡಿ ಇದೆ, ಉರಾಚೆ ರಂಗಪ್ಪ ದೇವರ ಬಂಡೆ ಇದೆ, ದುಗ್ಗಮ್ಮ ಅಥವಾ, ದುರುಗಮ್ಮ (ದುರ್ಗಮ್ಮ) ಮತ್ತು ರಂಗನಾಥಸ್ವಾಮಿ ದೇವರುಗಳು ಈ ಊರಿನಲ್ಲಿ ನೆಲೆಸಿ ಪೂಜೆಗೊಳ್ಳುತ್ತಿರುವದರಿಂದ ಈ ದೇವರುಗಳ ಹೆಸರುಗಳನ್ನು ಭಕ್ತಾದಿಗಳು ತಮ್ಮ ಮ್ಮಕಳಿಗೆ ದುರುಗಮ್ಮ, ದುರ್ಗಮ್ಮ, ಮಾರಕ್ಕ, ದುಗ್ಗಮ್ಮ, ರಂಗಮ್ಮ, ಗಂಡು ಮಕ್ಕಳಾದರೆ ದುರುಗೇಶ್, ರಂಗನಾಥ, ರಂಗಪ್ಪ, ಎಂಬುದಾಗಿ ಹೆಸರಿಡುತ್ತಾರೆ, ಊರಿನಲ್ಲಿ ಭೂತಪ್ಪ, ಮಲ್ಲೇಶ್ವರ, ರಂಗನಾಥಸ್ವಾಮಿ, ಮಾರಮ್ಮ, ಆಂಜನೇಯ, ಕುಕ್ಕಲಾಟಮ್ಮ, ರಂಗಪ್ಪನ ಬಂಡೆ ದೇವರುಗಳಿವೆ, ಡಿಸಂಬರ್ ತಿಂಗಳಲ್ಲಿ ಪೀರಲ ದೇವರಿಗೆ ಕೊಂಡವನ್ನು ಪ್ರತಿ ವರ್ಷ ಮಾಡುತ್ತಾರೆ, ಶ್ರಾವಣದಲ್ಲಿ ಮಾರಮ್ಮನ ಜಾತ್ರೆ ಮಾಡುತ್ತಾರೆ, ಕಾರ್ತಿಕ ಮಾಸದಲ್ಲಿ ರಂಗನಾಥಸ್ವಾಮಿಯ ವಿಶೇಷ ಜಾತ್ರೆ ನಡೆಯುತ್ತದೆ, ಗ್ರಾಮದ ಮಧ್ಯ ಭಾಗದಲ್ಲಿ ದುಗ್ಗಮ್ಮ ದೇವಸ್ಥಾನವಿದೆ.

ರಥ ಶಿಲ್ಪದ ವಿವರಣೆ ಹಾಗೂ ರತೋತ್ಸವ: ಲಕ್ಷ್ಮಿ ರಂಗನಾಥ ಸ್ವಾಮಿಯ ರಥವನ್ನು 2007ರಲ್ಲಿ ನಿರ್ಮಾಣ ಮಾಡಿದ್ದಾರೆ, ಇದಕ್ಕೂ ಮೊದಲು ಹಳೆಯ ಉಚ್ಚಯ ಇದ್ದು ಕಾಲಾ ನಂತರ ಇದು ಹಾಳಾಯಿತು, ನಂತರ ಊರವರೆಲ್ಲಾ ಸೇರಿ ತೇರನ್ನು ಮಾಡಿಸ ಬೇಕೆಂದು ನಿಶ್ಚಯಿಸಿ ನಾಯಕನಹಟ್ಟಿಯ ಸಂಪ್ರದಾಯ ಶಿಲ್ಪಿಯಾಗಿದ್ದ ತಿಪ್ಪೇಸ್ವಾಮಿ ಎನ್ನುವವರಿಂದ ರಥವನ್ನು ನಿರ್ಮಾಣ ಮಾಡಿಸಿದ್ದಾರೆ, ಅಂದು ಸ್ಥಳೀಯವಾಗಿ, ಎತೇಚ್ಚವಾಗಿ ಸಿಗುತ್ತಿದ್ದ ಕಪ್ಪು ಜಾಲಿ, ಬೇವು, ಬಾಗಿಮರಗಳಿಂದ ಈ ರಥವನ್ನು ಮಾಡಿಸಿದ್ದಾರೆ.

ರಥವನ್ನು ಮಾಡಿದ ಶಿಲ್ಪಿಗೆ ಅಂದು 65,000–00(ಅರವತ್ತೈದು ಸಾವಿರ)ರೂಗಳನ್ನು ಸಂಭಾವನೆಯಾಗಿ ಕೊಟ್ಟಿದ್ದರಂತೆ, ಮರಗಳನ್ನು ಕೆಲವು ಭಕ್ತರು ದಾನವಾಗಿ, ಉಚಿತವಾಗಿ ಕೊಟ್ಟಿದ್ದು,

ಉಳಿವಂತೆ ಶಿಲ್ಪಿಗಳಿಗೆ ಕೊಟ್ಟ ಸಂಭಾವನೆ ಮತ್ತು ಇತರೆ ರಥಕ್ಕೆ ಬೇಕಾದ ವಸ್ತುಗಳನ್ನು ತಂದ ಖರ್ಚು ಎಲ್ಲಾ ಸೇರಿ ಒಟ್ಟು 3,00000–00(ಮೂರು ಲಕ್ಷ)ರೂಗಳು ಖರ್ಚಾಗಿದೆ.

ಈಗಿರುವ ರಥವೂ ಸಾಧಾರಣವಾಗಿದೆ, ಎರಡು ಕಂಬಗಳ ಮಧ್ಯದಲ್ಲಿ ಒಂದರಂತೆ ನಾಲ್ಕು ದಿಕ್ಕಿಗೆ ತಲಾ ಮೂರು ಶಿಲ್ಪಗಳಂತೆ ಮಾಡಿದ್ದು ಇವುಗಳಲ್ಲಿ ಪರಶುರಾಮ, ಗಣಪತಿ, ಕೂರ್ಮಾವತಾರ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಆಂಜನೇಯ, ಉಗ್ರನರಸಿಂಹ, ಶ್ರೀಕೃಷ್ಣ, ವಿಘ್ನೇಶ್ವರ, ಮತ್ಸ್ಯವತಾರ, ಬೌದ್ಧಾವತಾರ, ಶ್ರೀರಾಮನ ಶಿಲ್ಪಗಳಿವೆ, ಅಚ್ಚಿನ ಮೇಲೆ ಯಾವುದೇ ಕೆತ್ತನೆ ಇಲ್ಲ, ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ತೊಲೆಯಲ್ಲಿ, ಹಾಗೂ ಅಲ್ಲಲ್ಲಿ ಹಾಕಿರುವ ಸಣ್ಣ ಪಟ್ಟಿಗಳಲ್ಲಿ ಅರಳಿದ ಹೂವುಗಳು, ಚಕ್ರಗಳು, ಎಲೆಬಳ್ಳಿಯಂತಹ ಕುಸುರಿ ಕೆತ್ತನೆ ಇದೆ, ದೇವರನ್ನು ಕೂರಿಸುವ ಪೀಠದಿಂದ ಮೇಲಕ್ಕೆ ಚೌಕಾಕಾರದ ಮರದ ರಿಪೀಸುಗಳನ್ನು ಲಂಬವಾಗಿ ನಿಲ್ಲಿಸಿದ್ದು ಇವುಗಳ ಮೇಲೆ ಅಡ್ಡಲಾಗಿ ಮರದ ಪಟ್ಟಿಗಳನ್ನು ಹಾಕಿದ್ದಾರೆ, ಈ ರಥವು ಮಳೆ ಹಾಗೂ ಗಾಳಿಯಿಂದ ಇಂದು ವಿನಾಶದ ಅಂಚಿಗೆ ಬಂದಿದೆ, ಯಾಕೆಂದರೆ ಬಯಲಿನಲ್ಲಿ ರಥವನ್ನು ನಿಲ್ಲಿಸುತ್ತಿದ್ದ ಕಾರಣ, ಈಗಷ್ಟೇ ಸ್ವಲ್ಪ ರೀತಿಯಲ್ಲಿ ಮರೆಯಾಗುವಂತೆ ತಗಡಿನ ಮನೆ ಮಾಡಿದ್ದಾರೆ ಆದರೂ ಅದು ಅಷ್ಟೇನೂ ರಕ್ಷಣೆಯನ್ನು ರಥಕ್ಕೆ ಕೊಡುತ್ತಿಲ್ಲ.

ಕಾರ್ತಿಕ ಮಾಸದಲ್ಲಿ ಕಾರ್ತಿಕೋತ್ಸವ ಹಾಗೂ ರಥೋತ್ಸವ ನಡೆಯುತ್ತದೆ, ಒಟ್ಟು ಮೂರು ದಿನ ಜಾತ್ರೆ ನಡೆಯುತ್ತದೆ, ಶನಿವಾರ ಮೊದಲ್ಗೊಂಡು ಜಾತ್ರೆಯನ್ನು ಪ್ರಾರಂಭಿಸುತ್ತಾರೆ, ಮೊದಲನೇ ದಿನ ಅಂದರೆ ಶನಿವಾರ ದೇವರಿಗೆ ವಿಶೇಷ ಪೂಜೆ, ದೀಪಾರಾಧನೆ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ, ಪ್ರಸಾದ ವಿನಿಯೋಗ ನಡೆಯುತ್ತದೆ.

ರಥೋತ್ಸವದ ಸಮಯದಲ್ಲಿ ನಂದಿಕೋಲಿನ ಕುಣಿತ, ತಪ್ಪಡೆ, ಗೊಂಬೆ ಕುಣಿತ, ಕರಡಿ ಚಮಾಳ ಮುಂತಾದ ವಾದ್ಯಗಳ ಕಲಾ ತಂಡಗಳಿರುತ್ತವೆ.

ಗ್ರಾಮದಲ್ಲಿ ನೆಲೆಸಿರುವ ಮಲ್ಲೇಶ್ವರ ದೇವರಿಗೆ ಹೊಸ ದೇವಸ್ಥಾನವನ್ನು ಕಟ್ಟಿ 28ವರ್ಷ ಆಗಿದೆ, ಸಿಮೆಂಟಿನಿಂದ ಕೆಲವು ಶಿಲ್ಪಗಳನ್ನು ದೇವಾಲಯದ ಮೇಲೆ ಮಾಡಿಸಿದ್ದಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಆರ್. ನಾರಾಯಣ – ಸದರಿ ಗ್ರಾಮದವರು

2). ರಂಗಪ್ಪ – ಸದರಿ ಗ್ರಾಮದವರು

3). ಮಲ್ಲೇಶ – ಗ್ರಾಮದವರು

4). ದುರುಗೇಶ – ಗ್ರಾಮದವರು.

5). ನಾಯಕನ ಹಟ್ಟಿ, ತಿಪ್ಪೇಸ್ವಾಮಿ ರಥ:

ಹಸುಗಳು ಇತರೆ ಜಾನುವಾರುಗಳೊಂದಿಗೆ ಊರೂರು ಅಲೆಯುತ್ತಾ ಬಂದು ಈಗಿನ ನಾಯಕನ ಹಟ್ಟಿ ಬಳಿ ಪಾಳೇಗಾರರು ಹಟ್ಟಿಯನ್ನು ಹಾಕಿಕೊಂಡು ನೆಲೆ ನಿಂತರು, ನಂತರ ಇವರ ಪಾಳೆಯ ಪಟ್ಟ ಅಸ್ತಿತ್ವಕ್ಕೆ ಬಂದ ಮೇಲೆ ಇವರು ಕಟ್ಟಿಕೊಂಡ ಹಟ್ಟಿಗೆ ನಾಯಕರಹಟ್ಟಿ ಎಂದು ಕರೆದರು, ನಂತರ 18ನೇ ಶತಮಾನದ ನಾಯಕರು ಆಳಿದ ಸ್ಥಳವಾಗಿ ನಾಯಕರಹಟ್ಟಿ ಎಂದು ಕರೆದಿರುವುದಾಗಿದೆ, ಈ ಗ್ರಾಮವು ವಿಜಯನಗರ ಅರಸರ ಕಾಲದಿಂದಲೂ ಐತಿಹಾಸಿಕ ಮಹತ್ವ ಉಳ್ಳದ್ದಾಗಿದೆ.

ಚಳ್ಳಕೆರೆಯಿಂದ ವಾಯುವ್ಯಕ್ಕೆ 22 ಕಿ.ಮೀ. ದೂರದಲ್ಲಿದೆ, ತಿಪ್ಪೇಸ್ವಾಮಿ ಎನ್ನುವ ಕಾಯಕಯೋಗಿ ಇಲ್ಲಿ ನೆಲೆಸಿ ಕಾಯಕದ ಮಹತ್ವ, ಆಧ್ಯಾತ್ಮದ ಅರಿವನ್ನು ಮತ್ತು ಇತರೆ ಜನೋಪಯೋಗಿ ಕೆಲಸಗಳನ್ನು ಮಾಡಿ ಇಲ್ಲಿ ಐಕ್ಯರಾದರು, ಈ ಕಾರಣದಿಂದ ಇದೊಂದು ಪುಣ್ಯಕ್ಷೇತ್ರವಾಗಿ ಹೆಸರು ಪಡೆದಿದೆ, ಸುಮಾರು 14ನೇ ಶತಮಾನದಲ್ಲಿ ಆಂದ್ರ ಪ್ರದೇಶದ ಮೂಲದಿಂದ ಬಂದ ಕಾಟ ಮಲ್ಲನಾಯಕನು

ವಿಜಯನಗರದರಸರ ಅಪ್ಪಣೆ ಪಡೆದು ಇಲ್ಲಿ ನೆಲೆ ನಿಂತು ಆಡಳಿತ ನಡೆಸಿದ್ದರಿಂದ "ನಾಯಕರಹಟ್ಟಿ" ಎಂದು ಹೆಸರಾಗಿ, ಮುಂದೆ ಈತನ ವಂಶಿಕರೇ ಈ ಪ್ರದೇಶವನ್ನಾಳಿದ್ದು, ವಿಜಯನಗರದರಸರ ಪತನಾನಂತರ ಚಿತ್ರದುರ್ಗದ ಪಾಳೇಗಾರರ ಅಧೀನಕ್ಕೆ ಒಳಪಟ್ಟಿತು.

ದೇವಪುರುಷ ತಿಪ್ಪೇಸ್ವಾಮಿಯು ಈ ಗ್ರಾಮಕ್ಕೆ ಬಂದಾಗ ಮಲ್ಲಪ್ಪನಾಯಕನು ಆಳ್ವಿಕೆ ಮಾಡುತ್ತಿದ್ದನು, ತಿಪ್ಪೇಸ್ವಾಮಿಯ ಕೃಪಾಶೀರ್ವಾದದ ಫಲವಾಗಿ ಏಳು ಕೆರೆಗಳು ಹಾಗೂ ಹಲವಾರು ಗ್ರಾಮಗಳನ್ನು ನಿರ್ಮಾಣ ಮಾಡಿದ ಪುರಾವೆಗಳಿವೆ, ಒಳಮಠ ಮತ್ತು ಹೊರಮಠಗಳೆಂದು ಎರಡು ಮಠಗಳಿವೆ, ಹೊರಮಠ ಹಿಂದೂ, ಮುಸ್ಲಿಂರ ಸಾಮರಸ್ಯದ ಪ್ರತೀಕದಂತಿದೆ.

ಗ್ರಾಮದ ಹೊರ ಒಳಗೂ ಐತಿಹಾಸಿಕ ಮಂದಿರಗಳು, ಮಂಟಪಗಳು, ದೇವತಾ ಮೂರ್ತಿಗಳು, ಮಾಸ್ತಿಕಲ್ಲು, ವೀರಗಲ್ಲುಗಳಿವೆ, ತಿಪ್ಪೇರುದ್ರ ಸ್ವಾಮಿಯ ದೇವಸ್ಥಾನ ವಿಶಾಲವಾಗಿದ್ದು, ಶಿಖರ, ಹೊರಾಂಡವಿದೆ, ಕಲ್ಯಾಣ ಮಂಟಪ, ದಾಸೋಹ ಕೊಠಡಿ, ಹೊರಮಠ, ಒಳಮಠ, ಏಕಾಂತ ಮಠಗಳಿವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿ ವರ್ಷ ಪಾಲ್ಗುಣ ಮಾಸದ ಚಿತ್ತಾನಕ್ಷತ್ರದ ಸಮಯದಲ್ಲಿ ಜಾತ್ರೆ ನಡೆಯುತ್ತದೆ, ಜಾತ್ರೆಗೆ ನಾಡಿನಾದ್ಯಂತ ಭಕ್ತರು ಜಾತಿ ಬೇಧವಿಲ್ಲದೆ ಪಾಲ್ಗೊಳ್ಳುತ್ತಾರೆ, ದೊಡ್ಡ ರಥೋತ್ಸವ, ಚಿಕ್ಕ ರಥೋತ್ಸವ, ಕುಂಭ ಮಹೋತ್ಸವ, ತೆಪ್ಪೋತ್ಸವ, ರುದ್ರಾಕ್ಷಿಮಾಲೆ, ಮತ್ತು ಅಕ್ಷಯ ಬುತ್ತಿ ಕಾರ್ಯ, ಚಿಕ್ಕ ಜಾತ್ರೆ, ಧನುರ್ಮಾಸ ಕಾರ್ಯ, ಗುಗ್ಗರಿಹಬ್ಬ, ದೊಡ್ಡ ಕಾರ್ತಿಕೋತ್ಸವಗಳು ವಿಶೇಷವಾಗಿ ನಡೆಯುತ್ತವೆ.

ಈಶ್ವರ, ಆಂಜನೇಯ ಕೊಲ್ಲಾಪುರದಮ್ಮ, ದಡ್ಲಮಾರಮ್ಮ, ಪೆನ್ನೋಬಳಸ್ವಾಮಿ, ತಿಮ್ಮಪ್ಪ, ಮಾರಮ್ಮ ದೇವಸ್ಥಾನಗಳಿವೆ, ಕೊಲ್ಲಾಪುರದಮ್ಮ ದೇವರಿಗೆ ಪ್ರತಿವರ್ಷ ರಥೋತ್ಸವ ನಡೆಯುತ್ತದೆ, ಮಾರಮ್ಮ ದೇವರಿಗೆ ಜಾತ್ರೆಯ ಸಮಯದಲ್ಲಿ ಬಲಿ, ಹರಕೆ, ಆರುತಿ ಕಾರ್ಯಕ್ರಮಗಳು ನಡೆಯುತ್ತವೆ, ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಎತ್ತರವಾದ ಮಣ್ಣಿನ ದಿಬ್ಬಗಳಿದ್ದು, ಅಲ್ಲಿ ಮೂರು ಚಿಕ್ಕದಾದ ಐತಿಹಾಸಿಕ ದೇವಸ್ಥಾನಗಳಿವೆ, ಒಂದರಲ್ಲಿ ಕಪ್ಪು ಕಲ್ಲಿನ ಶಿವಲಿಂಗ ಮತ್ತು ನಂದಿ, ಇನ್ನೊಂದರಲ್ಲಿ ಮಲಗಿರುವ ದೊಡ್ಡ ನಂದಿ, ಮತ್ತೊಂದರಲ್ಲಿ ಶಿವನ ಲಿಂಗ ಮತ್ತು ನಂದಿ ಮೂರ್ತಿಗಳಿವೆ.

ತಿಪ್ಪೇಸ್ವಾಮಿಯ ರಥವು ಇಡೀ ಜಿಲ್ಲೆಯಲ್ಲಿಯೇ ದೊಡ್ಡ ರಥ ಹಾಗೂ ಪಂಚ(ಐದು)ಗಾಲಿಯ ವಿಶೇಷ ರಥವಾಗಿದೆ, ದೇವಲೋಕದಿಂದ ಪಂಚಗಣಾಧೀಶ್ವರರಾದ ಕೋಲಶಾಂತಯ್ಯ, ಮದ್ದಾನೇಶ, ತಿಪ್ಪೇಸ್ವಾಮಿ, ಕೆಂಪೇಶ, ಮಹಂತೇಶ ಸ್ವಾಮಿಗಳು ಭೂಲೋಕಕ್ಕೆ ಬಂದು ಧರ್ಮಕಾರ್ಯದಲ್ಲಿ ತೊಡಗಿದರು, ಅವರಲ್ಲಿ ನಾಯಕನಹಟ್ಟಿಯ ತಿಪ್ಪೇಸ್ವಾಮಿಯು ಒಬ್ಬರು, ಈ ಪಂಚಾಗಣಾಧೀಶ್ವರರ ಚರಿತ್ರೆಯನ್ನು ನೆನಪಿಸುವ ಮತ್ತು ಅವರ ಹೆಸರಿನಲ್ಲಿ ಒಂದೊಂದು ಗಾಲಿಯುಳ್ಳ ರಥವನ್ನು ಮಾಡಲಾಗಿದೆ, ಈ ಗಾಲಿಗಳು 12ಅಡಿ ಎತ್ತರ, 3ಅಡಿ ದಪ್ಪ, 10ಅಡಿ ವ್ಯಾಸ ಇವೆ, ಒಟ್ಟು 61ಅಡಿ ಎತ್ತರವಾದ ಈ ರಥವು ಬಹಳ ಹಳೆಯದ್ದಾಗಿದೆ, 1985ರಲ್ಲಿ ರಥದ ಸ್ವಲ್ಪ ಭಾಗಕ್ಕೆ ಹಾನಿಯಾಗಿದ್ದು ಗೊಪ್ಪೇನಹಳ್ಳಿ ಗ್ರಾಮದ ಸಂಪ್ರದಾಯ ಶಿಲ್ಪಿಗಳು ಮತ್ತು ನಾಯಕನಹಟ್ಟಿ ಗ್ರಾಮದ ಸಂಪ್ರದಾಯ ಶಿಲ್ಪಿಗಳು ಒಟ್ಟಿಗೆ ಸೇರಿ ರಥವನ್ನು ರಿಪೇರಿ ಮಾಡಿದ್ದರು.

ನೆಲಮಟ್ಟದಿಂದ ಕಳಸದವರೆವಿಗೆ ಸೇರಿ ಒಟ್ಟು 61ಅಡಿ ಎತ್ತರವಿದೆ, ರಥದ ನಿರ್ಮಾಣಕ್ಕೆ ತೇಗ, ನಂದಿ ಹಾಗೂ ಇತರೆ ಗಟ್ಟಿ ಮತ್ತು ಹೆಚ್ಚು ಬಾಳಿಕೆ ಬರುವ ಮರವನ್ನು ಬಳಸಲಾಗಿದೆ, ರಥವನ್ನು ನಿರ್ಮಾಣ ಮಾಡಿಸಿ ಬಹಳ ದಿನಗಳಾಗಿವೆ, ಸುಮಾರು 45ವರ್ಷಕ್ಕೂ ಮುನ್ನ ಮಾಡಿಸಿದ್ದಾಗಿದೆಯಂತೆ, ಪ್ರತಿವರ್ಷ ಜಾತ್ರೆಗೆ ಒಂದು ತಿಂಗಳು ಮುಂಚೆ ನುರಿತ ಶಿಲ್ಪಿಗಳನ್ನು ಕರೆಸಿ ರಿಪೇರಿ ಮಾಡಿಸುತ್ತಾರೆ, ಕೆಲವು ವರ್ಷ ನುಗ್ಗೆಹಳ್ಳಿ ಶಿಲ್ಪಿಗಳು, ಕೆಲವು ವರ್ಷ ತುಪ್ಪದಹಳ್ಳಿ ಶಿಲ್ಪಿಗಳು ರಿಪೇರಿ ಕೆಲಸವನ್ನು ಮಾಡುತ್ತಿದ್ದರು

ಈಗ ಸದರಿ ಗ್ರಾಮದವರು ರಿಪೇರಿ ಕೆಲಸವನ್ನು ಮಾಡುತ್ತಿದ್ದಾರೆ, ರಥದ ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ದಪ್ಪನೆಯ ತೊಲೆಯಲ್ಲಿ ನಾಲ್ಕೂ ಕಡೆಗಳಲ್ಲಿ ತಲಾ ಮೂರು ಉಬ್ಬು ಶಿಲ್ಪಗಳನ್ನು ಮಾಡಿದ್ದಾರೆ, ಇವುಗಳು ಮೇಲಿನ ತೊಲೆಯನ್ನು ಅಥವಾ ರಥವನ್ನು ಎತ್ತಿ ಹಿಡಿದಿರುವಂತೆ ಕಾಣುತ್ತವೆ, ಇದರ ಮೇಲಿನ ಅಡ್ಡಪಟ್ಟಿಯಲ್ಲಿ ಬಳ್ಳಿಯ ಕುಸುರಿ ಕೆತ್ತನೆ, ನಂತರದಲ್ಲಿ ಕೋಲಾಟ ನೃತ್ಯದಲ್ಲಿ ತೊಡಗಿರುವ ಮಹಿಳೆಯರ ಸಾಲು, ಇದರ ಮೇಲೆ ದೇವರನ್ನು ಕೂರಿಸುವ ಪೀಠವಿದ್ದು, ನಾಲ್ಕು ದಿಕ್ಕಿನಲ್ಲಿ ಒಂದು ಕಡೆ ತಿಪ್ಪೇಸ್ವಾಮಿಯ ನಿಂತಿರುವ ಶಿಲ್ಪ, ಇನ್ನೊಂದು ಕಡೆ ಗಣಪತಿ, ಮತ್ತೊಂದು ಕಡೆ ದೇವಿ, ಮಗದೊಂದು ಕಡೆ ಈಶ್ವರನ ಮೂರ್ತಿ ಇದ್ದು ಈ ಮೂರ್ತಿಗಳಿಗೆ ಪ್ರಭಾವಳಿಯಂತೆ ಕಮಾನು ಇದೆ, ನಾಲ್ಕು ಮೂಲೆಗಳಲ್ಲಿ ಬಾಯಿ ತೆರೆದು ಎರಡು ಕಾಲಿನಲ್ಲಿ ನಿಂತಿರುವ ಸಿಂಹದ ಕೆತ್ತನೆ ಇದೆ, ಈ ಸಿಂಹಗಳು ರಥದ ಭಾರವನ್ನು ತಲೆಯ ಮೇಲೆ ಹೊತ್ತು ನಿಂತಿರುವಂತಿವೆ, ಇನ್ನುಳಿದಂತೆ ವಿವಿಧ ಚಿಕ್ಕ ಚಿಕ್ಕ ಮೂರ್ತಿಗಳು, ಕುಸುರಿ ಕೆತ್ತನೆ ರಥದಲ್ಲಿ ಕಂಡುಬರುತ್ತದೆ.

ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಮುಜರಾಯಿಗೆ ಸೇರಿದ ದೇವಾಲಯವಾಗಿದ್ದು ಕರ್ನಾಟಕ ರಾಜ್ಯದಲ್ಲಿಯೇ ಹೆಸರುವಾಸಿಯಾಗಿರುವ ದೇವಾಲಯ ಹಾಗೂ ಜಾತ್ರೆ, ಕ್ಯಾಲೆಂಡರ್‌ಗಳಲ್ಲೂ ನಾಯಕನಹಟ್ಟಿ ಜಾತ್ರೆಯ ಬಗ್ಗೆ, ದಿನಾಂಕ ದಾಖಲಾಗಿರುತ್ತದೆ, ಈ ಜಾತ್ರೆಗೆ ನಾಡಿನ ಹಾಗೂ ಹೊರ ನಾಡಿನಿಂದಲೂ ಭಕ್ತರು ಬರುತ್ತಾರೆ.

ದೀಪೋತ್ಸವ, ಮಾಲೆಧರಿಸುವುದು, ಕೊಬ್ಬರಿ ಸುಡುವುದು, ಕಲ್ಯಾಣೋತ್ಸವ, ನಿತ್ಯ ದಾಸೋಹ, ಮುಂತಾದ ಧಾರ್ಮಿಕ ಕಾರ್ಯಗಳು ನಡೆಯುತ್ತವೆ.

ತಿಪ್ಪೇಸ್ವಾಮಿಯ ಚರಿತ್ರೆ ವಿಶೇಷವಾಗಿದ್ದು, ಈ ಕುರಿತು ಕೆಲವಾರು ಪುಸ್ತಕಗಳು, ನಾಟಕ ಪ್ರದರ್ಶನಗಳು, ಧ್ವನಿಸುರುಳಿಗಳು ಪ್ರಕಟವಾಗಿವೆ, ಚಲನ ಚಿತ್ರವೂ ರಚಿತವಾಗಿದೆ, ಈ ದೇವರಿಗೆ ಸಾಕಷ್ಟು ಭಕ್ತಾದಿಗಳು ಇದ್ದು ಧನ, ಧಾನ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ನೀಡುತ್ತಾರೆ.

ಮೊದಲಿಗೆ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಗಳು, ಹೋಮ ಹವನಾದಿಗಳು, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ, ಜಾತ್ರೆಯ ಸಮಯದಲ್ಲಿ 12ದಿನಗಳು ಜಾತ್ರೆಯ ಅಂಗವಾಗಿ ವಿವಿಧ ಉತ್ಸವಗಳಾದ ಗಣಪತಿ ಪೂಜೆ, ಸ್ವಸ್ತಿ ವಾಚನ, ಮಂಟಪ ಪೂಜೆ, ಕಂಕಣಧಾರಣೆ, ಪ್ರಕಾರೋತ್ಸವ, ಪಲ್ಲಕ್ಕಿ ಉತ್ಸವ, ಸರ್ಪವಾಹನೋತ್ಸವ, ಮಯೂರ ವಾಹನೋತ್ಸವ, ರಥಕ್ಕೆ ಕಳಸ ಸ್ಥಾಪನೆ, ಗಜ ವಾಹನೋತ್ಸವ, ಸಿಂಹ ವಾಹನೋತ್ಸವ, ವಾರೋತ್ಸವ, ಅಶ್ವವಾಹನೋತ್ಸವ, ರಥಕ್ಕೆ ತೈಲಾಭಿಷೇಕ, ವಸಂತೋತ್ಸವ ಮತ್ತು ಮರಿಪರಿಷೆ ನಡೆಯುತ್ತದೆ.

ಮೊದಲಿಗೆ ಉಚ್ಚಯ, ನಂತರ ಚಿಕ್ಕ ರಥೋತ್ಸವ ನಡೆದು ಕೊನೆಯಲ್ಲಿ ದೊಡ್ಡ ರಥೋತ್ಸವ(ಬ್ರಹ್ಮ ರಥೋತ್ಸವ) ನಡೆಯುತ್ತದೆ, ವಿವಿಧ ಬಣ್ಣದ ಬಟ್ಟೆಗಳು, ಏಳು ಬಣ್ಣದ ಬಾವುಟಗಳು, ಪಟಗಳಿಂದ ಅಲಂಕಾರವನ್ನು ರಥೋತ್ಸವದ ಸಮಯದಲ್ಲಿ ಮಾಡುತ್ತಾರೆ, ರಥದ ತುದಿಯಲ್ಲಿ 7ಅಡಿ ಕಳಸವನ್ನು ಪ್ರತಿಷ್ಠಾಪಿಸುತ್ತಾರೆ, ಇದಕ್ಕೆ ಧ್ವಜ ಬಾವುಟವನ್ನು ಕಟ್ಟಿದ್ದು ಈ ಬಾವುಟವು ರಥೋತ್ಸವದ ನಂತರ 50ಲಕ್ಷಕ್ಕೂ ಹೆಚ್ಚಿಗೆ ಹರಾಜು ಆಗುತ್ತದೆ, ರಥೋತ್ಸವದ ಸಮಯದಲ್ಲಿ ಕರಡಿ ಮಜಲು, ಓಲಗ, ನಗಾರಿ ವಿವಿಧ ವಾದ್ಯ ವೃಂದಗಳು, ಮಂಗಳ ವಾದ್ಯಗಳು, ತರತರದ ವೇಷ ಭೂಷಣಗಳು, ಗೊಂಬೆ ಕುಣಿತ, ವೀರಗಾಸೆ ಕುಣಿತ, ಡೊಳ್ಳು ಕುಣಿತ, ಕೀಲುಕುದುರೆ ಕುಣಿತ, ನಂದಿಕೋಲಿನ ಕುಣಿತ ಅಲಂಕಾರಗೊಂಡ ನಂದಿಯ ನಡಿಗೆ, ಪಂಜು, ಊಳಿಗದ ಹುಡುಗರು ಮುಂತಾದ ಆಟಗಳು ರಥದ ಮುಂದೆ ಸಾಗುತ್ತಿರುತ್ತವೆ, ರಥಕ್ಕೆ ಕಾಳು ಮೆಣಸು, ಸೂರುಬೆಲ್ಲ, ದವನ ಮತ್ತು ಬಾಳೆಹಣ್ಣುಗಳನ್ನು ಭಕ್ತರು ತೂರುತ್ತಾರೆ, ಊರಿನ ಮುಖ್ಯ ಜಾಗ ಮಲ್ಲಪ್ಪನಾಯಕನ ಸರ್ಕಲ್‌ನಿಂದ ಪಾದಗಟ್ಟೆಯವರೆವಿಗೂ ರಥವು

ಹೋಗಿ ಅಲ್ಲಿ ವಿಶೇಷ ಪೂಜೆ ನಡೆದು ನಂತರ ಮೊದಲಿನ ಜಾಗಕ್ಕೆ ವಾಪಾಸ್ಸು ಬರುತ್ತದೆ, ಇದಾದ ಮರುದಿನ ಸಿದ್ದಭುಕ್ತಿ, ಕೊನೆಯ ದಿನ ಓಕುಳಿ, ಮಹಾ ಮಂಗಳಾರುತಿ ಕಾರ್ಯ ನಡೆಯುತ್ತದೆ, ನಂತರ ಬರುವ ಸೋಮವಾರ ಮರುಪರಿಷೆ(ಕಿರು ಜಾತ್ರೆ) ನಡೆಯುತ್ತದೆ.

ರಥೋತ್ಸವಕ್ಕೆ ಮುನ್ನ ರಥಕ್ಕೆ ಬಲಿಬಾನ ಎಡೆ ಹಾಕುವ ಕಾರ್ಯ ನಡೆಯುತ್ತದೆ, ಲಿಂಗಾಯ್ತ ಸಮುದಾಯದವರಲ್ಲಿ ಹಟ್ಟಿಕೋಣದ ವಂಶಸ್ಥರು ರಥಕ್ಕೆ ಎಡೆ ಹೊರುವ ಕಾರ್ಯ ಮಾಡುತ್ತಾರೆ, ಎಡೆ ಎಂದರೆ ಹೊಸ ಮಣ್ಣಿನ ಪಾತ್ರೆಯಲ್ಲಿ ಹೊಸದಾಗಿ ಅದೇ ವರ್ಷ ಬೆಳೆದ ಅಕ್ಕಿಯಿಂದ ಅನ್ನಮಾಡುತ್ತಾರೆ, ಇದನ್ನು ರಥದ ನಾಲ್ಕು ದಿಕ್ಕಿಗೂ ಬಾಳೆ ಎಲೆ ಅಥವಾ ಮುದುಕದ ಎಲೆಗಳಿಂದ ತಯಾರಿಸಿದ (ತಟ್ಟೆಯ ಆಕಾರದಲ್ಲಿ ತಯಾರಿಸಿರುತ್ತಾರೆ) ಇದರ ಮೇಲೆ ಅನ್ನ ಮಾಡಿ ಅನ್ನದ ಮೇಲೆ ಬಾಳೆಹಣ್ಣು ಹಾಗೂ ಮೊಸರು ಹಾಕುತ್ತಾರೆ, ಈ ಮೊಸರನ್ನು ಗೊಲ್ಲರ ಸಮುದಾಯದವರು ತಂದುಕೊಡುತ್ತಾರೆ, ಇದನ್ನು ರಥದ ಸುತ್ತಲೂ ಹಾಕಿ ಪೂಜೆಯನ್ನು ಮಾಡುತ್ತಾರೆ ಈ ಪೂಜೆಯಲ್ಲಿ 12ಸಮುದಾಯದವರ (ಇದಕ್ಕೆ ಹಳ್ಳಿಯಲ್ಲಿ 12ಕೈವಾಡಸ್ತರು ಎನ್ನುತ್ತಾರೆ)ಮುಖಂಡರು ಖಡ್ಡಾಯವಾಗಿ ಹಾಜರಿರುತ್ತಾರೆ, ಇವರು ಎಡೆಹಾಕಿದ ಮೇಲೆ ರಥಕ್ಕೆ ಪೂಜೆ ಮಾಡುತ್ತಾರೆ, ಇದಾದ ನಂತರ ರಥವು ಮುಂದೆ ಸಾಗುವುದು.

ರಥವನ್ನು ಮುಂದೆ ಎಳೆಯುವ ತೆಂಗಿನ ನಾರಿನಿಂದ ಮಾಡಿದ ಹಗ್ಗವನ್ನು ತರುವುದು ಮನ್ನೆಕೋಟೆ ಗ್ರಾಮದ ಭಕ್ತರ ಜವಾಬ್ದಾರಿ, ಈ ಹಗ್ಗವು ಹಲವು ಟನ್ ತೂಕವಿದ್ದು 200ಮೀಟರ್ ಉದ್ದವಿರುತ್ತದೆ, ಜಾತ್ರೆಯಲ್ಲಿ ಕೊಬ್ಬರಿ ಸುಡುವುದು ವಿಶೇಷವಾಗಿರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪೇರುದ್ರಪ್ಪ – ಮುಖಂಡರು

2). ಶಿವಪ್ಪ – ಮುಖಂಡರು

3). ರುದ್ರಮುನಿ – ಗ್ರಾಮಸ್ಥರು

4). ತಿಪ್ಪೇಸ್ವಾಮಿ – ಗ್ರಾಮಸ್ಥರು.

6). ತಿಮ್ಮಪ್ಪಯ್ಯನ ಹಳ್ಳಿ, ಕರಿಬಸವೇಶ್ವರ ದೇವರ ರಥ:

ಹಿಂದೆ ಬೋವಿ ಸಮುದಾಯದ ತಿಮ್ಮಪ್ಪಯ್ಯ ಎನ್ನುವ ವ್ಯಕ್ತಿ ಊರಿಗೆ ಗುಡ್ಡೇಕಲ್ಲು ಹಾಕಿದ್ದು ಊರು ಕಟ್ಟಿ, ಊರಿನ ಏಳ್ಗೆಗಾಗಿ ಶ್ರಮಿಸಿದವನಾದ್ದರಿಂದ ಊರಿಗೆ ತಿಮ್ಮಪ್ಪಯ್ಯನಹಳ್ಳಿ ಎಂದು ಕರೆಯುತ್ತಿದ್ದಾರೆ.

ಊರಿನಲ್ಲಿ ಒಂಬತ್ತು ದೇವಸ್ಥಾನಗಳು, ಒಂದು ಚರ್ಚ್ ಇದೆ, ಕರಿಬಸವೇಶ್ವರ, ಈಶ್ವರ, ಕೊಲ್ಲಾರಮ್ಮ, ಕಣಿವೆಮಾರಮ್ಮ, ಆಂಜನೇಯ, ಬಸವಣ್ಣ(ಪಾದಗಟ್ಟ) ಬೋಸೇರಂಗಸ್ವಾಮಿ, ಪೆನ್ನೋಬಳ, ಗುಡ್ಡದ ಈಶ್ವರ ದೇವಾಲಯಗಳಿವೆ, ಊರೊರಗಿನ ಸ್ವಲ್ಪ ದೂರವಿರುವ ಗುಡ್ಡದ ಮೇಲೆ ಈಶ್ವರ ದೇವಸ್ಥಾನವಿದೆ, ಕೊಲ್ಲೂರಮ್ಮ ದೇವರಿಗೆ ಪ್ರತಿ ದಸರಾ ಸಮಯದಲ್ಲಿ ಹೊಂಬಿನೋತ್ಸವ, ಪೆನ್ನೋಬಳ ಸ್ವಾಮಿಗೆ ಪ್ರತಿ ವರ್ಷ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಕಣಿವೆ ಮಾರಮ್ಮ ದೇವರಿಗೆ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಜಾತ್ರೆ ಮಾಡುತ್ತಾರೆ, ಕರಿಬಸವೇಶ್ವರ ದೇವರಿಗೆ ಅಂಬು ಹೊಡೆಯುವ ಕಾರ್ಯವನ್ನು ದಸರಾ ಹಬ್ಬದ ಸಂದರ್ಭದಲ್ಲಿ ಮಾಡುತ್ತಾರೆ, ಊರಿಗೆ ದೊಡ್ಡ ಜಾತ್ರೆ ಇದಾಗಿದ್ದು, ಕಾರ್ತಿಕ ಮಾಸದಲ್ಲಿ ರಥೋತ್ಸವ ನಡೆಯುತ್ತದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮದ ಆರಾಧ್ಯ ದೇವರಾದ ಕರಿಬಸವೇಶ್ವರ ದೇವರ ರಥೋತ್ಸವವು ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ನಡೆಯುತ್ತದೆ, ಮೊದಲು ಚಿಕ್ಕರಥ(ಉಚ್ಚಯ) ಇದ್ದು,

ಇದು ಶಿಥಿಲವಾದ ನಂತರ ಹೊಸದಾದ ತೇರನ್ನು ಮಾಡಿಸಿದ್ದಾರೆ, ಹೊಸ ತೇರು ಮಾಡಿ 5ವರ್ಷವಾಗಿದೆ, ನಾಯಕನಹಟ್ಟಿ ಸಮೀಪ ಇರುವ ಚನ್ನಬಸಯ್ಯನಹಟ್ಟಿ ಊರಿನ ಬಳಿ ಸಿಗುತ್ತಿದ್ದ ಕಪ್ಪುಜಾಲಿ, ಹೊನ್ನೆ, ಬೀಟೆ ಮರಗಳನ್ನು ಬಳಸಿ ಹೊಸ ತೇರನ್ನು ಮಾಡಿಸಿದ್ದಾರೆ, ಸಾಧಾರಣ ಶೈಲಿಯಲ್ಲಿ ಇರುವ ಈ ತೇರಿಗೆ ಕಪ್ಪು ಬಣ್ಣವನ್ನು ಬಳಸಿದ್ದಾರೆ, ಮೂರು ಅಂತಸ್ತಿನ ರಥದಲ್ಲಿ ಕೆಳಗಡೆಯಿಂದ ಮೊದಲ ಅಂತಸ್ತಿನಲ್ಲಿ ಮಿಷನ್‌ನಲ್ಲಿ ರೋಲಿಂಗ್ ಮಾಡಿಸಿದ 16ಕಂಬಗಳು, ಎರಡನೇ ಅಂತಸ್ತಿನಲ್ಲಿ ದೇವರನ್ನು ಕೂರಿಸುವ ಪೀಠವಿದ್ದು ಇದರಲ್ಲಿ 8ಕಂಬಗಳಿವೆ, ಎರಡು ಅಂತಸ್ತಿನಲ್ಲಿ ಮೇಲುಗಡೆ ಕಮಾನು ಮಾಡಿದ ಪಟ್ಟಿ ಇದ್ದು ಈ ಪಟ್ಟಿಯಲ್ಲಿ ಮಾತ್ರ ಚಿಕ್ಕದಾದ ಕುಸುರಿ ಕೆತ್ತನೆ ಇದೆ, ಒಟ್ಟಾರೆ ಇಡೀ ರಥವನ್ನು ಮರ ಮಾಧ್ಯಮದಿಂದ ಕಳಸ ಇಡುವವರೆವಿಗೂ ಮಾಡಿದ್ದು, ರಥೋತ್ಸವದ ಸಮಯದಲ್ಲಿ ಬಣ್ಣ ಬಣ್ಣದ ಬಟ್ಟೆಗಳಿಂದ ಮತ್ತು ಪಟಗಳಿಂದ ಹಾಗೂ ದೇವರ ಫೋಟೋಗಳಿಂದ ಅಲಂಕಾರ ಮಾಡುತ್ತಾರೆ, ನಾಲ್ಕು ಮರದ ಗಾಲಿಗಳ ಮೇಲೆ ಎರಡು ಅಡಿ ದಪ್ಪನೆಯ ಅಚ್ಚನ್ನು ಹಾಕಿದ್ದು ನಂತರದಲ್ಲಿ ಅಡ್ಡ ಹಾಗೂ ಉದ್ದನೆಯ ಪಟ್ಟಿಗಳನ್ನು ಹಾಕಿದ್ದಾರೆ, ಈ ಪಟ್ಟಿಗಳಲ್ಲಿ ಯಾವುದೇ ಕೆತ್ತನೆ ಇರುವುದಿಲ್ಲ, ದೇವಸ್ಥಾನದ ಜಾಗದಿಂದ ಪಾದಗಟ್ಟೆಯವರೆವಿಗೂ ತೇರು ಹೋಗಿ ಅಲ್ಲಿ ಪೂಜೆ ಮುಗಿಸಿಕೊಂಡು ನಂತರ ವಾಪಾಸ್ಸು ಬರುತ್ತದೆ, ರಥೋತ್ಸವದ ಸಮಯದಲ್ಲಿ ತೇರಿನ ಮುಂದೆ ವಿವಿಧ ವಾದ್ಯಗಳು, ಕೋಲಾಟ, ಭಜನೆ, ಡೋಲು, ಡಮರುಗ, ವೀರಗಾಸೆ, ಕೀಲುಕುದುರೆ ಮುಂತಾದ ಕಲಾ ತಂಡಗಳು ಇರುತ್ತವೆ, ಈ ಜಾತ್ರೆಗೆ ಸುತ್ತಲ ಹಳ್ಳಿಗಳಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಕರಿಯಣ್ಣ ಬಿನ್ ಬಸಣ್ಣ

2). ತಿಪ್ಪೇಸ್ವಾಮಿ ಬಿನ್ ಗುರಣ್ಣ

3). ಇ.ಎಸ್. ತಿಪ್ಪೇಸ್ವಾಮಿ ಬಿನ್ ಶಾಂತಪ್ಪ

4). ಬಸಣ್ಣ ಬಿನ್ ತಿಪ್ಪಯ್ಯ

5). ಬೋರಣ್ಣ ಬಿನ್ ಹನುಮಂತಪ್ಪ

6). ಬಿ.ಟಿ. ಗುರುಬಸಣ್ಣ ಬಿನ್ ತಿಪ್ಪೇಸ್ವಾಮಿ

ಬಸವರಾಜ್–ಮೊ: 8747033545.

7). ಎನ್. ಗೌರೀಪುರ, ಉಮಾ ಮಹೇಶ್ವರ ರಥ:

ಊರಿನ ವಾಯುವ್ಯ ದಿಕ್ಕಿನಲ್ಲಿ ಪುರಾತನವಾದ ಉಮಾ ಮಹೇಶ್ವರನ ದೇವಸ್ಥಾನವಿದ್ದು, ಶಿಲ್ಪಕಲೆಗಳಿಂದ ವೈಭವೋತೀತವಾಗಿದೆ.

ಒಮ್ಮೆ ಕೈಲಾಸದಿಂದ ಶಿವ ಮತ್ತು ಗೌರಿಯು ಭೂಲೋಕಕ್ಕೆ ಸಂಚಾರ ನಿಮಿತ್ತವಾಗಿ ಬಂದು ದೇವಸ್ಥಾನವಿರುವ ಜಾಗದಲ್ಲಿ ಸ್ವಲ್ಪ ಕಾಲ ತಂಗಿದ್ದ ಪ್ರತೀಕವಾಗಿ ಶಿವ ಮತ್ತು ಗೌರಿಯರ ದೇವಾಲಯವನ್ನು ಸ್ಥಾಪಿಸಲಾಗಿದೆಯಂತೆ, ಶಿವ ಮತ್ತು ಗೌರಿಯರ ವಿವಿಧ ಹೆಸರುಗಳಲ್ಲಿ ಉಮಾಮಹೇಶ್ವರ, ಗೌರಿಪರಮೇಶ್ವರ ಎಂಬ ಹೆಸರಿನಿಂದ ದೇವಾಲಯಕ್ಕೆ ಕರೆಯುತ್ತಿದ್ದು, ದೇವಾಲಯವು ಇರುವ ಕಾರಣದಿಂದ ಊರಿಗೂ ಗೌರಿಪುರ ಎಂದು ಕರೆಯುತ್ತಿದ್ದಾರೆ.

ನಾಯ್ಕನಹಟ್ಟಿಯ ತಿಪ್ಪೇರುದ್ರಸ್ವಾಮಿಗಳು ನಿರ್ಮಿಸಿದ ಏಳು ಅಥವಾ ಐದು ಊರುಗಳಲ್ಲಿ ಈ ಗ್ರಾಮವೂ ಒಂದು, ನಾಯ್ಕನಹಟ್ಟಿಗೆ ಸೇರಿದ್ದರಿಂದ ನಾಯ್ಕನಹಟ್ಟಿ ಗೌರೀಪುರ ಅಥವಾ ಎನ್.ಗೌರೀಪುರ ಎಂದು ಕರೆಯುತ್ತಿದ್ದಾರೆ.

ಊರಿನಲ್ಲಿ ಮಲಿಯಮ್ಮ, ಹಾವಾಡದಮ್ಮ, ಆಂಜನೇಯ, ಉಮಾಮಹೇಶ್ವರ, ಮಲಿಯಮ್ಮಜ್ಜಿ, ದೇವಸ್ಥಾನಗಳಿವೆ, ಉಮಾಮಹೇಶ್ವರ ಮತ್ತು ಹಾವಾಡದಮ್ಮ ಪುರಾತನ ದೇವಸ್ಥಾನಗಳು, ಮಲಿಯಮ್ಮ ದೇವರಿಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ಜಾತ್ರೆ ಮಾಡುತ್ತಾರೆ, ಈ ಸಂದರ್ಭದಲ್ಲಿ ಬಲಿ, ಹರಕೆ, ಓಕುಳಿ ಕಾರ್ಯಗಳು ನಡೆಯುತ್ತವೆ, ಹಾವಾಡದಮ್ಮ ದೇವರಿಗೆ ಶ್ರಾವಣ ಮಾಸದಲ್ಲಿ ಅಭಿಷೇಕ, ವಿಶೇಷ ಪೂಜೆ ಮಾಡುತ್ತಾರೆ, ಪ್ರತಿ ವರ್ಷವು ಗ್ರಾಮದವರೇ ಸೇರಿ ವಿಶೇಷವಾಗಿ ಎತ್ತಿನ ಬಂಡಿಯ ಚಕ್ರಗಳನ್ನು ಬಳಸಿ ಹೊಸ ತೇರನ್ನು ಸಿದ್ಧಮಾಡಿ ನಂದಿಕೋಲು, ಕರಡಿಮಜಲು, ಡೋಲು, ಚಮಾಳ ಮುಂತಾದ ವಾಧ್ಯಗಳೊಂದಿಗೆ ಆಂಜನೇಯನ ತೇರಿನ ಜಾತ್ರೆಯನ್ನು ನಡೆಸುತ್ತಾರೆ, ಉಮಾಮಹೇಶ್ವರಿ ದೇವರಿಗೆ ಪ್ರತಿ ವರ್ಷ ದಸರಾ ಸಮಯದಲ್ಲಿ ಬನ್ನಿ (ಅಂಬು) ಹೊಡೆಯುವುದು, ಕಾರ್ತಿಕೋತ್ಸವ, ಆರತಿ ದೀಪೋತ್ಸವ, ರಥೋತ್ಸವ ನಡೆಯುತ್ತದೆ, ಮದುವೆಯಾಗದವರು ಉಮಾ ಮಹೇಶ್ವರ ದೇವರಿಗೆ ಗಿರಿಜಾ ಕಲ್ಯಾಣ ಪೂಜೆಯನ್ನು ಮಾಡಿಸಿದರೆ ಮದುವೆಯಾಗುವ ಭಾಗ್ಯ ಸಿಗುತ್ತದೆಂಬ ನಂಬಿಕೆಯಿದೆ.

ಉಮಾ ಮಹೇಶ್ವರ ದೇವಾಲಯ ಪುರಾತನ ಕಾಲದ್ದಾಗಿದ್ದು ಕಪ್ಪು ಕಲ್ಲಿನಲ್ಲಿರುವ ಲಿಂಗವು ಪೀಠ ಸಹಿತವಾಗಿದೆ, ಶಿವನು ತನ್ನ ಮಡದಿಯಾದ ಗೌರಿಯನ್ನು ಎಡಗಡೆಯ ತೊಡೆಯ ಮೆಲೆ ಕೂರಿಸಿಕೊಂಡು ತಾನು ಒಂದು ಕೈಯಲ್ಲಿ ಆಶೀರ್ವಾದ ಮಾಡುತ್ತಿರುವ ಮೂರ್ತಿ ಗರ್ಭಗುಡಿಯಲ್ಲಿದೆ, ಈ ಮೂರ್ತಿಯ ಎದುರಿಗೆ ಕಪ್ಪು ಕಲ್ಲಿನಲ್ಲಿ ಮಲಗಿರುವ ನಂದಿ ಮೋಹಕವಾಗಿದೆ, ಬಂಡೆಗಳು, ಕಲ್ಲು ಕಂಬಗಳನ್ನು ಬಳಸಿ ದೇವಾಲಯವನ್ನು ನಿರ್ಮಿಸಿದ್ದು, ಚೋಳರ ಕಾಲದಲ್ಲಿ ನಿರ್ಮಾಣವಾಗಿರುವುದಾಗಿದೆ, ಗರ್ಭ ಗುಡಿಯ ದ್ವಾರದ ಕಲ್ಲು ಕಂಬಗಳಲ್ಲಿ ಸೂಕ್ಷ್ಮಕೆತ್ತನೆಯ ಉಬ್ಬು ಚಿತ್ರಗಳಿವೆ, ಗರ್ಭ ಗುಡಿಯ ದ್ವಾರದ ಹೊರಭಾಗದಲ್ಲಿ ಎರಡೂ ಕಡೆ ಗಣೇಶ ಮತ್ತು ಕಾಳಿಕಾಂಬೆಯ ಕೃಷ್ಣ ಶಿಲೆಯ ಮೂರ್ತಿಗಳಿವೆ, ಕೃಷ್ಣ ಶಿಲೆಯಲ್ಲಿ ಬೇಲೂರಿನ ದೇವಾಲಯದ ಕಂಬಗಳಂತೆ ಇಲ್ಲಿನ 4 ಕಂಬಗಳ ಮೇಲೆ ಉಬ್ಬು ಚಿತ್ರಗಳನ್ನು ಕೆತ್ತಿ ಹೊರಾಂಡ ನಿರ್ಮಿಸಲಾಗಿದೆ, ದೇವಾಲಯದ ಮೆಟ್ಟಿಲುಗಳ ಪಕ್ಕಗಳಲ್ಲಿ ಆನೆಗಳ ಚಿತ್ರಗಳಿವೆ, ದೇವಾಸ್ಥಾನ ಅಭಿವೃದ್ಧಿ ಸಮಿತಿ ಇದ್ದು ಈ ಸಮಿತಿಯಿಂದ ಊರಲ್ಲಿ ಯಾರೇ ಮರಣ ಹೊಂದಿದರೂ ಅವರ ಅಂತ್ಯಸಂಸ್ಕಾರಕ್ಕೆ ಒಂದು ಸಾವಿರ ರೂಗಳನ್ನು ನೀಡುವ ವಿಶೇಷ ಪದ್ದತಿ ಇದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ರಥೋತ್ಸವವು ಮೂರು ದಿನ (ಬುಧವಾರದಿಂದ ಶುಕ್ರವಾರದವರೆಗೆ) ನಡೆಯುತ್ತದೆ, ಮೊದಲ ದಿನ ದೀಪೋತ್ಸವ, ತೇರಿಗೆ ಕಳಸ ಪ್ರತಿಷ್ಟಾಪನೆ, ಅನ್ನಸಂತರ್ಪಣೆ, ಕಲ್ಯಾಣ ಮಹೋತ್ಸವ, ಎರಡನೇ ದಿನ ರಥೋತ್ಸವ ನಡೆಯುತ್ತದೆ, ಮೂರನೇ ದಿನ ಓಕುಳಿ ಮುಂತಾದ ಕಾರ್ಯಕ್ರಮಗಳು ನಡಯುತ್ತವೆ, ಪ್ರತಿ ಸೋಮವಾರ ಪಲ್ಲಕ್ಕಿ ಉತ್ಸವ, ಶ್ರಾವಣ ಮಾಸದಲ್ಲಿ ಪ್ರತಿ ದಿನ ಅಭಿಷೇಕ, ಪೂಜೆ, ಅನ್ನಸಂತರ್ಪಣೆ ನಡೆಯುತ್ತದೆ.

ರಥೋತ್ಸವದ ದಿನ ಬೆಳಿಗ್ಗೆಯಿಂದ ಪೂಜೆ ನಡೆಯುತ್ತದೆ, ನಂತರ ದೇವಸ್ಥಾನದಿಂದ ದೇವರನ್ನು ಪಲ್ಲಕ್ಕಿಯಲ್ಲಿ ತಂದು ಅಲಂಕಾರ ಮಾಡಿರುವ ರಥದಲ್ಲಿ ಕೂರಿಸುತ್ತಾರೆ, ರಥಕ್ಕೆ ಬಲಿಬಾನ (ಎಡೆ)ಹಾಕಿ ಪೂಜಿಸುತ್ತಾರೆ, ಆನಂತರ ತೆಂಗಿನ ನಾರಿನಿಂದ ಮಾಡಿದ ಹಗ್ಗದ ಸಹಾಯದಿಂದ ರಥವನ್ನು ಭಕ್ತಾದಿಗಳು ಎಳೆಯುತ್ತಾರೆ, ಪಾದಗಟ್ಟೆಯವರೆವಿಗೂ ರಥವು ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿ ಮತ್ತೆ ಮೊದಲಿನ ಜಾಗಕ್ಕೆ ಬರುತ್ತದೆ, ತೆಂಗಿನ ನಾರಿನಿಂದ ಮಾಡಿದ ಹಗ್ಗವನ್ನು ದೇವಸ್ಥಾನದ ಹಣದಿಂದ ತರುತ್ತಾರೆ. ಒಮ್ಮೆ ತಂದ ಹಗ್ಗವನ್ನು 5ರಿಂದ 10ವರ್ಷಗಳ ವರೆವಿಗೂ ಉಪಯೋಗಿಸುತ್ತಾರೆ. ಇದು ಬಿಸಿಲಿಗೆ ಮತ್ತು ಮಳೆಗೆ ನೀರಿನಲ್ಲಿ ನೆನೆಯದೇ ಇದ್ದರೆ ಮಾತ್ರ 5ರಿಂದ 10ವರ್ಷ ಬರುತ್ತದೆ.

ಪೂರ್ವದಲ್ಲಿ ಹಳೇ ತೇರು ಇದ್ದು ಅದು ಶಿಥಿಲವಾಗಿದ್ದ ಕಾರಣದಿಂದ 2003ರಲ್ಲಿ ಹೊಸ ತೇರನ್ನು ಮಾಡಿಸಿದ್ದಾರೆ, ತುಪ್ಪದಹಳ್ಳಿ ಗ್ರಾಮದ ಸಂಪ್ರದಾಯ ಶಿಲ್ಪಿ ತೀರ್ಥಾಚಾರ್ ಮತ್ತು ಚನ್ನಗಿರಿಯ

ಉಜ್ಜಿನಪ್ಪ ಇವರಿಬ್ಬರೂ ಸೇರಿ ರಥವನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ ಒಂದು ಲಕ್ಷದ ಐವತ್ತು ಸಾವಿರ(1,50,000-00)ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಊರಿನವರು ಸ್ಥಳೀಯವಾಗಿ ಸಿಗುವ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ, ಇದನ್ನು ಹೊರತು ಪಡಿಸಿದರೆ ಇತರೆ ಸಾಮಾನುಗಳ ಖರ್ಚು ಐದು ಲಕ್ಷದ ಐವತ್ತು ಸಾವಿರ(5,50,000-00)ರೂಗಳಾಗಿದೆ, ರಥದ ಒಟ್ಟು ಎತ್ತರ 28ಅಡಿ ಇದ್ದು, ಇದರಲ್ಲಿ 4ಅಡಿ ಗಾಲಿಗಳು, 17ಅಡಿ ಶಿಲ್ಪಗಳಿರುವ ಭಾಗ, ದೇವರನ್ನು ಕೂರಿಸುವ ಪೀಠ, ಕಬ್ಬಿಣದ ಸಲಾಕೆಗಳಿಂದ (ಪ್ಲಾಟು)ಮಾಡಿದ ಡೂಮು 6ಅಡಿ, ಪಂಚಲೋಹದ ಕಳಸ 2ಅಡಿ ಇರುತ್ತದೆ. ಗಾಲಿಗಳಿಗೆ ಹಾಕಿರುವ ಅಚ್ಚಿಗೆ ನಾಲ್ಕು ಅಡ್ಡ ಪಟ್ಟಿಗಳನ್ನು ಜೋಡಣೆ ಮಾಡಿದ್ದು ಇವುಗಳ ಕೊನೆಯಲ್ಲಿ ಗಂಭೀರ ನಡಿಗೆಯ ಆನೆಗಳ ಮೂರ್ತಿಗಳಿದ್ದು ಇವುಗಳು ಮೆರವಣಿಗೆಗೆ ಸಿದ್ಧವಾಗಿರುವ ಮೈಸೂರು ದಸರಾ ಉತ್ಸವದ ಆನೆಗಳನ್ನು ನೆನಪಿಗೆ ತರುತ್ತವೆ, ಎರಡು ಆನೆಗಳ ಮಧ್ಯದಲ್ಲಿ ಇರುವ ಜಾಗದಲ್ಲಿ ಅಚ್ಚಿನ ಮೇಲೆ ವೃತ್ತಾಕಾರದ ಹೂವಿನ ಕೆತ್ತನೆ ಇದೆ, ಇದರ ಮೇಲೆ ಕುದುರೆಗಳ ಸಾಲು ಇದೆ, ನಂತರದಲ್ಲಿ ಎರಡು ಕಂಬಗಳ ಮಧ್ಯದಲ್ಲಿ ಒಂದು ಮೂರ್ತಿಯಂತೆ ರಥದ ನಾಲ್ಕು ದಿಕ್ಕಿಗೂ ತಲಾ ಮೂರು ಮೂರ್ತಿಗಳಿವೆ, ಉಮಾಮಹೇಶ್ವರ, ವಿಘ್ನೇಶ್ವರ, ಶಿವ ಪಾರ್ವತಿ, ಲಕ್ಷ್ಮಿ, ಸರಸ್ವತಿ, ರಾಜರಾಜೇಶ್ವರಿ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಷಣ್ಮುಖ, ಬಲಿವಿಗ್ರಹಗಳು ನಾಲ್ಕು ಕಡೆಯೂ ಮಧ್ಯದಲ್ಲಿ ಇವೆ, ವೀರಾಂಜನೇಯ, ಆದಿಶಕ್ತಿ, ಬಸವಣ್ಣ ಮುಂತಾದ ಮೂರ್ತಿಗಳಿವೆ, ಈ ಎಲ್ಲಾ ದೇವರುಗಳಿಗೆ ಪ್ರಭಾವಳಿಯ ಕೆತ್ತನೆ ಇದೆ, ಇದರ ಮೇಲಿನ ಪಟ್ಟಿಯಲ್ಲಿ ಅರಳಿರುವ ಹೂವಿನ ಸಾಲು, ಇದರ ಮೇಲಿನ ಪಟ್ಟಿಯಲ್ಲಿ ಎಲೆಬಳ್ಳಿಯ ಕೆತ್ತನೆ ಇದೆ, ಉಳಿದಂತೆ ಅಗತ್ಯವಿರುವ ಕಡೆಗಳಲ್ಲಿ ಕುಸುರಿ ಕೆತ್ತನೆ ಆಕರ್ಷಣೀಯವಾಗಿದೆ, ಕೊನೆಯ ಸಾಲು ಅಂದರೆ ಪೀಠದ ಕೆಳಗೆ ಅಗಲವಾದ ಪಟ್ಟಿಯಲ್ಲಿ ವಿವಿಧ ರೂಪಗಳ ವಾಹನ ಸಮೇತ ದೇವರುಗಳು, ನವಗ್ರಹಗಳು, 12ರಾಶಿಗಳ ಮೂರ್ತಿಗಳಿವೆ, ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಉಗ್ರ ರೂಪಿ ಸಿಂಹದ ಪ್ರತ್ಯೇಕ ಶಿಲ್ಪಗಳಿವೆ.

ಮೊದಲು ಇದ್ದ ಹಳೆಯ ತೇರನ್ನು ಸ್ಥಳೀಯವಾಗಿ ಸಿಗುತ್ತಿದ್ದ ಕಪ್ಪು ಜಾಲಿಮರ ಹಾಗೂ ಬೇವಿನ ಮರದಿಂದ ಮಾಡಿದ್ದು, ಇದಕ್ಕೆ ನಾಲ್ಕು ಕಲ್ಲಿನ ಗಾಲಿಗಳು ಇದ್ದವು, ಇದು ಹಾಳಾಗಿದ್ದರಿಂದ ಹೊಸ ತೇರನ್ನು ಮಾಡಿಸಿದ್ದಾರೆ, ಹೊಸ ತೇರಿಗೆ ನಂದಿಮರ, ಮತ್ತಿ, ಬೇವು, ತೇಗದ ಮರಗಳನ್ನು ಬಳಸಲಾಗಿದೆ, ನಂದಿ ಹಾಗೂ ಮತ್ತಿಯ ಮರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿದ್ದು, ಬೇವು ಹಾಗೂ ತೇಗದ ಮರಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಲಾಗಿದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಬಿ.ಎಂ. ತಿಪ್ಪೇಸ್ವಾಮಿ ಬಿನ್ ಎಂ. ಬಸಪ್ಪಯ್ಯ
2). ಕೆ.ಪಿ. ರೇವಣ್ಣ ಸ್ವಾಮಿ ಬಿನ್ ಓಂಕಾರಯ್ಯ --- ಮೊ: 96865635522
3). ಪಿ. ವೀರಭದ್ರಪ್ಪ ಬಿನ್ ಪುಟ್ಟಣ್ಣ --- ಮೊ: 9844388990
4). ಓ. ಜಗದೀಶ ಬಿನ್ ತಿಪ್ಪೇಸ್ವಾಮಿ
5). ಎಂ.ಟಿ. ರವಿ ಬಿನ್ ತಿಪ್ಪೇಸ್ವಾಮಿ.

8). ಗಜ್ಜುಗಾನಹಳ್ಳಿ, ಬಸವಣ್ಣನ ತೇರು:

ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಊರಿಗೆ ಗಜ್ಜುನಾನಹಳ್ಳಿ ಎಂದು ಹೆಸರು ಬಂದಿರುವುದಾಗಿದೆ, ಬಿಟ್ರಿಷರ ಸೈನ್ಯ ಗಜ್ಜುಗಾನಹಳ್ಳಿ ಗ್ರಾಮದ ಸಮೀಪ ಇರುವ ತಳಕು ಗ್ರಾಮದಲ್ಲಿ ಬೀಡು ಬಿಟ್ಟದ್ದು, ಅವರಿಗೆ ಗಜ್ಜುಗಾನಹಳ್ಳಿ ಗ್ರಾಮದಿಂದ ಹಾಲು, ಮೊಸರನ್ನು ಕೊಡಬೇಕೆಂದು ಬ್ರಿಟಿಷರ ಕಟ್ಟಪ್ಪಣೆ ಇತ್ತು, ಅದೆ ರೀತಿ ಗಜ್ಜುಗಾನಹಳ್ಳಿ ಗ್ರಾಮದವರು ಬ್ರಿಟಿಷರಿಗೆ ಸಣ್ಣ ಮಣ್ಣಿನ ಗಡಿಗೆಗಳಲ್ಲಿ(ಅರಿವೆ) (ಮಣ್ಣಿನಿಂದ ತಯಾರಿಸಿದ

ಮಡಿಕೆಗಳಲ್ಲಿ), ಕೆಲವರು ದೊಡ್ಡ ಗಡಿಗೆಗಳಲ್ಲಿ ಹಾಲು ಮತ್ತು ಮೊಸರನ್ನು ಕೊಟ್ಟು ಬರುತ್ತಿದ್ದರಂತೆ, ಸಣ್ಣ ಗಡಿಗೆಯಲ್ಲಿ ಹಾಲು, ಮೊಸರು ಕೊಡುತ್ತಿದ್ದರಿಂದ ಸಣ್ಣಗಡಿಗೆ ಮನೆಯವರು, ದೊಡ್ಡ ಗಡಿಗೆಯಲ್ಲಿ ಹಾಲು ಮೊಸರು ಕೊಡುತ್ತಿದ್ದವರನ್ನು ದೊಡ್ಡಗಡಿಗೆಯ ಮನೆಯವರೆಂದು ಕರೆಯುತ್ತಿದ್ದರು, ಊರಿನಲ್ಲಿ ಈಗಲೂ ಸಣ್ಣ ಗಡಿಗೆಯ ಮನೆಯವರು, ದೊಡ್ಡ ಗಡಿಗೆಯ ಮನೆಯವರು ಎಂದು ಕರೆಯಿಸಿಕೊಳ್ಳುವ ವಂಶಾವಳಿಗಳ ಕುಟುಂಬಗಳಿವೆ.

ಊರಿನಾಚೆ ಗಜ್ಜುಗಾದ ಗಿಡಗಳು ಅಂದು ಎತೇಚ್ಚವಾಗಿದ್ದವಂತೆ, ಕೆಲವರ ಜಮೀನುಗಳಿಗೆ ಜೈವಿಕ ಬೇಲಿಗಳಂತೆ ರಕ್ಷಣೆಯಾಗಿದ್ದವು, ಮೊದಲು ಇವುಗಳ ಬೀಜಗಳನ್ನು ಹುಡುಗರು ಆಟವಾಡಲು, ಆಟದ ಸ್ಪರ್ಧೆಗೆ ಉಪಯೋಗಿಸುತ್ತಿದ್ದರು, ಗಜ್ಜುಗದ ಬೀಜಗಳು ಗೋಲಿಗಳಂತೆ ನುಣುಪಾಗಿ ಇರುತ್ತವೆ, ಕೆಲವು ಖಾಯಿಲೆಗಳಿಗೆ ಔಷಧಗಳಾಗಿಯು ಉಪಯೋಗಿಸುತ್ತಿದ್ದರು, ಇದು ಬೇಲಿಗಳಲ್ಲಿ ಬೆಳೆಯುತ್ತದೆ, ಗಿಡದಲ್ಲಿ ಸಣ್ಣ ಸಣ್ಣ ಮುಳ್ಳುಗಳಿರುತ್ತವೆ, ಗಜ್ಜುಗಾದ ಗಿಡಗಳು ಊರಿನ ಸಮೀಪದಲ್ಲಿ ಎತೇಚ್ಚವಾಗಿದ್ದ ಕಾರಣದಿಂದ ಊರಿಗೆ ಗಜ್ಜಗಾದಹಳ್ಳಿ ಎಂಬ ಹೆಸರು ಬಂದಿರುವುದಾಗಿದೆ, ಊರಿಗೆ ಅನತಿ ದೂರುದಲ್ಲಿ ಗುಡ್ಡದ ಮೇಲೆ ಪುರಾತನ ಈಶ್ವರ ದೇವಾಲಯವಿದೆ.

ಗ್ರಾಮದಲ್ಲಿ ಬಸವಣ್ಣ, ಆಂಜನೇಯ, ಶಂಕರಸ್ವಾಮಿ, ನಲ್ಲಜರುವರಾಯ, ಕೊಲ್ಲಾರಮ್ಮ, ಯಲ್ಲಮ್ಮ, ಅಜ್ಜಯ್ಯ ಎಂಬ ದೇವಸ್ಥಾನಗಳಿವೆ, ಹಿಂದೆ ಶಂಕ್ರಪ್ಪ ಎನ್ನುವ ಪವಾಡ ಪುರುಷ ಗ್ರಾಮದ ಒಳತಿಗಾಗಿ ಶ್ರಮಿಸಿದವನಾಗಿದ್ದು, ಮರಣಾನಂತರ ಆತನ ಸ್ಮರಣಾರ್ಥವಾಗಿ ಶಂಕರಸ್ವಾಮಿ ಎಂಬ ದೇವಸ್ಥಾನವನ್ನು ನಿರ್ಮಿಸಿದ್ದಾರೆ, ಪ್ರತಿವರ್ಷ ಯುಗಾದಿ ಹಬ್ಬದ ಸಮಯದಲ್ಲಿ ಒಂದು ತಿಂಗಳು ಶಂಕ್ರಪ್ಪಸ್ವಾಮಿಯ ಧ್ವಜವನ್ನು ಹಿಡಿದುಕೊಂಡು ಕೆಲವು ಗ್ರಾಮದ ಬೀದಿಗಳಲ್ಲಿ ಭಜನೆ ಹಾಗೂ ಮೆರವಣಿಗೆ, ದಾಸೋಹ ಕಾರ್ಯ ನಡೆಸುತ್ತಾರೆ, ಕೊಲ್ಲಾರಮ್ಮ ಮತ್ತು ಯಲ್ಲಮ್ಮ ದೇವರುಗಳಿಗೆ ದಸರಾ ಸಮಯದಲ್ಲಿ ಹೊಂಬು ಹೊಡೆಯುವ ಕಾರ್ಯ ನಡೆಯುತ್ತದೆ, ಬಸವಣ್ಣ ದೇವರಿಗೆ ತೇರು ಇದ್ದು, ಪ್ರತಿ ವರ್ಷ ಡಿಸೆಂಬರ್‌ನಲ್ಲಿ ರಥೋತ್ಸವ ನಡೆಯುತ್ತದೆ, ಆಂಜನೇಯ ಸ್ವಾಮಿ ಮತ್ತು ಅಜ್ಜಯ್ಯ ದೇವರುಗಳಿಗೆ ನಿಗದಿತ ದಿನಗಳಲ್ಲಿ ಅಲಂಕಾರ ಮಾಡಿ ವಿಶೇಷ ಪೂಜೆಗಳನ್ನು ಮಾಡುತ್ತಾರೆ, ನಲ್ಲಜರುವರಾಯ ದೇವರಿಗೆ ಸ್ಥಿರಪೂಜೆ ನಡೆಯುತ್ತದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮದಲ್ಲಿ ನೆಲೆಸಿರುವ ಬಸವೇಶ್ವರ ಸ್ವಾಮಿಯ ರಥೋತ್ಸವವು ಕಾರ್ತಿಕ ಮಾಸದಲ್ಲಿ ಮೂರು ದಿನ ನಡೆಯುತ್ತದೆ, ಮೊದಲ ದಿನ ದೀಪೋತ್ಸವ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯಕ್ರಮ ನಡಯುತ್ತದೆ, ರಥೋತ್ಸವದ ದಿನ ಬೆಳಿಗ್ಗೆಯಿಂದ ರಥಕ್ಕೆ ಅಲಂಕಾರ, ನಂತರ ದೇವರು ಪಲ್ಲಕ್ಕಿಯಲ್ಲಿ ಗಂಗಾ ಪೂಜೆಗೆ ಹೊಗುತ್ತದೆ, ಅಲ್ಲಿಂದ ಬಂದು ಅಲಂಕಾರ ಮಾಡಿರುವ ರಥದಲ್ಲಿ ದೇವರನ್ನು ಕೂರಿಸುತ್ತಾರೆ, ನಂತರ ರಥಕ್ಕೆ ಎಡೆಹಾಕಿ ಪೂಜೆಮಾಡಿ ಪಾದಗಟ್ಟೆಯವರೆವಿಗೂ ರಥವು ಹೋಗಿ ವಾಪಾಸ್ಸು ಬರುತ್ತದೆ, ಪೂರ್ವದಲ್ಲಿ ಉಚ್ಚಯ ಇದ್ದು 2009ರಲ್ಲಿ ಸಾಧಾರಣವಾದ ಹೊಸ ತೇರನ್ನು ಮಾಡಿಸಿದ್ದಾರೆ, ಚನ್ನಬಸಯ್ಯನಹಟ್ಟಿ ಗ್ರಾಮದ ಸಂಪ್ರದಾಯ ಕಲಾವಿದ ಓಬಯ್ಯನವರು ಈ ತೇರನ್ನು ಮಾಡಿದ್ದಾರೆ.

ಸಂಪ್ರದಾಯವಾಗಿ ಬಂದಿರುವ ಬಡಗಿ ಕೆಲಸವನ್ನು ಓಬಯ್ಯ ಮಾಡುತ್ತಿದ್ದು ಊರಿನವರ ಒತ್ತಾಯದಿಂದ ಸಾಧಾರಣ ಶೈಲಿಯ ತೇರನ್ನು ಮಾಡಿದ್ದಾರೆ, ಯಾವುದೇ ಕುಸುರಿ ಕೆತ್ತನೆಯಾಗಲಿ, ಶಿಲ್ಪಗಳಾಗಲಿ ಇಲ್ಲ, ಕೈಯಲ್ಲಿ ರೋಲಿಂಗ್ ಮಾಡಿದ ಕಂಬಗಳು, ಚೌಕದ ಪಟ್ಟಿಗಳನ್ನು ಅಡ್ಡವಾಗಿ, ಲಂಬವಾಗಿ ಬಳಸಲಾಗಿದೆ, ದೇವರನ್ನು ಕೂರಿಸುವ ಪೀಠದ ಮೇಲಿನ ಭಾಗ ಅಂದರೆ ಪಟಗಳು ಬಾವುಟಗಳನ್ನು ಅಲಂಕಾರ ಮಾಡುವ ಭಾಗವೂ ಸಹ ಮರದ ಪಟ್ಟಿಗಳು, ರಿಪೀಸುಗಳಿಂದ ಮಾಡಿದ್ದಾರೆ,

ಶಿಲ್ಪಿಗೆ 25,000-00(ಇಪ್ಪತ್ತೈದು ಸಾವಿರ) ರೂಗಳನ್ನು ಗೌರವ ಸಂಭಾವನೆಯಾಗಿ ನೀಡಿದ್ದಾರೆ, ಸ್ಥಳೀಯವಾಗಿ ಸಿಗುವ ಮರಗಳನ್ನು ಊರಿನವರು ದಾನವಾಗಿ ಕೊಟ್ಟಿದ್ದರು, ಇದನ್ನು ಹೊರತು ಪಡಿಸಿದರೆ ಇತರೆ ಸಾಮಾನುಗಳ ಖರ್ಚು ಒಂದು ಲಕ್ಷದ ಐವತ್ತು ಸಾವಿರ(1,50,000-00)ರೂಗಳಾಗಿದೆ, ಗಾಲಿಯಿಂದ ಹಿಡಿದು ಕಳಸದವರೆವಿಗೆ ಸೇರಿ ಒಟ್ಟು ರಥದ ಎತ್ತರ 18ಅಡಿ ಇದ್ದು, ನಾಲ್ಕು ಗಾಲಿಗಳು, ಕಬ್ಬಿಣದ ಸಲಾಕೆಗಳಿಂದ (ಪ್ಲಾಟು)ಮಾಡಿದ ಡೂಮು, ಕಂಚಿನ ಕಳಸವನ್ನು ತೇರು ಹೊಂದಿದೆ, ಪಾದಗಟ್ಟೆಯವರೆವಿಗೂ ರಥವು ಹೋಗಿ ಬರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಎಂ. ಆರ್. ಸ್ವಾಮಿನಾಥ್ ಬಿನ್ ಲೇಟ್. ರಾಜಶೇಖರಯ್ಯ - ಶಿಕ್ಷಕರು

2). ತಿಪ್ಪೇಸ್ವಾಮಿ ಬಿನ್ ಭದ್ರಣ್ಣ - ಗ್ರಾಮದ ಮುಖಂಡರು.

9). ಪಗಡಲ ಬಂಡೆ, ಬಸವಣ್ಣನ ರಥ:

ರಾಜರ ಕಾಲದಲ್ಲಿ ಇಲ್ಲಿರುವ ಬಂಡೆಯ ಮೇಲೆ ಹಿಂದೆ ಹವಳದ ವ್ಯಾಪಾರ ಮಾಡುತ್ತಿದ್ದರಂತೆ, ಅಲ್ಲದೇ ಈ ಪ್ರದೇಶದಲ್ಲಿ ತೆಲುಗು ಭಾಷೆಯನ್ನು ಹೆಚ್ಚಿನ ಜನರು ಮಾತನಾಡುತ್ತಿದ್ದು ಹವಳದ ಬಂಡೆಯು ತೆಲುಗಿನವರ ಪ್ರಭಾವದಿಂದ ಪಗಡಲ ಬಂಡೆಯಾಗಿರಬಹುದು, ಕಾಲ ಕ್ರಮೇಣ ಈ ಬಂಡೆಯ ಬಳಿ ಊರು ಆಗಿದ್ದು, ಊರಿಗೂ ಸಹ ಪಗಡಲಬಂಡೆ ಎಂಬ ಹೆಸರು ಬಂದಿದೆ, ಊರಿನ ಪೂರ್ವದಿಕ್ಕಿಗೆ ಬೃಹದಾಕಾರದ ಬಂಡೆ ಈಗಲೂ ಇದೆ.

ಕಾಲಭೈರವ, ಬೀರಲಿಂಗೇಶ್ವರ, ಬನಶಂಕರಿ, ಬಸವಣ್ಣ, ಚನ್ನಕೇಶವ(ಚನ್ನಿಗರಾಯ), ದುರ್ಗಮ್ಮ(ದುರುಗಮ್ಮ), ಮಾಸ್ತಮ್ಮ, ಈರಮ್ಮ, ಬಾಲಪ್ಪ, ಯಲ್ಲಮ್ಮ, ಆಂಜನೇಯ, ತಿಮ್ಮಪ್ಪ(ಬಂಡೆ ತಿಮ್ಮಪ್ಪ), ಮಾರಮ್ಮ, ಬೋರೇ ದೇವರು(ಬೋರಪ್ಪ)ಗಳ ದೇವಸ್ಥಾನಗಳಿದ್ದು, 'ಬಂಡೆ ಮಾರಕ್ಕ'ನ ಜಾತ್ರೆ ಈ ಭಾಗದಲ್ಲಿ ವಿಶೇಷವಾಗಿ ಪ್ರತಿ ವರ್ಷ ಸೆಪ್ಟಂಬರ್‌ನಲ್ಲಿ ನಡೆಯುತ್ತದೆ, ಅಕ್ಕ ಪಕ್ಕದ ಊರಿನವರೆಲ್ಲಾ ಎತ್ತಿನ ಗಾಡಿಯನ್ನು ಕಟ್ಟಿಕೊಂಡು ಬಂದು ಸಂಭ್ರಮದಿಂದ ಜಾತ್ರೆಯನ್ನು ಆಚರಣೆ ಮಾಡುತ್ತಾರೆ, ಮುಸ್ಲಿಂರವರಿಗಾಗಿ ದರ್ಗ, ಅಲ್ಲಿಪೀರ್ ಸ್ವಾಮಿಗಳ ಆಶ್ರಮವಿದೆ, ಬಂಡೆಯಲ್ಲಿ ಮಜ್ಜ ಬಾವಿ ಇದ್ದು ಅಲ್ಲಿ ದೇವರ ಪೂಜಾ ಕಾರ್ಯಗಳು ನಡೆಯುತ್ತವೆ, ಮಜ್ಜಬಾವಿಗೆ ಪೂಜೆ ಮಾಡಿ ಕುರಿ, ಮೇಕೆ, ದನ ಕರುಗಳಿಗೆ ಈ ಬಾವಿಯ ನೀರನ್ನು ತಿರ್ಥ ರೂಪದಲ್ಲಿ ಹಾಕಿದರೆ ಜಾನುವಾರುಗಳ ಖಾಯಿಲೆ ವಾಸಿಯಾಗುತ್ತದೆ ಎಂಬ ನಂಬಿಕೆ ಇದೆ, ಇಲ್ಲಿರುವ ಹಾಸುಬಂಡೆಯಲ್ಲಿ ಕುದುರೆ ಹೆಜ್ಜೆ, ಆನೆ ಬಟ್ಲು, ಒಳಕಲ್ಲು, ದೆವ್ವದ ಗುಂಡಿಗಳಿದ್ದು ಬಂಡೆಯ ಮೇಲೆ ಭುರ್ಜಿ ಮಾರಕ್ಕನ ದೇವಸ್ಥಾನವಿದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮ ದೇವರುಗಳಾದ ಬೋರೇ ದೇವರು ಮತ್ತು ಬಸವಣ್ಣನಿಗೆ ಮೊದಲು ರಥೋತ್ಸವಗಳು ನಡೆಯುತ್ತಿದ್ದು, ಸುಮಾರು ವರ್ಷಗಳ ಹಿಂದೆ ಬೋರೇದೇವರ ರಥೋತ್ಸವವು ನಿಂತು ಹೋಗಿದೆ, ಊರಿನಲ್ಲಿ ಯಾವುದೋ ಕ್ಷುಲ್ಲಕ ಕಾರಣಕ್ಕೆ ಭಕ್ತಾದಿಗಳಲ್ಲಿ ವೈಮನಸ್ಸು ಬಂದು ಇಂದಿವರೆವಿಗೂ ಜಾತ್ರೆ ಮಾಡಿಲ್ಲ, ಬೋರೇ ದೇವರಿಗೆ ಹಳೆಯ ಕಲ್ಲಿನ ನಾಲ್ಕು ಗಾಲಿಯ ರಥವಿತ್ತು, ಬಸವಣ್ಣ ದೇವರಿಗೆ 2013ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, ಯುಗಾದಿ ಹಬ್ಬದ ನಂತರ ಪ್ರತಿವರ್ಷ ಬಸವಣ್ಣ ದೇವರ ರಥೋತ್ಸವವನ್ನು ಮಾಡುತ್ತಾರೆ, ಜಾತ್ರೆಗೆ ಸುತ್ತಮುತ್ತಲಿನ ಹಳ್ಳಿಯ ಭಕ್ತರು ಬರುತ್ತಾರೆ, ಊರಿನ ಎಲ್ಲಾ ಸಮುದಾಯದವರು ಜಾತಿ ಮತಗಳ ಬೇಧವಿಲ್ಲದೆ ಒಟ್ಟಾಗಿ ಸೇರಿ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ, ಮೂರು ದಿನಗಳು ಜಾತ್ರೆ ನಡೆಯುತ್ತದೆ, ಮೊದಲ ದಿನ ದೀಪೋತ್ಸವ, ಅನ್ನ ಸಂತರ್ಪಣೆ, ಎರಡನೇ ದಿನ ಗಂಗಾ ಪೂಜೆ, ತೇರಿಗೆ ಕಳಸ ಪ್ರತಿಷ್ಠಾಪನೆ, ರಥೋತ್ಸವ, ಮೂರನೇ ದಿನ ಓಕುಳಿ, ಪ್ರಸಾದ ವಿನಿಯೋಗ ನಡಯುತ್ತದೆ, ರಥೋತ್ಸವದ ಸಮಯದಲ್ಲಿ ನಂದಿಕೋಲು, ಕರಡಿ

ಚಮಾಳ, ಡೊಳ್ಳು, ಕೀಲುಕುದುರೆ, ಗೊಂಬೆ ಕುಣಿತ ಮುಂತಾದ ವಾದ್ಯಗಳು ರಥದ ಮುಂದೆ ಮೆರವಣಿಗೆಯಲ್ಲಿ ಇರುತ್ತವೆ.

ರಥೋತ್ಸವ ನಡೆಯುವ ಜಾತ್ರೆಗೆ ಒಟ್ಟು 60ರಿಂದ 70,000–00ರೂಗಳ ಖರ್ಚು ಬರುತ್ತದೆ, ಈ ಖರ್ಚನ್ನು ಭರಿಸಲು, ಗ್ರಾಮದ ಮುಖಂಡರೆಲ್ಲಾ ಸೇರಿ ಚರ್ಚಿಸಿ ಒಂದು ಮನೆಗೆ ಇಷ್ಟು ಹಣವನ್ನು ನಿಗದಿಮಾಡಿ ಬಂದ ಹಣದಲ್ಲಿ ಜಾತ್ರೆ ಮಾಡುತ್ತಾರೆ.

ರಥೋತ್ಸವದ ದಿನ ಬೆಳಿಗ್ಗೆ 5.30ರಿಂದ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ, ತರುವಾಯ ದೇವಸ್ಥಾನದಿಂದ ದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಆನಂತರ ಅಲಂಕಾರ ಮಾಡಿರುವ ರಥದಲ್ಲಿ ದೇವರನ್ನು ಕೂರಿಸುತ್ತಾರೆ, ರಥಕ್ಕೆ ಎಡೆಹಾಕಿ ಪೂಜೆಯನ್ನು ಮಾಡಿದ ನಂತರ ರಥವು ಪಾದಗಟ್ಟೆಯವರೆವಿಗೂ ಹೋಗಿ ವಾಪಾಸ್ಸು ಬರುತ್ತದೆ, ಹಿರಿಯೂರು ತಾಲ್ಲೂಕು ಭರಂಪುರ ಗ್ರಾಮದ ಸಂಪ್ರದಾಯ ಶಿಲ್ಪಿಯು ಐದು ಜನ ಸಹಾಯಕ ಶಿಲ್ಪಿಗಳ ಜೊತೆಗೂಡಿ ರಥವನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ ಎರಡು ಲಕ್ಷದ ಇಪ್ಪತ್ತು ಸಾವಿರ (2,20,000–00)ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಗ್ರಾಮದ ದಾನಿಗಳು ಸ್ಥಳೀಯವಾಗಿ ಸಿಗುವ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ, ಕೆಲವು ಮರಗಳನ್ನು ಖರೀದಿ ಮಾಡಿದ್ದಾರೆ, ಮರಗಳ ಖರ್ಚನ್ನು ಹೊರತು ಪಡಿಸಿ ನಟ್ಟು, ಬೋಲ್ಟು, ಕಬ್ಬಿಣದ ಸಲಾಕೆಗಳು, ಮರ ಹಾಗೂ ಹಲಗೆಗೆಳನ್ನು ಪ್ಲೇನಿಂಗ್ ಮಾಡಿಸಿದ್ದು, ಇತರೆ ಸಾಮಾನುಗಳ ಖರ್ಚು ಆರು ಲಕ್ಷ(6,00000–00)ರೂಗಳು, ಒಟ್ಟು ಎಲ್ಲಾ ಖರ್ಚುಗಳೂ ಸೇರಿ 9ಲಕ್ಷ ರೂಗಳು ರತದ ನಿರ್ಮಾಣಕ್ಕೆ ಆಗಿದೆ, ಗಾಲಿಯಿಂದ ಹಿಡಿದು ಕಳಸದವರೆವಿಗೆ ಸೇರಿ ರಥದ ಎತ್ತರ 21ಅಡಿ ಇದೆ.

ಈಗ ತೇರನ್ನು ಸುರಕ್ಷಿತವಾಗಿ ಬಿಸಿಲು ಹಾಗೂ ಮಳೆಗಾಳಿಗೆ ಹಾನಿಯಾಗದಂತೆ ತೇರಿನ ಮನೆಯನ್ನು ಮಾಡಿಸಿದ್ದಾರೆ, ತೇರಿಗೆ ಬೇವು, ಹೊನ್ನೆ, ಬೀಟೆ, ಜಾಲಿ ಹಾಗೂ ತೇಗದ ಮರಗಳನ್ನು ಬಳಸಿದ್ದಾರೆ, ಒಟ್ಟು ಮೂರು ತಿಂಗಳಿಗೆ ರಥದ ಸಂಪೂರ್ಣ ಕೆಲಸವನ್ನು ಮುಗಿಸಿದ್ದಾರೆ. ಅಚ್ಚಿನ ಮೇಲೆ ಹೂವು ಹಾಗೂ ಚಿಕ್ಕ ಪ್ರಮಾಣದ ಸರ್ಪದ ಕೆತ್ತನೆ, ಅಡ್ಡ ತೊಲೆಗಳ ತುದಿಗಳಲ್ಲಿ ಸಿಂಹ ಮುಖದ ಕೆತ್ತನೆ, ತೊಲೆಗಳ ಮೇಲೆ ಹಾಕಿರುವ ಸಣ್ಣ ಪಟ್ಟಿಗಳಲ್ಲಿ ಸೂಕ್ಷ್ಮ ಕೆತ್ತನೆ ಇದೆ, ಇದರ ನಂತರದಲ್ಲಿ ಎರಡು ಕಂಬಗಳ ಮಧ್ಯದಲ್ಲಿ ಒಂದರಂತೆ ಸುಂದರವಾದ ಶಿಲ್ಪಗಳಿವೆ, ಈ ಎಲ್ಲಾ ಶಿಲ್ಪಗಳೂ ಸೂಕ್ಷ್ಮ ಕೆತ್ತನೆಯ ಪ್ರಭಾವಳಿಯನ್ನು ಹೊಂದಿವೆ, ಅಭಯಹಸ್ತ ಗಣಪತಿ, ಲಕ್ಷ್ಮಿ, ಸರಸ್ವತಿ, ಶಿವ ಪಾರ್ವತಿ, ಆದಿಶಕ್ತಿ ದೇವಿ, ತಿರುಪತಿ ತಿಮ್ಮಪ್ಪ, ಗಣೇಶ, ಆಂಜನೇಯ, ನಂದಿ, ತಿಪ್ಪೇಸ್ವಾಮಿ, ವೀರಭದ್ರ, ತ್ರಿಶೂಲ, ಡಮರುಗ ಹಾಗೂ ಸರ್ಪದೊಂದಿಗೆ ಇರುವ ಶಿವಲಿಂಗ, ಚನ್ನಕೇಶವ ಶಿಲ್ಪಗಳಿದ್ದು ಇದರ ಮೇಲಿನ ಸಾಲಿನಲ್ಲಿ ಕಳಸದ ಹಾಗೂ ಕುಸುರಿ ಕೆತ್ತನೆ, ದೇವಿ, ಹಂಸ ಪಕ್ಷಿಗಳ ಕೆತ್ತನೆ ಮನಸೂರೆಗೊಳಿಸುತ್ತದೆ, ದೇವಿ ಹಾಗೂ ಬಳ್ಳಿಯ ಕೆತ್ತನೆ ಶಿವಲಿಂಗದ ಜೊತೆ ನಂದಿಗಳ ಶಿಲ್ಪಗಳು ತುಂಬಾ ಆಕರ್ಷಣೀಯವಾಗಿ ಕೆತ್ತನೆಗೊಂಡಿವೆ, ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ಇರುವ ಕುದುರೆಯು ರಥಕ್ಕೊಂದು ಮೆರುಗು ನೀಡಿದೆ, ಇದಲ್ಲದೆ ಅಲ್ಲಲ್ಲಿ ಅಳವಡಿಸಿರುವ ಪಟ್ಟಿಗಳಲ್ಲೂ ಕುಸುರಿ ಕೆತ್ತನೆ ಇದೆ, ಎಂಟು ಮೂಲೆಗಳಲ್ಲಿ ನಗ್ನ ಉಬ್ಬು ಚಿತ್ರಗಳು ವಿವಿಧ ಬಂಗಿಗಳಲ್ಲಿ ಇದ್ದು ರಥಕ್ಕೆ ದೃಷ್ಠಿ ತಗುಲುವುದನ್ನು ತಡೆಗಟ್ಟುವುದರ ಜೊತೆಗೆ ರಸಿಕರ ಮನಸ್ಸನ್ನು ಆಕರ್ಷಿಸುತ್ತವೆ, ಒಟ್ಟಾರೆ ಇಡೀ ರಥದಲ್ಲಿ ಎಲ್ಲೂ ಖಾಲಿ ಜಾಗವನ್ನು ಬಿಡದೆ ಕುಸುರಿ ಕೆತ್ತನೆ ಮಾಡಿದ್ದಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಕೆ. ನೀಲಪ್ಪ (ದಾಸಪ್ಪ) --- ಉಪ ಪ್ರಧಾನರು

2). ಹೊನ್ನೂರ್ ಸಾಬ್ ----- ಊರಿನ ಮುಖಂಡರು

3). ಪಿ.ಸಿ. ವೀರಣ್ಣ --------- ದಳಪತಿ
4). ಎಸ್. ಚಂದ್ರಣ್ಣ ------ ಗ್ರಾಮದ ಮುಖಂಡರು
5). ಅಲ್ಲಮ ಪ್ರಭು -------- ಗ್ರಾಮದ ಮುಖಂಡರು
6). ಎಸ್. ತಿಮ್ಮರಾಯಪ್ಪ ------ ನಿವೃತ್ತ ಶಿಕ್ಷಕರು
7). ಕೆ. ಅಜ್ಜಣ್ಣಯ್ಯ ------- ನಿವೃತ್ತ ಆಡಿಟರ್
8). ಸಣ್ಣ ಹನುಮಂತಪ್ಪ ------ ಗ್ರಾಮದ ಮುಖಂಡರು
9). ಈರಣ್ಣ ಬಿನ್ ಗೌಡಜ್ಜ ------ ಗ್ರಾಮದ ಮುಖಂಡರು
10). ಪ್ರಕಾಶ್ ---------- ಗ್ರಾಮದ ಯುವಕರು.

10). ಚೌಳೂರು, ವೀರಭದ್ರಸ್ವಾಮಿ ರಥ:

ಗೋಸಿಕೆರೆ ಪಾಳೆಗಾರನಾಗಿದ್ದ ಚೌಳೋಬಯ್ಯನಾಯಕ ಎನ್ನುವವನು ಅಲ್ಲಿನ ಜನರಿಗೆ ತುಂಬಾ ಸಹಾಯಕನಾಗಿದ್ದನು ಈತನ ಕಾಲಾನಂತರ ಗ್ರಾಮಕ್ಕೆ ಈತನ ಹೆಸರನ್ನೇ ಇಟ್ಟಿದ್ದಾರೆ, ಇನ್ನೊಂದು ಅರ್ಥದಲ್ಲಿ ಈ ಪ್ರದೇಶವು ಒಂದು ಕಾಲಕ್ಕೆ ಚೌಳು(ಸೌಳು) ಭೂಮಿಯಾಗಿದ್ದ ಕಾರಣದಿಂದ ಊರಿಗೆ ಈ ಹೆಸರು ಬಂದಿರಬಹುದಾಗಿದೆ.

ವೀರಭದ್ರಸ್ವಾಮಿ ದೇವಸ್ಥಾನದ ಹತ್ತಿರ ವೀರಗಲ್ಲು, ಶಿಲಾಶಾಸನಗಳಿವೆ, ಊರಿನಲ್ಲಿ ವೀರಭದ್ರಸ್ವಾಮಿ, ಆಂಜನೇಯ, ನರಸಿಂಹಸ್ವಾಮಿ, ದುರ್ಗಮ್ಮ, ಮಾರಮ್ಮ, ಈಶ್ವರ, ತಿಮ್ಮಪ್ಪ, ಕೋಡಿ ಮಲ್ಲೇಶ್ವರ ದೇವಸ್ಥಾನಗಳಿದ್ದು, ಪ್ರತಿವರ್ಷ ವೀರಭದ್ರಸ್ವಾಮಿಯ ತೇರನ್ನು ಕಾರ್ತಿಕ ಮಾಸದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ, ಮಾರಮ್ಮ ದೇವಿಗೆ ಬಲಿ, ಹರಕೆ ಪದ್ಧತಿಗಳಿವೆ, ರಾಧಸ್ವಾಮಿ ಸತ್ಸಂಗ, ಅಲ್ಲಾಪೀರ್ ಆಶ್ರಮ ಹಾಗೂ ಚರ್ಚ್ ಇದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮದಲ್ಲಿ ನೆಲೆಸಿರುವ ವೀರಭದ್ರ ಸ್ವಾಮಿ ದೇವರ ರಥೋತ್ಸವವು ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ನಡೆಯುತ್ತದೆ, ಈ ಜಾತ್ರೆಗೆ ಸುತ್ತಮುತ್ತಲಿನ ಹಳ್ಳಿಯ ಭಕ್ತರು, ಈ ಊರಿನ ಕುಟುಂಬಗಳ ಸಂಬಂಧಿಕರು ಬೇರೆ ಊರಿನಲ್ಲಿ ನೆಲೆಸಿದ್ದು ಅವರೆಲ್ಲಾ ರಥೋತ್ಸವಕ್ಕೆ ಎಲ್ಲಿದ್ದರೂ ಬರುತ್ತಾರೆ, ಐದು ದಿನಗಳು ಜಾತ್ರೆ ನಡೆಯುತ್ತದೆ, ಪ್ರತಿ ವರ್ಷದ ಕಾರ್ತಿಕ ಮಾಸದಲ್ಲಿ ಸೋಮವಾರದಿಂದ ರಥೋತ್ಸವದ ಕಾರ್ಯಕ್ರಮಗಳು ಪ್ರಾರಂಭವಾಗುತ್ತವೆ, ಮೊದಲ ದಿನ ಸೋಮವಾರ ದೇವರಿಗೆ ಅಭಿಷೇಕ, ಎರಡನೇ ದಿನ ಮಂಗಳವಾರ ಊರಿನಲ್ಲಿರುವ ಇತರೆ ಎಲ್ಲಾ ದೇವರುಗಳಿಗೆ ಪೂಜಾ ಕಾರ್ಯಕ್ರಮಗಳು, ಮೂರನೇ ದಿನ ಬುಧವಾರ ವೀರಭದ್ರ ಸ್ವಾಮಿಗೆ ಎಲೆ ಪೂಜೆಯ ಅಲಂಕಾರ, ನಾಲ್ಕನೇ ದಿನ ಗುರುವಾರ ಸಾಯಂಕಾಲ ದೀಪೋತ್ಸವ ಹಾಗೂ ತೇರಿಗೆ ಅಲಂಕಾರ, ಐದನೇ ದಿನ ಬೆಳಿಗ್ಗೆ ಉಚ್ಚಯ ಸಾಯಂಕಾಲ ತೇರು ಎಳೆಯುವ ಕಾರ್ಯ ನಡೆಯುತ್ತದೆ, ತೇರಿನ ಮುಂದುಗಡೆ ವಿವಿಧ ವಾದ್ಯಗಳು, ನಂದಿಕೋಲಿನ ಕುಣಿತ, ಡೋಲು, ಡಮರುಗದ ವಾದ್ಯಗಳು ನಡೆಯುತ್ತವೆ, ಆರನೇ ದಿನ ಓಕುಳಿ ಹಾಗೂ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ನಾಟಕ ಪ್ರದರ್ಶನ ನಡೆಯುತ್ತದೆ.

ವೀರಭದ್ರ ಸ್ವಾಮಿ ಜಾತ್ರೆಗೆ ಒಟ್ಟು 50ರಿಂದ 60,000-00ರೂಗಳ ಖರ್ಚು ಬರುತ್ತದೆ, ಈ ಹಣವನ್ನು ಗ್ರಾಮದ ಎಲ್ಲಾ ಸಮುದಾಯದವರು ಕೊಡುತ್ತಾರೆ.

ಊರಿನಲ್ಲಿರುವ ಈಶ್ವರ ಹಾಗೂ ವೀರಭದ್ರಸ್ವಾಮಿ ದೇವರುಗಳಿಗೆ ಪಲ್ಲಕ್ಕಿಗಳು ಇದ್ದು ಪ್ರತಿ ವರ್ಷ ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಮೂರೂವರೆ ಅಡಿ ಎತ್ತರದ ಕಲ್ಲಿನ ನಾಲ್ಕು ಗಾಲಿಗಳಿಗೆ ಹೊರ ಮಗ್ಗುಲಲ್ಲಿ ಬಣ್ಣದಿಂದ ಚಕ್ರ ಹಾಗೂ ಬಳ್ಳಿಯ ಅಲಂಕಾರ ಮಾಡಿದ್ದಾರೆ, ಈ ತೇರಿನಲ್ಲಿ ಯಾವ ರೀತಿಯ ಶಿಲ್ಪಗಳನ್ನಾಗಲಿ, ಕುಸುರಿ

ಕೆತ್ತನೆಯನ್ನಾಗಲಿ ಮಾಡಿರುವುದಿಲ್ಲ, ಬೇವು ಹಾಗೂ ಬೀಟೆ ಮರದ ರಿಪೀಸುಗಳ(ಪಟ್ಟಿಗಳು)ನ್ನು ಬಳಸಲಾಗಿದೆ, ಅಡ್ಡ, ಉದ್ದುದ್ದ ಮತ್ತು ಲಂಬವಾಗಿ ಹಾಕಿ ತೆಂಗಿನ ಹಗ್ಗದಿಂದ ಈ ಪಟ್ಟಿಗಳನ್ನು ಕಟ್ಟಿದ್ದಾರೆ, ಲಂಬವಾಗಿ ನಿಲ್ಲಿಸಿರುವ ಪಟ್ಟಿಗಳನ್ನು ಕೆಳಗಡೆ ಇರುವ ಅಡ್ಡ ಪಟ್ಟಿಗೆ ರಂಧ್ರವನ್ನು(ಹೋಲ್) ಮಾಡಿ ಲಂಬವಾಗಿ ನಿಲ್ಲಿಸುವ ರಿಪೀಸುಗಳಿಗೆ ರಂಧ್ರದಲ್ಲಿ ಕೂರುವಂತೆ ಮಾಡಿರುತ್ತಾರೆ, ಹೀಗೆ ನಾಲ್ಕು ದಿಕ್ಕುಗಳಲ್ಲೂ ಒಟ್ಟು 12ಪಟ್ಟಿಗಳನ್ನು ನಿಲ್ಲಿಸಿರುತ್ತಾರೆ, ಈ ಪಟ್ಟಿಗಳಲ್ಲಿ ಯಾವುದೇ ಕೆತ್ತನೆಗಳು ಇರುವುದಿಲ್ಲ, ಇದರ ಮೇಲೆ ಬಿದಿರು ಕೋಲುಗಳಿಂದ ಪಟವನ್ನು(ಡೂಮ್) ಮಾಡಿ ಇದಕ್ಕೆ ಬಣ್ಣ ಬಣ್ಣದ ಬಟ್ಟೆಗಳು ಹಾಗೂ ವಿವಿಧ ದೇವರುಗಳ ಭಾವಚಿತ್ರಗಳಿಂದ, ತರತರದ ಹೂವಿನ ಹಾರಗಳು, ಬಾವುಟಗಳನ್ನು ಬಳಸಿ ಅಲಂಕಾರ ಮಾಡಿ, ಮಧ್ಯದಲ್ಲಿ ಮಾಡಿರುವ ಪೀಠದಲ್ಲಿ ದೇವರನ್ನು ಕೂರಿಸಿ ತೇರಿಗೆ ಎಡೆಹಾಕಿ, ಅಂತಿಮ ಪೂಜೆ ಮಾಡಿ ಆ ನಂತರ ಪಾದಗಟ್ಟೆಯವರೆವಿಗೂ ತೇರು ಹೋಗಿ ಅಲ್ಲಿ ಪೂಜೆ ಮುಗಿಸಿಕೊಂಡು ಮತ್ತೆ ದೇವಸ್ಥಾನಕ್ಕೆ ಮರಳಿ ಬರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ವಸಂತಕುಮಾರ್ ---- ಪೂಜಾರ್
2). ವೀರಭದ್ರಪ್ಪ ---- ಗ್ರಾಮಸ್ತರು
3). ತಿಪ್ಪೇಸ್ವಾಮಿ ---- ಗ್ರಾಮಸ್ಥರು
4). ನಾಗರಾಜ ---- ಯುವಕರು.

11). ಸೂರನ ಹಳ್ಳಿ, ಹನುಮಂತರಾಯ(ಆಂಜನೇಯ)ನ ರಥ:

ಊರಿನ ಪ್ರಾಚೀನ ಹೆಸರು ಸೂಲನಾಯಕನಹಳ್ಳಿ ಎಂದಿದ್ದು, ಆಡು ಭಾಷೆಯಲ್ಲಿ ಸೂರನಹಳ್ಳಿ ಎಂದಾಗಿದೆ, ಸೂರನಾಯಕ ಅಥವಾ ಸೂಲನಾಯಕ ಎನ್ನುವ ವ್ಯಕ್ತಿಯೊಬ್ಬನಿಂದ ಈ ಹೆಸರು ಬಂದಿರಬಹುದಾಗಿದೆ.

ಆಂಜನೇಯ, ವೆಂಕಟೇಶ್ವರ, ಈಶ್ವರ, ಕದರಿ ನರಸಿಂಹಸ್ವಾಮಿ, ತಿಮ್ಮಪ್ಪ, ಬಸವಣ್ಣ, ಆದಿಯಲ್ಲಮ್ಮ, ಕೊಲ್ಲಾಪುರದಮ್ಮ, ತಿಪ್ಪೇರುದ್ರ ಸ್ವಾಮಿ, ಮಾರಮ್ಮ ದೇವಸ್ಥಾನಗಳಿವೆ, ಹನುಮಂತರಾಯ ದೇವರಿಗೆ ಪ್ರತಿ ವರ್ಷ ರಥೋತ್ಸವ, ಪಲ್ಲಕ್ಕಿ ಉತ್ಸವಗಳನ್ನು ಕಾರ್ತಿಕ ಮಾಸದಲ್ಲಿ ಮಾಡುತ್ತಾರೆ, ಗ್ರಾಮಕ್ಕೆ ಸಂಬಂಧಿಸಿದಂತೆ ಕಾಡುಗೊಲ್ಲರ ಸಾಂಪ್ರದಾಯಿಕ ಜಾತ್ರೆಯಾದ ಕ್ಯಾತಪ್ಪನ ಜಾತ್ರೆ ವಿಶೇಷವಾಗಿ ನಡೆಯುತ್ತದೆ, ಮಾರಮ್ಮ ಹಬ್ಬದಂದು ಹರಕೆ, ಬಲಿ ಪದ್ಧತಿಗಳು ಆಚರಣೆಯಲ್ಲಿವೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮದೇವರಾದ ಆಂಜನೇಯನ ರಥೋತ್ಸವವು ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ನಡೆಯುತ್ತದೆ, ಈ ಜಾತ್ರೆಗೆ ಸುತ್ತಮುತ್ತಲಿನ ಹಳ್ಳಿಯ ಭಕ್ತರು, ನೆಂಟರಿಷ್ಟರು ಬರುತ್ತಾರೆ, ಮೂರು ದಿನಗಳು ರಥೋತ್ಸವ ಜಾತ್ರೆ ನಡೆಯುತ್ತದೆ, ಮೊದಲ ದಿನ ದೇವರಿಗೆ ಅಭಿಷೇಕ, ದೀಪಾಲಂಕಾರ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ, ಮಹಾಮಂಗಳಾರುತಿ ಕಾರ್ಯಕ್ರಮಗಳು ನಡೆಯುತ್ತವೆ, ರಥೋತ್ಸವ ನಡೆಯುವ ಸಮಯದಲ್ಲಿ ರಥದ ಮುಂದುಗಡೆ ವಿವಿಧ ವಾದ್ಯಗಳು, ನಂದಿಕೋಲಿನ ಹಾಗೂ ಇತರೆ ವಾದ್ಯಗಳು ನಡೆಯುತ್ತವೆ, ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ನಾಟಕ ಪ್ರದರ್ಶನ ನಡೆಯುತ್ತದೆ.

ನಾಲ್ಕು ಗಾಲಿಯ ರಥವನ್ನು 2009ನೇ ಇಸವಿಯಲ್ಲಿ ಜಂಪಣ್ಣ ನಾಯಕನಕೋಟೆ ಗ್ರಾಮದ ಶಿಲ್ಪಿಯಾದ ಬ್ರಹ್ಮಾಚಾರಿ ಹಾಗೂ ತಮ್ಮ ಸಹಾಯಕ ಶಿಲ್ಪಿಗಳು ಸೇರಿ ಮಾಡಿದ್ದಾರೆ, ಮರದ ಗಾಲಿಗಳ ಮೇಲೆ ಹಾಕಿರುವ ಅಚ್ಚಿನಲ್ಲಿ ಯಾವುದೇ ಕೆತ್ತನೆ ಇಲ್ಲ, ನಂತರದಲ್ಲಿ ಅಚ್ಚಿನ ಮೇಲೆ ನಾಲ್ಕು ಅಡ್ಡಲಾಗಿ ತೊಲೆಗಳನ್ನು ಹಾಕಿದ್ದು ಇವುಗಳ ಕೊನೆಯಲ್ಲಿ ಚೌಕಾಕಾರದ ಗೆರೆಯ ಕೆತ್ತನೆ ಇದೆ, ಇದರ ಮೇಲೆ

ಮೂರು ವಿಭಾಗದಂತೆ ಚೌಕಾಕಾರದ ಹಲಗೆಯಲ್ಲಿ ವಿವಿಧ ಹೂವುಗಳ ಕೆತ್ತನೆ, ಅಡ್ಡ ಹಾಗೂ ಉದ್ದನಾಗಿ ರಥದ ವಿವಿಧ ಭಾಗಗಳಲ್ಲಿ ಇರುವ ಹಲಗೆಯ ಪಟ್ಟಿಗಳಲ್ಲಿ ಕುಸುರಿ ಕೆತ್ತನೆ ಇದ್ದು ರಥಕ್ಕೆ ಸೌಂದರ್ಯದ ಮೆರುಗು ನೀಡಿದೆ, ಇದರ ಮೇಲಿನ ಸಾಲಿನಲ್ಲಿ ಎರಡು ಕಂಬಗಳ ಮಧ್ಯದಲ್ಲಿ ಒಂದು ಶಿಲ್ಪಗಳಂತೆ ರಥದ ನಾಲ್ಕು ದಿಕ್ಕಿಗೂ ಒಟ್ಟು 12ಶಿಲ್ಪಗಳಿವೆ, ಅವುಗಳಲ್ಲಿ ಎರಡು ಕೈಗಳನ್ನು ಹೊಂದಿರುವ ಸುಬ್ರಮಣ್ಯ ಹಾಗೂ ತ್ರಿಶೂಲಧಾರಿಯಾದ ದೇವಿಯ ಸಾಧಾರಣ ಶಿಲ್ಪದ ಕೆತ್ತನೆ ಇದೆ, ಈಶ್ವರ, ನರಸಿಂಹಸ್ವಾಮಿ, ಶ್ರೀರಾಮ, ಸೀತಾದೇವಿ, ಲಕ್ಷ್ಮಣ, ಆಂಜನೆಯ, ತಿಪ್ಪೇರುದ್ರಸ್ವಮಿ, ವಿಘ್ನೇಶ, ಆಂಜನೇಯ, ಲಕ್ಷ್ಮಿ, ಸರಸ್ವತಿ ಶಿಲ್ಪಗಳ ಕೆತ್ತನೆ ಇದ್ದು ಈ ಶಿಲ್ಪಗಳನ್ನು ಪ್ರತ್ಯೇಕ ಹಲಗೆಯಲ್ಲಿ ಕೆತ್ತನೆ ಮಾಡಿ ರಥಕ್ಕೆ ಜೋಡಣೆ ಮಾಡಲಾಗಿದೆ, ಇದರ ಮೇಲೆ ಸಣ್ಣ ಅಳತೆಯ ಪಟ್ಟಿಗಳನ್ನು ಜೋಡಿಸಿದ್ದು ನಂತರದಲ್ಲಿ ದೇವರನ್ನು ಕೂರಿಸುವ ಪೀಠವು ಎಂಟು ಚೌಕದ ಕಂಬಗಳನ್ನು ಹೊಂದಿದೆ.

ರಥಕ್ಕೆ ಪೂರ್ತಿಯಾಗಿ ಹೊನ್ನೆ ಮರವನ್ನು ಬಳಸಿ ನಿರ್ಮಾಣ ಮಾಡಿದ್ದಾರೆ, ರಥವನ್ನು ನಿರ್ಮಾಣ ಮಾಡಿದ ಶಿಲ್ಪಿಗಳಿಗೆ 2,65,000–00(ಎರಡು ಲಕ್ಷದ ಅರವತ್ತೈದು ಸಾವಿರ)ರೂಗಳನ್ನು ಸಂಭಾವನೆಯಾಗಿ ಕೊಟ್ಟಿದ್ದಾರೆ, ಚಿಕ್ಕಮಂಗಳೂರಿನಿಂದ ಕಾನೂನು ನಿಯಮಂತೆ ಒಳಪಟ್ಟು ಹೊನ್ನೆ ಮರವನ್ನು ಖರೀದಿಮಾಡಿ ತಂದಿದ್ದಾರೆ, ರಥದ ನಿರ್ಮಾಣಕ್ಕೆ ಒಟ್ಟು 22ಲಕ್ಷ ರೂಗಳು ಖರ್ಚಾಗಿದೆ, ಗಾಲಿಯಿಂದ ಹಿಡಿದು ಮರದ ಕೆತ್ತನೆಯನ್ನು ಒಳಗೊಂಡಂತೆ ಕಬ್ಬಿಣದ ಸಲಾಕೆಗಳಿಂದ ಮಾಡಿದ ಡೂಮನ್ನು ಕೂರಿಸುವವರೆಗೆ 20ಅಡಿ ಇದೆ, 9ಅಡಿ ಪಟವನ್ನು ಕಟ್ಟುವ(ಡೂಮ್) ಇದ್ದು ಈ ಡೂಮಿನ ಮೇಲೆ 2ಅಡಿ ಕಳಸವನ್ನು ಇಡುತ್ತಾರೆ, ಅಲ್ಲಿಗೆ ರಥದ ಒಟ್ಟು ಎತ್ತರ 31ಅಡಿ. ರಥೋತ್ಸವದ ಸಮಯದಲ್ಲಿ ರಥಕ್ಕೆ ಬಣ್ಣ ಬಣ್ಣದ ಬಟ್ಟೆಗಳು ಹಾಗೂ ವಿವಿಧ ದೇವರುಗಳ ಭಾವಚಿತ್ರಗಳಿಂದ, ತರತರದ ಹೂವಿನ ಹಾರಗಳಿಂದ ಅಲಂಕಾರ ಮಾಡುತ್ತಾರೆ, ರಥದ ಸುತ್ತಲೂ ಕೆಂಪು ಬಣ್ಣದ ಬಟ್ಟೆಯಿಂದ ಮಾಡಿದ ಬಾವುಟಗಳನ್ನು ಕಟ್ಟುತ್ತಾರೆ, ನಂತರ ದೇವರನ್ನು ಪಲ್ಲಕ್ಕಿಯಲ್ಲಿ ತಂದು ರಥದಲ್ಲಿ ಕೂರಿಸಿ ಪಾದಗಟ್ಟೆಯವರೆವಿಗೂ ರಥವನ್ನು ಭಕ್ತಾದಿಗಳೆಲ್ಲಾ ಸೇರಿ ಎಳೆದುಕೊಂಡು ಹೋಗಿ ಅಲ್ಲಿ ಪೂಜೆ ಮುಗಿಸಿಕೊಂಡು ಮತ್ತೆ ಮೊದಲಿದ್ದ ರಥದ ಮನೆಯ ಒಳಗೆ ಬಿಡುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಎಸ್.ಟಿ. ವೀರಭದ್ರಪ್ಪ ---- ಗ್ರಾಮಸ್ಥರು
2). ಹನುಮಂತರಾಯ ---- ಗ್ರಾಮಸ್ಥರು
3). ಹೊಳಿಯಪ್ಪ ---- ಗ್ರಾಮಸ್ಥರು
4). ಆನಂದಪ್ಪ ---- ಗ್ರಾಮಸ್ತರು
5). ಪ್ರಕಾಶ್ ---- ತಳವಾರ
ಮೊ: 9740568733.

12). ಕಡೇಹುಡೆ, ಶನಿಮಹಾತ್ಮ ದೇವರ ರಥ:

ಸುಮಾರು ವರ್ಷಗಳ ಹಿಂದೆ ಪ್ಲೇಗು, ಕಾಲರದಂತಹ ದೊಡ್ಡ ರೋಗಕ್ಕೆ ಇಲ್ಲಿನ ಜನರು ಬಲಿಯಾದರಂತೆ, ಮೊದಲು ಗ್ರಾಮವಿದ್ದ ಸ್ಥಳವನ್ನು ಎಲ್ಲರೂ ಬಿಟ್ಟು ಊರಿನ ಕಡೆಯಲ್ಲಿ ಮನೆಗಳನ್ನು, ಗುಡಿಸಲುಗಳನ್ನು ಕಟ್ಟಿಕೊಂಡರು, ಆ ಗ್ರಾಮವೇ ಈಗ (ಕಡುಡೆ)ಕಡೆಹುಡೆ ಆಗಿದೆ ಎಂಬುದು ಕೆಲವರ ಅಭಿಪ್ರಾಯ, ಮತ್ತೊಂದು ಕಾರಣವೆಂದರೆ ಆಂದ್ರ ರಾಜ್ಯದ ಕೊನೆ ಅಂಚಿನಲ್ಲಿ (ಕಡೆಯಲ್ಲಿ), ಕರ್ನಾಟಕದ ಗಡಿ ಗ್ರಾಮವಾಗಿರುವುದರಿಂದ ಕಡೆಹುಡೆ ಎಂದೂ ಕರೆದಿರಬಹುದು.

ಅಂಜನೇಯ, ಕೋಡಿ ಮಾರಮ್ಮ, ಈಶ್ವರ, ಶನಿದೇವ, ತಿಮ್ಮಪ್ಪ, ದುರುಗಮ್ಮ, ಭೂತಪ್ಪ ದೇವಸ್ಥಾನಗಳಿವೆ, ಪ್ರತಿ ವರ್ಷ ಶ್ರಾವಣಮಾಸದಲ್ಲಿ ಶನಿದೇವರ ಜಾತ್ರೆ ನಡೆಯುತ್ತದೆ, ಮಾರಮ್ಮನ ಹಬ್ಬದಂದು ಬಲಿ ಹರಕೆ ಪದ್ದತಿಗಳು ರೂಢಿಯಲ್ಲಿವೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮದಲ್ಲಿರುವ ಶನಿ ಮಹಾತ್ಮ ದೇವರಿಗೆ ರಥೋತ್ಸವವು ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ನಡೆಯುತ್ತದೆ, ಮೂರು ದಿನ ನಡೆಯುತ್ತಿದ್ದು ಮೊದಲ ದಿನ ದೀಪೋತ್ಸವ, ತೇರಿಗೆ ಕಳಸ ಇಡುವುದು, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ ಮುಂತಾದ ಕಾರ್ಯ ನಡಯುತ್ತದೆ.

ರಥೋತ್ಸವದ ದಿನ ಬೆಳಿಗ್ಗೆ ದೇವರ ಗಂಗಾ ಪೂಜೆ, ನಂತರ ದೇವಸ್ಥಾನದಿಂದ ದೇವರನ್ನು ಪಲ್ಲಕ್ಕಿಯಲ್ಲಿ ಗ್ರಾಮದ ಮಧ್ಯದಲ್ಲಿ ಇರುವ ರಥದಲ್ಲಿ ಕೂರಿಸುತ್ತಾರೆ, ನಂತರ ರಥಕ್ಕೆ ಬಲಿಬಾನ ಹಾಕಿ ಹನ್ನೆರಡು ಕೈವಾಡಸ್ಥರು ಸೇರಿ ಪೂಜೆ ಸಲ್ಲಿಸಿದ ನಂತರ ಗ್ರಾಮದ ಸರ್ವ ಜನರ ಒಪ್ಪಿಗೆಯನ್ನು ಕೇಳಿ ರಥವನ್ನು ಮುಂದೆ ಎಳೆಯುತ್ತಾರೆ, ಪಾದಗಟ್ಟೆಯವರೆವಿಗೂ ರಥವನ್ನು ಎಳೆದುಕೊಂಡು ಹೋಗಿ ಅಲ್ಲಿ ರಥಕ್ಕೆ ಪೂಜೆಯನ್ನು ಮಾಡಿಸಿ ಮತ್ತೆ ಮೊದಲಿನ ಜಾಗಕ್ಕೆ ಎಳೆದುಕೊಂಡು ಬರುತ್ತಾರೆ.

ಪೂರ್ವದಲ್ಲಿ ಹಳೆಯ ರಥವಿದ್ದು ಅದು ಶಿಥಿಲವಾಗಿತ್ತು, ಊರಿನ ಭಕ್ತರು ಸಭೆ ಸೇರಿ ಗ್ರಾಮದ ನೌಕರರೊಂದಿಗೆ ಚರ್ಚಿಸಿ ಎಲ್ಲಾ ಸಮುದಾಯದವರ ಒಪ್ಪಿಗೆಯನ್ನು ಪಡೆದುಕೊಂಡು 2014ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, ಶಿಲ್ಪಿಗಳಿಗೆ ಒಂದು ಲಕ್ಷದ ಅರವತ್ತು ಸಾವಿರ (1,60,000-00)ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಕೆಲವು ದಾನಿಗಳಿಂದ ಸ್ಥಳೀಯವಾಗಿ ಸಿಗುವ ಮರಗಳನ್ನು ದಾನವಾಗಿ ರಥ ನಿರ್ಮಾಣಕ್ಕೆ ಪಡೆದಿದ್ದಾರೆ, ಒಟ್ಟು ರಥದ ಖರ್ಚು ಒಂಬತ್ತು ಲಕ್ಷ (9,00000-00)ರೂಗಳಾಗಿದೆ, ಗಾಲಿಯಿಂದ ಹಿಡಿದು ಕಳಸದವರೆವಿಗೆ ಸೇರಿ ಒಟ್ಟು ರಥದ ಎತ್ತರ 28ಅಡಿ ಇದೆ, ನಾಲ್ಕು ಗಾಲಿಗಳು, ಕಬ್ಬಿಣದ ಸಲಾಕೆಗಳಿಂದ ಮಾಡಿದ ಡೂಮು (ಪ್ಲಾಟು), ಪಂಚಲೋಹದ ಕಳಸ ಇದೆ, ಗಾಲಿಗಳ ಮೇಲೆ ಇರುವ ಅಚ್ಚಿನಲ್ಲಿ ಕುಸುರಿ ಕೆತ್ತನೆ, ಇದರ ಮೇಲೆ ಅಡ್ಡಲಾಗಿ ಹಾಕಿರುವ ತೊಲೆಗಳ ತುದಿಗಳಲ್ಲಿ ಸಿಂಹದ ಕೆತ್ತನೆ, ನಂತರ ಇದರ ಮೇಲೆ ಇರುವ ಅಡ್ಡ ಪಟ್ಟಿಗಳಲ್ಲಿ ಹೂ ಹಾಗೂ ಎಲೆಬಳ್ಳಿಗಳ ಕೆತ್ತನೆ, ನಂತರ ಇದರ ಮೇಲೆ ಎರಡು ಜೋಡಿ ಕಂಬಗಳ ಮಧ್ಯದಲ್ಲಿ ಒಂದರಂತೆ ಶಿಲ್ಪಗಳ ಕೆತ್ತನೆಯನ್ನು ಮಾಡಿದ್ದು ಶನಿದೇವನ ವಿವಿಧ ಅವತಾರಗಳು, ಶಿವನ ಲೀಲೆಗಳು, ವಿಷ್ಣುವಿನ ಅವತಾರಗಳು, ವಿವಿಧ ಪ್ರಾಣಿ ಪಕ್ಷಿಗಳು ಹಾಗೂ ಸುಂದರವಾದ ಕುಸುರಿ ಕೆತ್ತನೆಯು ರಥವು ಸುಂದರವಾಗಿ ಕಾಣಲು ನೆರವಾಗಿವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ವೆಂಕಟೇಶ್ ಬಿನ್ ಎಲೆ ರಾಮಣ್ಣ --- ಗ್ರಾಮಸ್ಥರು ಮೊ: 8762251125

2). ಮಲ್ಲೇಶಪ್ಪ (ಗ್ರಾ.ಪಂ.ಸದಸ್ಯರು) --- ಗ್ರಾಮಸ್ಥರು.

13). ರೇಣುಕಾಪುರ, ರೇಣುಕಾ ದೇವಿಯ ರಥ:

ಗ್ರಾಮದ ಪ್ರಾಚೀನ ಹೆಸರು ಜಾನಮದ್ದಿ ಎಂದಿದ್ದು ಈ ಹೆಸರು ಇಂದಿಗೂ ಸಹ ಪ್ರಚಲಿತದಲ್ಲಿದೆ, ಕೆಲವರು ಇಂದಿಗೂ ಜಾನಮದ್ದಿ ಎಂದೂ ಕರೆಯುತ್ತಾರೆ. ಹಿಂದೆ ಜಾಲಿಮರಗಳು(ಕಪ್ಪುಜಾಲಿ) ಹೆಚ್ಚಿದ್ದ ಕಾರಣದಿಂದ ಹಾಗೂ ಇಲ್ಲಿ ಜಾಲಿ ಹಳ್ಳವೂ ಕೂಡ ಇರುವುದರಿಂದ ಜಾಲಿ ಮದ್ದಿ ಎಂಬ ಹೆಸರು ಕ್ರಮೇಣ 'ಜಾನುಮದ್ದಿ' ಎಂದು ಬದಲಾಗಿದೆ. ಚಿತ್ರದುರ್ಗ ಪಾಳೆಯಗಾರರು ರಾಯದುರ್ಗ ಪಾಳೆಯಗಾರರಿಗೆ ಸೇರಿದ್ದ ಈ ಗ್ರಾಮವನ್ನು ತಮ್ಮ ವಶಕ್ಕೆ ಪಡಿಸಿಕೊಂಡ ಮೇಲೆ ಈ ಗ್ರಾಮದ ಹೆಸರನ್ನು ರೇಣುಕಾಪುರ ಎಂದು ಬದಲಾಯಿಸಿದರಂತೆ.

ರೇಣುಕಾದೇವಿಯ ರಥೋತ್ಸವವನ್ನು ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ಮಾಡುತ್ತಾರೆ, ಬಸವಣ್ಣಸ್ವಾಮಿಗೆ ಚಿಕ್ಕ ತೇರು ಮತ್ತು ಪಲ್ಲಕ್ಕಿ ಉತ್ಸವ ಮಾಡುತ್ತಾರೆ, ರೇಣುಕಾದೇವಿ, ಚೌಡೇಶ್ವರಿ, ಆಂಜನೇಯ, ಬಸವಣ್ಣ ದುರ್ಗಮ್ಮ, ಜುಂಜಪ್ಪ, ಓಬಳೇಶ್ವರ ದೇವಸ್ಥಾನಗಳಿವೆ, ಮಾರಮ್ಮ ದೇವಿಯ ಹಬ್ಬದಲ್ಲಿ ಬಲಿ, ಹರಕೆ ಪದ್ಧತಿಗಳು ರೂಢಿಯಲ್ಲಿವೆ, ಯೇಸುಕ್ರಿಸ್ತನ ಚರ್ಚ್ ಸಹ ಇದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಪ್ರತಿ ವರ್ಷ ಗ್ರಾಮ ದೇವತೆಯಾದ ರೇಣುಕಾ ಯಲ್ಲಮ್ಮ ದೇವರ ರಥೋತ್ಸವವನ್ನು ಮಾಡುತ್ತಾರೆ, ಸುತ್ತಮುತ್ತಲ ಹಳ್ಳಿಗೆ ಈ ಜಾತ್ರೆ ಬಹಳ ಹೆಸರುವಾಸಿ, ಜಾತ್ರೆಗೆ ಸುತ್ತಮುತ್ತಲ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ ಮೊದಲ ದಿನ ದೇವರಿಗೆ ವಿಶೇಷ ಪೂಜೆ, ರಥಕ್ಕೆ ಕಳಸ ಪ್ರತಿಷ್ಠಾಪನೆ, ಎರಡನೇ ದಿನ ದೀಪೋತ್ಸವ, ನಂತರ ರಥೋತ್ಸವ ಕಾರ್ಯ ನಡೆಯುತ್ತದೆ, ರಥವು ಸಾಗುತ್ತಿರುವಾಗ ರಥದ ಮುಂದುಗಡೆ ವಿವಿಧ ವಾದ್ಯಗಳು, ನಂದಿಕೋಲು ಮುಂತಾದ ವಾದ್ಯಗಳ ಶಬ್ದವು ಕಿವಿಗೆ ಗೋಚರಿಸುತ್ತದೆ, ಮೂರನೇ ದಿನ ಓಕುಳಿ ಮತ್ತು ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ನಾಟಕ ಪ್ರದರ್ಶನ ಇರುತ್ತದೆ.

ಗ್ರಾಮದಲ್ಲಿ ನೆಲೆಸಿರುವ ಬಸವಣ್ಣ ದೇವರಿಗೆ ಚಿಕ್ಕ ತೇರು ಇದ್ದು ಯುಗಾದಿ ಹಬ್ಬದ ನಂತರ ತೇರು ಎಳೆಯುವ ಕಾರ್ಯಕ್ರಮ ನಡೆಯುತ್ತದೆ, ನಾಲ್ಕು ಗಾಲಿಯ ಮೇಲೆ ಹಾಕಿರುವ ಅಚ್ಚಿನ ಮೇಲೆ ಅಡ್ಡಲಾಗಿ ಮತ್ತು ಉದ್ದಲಾಗಿ ಮರದ ತೀರುಗಳನ್ನು ಹಾಕಿದ್ದಾರೆ ಇದರಲ್ಲಿ ಯಾವುದೇ ಕೆತ್ತನೆ ಇಲ್ಲ.

ರೇಣುಕಾ ದೇವಿಯ ರಥವು ಬಸವಣ್ಣ ದೇವರ ತೇರಿಗಿಂತ ದೊಡ್ಡದಾಗಿದೆ, 21ಅಡಿಯ ರಥವು ಇದಾಗಿದ್ದು, ಅಚ್ಚು, ತೊಲೆ, ಕಂಬಗಳು, ಪೀಠವನ್ನು ಒಳಗೊಂಡಿದ್ದು ರೇಣುಕಾ ದೇವಿಯ ಶಿಲ್ಪ, ನವ ದೇವತೆಗಳು, ನಂದಿ, ಶಿವಲಿಂಗ, ಆಂಜನೇಯ, ತಿಪ್ಪೇಸ್ವಾಮಿ, ಲಕ್ಷ್ಮಿ, ಸರಸ್ವತಿ, ಗಣಪತಿ, ಪರಶುರಾಮ ಶಿಲ್ಪಗಳನ್ನು ಕೆತ್ತನೆ ಮಾಡಿದ್ದು, ರಥದ ಕೆಲವು ಭಾಗಗಳಲ್ಲಿ ಜೋಡಣೆ ಮಾಡಿರುವ ಪಟ್ಟಿಗಳಲ್ಲಿ ಸೂಕ್ಷ್ಮ ಕುಸುರಿ ಕೆತ್ತನೆ ಇದೆ. ಪೀಠವು ಎಂಟು ಕಂಬಗಳಿಂದ ನಿರ್ಮಾಣವಾಗಿದ್ದು ಇದರ ಮೇಲೆ ಕಬ್ಬಿಣದ ಪಟ್ಟಿಗಳು, ಸಲಾಕೆಗಳಿಂದ ಮಾಡಿದ ದುಂಡನೆಯ ಆಕಾರದ ಡೂಮು ಇಟ್ಟು ಈ ಡೂಮಿಗೆ ಬಣ್ಣದ ಬಟ್ಟೆಗಳು, ಕಲರ್ ಪೇಪರ್, ಕಲರ್ ಪ್ಲಾಸ್ಟಿಕ್ ಹೂವುಗಳು, ಹಾಗೂ ಇತರೆ ಹೂವುಗಳು ರಥಕ್ಕಾಗಿಯೇ ತಯಾರಿಸಿರುವ ಪಟಗಳು, ಬಾವುಟಗಳನ್ನು ಬಳಸಿ ಅಲಂಕಾರ ಮಾಡುತ್ತಾರೆ, ನಂತರ ಡೂಮಿನ ಮೇಲೆ ಪಂಚ ಲೋಹಗಳನ್ನು ಬಳಸಿ ತಯಾರಿಸಿದ ಕಳಸವನ್ನು ಇಡುತ್ತಾರೆ, ರಥದ ಅಲಂಕಾರ ಎಲ್ಲಾ ಸಿದ್ದವಾದ ಮೇಲೆ ಎಡೆ ಹಾಕಿ ವಿಶೇಷತೆಯುಳ್ಳ ಪೂಜೆಯನ್ನು ಮಾಡಿ ಪಾದಗಟ್ಟೆಯವರೆವಿಗೂ ರಥವು ಹೋಗಿ ವಾಪಾಸ್ಸು ಬರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಉಪೇಂದ್ರ ---- ಗ್ರಾಮಸ್ಥರು,

2). ಮಾಲಾ ---- ಗ್ರಾಮಸ್ಥರು ಮೊ: 8151930796

14). ನೇರ್ಲಗುಂಟೆ, ಆಂಜನೇಯನ ರಥ:

ನೀರಿನ ಕುಂಟೆ ಹಾಗೂ ನೇರಳೆ ಹಣ್ಣಿನ ಮರಗಳಿರುವ ಜಾಗದಲ್ಲಿ ಊರನ್ನು ಕಟ್ಟಿದ ಕಾರಣ ನೇರಳಕುಂಟೆ, ನೇರಳಗುಂಟೆಯಾಗಿ ಕ್ರಮೇಣ ನೇರ್ಲಗುಂಟೆಯಾಗಿದೆ.

ಗಣೇಶ, ಆಂಜನೇಯ, ಬಂಗಾರೇಶ್ವರಿ(ಬಂಗಾರ ದೇವರು) ಮಾರಿಕಾಂಬ(ದಡ್ಲು ಮಾರಮ್ಮ) ದುರುಗಮ್ಮ, ಯಲ್ಲಮ್ಮ, ಅಜ್ಜಯ್ಯ, ಹೊನ್ನೂರಸ್ವಾಮಿ ದೇವರುಗಳಿವೆ, ಪ್ರತಿ ವರ್ಷ ಮೊಹರಂ ಸಮಯದಲ್ಲಿ ಕೊಂಡ ಹಾಯುವ ಕಾರ್ಯವನ್ನು ಮಾಡುತ್ತಾರೆ, ಶ್ರೀರಾಮನವಮಿ ಸಮಯದಲ್ಲಿ ಪಾನಕ

ಪ್ರಸಾದ ನಡೆಯುತ್ತದೆ, ಬಂಗಾರೇಶ್ವರಿ ದೇವರಿಗೆ ಅಂಬು ಹೊಡೆಯುವ ಪದ್ಧತಿಯನ್ನು ದಸರಾ ಹಬ್ಬದ ಸಮಯದಲ್ಲಿ, ಮಾರಿಕಾಂಬ ದೇವರಿಗೆ ಪ್ರತಿ ವರ್ಷ ಸೆಪ್ಟಂಬರ್ ತಿಂಗಳಲ್ಲಿ ಜಾತ್ರೆ ಮಾಡುತ್ತಾರೆ, ಆ ಸಮಯದಲ್ಲಿ ಬಲಿ, ಹರಕೆ, ಓಕುಳಿ, ಆರತಿ ಕಾರ್ಯಕ್ರಮಗಳು ನಡೆಯುತ್ತವೆ.

ನೇರಲಗುಂಟೆ ಮುಖ್ಯ ಗ್ರಾಮಕ್ಕೆ ಕೂಗಳತೆ ಅಂತರದಲ್ಲಿ ಈ ಗ್ರಾಮದ ಒಂದು ಭಾಗವಿದೆ, ಇದನ್ನು ನೇರಲಗುಂಟೆ ಕುರುಬರಹಟ್ಟಿ -ಎಂದು ಕರೆಯುತ್ತಾರೆ, ಒಂದೇ ಗ್ರಾಮದ ಎರಡು ಭಾಗಗಳು ನೇರಲಗುಂಟೆ ಹಾಗೂ ಕುರುಬರ ಹಟ್ಟಿ, ದೇವತಾ ಕಾರ್ಯಗಳನ್ನೂ ಅಥವಾ ಮತ್ತಾವುದೇ ಕಾರ್ಯಗಳಿದ್ದರೂ ಒಟ್ಟಿಗೆ ಸೇರಿ ಮಾಡುತ್ತಾರೆ,

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಗ್ರಾಮದಲ್ಲಿ ನೆಲೆಸಿರುವ ಆಂಜನೇಯ ದೇವರ ಪಲ್ಲಕ್ಕಿ, ಉಚ್ಚಯ, ದೊಡ್ಡರಥ ಇದ್ದು, ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವ, ಹೊಂಬು ಹೊಡೆಯುವ ಕಾರ್ಯನಡೆಯುತ್ತದೆ, ಇದೇ ಸಮಯದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವವೂ ನಡೆಯುತ್ತದೆ, ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ರಥೋತ್ಸವ ನಡೆಯುತ್ತದೆ, ಶಿವಮೊಗ್ಗ ಜಿಲ್ಲೆಯ ಗೊಪ್ಪೇನಹಳ್ಳಿ ಗ್ರಾಮದ 10ಜನ ಸಂಪ್ರದಾಯ ಶಿಲ್ಪಿಗಳು ಸೇರಿ ಮಾಡಿದ್ದಾರೆ, ಒಟ್ಟು 21ಅಡಿ ಎತ್ತರವಾಗಿದೆ, ನಾಲ್ಕು ಮರದ ಗಾಲಿಗಳಿದ್ದು ಇವಕ್ಕೆ ನಾಲ್ಕು ಕಬ್ಬಿಣದ ಪಟ್ಟಿಗಳನ್ನು ಹಾಕಿದ್ದು, ಗಾಲಿಯ ಅಂಚಿಗೆ ಅಳಿಗಳನ್ನು ಹಾಕಿದ್ದಾರೆ, ಒಟ್ಟು ನಾಲ್ಕು ತಿಂಗಳುಗಳ ಕಾಲ ರಥದ ನಿರ್ಮಾಣ ಕೆಲಸವನ್ನು ಮಾಡಲಾಗಿದೆ, ಶಿಲ್ಪಿಗಳು ಇದೇ ಊರಿನಲ್ಲಿ ವಾಸ್ಥವ್ಯ ಇದ್ದುಕೊಂಡು ರಥದ ಕೆತ್ತನೆ ಕೆಲಸವನ್ನು ಮಾಡಿದ್ದಾರೆ, ಕಂಬಗಳ ರೋಲಿಂಗ್ ಕೆಲಸ, ಹಲಗೆ, ರಿಪೀಸುಗಳ ಪ್ಲೇನಿಂಗ್ ಮಾಡಿಸುವ ಕೆಲಸವನ್ನು ಪ್ಲೇನಿಂಗ್ ಮೆಶೀನ್‌ನಲ್ಲಿ ಮಾಡಿಸಿಕೊಂಡು ಬಂದಿದ್ದಾರೆ, ರಥವನ್ನು ಮಾಡಿದ ಶಿಲ್ಪಿಗಳಿಗೆ ಒಂದು ಲಕ್ಷ,(1,00000-00) ಸಂಭಾವನೆಯನ್ನು ಕೊಟ್ಟಿದ್ದಾರೆ, ಜೊತೆಗೆ ಬಂಗಾರದ ಒಂದು ಉಂಗುರ(ರಿಂಗ್), ಹೊಸ ಬಟ್ಟೆಗಳನ್ನು ಕೊಟ್ಟಿದ್ದು, ಕೆಲಸದ ದಿನಗಳಲ್ಲಿ ಊಟದ ವ್ಯವಸ್ಥೆಯನ್ನೂ ಸಹ ಗ್ರಾಮದವರೇ ಮಾಡಿದ್ದಾರೆ.

ಗಾಲಿಗೆ ಹಾಕಿರುವ ದಪ್ಪನೆಯ ಅಚ್ಚಿನ ಮೇಲೆ ಅಡ್ಡಲಾಗಿ ನಾಲ್ಕು ತೊಲೆಗಳನ್ನು ಹಾಕಿದ್ದು, ಮಧ್ಯದ ಎರಡು ತೊಲೆಗಳ ತುದಿಯಲ್ಲಿ ನಂದಿ, ಕೊನೆಯ ಎರಡು ತೊಲೆಗಳ ಅಂಚಿನಲ್ಲಿ ಸಿಂಹದ ಮುಖಗಳನ್ನು ಕೆತ್ತನೆ ಮಾಡಿದ್ದಾರೆ, ಈ ತೊಲೆಗಳ ಮೇಲೆ ಅಡ್ಡ ಮತ್ತು ಉದ್ದನಾಗಿ ಅರ್ಧ ಅಡಿ ದಪ್ಪನೆಯ ಮರದ ದಿಮ್ಮಿಗಳಿವೆ, ಇವುಗಳಲ್ಲಿ ಕುಸುರಿ ಕೆತ್ತನೆ ಇದೆ, ಅರಳಿದ ಚಿಕ್ಕ ಪ್ರಮಾಣದ ಹೂವುಗಳು ಮತ್ತು ಬಳ್ಳಿಗಳ ಕೆತ್ತನೆ, ಇದರ ಮೇಲೆ ಸೂಕ್ಷ್ಮ ಕುಸುರಿ ಕೆತ್ತನೆ, ತೋರಣದ ಕೆತ್ತನೆ ಮಾಡಿದ ಪಟ್ಟಿ, ಇದರ ಮೇಲೆ ರೋಲಿಂಗ್ ಮಾಡಿಸಿದ ಕಂಬಗಳು, ಈ ಕಂಬಗಳ ನಡುವೆ ವಿವಿಧ ಶಿಲ್ಪಗಳಿವೆ, ರಥದ ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಕುದುರೆಯ ಕೆತ್ತನೆ ಇದ್ದು, ಕುದುರೆಯ ಎರಡೂ ಬದಿಗಳಲ್ಲಿ ಒಂದೊಂದು ಗಂಟೆಯನ್ನು ನೇತು ಹಾಕಿದ್ದಾರೆ, ಶಿಲ್ಪಗಳಲ್ಲಿ ಆಭರಣ ಧಾರಿಗಳಾಗಿ ಶಿವ, ಗಣಪತಿ ಹಾಗೂ ನಾಲ್ಕು ತಲೆಯ ಬ್ರಂಹ, ಏಳು ತಲೆಯ ಸರ್ಪದ ಮೇಲೆ ನಿಂತಿರುವ ಮೂರ್ತಿ. ರಥದ ಭಾರವನ್ನು ಎರಡೂ ಕೈಗಳಲ್ಲಿ ಎತ್ತಿಹಿಡಿದು ಮೊಣಕಾಲುಗಳನ್ನು ಕೆಳಗೆ ಊರಿ ಕುಳಿತಿರುವ ಮಹಿಳೆಯ ಮೂರ್ತಿ, ದ್ವಾರಪಾಲಕರನ್ನೊಳಗೊಂಡ ವೃಷಬೇಂದ್ರ, ನಾಯಕನಹಟ್ಟಿ ತಿಪ್ಪೇಸ್ವಾಮಿ. ಶ್ರೀಕೃಷ್ಣ, ಶಿವ ಪಾರ್ವತಿ, ಶ್ರೀರಾಮ ಸೀತಾದೇವಿ ಲಕ್ಷ್ಮಣ ಆಂಜನೇಯನ ಮೂರ್ತಿಗಳನ್ನು ರಥದ ನಾಲ್ಕೂ ದಿಕ್ಕಿನಲ್ಲಿ ಕೆತ್ತನೆ ಮಾಡಿದ್ದಾರೆ, ಇದರ ಮೇಲಿನ ಸಾಲಿನಲ್ಲಿ 12ರಾಶಿಗಳ ಮತ್ತು 9ಗ್ರಹಗಳ ಕೆತ್ತನೆಯು ಅವುಗಳ ವಾಹನ ಸಮೇತ ಇದೆ. ಜೊತೆಗೆ ಆಯುಧಗಳನ್ನು ಹಿಡಿದಿರುವ ವಿವಿಧ ದೇವರ ಮೂರ್ತಿಗಳನ್ನು ಆಯಾ ವಾಹನಗಳ ಸಮೇತ ಕೆತ್ತನೆಮಾಡಿದ್ದಾರೆ.

ಎಂಟು ಕಂಬಗಳನ್ನೊಳಗೊಂಡು ದೇವರನ್ನು ಕೂರಿಸುವ ಪೀಠವು ಇದ್ದು, ಈ ಪೀಠವು ತಿರುಗುಣಿಯನ್ನು(ಬೇರಿಂಗ್) ಹೊಂದಿದೆ, ರಥವು ಮುಂದೆ ಹೋಗಿ ವಾಪಾಸ್ಸು ಬರುವಾಗ ಬೇರಿಂಗ್ ಇರುವ ಪೀಠವನ್ನು ತಿರುಗಿಸಿದರೆ ರಥವನ್ನು ಇನ್ನೊಂದು ಮುಖದಿಂದ ಮುನ್ನಡೆಸಬಹುದು, ರಥದ ನಿರ್ಮಾಣಕ್ಕೆ ಗ್ರಾಮದ ಭಕ್ತಾದಿಗಳು, ಗ್ರಾಮದಲ್ಲಿರುವ ನೌಕರರು, ಬೇರೆ ಊರಿನ ದಾನಿಗಳು ಚಂದಾ ಹಣವನ್ನು ನೀಡಿದ್ದಾರೆ, ಇದಲ್ಲದೆ ಗ್ರಾಮದಲ್ಲಿರುವ ಮನೆಗಳಿಗೆ ಅವರ ಆರ್ಥಿಕ ಪರಿಸ್ಥಿಯನ್ನು ನೋಡಿ ಚಂದಾ ಹಣವನ್ನು ನಿಗದಿ ಮಾಡಿ ರಥ ನಿರ್ಮಾಣಕ್ಕೆ ಬಳಸಲಾಗಿದೆ, ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಮರಗಳನ್ನು ರಥ ನಿರ್ಮಾಣ ಮಾಡಲು ಕೊಟ್ಟಿದ್ದಾರೆ, ರಥಕ್ಕೆ ಬೇವು ಹಾಗೂ ಜಾಲಿ ಮರಗಳನ್ನಷ್ಟೇ ಬಳಸಿದ್ದು ಉಳಿದಂತೆ ಮತ್ತಾವುದೇ ಮರಗಳನ್ನು ಬಳಸಿರುವುದಿಲ್ಲ, ಮರವನ್ನು ಬೇರೆ ಕಡೆ ಖರೀದಿ ಮಾಡಿಲ್ಲ, ಕಾರಣ ರಥದ ನಿರ್ಮಾಣಕ್ಕೆ ಬೇಕಾಗಿ ಇನ್ನೂ ಮರವು ಹೆಚ್ಚಾಗಿದ್ದು, ಬೇಕಾದಷ್ಟು ಮರವನ್ನು ಬಳಸಿ ಹೆಚ್ಚಾದ ಮರವನ್ನು ಬೇರೆ ಕಡೆ ಮಾರಿ ಅದರಿಂದ ಬಂದ ಹಣವನ್ನು ರಥದ ಇತರೆ ಕೆಲಸಕ್ಕೆ ಬಳಸಿದ್ದಾರೆ, ಕಪ್ಪುಜಾಲಿ ಮರದಲ್ಲಿ ರಥದ ಚಕ್ರವನ್ನು ಮಾಡಿದ್ದು, ಇತರೆ ಎಲ್ಲಾ ಭಾಗಕ್ಕೂ ಬೇವು ಮರವನ್ನು ಬಳಸಲಾಗಿದೆ, ಶಿಲ್ಪಗಳ ಕೆತ್ತನೆ, ತೊಲೆ, ಕಂಬ, ರಿಪೀಸುಗಳು, ಅಡ್ಡ ಹಾಗೂ ಉದ್ದ ಪಟ್ಟಿಗಳು, ದೇವರ ಪೀಠ, ಮುಂತಾದ ಎಲ್ಲಾ ಭಾಗದಲ್ಲೂ ಬೇವಿನ ಮರವನ್ನು ಮಾತ್ರ ಬಳಸಿದ್ದಾರೆ, 1993ರಲ್ಲಿ ದೊಡ್ಡ ರಥವನ್ನು ಮಾಡಿದ್ದು ಇಂದಿಗೆ 24ವರ್ಷಗಳಾಗಿದೆ.

ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ರಥೋತ್ಸವ ನಡೆಯುತ್ತದೆ, ರಥೋತ್ಸವಕ್ಕೆ ಸುಮಾರು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸುತ್ತಮುತ್ತಲ ಹಳ್ಳಿಗಳಿಂದಲೂ ರಥೋತ್ಸವದ ಸಮಯಕ್ಕೆ ಭಕ್ತಾದಿಗಳು ಬರುತ್ತಾರೆ.

ಮೂರು ದಿನಗಳು ಜಾತ್ರೆ ನಡೆಯುತ್ತಿದ್ದು ಮೊದಲ ದಿನ ಬೆಳಿಗ್ಗೆ 5.30ರಿಂದ ದೇವರಿಗೆ ಅಭಿಷೇಕ, ರಾತ್ರಿ ಹೋಮ, ನವಗ್ರಹ ಪೂಜೆ ನಡೆಯುತ್ತದೆ, ಅಂದು ರಾತ್ರಿ ಪೂರಾ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು, ಭಜನೆ, ಎರಡನೇ ದಿನ ಗಂಗಾ ಪೂಜೆ, ಆರುತಿ, ರಥದ ಅಲಂಕಾರ, ನಂತರ 9.30ಕ್ಕೆ ಉಚ್ಚಯ(ಚಿಕ್ಕ ರಥೋತ್ಸವ)ನಡೆಯುತ್ತದೆ, ಮಧ್ಯಾನ್ಹ ರಥಕ್ಕೆ ಎಡೆ ಹಾಕುವುದು, ಕೈವಾಡಸ್ಥರಿಂದ ರಥಕ್ಕೆ ಪೂಜೆ, ಆನಂತರ ದೊಡ್ಡ ರಥೋತ್ಸವ ನಡೆಯುತ್ತದೆ, ರಥವು ಪಾದಗಟ್ಟೆಯವರೆವಿಗೂ ಹೋಗಿ ವಾಪಾಸ್ಸು ಬರುತ್ತದೆ, ಎರಡನೇ ದಿನ ಪಲ್ಲಕ್ಕಿ ಉತ್ಸವ, ದೇವರ ಮೆರವಣಿಗೆ, ಓಕುಳಿ, ಪ್ರಸಾದ ವಿನಿಯೋಗ ಹಾಗೂ ಮಹಾಮಂಗಳಾರುತಿ ನಡೆಯುತ್ತದೆ.

ಪ್ರತಿವರ್ಷ ಮಾಡುವ ರಥೋತ್ಸವಕ್ಕೆ ಸುಮಾರು 80ಸಾವಿರ ರೂಗಳಿಗೂ ಹೆಚ್ಚು ಖರ್ಚು ಬರುತ್ತದೆ, ಕರಡಿ ಚಮಾಳ, ಡ್ರಮ್ ಸೆಟ್ಟು ಮುಂತಾದ ವಾದ್ಯಗಳ ಸಮೇತ ನಂದಿಕೋಲು ಕುಣಿತ, ರಥೋತ್ಸವದ ಸಮಯದಲ್ಲಿ ಇರುತ್ತದೆ, ನಂತರ ರಾತ್ರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪೇಸ್ವಾಮಿ ---- ಪೂಜಾರ್

2). ತಿಮ್ಮಣ್ಣ S/O ದೊಡ್ಡಯಂಗಣ್ಣ – ಗ್ರಾಮಸ್ಥರು

2). ದುರುಗಪ್ಪ S/O ಕೊಂಡಯ್ಯ – ಗ್ರಾಮಸ್ಥರು

3). ನಾಗರಾಜ್ S/O ಚನ್ನಪ್ಪ. – ಗ್ರಾಮಸ್ತರು

15). ಕುರುಡಿ ಹಳ್ಳಿ, ಆಂಜನೇಯನ ರಥ:

ಪ್ರಾಚೀನ ಹೆಸರು ಕುರುಡಜ್ಜಿಹಳ್ಳಿ ಎಂಬುದು ಕುರುಡಿಹಳ್ಳಿ ಆಗಿರಬಹುದು, ಭಾಷಾ ಶಾಸ್ತ್ರೀಯವಾಗಿ ಕುರುವಡಿ (ಕುರುವಾಡಿ) ಎಂಬುದು ಕುರುಡಿಹಳ್ಳಿಯಾಗಿರಬಹುದು.

ಆಂಜನೇಯ, ಈಶ್ವರ, ತಿಮ್ಮಪ್ಪ, ಮಾರಮ್ಮ, ದುರುಗಮ್ಮ ದೇವಸ್ಥಾನಗಳಿದ್ದು ಇವೆಲ್ಲಾ ಗ್ರಾಮದೇವರುಗಳಾಗಿವೆ, ಆಂಜನೇಯ ದೇವರಿಗೆ ಪ್ರತಿ ವರ್ಷ ದಸರಾ ಹಬ್ಬದಲ್ಲಿ ಹೊಂಬು ಹೊಡೆಯುವ ಕಾರ್ಯಕ್ರಮ, ಪ್ರತಿ ಕಾರ್ತಿಕ ಮಾಸದಲ್ಲಿ ಕಾರ್ತಿಕೋತ್ಸವ ಹಾಗೂ ರಥೋತ್ಸವ ನಡೆಯುತ್ತದೆ, ಈಶ್ವರ ದೇವರಿಗೂ ದಸರಾ ಹಬ್ಬದಲ್ಲಿ ಹೊಂಬು ಹೊಡೆಯುವ ಕಾರ್ಯಕ್ರಮವನ್ನು ಮಾಡುತ್ತಾರೆ, ಮಾರಮ್ಮ ಹಾಗೂ ದುರುಗಮ್ಮ ಎಂಬ ಹೆಣ್ಣು ದೇವತೆಗಳಿಗೆ ಬಲಿ, ಹರಕೆ, ಆರತಿ, ಕಾರ್ಯಕ್ರಮಗಳು ನಡೆದರೆ, ದುರುಗಮ್ಮ ದೇವರಿಗೆ ಪ್ರತಿ ಐದು ವರ್ಷಗಳಿಗೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ, ಈಶ್ವರ ದೇವರಿಗೆ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಈಶ್ವರ ಮತ್ತು ಆಂಜನೇಯ ದೇವರುಗಳ ಉತ್ಸವ, ಜಾತ್ರೆ ಸಂದರ್ಭದಲ್ಲಿ ವಿಶೇಷ ವೇಷಧಾರಿಗಳಿಂದ ಮನೋರಂಜನೆ ಕಾರ್ಯಕ್ರಮಗಳು ನಡೆಯುತ್ತವೆ, ಕೀಲ ಕುದುರೆ, ನಂದಿಕೋಲು ಕುಣಿತಗಳು ವಿವಿಧ ರೀತಿಯ ವಾದ್ಯಗಳಿಂದ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ನಂತರ ಮಹಾ ಮಂಗಳಾರತಿ ಮಾಡಿ ಜಾತ್ರೆಗೆ ಮಂಗಳ ಹಾಡುತ್ತಾರೆ.

ಆಂಜನೇಯನ ರಥವನ್ನು ನಾಯಕನಹಟ್ಟಿ ಆಚಾರ್‌ರವರು ಮಾಡಿದ್ದಾರೆ, ಮೊದಲು ಉಚ್ಚಯ ಇದ್ದು, ಗ್ರಾಮದ ಮುಖಂಡರೆಲ್ಲಾ ದಾನಿಗಳಿಂದ, ಗ್ರಾಮದಲ್ಲಿ ವಾಸಿಸುವ ಕುಟುಂಬದವರಿಂದ, ಸರ್ಕಾರದ ಕೆಲಸದಲ್ಲಿ ಇರುವವರಿಂದ, ಉದ್ಯಮಿಗಳಿಂದ, ಭಕ್ತಾದಿಗಳಿಂದ ರಥದ ನಿರ್ಮಾಣಕ್ಕೆ ಹಣವನ್ನು ಸಂಗ್ರಹಿಸಿದ್ದಾರೆ, ಇದರ ಜೊತೆಗೆ ಚಿತ್ರದುರ್ಗ ಮತ್ತು ಚಳ್ಳಕೆರೆ ಹೆದ್ದಾರಿಯಲ್ಲಿ ಕುರುಡಿಹಳ್ಳಿ ಗೇಟ್‌ನ ಬಳಿ ಇದೇ ಗ್ರಾಮಕ್ಕೆ ಸೇರಿದ ಆಂಜನೇಯನ ಎರಡನೇ ದೇವಸ್ಥಾನದ ಕಾಣಿಕೆ ಹುಂಡಿಯ ಹಣವನ್ನೂ ಕೂಡ ಸೇರಿಸಿ ರಥವನ್ನು ನಿರ್ಮಾಣ ಮಾಡಿಸಿದ್ದಾರೆ, ಆರು ಜನ ಶಿಲ್ಪಿಗಳು ಸೇರಿ ಒಟ್ಟು ಐದು ತಿಂಗಳುಗಳ ಕಾಲ ರಥದ ನಿರ್ಮಾಣವನ್ನು ಮಾಡಿದ್ದಾರೆ, ಜಾಲಿ, ಕಮರದ ಮರ, ನೇರಳೆ ಮರ, ಹತ್ತಿ ಮರಗಳನ್ನು ರಥಕ್ಕೆ ಬಳಸಿದ್ದಾರೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಆಂಜನೇಯನ ರಥೋತ್ಸವವನ್ನು ಪ್ರತಿ ವರ್ಷ ಡಿಸೆಂಬರ್ ತಿಂಗಳ ಕೊನೆವಾರದಲ್ಲಿ(ಕಾರ್ತಿಕ ಮಾಸದಲ್ಲಿ) ಮಾಡುತ್ತಾರೆ, ರಥೋತ್ಸವಕ್ಕೆ ಸಾವಿರಕ್ಕೂ ಹೆಚ್ಚು ಜನ ಸೇರುತ್ತಾರೆ, ಮೂರು ದಿನಗಳು ರಥೋತ್ಸವ ನಡೆಯುತ್ತಿದ್ದು ಮೊದಲ ದಿನ ದೇವಸ್ಥಾನದಲ್ಲಿ 101ದೀಪೋತ್ಸವ, ದೇವರಿಗೆ ಅಭಿಷೇಕ, ಉಚ್ಚಯ, ಎರಡನೇ ದಿನ ದೊಡ್ಡ ರಥೋತ್ಸವ ನಡೆಯುತ್ತದೆ, ಬಣ್ಣ ಬಣ್ಣದ ಬಟ್ಟೆಗಳಿಂದ ಹಾಗೂ ಬಣ್ಣ ಬಣ್ಣದ ಇತರೆ ವಸ್ತುಗಳಿಂದ, ತರತರದ ಹೂವುಗಳಿಂದ ಹಾಗೂ ಬಾವುಟಗಳನ್ನು ಬಳಸಿ ರಥವನ್ನು ಆಕರ್ಷಕವಾಗಿ ಅಲಂಕಾರ ಮಾಡಿ, ಅಂತಿಮವಾಗಿ ಎಡೆಯನ್ನು ಹಾಕಿ ಪೂಜೆ ಮಾಡಿದ ನಂತರ ರಥವು ಮುಂದೆ ಸಾಗುತ್ತದೆ, ಮೂರನೇ ದಿನ ಗ್ರಾಮದ ಮತ್ತೊಂದು ದೇವರಾದ ಈಶ್ವರನ ಪಲ್ಲಕ್ಕಿ ಉತ್ಸವ, ಓಕುಳಿ ಕಾರ್ಯಗಳು ನಡೆಯುತ್ತವೆ, ಸಂಜೆ ನಾಟಕ ಪ್ರದರ್ಶನ ನಡೆಯುತ್ತದೆ.

ದೇವಸ್ಥಾನದಿಂದ ರಥವು ಹೊರಟು ಗ್ರಾಮದ ಪೂರ್ವ ದಿಕ್ಕಿಗೆ ಇರುವ ಪಾದಗಟ್ಟೆಯವರೆವಿಗೂ ಹೋಗಿ ಅಲ್ಲಿ ವಿಶೇಷ ಪೂಜೆ ಮಾಡಿಸಿಕೊಂಡು ನಂತರ ವಾಪಾಸ್ಸು ಬರುತ್ತದೆ, ರಥೋತ್ಸವ ನಡೆಯುವಾಗ ರಥದ ಮುಂದೆ ವಿವಿಧ ವಾದ್ಯಗಳು, ನಂದಿಕೋಲಿನ ಕುಣಿತ, ಗೊಂಬೆ ಕುಣಿತ ನಡೆಯುತ್ತವೆ.

ರಥದ ನಿರ್ಮಾಣಕ್ಕೆ ಜಾಲಿ ಮರ, ಕಮರದ ಮರ, ನೇರಳೆ ಮರ ಹಾಗೂ ಹತ್ತಿ ಮರಗಳನ್ನು ಬಳಸಿದ್ದು, ಕಪ್ಪು ಜಾಲಿಮರದಿಂದ ರಥದ ಗಾಲಿಗಳನ್ನು, ಕಮರದ ಮರದಿಂದ ಗಾಲಿಯ ಮೇಲೆ ಹಾಕುವ ಅಚ್ಚುಗಳನ್ನು, ನೇರಳೆ ಹಾಗೂ ಹತ್ತಿಮರದಿಂದ ಹಲಗೆಗಳು, ಅಡ್ಡ ಪಟ್ಟಿಗಳು, ರಿಪೀಸುಗಳನ್ನು ಮಾಡಿದ್ದು, ಜಾಲಿಮರದಿಂದ ಶಿಲ್ಪಗಳು, ಕಂಬಗಳನ್ನು ಮಾಡಲಾಗಿದೆ, ಕೆಲವು ಕಡೆ ಮಾತ್ರ ಕುಸುರಿ ಕೆತ್ತನೆ ಇದ್ದು ಅದೂ ಸರಳವಾಗಿದೆ, ಇನ್ನೂ ಸಾಕಷ್ಟು ಕಡೆಗಳಲ್ಲಿ ಖಾಲಿ ಜಾಗವಿದ್ದು ಕೆತ್ತನೆಗೆ ಅವಕಾಶ ಇತ್ತು ಆದರೆ ಸುಲಭ ರೀತಿಯಲ್ಲಿ ರಥದ ಕೆತ್ತನೆ ಕೆಲಸ ಮಾಡಿದ್ದಾರೆ, ಆದರೆ ಜಾಗವಿರುವ ಕಡೆಗಳಲ್ಲೆಲ್ಲಾ ಸಣ್ಣ ಲೋಹದ ಗಂಟೆಗಳನ್ನು ಹಾಕಿದ್ದಾರೆ, ಮೂರು ಅಂತಸ್ತಿನ ಈ ರಥದಲ್ಲಿ ಕಮಾನುಗಳನ್ನು, ತೋರಣದ ಕೆತ್ತನೆಯನ್ನು ಹಲವಾರು ಕಡೆ ಮಾಡಲಾಗಿದೆ, ಒಟ್ಟು 25ಅಡಿ ಎತ್ತರವಾಗಿರುವ ಈ ರಥದಲ್ಲಿ ಮಧ್ಯದ ಅಂತಸ್ತಿನಲ್ಲಿ ಒಂದು ಕಡೆ ಮೂರು ವಿವಿಧ ದೇವರುಗಳ ಶಿಲ್ಪಗಳಂತೆ ನಾಲ್ಕು ದಿಕ್ಕಿಗೂ ಸೇರಿ 12ಶಿಲ್ಪಗಳನ್ನು ಮಾಡಿದ್ದಾರೆ, ಎರಡು ಶಿಲ್ಪಗಳ ಮಧ್ಯಕ್ಕೆ ಒಂದು ರೋಲಿಂಗ್ ಮಾಡಿಸಿದ ಕಂಬವನ್ನು ಅಳವಡಿಸಿದ್ದಾರೆ, ಅವುಗಳಲ್ಲಿ ಶ್ರೀರಾಮ, ತಿರುಪತಿ ತಿಮ್ಮಪ್ಪ, ಗಣೇಶ, ಶಿವ, ವಿಷ್ಣು, ಈಶ್ವರಿ, ಲಕ್ಷ್ಮಿ, ಲಕ್ಷ್ಮಣ, ಮಾರುತಿ, ದೇವಿ, ಅಭಯ ಹಸ್ತದ ಆಂಜನೇಯ, ಗದಾಧಾರಿ ಮಾರುತಿ ಮೂರ್ತಿಗಳನ್ನು ಕೆತ್ತನೆ ಮಾಡಲಾಗಿದೆ, ಗ್ರಾಮದ ಪೂರ್ವ ದಿಕ್ಕಿಗೆ ಇರುವ ಹಾಳೂರು ಕನ್ನೇನಹಳ್ಳಿಯಲ್ಲಿ ಪುರಾತನ ಕುರುಹುಗಳು ದೊರೆತಿದ್ದು ಅವುಗಳಲ್ಲಿ ಕಪ್ಪು ಶಿಲೆಯ ವಿಷ್ಣು ರೂಪದ ಮೂರ್ತಿ ಉತ್ಖನನದಲ್ಲಿ ಸಿಕ್ಕಿದ್ದು ಇದನ್ನು ರಥೋತ್ಸವ ಮುಗಿದು ಖಾಲಿ ರಥವನ್ನು ರಥದ ಮನೆಯಲ್ಲಿ ಬಿಟ್ಟಾಗ ಆ ರಥದಲ್ಲಿ ದೇವರನ್ನು ಕೂರಿಸುವ ಪೀಠದಲ್ಲಿ ಈ ಮೂರ್ತಿಯನ್ನು ಇಡುತ್ತಾರೆ.

ರಥವನ್ನು ಮಾಡಿರುವ ಶಿಲ್ಪಿಗಳಿಗೆ ಒಂದು ಲಕ್ಷದ ಇಪ್ಪತ್ತೈದು ಸಾವಿರ(1,25,000-00) ರೂಗಳ ಸಂಭಾವನೆ, ಜೊತೆಗೆ ಎಲ್ಲಾ ಶಿಲ್ಪಿಗಳಿಗೂ ಹೊಸ ಬಟ್ಟೆಗಳನ್ನು (ತುಂಬು ಉಡುಗೊರೆ) ರಥೋತ್ಸವದ ಸಮಯದಲ್ಲಿ ಕೊಟ್ಟಿದ್ದಾರೆ, ರಥಕ್ಕೆ ಬೇಕಾದ ಮರಗಳನ್ನು ಸ್ಥಳೀಯ ಭಕ್ತರು ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆದ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಪಾಲಯ್ಯ S/O ಪಾಪಯ್ಯ ---- ಗ್ರಾಮಸ್ಥರು

2). ಓಬಯ್ಯ S/O ಪಾಲಯ್ಯ ---- ಗ್ರಾಮಸ್ಥರು

3). ಶಿವಣ್ಣ S/O ನರಸಿಂಹಪ್ಪ ---- ಗ್ರಾಮಸ್ಥರು

4). ವೀರಭದ್ರ ---- ಯುವಕರು

16). ರಾಮಜೋಗಿಹಳ್ಳಿ(ದೊಡ್ಡರಾಮಜೋಗಿಹಳ್ಳಿ), ಆಂಜನೇಯನ ರಥ:

ಆಂಜನೇಯನ ದೇವಸ್ಥಾನವಿದ್ದ ಈ ಪ್ರದೇಶಕ್ಕೆ ಅಲೆಮಾರಿ ಸಮುದಾಯದ ರಾಮಜೋಗಿಗಳು ಬಂದು ನೆಲೆಸಿದ್ದು, ಕೆಲವು ದಿನಗಳ ನಂತರ ದೇವಸ್ಥಾನದ ಸುತ್ತ ಜನವಸತಿಯಾಯಿತು. ಈ ಕಾರಣದಿಂದ ಗ್ರಾಮಕ್ಕೆ ರಾಮಜೋಗಿಹಳ್ಳಿ ಎಂಬ ಹೆಸರು ಬಂದಿರುವುದಾಗಿದೆ, ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ಇದೇ ಹೆಸರಿನ ಊರುಗಳಿದ್ದು, ಈ ಊರಿನಲ್ಲಿ ಹೆಚ್ಚಿನ ಮನೆಗಳು ಜನಸಂಖ್ಯೆ ಇರುವ ಕಾರಣದಿಂದ ದೊಡ್ಡ ರಾಮಜೋಗಿಹಳ್ಳಿ ಎಂದು ಕರೆಯುತ್ತಿದ್ದಾರೆ. ಇದಕ್ಕೆ ಮತ್ತೊಂದು ಕಾರಣವನ್ನೂ ಕೆಲವರು ಕೊಡುತ್ತಾರೆ, ಚಿತ್ರದುರ್ಗದ ಪಾಳೇಗಾರರ ದೊರೆ ಚಿಕ್ಕಣ್ಣ ನಾಯಕರ ಕಾಲಾಂತರದಲ್ಲಿ ಮುಖ್ಯ ಅಧಿಕಾರಸ್ಥರಲ್ಲಿ ರಾಮಜೋಗಿ ಎಂಬ ಹೆಸರಿನ ವ್ಯಕ್ತಿಯೊಬ್ಬನಿಂದ ಈ ಊರಿಗೆ ಹೆಸರು ಬಂದಿರುವುದಾಗಿದೆಯಂತೆ.

ನರಹರಿ ಸದ್ಗುರು ಸ್ವಾಮಿಯ ಮಠವಿದ್ದು ಈ ಮಠಕ್ಕೆ ಬೇರೆ ಬೇರೆ ಊರುಗಳಿಂದಲೂ ಭಕ್ತಾದಿಗಳು ಬಂದು ಧ್ಯಾನ ಪೂಜೆ, ಭಜನೆಗಳಲ್ಲಿ ಪಾಲ್ಗೊಳ್ಳುತ್ತಾರೆ, ಪೋಲೇರಮ್ಮ, ದುರುಗಮ್ಮ, ಯಲ್ಲಮ್ಮ, ಆಂಜನೇಯ, ನಾಗಪ್ಪ, ಮಾರಮ್ಮ, ಬೈಲಾಂಜನೇಯ, ಹೊನ್ನೂರುಸ್ವಾಮಿ ದೇವಾಲಯಗಳಿವೆ, ಪ್ರತಿ ವರ್ಷ ದಸರಾ ಸಮಯದಲ್ಲಿ ಆಂಜನೇಯ ದೇವರ ಅಂಬಿನ ಕಾರ್ಯ ಇರುತ್ತದೆ, ಯುಗಾದಿ ಹಬ್ಬ ಮುಗಿದು ಒಂದು ವಾರದಲ್ಲಿ ಬರುವ ರಾಮನವಮಿ ಸಮಯದಲ್ಲಿ ಆಂಜನೇಯ ಸ್ವಾಮಿಗೆ ಜಾತ್ರೆ ನಡೆಯುತ್ತದೆ, ಇದು ಗ್ರಾಮದ ದೊಡ್ಡ ಜಾತ್ರೆ, ಸುತ್ತಮುತ್ತಲಿನ ಗ್ರಾಮಗಳಿಂದ ಮತ್ತು ದೂರದ ಊರುಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರುತ್ತಾರೆ, ಈ ಜಾತ್ರೆಯಲ್ಲಿ ತೇರು, ಪಲ್ಲಕ್ಕಿ, ಓಕುಳಿ, ಕಾರ್ಯಗಳು ನಡೆಯುತ್ತವೆ, ದುರುಗಮ್ಮ ದೇವರಿಗೆ ಪ್ರತಿ ಐದು ವರ್ಷಗಳಿಗೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ, ಹೊನ್ನೂರು ಸ್ವಾಮಿಗೆ ಪ್ರತಿ ವರ್ಷ ಪೀರಲ ಹಬ್ಬ ಮಾಡುತ್ತಾರೆ, ಈ ಸಮಯದಲ್ಲಿ ಕೊಂಡ ಹಾಯುವ ಪದ್ಧತಿ ನಡೆಯುತ್ತದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರಾಚೀನ ಆಂಜನೇಯ ದೇವಸ್ಥಾನವು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಮುಜರಾಯಿಗೆ ಸೇರಿದೆ, ಈ ದೇವರಿಗೆ ಪಲ್ಲಕ್ಕಿ, ಉಚ್ಚಯ ಹಾಗೂ ದೊಡ್ಡರಥ ಇದೆ, ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವ, ಹೊಂಬು ಹೊಡೆಯುವ ಕಾರ್ಯ ನಡೆಯುತ್ತದೆ, ಶಿವಮೊಗ್ಗ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಎಂಬ ಗ್ರಾಮದ ಸಂಪ್ರದಾಯ ಶಿಲ್ಪಿಗಳಾದ ಕೃಷ್ಣಮೂರ್ತಿ ಮತ್ತು 6ಜನ ಸಹಾಯಕ ಶಿಲ್ಪಿಗಳು ಸೇರಿ ರಥವನ್ನು ಮಾಡಿದ್ದಾರೆ, ಕೆಳಗಿನ ಗಾಲಿಗಳಿಂದ ಮೇಲಿನ ಕಳಸದ ವರೆಗೂ ಒಟ್ಟು 31ಅಡಿ ಎತ್ತರ ಇದೆ, ನಾಲ್ಕು ಕಪ್ಪು ಜಾಲಿ ಮರದ ಗಾಲಿಗಳನ್ನು ಹೊಂದಿದ್ದು ಈ ಗಾಲಿಗಳ ರಕ್ಷಣೆಗೆ ಕಬ್ಬಿಣದ ಪಟ್ಟಿಗಳನ್ನು, ಗಾಲಿಯ ಅಂಚಿಗೆ ಅಳಿಗಳನ್ನು ಹಾಕಿದ್ದಾರೆ, ಮೊದಲು ಉಚ್ಚಯ ಇತ್ತು, ಈ ಊರಿನ ಕೆಲವರು ಬೇರೆ ಊರುಗಳಲ್ಲಿ ಮಾಡಿಸಿರುವ ಹೊಸ ತೇರುಗಳನ್ನು ನೋಡಿ ತಾವೂ ತಮ್ಮ ಊರಿನ ಆಂಜನೇಯ ದೇವರ ರಥವನ್ನು ಮಾಡಿಸಲು ತೀರ್ಮಾನಿಸಿ, ಈ ದೇವರಿಗೆ ಸಂಬಂಧಿಸಿದ ಭಕ್ತಾದಿಗಳನ್ನೆಲ್ಲಾ ಸೇರಿಸಿ ಎಲ್ಲಾ ಭಕ್ತಾದಿಗಳಿಂದ ಒಪ್ಪಿಗೆಯನ್ನು ಪಡೆದು, ಗ್ರಾಮದ ಮನೆಗಳಿಗೆ ಇಂತಿಷ್ಟು ಹಣವನ್ನು, ಸರ್ಕಾರಿ ನೌಕರಿಯಲ್ಲಿರುವವರಿಂದ, ಮತ್ತು ಇತರೆ ದಾನಿಗಳಿಂದ ಹಣವನ್ನು ಸಂಗ್ರಹ ಮಾಡಿ ರಥವನ್ನು ಮಾಡಿಸಲು ಶಿಲ್ಪಿಯನ್ನು ಕರೆಸಿ ಅಡ್ವಾನ್ಸ್ ಕೊಟ್ಟು ಇಷ್ಟು ದಿನಗಳಿಗೆ ಕೆಲಸ ಮುಗಿಸಿಕೊಡಬೇಕು ಎಂದು ಕರಾರು ಮಾಡಿಕೊಂಡರು, 80,000–00(ಎಂಬತ್ತು ಸಾವಿರ)ರೂಗಳ ಅಡ್ವಾನ್ಸ್ ಪಡೆದ ಶಿಲ್ಪಿಗಳು 15ದಿನ ಕೆಲಸ ಮಾಡಿ ಮತ್ತೆ ಇತ್ತ ಬರಲೇ ಇಲ್ಲ, ಈ ಕಾರಣದಿಂದ ಇದೇ ಊರಿನವರೇ ಆದ ನಿವೃತ್ತಿ ಹೊಂದಿದ ಶಿಕ್ಷಕ ತಿಪ್ಪೇಸ್ವಾಮಿಯವರು ರಥ ಮಾಡಿಸುವ ಜವಾಬ್ದಾರಿಯನ್ನು ತೆಗೆದುಕೊಂಡು, ಹಳೆಯ ಶಿಲ್ಪಿಗಳನ್ನು ಬಿಟ್ಟು ಗೊಪ್ಪೇನಹಳ್ಳಿ ಶಿಲ್ಪಿಗಳಿಂದ ರಥ ಮಾಡಿಸಿದ್ದಾರೆ, ಗೊಪ್ಪೇನಹಳ್ಳಿ ಶಿಲ್ಪಿಗಳು ಒಟ್ಟು 9ತಿಂಗಳುಗಳ ಕಾಲ ರಥವನ್ನು ನಿರ್ಮಾಣ ಮಾಡಿದ್ದಾರೆ, 6ಜನ ಶಿಲ್ಪಿಗಳು ರಾಮಜೋಗಿಹಳ್ಳಿ ಗ್ರಾಮದಲ್ಲಿ ಉಳಿದುಕೊಂಡು ರಥದ ಕೆತ್ತನೆ ಕೆಲಸ, ನಿರ್ಮಾಣವನ್ನು ಮಾಡಿದ್ದಾರೆ, ಕಂಬಗಳ ರೋಲಿಂಗ್, ಹಲಗೆ, ಪಟ್ಟಿಗಳು, ರಿಪೀಸುಗಳಿಗೆ ಪ್ಲೇನಿಂಗ್ ಮಾಡಿಸುವ ಕೆಲಸವನ್ನು ಚಿತ್ರದುರ್ಗದ ಪ್ಲೇನಿಂಗ್ ಮೆಶೀನ್‌ನಲ್ಲಿ ಮಾಡಿಸಿದ್ದಾರೆ, ರಥವನ್ನು ಮಾಡಿದ ಶಿಲ್ಪಿಗಳಿಗೆ ಎರಡು ಲಕ್ಷ,(2,00000–00) ಸಂಭಾವನೆಯನ್ನು ಕೊಟ್ಟಿದ್ದಾರೆ, ಜೊತೆಗೆ ಬಂಗಾರದ ಒಂದು ಉಂಗುರ ಹಾಗೂ ಎಲ್ಲಾ ಶಿಲ್ಪಿಗಳಿಗೂ ಹೊಸ ಬಟ್ಟೆಗಳನ್ನು ಉಡುಗೊರೆಯಾಗಿ ಕೊಟ್ಟಿದ್ದಾರೆ ಜೊತೆಗೆ ರಥದ ನಿರ್ಮಾಣದ ವರೆಗೂ ಅಷ್ಟೂ ಜನ ಶಿಲ್ಪಿಗಳಿಗೆ ಊಟದ ವ್ಯವಸ್ಥೆಯನ್ನು ದೇವಸ್ಥಾನ ಸಮಿತಿಯಿಂದ ಮಾಡಿದ್ದಾರೆ.

ನಾಲ್ಕು ಮರದ ಗಾಲಿಗಳು, ದಪ್ಪನೆಯ ಅಚ್ಚಿನಲ್ಲಿ ಆಂಜನೇಯನು ಸಂಜೀವಿನಿ ಬೆಟ್ಟವನ್ನು ಹೊತ್ತಿರುವ ಕೆತ್ತನೆ ಇದೆ, ಅಚ್ಚಿನ ಮೇಲೆ ತೊಲೆಗಳನ್ನು ಹಾಕಿದ್ದು, ಈ ತೊಲೆಗಳ ಮೇಲೆ ಅಡ್ಡ ಮತ್ತು ಉದ್ದನಾಗಿ ಅರ್ಧ ಅಡಿ ದಪ್ಪನೆಯ ಮರದ ದಿಮ್ಮಿಗಳಿವೆ, ಇವುಗಳಲ್ಲಿ ಬಳ್ಳಿ ಹಾಗೂ ಹೂವು ಮುಂತಾದ ಕುಸುರಿ ಕೆತ್ತನೆ ಇದೆ, ಇದರ ಮೇಲೆ ರೋಲಿಂಗ್ ಮಾಡಿಸಿದ ಕಂಬಗಳು, ಈ ಕಂಬಗಳ ನಡುವೆ ವಿವಿಧ ಶಿಲ್ಪಗಳಿವೆ, ಇದರ ಮೇಲೆ ಎಂಟು ಕಂಬಗಳನ್ನೊಳಗೊಂಡು ದೇವರನ್ನು ಕೂರಿಸುವ ಪೀಠವು ತಿರುಗುಣಿಯನ್ನು(ಬೇರಿಂಗ್) ಹೊಂದಿದೆ.

ಗ್ರಾಮದ ಭಕ್ತಾದಿಗಳು ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆದ ಮರಗಳನ್ನು ರಥ ನಿರ್ಮಾಣಕ್ಕೆ ಕೊಟ್ಟಿದ್ದಾರೆ, ರಥಕ್ಕೆ ಬೇವು, ಬೇಲದ ಮರ ಹಾಗೂ ಜಾಲಿ ಮರಗಳನ್ನು ಬಳಸಿದ್ದಾರೆ, ಕಪ್ಪುಜಾಲಿ ಮರದಲ್ಲಿ ಗಾಲಿಗಳು, ಬೇವಿನ ಮರದಿಂದ ಶಿಲ್ಪಗಳನ್ನು, ಬೇಲದ ಮರದಿಂದ ಹಲಗೆಗಳು, ದೇವರ ಪೀಠ, ಕಂಬಗಳು, ತೊಲೆ, ಅಚ್ಚು, ಪಟ್ಟಿಗಳನ್ನು ಮಾಡಲಾಗಿದೆ, 1995ರಲ್ಲಿ ರಥದ ನಿರ್ಮಾಣವನ್ನು ಪ್ರಾರಂಭ ಮಾಡಿದ್ದು ಮೊದಲು ಗುತ್ತಿಗೆಯನ್ನು ಪಡೆದ ಶಿಲ್ಪಿಯು ಮಧ್ಯದಲ್ಲಿ ಬಿಟ್ಟು ಹೋಗಿದ್ದರಿಂದ ಒಂದು ವರ್ಷಗಳ ಕಾಲ ರಥ ನಿರ್ಮಾಣ ಕಾರ್ಯ ನಿಂತಿತು, ನಂತರ 17-04-1997ರಲ್ಲಿ ಮತ್ತೆ ಪ್ರಾರಂಭವಾಯಿತು, ಒಟ್ಟು ಎರಡು ವರ್ಷಗಳ ಕಾಲಮಿತಿಯಾಗಿದ್ದು 9ತಿಂಗಳು ಕೆಲಸದ ದಿನಗಳು.

ರಥದ ನಿರ್ಮಾಣಕ್ಕೆ ಒಟ್ಟು ಏಳು ಲಕ್ಷಗಳ ಖರ್ಚು ಆಗಿದ್ದು ಇದರಲ್ಲಿ ಮರಗಳನ್ನು ಹೊರತು ಪಡಿಸಿದೆ, ಶಿಲ್ಪಿಗಳು ಒಂದು ದಿನಕ್ಕೆ ಒಂದು ಮೂರ್ತಿಯನ್ನು ಕೆತ್ತನೆ ಮಾಡುತ್ತಿದ್ದರು, ಚಿಕ್ಕ ಚಿಕ್ಕ ಉಳಿಗಳಿಂದ ಅತೀ ಸೂಕ್ಷ್ಮವಾದ ಕೆತ್ತನೆಯನ್ನು ಬಹಳ ಸುಂದರವಾದ ಶಿಲ್ಪಗಳನ್ನು ಮಾಡಿದ್ದಾರೆ, ರಥ ಎಳೆಯುವ ಹಗ್ಗವನ್ನು ಗೊಲ್ಲರ ಕೃಷ್ಣಪ್ಪ ಇವರು ಐದು ವರ್ಷಕ್ಕೊಮ್ಮೆ ತೆಂಗಿನ ನಾರಿನಿಂದ ತಯಾರಿಸಿಕೊಡುತ್ತಾರೆ,

ದೊಡ್ಡ ರಥದಲ್ಲಿ ನಾಲ್ಕು ಗಾಲಿಗಳು, 42ಶಿಲ್ಪಗಳನ್ನು ಮಾಡಿದ್ದು, ಇಂತಹ ಮೂರ್ತಿಗಳೇ ಬೇಕು ಎಂದು ದೇವಸ್ಥಾನ ಕಮಿಟಿಯವರಾಗಲಿ, ಗ್ರಾಮಸ್ಥರಾಗಲಿ ಹೇಳಿಲ್ಲ, ಯಾವ ಮೂರ್ತಿಗಳನ್ನು ಮಾಡಬೇಕು ಎಂಬುದು ಕೆತ್ತನೆ ಮಾಡುವ ಶಿಲ್ಪಿಗಳಿಗೆ ಬಿಟ್ಟಿದ್ದು, ಶಿಲ್ಪಿಗಳು ಸ್ಥಳೀಯ ದೇವರುಗಳನ್ನು ಆಧರಿಸಿ ಮೂರ್ತಿಗಳನ್ನು ರಥದಲ್ಲಿ ಕೆತ್ತನೆ ಮಾಡಿದ್ದಾರೆ, ಅಚ್ಚಿನ ಮೇಲೆ ಅಳವಡಿಸಿರುವ ನಾಲ್ಕು ತೊಲೆಗಳ ಎರಡೂ ಕಡೆಯ ತುದಿಗಳಲ್ಲಿ ಆನೆಯ ಕೆತ್ತನೆ, ಮೇಲಿನ ಪಟ್ಟಿಗಳಲ್ಲಿ ಹೂಬಳ್ಳಿಗಳ ಕೆತ್ತನೆ, ಇದರ ಮೇಲಿನ ಸಾಲಿನಲ್ಲಿ ಎರಡು ಕಂಬಗಳ ಮಧ್ಯೆ ಒಂದರಂತೆ ನಾಲ್ಕು ಕಡೆ ವಿವಿಧ ಮೂರ್ತಿಗಳಿವೆ, ಅವುಗಳಲ್ಲಿ ವಿಷ್ಣು, ಗಣೇಶ, ಲಕ್ಷ್ಮಿ, ಸರಸ್ವತಿ, ಆಂಜನೇಯನ ಮೂರ್ತಿಗಳು, ಗರುಡದೇವ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಶಿವ ಪಾರ್ವತಿ, ಶ್ರೀರಾಮನ ಪರಿವಾರ, ದೇವಿಯ ಮೂರ್ತಿಗಳು ಸುಂದರವಾಗಿ ಮೂಡಿ ಬಂದಿವೆ, ಶಿಲ್ಪಗಳ ಮೇಲೆ ಮತ್ತು ಕೆಳಗಿನ ಪಟ್ಟಿಗಳಲ್ಲಿ ಕುಸುರಿ ಕೆತ್ತನೆ, ಜೊತೆಗೆ ಗಂಡುಬೇರುಂಡನ ಕೆತ್ತನೆಯೂ ಇದೆ, ಪೀಠದ ಕೆಳಗೆ ನಾಲ್ಕೂ ಕಡೆಗಳಲ್ಲಿ ರಾಶಿಗಳು, ನವಗ್ರಹಗಳನ್ನು ಅವುಗಳ ವಾಹನಗಳ ಜೊತೆಗೆ ಕೆತ್ತನೆ ಮಾಡಿದ್ದು, ಇವುಗಳೊಟ್ಟಿಗೆ ವಿವಿಧ ದೇವರುಗಳನ್ನು ವಾಹನಗಳೊಂದಿಗೆ ಕೆತ್ತನೆ ಮಾಡಿದ್ದಾರೆ, ಮೂಲೆಗಳಲ್ಲಿ ಎರಡು ಕಾಲುಗಳಲ್ಲಿ ನಿಂತಿರುವ ಸಿಂಹಗಳ ಕೆತ್ತನೆ ಇದೆ.

ರಥೋತ್ಸವದ ಸಮಯದಲ್ಲಿ ಕಬ್ಬಿಣದ ಡೂಮು, ಕಳಸ ಇಡುತ್ತಾರೆ, ಹೊಸ ರಥವನ್ನು ಮಳೆಗಾಳಿಯಿಂದ ರಕ್ಷಣೆಗಾಗಿ 30,000-00ರೂಗಳಲ್ಲಿ ರಥದ ಮನೆಯನ್ನು ನಿರ್ಮಾಣ ಮಾಡಿದ್ದಾರೆ, ಸಣ್ಣ ಪಾಪಣ್ಣ ಇವರು ರಥಕ್ಕೆ ಕಬ್ಬಿಣದ ಸಲಾಕೆಗಳಿಂದ ಡೂಮನ್ನು ಮಾಡಿಸಿ ದಾನವಾಗಿ ಕೊಟ್ಟಿದ್ದಾರೆ, ರಥದ ಕಂಬಗಳನ್ನು ಚಂದ್ರಪ್ಪ ಎನ್ನುವರು 12,000-00ರೂಗಳಿಗೆ ಮಾಡಿಸಿಕೊಟ್ಟಿದ್ದಾರೆ, ಚಿಕ್ಕದಾದ ರಥವನ್ನು 85,000-00ರೂಗಳಿಗೆ ಊರಿನ ಗ್ರಾಮಸ್ಥರು ಮಾಡಿಸಿದ್ದಾರೆ.

ಪ್ರತಿವರ್ಷ ರಾಮನವಮಿಯಲ್ಲಿ ರಥೋತ್ಸವ ನಡೆಯುತ್ತದೆ, ರಥೋತ್ಸವಕ್ಕೆ ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸುತ್ತಮುತ್ತಲ ಹಳ್ಳಿಗಳಿಂದಲೂ ರಥೋತ್ಸಕ್ಕೆ ಭಕ್ತಾದಿಗಳು ಬರುತ್ತಾರೆ, ಕೆಲವರು ಕಾಲುನಡಿಗೆಯಲ್ಲಿ, ಎತ್ತಿನ ಗಾಡಿಗಳಲ್ಲಿ, ಕೆಲವರು ದ್ವಿಚಕ್ರ ವಾಹನಗಳು, ಇತರೆ ವಾಹನಗಳಲ್ಲಿ ಬರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ, ಮೊದಲ ದಿನ ಬೆಳಿಗ್ಗೆ ದೇವರಿಗೆ ಅಭಿಷೇಕ, ನಂತರ ಚಿಕ್ಕ ರಥದಲ್ಲಿ ದೇವರನ್ನು ಕೂರಿಸಿ ಕೊಂಡು ಪಾದಗಟ್ಟೆಯವರೆವಿಗೆ ಹೋಗಿ ಬರುತ್ತದೆ, ಆನಂತರ ಪಲ್ಲಕ್ಕಿಯಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ನಂತರ ದೇವಸ್ಥಾನದಲ್ಲಿ ಕೂರಿಸುತ್ತಾರೆ, ಮಧ್ಯಾನ್ಹ ಪಲ್ಲಕ್ಕಿಯಲ್ಲಿ ದೇವರನ್ನು ತಂದು ಅಲಂಕಾರ ಮಾಡಿರುವ ದೊಡ್ಡರಥದಲ್ಲಿ ದೇವರನ್ನು ಕೂರಿಸುತ್ತಾರೆ, ಭೀಮರೆಡ್ಡಿ ಮನೆತನದವರಿಂದ ದೊಡ್ಡ ರಥಕ್ಕೆ ಎಡೆ ಸಮರ್ಪಣಾ ಕಾರ್ಯ ನಡೆಯುತ್ತದೆ, ಚಿಕ್ಕ ರಥಕ್ಕೆ ಗೊರವತ್ತಿ ಮನೆತನದವರು ಎಡೆ ಕೊಡುತ್ತಾರೆ, (ಹೊಸ ಪಾತ್ರೆಯಲ್ಲಿ ಮಾಡಿದ ಅನ್ನ, ಮೊಸರು ಹಾಗೂ ಬಾಳೆಹಣ್ಣು ಮಿಶ್ರಣದ ಎಡೆ) ಈ ಎಡೆಯನ್ನು ರಥದ ಸುತ್ತಲೂ ಹಾಕಿ ಪೂಜೆ ಸಲ್ಲಿಸುತ್ತಾರೆ ಆನಂತರ ಈ ಎಡೆಯನ್ನು ಕಮ್ಮಾರರು(ಅಚಾರ್), ಅಗಸರು(ಮಡಿವಾಳರು), ಮಾದಿಗ ಸಮುದಾಯ, ಬಡಗಿ ಮನೆತನದವರು ಸ್ವೀಕರಿಸುತ್ತಾರೆ, ಎಡೆ ಪೂಜೆ ಮುಗಿದ ತರುವಾಯ ರಥವು ರಾಜ ಬೀದಿಯಲ್ಲಿ ಹೋಗಿ ಊರಿನ ಮುಂಭಾಗದಲ್ಲಿ ಇರುವ ಪಾದಗಟ್ಟೆಯವರೆಗೆ ಹೋಗಿ ವಾಪಾಸ್ಸು ಬರುತ್ತದೆ, **ರಥವು ಪಾದಗಟ್ಟೆಯ ಬಳಿ ಹೋದಾಗ ಅಲ್ಲಿ ಒಂದು ವಿಶೇಷತೆ ನಡೆಯುತ್ತದೆ,** ಮಣೇವು ಹಾಕುತ್ತಾರೆ, ಭೂತಗಳ ಮುಖವಾಡಗಳನ್ನು ಕೈಯಲ್ಲಿ ಹಿಡಿದು ಇಬ್ಬರು ಕುಣಿಯುತ್ತಿರುತ್ತಾರೆ, ಇವರ ಜೊತೆ ಪೂಜಾರಿ ವಿರುದ್ದ ದಿಕ್ಕಿನಲ್ಲಿ ಕುಣಿಯುತ್ತಾರೆ, ಕುಣಿಯುತ್ತ ಪೂಜಾರಿಗೆ ಆವೇಶ ಬರುತ್ತದೆ ಹೀಗೆ ಬಂದ ಆವೇಶಕ್ಕೆ ಪೂಜಾರಿಗೆ ಮೈಮೇಲೆ ದೇವರು ಬಂದಿದೆ ಎನ್ನುತ್ತಾರೆ, ಕುಣಿಯುತ್ತಿರುವ ಪೂಜಾರಿಯು ಪಕ್ಕದಲ್ಲಿ ಒಣಗಿದ ಮುಳ್ಳುಕಳ್ಳೆಯ ರಾಶಿ(ಕರೆಜಾಲಿ, ಕಪ್ಪು ಜಾಲಿ)ಯ ಮೇಲೆ ಹೋಗಿ ಬೀಳುತ್ತಾನೆ, ನಂತರ ಅಲ್ಲಿನ ಜನರು ಪೂಜಾರಿಯನ್ನು ಮುಳ್ಳು ಕಳ್ಳೆಯ ರಾಶಿಯಿಂದ ಎತ್ತಿ ತರುತ್ತಾರೆ, ಬರೀ ಮೈಯಲ್ಲಿ ಒಣಗಿದ ಬರೀ ಮುಳ್ಳುಗಳೇ ಇರುವ ರಾಶಿಯ ಮೇಲೆ ಬಿದ್ದರೂ ಒಂದು ಮುಳ್ಳೂ ಸಹ ಚುಚ್ಚಿರುವುದಿಲ್ಲ, ಯಾವುದೇ ಗಾಯವಾಗಲಿ, ಅನಾಹುತವೂ ಆಗುವುದಿಲ್ಲ, ಇದು ದೇವರ ಕೃಪೆ, ಪವಾಡ ಎನ್ನುತ್ತಾರೆ.

ಪ್ರತಿವರ್ಷ ಮಾಡುವ ರಥೋತ್ಸವಕ್ಕೆ ಸುಮಾರು 60ಸಾವಿರ ರೂಗಳಿಗೂ ಹೆಚ್ಚು ಖರ್ಚು ಬರುತ್ತದೆ, ಹೊಸ ರಥವನ್ನು ಮಾಡಿದ ಮೇಲೆ ಪ್ರಥಮ ರಥೋತ್ಸವದ ಜಾತ್ರೆಯನ್ನು ಇದೇ ಊರಿನ ನಿವೃತ್ತ ವೈದ್ಯರಾದ ಎಂ. ಆರ್. ಹನುಮಂತಪ್ಪ ಇವರು ತಮ್ಮ ಉಸ್ತುವಾರಿಯಲ್ಲಿ ನಡೆಸಿದ್ದು ಜಾತ್ರೆಯ ಎಲ್ಲಾ ಖರ್ಚನ್ನು ಇವರೇ ಭರಿಸಿದ್ದಾರೆ, ರಥೋತ್ಸವದ ಸಮಯದಲ್ಲಿ ರಥದ ಮುಂದುಗಡೆ ಕರಡಿ ಚಮಾಳ, ಆಧುನಿಕ ಡ್ರಮ್ ಸೆಟ್ಟು ಮುಂತಾದ ವಾದ್ಯಗಳ ಸಮೇತ ನಂದಿಕೋಲು, ಕೀಲುಕುದುರೆ ಕುಣಿತ ಇರುತ್ತದೆ, ತಿರುಪುರ, ಸೊಂಡೇಕೆರೆ, ಚಿತ್ರದುರ್ಗದಿಂದ ವಿವಿಧ ವಾದ್ಯಗಳ ಹಾಗೂ ಕಲಾ ತಂಡಗಳು ಬರುತ್ತವೆ, ನಂತರ ರಾತ್ರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಭರತನಾಟ್ಯ, ಜಾನಪದ ಗೀತೆಗಳು, ಹಾಗೂ ಸ್ಥಳೀಯ ಯುವಕರಿಂದ ನಾಟಕ ಪ್ರದರ್ಶನ ನಡೆಯುತ್ತದೆ, ಜಾತ್ರೆಯ ಸಮಯದಲ್ಲಿ ಯುವಕರ ತಂಡ ಜಾತ್ರೆಗೆ ಬಂದ ಭಕ್ತಾದಿಗಳಿಗೆ ಪಾನಕ ಹಾಗೂ ಕೋಸುಂಬರಿಯ ಪ್ರಸಾದವನ್ನು ಕೊಡುತ್ತಾರೆ, 01–04–2017ರಿಂದ 06–04–2017ರವರೆವಿಗೆ ಸುವರ್ಣ ಮಹೋತ್ಸವ(ರಾಮೋತ್ಸವ)ಆಚರಣೆ.

ಪ್ರಾಚೀನವಾದ ಆಂಜನೇಯನ ದೇವಸ್ಥಾನವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿದ್ದಾರೆ, 2009ರಲ್ಲಿ ದೇವಸ್ಥಾನದ ಶಿಖರವನ್ನು ಹೊಸದಾಗಿ ಮಾಡಿಸಿದ್ದಾರೆ, ಚಿತ್ರದುರ್ಗದ ಸಂಪ್ರದಾಯ ಶಿಲ್ಪಿ ನಟರಾಜ್ ಎನ್ನುವವರು ಸಿಮೆಂಟ್ ಮಾಧ್ಯಮದಿಂದ ಶಿಲ್ಪಗಳನ್ನು ಮಾಡಿದ್ದಾರೆ, ಮುಂಭಾಗದಲ್ಲಿ

ಶ್ರೀರಾಮ, ಸೀತಾದೇವಿ, ಲಕ್ಷ್ಮಣ ಹಾಗೂ ಆಂಜನೇಯನ ಮೂರ್ತಿಗಳು, ಪಕ್ಕದಲ್ಲಿ ಲಕ್ಷ್ಮಿ, ಸರಸ್ವತಿ, ನರಸಿಂಹ, ಶಿವನ ಮೂರ್ತಿಗಳಿವೆ ಮೂಲೆಗಳಲ್ಲಿ ಗರುಡನ ಮೂರ್ತಿಗಳನ್ನು ಮಾಡಿದ್ದಾರೆ, ಗರ್ಭಗುಡಿಯಲ್ಲಿ ಐದೂವರೆ ಅಡಿ ಎತ್ತರವಾದ ಪ್ರಾಚೀನ ಆಂಜನೇಯನ ಮೂರ್ತಿ ಇದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪೇಸ್ವಾಮಿ S/O ತಿಮ್ಮಪ್ಪ ----- ಗ್ರಾಮಸ್ಥರು

2). ಪಿ.ಟಿ.ಪೋಲನ್ ರೆಡ್ಡಿ S/O ತಿಮ್ಮಪ್ಪ ----- ಗ್ರಾಮಸ್ಥರು

2). ಬಿ.ಐ.ರಾಮರೆಡ್ಡಿ S/O ಅಯ್ಯಪ್ಪ ------- ಗ್ರಾಮಸ್ಥರು

3). ಪ್ರಶಾಂತ್ S/O ಶ್ರೀನಾಥ ರೆಡ್ಡಿ ------ ಗ್ರಾಮಸ್ಥರು

4). ಎಂ. ದೇವರಾಜ S/O ಎಂ. ಗಂಗಣ್ಣ ------ ಗ್ರಾಮದ ಯುವಕರು.

17). ಪಿ. ಗೌರೀಪುರ, ಆಂಜನೇಯನ ರಥ:

ಗ್ರಾಮದಲ್ಲಿ ಹಿಂದೆ ಗೌರಮ್ಮನ ಹಬ್ಬವನ್ನು ಬಹಳ ಅದ್ದೂರಿಯಾಗಿ ಮತ್ತು ವಿಶೇಷವಾಗಿ ಮಾಡುತ್ತಿದ್ದರಂತೆ, ಇದಕ್ಕೆ ಮೊದಲು ಗ್ರಾಮಕ್ಕೆ ಪುಲುಸು ಮಾಮಿಡಿ ಎಂದು ಹೆಸರಿದ್ದು ಜಿಲ್ಲಾಧಿಕಾರಿಗಳೊಬ್ಬರು ಇದಕ್ಕೆ ಗೌರಮ್ಮನ ಪುರ ಎಂದು ಹೆಸರನ್ನು ಬದಲಾಯಿಸಿದಂತೆ, ಗೌರಮ್ಮನ ಪುರ ಎಂಬುದು ಕಾಲಾನಂತರ ಗೌರೀಪುರ ಆಗಿದೆ.

ಗ್ರಾಮದಲ್ಲಿ ಆಂಜನೇಯ, ರಂಗಪ್ಪ, ಜುಂಜಪ್ಪ, ಸಿದ್ದಪ್ಪ, ಗಣೇಶ, ಮಾರಮ್ಮ, ದುರ್ಗಮ್ಮ ಕೊಲ್ಲಾಪುರದಮ್ಮ ದೇವಸ್ಥಾನಗಳಿವೆ, ಮಾರಮ್ಮ, ದುರ್ಗಮ್ಮ ದೇವಿಗೆ ಹರಕೆ ಬಲಿ ಪದ್ದತಿಗಳು ನಡೆಯುತ್ತವೆ, ಈ ಊರಿನಲ್ಲಿ ನಡೆಯುವ ಗೌರಮ್ಮನ ಹಬ್ಬ ಸುತ್ತಲ ಹತ್ತು ಹಳ್ಳಿಗಳಿಗೂ ಹೆಸರುವಾಸಿ, ಪ್ರತಿ ಮನೆಯ ಚಿಕ್ಕ ಚಿಕ್ಕ ಹೆಣ್ಣು ಮಕ್ಕಳು ಸೀರೆಯುಟ್ಟುಕೊಂಡು ಕೋಲಾಟ ಆಡುತ್ತಾ ಗ್ರಾಮಸ್ಥರನ್ನು ಮನರಂಜಿಸಿ ಅವರಿಂದ ಹಣವನ್ನು ಸಂಗ್ರಹಿಸಿ ಅದರಿಂದ ಹಬ್ಬವನ್ನು ಮಾಡುತ್ತಾರೆ, ಹನುಮಂತರಾಯ(ಆಂಜನೇಯ) ದೇವರಿಗೆ ಪಲ್ಲಕ್ಕಿ, ಉತ್ಸವ, ರಥೋತ್ಸವ ಮಾಡುತ್ತಾರೆ, ಈ ಸಮಯದಲ್ಲಿ ಯಕ್ಷಗಾನ, ಬಯಲು ನಾಟಕ, ಸಾಮಾಜಿಕ ನಾಟಕ, ದೇವಿಮಹಾತ್ಮೆ ನಾಟಕಗಳ ಪ್ರದರ್ಶನವಿರುತ್ತದೆ.

ರಥ ಶಿಲ್ಪದ ವಿವರಣೆ ರಥೋತ್ಸವ: ಆಂಜನೇಯ(ಹನುಮಂತರಾಯ) ದೇವರ ರಥೋತ್ಸವವು ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ನಡೆಯುತ್ತದೆ, ದೇವಸ್ಥಾನದಿಂದ ರಥವು ಸಾಗಿ ಪಾದಗಟ್ಟೆಯವರೆಗೂ ಹೋಗಿ ಅಲ್ಲಿ ಪೂಜೆ ಸಲ್ಲಿಸಿ ಬರುತ್ತದೆ, ಹಳೆಯ ರಥ ಇದಾಗಿದ್ದು ಬೇವು, ಜಾಲಿ, ಬೇಲದ ಮರಗಳಿಂದ ರಥವನ್ನು ಮಾಡಿದ್ದಾರೆ, ಸ್ಥಳೀಯ ದೇವರುಗಳ ರೂಪಗಳನ್ನು ಮತ್ತು ನವಗ್ರಹಗಳ, ದೇವರುಗಳ ರೂಪಗಳನ್ನು ರಥದಲ್ಲಿ ಕೆತ್ತನೆ ಮಾಡಿದ್ದಾರೆ, ನಾಯಕನ ಹಟ್ಟಿಯ ಸಂಪ್ರದಾಯ ಶಿಲ್ಪಿಗಳು ಈ ರಥವನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ 80,000-00ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ.

ನಾಲ್ಕು ಗಾಲಿಯ ರಥವಿದು, ರಥಕ್ಕೆ ಭಕ್ತಾದಿಗಳು ತಮ್ಮ ಜಮೀನುಗಳಲ್ಲಿ ಬೆಳದ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ, ರಥವನ್ನು ಮಾಡಿದ ಶಿಲ್ಪಿಗಳಿಗೆ 90,000-00(ತೊಂಬತ್ತು ಸಾವಿರ)ರೂಗಳ ಸಂಭಾವನೆ ಕೊಟ್ಟಿದ್ದಾರೆ, ರಥದ ನಿರ್ಮಾಣಕ್ಕೆ ಒಟ್ಟು 3,00000-00(ಮೂರು ಲಕ್ಷ)ರೂಗಳು ಖರ್ಚಾಗಿದೆ, ಒಟ್ಟು 28ಅಡಿಗಳ ಎತ್ತರ ಇದೆ, ಪ್ರತಿ ವರ್ಷ ಕಾರ್ತಿಕ ಮಾಸದ ಕೊನೆ ವಾರದಲ್ಲಿ ರಥೋತ್ಸವ ನಡೆಯುತ್ತದೆ, ಮೂರು ದಿನಗಳು ನಡೆಯುವ ಈ ರಥೋತ್ಸವದಲ್ಲಿ ಮೊದಲ ದಿನ ದೇವರಿಗೆ

ದೀಪಾಲಂಕಾರ, ಎರಡನೇ ದಿನ ರಥೋತ್ಸವ, ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಕೊನೆ ದಿನ ಓಕುಳಿ, ಮಹಾಮಂಗಳಾರುತಿ ನಡೆಯುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ನಾಗಣ್ಣ – ಸದರಿ ಗ್ರಾಮದವರು

2). ಪಾಂಡುರಂಗಪ್ಪ – ಸದರಿ ಗ್ರಾಮದವರು ಮೊ:8762747355.

18). ಚಳ್ಳಕೆರೆ, ವೀರಭದ್ರ (ಈರಣ್ಣ)ದೇವರ ರಥ:

ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ದೊಡ್ಡ ತಾಲ್ಲೂಕು ಇದು, ಈ ನಗರದಲ್ಲಿ ಪ್ರಾಚೀನ ಹಿನ್ನೆಲೆಯುಳ್ಳ ಚಳ್ಳಕೆರಮ್ಮ ದೇವರು ನೆಲೆಸಿರುವುದರಿಂದ ಚಳ್ಳಕೆರೆ ಎಂಬ ಹೆಸರು ಬಂದಿರುವುದಾಗಿದೆ, ಮತ್ತೊಂದು ಕಾರಣ ನಗರದ ಉತ್ತರ ದಿಕ್ಕಿಗೆ ಕೆರೆ ಇದ್ದು ಈ ಕೆರೆಯ ದಡದಲ್ಲಿ ಚಳ್ಳೆ ಹಣ್ಣಿನ ಗಿಡಗಳು ಸಾಕಷ್ಟಿದ್ದು, ಚಳ್ಳೆಹಣ್ಣಿನಕೆರೆ ಕ್ರಮೇಣ ಚಳ್ಳಕೆರೆಯಾಗಿರಬಹುದು.

ಐತಿಹಾಸಸಿಕ ಹಿನ್ನೆಲೆಯ ನಗರವಾಗಿದ್ದು, ಊರಿನ ಮಧ್ಯ ಭಾಗದಲ್ಲಿರುವ ಉದ್ಯಾನವನದಲ್ಲಿ ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ಹಳೆಯ ದೇವಸ್ಥಾನಗಳಿವೆ, ನಗರದ ಮಧ್ಯಭಾಗದಲ್ಲಿ ವಿಜಯ ನಗರ ಸಾಮ್ರಾಜ್ಯದ ಕಾಲದಲ್ಲಿ ಕಟ್ಟಲಾಗಿರುವ ವೀರಭದ್ರಸ್ವಾಮಿ ದೇವಸ್ಥಾನ, ಒಂದು ಮಸೀದಿ, ಚಳ್ಳಕೆರಮ್ಮ, ಆಂಜನೇಯ, ದತ್ತಾತ್ರೇಯ, ಮಾರಮ್ಮ, ಕನ್ನಿಕಾ ಪರಮೇಶ್ವರಿ, ಅಮ್ಮಾ ಭಗವಾನ್, ಉಡುಸಲಮ್ಮ, ದುರುಗಮ್ಮ, ದೇವಸ್ಥಾನಗಳಿವೆ, ಈಗ ಹೊಸದಾಗಿ ಸಾಯಿಬಾಬಾ ಮಂದಿರವನ್ನು ನಿರ್ಮಾಣ ಮಡಿದ್ದಾರೆ, ವೀರಭದ್ರ ದೇವರಿಗೆ ಪ್ರತಿ ವರ್ಷ ಮೇ ತಿಂಗಳಲ್ಲಿ ಬರುವ ಆಗಿ ಹುಣ್ಣಿಮೆಯ ವೈಶಾಖ ನಕ್ಷತ್ರದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ, ಆರು ದಿನಗಳು ವಿವಿಧ ಕಾರ್ಯಕ್ರಮಗಳಿರುತ್ತವೆ, ಏಕಾದಶಿ, ರುದ್ರಾಭಿಷೇಕ, ಕಂಕಣ ಧಾರಣೆ, ಹೋಮ, ಕಳಸ ಸ್ಥಾಪನೆ, ತೈಲಾಭಿಷೇಕ, ವೀರಗಾಸೆ ಕುಣಿತ, ಬೆಳ್ಳಿ ಪಲ್ಲಕ್ಕಿ ಉತ್ಸವ, ವೀರ ನಾಟ್ಯ, ಅಗ್ನಿಕುಂಡ, ಆಂದೋಳಿಕೋತ್ಸವ, ಓಕುಳಿ, ಮುಂತಾದ ದೇವತಾ ಕಾರ್ಯಗಳು ನಡೆಯುತ್ತವೆ, ಈ ಸಂದರ್ಭದಲ್ಲಿ ಜಾನುವಾರುಗಳ ದೊಡ್ಡ ಜಾತ್ರೆಯು ನಡೆಯುತ್ತದೆ, ಇದೇ ಸಮಯದಲ್ಲಿ ಚಳ್ಳಕೆರೆಮ್ಮ ಮತ್ತು ಉಡುಸಲಮ್ಮನ ಜಾತ್ರೆಯು ನಡೆಯುತ್ತದೆ, ಅಂದು ಕಡುಬಿನ ಕಾಳಗ ಎಂಬ ಜನಪದ ಶೈಲಿಯ ಕ್ರೀಡೆ ನಡೆಯುತ್ತದೆ, ನತರ ಬಲಿ, ಹರಕೆ, ಓಕುಳಿ ಮುಂತಾದ ಕಾರ್ಯಗಳು ನಡೆಯುತ್ತವೆ, ಈ ಜಾತ್ರೆಗೆ ಸುತ್ತಮುತ್ತಲಿನ ಹಳ್ಳಿಯ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ, ರಥದ ಮುಂದುಗಡೆ ವಿವಿಧ ವಾದ್ಯಗಳು, ನಂದಿಕೋಲಿನ ಕುಣಿತ, ಕೀಲುಕುದುರೆ ಕುಣಿತ, ಗೊಂಬೆ ಕುಣಿತ, ವೀರಗಾಸೆ ಕುಣಿತ, ಡೋಲು, ಡಮರುಗದ ವಾದ್ಯಗಳು, ಮುಂತಾದ ವಾದ್ಯಗಳು ಇರುತ್ತವೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಈ ದೇವರಿಗೆ ಚಿಕ್ಕ ಹಾಗೂ ದೊಡ್ಡ ರಥಗಳಿವೆ, ಚಳ್ಳಕೆರೆ ತಾಲ್ಲೂಕಿನಲ್ಲಿರುವ ನಾಯಕನಹಟ್ಟಿ ತಿಪ್ಪೇಸ್ವಾಮಿಯ ರಥವು ಅತ್ಯಂತ ದೊಡ್ಡ ರಥ, ಇದನ್ನು ಬಿಟ್ಟರೆ ಚಳ್ಳಕೆರೆಯ ವೀರಭದ್ರ ಸ್ವಾಮಿಯ ರಥವು ಎರಡನೆಯ ಅತಿದೊಡ್ಡ ರಥವಾಗಿದೆ.

ವೀರಭದ್ರ ಸ್ವಾಮಿ ದೇವಾಲಯವು ನಗರದ ಮಧ್ಯಭಾಗದಲ್ಲಿದ್ದು ವಿಶಾಲವಾಗಿದೆ, ದೇವಸ್ಥಾನದ ರಾಜ ಗೋಪುರ ಅತೀ ಎತ್ತರವಾಗಿದೆ, ಗರ್ಭಗುಡಿಯ ಬಾಗಿಲ ನಿಲುವುಗಳು ಕಲ್ಲಿನದ್ದಾಗಿದ್ದು ಈ ಬಾಗಿಲಿನ ಮೇಲೆ ಎರಡು ಕಡೆ ನವಿಲು, ಹೂಬಳ್ಳಿಗಳ ಕೆತ್ತನೆ ಇದೆ, ದ್ವಾರಪಾಲಕರು, ಬಾಗಿಲ ನಿಲುವುಗಳ ಮೇಲೆ ಸ್ತ್ರೀರೂಪದ ದ್ವಾರಪಾಲಕರ ಕೆತ್ತನೆ ಇದೆ, ಗರ್ಭಗುಡಿಯ ಮುಂದಿನ ಹಜಾರವು ವಿಶಾಲವಾಗಿದ್ದು 8ಕಂಬಗಳನ್ನೊಳಗೊಂಡಿದೆ, ಈ ಕಂಬಗಳಲ್ಲಿ 4ಕಂಬಗಳು ಸಾಧಾರಣವಾಗಿದ್ದು, ಎರಡು ಕಂಬಗಳಲ್ಲಿ ಎರಡು ಕಾಲಿನಲ್ಲಿ ಭಾರವನ್ನು ಹೊತ್ತು ನಿಂತಿರುವ ಆನೆಗಳ ಶಿಲ್ಪಗಳು ಪ್ರತ್ಯೇಕವಾಗಿವೆ, ಇದರ ಮೇಲೆ

ನಂದಿ ಹಾಗೂ ಬಳ್ಳಿಗಳ ಕೆತ್ತನೆ ಇದೆ. ಇದರ ಮೇಲಿನ ತೊಲೆಗಳಲ್ಲಿ ಆನೆಗಳು ಹಾಗೂ ನವಿಲುಗಳ ಸಾಲುಗಳಿವೆ. ಉಳಿದ ಎರಡು ಕಂಬಗಳಲ್ಲಿ ಹೂಬಳ್ಳಿಗಳ ಕೆತ್ತನೆ ಇದೆ. ಕಂಬಗಳ ಬೋದಿಗೆ ಅಲಂಕಾರಮಯವಾಗಿದೆ.

ಗರ್ಭಗುಡಿಯ ಶಿಖರವು ಚಿಕ್ಕದಾಗಿದ್ದು ಸಾಧಾರಣವಾಗಿದೆ. ದೇವಸ್ಥಾನದ ಮೇಲೆ ಬಲ್ಪ(ಗೋಡೆ)ದ ಮೇಲೆ ಸುತ್ತಲೂ ಸಿಮೆಂಟ್ ಮಾಧ್ಯಮದ ಕಲಾಕೃತಿಗಳಿವೆ. ವಿವಿಧ ದೇವರುಗಳ ಶಿಲ್ಪಗಳನ್ನು ಮಾಡಿದ್ದಾರೆ. ರಾಜಗೋಪುರವು ಅತ್ಯಂತ ಎತ್ತರವಾಗಿದ್ದು 30ಅಡಿಗಳವರೆವಿಗೂ ಕಲ್ಲಿನಲ್ಲಿ ಕಟ್ಟಲಾಗಿದೆ. ನಂತರ ಇಟ್ಟಿಗೆ ಹಾಗೂ ಸಿಮೆಂಟ್‌ನಲ್ಲಿ ವಿವಿಧ ಶಿಲ್ಪಗಳೊಂದಿಗೆ ಕಟ್ಟಲಾಗಿದೆ. ರಾಜಗೋರದ ಪ್ರವೇಶ ದ್ವಾರವು ವಿಶಾಲ, ಅಗಲ ಮತ್ತು ಎತ್ತರವಾಗಿದೆ. ಇದಕ್ಕೆ ಅಷ್ಟೇ ದೊಡ್ಡ ಮರದ ಬಾಗಿಲನ್ನು ಮಾಡಿದ್ದು ಎರಡು ಬಾಗಿಲುಗಳ ಮೇಲೆ ಕಲಾತ್ಮಕ ಹಾಗೂ ಕುಸುರಿ ಕೆತ್ತನೆ ಇದೆ.

18/1). ಚಳ್ಳಕೆರೆ ಶ್ರೀರಾಮ ಮಂದಿರ, ರಾಮ ದೇವರ ರಥ:

ಚಳ್ಳಕೆರೆ ನಗರದ ವೀರಭದ್ರ ಸ್ವಾಮಿ ದೇವಸ್ಥಾನದ ಮುಂದೆ, ತೇರು ಬೀದಿಯಲ್ಲಿ ಶ್ರೀರಾಮ ಮಂದಿರವಿದ್ದು ಇಲ್ಲಿ ಪ್ರತಿವಾರ ಭಜನೆ ಮತ್ತು ಇತರೆ ಕಾರ್ಯಕ್ರಮಗಳು ನಡೆಯುತ್ತವೆ. ರಾಮ ದೇವರ ಸಾಧಾರಣ ಶೈಲಿಯ ತೇರು ಇದೆ. ಪ್ರತಿ ವರ್ಷ ರಾಮನವಮಿಯಂದು ರಥೋತ್ಸವ ನಡೆಸುತ್ತಾರೆ. ಇದೊಂದು ಆಧ್ಯಾತ್ಮಿಕ ಆಚರಣೆಯ ಮಠವಾಗಿದೆ. ಈ ಮಠದಲ್ಲಿ ಶಂಕರ ಜಯಂತಿ, ರಾಮನವಮಿ, ಹನುಮ ಜಯಂತಿ ಮುಂತಾದ ಜಯಂತಿಗಳನ್ನು ಮಾಡುತ್ತಾರೆ. ಜಾಲಿ ಹಾಗೂ ತೇಗದ ಮರಗಳಿಂದ ಈ ತೇರನ್ನು ಮಾಡಿದ್ದಾರೆ. 14ಅಡಿಯ ತೇರು ಇದಾಗಿದ್ದು, 3ಅಡಿಯ ಮರದ ಗಾಲಿಗಳಿವೆ. ಅಚ್ಚುಗಳು, ಅಡ್ಡಪಟ್ಟಿಗಳು, ಕಂಬಗಳು, ಹಲಗೆಗಳಿವೆ. ಮುಂಭಾಗದಲ್ಲಿ ಮಾತ್ರ ಗಣೇಶನ ಸಾಧಾರಣ ಶೈಲಿಯ ಕೆತ್ತನೆ ಇದೆ. ಇದರ ಮೇಲುಗಡೆ ಆನೆ ಹಾಗೂ ಸಿಂಹಗಳ ಮುಖಗಳಿವೆ. ಎರಡು ಚಿಕ್ಕ ಅಂತಸ್ತುಗಳು, ದೇವರ ಪೀಠವಿರುವ ಮತ್ತೊಂದು ಅಂತಸ್ತು, ಈ ಮೂರೂ ಅಂತಸ್ತುಗಳಲ್ಲಿ ಕಮಾನು ಡಿಸೈನ್ ಮಾಡಿದ್ದಾರೆ. ಇದನ್ನು ಎಳೆಯಲು ಎರಡು ಮರದ ಪಟ್ಟಿಗಳನ್ನು ಮುಂಭಾಗದಲ್ಲಿ ಉದ್ದವಾಗಿ ಬಿಟ್ಟಿದ್ದಾರೆ. ಹತ್ತಿರದ ಇತರೆ ದೇವರುಗಳ ಕಾರ್ಯಕ್ಕೂ ಇದನ್ನು ತೆಗೆದುಕೊಂಡು ಹೋಗುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಚಿತ್ರಾಗಾರ್ ಬಾಬಣ್ಣ ---- ಸಂಪ್ರದಾಯ ಶಿಲ್ಪಿಗಳು

2). ವೀರಭದ್ರಪ್ಪ ---- ಗ್ರಾಮಸ್ತರು

3). ತಿಪ್ಪೇಸ್ವಾಮಿ ---- ಗ್ರಾಮಸ್ಥರು

4). ಗೌಡ್ರ ಪಿ.ಆರ್.ಗುರುಸಿದ್ದಪ್ಪ ---- ದೇವಸ್ಥನದ ಧರ್ಮದರ್ಶಿಗಳು.

19). ಎನ್.ಮಹದೇವಪುರ, ಮಹಲಿಂಗೇಶ್ವರನ ರಥ:

ನಾಯಕನ ಹಟ್ಟಿಯಲ್ಲಿ ನೆಲೆನಿಂತು ಸಾಮಾಜಿಕ, ಧಾರ್ಮಿಕ ಹಾಗೂ ಧರ್ಮಕಾರ್ಯದಲ್ಲಿ ನಿರತರಾಗಿ, ಕಾಯಕ ಯೋಗಿಯಾಗಿದ್ದ ತಿಪ್ಪೇಸ್ವಾಮಿಗಳು ಐದುಪುರ, ಐದು ಹಳ್ಳಿಗಳು ಹಾಗೂ ಐದು ಕೆರೆಗಳನ್ನು ಸ್ಥಾಪಿಸಿದವುಗಳಲ್ಲಿ ಈ ಗ್ರಾಮವು ಮೊದಲನೆಯದ್ದಾಗಿದೆ. ತಿಪ್ಪೇಸ್ವಾಮಿಯವರು ಜನರ ಕಷ್ಟಗಳನ್ನು ದೂರಮಾಡಿ, ಮಹದೇವನೆಂದೇ ಪ್ರಸಿದ್ಧಿಯನ್ನು ಪಡೆದರು. ಅವರ ಪವಾಡ, ಶಕ್ತಿ, ಯುಕ್ತಿಗಳನ್ನು ಕಂಡ ಭಕ್ತರು ಊರಿಗೆ ಮಹದೇವನ ಪುರವೆಂದೇ ಕರೆದರಂತೆ. ಊರಿನಲ್ಲಿ ಮಹಲಿಂಗೇಶ್ವರ ಎಂಬ ದೇವರು ನೆಲೆಸಿರುವ ಕಾರಣದಿಂದಲೂ ಮಹದೇವಪುರವೆಂದು ಕರೆಯುತ್ತಾರೆ. ಚಿತ್ರದುರ್ಗದ ಪಾಳೇಗಾರರ ಕಾಲದಲ್ಲಿ ಇದಕ್ಕೆ ಮಂಗಪೊಟಿ ಎಂಬ ಹೆಸರಿದ್ದು, ರಾಯದುರ್ಗ ಪ್ರಾಂತ್ಯಕ್ಕೆ

ಸೇರಿದ ಇದನ್ನು ಚಿತ್ರದುರ್ಗದ ಪಾಳೇಗಾರರು ವಶಪಡಿಸಿಕೊಂಡ ನಂತರ ಮಹದೇವಪುರ ಎಂಬ ಹೆಸರನ್ನು ಪಡೆಯಿತಂತೆ.

ಗ್ರಾಮದಲ್ಲಿ ಕುಕ್ಕುವಾಡೇಶ್ವರಿ, ಮಹಲಿಂಗೇಶ್ವರ, ಬಾಲ ರಂಗಸ್ವಾಮಿ, ದುರುಗಮ್ಮ, ಮಾರಮ್ಮ, ಆಂಜನೇಯ, ಮೊಹರಂ, ಮಸೀದಿ ಇದೆ, ಆಂಜನೇಯನಿಗೆ ಕಾರ್ತಿಕೋತ್ಸವ, ಕುಕ್ಕವಾಡೇಶ್ವರಿ, ಮಹಲಿಂಗೇಶ್ವರ, ದುರುಗಮ್ಮ ದೇವರುಗಳಿಗೆ ದಸರಾ ಸಮಯದಲ್ಲಿ ಅಂಬು ಹೊಡೆಯುವ ಪದ್ದತಿ ಇದೆ, ಮುಸ್ಲಿಂ ರವರು ಮೋಹರಂ ದಿನ ಕೊಂಡ ಹಾಯುವ ಕಾರ್ಯ ಮಾಡುತ್ತಾರೆ, ಇದೇ ಊರಿಗೆ ದೊಡ್ಡಹಬ್ಬ, ದುರುಗಮ್ಮ, ಮಾರಮ್ಮ, ಕುಕ್ಕವಾಡೇಶ್ವರಿ ದೇವರಿಗೆ ಜಾತ್ರೆ ಮಾಡುತ್ತಾರೆ, ಈ ಸಮಯದಲ್ಲಿ ಬಲಿ, ಸಿಡಿ ಉತ್ಸವ ಹರಕೆ, ಬಾಯಿಗೆ ಬೀಗ, ಆರತಿ ಕಾರ್ಯಕ್ರಮಗಳು ನಡೆಯುತ್ತವೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಮಹಲಿಂಗೇಶ್ವರ ದೇವರ ರಥೋತ್ಸವವು ಪ್ರತಿ ವರ್ಷ ಕಾರ್ತಿಕ(ಡಿಸೆಂಬರ್) ಮಾಸದಲ್ಲಿ ನಡೆಯುತ್ತದೆ, ಮೂರು ದಿನಗಳು ನಡೆಯುವ ಈ ಜಾತ್ರೆಯಲ್ಲಿ ಮೊದಲ ದಿನ ದೀಪೋತ್ಸವ, ಎರಡನೇ ದಿನ ತೇರಿಗೆ ಕಳಸ ಸ್ಥಾಪನೆ, ಮೂರನೇ ದಿನ ರಥೋತ್ಸವ ನಡಯುತ್ತದೆ.

ರಥೋತ್ಸವದ ದಿನ ಬೆಳಿಗ್ಗೆ ದೇವರು ಗುಡಿಯಿಂದ ಹೊರಟು ಗಂಗಾ ಪೂಜೆಗೆ ಹೋಗುತ್ತದೆ, ನಂತರ ದೇವಸ್ಥಾನದಿಂದ ದೇವರನ್ನು ಪಲ್ಲಕ್ಕಿಯಲ್ಲಿ ತಂದು ರಥದಲ್ಲಿ ಕೂರಿಸುತ್ತಾರೆ, ರಥಕ್ಕೆ ಲಿಂಗಾಯ್ತರ ಮನೆಯಿಂದ ಎಡೆ, ಗೊಲ್ಲರ ಮನೆಯಿಂದ ಮೊಸರು ತರುತ್ತಾರೆ, ಈ ಎಡೆಯನ್ನು ಹಟ್ಟಿಕೋಣದ ವಂಶಸ್ಥರು ಹೊರುವುದು, ನಾಯಕನಹಟ್ಟಿ ತಿಪ್ಪೇಸ್ವಾಮಿ ರಥಕ್ಕೂ ಇವರೇ ಎಡೆಯನ್ನು ಹೊರುವುದು, ಎಡೆ(ಬಲಿಬಾನ)ವನ್ನು ರಥದ ಸುತ್ತಾ ಹಾಕಿ ಪೂಜೆ ಸಲ್ಲಿಸಿದ ನಂತರ ಗ್ರಾಮದ ಜನರ ಒಪ್ಪಿಗೆ ಪಡೆದು ರಥವನ್ನು ಮುಂದೆ ಎಳೆಯುತ್ತಾರೆ, ಪಾದಗಟ್ಟೆಯವರೆವಿಗೂ ರಥವು ಹೋಗಿ ವಾಪಾಸ್ಸು ಬರುತ್ತದೆ, ಪಾದಗಟ್ಟೆಯಿಂದ ರಥವು ವಾಪಾಸ್ಸು ಬರುವಾಗ ಇಡೀ ರಥವನ್ನು ತಿರುಗಿಸುವುದಿಲ್ಲ ದೇವರನ್ನು ಕೂರಿಸಿರುವ ಪೀಠವನ್ನು ಮಾತ್ರ ತಿರುಗಿಸಿ ಇಡುತ್ತಾರೆ, ರಥವನ್ನು ಎಳೆಯುವ ಹಗ್ಗವನ್ನು ಆಕಡೆಯಿಂದ ಮತ್ತೊಂದು ಕಡೆಗೆ ಕಟ್ಟಿ ಇನ್ನೊಂದು ಕಡೆಯಿಂದ ಎಳೆಯುತ್ತಾರೆ, ರಥವನ್ನು ಎಳೆಯುವ ಹಗ್ಗವನ್ನು ಮಾರುಕಟ್ಟೆಯಿಂದ ಖರೀದಿ ಮಾಡಿ ತರುತ್ತಾರೆ, ರಥಕ್ಕೆ ಕಟ್ಟಿದ್ದ ಮುಕ್ತಿ ಬಾವುಟವು ಈ ಬಾರಿ 51ಸಾವಿರಕ್ಕೆ ಹರಾಜು ಆಗಿದೆ, ರಥವು ಸಾಗುತ್ತಿರುವಾಗ ರಥದ ಮುಂದೆ ವಿವಿಧ ವಾದ್ಯಗಳು, ವಿವಿದ ಕುಣಿತಗಳು ಇರುತ್ತವೆ, ಡೋಲು, ಕರಡಿ ಮಜಲು, ವೀರಗಾಸೆ, ನಂದಿಕೋಲು ಮುಂತಾದ ಕುಣಿತಗಳು ಇರುತ್ತವೆ.

ಪೂರ್ವದಲ್ಲಿ ಹಳೆಯ ರಥವಿದ್ದು ಅದು ಶಿಥಿಲವಾಗಿದ್ದ ಕಾರಣ ಊರಿನ ಭಕ್ತರು, ಗ್ರಾಮಸ್ಥರು ಹೊಸ ರಥವನ್ನು 2011ರಲ್ಲಿ ಮಾಡಿಸಿದ್ದಾರೆ, ಹಳೆ ರಥದ ಕಲ್ಲಿನ ಗಾಲಿಗಳು ಇದ್ದು ಅದೇ ಗಾಲಿಗಳನ್ನು ಹೊಸ ರಥಕ್ಕೆ ಅಳವಡಿಸಿದ್ದಾರೆ, ನಾಯಕನಹಟ್ಟಿಯಲ್ಲಿ ವಾಸವಾಗಿರುವ ಐನಹಳ್ಳಿ ತಿಪ್ಪೇಸ್ವಾಮಿ ಎನ್ನುವವರು ಹೊಸ ರಥವನ್ನು ಮಾಡಿದ್ದಾರೆ, ಈ ಶಿಲ್ಪಿಗಳಿಗೆ ಎರಡು ಲಕ್ಷ ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಗ್ರಾಮದ ಕೆಲವು ದಾನಿಗಳು ಮತ್ತು ಈ ಊರಿನ ಅಕ್ಕ ಪಕ್ಕದ ಊರುಗಳವರು ಸ್ಥಳೀಯವಾಗಿ ಸಿಗುವ ಮರಗಳನ್ನು ರಥದ ನಿರ್ಮಾಣಕ್ಕೆ ದಾನವಾಗಿ ಕೊಟ್ಟಿದ್ದಾರೆ, ಒಟ್ಟು ರಥದ ಖರ್ಚು 10ಲಕ್ಷ ರೂಗಳಾಗಿದೆ, ಗಾಲಿಯಿಂದ ಹಿಡಿದು ಕಳಸದವರೆವಿಗೆ ಸೇರಿ ಒಟ್ಟು ರಥದ ಎತ್ತರ 31ಅಡಿ. ರಥಕ್ಕೆ ನಂದಿ, ತೇಗ, ಬೇವು, ಕರೇ ಜಾಲಿ ಹಾಗೂ ಮತ್ತಿ ಮರಗಳನ್ನು ಉಪಯೋಗಿಸಿದ್ದು, ಇದರಲ್ಲಿ ನಂದಿ ಮತ್ತು ಮತ್ತಿ ಮರಗಳನ್ನು ಹೆಚ್ಚಾಗಿ ಬಳಸಿದ್ದಾರೆ, ಗಾಲಿಗಳ ಮೇಲೆ ಹಾಕಿರುವ ಅಚ್ಚಿನಲ್ಲಿ ಯಾವುದೇ ರೀತಿಯ ಕೆತ್ತನೆ ಇಲ್ಲ, ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ನಾಲ್ಕು ತೊಲೆಗಳ ತುದಿಗಳಲ್ಲಿ ಚಿಕ್ಕದಾದ ಆನೆಗಳನ್ನು ಮಾಡಿದ್ದಾರೆ, ಈ ತೊಲೆಗಳ ಮಧ್ಯದಲ್ಲಿ ಚೌಕಾಕಾರದ ಪಟ್ಟಿಯಲ್ಲಿ ಹೂವಿನ ಕುಸುರಿ ಕೆತ್ತನೆ

ಇದೆ. ಇದರ ಮೇಲಿನ ಸಣ್ಣ ಸಣ್ಣ ಪಟ್ಟಿಗಳಲ್ಲಿ ಹೂವು, ಎಲೆ, ಬಳ್ಳಿ ಹಾಗೂ ಕುಸುರಿ ಕೆತ್ತನೆ ಇದ್ದು ಇದರ ಮೇಲಿನ ಸಾಲು ಶಿಲ್ಪಗಳಿದ್ದು, ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಸಿಂಹಗಳು, ನಾಲ್ಕು ದಿಕ್ಕಿನಲ್ಲಿ ಗಣೇಶ, ತಿಪ್ಪೇಸ್ವಾಮಿ, ಲಕ್ಷ್ಮಿ, ಸರಸ್ವತಿ, ದೇವಿ, ನಿಂತಿರುವ ಆಂಜನೇಯ, ಸುಬ್ರಮಣ್ಯ, ಶಿವ ಪಾರ್ವತಿ, ಅಯ್ಯಪ್ಪಸ್ವಾಮಿ, ಪೀಠ ಸಹಿತ ಲಿಂಗವಿದೆ, ಈ ಲಿಂಗಕ್ಕೆ ದೊಡ್ಡ ಗಾತ್ರದ ಸರ್ಪವು ನೆರಳು ಮಾಡಿದೆ, ಇದರ ಮೇಲೆ ಇರುವ ಪಟ್ಟಿಯಲ್ಲಿ ಎಲೆಬಳ್ಳಿಯ ಕುಸುರಿ ಕೆತ್ತನೆ, ಈ ಪಟ್ಟಿಯ ಮೇಲೆ ಮತ್ತೊಂದು ಸಾಲಿನ ಶಿಲ್ಪಗಳಿವೆ, ನಾಲ್ಕು ದಿಕ್ಕಿಗೆ ಗಣಪತಿ, ತಿರುಪತಿ ತಿಮ್ಮಪ್ಪ, ಆಂಜನೇಯ, ಶಿವ, ಸುಬ್ರಮಣ್ಯನ ಶಿಲ್ಪಗಳಿದ್ದು, ಈ ಶಿಲ್ಪಗಳ ಜೊತೆಗೆ ವಿವಿಧ ಪ್ರಾಣಿಗಳಾದ ನವಿಲು, ಗಿಳಿ, ಹಂಸ, ನಂದಿ ಹಾಗೂ ಹೂಬಳ್ಳಿಗಳ ಸೊಗಸಾದ ಕೆತ್ತನೆ ಇದೆ, ಇದರ ನಂತರದಲ್ಲಿ ದೇವರನ್ನು ಕೂರಿಸುವ ಪೀಠವು ಎಂಟು ಕಂಬಗಳ ಮಧ್ಯದಲ್ಲಿ ಇದೆ, ಪೀಠದ ಮೇಲೆ ಇರುವ ಪಟ್ಟಿಗಳಲ್ಲಿ ಸೂಕ್ಷ್ಮ ಕುಸುರಿ ಕೆತ್ತನೆ ಕಂಡುಬರುತ್ತದೆ, ಕಮಾನುಗಳು ಇರುವ ಕಡೆಗಳಲ್ಲಿ ಸಣ್ಣ ಸಣ್ಣ ಕಂಚಿನ ಗಂಟೆಗಳನ್ನು ಹಾಕಿದ್ದಾರೆ, ರಥದ ನಿರ್ಮಾಣಕ್ಕೆ ದಾನಿಗಳು, ಗ್ರಾಮದ ಭಕ್ತಾದಿಗಳು, ನೌಕರ ವರ್ಗ ಧಾರಾಳವಾಗಿ ಹಣವನ್ನು ನೀಡಿದ್ದಾರೆ, ಗ್ರಾಮದಲ್ಲಿ ವಾಸಿಸುತ್ತಿರುವ ಮುಸ್ಲಿಂ ಸಮುದಾಯದವರು ರಥದ ನಿರ್ಮಾಣಕ್ಕೆ ಹೆಚ್ಚಿನ ನೆರವು ನೀಡಿದ್ದಾರೆ, ಗ್ರಾಮದ ಯಾವುದೇ ಹಿಂದೂ ಧಾರ್ಮಿಕ ಕಾರ್ಯಗಳಿರಲಿ ಮುಸ್ಲಿಂ ಸಮುದಾಯದವರು ಪಾಲ್ಗೊಳ್ಳುತ್ತಾರೆ, ಇಲ್ಲಿನ ಹಿಂದೂಗಳು ಅಷ್ಟೆ ಮುಸ್ಲಿಂ ಸಮುದಾಯದವರೊಂದಿಗೆ ಸಮನ್ವಯತೆಯಿಂದ ನಡೆದುಕೊಳ್ಳುತ್ತಾರೆ, ಈ ಕಾರಣದಿಂದ ಗ್ರಾಮದಲ್ಲಿ ಮುಸ್ಲಿಂ ಮಸೀದಿ ಇದೆ, ಚಿತ್ರದುರ್ಗ ಜಿಲ್ಲೆಯಲ್ಲಿಯೇ 2ನೇ ಮಸೀದಿ ಇದಾಗಿದೆ.

ದೇವಸ್ಥಾನವನ್ನು ಗ್ರಾಮದವರೇ ಆದ ಶ್ರೀಮತಿ ರತ್ನಮ್ಮ ಮತ್ತು ತಿಪ್ಪೇರುದ್ರಪ್ಪ ಇವರು ಸ್ವಂತಕ್ಕೆ ಹೊಸದಾಗಿ ಜೀರ್ಣೋದ್ಧಾರ ಮಾಡಿಸಿದ್ದಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1).ಎಂ. ಬಸವರಾಜು S/O ಶಿವರುದ್ರಪ್ಪ

2). ಜಿ.ತಿಪ್ಪೇಸ್ವಾಮಿ S/O ಸೂರನಾಯಕ

3). ಬಿ.ತಿಪ್ಪೇರುದ್ರಪ್ಪ S/O ದೊಡ್ಡರುದ್ರಪ್ಪ

4). ಶಿವಾನಂದಪ್ಪ S/O ಸಣ್ಣವೀರಣ್ಣ

5). ಓಬಣ್ಣ S/O ಬಂಗಾರಯ್ಯ

6). ಶಬ್ಬೀರ್ ಸಾಬ್ S/O ಖಾಜಾ ಹುಸೇನ್ ಸಾಬ್

7). ಅಹಮದ್ ಸಾಬ್ S/O ಬುಡ್ಡೇ ಖಾಸಿಂ ಸಾಬ್

20). ಮಲ್ಲೂರಹಳ್ಳಿ, ಕೊಲ್ಲಾಪುರದಮ್ಮ ದೇವರ ರಥ:

ಸುಮಾರು 400 ವರ್ಷಗಳ ಹಿಂದೆ ಈ ಗ್ರಾಮದಲ್ಲಿ ಮಲ್ಲರು(ಜಟ್ಟಿಗಳು)ಗಳಿದ್ದು ವಿಜಯನಗರ ಸಾಮ್ರಾಜ್ಯದ ಅರಸರು ಏರ್ಪಡಿಸಿದ್ದ ಜಟ್ಟಿ ಕಾಳಗದಲ್ಲಿ ಭಾಗವಹಿಸಿ ಜಯಗಳಿಸಿದ್ದರಂತೆ, ಮಲ್ಲರಿಂದ ಊರಿಗೆ ಮಲ್ಲರಹಳ್ಳಿ, ಮಲ್ಲೂರಹಳ್ಳಿ ಎಂಬ ಹೆಸರು ಬಂದಿರಬಹುದು, ಇನ್ನೊಂದು ವಿವರವೂ ಇದೆ, ಆಂದ್ರ ರಾಜ್ಯದ ಮಲ್ಲೂರು ಎಂಬ ಗ್ರಾಮದಿಂದ ಪೂರ್ವಿಕರು ಇಲ್ಲಿನ ಪ್ರದೇಶಕ್ಕೆ ಬಂದು ನೆಲೆಸಿದರಂತೆ ಈ ಕಾರಣದಿಂದ ಮಲ್ಲೂರಿನವರು ನೆಲೆಸಿರುವ ಹಳ್ಳಿ, ಮಲ್ಲೂರ ಹಳ್ಳಿಯಾಗಿರಬಹುದು, ಇನ್ನೂ ಒಂದು ಕಾರಣವನ್ನು ನೋಡುವುದಾದರೆ, ಶ್ರೀ ಶೈಲದ ಮಲ್ಲಿಕಾರ್ಜುನ ದೇವರಿಗೆ ಈ ಹಳ್ಳಿಯವರೆಲ್ಲಾ ನಡೆದುಕೊಳ್ಳುತ್ತಾರೆ, ಈ ಕಾರಣದಿಂದಲೂ ಊರಿಗೆ ಮಲ್ಲೂರಹಳ್ಳಿ ಎಂದು ಕರೆದಿರುವ ಸಾಧ್ಯತೆ ಇದೆ,

ಈಗಲೂ ಈ ಹಳ್ಳಿಯ ಜನರು ತಮ್ಮ ಮಕ್ಕಳಿಗೆ ಮಲ್ಲಿಕಾರ್ಜುನ, ಮಲ್ಲೇಶಿ, ಮಲ್ಲಯ್ಯ, ಹೆಣ್ಣು ಮಕ್ಕಳಿಗೆ ಮಲ್ಲಮ್ಮ, ಮಲ್ಲಕ್ಕ ಎಂದು ಹೆಸರುಗಳನ್ನು ಇಡುತ್ತಾರೆ,

ಕೊಲ್ಲಾಪುರದಮ್ಮ, ರಾಜುಲು, ಓಬಳದೇವರು, ಬೊಮ್ಮದೇವರು, ವಡೇಲ ದೇವರು, ತಿಮ್ಮಪ್ಪ, ಯಲ್ಲಮ್ಮ, ಪೆನ್ನೋಬಳಸ್ವಾಮಿ ದೇವಸ್ಥಾನಗಳು ಗ್ರಾಮದಲ್ಲಿವೆ, ಕೊಲ್ಲಾಪುರದಮ್ಮ ದೇವರಿಗೆ ಪ್ರತಿವರ್ಷ ರಥೋತ್ಸವ ಆಚರಣೆ, ಕಾರ್ತಿಕೋತ್ಸವ, ರಾಜುಲು ದೇವರಿಗೆ ಪ್ರತಿ ವರ್ಷ ಜಾತ್ರೆ ಮಾಡಿದರೆ, ಓಬಳದೇವರಿಗೆ 3ವರ್ಷಗಳಿಗೊಮ್ಮೆ ಜಾತ್ರೆ ಮಾಡುತ್ತಾರೆ. ಪ್ರತಿ ಮೊಹರಂ ಸಮಯದಲ್ಲಿ ಪೀರಲ ದೇವರ ಹಬ್ಬ ಮಾಡುತ್ತಾರೆ, ಈ ಸಂದರ್ಭದಲ್ಲಿ ಎಲ್ಲಾ ಸಮುದಾಯದವರು ಭಾವೈಕ್ಯತೆಯ ಪ್ರತೀಕವಾಗಿ ಕೊಂಡ ಹಾಯುವುದನ್ನು ಮಾಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಕೊಲ್ಲಾಪುರದಮ್ಮ ದೇವರಿಗೆ ಪಲ್ಲಕ್ಕಿ, ಉಚ್ಚಯ ಹಾಗೂ ದೊಡ್ಡರಥ ಇದೆ, ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಕಾರ್ತಿಕೋತ್ಸವ ಹಾಗೂ ರಥೋತ್ಸವ ನಡೆಯುತ್ತದೆ, ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವ, ಹೊಂಬು(ಬನ್ನಿ) ಹೊಡೆಯುವ ಕಾರ್ಯ ನಡೆಯುತ್ತದೆ, ಸಂಪ್ರದಾಯ ಶಿಲ್ಪಿಗಳಾದ ನಾಯಕನಹಟ್ಟಿ ಮಲ್ಲಿಕಾರ್ಜುನ ತಮ್ಮ 5ಜನ ಸಹಾಯಕ ಶಿಲ್ಪಿಗಳ ಜೊತೆಗೆ ರಥವನ್ನು ಮಾಡಿದ್ದಾರೆ, ಮೊದಲು ಹಳೆಯ ರಥ ಇತ್ತು, ಹಳೆಯ ರಥವು ಶಿಥಿಲವಾಗಿದ್ದ ಕಾರಣ ಗ್ರಾಮದ ಮನೆಗಳಿಂದ, ಸರ್ಕಾರಿ ನೌಕರರಿಂದ, ಮತ್ತು ಇತರೆ ದಾನಿಗಳಿಂದ ಹಣವನ್ನು ಸಂಗ್ರಹ ಮಾಡಿ, ಸ್ಥಳೀಯವಾಗಿ ದೊರೆತ ಮರಗಳಿಂದ ರಥವನ್ನು ಮಾಡಿಸಿದ್ದಾರೆ, ಶಿಲ್ಪಿಗಳಿಗೆ 89ಸಾವಿರ ಸಂಭಾವನೆಯನ್ನು ಕೊಟ್ಟಿದ್ದಾರೆ.

ಗ್ರಾಮದ ಭಕ್ತಾದಿಗಳು ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆದ ಮರಗಳನ್ನು ರಥ ನಿರ್ಮಾಣಕ್ಕೆ ಕೊಟ್ಟಿದ್ದಾರೆ, ರಥಕ್ಕೆ ಬೇವು, ಜಾಲಿ ಮತ್ತು ಬೇಲದ ಮರಗಳನ್ನು ಬಳಸಿದ್ದಾರೆ, 2008ರಲ್ಲಿ ಹೊಸ ರಥವನ್ನು ಮಾಡಿಸಿದ್ದು ಶಿಲ್ಪಿಗಳು ಏಳು ತಿಂಗಳುಗಳ ಕಾಲ ರಥವನ್ನು ಮಾಡಿದ್ದಾರೆ, ಹಳೆಯ ರಥದ ಕಲ್ಲಿನ ನಾಲ್ಕು ಗಾಲಿಗಳನ್ನು ಹೊಸ ರಥಕ್ಕೆ ಅಳವಡಿಸಿದ್ದಾರೆ, ಬೇಲದ ಮರದಿಂದ ಅಚ್ಚುಗಳನ್ನು, ಬೇವು ಹಾಗೂ ಜಾಲಿ ಮರದಿಂದ ಕಂಬಗಳು, ಪೀಠ, ತೊಲೆ, ಪಟ್ಟಿಗಳು, ಶಿಲ್ಪಗಳನ್ನು, ಕುಸುರಿ ಕೆತ್ತನೆಯನ್ನು ಮಾಡಿದ್ದಾರೆ, ಅಚ್ಚಿನ ಮೇಲೆ ಹಾಕಿರುವ ನಾಲ್ಕು ಅಡ್ಡ ತೊಲೆಗಳ ತುದಿಗಳಲ್ಲಿ ಆನೆಗಳನ್ನು ಮಾಡಿದ್ದಾರೆ, ಇದರ ಮೇಲಿನ ಪಟ್ಟಿಯಲ್ಲಿ ಕುಸರಿ ಕೆತ್ತನೆ ಇದೆ, ಶಿಲ್ಪಗಳನ್ನು ಮಾಡಿರುವ ಅಂತಸ್ತಿನ ನಾಲ್ಕು ಮೂಲೆಗಳಲ್ಲಿ ಸಾಧಾರಣ ಕೆತ್ತನೆಯ ಕುದುರೆಗಳು ಹಿಂಬದಿಯ ಎರಡು ಕಾಲಿನಲ್ಲಿ ನಿಂತುಮುಂದಿನ ಎರಡು ಕಾಲುಗಳನ್ನು ಮೇಲಕ್ಕೆ ಎತ್ತಿವೆ, ಅಚ್ಚಿನ ಅಡ್ಡ ಪಟ್ಟಿಗಳ ಮೇಲೆ ಇರುವ ತೊಲೆಯಲ್ಲಿ ಆನೆಗಳ ಸಾಲು ಇದ್ದು ಇದರ ಮೇಲಿನ ಅಂತಸ್ತಿನ ನಾಲ್ಕು ಕಡೆಗಳಲ್ಲಿ ಎರಡು ಕಂಬಗಳ ಮಧ್ಯದಲ್ಲಿ ಒಂದು ಶಿಲ್ಪಗಳಂತೆ ಒಟ್ಟು 12ಮೂರ್ತಿಗಳಿವೆ, ಕಾಗೆಯ ವಾಹನದ ಜೊತೆಗೆ ಶನಿಮಹದೇವ, ಇಲಿಯ ಜೊತೆ ಗಣಪತಿ, ಹುಲಿಯ ಜೊತೆ ದೇವಿ, ಸಿಂಹದ ಜೊತೆ ದೇವಿ, ಇಂದ್ರ, ಬ್ರಹ್ಮ, ಮಹೇಶ್ವರ, ನಾಗದೇವ, ಕುಬೇರ, ನಗ್ನ ಶಿಲ್ಪಗಳಿವೆ, ಇವುಗಳ ಮೇಲಿನ ಅಂತಸ್ತಿನಲ್ಲಿ ಶಿವಲಿಂಗದ ಮುಂದೆ ಮಲಗಿರುವ ಜೋಡಿ ನಂದಿಗಳು, ನವಿಲುಗಳು, ಸಿಂಹ ಹಾಗೂ ಹುಲಿ, ಹಂಸ ಹಾಗೂ ಹೂವು ಮತ್ತು ಎಲೆ ಬಳ್ಳಿಯ ಕೆತ್ತನೆ ಇದೆ, ರಥದಲ್ಲಿ ಅಲ್ಲಲ್ಲಿ ಇರುವ ಪಟ್ಟಿಗಳಲ್ಲಿ ಕುಸುರಿ ಕೆತ್ತನೆ ಇದೆ, ಎಲ್ಲಾ ಶಿಲ್ಪಗಳು ಸೂಕ್ಷ್ಮ ಕೆತ್ತನೆಯಿಂದ ನೋಡುಗರ ಮನಸ್ಸನ್ನು ತನ್ನತ್ತ ಸೆಳೆಯುವಲ್ಲಿ ಸಫಲವಾಗಿವೆ, ನಾಲ್ಕು ಅಡಿಯ ಗಾಲಿಗಳು, ಮರದ ಕೆತ್ತನೆಯ ಭಾಗ, ಪೀಠ ಸೇರಿ 21ಅಡಿ, ಕಬ್ಬಿಣದ ಸಲಾಕೆಗಳಿಂದ ಮಾಡಿದ ಡೂಮು 11ಅಡಿ, ಕಳಸ 2ಅಡಿ, ರಥದ ಒಟ್ಟು ಎತ್ತರ 38ಅಡಿ ಇದೆ, ರಥದ ಒಟ್ಟು ಖರ್ಚು 9ಲಕ್ಷ ರೂಗಳಾಗಿದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸುತ್ತಲ ಹಳ್ಳಿಗಳಿಂದಲೂ ಭಕ್ತಾದಿಗಳು ಬರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ ಮೊದಲ ದಿನ ಗಂಗಾ ಪೂಜೆ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ.

ರಥಕ್ಕೆ ಎಡೆ ಪೂಜೆ ಮುಗಿದ ತರುವಾಯ ರಥವು ಪಾದಗಟ್ಟೆಯವರೆಗೆ ಹೋಗಿ ವಾಪಾಸ್ಸು ಬರುತ್ತದೆ, ರಥದ ಮುಂದೆ ವಿವಿಧ ವಾದ್ಯಗಳು, ಹಲವು ಬಗೆಯ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಎಂ. ಪರ್ವತಯ್ಯ S/O ಮುದಿಯಪ್ಪ ----- ಗ್ರಾಮಸ್ಥರು, ಮೊ:9535970544

2). ಜಿ.ಪಿ. ಮ್ಯಾಕಲಯ್ಯ S/O ಪರ್ವತಯ್ಯ ------ ಗ್ರಾಮಸ್ಥರು

2). ಎಂ. ಮಲ್ಲೇಶಿ S/O ಸಣ್ಣ ಮಲ್ಲಯ್ಯ ------- ಗ್ರಾಮಸ್ಥರು

3). ತಿಪ್ಪಯ್ಯ S/O ಕರೇ ಬೊಮ್ಮಯ್ಯ ------- ಗ್ರಾಮಸ್ಥರು

4). ಓ. ತಿಪ್ಪೇಸ್ವಾಮಿ S/O ಸಿದ್ದಪ್ಪ ------- ಗ್ರಾಮಸ್ಥರು

5). ಮಂಜುನಾಥ S/O ಓಬಯ್ಯ ------- ಗ್ರಾಮಸ್ಥರು

21). ಹಿರೇಹಳ್ಳಿ, ಚಿಂತಾಮಣೇಶ್ವರನ ರಥ:

ಈ ಪ್ರದೇಶದಲ್ಲಿ ಸುತ್ತಮುತ್ತಲ ಹಳ್ಳಿಗಳಿಗಿಂತ ಮೊದಲಿಗೆ ಹುಟ್ಟಿಕೊಂಡ ಊರೇ ಹಿರೇಹಳ್ಳಿ, ಈ ಊರಿಗೆ ಮುನ್ನ ಯಾವುದೇ ಹಳ್ಳಿಗಳು ಈ ಪ್ರದೇಶದಲ್ಲಿ ಇರಲಿಲ್ಲ ಈ ಊರಿನ ನಂತರವಷ್ಟೆ ಇಲ್ಲಿ ಇತರೆ ಊರುಗಳು ಹುಟ್ಟಿಕೊಂಡವು, ಸುತ್ತಲ ಹಳ್ಳಿಗಳಿಗೆ ಪ್ರಥಮವಾಗಿ ಹುಟ್ಟಿಕೊಂಡ ಹಳ್ಳಿಯಾದ್ದರಿಂದ ಹಿರೇಹಳ್ಳಿ ಹೆಸರು ಬಂದಿದೆ ಎಂಬುದು ಊರಿನವರ ಅಭಿಪ್ರಾಯ.

ಗ್ರಾಮದಲ್ಲಿ ದೊಡ್ಡಸೂರನಾಯಕ, ಚಿಂತಾಮಣೇಶ್ವರ, ಮಾರಮ್ಮ, ಆಂಜನೇಯ, ಕೊಲ್ಲಾರಮ್ಮ, ಮೈಲಾರಲಿಂಗೇಶ್ವರ ದೇವಸ್ಥಾನಗಳಿವೆ, ಪ್ರತಿ ವರ್ಷ ದೊಡ್ಡ ಸೂರನಾಯಕನ ಜಾತ್ರೆ ನಡೆಯುತ್ತದೆ, ಚಿಂತಾಮಣೇಶ್ವರಸ್ವಾಮಿ ರಥೋತ್ಸವದಂದು ದೇವರಿಗೆ ಬಾಳೆಹಣ್ಣು, ತೆಂಗಿನಕಾಯಿಗಳನ್ನು ಅರ್ಪಿಸುತ್ತಾರೆ, ಪಲ್ಲಕ್ಕಿ ಉತ್ಸವವೂ ನಡೆಯುತ್ತದೆ, ಮಾರಮ್ಮದೇವಿಗೆ ಹರಕೆ, ಬಲಿ ಪದ್ಧತಿಗಳು ನಡೆಯುತ್ತವೆ, ಪೀರ್ಲದೇವರ ಹಬ್ಬದಂದು ಕೋಡಹಾಯುವ ಕಾರ್ಯಕ್ಕೆ ಎಲ್ಲಾ ಸಮುದಾಯದವರು ಸೌಹಾರ್ದತೆಯಿಂದ ಪಾಲ್ಗೊಳ್ಳುತ್ತಾರೆ, ಶ್ರೀವೀರಭದ್ರಸ್ವಾಮಿ ಆಧ್ಯಾತ್ಮಿಕ ಆಶ್ರಮವಿದೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಚಿಂತಾಮಣೇಶ್ವರ ದೇವರ ರಥೋತ್ಸವವು ಪ್ರತಿ ವರ್ಷ ಶಿವರಾತ್ರಿ ಹಬ್ಬದ ಸಮಯದಲ್ಲಿ ನಡೆಯುತ್ತದೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಗಂಗಾಪೂಜೆ, ಜಾಗರಣೆ, ಎರಡನೇ ದಿನ ರಥೋತ್ಸವವನ್ನು ಮೂರನೇ ದಿನ ಪಲ್ಲಕ್ಕಿ ಉತ್ಸವ ನಂತರ ಓಕುಳಿ ಕಾರ್ಯ ನಡೆಸುತ್ತಾರೆ.

ರಥೋತ್ಸವದ ದಿನ ಬೆಳಿಗ್ಗೆ ದೇವರು ಗುಡಿಯಿಂದ ಹೊರಟು ಗಂಗಾ ಪೂಜೆಗೆ ಹೋಗುತ್ತದೆ, ನಂತರ ದೇವಸ್ಥಾನಕ್ಕೆ ಮರಳುತ್ತದೆ, ಅಂದು ರಾತ್ರಿ ಪೂರಾ ಜಾಗರಣೆ ನಡೆಯುತ್ತದೆ, ರಾತ್ರಿ ಪೂರಾ ಭಜನೆ ಹಾಗೂ ಇತರೆ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ಮರುದಿನ ಪಾದಗಟ್ಟೆಯವರೆವಿಗೂ ರಥವು ಹೋಗಿ ಅಲ್ಲಿ ವಿಶೇಷ ಪೂಜೆ ನಡೆದು ಮತ್ತೆ ಮರಳಿ ದೇವಸ್ಥಾನಕ್ಕೆ ಬರುತ್ತದೆ, ರಥೋತ್ಸವದ ಸಮಯದಲ್ಲಿ ರಥದ ಮುಂದೆ ವಿವಿಧ ವಾದ್ಯಗಳು, ಗೊಂಬೆ ಕುಣಿತಗಳು, ಡೋಲು, ಕರಡಿ ಮಜಲು, ನಂದಿಕೋಲು ಮುಂತಾದ ಕುಣಿತಗಳು ಇರುತ್ತವೆ.

ಚಿಕ್ಕದಾದ ಹಳೆಯ ರಥವಿದ್ದು ದೊಡ್ಡದಾದ ರಥವನ್ನು ಮಾಡಿಸಬೇಕೆಂದು ಗ್ರಾಮದ ಭಕ್ತರು, ಗ್ರಾಮಸ್ಥರು ಹೊಸ ರಥವನ್ನು 2014ರಲ್ಲಿ ಮಾಡಿಸಿದ್ದಾರೆ, ಚಿಕ್ಕದಾದ, ಸಾಧಾರಣ ಶೈಲಿಯ ಹಳೆ ರಥವೂ ಇದೆ, ಹರಪನಹಳ್ಳಿ ತಾಲ್ಲೂಕಿನ ನೀಲಕಂಠಾಚಾರ್ ಎನ್ನುವವರು 5ತಿಂಗಳುಗಳ ಕಾಲಮಿತಿಯಲ್ಲಿ ಈ ರಥವನ್ನು ಮಾಡಿದ್ದಾರೆ, ರಥವನ್ನು ಮಾಡಿರುವ ಶಿಲ್ಪಿಗಳಿಗೆ 5ಲಕ್ಷ ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಶಿಲ್ಪಿಗಳು ಬಹಳ ಸುಂದರವಾಗಿ ರಥವನ್ನು, ರಥದಲ್ಲಿ ಕುಸುರಿ ಕೆಲಸವನ್ನು, ಸುಂದರವಾದ ಶಿಲ್ಪಗಳನ್ನು ಮಾಡಿದ್ದಾರೆ, ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ನಾಲ್ಕು ತೊಲೆಗಳ ಕೊನೆಯಲ್ಲಿ ಸೊಂಡಿಲನ್ನು ಮೇಲಕ್ಕೆತ್ತಿ ನಿಂತಿರುವ ಆನೆಗಳು ಆಕರ್ಷಕವಾಗಿವೆ, ಅಚ್ಚಿನ ಮೇಲೆ ಮತ್ತು ಅದರ ಮೇಲೆ ಇರುವ ಅಡ್ಡ ಪಟ್ಟಿಯಲ್ಲಿ ನಗ್ನ ಹಾಗೂ ಕುಸುರಿ ಕೆತ್ತನೆ ಕಲಾ ರಸಿಕರ ಮನ ಗೆಲ್ಲುತ್ತವೆ, ರಥದಲ್ಲಿ ಅಲ್ಲಲ್ಲಿ ಇರುವ ಪಟ್ಟಿಗಳಲ್ಲಿ ಎಲೆಬಳ್ಳಿ ಕುಸುರಿ ಕೆತ್ತನೆ ಇದೆ, ಮೊದಲ ಅಂತಸ್ತಿನಲ್ಲಿ ನಾಲ್ಕೂಕಡೆ ಶಿವಲಿಂಗಗಳು, ಶಿವಲಿಂಗದ ಮುಂದೆ ಅಕ್ಕಪಕ್ಕದಲ್ಲಿ ಒಂದು ಕಡೆ ಹಂಸ, ಇನ್ನೊಂದು ಕಡೆ ನವಿಲು, ಗಿಳಿ, ನಂದಿಗಳಿವೆ, ಮೂಲೆಗಳಲ್ಲಿ ರೋಲಿಂಗ್ ಮಾಡಿದ ಕಂಬಗಳು, ಮೇಲಿನ ಅಂತಸ್ತಿನ ಸಿಂಹಾಸನದಲ್ಲಿ ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡಿರುವ ಪ್ರಭಾವಳಿ ಸಹಿತ ಶಿವನ ಮೂರ್ತಿಯು ನಯನ ಮನೋಹರವಾಗಿದೆ, ನಾಗದೇವನ ಜೊತೆಗೆ ಕೈಮುಗಿದು ನಿಂತಿರುವ ಸೇವಕ, ಪಾದಕ್ಕೆ ಪುಷ್ಪ ಅರ್ಪಿಸುತ್ತಿರುವ ಸೇವಕಿ, ನಂದಿ ಹಾಗೂ ಸಿಂಹದ ಜೊತೆಗೆ ಇರುವ ಅರ್ದನಾರೀಶ್ವರ, ದೇವಿ, ಗಣೇಶ, ಲಕ್ಷ್ಮಿ, ಸರಸ್ವತಿ, ಚಿಂತಾಮಣೇಶ್ವರ, ದೇವಿಯ ವಿವಿಧ ರೂಪಗಳು ಇದ್ದು ಒಂದು ಮೂರ್ತಿಯ ನಂತರ ಒಂದರಂತೆ ಕಂಬವನ್ನು ಅಳವಡಿಸಲಾಗಿದೆ, ಮೂಲೆಯಲ್ಲಿ ಹಿಂದಿನ ಎರಡು ಕಾಲುಗಳನ್ನು ಕೆಳಗಡೆ ಊರಿನಿಂತು ಮುಂದಿನ ಎರಡು ಕಾಲುಗಳಲ್ಲಿ ಅರಳಿದ ದೊಡ್ಡದಾದ ಹೂವೊಂದನ್ನು ಹಿಡಿದುಕೊಂಡಿರುವ ಸಿಂಹದ ಕೆತ್ತನೆ ಆಕರ್ಷಣೀಯವಾಗಿದೆ, ಇದರ ಮೇಲಿನ ಎಂಟು ಮುಖದಲ್ಲಿ ನವಗ್ರಹಗಳು, ನವದುರ್ಗಿಯರು ಹಾಗೂ 12ರಾಶಿಗಳ ಅಧಿಪತಿಯರುಗಳ ಮೂರ್ತಿಗಳನ್ನು ಕೆತ್ತನೆ ಮಾಡಲಾಗಿದೆ, ಇದರ ನಂತರದ ಮೇಲಿನ ಅಂತಸ್ತು ದೇವರನ್ನು ಕೂರಿಸುವ ಪೀಠವಿದ್ದು, ಎರಡು ಇಂಚು ದಪ್ಪನೆಯ 16ರೋಲಿಂಗ್ ಮಾಡಿದ ಕಂಬಗಳಿವೆ, ಮೂಲೆಗಳಲ್ಲಿ ಮತ್ತು ಪ್ರತಿ ಅಂತಸ್ತಿನ ಮೇಲಿನ ಕಮಾನಿನಲ್ಲಿ ಕಂಚಿನ ಘಂಟೆಗಳನ್ನು ಹಾಕಿದ್ದು ರಥೋತ್ಸವದ ಸಮಯದಲ್ಲಿ ಈ ಗಂಟೆಗಳು ಇಂಪಾದ ಘಂಟಾನಾದ ಮಾಡುತ್ತವೆ.

ಗ್ರಾಮದ ಎಲ್ಲಾ ಕುಟುಂಬದವರು ಮನೆಗೆ ಇಂತಿಷ್ಟು ಹಣವನ್ನು, ಗ್ರಾಮದ ನೌಕರರು ತಮ್ಮ ಕೈಲಾದ ಹಣವನ್ನು ನೀಡಿದ್ದಾರೆ, ಒಟ್ಟು ರಥದ ಖರ್ಚು 22 ಲಕ್ಷ ರೂಗಳು, ರಥದ ನಿರ್ಮಾಣಕ್ಕೆ ತೇಗ, ಕರೇ ಜಾಲಿ ಹಾಗೂ ಮತ್ತಿ ಮರಗಳನ್ನು ಉಪಯೋಗಿಸಲಾಗಿದೆ, ಇದರಲ್ಲಿ ಕರೇ ಜಾಲಿಮರದಿಂದ ಗಾಲಿಗಳನ್ನೂ, ಮತ್ತಿ, ತೇಗದ ಮರಗಳಿಂದ ಅಚ್ಚು, ತೊಲೆಗಳು, ಕಂಬಗಳು, ಪಟ್ಟಿಗಳು, ಪೀಠ, ಹಲಗೆಗಳು ಮತ್ತು ಶಿಲ್ಪಗಳನ್ನು ಮಾಡಿದ್ದು, ರಥದಲ್ಲಿ ಒಟ್ಟು 108ಶಿಲ್ಪಗಳನ್ನು ಮಾಡಲಾಗಿದೆ, ಅಷ್ಟಲಿಂಗಗಳು, ಚಿಂತಾಮಣೇಶ್ವರನ ಬೃಹತ್ ಲಿಂಗ, ನವಗ್ರಹಗಳು, ವೀರಭದ್ರಸ್ವಾಮಿ, ನಾಯಕನಹಟ್ಟಿ ತಿಪ್ಪೇರುದ್ರಸ್ವಮಿ, ಎಡೆಯೂರು ಸಿದ್ಧಲಿಂಗೇಶ್ವರ, ಆಂಜನೇಯ, ಗಣಪತಿ, ಲಕ್ಷ್ಮಿ, ಸರಸ್ವತಿ, ವಿಶ್ವಕರ್ಮ ಶಿಲ್ಪ, ಬಸವಣ್ಣ, ನಂದಿ ಮುಂತಾದ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ.

ನಾಲ್ಕು ಅಡಿಯ ಗಾಲಿಗಳು, ಕೆತ್ತನೆಯನ್ನು ಒಳಗೊಂಡ ಮರದಿಂದ ಮಾಡಿದ ಭಾಗ 18ಅಡಿ, 5ಸ್ಟೆಪ್‌ನ ಕಬ್ಬಿಣದ ಪಟ್ಟಿಗಳಿಂದ ಮಾಡಿದ ಡೂಮು ಐದೂವರೆ ಅಡಿ, ಕಳಸ ಮೂರೂವರೆ ಅಡಿ ಒಟ್ಟು 33ಅಡಿ ಎತ್ತರದ ರಥ ಇದಾಗಿದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಆರ್.ಎಂ. ತಿಪ್ಪೇಸ್ವಾಮಿ S/O ಮಲ್ಲಪ್ಪ ಮೊ: 9448963987

2). ನಾಗರಾಜ್ S/O ಅಜ್ಜಣ್ಣ.

22). ಮನ್ನೇಕೋಟೆ, ರೇವಣಸಿದ್ದೇಶ್ವರನ ರಥ:

ಚಿತ್ರದುರ್ಗದ ಮದಕರಿ ನಾಯಕ ದೊರೆಗಳ ಆಳ್ವಿಕೆಗೆ ಸೇರಿದ ಈ ಗ್ರಾಮವನ್ನು ತಂಗಿಯಾಗಿದ್ದ ಮಲ್ಲಮ್ಮನಿಗೆ ಮಾನ್ಯವಾಗಿ(ದತ್ತಿಯಾಗಿ) ಕೊಟ್ಟಿದ್ದರು, ಕೋಟೆ ಇದ್ದ ಗ್ರಾಮವನ್ನು ತಂಗಿಗೆ ಮಾನ್ಯಕೊಟ್ಟ ಕೋಟೆ ಗ್ರಾಮವು ಮಾನ್ಯಕೋಟೆ ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಿದ್ದು ಕ್ರಮೇಣ ಮನ್ನೇಕೋಟೆಯಾಗಿದೆ.

ಗ್ರಾಮದೊಳಗೆ ಓಬಳದೇವರು, ರೇವಣಸಿದ್ದೇಶ್ವರ, ಬುರುಜುಮಾರಮ್ಮ, ಆಂಜನೇಯ, ಕೊಂಡಮಾರಮ್ಮ, ಬಟ್ಟಲ ಮಾರಮ್ಮ, ದುರುಗಮ್ಮ, ಮೈಲಾರಲಿಂಗೇಶ್ವರ ದೇವಾಲಯಗಳಿವೆ, ಊರಿನ ಹೊರಗೆ ತೊರೆದಂಡೆ ಬಸವಣ್ಣನ ದೇವಸ್ಥಾನ, ಮೂಗಬಸಪ್ಪ ದೇವಾಲಯ, ಪಾಂಡವರ ಗುಟ್ಟೆ ಇದೆ.

ಪ್ರತಿ ವರ್ಷ ಪೆಬ್ರವರಿಯಲ್ಲಿ ಓಬಳದೇವರ ಹಬ್ಬ, ರೇವಣ್ಣಸಿದ್ದೇಶ್ವರ ಜಾತ್ರೆ ವಿಶೇಷವಾಗಿ ನಡೆಯುತ್ತವೆ, ಮಾರಮ್ಮದೇವಿಗೆ ಜಾತ್ರಾ ಸಮಯದಲ್ಲಿ ಬಲಿ ಹರಕೆ ಪದ್ಧತಿಗಳುನಡೆಯುತ್ತವೆ, ಕ್ರೈಸ್ತರ ಚರ್ಚೂ ಇದೆ,

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ :

ಗ್ರಾಮದಲ್ಲಿ ನೆಲೆಸಿರುವ ರೇವಣಸಿದ್ದೇಶ್ವರನ ರಥೋತ್ಸವವು ಕಾರ್ತಿಕ ಮಾಸದ ಸಮಯದಲ್ಲಿ ನಡೆಯುತ್ತದೆ, ಊರ ಮುಂದಿನ ಜಾಗದಿಂದ ರಥೋತ್ಸವವು ಆರಂಭವಾಗಿ ಪಾದಗಟ್ಟೆಯವರೆವಿಗೂ ಹೋಗಿ ಬರುತ್ತದೆ, ಈ ರಥವನ್ನು ಮನುಷ್ಯರ ಬದಲು ಎತ್ತುಗಳಿಂದ ಮುನ್ನಡೆಸುತ್ತಾರೆ, ಯಾಕೆಂದರೆ ಇದು ಅತ್ಯಂತ ಚಿಕ್ಕ ರಥವಾಗಿದ್ದು, ಎತ್ತಿನ ಗಾಡಿಯ ರಿತಿಯೇ ಇದೆ, ಇದರ ಗಾಲಿಗಳೂ ಸಹ ಎತ್ತಿನ ಬಂಡಿಯ ಗಾಲಿಗಳ ರೂಪದಲ್ಲಿವೆ, ಸದರಿ ಗ್ರಾಮದ ಸಂಪ್ರದಾಯ ಶಿಲ್ಪಿಗಳು ಈ ತೇರನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ 8,000-00(ಎಂಟು ಸಾವಿರ)ರೂಗಳ ಸಂಭಾವನೆಯನ್ನು ಕೊಟ್ಟಿದ್ದಾರೆ.

ಸಾಧಾರಣ ಶೈಲಿಯಲ್ಲಿ ತೇರು ಇದ್ದು ಮೂರು ಅಡಿ ಎತ್ತರದ ನಾಲ್ಕು ಕಲ್ಲಿನ ಗಾಲಿಯ ಮೇಲೆ ಅಚ್ಚನ್ನು ಹಾಕಿ ಅದರ ಮೇಲೆ ನಾಲ್ಕು ಅಡಿ ಎತ್ತರದ ಚೌಕಾಕಾರದ ಪೆಟ್ಟಿಗೆಯನ್ನು ಮಾಡಿದ್ದಾರೆ, ಈ ಪೆಟ್ಟಿಗೆಯ ನಾಲ್ಕು ಕಡೆಗಳಲ್ಲಿ ಒಂದು ಅಡಿ ವ್ಯಾಸದ ಹಲಗೆಯಲ್ಲಿ ಗಣೇಶ ಹಾಗೂ ಮೂರು ಚಕ್ರಗಳನ್ನು ಮಾಡಿದ್ದಾರೆ, ಗಣೇಶನ ಕೆತ್ತನೆ ಇರುವ ಹಲಗೆಯನ್ನು ಮುಂಭಾಗ, ಚಕ್ರಗಳನ್ನು ಮೂರೂ ಕಡೆಗಳಲ್ಲಿ ಅಳವಡಿಸಿದ್ದಾರೆ, ಈ ಪೆಟ್ಟಿಗೆಯ ಮೇಲೆ ದೇವರನ್ನು ಕೂರಿಸುವ ಪೀಠವಿದ್ದು ಇದಕ್ಕೆ ನಾಲ್ಕು ಚೌಕಾಕಾರದ ಸಾಧಾರಣ ಕಂಬಗಳಿವೆ, ಇದರ ಮೇಲೆ ಮರದ ಪಟ್ಟಿಗಳಿಂದ(ರಿಪೀಸುಗಳು) ಮಾಡಿದ ಡೂಮು ಇದ್ದು ಇದರ ಮೇಲೆ ಕಂಚಿನ ಕಳಸ ಇರುತ್ತದೆ, ರಥೋತ್ಸವದ ಸಮಯದಲ್ಲಿ ಬಣ್ಣದ ಪಟಗಳಿಂದ, ಇತರೆ ಆಕರ್ಷಕ ವಸ್ತುಗಳಿಂದ ಮತ್ತು ತರ ತರದ ಹೂವುಗಳಿಂದ ರಥಕ್ಕೆ ಅಲಂಕಾರ ಮಾಡುತ್ತಾರೆ, ಈ ರಥವನ್ನು 2007ರಲ್ಲಿ ಮಾಡಿಸಿದ್ದು ತೇರಿನ ನಿರ್ಮಾಣಕ್ಕೆ ಬೇಕಾದ ಮರಗಳನ್ನು ಭಕ್ತಾದಿಗಳು ದಾನವಾಗಿ ಕೊಟ್ಟಿದ್ದಾರೆ, ಮೂರು ದಿನಗಳು ನಡೆಯುವ ರಥೋತ್ಸವಕ್ಕೆ ಮೊದಲ ದಿನ ಗಂಗಾ ಪೂಜೆ, ತೇರಿನ ಅಲಂಕಾರ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ, ರಥೋತ್ಸವಕ್ಕೆ ಬಹಳಷ್ಟು ಜನ ಸೇರುತ್ತಾರೆ, ಈ ಸಮಯದಲ್ಲಿ ನಂದಿಕೋಲು, ಕರಡಿ ಮಜಲು ಹಾಗೂ ವಿವಿಧ ವಾದ್ಯಗಳು ಇರುತ್ತವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪೇಸ್ವಾಮಿ – ಸದರಿ ಗ್ರಾಮದವರು

2). ರೇವಣಸಿದ್ದಪ್ಪ – ಸದರಿ ಗ್ರಾಮದವರು

3). ಓಬಣ್ಣ – ಸದರಿ ಗ್ರಾಮದವರು

23). ತಳಕು, ವೀರಭದ್ರಸ್ವಾಮಿ ದೇವರ ರಥ:

ಪಾಳೆಯಗಾರರ ಆಳ್ವಿಕೆಯಲ್ಲಿ ಊರಿಗೆ ತಳಕು ಎಂಬ ಹೆಸರು ಬಂದಿರುವುದಾಗಿದೆ, ಗ್ರಾಮದಲ್ಲಿ ವೀರಭದ್ರಸ್ವಾಮಿ, ಆಂಜನೇಯ, ಪೀರ್ಲದೇವರು, ಈಶ್ವರ, ದುರ್ಗಾಪರಮೇಶ್ವರಿ, ಮಾರಮ್ಮ, ದೇವರುಗಳಿವೆ, ವೀರಭದ್ರಸ್ವಾಮಿ ಜಾತ್ರೆಯನ್ನು ಎಲ್ಲಾ ಸಮುದಾಯದವರು ಸೇರಿ ಆಚರಿಸುತ್ತಾರೆ, ತೇರು ಹಾಗೂ ಪಲ್ಲಕ್ಕಿ ಇದ್ದು, ಕಾರ್ತಿಕ ಮಾಸದಲ್ಲಿ ಆಂಜನೇಯನ ಕಾರ್ತಿಕೋತ್ಸವವನ್ನು ಆಚರಿಸುತ್ತಾರೆ, ಪೀರ್ಲದೇವರ ಹಬ್ಬದಂದು ಊರಿನವರು ಕೊಂಡ ಆಚರಣೆ ಮಾಡುತ್ತಾರೆ. ದುರ್ಗಾಪರಮೇಶ್ವರಿ, ಮಾರಮ್ಮನ ಹಬ್ಬದಂದು ಬಲಿ, ಹರಕೆ ಪದ್ಧತಿಗಳು ನಡೆಯುತ್ತವೆ, ಮುಸ್ಲಿಂ ಸಮುದಾಯದವರ ದರ್ಗಾ ಇದೆ, ರಾಷ್ಟ್ರಕವಿ ಕುವೆಂಪುರವರ ಗುರುಗಳಾದ ವೆಂಕಣ್ಣಯ್ಯರವರು ಪ್ರಗತಿಶೀಲ ಕಾದಂಬರಿಕಾರರಾದ ತ.ರಾ.ಸು., ತ.ಸು.ಶ್ಯಾಮರಾಯರು ಈ ಗ್ರಾಮದವರು.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಗ್ರಾಮದಲ್ಲಿ ನೆಲೆಸಿರುವ ಪ್ರಾಚೀನ ದೇವರಾದ ವೀರಭದ್ರಸ್ವಾಮಿಗೆ ಪ್ರತಿವರ್ಷ ಮಾರ್ಗಶಿರ ಮಾಸದಲ್ಲಿ ರಥೋತ್ಸವವು ನಡೆಯುತ್ತದೆ, ನಾಲ್ಕು ದಿನಗಳು ನಡೆಯುವ ಈ ರಥೋತ್ಸವದಲ್ಲಿ ಮೊದಲ ದಿನ ಅಭಿಷೇಕ, ವಿಶೇಷ ಪೂಜೆ, ಎರಡನೇ ದಿನ ಅಗ್ನಿಕುಂಡ, ರಥೋತ್ಸವ ಹಾಗೂ ಅನ್ನಸಂತರ್ಪಣೆ, ಮೂರನೇ ದಿನ ಹೂವಿನ ಪಲ್ಲಕ್ಕಿ ಉತ್ಸವ, ನಾಲ್ಕನೇ ದಿನ ಓಕುಳಿ ಹಾಗೂ ಮಹಾಮಂಗಳಾರುತಿ ನಡೆಯುತ್ತವೆ, ಈ ದೇವರ ಹಳೆಯ ರಥವಿದ್ದು ಅದು ಸಂಪೂರ್ಣವಾಗಿ ಶಿಥಿಲವಾಗಿದ್ದರಿಂದ ಹೊಸ ರಥವನ್ನು 1994ರಲ್ಲಿ ಮಾಡಿಸಿದ್ದಾರೆ, ಸಂಪ್ರದಾಯ ಶಿಲ್ಪಿಗಳಾದ ಚಳ್ಳಕೆರೆ ನಗರದ ಗಿರೀಶಾಚಾರ್‌ರವರು ರಥವನ್ನು ಮಾಡಿದ್ದಾರೆ, ತಳಕು ಗ್ರಾಮದ ಪ್ರತಿಕುಟುಂಬಗಳಿಂದ, ಸರ್ಕಾರಿ ನೌಕರರಿಂದ, ವ್ಯಾಪಾರಗಾರರಿಂದ ಮತ್ತು ಇತರೆ ದಾನಿಗಳಿಂದ ಹಣವನ್ನು ಸಂಗ್ರಹಿಸಿ ಹೊಸ ರಥವನ್ನು ಮಾಡಿಸಿದ್ದಾರೆ.

ರಥಕ್ಕೆ ಕರೇ ಮೂತಿಜಾಲಿ ಮತ್ತು ತೇಗದ ಮರಗಳನ್ನು ಬಳಸಲಾಗಿದ್ದು ಮರಗಳನ್ನು ಸಾಮಿಲ್‌ನಲ್ಲಿ ಖರೀದಿ ಮಾಡಲಾಗಿದೆ, ಹೊಸ ರಥದ ಕೆತ್ತನೆಯನ್ನು ಶಿಲ್ಪಿಯು 8ತಿಂಗಳುಗಳ ಕಾಲ ಮಾಡಿದ್ದಾರೆ, ಜಾಲಿ ಮರದಿಂದ ಗಾಲಿಗಳನ್ನು, ಬೇವು ಹಾಗೂ ತೇಗದ ಮರದಿಂದ ತೊಲೆ, ಕಂಬಗಳು, ಪೀಠ, ಪಟ್ಟಿಗಳು, ಶಿಲ್ಪಗಳು ಹಾಗೂ ಕುಸುರಿ ಕೆತ್ತನೆಯನ್ನು ಮಾಡಿದ್ದಾರೆ, ಮರದ ಗಾಲಿಗಳ ಮೇಲೆ ಹಾಕಿರುವ ಅಚ್ಚಿನ ಮೇಲೆ ಯಾವುದೇ ಕೆತ್ತನೆ ಇಲ್ಲ, ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ತೊಲೆಗಳ ತುದಿಗಳಲ್ಲಿ ಆನೆಗಳ ಸಾಧಾರಣ ಶೈಲಿಯ ಕೆತ್ತನೆ ಇದೆ, ಇದರ ನಂತರದ ಅಡ್ಡ ಪಟ್ಟಿಯಲ್ಲಿ ಕೆತ್ತನೆ ಇರುವುದಿಲ್ಲ, ಇದರ ಮೇಲೆ ಇರುವ ಭಾಗದಲ್ಲಿ ಬರೀ ಕಂಬಗಳು ಹಾಗೂ ಕಮಾನು ಇದೆ, ಇದರ ಮೇಲಿನ ಭಾಗದಲ್ಲಿ ಕಂಬಗಳು ಮಧ್ಯದಲ್ಲಿ ಮಾತ್ರ ಒಂದು ಕಡೆ ಒಂದು ಉಬ್ಬು ಚಿತ್ರದ ಕೆತ್ತನೆಯಂತೆ ನಾಲ್ಕು ಕಡೆ ಸೇರಿ ನಾಲ್ಕು ಉಬ್ಬು ಚಿತ್ರಗಳಿವೆ, ವೀರಭದ್ರ ದೇವನ ಅವತಾರ, ಗಣಪತಿ, ಷಣ್ಮುಖ, ಶಿವ ಪಾರ್ವತಿ, ಶಿವಲಿಂಗ ಆಂಜನೇಯ, ತಿಪ್ಪೇರುದ್ರಸ್ವಾಮಿಯ ಉಬ್ಬು ಚಿತ್ರಗಳನ್ನು ಕೆತ್ತನೆ ಮಾಡಿದ್ದಾರೆ, ಮೂರು ಭಾಗಕ್ಕೆ ತೋರಣದ ಹಲಗೆಯ ಪಟ್ಟಿ ಇದೆ, ನಂತರದಲ್ಲಿ ದೇವರನ್ನು ಕೂರಿಸುವ ಪೀಠವು ಚೌಕದ ರಿಪೀಸುಗಳಿಂದ ನಿರ್ಮಾಣ ಮಾಡಲಾಗಿದೆ, ರಥೋತ್ಸವದ ಸಮಯದಲ್ಲಿ ಬಣ್ಣ ಬಣ್ಣದ ಬಟ್ಟೆಗಳು, ಪಟಗಳು, ಬಾವುಟಗಳು ಹಾಗೂ ತರ ತರದ ಹೂವುಗಳಿಂದ ಅಲಂಕಾರ ಮಾಡುತ್ತಾರೆ, ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಆರು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸುತ್ತಲ ಹಳ್ಳಿಗಳಿಂದಲೂ ಭಕ್ತಾದಿಗಳು ಬರುತ್ತಾರೆ, ರಥಕ್ಕೆ ಎಡೆ ಪೂಜೆ ಆದ ನಂತರ ಪಾದಗಟ್ಟೆಯವರೆಗೆ ಹೋಗಿ

ವಾಪಾಸ್ಸು ಬರುತ್ತದೆ, ರಥದ ಮುಂದೆ ವಿವಿಧ ವಾದ್ಯಗಳು, ಕರಡಿ ಚಾಮಾಳ, ನಂದಿಕೋಲು ಕುಣಿತ ಹಾಗೂ ಹಲವು ಬಗೆಯ ಕುಣಿತ ಇರುತ್ತದೆ.

ಒಟ್ಟು ರಥದ ಎತ್ತರ 21ಅಡಿ, 3ಅಡಿಯ ನಾಲ್ಕು ಮರದ ಗಾಲಿಗಳು, ಅಚ್ಚು, ತೊಲೆ, ಪಟ್ಟಿಗಳು, ಕಂಬಗಳು, ಪೀಠ ಇದರ ಒಟ್ಟು ಅಳತೆ ಸೇರಿ 12ಅಡಿ, ಇದರ ಮೇಲೆ 4ಅಡಿಯ ಕಬ್ಬಿಣದ ಪಟ್ಟಿಗಳಿಂದ ಮಾಡಿರುವ ಡೂಮನ್ನು ಇಡುತ್ತಾರೆ, ಈ ಡೂಮಿನ ಮೇಲೆ 2ಅಡಿಯ ಕಳಸ ಇರುತ್ತದೆ, ರಥವನ್ನು ಮಾಡಿರುವ ಶಿಲ್ಪಿಗಳಿಗೆ 28,000-00(ಇಪ್ಪತ್ತೆಂಟು ಸಾವಿರ)ರೂಗಳ ಸಂಭಾವನೆಯನ್ನು ಕೊಟ್ಟಿದ್ದು, ಒಟ್ಟು ರಥದ ಖರ್ಚು 1,40,000-00(ಒಂದು ಲಕ್ಷದ ನಲವತ್ತು ಸಾವಿರ)ರೂಗಳಾಗಿದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಓ.ಎಸ್.ವಿರುಪಾಕ್ಷಪ್ಪ S/O ವೀರಭದ್ರಪ್ಪ ----- ಗ್ರಾಮಸ್ಥರು,

2). ಶಿವಾನಂದಯ್ಯ S/O ರುದ್ರಪ್ಪ ----- ಗ್ರಾಮಸ್ಥರು

2). ಬಸವರಾಜ್ S/O ವೀರಭದ್ರಯ್ಯ ------ ಪ್ರಜಾರ್, ಮೊ: 8722762399.

24). ತಿಮ್ಮನಹಳ್ಳಿ(ತಿಮ್ಮಣ್ಣನ ಹಳ್ಳಿ), ಆಂಜನೆಯನ ರಥ:

ಪೂರ್ವದಲ್ಲಿ ಊರಿನ ಅಭಿವೃದ್ದಿಗಾಗಿ ಶ್ರಮಿಸಿದ ಪ್ರಮುಖ ವ್ಯಕ್ತಿ ತಿಮ್ಮಣ್ಣನಿಂದ ಈ ಹೆಸರು ಬಂದಿರುವಂತೆ ತೋರುತ್ತದೆ, ಊರಿನಲ್ಲಿ ಆಂಜನೇಯ, ಪೀರ್ಲ ದೇವರು, ಮಾರಮ್ಮ, ದೇಣುಮಾರಮ್ಮ, ದುರ್ಗಮ್ಮ, ಸೇವಾಲಾಲ್, ಬೋರೇ ದೇವರುಗಳಿವೆ, ಕಾರ್ತಿಕ ಮಾಸದಲ್ಲಿ ಆಂಜನೇಯನ ಕಾರ್ತಿಕೋತ್ಸವವನ್ನು ಎಲ್ಲಾ ಸಮುದಾಯದವರು ಸೇರಿ ಆಚರಣೆ ಮಾಡುತ್ತಾರೆ, ಆ ಸಮಯದಲ್ಲಿ ಪಲ್ಲಕ್ಕಿ ಉತ್ಸವ ಹಾಗೂ ತೇರು ಎಳೆಯುವ ಕಾರ್ಯ ನಡೆಯುತ್ತದೆ, ಪೀರ್ಲ ದೇವರು, ಮಾರಮ್ಮ, ದೇಣುಮಾರಮ್ಮ, ದುರ್ಗಮ್ಮ, ಸೇವಾಲಾಲ್, ಬೋರೆ ದೇವರುಗಳಿಗೆ ಬಲಿ, ಹರಕೆ, ಕೊಂಡ ಆಚರಣೆಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಗ್ರಾಮದಲ್ಲಿರುವ ಆಂಜನೇಯ ದೇವರಿಗೆ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ರಥೋತ್ಸವ ಹಾಗೂ ಕಾರ್ತಿಕೋತ್ಸವ ನಡೆಯುತ್ತದೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ದೇವರಿಗೆ ಅಭಿಷೇಕ, ತೇರಿಗೆ ಅಲಂಕಾರ, ಎರಡನೇ ದಿನ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ, ಸಾಧಾರಣ ಕೆತ್ತನೆಯ ತೇರು ಇದಾಗಿದೆ.

ರಥೋತ್ಸವದ ಸಮಯದಲ್ಲಿ ರಥಕ್ಕೆ ಬಣ್ಣ ಬಣ್ಣದ ಬಟ್ಟೆಗಳು, ಪಟಗಳು, ಬಾವುಟಗಳು ಹಾಗೂ ತರ ತರದ ಹೂವುಗಳಿಂದ ಅಲಂಕಾರ ಮಾಡುತ್ತಾರೆ, ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಒಂದು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ರಥಕ್ಕೆ ಬಲಿಬಾನ, ಎಡೆ ಹಾಕಿ ಪೂಜೆಮಾಡಿದ ನಂತರ ತೇರು ಪಾದಗಟ್ಟೆಯವರೆಗೆ ಹೋಗಿ ಬರುತ್ತದೆ, ರಥದ ಮುಂದೆ ವಿವಿಧ ವಾದ್ಯಗಳು, ಡೋಲು, ಭಜನೆ ಇರುತ್ತವೆ, ಒಟ್ಟು 20ಅಡಿ ಎತ್ತರ ಈ ರಥವಿದೆ.

25). ಭರಮ ಸಾಗರ, ಆಂಜನೇಯನ ರಥ(ಉಚ್ಚಯ):

ಚಳ್ಳಕೆರೆ ತಾಲ್ಲೂಕಿನ ಅತಿ ದೊಡ್ಡ ಸಾಗರದಂತಿರುವ ರಾಣಿಕೆರೆಯ ಸಮೀಪದಲ್ಲಿ ಊರು ಇದ್ದು, ಊರಿನಲ್ಲಿ ಭರಮಣ್ಣನಾಯಕನು ಗ್ರಾಮದಲ್ಲಿ ಅಭಿವೃದ್ದಿ ಕೆಲಸಗಳನ್ನು ಮಾಡಿದ್ದರಿಂದ ಈತನ ಕಾಲಾನಂತರದಲ್ಲಿ ಭರಮಣ್ಣನಾಯಕನಕೆರೆ, ಭರಮಣ್ಣನ ಸಾಗರ ಎಂದು ಕರೆದರು, ಕ್ರಮೇಣ ಭರಮಸಾಗರವಾಗಿರವಾಗಿದೆ ಎಂಬುದು ಊರಿನವರ ಅಭಿಪ್ರಾಯ, ಇನ್ನೊಂದು ಮಾಹಿತಿಯ ಪ್ರಕಾರ

ಚಿತ್ರದುರ್ಗದ ಪ್ರಸಿದ್ಧ ದೊರೆ ಭರಮಣ್ಣ ನಾಯಕರ ಆಳ್ವಿಕೆಗೆ ಸೇರಿದ ಈ ಹಳ್ಳಿಯು ಪೂರ್ವದಲ್ಲಿ ರಾಣೀಕೆರೆಯ ಸಮೀಪದಲ್ಲಿ ಇದ್ದು, ಕೆರೆಯಲ್ಲಿ ನೀರು ಹೆಚ್ಚಾದ ಸಮಯದಲ್ಲಿ ಊರಿಗೆ ಮತ್ತು ಊರಿನ ಜನರಿಗೆ ತೊಂದರೆಯಾಯಿತು, ಇದನ್ನು ಅರಿತ ಭರಮಣ್ಣರಾಜ ಊರನ್ನು ಸ್ಥಳಾಂತರಿಸಿ ಹೊಸದಾಗಿ ಮನೆಗಳನ್ನು ಜನರಿಗೆ ಕಟ್ಟಿಸಿಕೊಟ್ಟ ಕಾರಣದಿಂದ ಊರಿಗೆ ಈ ಹೆಸರು ಬಂದಿರುವುದಾಗಿ ಕಾಣುತ್ತದೆ.

ಊರಿನಲ್ಲಿ ಈಶ್ವರ, ಮಾರಮ್ಮ, ಹನುಮಂತರಾಯ, ಬಸವಣ್ಣ, ಕರಿಬಸವೇಶ್ವರ, ದುರುಗಮ್ಮ, ಮಲ್ಲಿಕಾರ್ಜುನ, ರಾಜಲುಸ್ವಾಮಿ, ಪರುವತ್‌ಮಲ್ಲಪ್ಪ, ಗೌರಸಮುದ್ರ ಮಾರಮ್ಮ, ಬೈಲಾಂಜನೇಯ ದೇವಾಲಯಗಳಿವೆ, ಈಶ್ವರ ದೇವರಿಗೆ ಪ್ರತಿ ಕಾರ್ತಿಕ ಮಾಸದಲ್ಲಿ ಪಲ್ಲಕ್ಕಿ ಉತ್ಸವ, ಹನುಮಂತರಾಯ ದೇವರಿಗೂ ಪಲ್ಲಕ್ಕಿ ಉತ್ಸವ ನಡೆಯುತ್ತದೆ, **ಕೆರೆಯ ದಡದಲ್ಲಿರುವ ಬೈಲಾಂಜನೇಯ ದೇವರಿಗೆ ಮಳೆಬಾರದ ಸಮಯದಲ್ಲಿ ಎಡಿಗೆ ಜಾತ್ರೆ ನಡೆಯುತ್ತದೆ,** ಪ್ರತಿ ಮನೆಯಿಂದಲೂ ಸಿಹಿ ಪದಾರ್ಥದ ಅಡುಗೆ ತಯಾರಿಸಿಕೊಂಡು ಕೆಲವು ವಾದ್ಯಗಳಿಂದ ಬಹಳಷ್ಟು ಜನ ಬೈಲಾಂಜನೇಯ ದೇವಾಲಯಕ್ಕೆ ಹೋಗಿ ಪೂಜೆ, ನೈವೇದ್ಯ ಮಾಡಿ ನಂತರ ಎಲ್ಲರೂ ಸಾಮೂಹಿಕವಾಗಿ ಊಟ ಮಾಡುತ್ತಾರೆ, ದುರುಗಮ್ಮ, ಗೌರಸಮುದ್ರ ಮಾರಮ್ಮ ದೇವರಿಗೆ ಪ್ರತಿ ವರ್ಷ ಆರತಿ, ಹರಕೆ, ಬಲಿ ಕಾರ್ಯ ನಡೆಯುತ್ತದೆ, ಪ್ರತಿ ಐದು ವರ್ಷಗಳಿಗೊಮ್ಮೆ ದೊಡ್ಡ ಜಾತ್ರೆ, ಪ್ರತಿ ವರ್ಷ ಚಿಕ್ಕ ಜಾತ್ರೆಯನ್ನು ಮಾರಮ್ಮ ದೇವರಿಗೆ ಮಾಡುತ್ತಾರೆ.

ವಿಶೇಶ: ಎಡಿಗೆ ಜಾತ್ರೆ ಎಂದರೆ ಪ್ರತಿ ಮನೆಯಿಂದಲೂ ಹೋಳಿಗೆ, ಕಡುಬು, ಪಾಯಸ ಮುಂತಾದ ಅಡುಗೆ ಮಾಡಿ ಊರಿನ ಮುಂದೆ ದೊಡ್ಡದಾದ ಎಡಿಗೆ ಅಥವಾ ದೊಡ್ಡ ಪುಟ್ಟಿ(ಜಲ್ಲೆ)ಯಲ್ಲಿ ತಂದು ಇಡುತ್ತಾರೆ, ನಂತರ ಊರಾಚೆಯ ದೇವಸ್ಥಾನಕ್ಕೆ ಈ ಎಡೆಯನ್ನು ತೆಗೆದುಕೊಂಡು ಹೋಗಿ ದೇವರಿಗೆ ನೈವೇದ್ಯ ಮಾಡಿ ಸಾಮೂಹಿಕವಾಗಿ ಎಲ್ಲರೂ ತಿನ್ನುತ್ತಾರೆ, ನಂತರ ಮಳೆ ಬರುವಂತಾಗಲಿ ಎಂದು ಜೋರಾಗಿ ಕೂಗಿಕೊಳ್ಳುತ್ತಾ ಊರೊಳಗೆ ಓಡೋಡಿ ಬರುತ್ತಾರೆ, ಇದಕ್ಕೆ ಎಡಿಗೆ ಜಾತ್ರೆ ಎನ್ನುತ್ತಾರೆ, ಈ ಪದ್ಧತಿ ಚಳ್ಳಕೆರೆ ತಾಲ್ಲೂಕಿನ ಬಹುತೇಕ ಎಲ್ಲಾ ಹಳ್ಳಿಗಳಲ್ಲೂ ರೂಢಿ ಇದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಆಂಜನೇಯನಿಗೆ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ತೇರು(ಉಚ್ಚಯ) ಎಳೆಯುವ ಕಾರ್ಯ ನಡೆಯುತ್ತದೆ, ಎತ್ತಿನ ಗಾಡಿಯ ನಾಲ್ಕು ಚಕ್ರಗಳನ್ನು ತಂದು ಪ್ರತಿ ವರ್ಷವೂ ಹೊಸದಾಗಿ ಉಚ್ಚಯವನ್ನು ಗ್ರಾಮದವರು ಮತ್ತು ಊರಿನ ಬಡಗಿಗಳು ಸೇರಿ ತಯಾರಿಸುತ್ತಾರೆ, ಬಿದಿರು ಕಡ್ಡಿಗಳು, ವಿವಿಧ ಮರದ ಕಟ್ಟಿಗೆಗಳಿಂದ, ಉಚ್ಚಯವನ್ನು ಮಾಡಿ ಇದಕ್ಕೆ ವಿವಿಧ ಬಣ್ಣದ ಬಟ್ಟೆಗಳು, ಬಣ್ಣದ ಕಡ್ಡಿಗಳು, ಬಾವುಟಗಳು ಹಾಗೂ ತರ ತರದ ಹೂವುಗಳಿಂದ ಅಲಂಕಾರ ಮಾಡುತ್ತಾರೆ, ನಂತರ ದೇವರನ್ನು ಇದರಲ್ಲಿ ಕೂರಿಸಿ, ಎಡೆಯನ್ನು ಹಾಕಿ ಪೂಜೆ ಮಾಡಿ ಊರಾಚೆ ಇರುವ ಪಾದಗಟ್ಟೆಯವರೆಗೂ ಉಚ್ಚಯವನ್ನು ಸಾಗಿಸಿಕೊಂಡು ಅಲ್ಲಿ ಪೂಜೆ ಮಾಡಿಕೊಂಡು ಬರುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಮ್ಮಾರೆಡ್ಡಿ S/O ಕೃಷ್ಣರೆಡ್ಡಿ ----- ಗ್ರಾಮಸ್ಥರು,

2). ರಾಮರೆಡ್ಡಿ S/O ತಿಪ್ಪಯ್ಯ ----- ಗ್ರಾಮಸ್ಥರು

2). ಶ್ರೀನಿವಾಸರೆಡ್ಡಿ S/O ರಾಮರೆಡ್ಡಿ ------ ಗ್ರಾಮಸ್ಥರು.

26). ಬಂಜಗೆರೆ, ಆಂಜನೇಯನ ರಥ:

ಪೂರ್ವದಲ್ಲಿ ಗ್ರಾಮಕ್ಕೆ ಬೇರೆ ಊರುಗಳಿಂದ ಕೆರೆ ಕಟ್ಟಲು ಬಂದಿದ್ದ ಕೂಲಿ ಹಾಳುಗಳಿಗೆ ಇಲ್ಲಿ ಸರಿಯಾಗಿ ಹಣ ಪಾವತಿಸಲಿಲ್ಲವಂತೆ, ಇದರಿಂದ ಕೆರೆ ಕಟ್ಟಿದ ಕೂಲಿಯಾಳುಗಳು ನೊಂದು ಈ ಕೆರೆ

ಬಂಜೆಯಾಗಲಿ ಎಂದು ಶಾಪ ಕೊಟ್ಟರಂತೆ, ಅಂದಿನಿಂದ ಕೆರೆಗೆ ನೀರು ಬಂದು ಎಂದೂ ಕೂಡ ತುಂಬಲಿಲ್ಲವಂತೆ, ಹಾಗಾಗಿ ಗ್ರಾಮಕ್ಕೆ ಬಂಜೆಕೆರೆ ಎಂಬ ಹೆಸರು ರೂಢಿಯಾಯಿತು, ಕಾಲಾನಂತರ "ಬಂಜೆಗೆರೆ" ಆಗಿದೆ, ಕೆರೆ ಕಟ್ಟಿಸಿ ಕೆರೆಗೆ ಬಂಜೆ ಹೆಣ್ಣನ್ನು ಆರವಾಗಿ ಕೊಟ್ಟಿರು ಕಾರಣದಿಂದಲೂ ಬಂಜೆಕೆರೆ ಎಂಬುದು ಬಂಜಿಗೆರೆಯಾಗಿ ಮಾರ್ಪಾಟಾಗಿರುವ ಕಟ್ಟು ಕಥೆಯೂ ಇದೆ.

ಮತ್ತೊಂದು ಅರ್ಥದಲ್ಲಿ ಬಣಜಿಗ ಸಮುದಾಯದವರು ಊರನ್ನು ಕಟ್ಟಿದ್ದರಿಂದ ಬಣಜಗೆರೆ ಎಂಬ ಹೆಸರು ಕಾಲಾನಂತರ ಬಂಜಿಗೆರೆಯಾಗಿರಲೂ ಬಹುದು.

ಚಿತ್ರದುರ್ಗ ಪಾಳೆಯಗಾರರ ದಾಖಲೆಗಳಲ್ಲಿ ಇದಕ್ಕೆ ಬಂದಿಗೊಂಡನಹಳ್ಳಿ ಎಂದಿದ್ದು ಕಾಲಾನಂತರದಲ್ಲಿ ಬಂಜಗೊಂಡನಹಳ್ಳಿಯಾಯಿತು, ಬಂದಮ್ಮನಕೆರೆ ಅಥವಾ ಬಂದವ್ವನಕೆರೆ ಬಂಜಗೆರೆ ಆಗಿರುವಂತೆಯೂ ಇರಬಹುದು.

ಗ್ರಾಮದಲ್ಲಿ ಆಂಜನೇಯ, ಕರಿಯಮ್ಮ, ಯಲ್ಲಮ್ಮ, ಈರಣ್ಣ, ದುರುಗಮ್ಮ, ಮಾರಮ್ಮ, ಶ್ರೀ ಕೃಷ್ಣ, ಲಿಂಗಣ್ಣ, ನರಸಿಂಹಸ್ವಾಮಿ, ರಂಗಪ್ಪ, ತಿಮ್ಮಪ್ಪ, ಈಶ್ವರ, ಕನಕಪ್ಪ, ಪಾತಲಿಂಗೇಶ್ವರ, ಮೈಲಾರಲಿಂಗೇಶ್ವರ, ತಿಮ್ಮಪ್ಪ ದೇವರುಗಳಿದ್ದು, ಮುಸ್ಲಿಂರ ಮಸೀದಿಯೂ ಇದೆ.

ಚಳ್ಳಕೆರೆ ತಾಲ್ಲೂಕಿನ ಪುರ್ಲಹಳ್ಳಿ ಹಾಗೂ ಚನ್ನಮ್ಮನಾಗತಿಹಳ್ಳಿಯ ಪ್ರದೇಶದಲ್ಲಿ ನಡೆಯುವ ಕ್ಯಾತಪ್ಪನ ಪರಿಷೆಗೆ ಬಂಜಿಗೆರೆ ವೀರಣ್ಣ ದೇವರು ಬಂದು ನೆಲೆಸಿ ಜಾತ್ರೆ ಮುಗಿದ ನಂತರ ವಾಪಸ್ಸಾಗುತ್ತದೆ, ಬಂಜಿಗೆರೆ ವೀರಣ್ಣ ದೇವರಿಗೆ ಪ್ರತಿವರ್ಷ ಜನವರಿ ತಿಂಗಳಲ್ಲಿ ಜಾತ್ರೆ, ಉತ್ಸವ, ಕಾರ್ತಿಕ ಮಾಸದಲ್ಲಿ ಆಂಜನೇಯ ಕಾರ್ತಿಕೋತ್ಸವವನ್ನು ಎಲ್ಲಾ ಸಮುದಾಯದವರು ಆಚರಣೆ ಮಾಡುತ್ತಾರೆ, ಮೈಲಾರ ದೇವರಿಗೆ ಪಲ್ಲಕ್ಕಿ ಉತ್ಸವ, ಆಂಜನೇಯನಿಗೆ ರಥೋತ್ಸವ ನಡೆಯುತ್ತದೆ.

ಐದು ವರ್ಷಕ್ಕೊಮ್ಮೆ ಕರಿಯಮ್ಮ ದೇವಿಯ ದೊಡ್ಡ ಜಾತ್ರೆಯನ್ನು ಎಲ್ಲಾ ಸಮುದಾಯದವರು ಆಚರಣೆ ಮಾಡುತ್ತಾರೆ, ಇದು ಊರಿನ ಅತಿದೊಡ್ಡ ಜಾತ್ರೆಯಾಗಿದ್ದು ಸಾಕಷ್ಟು ಜನರು ಸೇರುತ್ತಾರೆ, ಆ ಸಮಯದಲ್ಲಿ ವಿವಿಧ ಸಂಪ್ರದಾಯಗಳು, ಪದ್ಧತಿಗಳು ನಡೆಯುತ್ತವೆ, ಈರಣ್ಣ, ಮಾರಮ್ಮ, ರಂಗಪ್ಪ ಕನಕಪ್ಪ, ಮೈಲಾರಲಿಂಗೇಶ್ವರ, ತಿಮ್ಮಪ್ಪ ದೇವರುಗಳಿಗೆ ಬೇರೆ ಬೇರೆ ಸಮಯದಲ್ಲಿ ಆಧ್ಯಾತ್ಮಿಕ ಕಾರ್ಯಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಆಂಜನೇಯ ದೇವರಿಗೆ ಪಲ್ಲಕ್ಕಿ ಹಾಗೂ ರಥ ಇದೆ, ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಕಾರ್ತಿಕೋತ್ಸವ ಹಾಗೂ ರಥೋತ್ಸವ, ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವ, ಹೊಂಬು(ಬನ್ನಿ) ಹೊಡೆಯುವ ಕಾರ್ಯ ನಡೆಯುತ್ತದೆ, ಸಂಪ್ರದಾಯ ಶಿಲ್ಪಿಗಳಾದ ನಾಯಕನಹಟ್ಟಿ ಗ್ರಾಮದ ತಿಪ್ಪೇಸ್ವಾಮಿ ಮತ್ತು ಇದೇ ಊರಿನಲ್ಲಿದ್ದ ಸಂಪ್ರದಾಯ ಶಿಲ್ಪಿಗಳು ಸೇರಿ ರಥವನ್ನು ಮಾಡಿದ್ದಾರೆ, ಅಚ್ಚಿನ ಮೇಲೆ ಯಾವುದೇ ಕೆತ್ತನೆ ಇಲ್ಲ, ಆದರೆ ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ನಾಲ್ಕು ತೊಲೆಗಳ ತುದಿಗಳಲ್ಲಿ ಆನೆಗಳನ್ನು ಮಾಡಿದ್ದು, ಇದರ ಮೇಲಿನ ಪಟ್ಟಿಯಲ್ಲಿ ಹೂಬಳ್ಳಿಯ ಕೆತ್ತನೆ ಇದೆ, ನಂತರದಲ್ಲಿ ಎರಡು ಕಂಬಗಳ ಮಧ್ಯದಲ್ಲಿ ಒಂದೊಂದು ಶಿಲ್ಪಗಳಂತೆ ಒಂದೊಂದು ಕಡೆ ಮೂರು ಶಿಲ್ಪಗಳಿದ್ದು ನಾಲ್ಕೂ ದಿಕ್ಕಿನಲ್ಲಿ ಒಟ್ಟು 12ಶಿಲ್ಪಗಳಿವೆ, ಅವುಗಳಲ್ಲಿ ಗಣೇಶ, ಕುಳಿತಿರುವ ಆಂಜನೇಯ, ನಿಂತಿರುವ ಆಂಜನೇಯ, ಶ್ರೀರಾಮ, ಹುಲಿವಾಹನದ ದೇವಿ, ಹಸುವಿನ ಜೊತೆಯಲ್ಲಿ ಕೊಳಲನೂದುತ್ತಿರುವ ಕೃಷ್ಣ, ರಾಘವೇಂದ್ರ ಸ್ವಾಮಿ, ನಿಂತಿರುವ ಗಣೇಶ, ಭೂದೇವಿ ಸಹಿತ ನರಸಿಂಹ, ತಿರುಪತಿ ತಿಮ್ಮಪ್ಪ, ಶಂಖ, ಚಕ್ರಗಳ ಶಿಲ್ಪಗಳಿದ್ದು ಸೂಕ್ಷ್ಮ ಕೆತ್ತನೆಯಿಂದ ನೋಡುಗರ ಮನಸ್ಸಿಗೆ ಮುದ ನೀಡುತ್ತವೆ, ಶಿಲ್ಪಗಳಿರುವ ಮೇಲಿನ ಅಂತಸ್ತಿನಲ್ಲಿ ದೊಡ್ಡದಾದ ಹೂವು, ಎಲೆಬಳ್ಳಿಗಳು, ಚಕ್ರಗಳು ಹಾಗೂ ಇತರೆ ಕುಸುರಿ ಕೆತ್ತನೆ ಕಂಡುಬರುತ್ತದೆ, ಉಳಿದಂತೆ ಕಮಾನುಗಳಿರುವ ಪಟ್ಟಿಗಳಲ್ಲಿ ಮತ್ತು ಅಲ್ಲಲ್ಲಿ

ಕುಸುರಿ ಕೆತ್ತನೆ ರತಕ್ಕೊಂದು ಸುಂದರ ಆಕರ್ಷಣೆಯಾಗಿವೆ, ನಾಲ್ಕು ಮೂಲೆಗಳಲ್ಲಿ ಕುಬ್ಜವಾಗಿ ಕಾಣುವ ಎರಡು ಕಾಲಿನಲ್ಲಿ ನಿಂತಿರುವ ಸಿಂಹಗಳು ರಥದ ಅಲಂಕಾರಕ್ಕೆ ಸಾಟಿಯಾಗಿವೆ, ದೇವರನ್ನು ಕೂರಿಸುವ ಪೀಠವು ಒಂದು ಮೂಲೆಗೆ ಮೂರು ಕಂಬಗಳಂತೆ ಒಟ್ಟು 12ರೋಲಿಂಗ್ ಮಾಡಿಸಿರುವ ಕಂಬಗಳನ್ನೊಳಗೊಂಡಿದೆ, ಕಮಾನು ಪಟ್ಟಿಗಳಿಗೆ ಅರ್ಧ ಅಡಿಗೊಂದರಂತೆ ಸಣ್ಣ ಸಣ್ಣ ಕಂಚಿನ ಗಂಟೆಗಳನ್ನು ಹಾಕಿರುವುದು ರತಕ್ಕೆ ಮತ್ತಷ್ಟು ರಂಗು ನೀಡಿದೆ, ಗ್ರಾಮದ ಪ್ರತಿ ಮನೆಗಳಿಂದ, ನೌಕರ ವರ್ಗದಿಂದ ವಂತಿಗೆ, ಮತ್ತು ಇತರೆ ಊರಿನ ದಾನಿಗಳಿಂದ ಹಣವನ್ನು ಸಂಗ್ರಹಣೆ ಮಾಡಿ ರಥವನ್ನು ಮಾಡಿಸಲಾಗಿದೆ, ರಥವನ್ನು ಮಾಡಿದ ಶಿಲ್ಪಿಗಳಿಗೆ ಒಂದು ಲಕ್ಷದ ಇಪ್ಪತ್ತು ಸಾವಿರ ಸಂಭಾವನೆಯನ್ನು ಕೊಟ್ಟಿದ್ದಾರೆ.

ಗ್ರಾಮದ ಭಕ್ತಾದಿಗಳು ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆದ ಬೇವು, ಜಾಲಿ ಮತ್ತು ಬೇಲದ ಮರಗಳನ್ನು ರಥ ನಿರ್ಮಾಣಕ್ಕೆ ಕೊಟ್ಟಿದ್ದು 2013ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, ಶಿಲ್ಪಿಗಳು 6ತಿಂಗಳುಗಳ ಕಾಲ ಈ ರಥವನ್ನು ಮಾಡಿದ್ದಾರೆ, ಭಕ್ತರು ದಾನವಾಗಿ ಕೊಟ್ಟ ಮೂರು ತರಹದ ಮರಗಳಲ್ಲಿ ಬೇಲದ ಮರದಿಂದ ಅಚ್ಚುಗಳನ್ನು, ಬೇವು ಹಾಗೂ ಜಾಲಿ ಮರದಿಂದ ಕಂಬಗಳು, ಪೀಠ, ತೊಲೆ, ಪಟ್ಟಿಗಳು, ಶಿಲ್ಪಗಳನ್ನು, ಇತರೆ ಕೆತ್ತನೆ ಕೆಲಸವನ್ನು ಮಾಡಿದ್ದಾರೆ, ನಾಲ್ಕು ಅಡಿಯ ಗಾಲಿಗಳು, ಮರದ ಕೆತ್ತನೆಯ ಭಾಗ, ಪೀಠ ಸೇರಿ 14ಅಡಿ ಇದ್ದು, ಕಬ್ಬಿಣದ ಸಲಾಕೆಗಳಿಂದ ಮಾಡಿದ ಡೂಮು 10.5ಅಡಿ, ಕಳಸ 2.5ಅಡಿ, ಈ ರಥದ ಒಟ್ಟು ಎತ್ತರ 31ಅಡಿ ಇದೆ, ರಥದ ಒಟ್ಟು ಖರ್ಚು 6ಲಕ್ಷ ರೂಗಳಾಗಿದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಸುತ್ತಲ ಹಳ್ಳಿಗಳಿಂದಲೂ ಭಕ್ತಾದಿಗಳು ಬರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ ಮೊದಲ ದಿನ ಗಂಗಾ ಪೂಜೆ, ರಥೋತ್ಸವ, ಎರಡನೇ ದಿನ ಪಲ್ಲಕ್ಕಿ ಉತ್ಸವ, ಮೂರನೇ ದಿನ ಓಕುಳಿ ಹಾಗೂ ಅನ್ನ ಸಂತರ್ಪಣೆ ಮಾಡುತ್ತಾರೆ.

ರಥಕ್ಕೆ ಎಡೆಹಾಕಿ ಪೂಜೆ ಮಾಡಿ ಆನಂತರ ರಥವು ಪಾದಗಟ್ಟೆಯವರೆಗೆ ಹೋಗಿ ವಿಶೇಷ ಪೂಜೆಯನ್ನು ಮಾಡಿಸಿಕೊಂಡು ವಾಪಾಸ್ಸು ಬರುತ್ತದೆ, ರಥದ ಮುಂದೆ ವಿವಿಧ ವಾದ್ಯಗಳಾದ ಕರಡಿ ಮಜಲು, ಡೋಲು, ನಂದಿ ಕೋಲಿನ ಕುಣಿತ ಹಾಗೂ ಹಲವು ಬಗೆಯ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಬಿ. ಪಿ. ರಾಮಕೃಷ್ಣಪ್ಪ S/O ಬಿ. ಪಾತಯ್ಯ ----- ಗ್ರಾಮಸ್ಥರು,

2). ಪೋಲೀಸ್ ಅಜ್ಜಪ್ಪ S/O ಎಂ.ಕರಿಯಪ್ಪ ----- (ನಿವೃತ್ತ ಎ.ಸಿ.ಪಿ.)ಮೊ:9448074608

2). ಸಣ್ಣೀರಪ್ಪ S/O ಮಳ್ಳಪ್ಪ ------ ಗ್ರಾಮಸ್ಥರು.

3). ತಾಳಕೇರಿ ವೀರಣ್ಣ S/O ದೊಡ್ಡೀರಪ್ಪ ----- ಗ್ರಾಮಸ್ಥರು,

4). ಪರಮೇಶ್ವರಪ್ಪ S/O ಬಜ್ಜಪ್ಪ ----- ಗ್ರಾಮಸ್ಥರು,

5). ಪಾತಲಿಂಗಪ್ಪ S/O ರಾಮಪ್ಪ ----- ಗ್ರಾಮಸ್ಥರು.

27). ಬೇಡರೆಡ್ಡಿ ಹಳ್ಳಿ, ಬಸವೇಶ್ವರನ ಉಚ್ಚಯ:

ಬೇಡ ಮತ್ತು, ರೆಡ್ಡಿ ಸಮುದಾಯದವರು ಸೇರಿ ಊರನ್ನು ಕಟ್ಟಿ ಊರಿಗೆ ಬುಡ್ಡೆಕಲ್ಲು ಹಾಕಿದ ಕಾರಣದಿಂದ ಎರಡು ಸಮುದಾಯದವರ ಹೆಸರು ಬರುವಂತೆ ಬೇಡ ಹಾಗೂ ರೆಡ್ಡಿಯವರಹಳ್ಳಿ.

ಬೇಡರೆಡ್ಡಿಯವರಹಳ್ಳಿ ಎಂಬ ಹೆಸರಿನಿಂದ ಕರೆದಿದ್ದು ಕ್ರಮೇಣ ಬೇಡರೆಡ್ಡಿಹಳ್ಳಿಯಾಗಿದೆ ಎಂದು ನಂಬಲಾಗಿದೆ.

ಊರಿನಲ್ಲಿ ಬಸವೇಶ್ವರ, ತಿಪ್ಪೇಸ್ವಾಮಿ, ಪತ್ತಲ ಬೊಮ್ಮದೇವರು, ಆಂಜನೇಯ, ಓಬಳ ದೇವರು, ತಿಮ್ಮಪ್ಪ, ಕೆಂಚಮ್ಮ, ಮಾರಮ್ಮ, ಬಂಜಗೆರೆ ಅಜ್ಜ, ಬೆಟ್ಟು ದೇವರು, ದುರ್ಗಮ್ಮ ದೇವರುಗಳಿವೆ, ಕಾರ್ತಿಕ ಮಾಸದಲ್ಲಿ ಬಸವೇಶ್ವರ ದೇವರ ಕಾರ್ತಿಕೋತ್ಸವವನ್ನು ಆಚರಣೆ ಮಾಡುತ್ತಾರೆ, ಈ ಸಮಯದಲ್ಲಿ ರಾತ್ರಿ ಪೂರಾ ಪೂಜಾ ಕಾರ್ಯಗಳು ನಡೆದು ಬೆಳಗಿನ ಜಾವ ಉಚ್ಚಯ ಮಾಡುತ್ತಾರೆ, ಇದಕ್ಕೆ ಊರಿನ ಎಲ್ಲಾ ಭಕ್ತಾದಿಗಳು, ಬೇರೆ ಊರಿನಲ್ಲಿ ವಾಸವಾಗಿರುವ ಈ ಊರಿನ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ಎತ್ತಿನ ಗಾಡಿಯ ಚಕ್ರಗಳ ಮೇಲೆ ಉಚ್ಚಯವನ್ನು ಸಿದ್ಧಮಾಡಿ ಅದರಲ್ಲಿ ದೇವರನ್ನು ಕೂರಿಸಿ ಪಾದಗಟ್ಟೆಯವರೆಗೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ, ನಂತರ ಬೆಳಿಗ್ಗೆ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಎತ್ತಿನ ಗಾಡಿಯ ಮಧ್ಯದಲ್ಲಿ ದೇವರನ್ನು ಕೂರಿಸಲು ದೊಡ್ಡದಾದ ಪೆಟ್ಟಿಗೆಯನ್ನು ಇಡುತ್ತಾರೆ, ಇದರ ಹಿಂದೆ ಬಿದಿರು ಕಡ್ಡಿಗಳಿಂದ ಮಾಡಿದ ಉಚ್ಚಯ ಇಡುತ್ತಾರೆ, (ಮುಕ್ಕಾಲು ಅಡಿಗೆ ಒಂದರಂತೆ ಅಡ್ಡ ಮತ್ತು ಉದ್ದವಾಗಿ ಬಿದಿರ ದಬ್ಬೆಗಳನ್ನು ಜೋಡಿಸಿ ಗೋಪುರಾಕಾರವಾಗಿ ಮಾಡಿರುವ ಉಚ್ಚಯ)ಇದಕ್ಕೆ ಬಣ್ಣ ಬಣ್ಣದ ಬಟ್ಟೆಗಳು, ದೇವರ ಫೋಟೋಗಳು, ಹೂವಿನ ಹಾರಗಳು, ಬಾವುಟಗಳನ್ನು ಕಟ್ಟಿ ಅಲಂಕಾರ ಮಾಡುತ್ತಾರೆ.

ಉಚ್ಚಯದ ಹಾಗೂ ಉತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪೇಸ್ವಾಮಿ ---- ಗ್ರಾಮಸ್ಥರು

2). ಬಸವರಾಜ್ ---- ಗ್ರಾಮಸ್ಥರು

28). ತಿಮ್ಮಣ್ಣ ನಾಯಕನ ಕೋಟೆ(ಟಿ.ಎನ್.ಕೋಟೆ), ಬಸವಣ್ಣನ ರಥ:

ನಿಡಗಲ್ಲು ಪಾಳೇಗಾರ ತಿಮ್ಮಣ್ಣನಾಯಕ ಎಂಬುವವನ ಹೆಸರಿನಿಂದ ತಿಮ್ಮಣ್ಣ ನಾಯಕನ ಕೋಟೆ ಎಂಬ ಹೆಸರನ್ನು ಊರಿಗೆ ಇಟ್ಟಿರುವುದಾಗಿದೆ.

ಗ್ರಾಮದಲ್ಲಿ ಬಸವೇಶ್ವರ, ಈಶ್ವರ, ಹನುಮಂತರಾಯ, ತಿಮ್ಮಪ್ಪ, ಕರಿಯಣ್ಣ, ಮೈಲಾರಲಿಂಗೇಶ್ವರ, ಈರಗಾರರ ದೇವಾಲಯ, ಅಯ್ಯಪ್ಪ ಸ್ವಾಮಿ, ದುರುಗಮ್ಮ, ಚಿತ್ತಮ್ಮ, ಕೊಲ್ಲಾಪುರದಮ್ಮ ದೇವಸ್ಥಾನಗಳಿವೆ, ಕ್ರೈಸ್ತರ ಚರ್ಚ್ ಸಹ ಇದೆ. ಮಾರಮ್ಮ ದೇವಿಗೆ ಬಲಿ, ಹರಿಕೆ ಪದ್ದತಿಗಳಿವೆ, ಬಸಣ್ಣನ ಮೂರ್ತಿ ಇದ್ದು ಇದು ಉದ್ಭವ ಮೂರ್ತಿ ಕೆತ್ತನೆ ಮಾಡಿದ್ದಲ್ಲ ಎನ್ನುತ್ತಾರೆ ಗ್ರಾಮದವರು. ಪ್ರತೀ ವರ್ಷ ಏಪ್ರಿಲ್ ತಿಂಗಳಲ್ಲಿ ಬಸವನ ಜಯಂತಿಯಂದು ಬಸವಣ್ಣ ಸ್ವಾಮಿಗೆ ರಥೋತ್ಸವ, ಎರಡು ದಿನಗಳ ಕಾಲ ಬಸವಣ್ಣನ ಜಾತ್ರೆ ನಡೆಯುತ್ತದೆ, ಈ ಸಮಯದಲ್ಲಿ ರಾತ್ರಿ ವೇಳೆ ಯಕ್ಷಗಾನ, ದೇವಿ ಮಹಾತ್ಮೆ ಪ್ರದರ್ಶನಗಳು ನಡೆಯುತ್ತವೆ.

ಕೆಳಕೋಟೆ ಮತ್ತು ಮೇಲುಕೋಟೆ ಎಂಬ ಎರಡು ಭಾಗದ ಊರುಗಳು ಕೆರೆಯ ಎರಡು ದಡದಲ್ಲಿವೆ, ಕೆರೆ ಇರುವ ಪೂರ್ವಕ್ಕೆ ಕೆಳಕೋಟೆ ಇದ್ದು ಇಲ್ಲಿ 1600ಮನೆಗಳಿವೆ, ಕೆರೆಯ ಪಶ್ಚಿಮಕ್ಕೆ 500ಮನೆಯ ಮೇಲುಕೋಟೆ ಇದೆ. ಎರಡು ಬೇರೆಯಾಗಿದ್ದರೂ ಒಂದೇ ಊರಿನ ಲೆಕ್ಕದಲ್ಲಿವೆ.

ಮೈಲಾರಲಿಂಗೇಶ್ವರನ ಜಾತ್ರೆಯನ್ನು ಪ್ರತಿ ವರ್ಷ ಯುಗಾದಿ ಹಬ್ಬ ಮುಗಿದ ನಂತರ ಮಾಡುತ್ತಾರೆ, ಈ ಸಮಯದಲ್ಲಿ ಅಮವಾಸ್ಯೆ ದಿನ ಕೊಂಡ ಹಾಯುವ ಪದ್ಧತಿ ಮಾಡುತ್ತಾರೆ. ಯಾವ ಸಮುದಾಯದವರು ಬೇಕಾದರೂ, ಯಾವ ವಯಸ್ಸಿನವರಾದರೂ ಕೆಂಡ ತುಳಿಯಬಹುದು. ಈ ಸಮಯದಲ್ಲಿ ಇನ್ನೂ ಕೆಲವು ವಿಶೇಷತೆಗಳು ನಡೆಯುತ್ತವೆ. ಬಾಯಿಗೆ ಬೀಗ, ತ್ರಿಶೂಲ ಹಾಕಿಕೊಳ್ಳುವುದು, ಗೊರಪ್ಪರ ಕುಣಿತ, ಗೊರಪ್ಪರ ದೋಣಿಗೆ ಹಣ್ಣು ಹಾಕುವ ಕಾರ್ಯ ನಡೆಯುತ್ತದೆ, ಸುಲಿದ ಬಾಳೆ ಹಣ್ಣು

ಮತ್ತು ಸಕ್ಕರೆ ಬೆರೆಸಿದ ಮಿಶ್ರಣವನ್ನು ತಾಮ್ರದ ಲೋಹದಿಂದ ಮಾಡಿದ ಅಗಲವಾದ ಬಾಯಿಯ ಚಿಕ್ಕದಾದ ಪಾತ್ರೆ, ಗೊರಪ್ಪರು ಹೆಗಲಿಗೆ ಹಾಕಿಕೊಳ್ಳುತ್ತಾರೆ, ಇದಕ್ಕೆ ದೋಣಿ ಸೇವೆ ಎನ್ನುತ್ತಾರೆ, ಇಂತಹ ವಿಶೇಷ ಕಾರ್ಯಗಳು ಮೈಲಾರಲಿಂಗೇಶ್ವರನ ಜಾತ್ರೆಯಲ್ಲಿ ನಡೆಯುತ್ತವೆ.

ರಥೋತ್ಸವ ಹಾಗೂ ರಥ ಶಿಲ್ಪದ ವಿವರಣೆ: ಗ್ರಾಮದ ಬಸವಣ್ಣನ ರಥೋತ್ಸವವು ಪ್ರತಿ ವರ್ಷ ಯುಗಾದಿ ಹಬ್ಬದ ನಂತರ ಬರುವ ಬಸವ ಜಯಂತಿ ಸಮಯದಲ್ಲಿ ನಡೆಯುತ್ತದೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಗಂಗಾಪೂಜೆ, ಕುಂಬಾಭಿಷೇಕ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಸುತ್ತಾರೆ.

ರಥೋತ್ಸವದ ದಿನ ಬೆಳಿಗ್ಗೆ ರಥದ ಅಲಂಕಾರ ನಡೆಯುತ್ತದೆ, ಬಣ್ಣದ ಬಟ್ಟೆಗಳು, ಪಟಗಳು, ದೇವರ ಪೋಟೋಗಳು, ತರತರದ ಹೂವುಗಳಿಂದ ರಥಕ್ಕೆ ಅಲಂಕಾರ ಮಾಡುತ್ತಾರೆ, ನಂತರ ರಥಕ್ಕೆ ಎಡೆಬಾನ, ವಿಶೇಷ ಪೂಜೆ ಮಾಡಿದ ನಂತರ ಪಾದಗಟ್ಟೆಯವರೆವಿಗೂ ರಥವು ಹೋಗಿ ಅಲ್ಲಿ ವಿಶೇಷ ಪೂಜೆ ನಡೆದು ವಾಪಾಸ್ಸು ಬರುತ್ತದೆ, ರಥೋತ್ಸವದ ಸಮಯದಲ್ಲಿ ರಥದ ಮುಂದೆ ವಿವಿಧ ವಾದ್ಯಗಳಾದ ಉರುಮೆ, ಡೋಲು, ಕರಡಿ ಮಜಲುಗಳು, ಜೊತೆಗೆ ನಂದಿಕೋಲು, ಕೀಲುಕುದುರೆ, ವೀರಗಾಸೆ, ಗೊಂಬೆ ಕುಣಿತಗಳಿರುತ್ತವೆ.

ಸುಮಾರು 26ವರ್ಷಗಳ ಹಿಂದೆ ರಥವನ್ನು ಮಾಡಿಸಿದ್ದಾರೆ, ನಾಯಕನ ಹಟ್ಟಿ ಗ್ರಾಮದ ಸಂಪ್ರದಾಯ ಶಿಲ್ಪಿಗಳಾಗಿರುವ ತಿಪ್ಪೇಸ್ವಾಮಿ ಅವರ ತಂದೆ ಸುಮಾರು ಎಂಟು ತಿಂಗಳ ಅವಧಿಯಲ್ಲಿ ರಥವನ್ನು ಮಾಡಿದ್ದಾರೆ, ಇವರಿಗೆ ಅಂದು ರಥವನ್ನು ಮಾಡಿದ ಸಂಭಾವನೆಯಾಗಿ 15ಸಾವಿರ ರೂಗಳನ್ನು ಕೊಟ್ಟಿದ್ದರಂತೆ, ಗ್ರಾಮದ ಎಲ್ಲಾ ಕುಟುಂಬದವರು ಹಣವನ್ನು ಮತ್ತು ಇತರೆ ದಾನಿಗಳಿಂದ ಇಂತಿಷ್ಟು ಹಣವನ್ನು ಸಂಗ್ರಹ ಮಾಡಿ ರಥವನ್ನು ಮಾಡಿಸಿದ್ದಾರೆ, ರಥವನ್ನು ಮಾಡಿಸಿದ ಒಟ್ಟು ಖರ್ಚು 85ಸಾವಿರ ರೂಗಳಾಗಿತ್ತಂತೆ, ರಥಕ್ಕೆ ಪೂರ್ತಿಯಾಗಿ ಜಾಲಿ ಮರವನ್ನು ಮಾತ್ರ ಬಳಸಲಾಗಿದೆ, ಗಾಲಿಗಳು, ಅಚ್ಚು, ತೊಲೆಗಳನ್ನು ಮಾಡಿದ್ದು ಕಂಬಗಳು, ಪಟ್ಟಿಗಳು, ಪೀಠ, ಹಲಗೆಗಳು ಮತ್ತು ಶಿಲ್ಪಗಳನ್ನು ಸಹ ಜಾಲಿಯ ಮರದಿಂದ ಮಾಡಿದ್ದಾರೆ, ಮೂರು ಅಡಿಯ ಗಾಲಿಗಳನ್ನೊಳಗೊಂಡಂತೆ, ಮರದ ಕೆತ್ತನೆ ಮಾಡಿದ ಭಾಗ, ಕಬ್ಬಿಣದ ಪಟ್ಟಿಗಳಿಂದ ಮಾಡಿದ ಡೂಮು, ಕಳಸ ಸೇರಿ ಒಟ್ಟು 31ಅಡಿ ಅಳತೆಯ ರಥ ಇದಾಗಿದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಗುರುಸ್ವಾಮಿ ------ ಗ್ರಾಮಸ್ಥರು
2). ಆರ್.ಟಿ. ನಿಂಗಪ್ಪ ---- ಗ್ರಾಮಸ್ಥರು
3). ರಂಗಸ್ವಾಮಿ(ಶಕುನಪ್ಪ) ---- ಗ್ರಾಮಸ್ಥರು
4). ಮಹಂತೇಶ್ ------------- ಗ್ರಾಮಸ್ಥರು

29). ಹೊನ್ನೂರು, ಆಂಜನೇಯನ ರಥ:

ಗ್ರಾಮದಲ್ಲಿ ಆಂಜನೇಯ, ಪೀರಲ ಸ್ವಾಮಿ, ನರಸಿಂಹಸ್ವಾಮಿ, ಗಣೇಶ, ಮಾರಮ್ಮ ದೇವರುಗಳಿವೆ, ಗೌರ ಸಮುದ್ರದಲ್ಲಿ ಗೌರಸಂದ್ರ ಮಾರಮ್ಮ ದೇವಿಗೆ ದೊಡ್ಡ ಜಾತ್ರೆ ಮಾಡಿದಾಗ ಈ ಗ್ರಾಮದಲ್ಲಿರುವ ಮಾರಮ್ಮ ದೇವರಿಗೂ ಅದೇ ಸಮಯದಲ್ಲಿ ಜಾತ್ರೆ ಮಾಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಗ್ರಾಮದೇವರಾದ ಆಂಜನೇಯ ದೇವರಿಗೆ ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ರಥೋತ್ಸವ ನಡೆಯುತ್ತದೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಪೂಜೆ, ಅಭಿಷೇಕ, ಎರಡನೇ ದಿನ ರಥೋತ್ಸವ, ಮೂರನೇ ದಿನ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ರಥೋತ್ಸವದ ಸಮಯದಲ್ಲಿ ಕರಡಿ ಮಜಲು, ನಂದಿಕೋಲು, ಆದುನಿಕ ವಾದ್ಯಗಳು ಇರುತ್ತವೆ,

ರಥೋತ್ಸವದ ದಿನ ಬೆಳಿಗ್ಗೆ ರಥದ ಅಲಂಕಾರ ನಡೆಯುತ್ತದೆ, ಬಣ್ಣದ ಬಟ್ಟೆಗಳು, ಪಟಗಳು, ಕುಚ್ಚುಗಳು, ಬಾವುಟಗಳಿಳದ ಅಲಂಕಾರ ಮಾಡಿ, ನಂತರೆ ಎಡೆ ಹಾಕಿ ರಥಕ್ಕೆ ವಿಶೇಷ ಪೂಜೆಯನ್ನು ಗ್ರಾಮದ ಹಿರಿಯರೆಲ್ಲಾ ಸೇರಿ ಮಾಡುತ್ತಾರೆ, ಇದಾದ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಬರುತ್ತದೆ, ದೇವಸ್ಥಾನದ ಬಳಿ ರಥವು ಬಂದ ಮೇಲೆ ರಥಕ್ಕೆ ಹಾಕಿರುವ ಹೂವಿನ ಹಾರಗಳ ಹರಾಜು ನಡೆಯುತ್ತದೆ.

ಮೊದಲು ಉಚ್ಚಯ ಇದ್ದು ಸುತ್ತ ಮುತ್ತಲ ಹಳ್ಳಿಗಳವರು ಹೊಸ ರಥಗಳನ್ನು ಮಾಡಿಸಿದ್ದನ್ನು ನೋಡಿ ತಾವೂ ಸಹ ನಮ್ಮ ದೇವರಿಗೆ ಹೊಸ ರಥವನ್ನು ಮಾಡಿಸಬೇಕೆಂದು ಗ್ರಾಮದ ಎಲ್ಲಾ ಭಕ್ತರು ತೀರ್ಮಾನಿಸಿ 2012ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, ಸಂಪ್ರದಾಯ ಶಿಲ್ಪಿಗಳಾದ ಕೂನಬೇವು ಗ್ರಾಮದ ಮಂಜುನಾಥಾಚಾರ್‌ರವರು ರಥವನ್ನು ಮಾಡಿದ್ದಾರೆ, ಗ್ರಾಮದ ಎಲ್ಲಾ ಭಕ್ತರು, ಸರ್ಕಾರಿ ನೌಕರರು, ದಾನಿಗಳು ಉದಾರ ಮನಸ್ಸಿನಿಂದ ಹಣವನ್ನು ಕೊಟ್ಟಿದ್ದಾರೆ, ಒಟ್ಟು 9ಲಕ್ಷ(ಒಂಬತ್ತು ಲಕ್ಷ) ಹಣ ಸಂಗ್ರಹವಾಗಿದ್ದು ಹೊಸ ರಥವನ್ನು ಮಾಡಿಸಿದ ಖರ್ಚು 10ಲಕ್ಷ, ಕಡಿಮೆ ಬಂದ ಹಣವನ್ನು ಬೇರೆ ಊರಿನ ದಾನಿಗಳಿಂದ ಚಂದಾ ಹಣವನ್ನು ಸಂಗ್ರಹಿಸಿ ನೂತನ ರಥವನ್ನು ಮಾಡಿಸಿದ್ದಾರೆ, ರಥಕ್ಕೆ ಜಾಲಿಮರ ಹಾಗೂ ತೇಗದ ಮರಗಳನ್ನು ಬಳಸಲಾಗಿದೆ, ಗ್ರಾಮದ ಭಕ್ತರು ಬೇವು, ಜಾಲಿ, ಹುಣಸೆ, ಮಾವು ಮರಗಳನ್ನು ರಥದ ನಿರ್ಮಾಣಕ್ಕೆ ದಾನವಾಗಿ ಕೊಟ್ಟಿದ್ದು, ಭಕ್ತರು ಕೊಟ್ಟ ಮರಗಳಲ್ಲಿ ಜಾಲಿ ಮರವನ್ನು ಮಾತ್ರ ಬಳಕೆ ಮಾಡಿದ್ದು ಉಳಿದ ಬೇವು, ಹುಣಸೆ, ಮಾವು ಮರಗಳನ್ನು ಖರೀದಿದಾರರಿಗೆ ಮಾರಿದ್ದು, ಅದರ ಹಣದಲ್ಲಿ ತೇಗದ ಮರವನ್ನು ಖರೀದಿ ಮಾಡಿದ್ದಾರೆ, ಜಾಲಿ ಮರದಿಂದ ಗಾಲಿಗಳು, ಅಚ್ಚು, ಕೆಲವು ಶಿಲ್ಪಗಳನ್ನು ಮಾಡಿದ್ದು, ತೇಗದ ಮರದಿಂದ ತೊಲೆಗಳು, ಕಂಬಗಳು, ಅಡ್ಡ ಪಟ್ಟಿಗಳು ಹಾಗೂ ಕೆಲವು ಶಿಲ್ಪಗಳನ್ನು ಮಾಡಿದ್ದಾರೆ, ನಾಲ್ಕು ಅಂತಸ್ತುಗಳನ್ನು ಹೊಂದಿರುವ ರಥದಲ್ಲಿ ಮರದ ನಾಲ್ಕು ಅಳಿಗಳ ಸಹಿತದ ಗಾಲಿಗಳಿವೆ, ಗಾಲಿಗಳ ಮೇಲೆ ಇರುವ ಅಚ್ಚಿನಲ್ಲಿ ಹಾಗೂ ಅದರ ಮೇಲೆ ಹಾಕಲಾಗಿರುವ ತೊಲೆಗಳು, ಅಡ್ಡಪಟ್ಟಿಗಳಲ್ಲಿ ಯಾವುದೇ ಕೆತ್ತನೆ ಇಲ್ಲ, ಮೊದಲ ಅಂತಸ್ತಿನಲ್ಲಿ 12ಚಿಕ್ಕ ಕಂಬಗಳನ್ನು ಹೊಂದಿದ್ದು ಅದರಲ್ಲಿ ಹೂವು ಹಾಗೂ ಬಳ್ಳಿಗಳ ಕುಸುರಿ ಕೆತ್ತನೆ, ಇದರ ಮೇಲೆ ಕಮಾನಿನ ಪಟ್ಟಿ ಇದೆ, ಎರಡು ಮತ್ತು ಮೂರನೇ ಅಂತಸ್ತುಗಳಲ್ಲಿ ವಿವಿಧ ಶಿಲ್ಪಗಳಿವೆ, ಅವುಗಳಲ್ಲಿ ಧರ್ಮಸ್ಥಳ ಮಂಜುನಾಥ, ಕೊಲ್ಲೂರಿನ ಮೂಕಾಂಬಿಕ, ಮೈಸೂರಿನ ಚಾಮುಂಡೇಶ್ವರಿ, ಹೊರನಾಡಿನ ಅನ್ನಪೂರ್ಣೇಶ್ವರಿ, ಶೃಂಗೇರಿ ಶಾರದೆ, ಮಂತ್ರಾಲಯದ ರಾಘವೇಂದ್ರಸ್ವಾಮಿ, ತಿರುಪತಿ ತಿಮ್ಮಪ್ಪ, ಎಡೆಯೂರು ಸಿದ್ಧಲಿಂಗೇಶ್ವರ, ಲಕ್ಷ್ಮಿ, ಸರಸ್ವತಿ, ಆಂಜನೇಯ, ರೇಣುಕಾ ಯಲ್ಲಮ್ಮ, ಶ್ರೀರಾಮ, ಸೀತಾದೇವಿ, ಲಕ್ಷ್ಮಣ, ಗಣಪತಿ, ನವದೇವತೆಗಳು, ವಿವಿಧ ವಾದ್ಯಗಳನ್ನು ನುಡಿಸುತ್ತಿರುವವರು, ನವಗ್ರಹಗಳ ಶಿಲ್ಪಗಳನ್ನು ಕೆತ್ತನೆ ಮಾಡಿದ್ದಾರೆ, ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಸಿಂಹದ ಕೆತ್ತನೆ ಇದೆ, ಪ್ರತಿಯೊಂದು ಶಿಲ್ಪಗಳ ಪಕ್ಕದಲ್ಲಿ ಮೇಲಿನ ಅಂತಸ್ತಿನಿಂದ ಹೊರ ಬಂದಿರುವ ಹಲಗೆಯನ್ನು ಹೊತ್ತಿರುವ ಒಂದೊಂದು ಕಮಾನಿನ ಮರದ ಕೊಳವೆಗಳಿವೆ, ದೇವರ ಪೀಠವಿರುವ ಅಂತಸ್ತು ಎಂಟು ಕಂಬಗಳು ಹಾಗೂ ಎಂಟು ಮುಖಗಳಿಂದ ರಚಿತವಾಗಿದೆ, ಇದರ ಮೇಲೆ ಕಬ್ಬಿಣದ ಡೂಮು ಇಡುತ್ತಾರೆ, ಕಮಾನು ಇರುವ ಪಟ್ಟಿಗೆ ಗಂಟೆಗಳನ್ನು ಅಳವಡಿಸಿದ್ದಾರೆ, ರಥವನ್ನು ಮಾಡಿರುವ ಶಿಲ್ಪಿಗಳಿಗೆ 1,20,000-00(ಒಂದು ಲಕ್ಷದ ಇಪ್ಪತ್ತು ಸಾವಿರ)ರೂಗಳನ್ನು ಕೊಟ್ಟಿದ್ದು ಜೊತೆಗೆ ಆರು ಜನ ಶಿಲ್ಪಿಗಳಿಗೆ ತುಂಬು ಉಡುಗೊರೆಯನ್ನು ಕೊಟ್ಟಿದ್ದಾರೆ.

ಹೊಸ ರಥದ ಕೆತ್ತನೆಯನ್ನು ಶಿಲ್ಪಿಗಳು 11ತಿಂಗಳುಗಳ ಕಾಲ ಮಾಡಿದ್ದಾರೆ, ರಥದ ಎತ್ತರ 31ಅಡಿ ಇದೆ, ರಥವು ನಾಲ್ಕು ಮರದ ಗಾಲಿಗಳು, ಅಚ್ಚು, ತೊಲೆ, ಪಟ್ಟಿಗಳು, ಕಂಬಗಳು, ಪೀಠ, ಕಬ್ಬಿಣದ ಪಟ್ಟಿಗಳಿಂದ ಮಾಡಿರುವ ಡೂಮು, ಕಳಸಗಳನ್ನು ಒಳಗೊಂಡಿದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಮಂಜುನಾಥ ರೆಡ್ಡಿ S/O ಭೀಮಾರೆಡ್ಡಿ ----- ಗ್ರಾಮಸ್ಥರು,

2). ನಾರಾಯಣ ರೆಡ್ಡಿ ----- ಗ್ರಾಮಸ್ಥರು

2). ಶಿವ ರೆಡ್ಡಿ ------- ಪೂಜಾರ್.

30). ಮಲ್ಲ ಸಮುದ್ರ, ಬಸವಣ್ಣನ ರಥ:

ಮಲ್ಲಣ್ಣ ಅಥವಾ ಮಲ್ಲೇಶ್ ಎಂಬ ವ್ಯಕ್ತಿ ಸಮುದ್ರದಂತೆ ವಿಶಾಲವಾಗಿರುವ ಕೆರೆಯ ಬಳಿ ಕಟ್ಟಿಸಿದ ಊರಿಗೆ ಈ ಹೆಸರು ಬಂದಿರುವುದಾಗಿದೆ.

ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡಲು ಬಸವಣ್ಣ, ನರಸಿಂಹ ದೇವರು, ದಾಸರಯ್ಯ, ಬೀರಪ್ಪ, ಕೊಲ್ಲಾಪುರದಮ್ಮ, ಮಾರಮ್ಮ ದೇವಸ್ಥಾನಗಳಿವೆ, ಮಾಘಮಾಸದಲ್ಲಿ ಬಸವಣ್ಣನ ಕಾರ್ತಿಕೋತ್ಸವವನ್ನು ಎಲ್ಲಾ ಸಮುದಾಯದವರು ಸೇರಿ ಆಚರಣೆ ಮಾಡುತ್ತಾರೆ, ಈ ಸಮಯದಲ್ಲಿ ಬಸವಣ್ಣನ ರಥೋತ್ಸವವು ನಡೆಯುತ್ತದೆ, ದಾಸರಯ್ಯ, ಬೀರಪ್ಪ, ಕೊಲ್ಲಾಪುರದಮ್ಮ, ಮಾರಮ್ಮ ದೇವಸ್ಥಾನಗಳು, ಸಿದ್ಧಾರೂಡರ ಆಶ್ರಮವಿದೆ, ಮಾರಮ್ಮನ ಜಾತ್ರೆಯನ್ನು ಮಾಡುವಾಗ ಬಲಿ, ಹರಕೆ ಪದ್ಧತಿಗಳು ರೂಢಿಯಲ್ಲಿವೆ, ಸಿದ್ಧಾರೂಢರ ಆಶ್ರಮದಲ್ಲಿ ಪ್ರತಿ ಗುರುವಾರ ಎಲ್ಲಾ ಸಮುದಾಯದವರು ಸೇರಿ ಭಜನೆ ಕಾರ್ಯಕ್ರಮ ಮಾಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ರಥೋತ್ಸವ ನಡೆಯುತ್ತದೆ, ಗೊಪ್ಪೇನಹಳ್ಳಿ ಗ್ರಾಮದ ಸಂಪ್ರದಾಯ ಶಿಲ್ಪಿಗಳು ರಥವನ್ನು ಮಾಡಿದ್ದಾರೆ, ಮಲ್ಲಸಮುದ್ರ ಗ್ರಾಮದ ಪ್ರತಿ ಮನೆಗಳು, ನೌಕರರು, ಭಕ್ತರು, ದಾನಿಗಳಿಂದ ಹಣವನ್ನು ಸಂಗ್ರಹಿಸಿದ್ದಾರೆ, ಸ್ಥಳೀಯ ಭಕ್ತರು ತಮ್ಮ ಜಮೀನುಗಳಲ್ಲಿ ಬೆಳೆದ ಮರಗಳನ್ನು ರಥ ಮಾಡಲು ಕೊಟ್ಟಿದ್ದಾರೆ, 2001ರಲ್ಲಿ ನೂತನ ರಥವನ್ನು 6-7ತಿಂಗಳುಗಳ ಕಾಲ ಮಾಡಿದ್ದಾರೆ, ರಥವನ್ನು ಮಾಡಿದ ಶಿಲ್ಪಿಗಳಿಗೆ ಒಂದು ಲಕ್ಷದ ಎಂಬತ್ತೈದು ಸಾವಿರ (1,85,000-00)ಸಂಭಾವನೆಯನ್ನು ಕೊಟ್ಟಿದ್ದಾರೆ, ಕಬ್ಬಿಣದ ಪಟ್ಟಿಗಳು, ಸಲಾಕೆಗಳಿಂದ ಮಾಡಿದ ಡೂಮು ಮಾಡಿಸಿದ್ದು, ಇತರೆ ಖರ್ಚು ಸೇರಿ 2,35,000-00(ಎರಡು ಲಕ್ಷದ ಮೂವತ್ತೈದು)ಸಾವಿರ ರೂಗಳು, ಭಕ್ತಾದಿಗಳು ದಾನವಾಗಿ ನೀಡಿದ ಮರಗಳ ಜೊತೆಗೆ ಕೆಲವೊಂದು ಮರಗಳನ್ನು ಬೇರೆ ಕಡೆಯಿಂದ ಖರೀದಿಮಾಡಿ ತಂದಿದ್ದಾರೆ, ಒಟ್ಟಾರೆ ರಥವನ್ನು ಮಾಡಿದ ಎಲ್ಲಾ ಖರ್ಚುಗಳು ಸೇರಿ 9,00000-00(ಒಂಬತ್ತು ಲಕ್ಷ) ರೂಗಳಾಗಿದೆ.

ಜಾಲಿ ಮರದಿಂದ ಗಾಲಿಗಳು, ಕುಸುರಿ ಕೆತ್ತನೆ, ಶಿಲ್ಪಗಳನ್ನೂ ಮಾಡಿದ್ದಾರೆ, ಬೇವಿನ ಮರದಿಂದ ಅಚ್ಚುಗಳು ಹಾಗೂ ಶಿಲ್ಪಗಳನ್ನು ಮಾಡಿದ್ದಾರೆ, ಒಟ್ಟಾರೆ ಕರೇ ಜಾಲಿ ಮತ್ತು ಬೇವಿನ ಮರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿದ್ದಾರೆ, ಬಾಗಿ ಮರದಿಂದ ತೊಲೆಗಳನ್ನು ಮಾಡಿದ್ದಾರೆ, ಗಾಲಿಯಿಂದ ಕಳಸದ ವರೆವಿಗೂ ಸೇರಿ ಒಟ್ಟು 35ಅಡಿ ಎತ್ತರವಿದೆ, ಎರಡು ಅಂತಸ್ತಿನ ರಥವು ಇದಾಗಿದ್ದು, ಅಚ್ಚಿನಲ್ಲಿ ಕುಸುರಿ ಕೆತ್ತನೆ ಇದೆ, ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ತೊಲೆಗಳ ನಾಲ್ಕೂ ಅಂಚಿನಲ್ಲಿ ಆನೆಗಳ ಸುಂದರ ಕೆತ್ತನೆಇದೆ, ಎರಡು ಆನೆಗಳ ಮಧ್ಯ ಜಾಗದ ತೊಲೆಯ ಮೇಲೆ ಚಕ್ರಾಕಾರದ ಹೂವಿನ ಕೆತ್ತನೆ ಇದೆ, ನಂತರದ ಪಟ್ಟಿಯಲ್ಲಿ ಹೂವುಗಳ ಕೆತ್ತನೆ, ಇದರ ಮೇಲಿನ ಅಂತಸ್ತಿನಲ್ಲಿ ಎರಡು ಕಂಬಗಳ ನಡುವೆ ಒಂದೊಂದು ಅತ್ಯಾಕರ್ಷಕವಾದ ಶಿಲ್ಪಗಳು ಮತ್ತು ಇದರ ನಂತರದ ಪೀಠದ ಕೆಳಗೆ ಅಗಲವಾದ ಹಲಗೆಯ ಮೇಲೂ ಶಿವ ಪಾರ್ವತಿ, ನಂದಿ, ಶಿವನ ಲಿಂಗ, ಈಶ್ವರಿ, ಆಂಜನೇಯ, ಬ್ರಂಹ, ವಿಷ್ಣು, ಮಹೇಶ್ವರ, ಲಕ್ಷ್ಮಿ, ಸರಸ್ವತಿ, ನವದೇವತೆಗಳು, ನವಗ್ರಹಗಳು, ತಿಪ್ಪೇರುದ್ರಸ್ವಾಮಿ, ಕರಿಬಸಜ್ಜ ಮುಂತಾದ ಶಿಲ್ಪಗಳಿವೆ, ಮೂಲೆಯಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಕುದುರೆ ಹಾಗೂ ಸಿಂಹಗಳ ಶಿಲ್ಪಗಳಿವೆ, ದೇವರ

ಪೀಠದಲ್ಲಿ 16ಕಂಬಗಳಿವೆ, ಇದರ ಮೂಲೆಯಲ್ಲಿ ಸೊಂಡಿಲನ್ನು ಮೇಲಕ್ಕೆ ಎತ್ತಿ ಮೇಗಳ ಪಟ್ಟಿಯ ಮುಖೇನ ರಥದ ಭಾರವನ್ನು ಹೊತ್ತಿರುವಂತೆ ಕಾಣುವ ಆನೆಯ ಕುತ್ತಿಗೆಯವರೆಗಿನ ಶಿಲ್ಪವಿದೆ, ತೋರಣದ ಕೆತ್ತನೆ ಇರುವ ಹಲಗೆಗೆ ಸಣ್ಣ ಸಣ್ಣ ಪ್ರಮಾಣದ ಗಂಟೆಗಳನ್ನು ನೇತು ಹಾಕಿರುವುದು ರಥವು ಶೋಭಾಯಮಾನವಾಗಿ ಕಾಣುವಂತೆ ಮಾಡಿವೆ, ಹೊಸ ರಥದ ಜೊತೆಗೆ 18ಕಂಬಗಳನ್ನೊಳಗೊಂಡ ಉಚ್ಚಯವಿದ್ದು ಇದನ್ನೂ ಸಹ ಮರ ಮಾಧ್ಯಮದಿಂದ ಮಾಡಿದ್ದಾರೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಒಂದು ಸಾವಿರದ ಐದು ನೂರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ರಥೋತ್ಸವಕ್ಕೆ ಹತ್ತಿರದ ಹಳ್ಳಿಗಳಿಂದಲೂ ಭಕ್ತಾದಿಗಳು ಬರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ ಮೊದಲ ದಿನ ರಥೋತ್ಸವ, ಎರಡನೇ ದಿನ ಹೂವಿನ ಪಲ್ಲಕ್ಕಿ ಉತ್ಸವ, ಮೂರನೇ ದಿನ ಓಕುಳಿ ಕಾರ್ಯ ಮಾಡುತ್ತಾರೆ.

ರಥಕ್ಕೆ ಬಲಿಬಾನ(ಎಡೆ)ಹಾಕಿ ಗ್ರಾಮದ ಕೆಲವು ಕೋಮಿನವರಿಂದ ಪೂಜೆ ಮಾಡಿಸಿ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿ ವಾಪಾಸ್ಸು ಬರುತ್ತದೆ, ರಥದ ಮುಂದೆ ಕರಡಿ ಚಾಮಾಳ, ಡೋಲು, ನಂದಿ ಕೋಲಿನ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಈ.ವಿ. ಸಿರಿಯಪ್ಪ S/O ಈರಣ್ಣ ------ ಗ್ರಾಮಸ್ಥರು,

2). ಎಂ.ಎಸ್. ಲಕ್ಷ್ಮಣಪ್ಪ S/O ತಿಮ್ಮಪ್ಪ ------ ಗ್ರಾಮಸ್ಥರು

2). ಮಲ್ಲಿಕಾರ್ಜುನಪ್ಪ S/O ಬಸಣ್ಣ ------- ಗ್ರಾಮಸ್ಥರು.

3). ಗುರುನಾಥ ರೆಡ್ಡಿ S/O ಸಣ್ಣ ಹನುಮಂತಪ್ಪ ------ ಗ್ರಾಮಸ್ಥರು,

4). ಶಿವಮೂರ್ತಿ S/O ಎಂ.ಬಿ. ಗುರುಸಿದ್ದಪ್ಪ ------ ಗ್ರಾಮಸ್ಥರು,

5). ಅಂಜಿನಪ್ಪ S/O ಬೊಮ್ಮಯ್ಯ ------ ಗ್ರಾಮಸ್ಥರು,

6). ಬಸವರೆಡ್ಡಿ S/O ದೊಡ್ಡ ಬಸಪ್ಪ ------- ಗ್ರಾಮಸ್ಥರು.

3). ಯರ್ರಿ ಸ್ವಾಮಿ S/O ತಿಪ್ಪೇಸ್ವಮಿ ------ ಗ್ರಾಮಸ್ಥರು,

4). ಪರಮಾತ್ಮ ಸ್ವಾಮಿ S/O ಬಸಣ್ಣ ------ ಗ್ರಾಮಸ್ಥರು,

5). ಜಯಣ್ಣ S/O ಶಿವಣ್ಣ (ಗೌಡ್ರು) ------ ಗ್ರಾಮಸ್ಥರು.

31). ಹನುಮಂತನ ಹಳ್ಳಿ, ಆಂಜನೇಯನ ರಥ:

ಇಲ್ಲಿನ ಆಂಜನೇಯನ ದೇವಾಲಯವು ಪ್ರಾಚೀನ ಕಾಲದಲ್ಲಿ ನಿಮಾಣ ಮಾಡಿದ್ದಾಗಿದೆ, ಪ್ರಾಚೀನ ಕಾಲದಲ್ಲಿ ಪ್ರತಿಷ್ಟಾಪನೆ ಮಾಡಿರುವ ಹನುಮಂತನ ವಿಗ್ರಹವಿರುವುದರಿಂದ ಊರಿಗೆ 'ಹನುಮಂತನ ಹಳ್ಳಿ' ಎಂಬ ಹೆಸರು ಬಂದಿದೆ.

ಗ್ರಾಮದಲ್ಲಿ ಆಂಜನೇಯ, ದುರ್ಗಮ್ಮ, ಮಾರಮ್ಮ, ಪ್ರಾಚೀನ ಕಾಲದಲ್ಲಿ ನಿರ್ಮಾಣವಾದ ಶಿಥಿಲಾವಸ್ಥೆಯಲ್ಲಿರುವ ಈಶ್ವರ ದೇವಸ್ಥಾನ, ಬಸವಣ್ಣ, ಕೃಷ್ಣ, ಭೂತಪ್ಪ ದೇವಸ್ಥಾನಗಳು, ರಾಧಸ್ವಾಮಿ ಆಶ್ರಮ ಇದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಕಾರ್ತಿಕ ಮಾಸದಲ್ಲಿ ಅಂದರೆ ಡಿಸೆಂಬರ್ ಕೊನೆವಾರದಲ್ಲಿ ರಥ ಸಪ್ತಮಿಯ ದಿನ ಆಂಜನೇಯನ ಕಾರ್ತಿಕೋತ್ಸವ, ರಥೋತ್ಸವ, ಪಲ್ಲಕ್ಕಿ ಉತ್ಸವ ನಡೆಯುತ್ತದೆ, ದುರ್ಗಮ್ಮ ದೇವಿಗೆ ಕರಗ ಉತ್ಸವ, ಮಾರಮ್ಮ ದೇವಿಗೆ ಬಲಿ, ಹರಕೆ, ಪದ್ಧತಿಗಳು ಆಚರಣೆಯಲ್ಲಿವೆ.

ರಥೋತ್ಸವದ ದಿನ ಸುತ್ತಲ ಹಳ್ಳಿಗಳ ಜನರು ಬರುತ್ತಾರೆ, ಒಟ್ಟು ಒಂದು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ. ಮೂರುದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಗಂಗಾ ಪೂಜೆ, ಕಳಸ ಸ್ಥಾಪನೆ. ರಥದ ಅಲಂಕಾರ, ಎರಡನೇ ದಿನ ಮುಂಜಾನೆ 5.30ರಿಂದ ದೇವರಿಗೆ ಅಭಿಷೇಕ, 6.30ಕ್ಕೆ ರಥಕ್ಕೆ ಬಲಿ ಅನ್ನ, ವಿಶೇಷ ಪೂಜೆ ಸಲ್ಲುತ್ತದೆ, ಇದಾದ ನಂತರ ರಥವು ಪಾದಗಟ್ಟೆಯ ವರವಿಗೂ ಹೋಗಿ ಬರುತ್ತದೆ, ಮೂರನೇ ದಿನ ಪಲ್ಲಕ್ಕಿ ಉತ್ಸವ ಹಾಗೂ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಂತರ ಓಕುಳಿ ಕಾರ್ಯ ನಡೆಯುತ್ತದೆ.

ದೇವಸ್ಥಾನದ ಧಾರ್ಮಿಕ ಕಾರ್ಯವನ್ನು ಮಾಡಲು ಆಂಜನೇಯ ಸ್ವಾಮಿ ಸೇವಾ ಸಮಿತಿ ಇದೆ, ದೇವಸ್ಥಾನಕ್ಕೆ ಸೇರಿದ 41 ಎಕರೆ ಜಮೀನು ಇದ್ದು ಇದರಲ್ಲಿ ಈಗ ಕೆಲವು ಭಾಗ ಒತ್ತುವರಿಯಾಗಿದೆ.

ಮೊದಲು ಆಂಜನೇಯನ ಉಚ್ಚಯ ಇದ್ದು 2016ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, ರಾಣೆ ಬೆನ್ನೂರು ಸಮೀಪದ ಮಲೆ ಬೆನ್ನೂರಿನ ಸಂಪ್ರದಾಯ ಶಿಲ್ಪಿಗಳು ರಥವನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ 6,50,000–00(ಆರು ಲಕ್ಷದ ಐವತ್ತು ಸಾವಿರ)ರೂಗಳನ್ನು ಸಂಭಾವನೆಯಾಗಿ ಕೊಟ್ಟಿದ್ದಾರೆ, ಇದರ ಜೊತೆಗೆ 9ತಿಂಗಳುಗಳ ಕಾಲ ರಥವನ್ನು ಮಾಡಿದ ಶಿಲ್ಪಿಗಳಿಗೆ ಊಟ, ತಿಂಡಿಯ ವ್ಯವಸ್ಥೆಯನ್ನೂ ದೇವಸ್ಥಾನ ಸಮಿತಿಯಿಂದ ಮಾಡಿದ್ದಾರೆ, ರಥಕ್ಕೆ ಒಟ್ಟು 17,00000–00(ಹದಿನೇಳು ಲಕ್ಷ) ಖರ್ಚಾಗಿದ್ದು, ಊರಿನ ಭಕ್ತ ವೃಂದವು ಅವರವರ ಶಕ್ತಾನುಸಾರ ಹಣವನ್ನು ಕೊಟ್ಟಿದ್ದಾರೆ, ಪಕ್ಕದ ಊರಾದ ಕೊಂಡ್ಲ ಹಳ್ಳಿ ಗ್ರಾಮದ ವಾಸಿ ರುದ್ರಪ್ಪ ಒಂದು ಲಕ್ಷ, ಬೆಂಗಳೂರಿನ ಈರುಳ್ಳಿ ವರ್ತಕರಿಂದ ಒಂದು ಲಕ್ಷ, ಗ್ರಾಮದ ನೌಕರ ವರ್ಗದಿಂದ ಎರಡು ಲಕ್ಷ ದೇಣಿಗೆಯನ್ನು ಕೊಟ್ಟಿದ್ದಾರೆ, ರಥಕ್ಕೆ ಬೇಕಾದ ಕೆಲವು ಮರಗಳಲ್ಲಿ ಬೇವು ಹಾಗೂ ಬಾಗಿ ಮರಗಳನ್ನು ಊರಿನ ಭಕ್ತರು ಉಚಿತವಾಗಿ ಕೊಟ್ಟಿದ್ದಾರೆ, ಇನ್ನುಳಿದಂತೆ ತೇಗ, ಹೊನ್ನೆ, ಕರೆಮತ್ತಿ ಮರಗಳನ್ನು ಬೇರೆ ಕಡೆ ಖರೀದಿ ಮಾಡಿ ತಂದಿದ್ದಾರೆ. ರಥಕ್ಕೆ ಬಳಸುವ ಮರಗಳು ಚನ್ನಾಗಿ ಬಲಿತಿರಬೇಕು(ಸೇಗು ಬಂದಿರಬೇಕು) ಅಂತಹ ಮರಗಳನ್ನು ಮಾತ್ರ ರಥದ ನಿರ್ಮಾಣಕ್ಕೆ ಬಳಸುತ್ತಾರೆ.

ರಥದ ಗಾಲಿಗಳನ್ನು ಬಾಗಿಮರದಿಂದ ಮಾಡಿದ್ದು, ಅಚ್ಚು, ತೊಲೆ, ಅಡ್ಡ ಪಟ್ಟಿಗಳು, ತೊಲೆಗಳು, ಕಂಬಗಳು, ಪೀಠ, ಶಿಲ್ಪಗಳನ್ನು ತೇಗ, ಹೊನ್ನೆ, ಕರೆಮತ್ತಿ ಮರದಿಂದ ಮಾಡಲಾಗಿದೆ, ಮರದ ಗಾಲಿಗಳ ಮೇಲಿನ ಅಚ್ಚಿನಲ್ಲಿ ಕುಸುರಿ ಕೆತ್ತನೆ ಇದೆ, ಈ ಅಚ್ಚಿಗೆ ಹಾಕಿರುವ ನಾಲ್ಕು ಅಡ್ಡ ತೊಲೆಯ ತುದಿಗಳಲ್ಲಿ ಆನೆಗಳ ಕೆತ್ತನೆ ಇದ್ದು ಈ ಆನೆಗಳು ಮುಂದಿನ ಎರಡು ಕಾಲುಗಳನ್ನು ಕಟ್ಟೆಯ ಮೇಲೆ ಮಡಚಿ ಇಟ್ಟಿವೆ, ಈ ಆನೆಗಳ ಮಧ್ಯದಲ್ಲಿ ಕುಸುರಿ ಕೆತ್ತನೆ, ಇದರ ಮೇಲೆ ರಥವು ಎಂಟು ಮುಖದಿಂದ ನಿರ್ಮಾಣವಾಗಿದೆ, ತೊಲೆಯ ಮೇಲಿನ ಪಟ್ಟಿಯಲ್ಲಿ ತೋರಣದ ಕೆತ್ತನೆ, ನಂತರದಲ್ಲಿ ಹೂವಿನ ಸಾಲು, ಅದರ ನಂತರ ಮತ್ತೆ ತೋರಣದ ಕೆತ್ತನೆ, ಇದರ ಮೇಲಿನ ಒಂದೂವರೆ ಅಡಿ ಅಗಲವಾದ ಪಟ್ಟಿಯಲ್ಲಿ ದೊಡ್ಡದಾಗಿ ಕಾಣುವ ಹೂಬಳ್ಳಿಯ ಕೆತ್ತನೆ, ನಂತರದಲ್ಲಿ ತೋರಣ, ಇದರ ಮೇಲಿನ ಪಟ್ಟಿಯಲ್ಲಿ ಕುಸುರಿ ಕೆತ್ತನೆ, ಅದರ ಮೇಲೆ 32ಕಂಬಗಳಿವೆ, ಎಂಟು ಮೂಲೆಗಳಲ್ಲಿ ಹಿಂದಿನ ಎರಡು ಕಾಲುಗಳಲ್ಲಿ ನಿಂತು ಉದ್ದನೆಯ ಹೊಂಬಾಳೆಯಾಕಾರದಂತಿರುವ ವಸ್ತುವಿನ ಮೇಲೆ ಮುಂದಿನ ಎರಡು ಕಾಲುಗಳನ್ನು ಇಟ್ಟು ತಲೆಯ ಮೇಲೆ ರಥದ ಭಾರವನ್ನು ಹೊತ್ತಿರುವ ಸಿಂಹದ ಶಿಲ್ಪಗಳಿವೆ. ಜೋಡಿ ಕಂಬಗಳ ಮಧ್ಯದಲ್ಲಿ ಒಂದರಂತೆ ದೇವತಾ ಶಿಲ್ಪಗಳಿದ್ದು ಅವುಗಳಲ್ಲಿ ಆಂಜನೇಯ, ಗಣಪತಿ, ಈಶ್ವರ, ಈಶ್ವರಿ, ಲಕ್ಷ್ಮಿ, ಸರಸ್ವತಿ, ಶ್ರೀರಾಮ, ಸೀತಾದೇವಿ, ಲಕ್ಷ್ಮಣ, ಆಂಜನೇಯ, ಇಂದ್ರ, ಚಂದ್ರ, ವಿಷ್ಣು ಶಿಲ್ಪಗಳಿದ್ದು, ಇದರ ಮೇಲಿನ ಸಾಲಿನಲ್ಲಿ ವಿವಿಧ ದೇವಾನುದೇವತೆಗಳ ಶಿಲ್ಪಗಳಲ್ಲಿ ಅಷ್ಟದೇವತೆಗಳು, ಕುಬೇರ, ನವಗ್ರಹಗಳ ಅಧಿಪತಿಗಳು, ವಿವಿಧ ವಾಹನಗಳ ಜೊತೆಗೆ ಇರುವ ದೇವತೆಗಳು, ಶನಿಮಹಾದೇವ, ನೃತ್ಯಗಾತಿಯರು, ನಗ್ನರೂಪದ ಕೆತ್ತನೆಗಳು,

ವಾಸ್ತು ಅಧಿಪತಿ ಶಿಲ್ಪಗಳು ಕೆತ್ತನೆಗೊಂಡಿವೆ, ಇದರ ಜೊತೆಗೆ ಮತ್ತು ಮೇಲೆ ಕೆಳಗೆ ಸೂಕ್ಷ್ಮವಾದ ಕುಸುರಿ ಕೆತ್ತನೆ ಇದ್ದು ಅರ್ಧ ಅಡಿಗೆ ಒಂದೊಂದು ಚಿಕ್ಕ ಗಂಟೆಗಳನ್ನು ಹಾಕಿರುವುದು ರಥಕ್ಕೆ ಸುಂದರ ಆಕರ್ಷಣೆಯಾಗಿವೆ, ದೇವರನ್ನು ಕೂರಿಸುವ ಪೀಠವು ಎಂಟು ಕಂಬಗಳಿಂದ ರಚನೆಯಾಗಿದ್ದು ಕಮಾನುಗಳಲ್ಲಿ ಕುಸುರಿ ಕೆತ್ತನೆ ಇದೆ, ಪೀಠದ ಮೇಲಿನ ಭಾಗವು ಶಿಖರೋಪಾದಿಯಲ್ಲಿ ರಚಿತವಾಗಿದ್ದು ಇಲ್ಲಿ ಬಳಸಲಾಗಿರುವ ಪಟ್ಟಿಗಳಲ್ಲಿ ಚಿಕ್ಕ ಕುಸುರಿ ಕೆತ್ತನೆ ಇದೆ, ಇದರ ನಂತರದಲ್ಲಿ ಕಬ್ಬಿಣದ ಡೂಮು ಅಳವಡಿಸಿ ರಥೋತ್ಸವದ ಸಮಯದಲ್ಲಿ ಏಳು ಬಣ್ಣದ ಚಿಕ್ಕ ಚಿಕ್ಕ ಬಾವುಟಗಳಿಂದ ಸುದರವಾಗಿ ಅಲಂಕಾರ ಮಾಡುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಏಕಾಂತರೆಡ್ಡಿ S/O ಪಟೇಲ್ ಹನುಮಂತರೆಡ್ಡಿ(ಅಧ್ಯಕ್ಷರು) ------ ಗ್ರಾಮಸ್ಥರು,

2). ತಿಪ್ಪಾರೆಡ್ಡಿ S/O ಹನುಮಂತರೆಡ್ಡಿ(ಕಾರ್ಯದರ್ಶಿ)------ ಗ್ರಾಮಸ್ಥರು

ಮೊ: 9741928969.

32). ದೇವರೆಡ್ಡಿ ಹಳ್ಳಿ, ಆಂಜನೇಯನ ರಥ:

ದೇವರೆಡ್ಡಿ ಎಂಬ ಪ್ರಮುಖ ವ್ಯಕ್ತಿಯಿಂದ ಊರಿಗೆ ಈ ಹೆಸರು ಬಂದಿರಬಹುದಾಗಿದೆ, ಗ್ರಾಮದ ಆರಾಧ್ಯ ದೇವರುಗಳಾಗಿ ಆಂಜನೇಯ, ಕೊಲ್ಲಾಪುರದಮ್ಮ, ಈಶ್ವರ, ಶ್ರೀ ಕೃಷ್ಣ, ಪಾತಪ್ಪ, ಗಣೇಶ, ಹುಲಿಗೆಮ್ಮ ದೇವಸ್ಥಾನಗಳಿವೆ, ಅಲ್ಲಿಪೀರ್ ಗುಡಿಕಲ್ ಆಶ್ರಮವಿದೆ, ಆಂಜನೇಯ ಕಾರ್ತಿಕೋತ್ಸವವನ್ನು ಊರಿನ ಎಲ್ಲಾ ಸಮುದಾಯದವರು ಸೇರಿ ಮಾಡುತ್ತಾರೆ, ಮೂರು ವರ್ಷಗಳಿಗೊಮ್ಮೆ ಕೊಲ್ಲಾಪುರದಮ್ಮನ ಜಾತ್ರೆಯನ್ನು ಮಾಡುತ್ತಾರೆ, ಈ ಸಮಯದಲ್ಲಿ ದೇವಿಗೆ ಹರಕೆ ಬಲಿ ಒಪ್ಪಿಸುತ್ತಾರೆ, ಅಲ್ಲಿಪೀರ್ ಗುಡಿಕಲ್ ಆಶ್ರಮದಲ್ಲಿ ವಾರಕ್ಕೆ ಎರಡು ದಿನ ಭಜನೆ ಕಾರ್ಯಕ್ರಮ ನಡೆಯುತ್ತದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಆಂಜನೇಯ ದೇವರಿಗೆ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಕಾರ್ತಿಕೋತ್ಸವ ಮಾಡುತ್ತಾರೆ, ಮೂರು ದಿನಗಳು ಶನಿವಾರದಿಂದ ಸೋಮವಾರದವರೆವಿಗೆ ಮಾಡುವ ಕಾರ್ತಿಕೋತ್ಸವದಲ್ಲಿ ಮೊದಲ ದಿನ ಶನಿವಾರ ದೇವರಿಗೆ ಅಭಿಷೇಕ, ವಿಶೇಷ ಪೂಜೆ, ದೀಪಾರಾಧನೆ, ಎರಡನೇ ದಿನ ಭಾನುವಾರ ರಥೋತ್ಸವ, ಮೂರನೇ ದಿನ ಸೋಮವಾರ ಹೂವಿನ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಕಾರ್ತಿಕೋತ್ಸವವನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ, ಸುತ್ತಲ ಹಳ್ಳಿಗಳಿಂದ ಜನರು ತಂಡೋಪ ತಂಡವಾಗಿ ಬರುತ್ತಾರೆ, ರಥೋತ್ಸವದ ದಿನ ಬೆಳಿಗ್ಗೆ 8ಗಂಟೆಯಿಂದ 10ಗಂಟೆಯ ವರೆಗೆ ಉಚ್ಚಯ, ತರುವಾಯ ದೊಡ್ಡ ರಥೋತ್ಸವ ನಡೆಯುತ್ತದೆ, ದೇವಸ್ಥಾನದಿಂದ ಪಲ್ಲಕ್ಕಿಯಲ್ಲಿ ದೇವರನ್ನು ತಂದು ಅಲಂಕಾರ ಮಾಡಿರುವ ರಥದಲ್ಲಿ ಕೂರಿಸುತ್ತಾರೆ, ತದನಂತರ ರಥಕ್ಕೆ ಬಲಿಬಾನ ಹಾಕಿದ ತರುವಾಯ ಊರಿನ ಪಶ್ಚಿಮಕ್ಕೆ ಇರುವ ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮುಗಿಸಿಕೊಂಡು ಬರುತ್ತದೆ, ಪಾದಗಟ್ಟೆಯ ಹತ್ತಿರ ಗಣೇಶನ ದೇವಸ್ಥಾನವೂ ಇದೆ, ರಥೋತ್ಸವದ ನಂತರ ದೇವರನ್ನು ಪಲ್ಲಕ್ಕಿಯಲ್ಲಿ ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ, ಕಾರ್ತಿಕೋತ್ಸವದ ಸಮಯದಲ್ಲಿ ಎಲ್ಲಾ ಮನೆಗಳಿಗೂ ಸುಣ್ಣ ಬಣ್ಣಗಳಿಂದ ಅಲಂಕಾರ ಮಾಡಿ, ಊರಿನ ತುಂಬಾ ಆಧುನಿಕ ಲೈಟಿಂಗ್ಸ್‌ನಿಂದ ಅಲಂಕಾರ ಮಾಡಿ, ಧ್ವನಿ ವರ್ಧಕಗಳನ್ನು ಅಲ್ಲಲ್ಲಿ ಹಾಕಿಸಿರುತ್ತಾರೆ, ಜಾತ್ರೆಯ ಒಟ್ಟು ಖರ್ಚು ಎಂಬತ್ತು ಸಾವಿರ ರೂಗಳಾಗುತ್ತದೆ, ಈ ಖರ್ಚನ್ನು ಭರಿಸಲು ಮನೆಗಿಷ್ಟು ಹಣವನ್ನು ಸಂಗ್ರಹ ಮಾಡುತ್ತಾರೆ, ಜಾತ್ರೆಯ ಜವಾಬ್ದಾರಿಯನ್ನು ದೇವಸ್ಥಾನದ ಟ್ರಸ್ಟ್ ವಹಿಸಿಕೊಂಡಿರುತ್ತದೆ.

ಆಂಜನೇಯನ ದೇವರಿಗೆ ಮೊದಲು ಉಚ್ಚಯ ಮಾತ್ರ ಇದ್ದು ಈಗ 1985ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, ಇದೇ ಗ್ರಾಮದ ಬಡಗಿ ಹಾಗೂ ಸಂಪ್ರದಾಯ ಶಿಲ್ಪಿಯಾದ ತಿಪ್ಪಾಚಾರ್ ಎನ್ನುವವರು ಈ

ರಥವನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ 50,000-00(ಐವತ್ತು ಸಾವಿರ) ರೂಗಳನ್ನು ಮಾತ್ರ ಸಂಭಾವನೆಯಾಗಿ ಕೊಟ್ಟಿದ್ದಾರೆ, ನೂತನ ರಥವನ್ನು 6ತಿಂಗಳುಗಳ ಕಾಲ ಮಾಡಿದ್ದಾರೆ, ಇವರ ಜೊತೆಗೆ ಮೂರು ಜನ ಸಹಾಯಕ ಶಿಲ್ಪಿಗಳನ್ನು ಕೆತ್ತನೆ ಕೆಲಸಕ್ಕೆ ಬಳಸಿಕೊಂಡಿದ್ದಾರೆ, ರಥಕ್ಕೆ ಒಟ್ಟು 2,25,000-00(ಎರಡು ಲಕ್ಷದ ಇಪ್ಪತ್ತೈದು ಸಾವಿರ)ರೂಗಳು ಖರ್ಚಾಗಿದ್ದು, ಊರಿನ ಎಲ್ಲಾ ಸಮುದಾಯಗಳ ಭಕ್ತರು ರಥದ ನಿರ್ಮಾಣಕ್ಕೆ ಹಣದ ಸಹಾಯ ಮಾಡಿದ್ದಾರೆ, ಬರೀ ಕರೇ ಜಾಲಿ ಮರಗಳನ್ನು ಮಾತ್ರ ರಥದ ನಿರ್ಮಾಣಕ್ಕೆ ಬಳಸಿದ್ದು ಈ ಮರಗಳನ್ನು ಭಕ್ತರು ದಾನವಾಗಿ ಕೊಟ್ಟಿದ್ದಾರೆ, ರಥದ ಒಟ್ಟು ಎತ್ತರ 21ಅಡಿ, ದಪ್ಪ ಹಲಗೆಯಿಂದ ಗಾಲಿಗಳನ್ನು ಮಾಡಿದ್ದು ಈ ಗಾಲಿಗಳಿಗೆ ತೆಳ್ಳನೆಯ ಕಬ್ಬಿಣದ ಪಟ್ಟಿಗಳನ್ನು ಹಾಕಿದ್ದಾರೆ, ಗಾಲಿಗಳ ಕೂಲು, ಅಚ್ಚನ್ನು ಹಾಕುವ ರಂದ್ರವು ಸವೆಯದಿರಲೆಂದು ರಂದ್ರಕ್ಕೆ ಸರಿಯಾಗಿ ಕಬ್ಬಿಣದ ಕೊಳವೆಯನ್ನು ಹಾಗೂ ಗಾಲಿಗಳ ಅಂಚಿಗೆ ಕಬ್ಬಿಣದ ಅಳಿಯನ್ನು ಹಾಕಿದ್ದಾರೆ, ರಥದಲ್ಲಿ ಯಾವುದೇ ಶಿಲ್ಪಗಳನ್ನು, ಕುಸುರಿ ಕೆತ್ತನೆಯನ್ನು ಮಾಡಿಲ್ಲ, ಕಂಬಗಳು, ಅಡ್ಡಪಟ್ಟಿಗಳು ಇದ್ದು ಮೂರು ಅಂತಸ್ತಿನ(ಭಾಗ)ಲ್ಲೂ ಯಾವುದೇ ಶಿಲ್ಪಗಳು ಕುಸುರಿ ಕೆತ್ತನೆ ಇರುವುದಿಲ್ಲ, ಎರಡು ಕಂಬಗಳ ಮಧ್ಯದಲ್ಲಿ ಕಮಾನುಗಳ ಆಕಾರ ಮಾಡಿರುವ ಹಲಗೆಯನ್ನು ಜೋಡಣೆ ಮಾಡಲಾಗಿದೆ, ಎರಡನೇ ಅಂತಸ್ತಿನ ಕಮಾನು ಇರುವ ಪಟ್ಟಿಗೆ ಮೂರು ಇಂಚಿಗೆ ಒಂದರಂತೆ ಮರದಿಂದ ಮಾಡಿದ ಮಾವಿನ ಹಣ್ಣುಗಳನ್ನು ತೂಗುಹಾಕಿದ್ದಾರೆ, ಮೂರನೇ ಅಂತಸ್ತಿನಲ್ಲಿ ದೇವರನ್ನು ಕೂರಿಸುವ ಪೀಠವಿದೆ, ಇದರ ಮೇಲೆ ಮತ್ತೊಂದು ಚಿಕ್ಕ ಅಂತಸ್ತು ಇದ್ದು ಇದರ ಮೇಲೆ ಕಳಸವನ್ನು ಇಡುತ್ತಾರೆ, ರಥಕ್ಕೆ ಕಬ್ಬಿಣದ ಡೂಮು ಇರುವುದಿಲ್ಲ, ಮೊದಲನೆ ಅಂತಸ್ತಿನಲ್ಲಿ ಹೊರ ಮಗ್ಗುಲಿಗೆ ಮರದಿಂದ ಮಾಡಿದ ಆನೆ ಸೊಂಡಿಲಿನ ಆಕಾರದ ಕೊಳವೆಗಳನ್ನು ಮಾಡಲಾಗಿದೆ, ಇವುಗಳ ಮಧ್ಯದಲ್ಲಿ ಒಂದೊಂದು ಕಂಚಿನ ಗಂಟೆಗಳನ್ನು ನೇತುಹಾಕಿದ್ದಾರೆ, ಇದರ ಜೊತೆಗೆ ಲೋಹದ ಉಚ್ಚಯವೂ ಇದೆ, ಕಲ್ಲಿನ ನಾಲ್ಕು ಗಾಲಿಗಳು, ಗಾಲಿಗಳ ಮೇಲೆ ಎರಡು ಅಡಿ ಎತ್ತರ, ನಾಲ್ಕು ಅಡಿ ಅಗಲದ ಚೌಕಾಕಾರವುಳ್ಳ ಲೋಹದ ಪೆಟ್ಟಿಗೆಯನ್ನು ಮಾಡಿ ಇದರ ಮೇಲೆ ಒಂದು ಅಡಿ ಎತ್ತರ, 6ಅಡಿ ಅಗಲದ ಚೌಕಾಕಾರದ ಲೋಹದ ಹಲಗೆಯನ್ನು ಅಳವಡಿಸಿದ್ದಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ವೆಂಕಟೇಶರೆಡ್ಡಿ S/O ವೀರಭದ್ರಪ್ಪ ------ ಗ್ರಾಮಸ್ಥರು,

2). ಎಂ.ಹೆಚ್.ತಿಪ್ಪಾರೆಡ್ಡಿ S/O ಹನುಮಂತರೆಡ್ಡಿ ------ ಗ್ರಾಮಸ್ಥರು

3). ಎಸ್.ಹೆಚ್.ಹನುಮಂತರೆಡ್ಡಿ S/O ಹನುಮಂತಪ್ಪ------ ಗ್ರಾಮಸ್ಥರು,

2). ಲಿಂಗರಾಜು S/O ನಿಂಗಪ್ಪ ------ ಗ್ರಾಮಸ್ಥರು

ಮೊ : 9945559567.

33). ನಾಗಗೊಂಡನಹಳ್ಳಿ, ಆಂಜನೇಯನ ರಥ:

ನಾಗಗೊಂಡ ಎಂಬ ವ್ಯಕ್ತಿಯಿಂದ ಊರಿಗೆ ಹೆಸರು ಬಂದಿರಬಹುದು, ಗ್ರಾಮದಲ್ಲಿ ಆಂಜನೇಯ, ಗುಡಿ ಬಂಡೆಪ್ಪ, ಚಿಲುಮೆಸ್ವಾಮಿ, ಕೂಡಲ ಸಂಗಮೇಶ್ವರ, ಕರಿಯಮ್ಮ, ಗೋರ್ಲತ್ತು ಮಾರಮ್ಮ, ಜುಂಜಪ್ಪ, ದುರ್ಗಮ್ಮ, ಮಾರಮ್ಮ, ಅಜ್ಜಯ್ಯ, ಈರಣ್ಣ ದೇವಸ್ಥಾನಗಳಿವೆ, ಆಂಜನೇಯನ ರಥೋತ್ಸವ ಹಾಗೂ ಊರಾಚೆ ಇರುವ ಚಿಲುಮೆಸ್ವಾಮಿಯ ತೇರು ಮತ್ತು ಪಲ್ಲಕ್ಕಿ ಉತ್ಸವಗಳು ನಡೆಯುತ್ತವೆ. ಚಿಲುಮೆಸ್ವಾಮಿ ಮಠ ಈಗ ಚಿತ್ರದುರ್ಗ ಮುರುಘಾಮಠದ ಅಧೀನದಲ್ಲಿದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಮುಜರಾಯಿಗೆ ಸೇರಿದ ಆಂಜನೇಯ ದೇವರಿಗೆ ಪ್ರತಿ ವರ್ಷ ಯುಗಾದಿ ಹಬ್ಬ ಮುಗಿದು ಹಂಪೆ ಹುಣ್ಣಿಮೆ ಸಮಯದಲ್ಲಿ, ಚೈತ್ರ ಶುದ್ಧ ಪೌರ್ಣಿಮೆಯ ದಿನ

ರಥೋತ್ಸವ ನಡೆಯುತ್ತದೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಮುಂಜಾನೆ ಅಭಿಷೇಕ, ರಥೋತ್ಸವ, ಎರಡನೇ ದಿನ ಹೋಮ ಹಾಗೂ ದೇವರ ವಿಶೇಷ ಪೂಜೆ, ಮೂರನೇ ದಿನ ಕ್ಯಾತಗೊಂಡನಹಳ್ಳಿಯ ಕರಿಯಮ್ಮ ದೇವರನ್ನು ಕರೆತಂದು ಬಲಿ, ಹರಕೆ ಮಾಡುತ್ತಾರೆ, ದಸರಾ ಹಬ್ಬದಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ರಥೋತ್ಸವದ ಸಮಯದಲ್ಲಿ ಕರಡಿ ಚಮಾಳ, ನಂದಿಕೋಲು, ವೀರಗಾಸೆ ಕುಣಿತ, ಡೋಲು ಹಾಗೂ, ನಗಾರಿ ವಾದ್ಯಗಳು ಇರುತ್ತವೆ, ರಥಕ್ಕೆ ಎಡೆಯನ್ನು ಹಾಕಿ ವಿಶೇಷ ಪೂಜೆಯನ್ನು ಗ್ರಾಮದ ಪ್ರಮುಖರಿಂದ ಮಾಡಿದ ಮೇಲೆ ರಥವು ಪಾದಗಟ್ಟೆಯವರೆಗೆ ಹೋಗಿ ಬರುತ್ತದೆ, ಜಾತ್ರೆಯ ಖರ್ಚು 90,000-00ರೂಗಳು ಇದನ್ನು ಭಕ್ತರು ಕೊಡುತ್ತಾರೆ.

ಮೊದಲು ಈ ದೇವರಿಗೆ ಹಳೆಯ ರಥ ಇದ್ದು ಅದು ಮುರಿದು ಹೋಗಿ ಉಪಯೋಗಕ್ಕೆ ಬಾರದಾಗಿತ್ತು, ಈ ಕಾರಣದಿಂದ ಹೊಸ ರಥವನ್ನು ಮಾಡಿಸಬೇಕೆಂದು ಗ್ರಾಮದ ಎಲ್ಲಾ ಭಕ್ತರು ತೀರ್ಮಾನಿಸಿ, ತಹಶೀಲ್ದಾರ್‌ರವರ ಒಪ್ಪಿಗೆಯನ್ನೂ ಪಡೆದು 2009ರಲ್ಲಿ ಹೊಸ ರಥವನ್ನು ಕೋನಸಾಗರ ಗ್ರಾಮದ ಸಂಪ್ರದಾಯ ಶಿಲ್ಪಿಗಳಾದ ವೀರಾಚಾರ್‌ರವರಿಂದ ಮಾಡಿಸಿದ್ದಾರೆ, ದೇವರ ಹುಂಡಿಯ ಹಣ, ಗ್ರಾಮದ ಎಲ್ಲಾ ಸಮುದಾಯದ ಭಕ್ತರು, ಸರ್ಕಾರಿ ನೌಕರರು, ರಥದ ನಿರ್ಮಾಣಕ್ಕೆ ಹಣವನ್ನು ಕೊಟ್ಟಿದ್ದಾರೆ, ಒಟ್ಟು 3ಲಕ್ಷ(ಮೂರು ಲಕ್ಷ) ಹೊಸ ರಥವನ್ನು ಮಾಡಿಸಿದ ಖರ್ಚು, ರಥಕ್ಕೆ ಜಾಲಿಮರ, ಕರೇ ಮೂತಿ ಹಾಗೂ ತೇಗದ ಮರಗಳನ್ನು ಬಳಸಲಾಗಿದೆ, ಅಚ್ಚು, ಅಡ್ಡ ಪಟ್ಟಿಗಳು, ತೊಲೆಗಳು ಹಾಗೂ ಕೆಲವು ಶಿಲ್ಪಗಳನ್ನು ಕರೇ ಮೂತಿ ಮರದಿಂದ ಮಾಡಿದ್ದು, ತೇಗದ ಮರದಿಂದ ಕಂಬಗಳು, ಹೆಚ್ಚಿನ ಶಿಲ್ಪಗಳನ್ನು ಮಾಡಿದ್ದಾರೆ, ರಥವನ್ನು ಮಾಡಿರುವ ಶಿಲ್ಪಿಗಳಿಗೆ 65,000-00(ಅರವತ್ತೈದು ಸಾವಿರ)ರೂಗಳನ್ನು ಕೊಟ್ಟಿದ್ದಾರೆ.

ಹೊಸ ರಥವನ್ನು ಶಿಲ್ಪಿಗಳು 9ತಿಂಗಳುಗಳ ಕಾಲ ಮಾಡಿದ್ದಾರೆ, ಒಟ್ಟು ರಥದ ಎತ್ತರ 31ಅಡಿ ಇದೆ, ನಾಲ್ಕು ಹಳೆಯ ರಥದ ಕಲ್ಲಿನ ಗಾಲಿಗಳು, ಅಚ್ಚು, ತೊಲೆ, ಪಟ್ಟಿಗಳು, ಕಂಬಗಳು, ಶಿಲ್ಪಗಳು, ಪೀಠ, ಕಬ್ಬಿಣದ ಪಟ್ಟಿಗಳಿಂದ ಮಾಡಿರುವ ಡೂಮು, ಕಳಸಗಳನ್ನು ಹೊಸ ರಥವು ಒಳಗೊಂಡಿದೆ. ಅಚ್ಚಿನ ಮೇಲೆ ಇರುವ ತೊಲೆಗಳು ಹಾಗೂ ಪಟ್ಟಿಗಳಲ್ಲಿ ಸೂಕ್ಷ್ಮ ಕೆತ್ತನೆ ರಥಕ್ಕೆ ಮೆರುಗು ನೀಡಿದೆ, ನಾಲ್ಕು ಚೌಕಾಕಾರದಲ್ಲಿ ದೇವರ ಪೀಠದವರೆವಿಗೂ ನಿರ್ಮಾಣವಾಗಿದೆ, ಪೀಠವು ಮಾತ್ರ ಎಂಟು ಮುಖಗಳಿಂದ ರಚನೆಗೊಂಡಿದೆ, ರಥದ ನಾಲ್ಕು ಮೂಲೆಗಳಲ್ಲಿ ಹಿಂದಿನ ಎರಡು ಕಾಲುಗಳನ್ನು ಕೆಳಗೆ ಊರಿ ಮೇಲಕ್ಕೆ ಹಾರುವಂತೆ ಕುದುರೆಯ ಶಿಲ್ಪಗಳಿವೆ, ರಥದ ನಾಲ್ಕು ದಿಕ್ಕಿನಲ್ಲಿ ಎರಡು ಕಂಬಗಳ ಮಧ್ಯದಲ್ಲಿ ಒಂದರಂತೆ ಒಟ್ಟು 12ಉಬ್ಬು ಶಿಲ್ಪಗಳು ಕೆತ್ತನೆಗೊಂಡಿವೆ, ಒಂದು ಕಡೆ ಮಧ್ಯದಲ್ಲಿ ಪೀಠ ಸಹಿತ ಶಿವಲಿಂಗ ಇದರ ಎರಡೂ ಬದಿಗಳಲ್ಲಿ ನಂದಿಗಳಿವೆ, ಇನ್ನೊಂದು ಕಡೆ ಮಧ್ಯದಲ್ಲಿ ಶ್ರೀರಾಮ, ಸೀತಾದೇವಿ, ಲಕ್ಷ್ಮಣ, ಇದರ ಪಕ್ಕದಲ್ಲಿ ಆಂಜನೇಯ, ಗಣೇಶನ ಶಿಲ್ಪಗಳು, ಮತ್ತೊಂದು ದಿಕ್ಕಿನಲ್ಲಿ ರಾಘವೇಂದ್ರ ಸ್ವಾಮಿ, ಪಂಚಮುಖಿ ಆಂಜನೇಯ, ದೇವಿ, ಮೊಗದೊಂದು ಕಡೆ ಲಕ್ಷ್ಮಿ, ಶಾರದೆ, ಆಂಜನೇಯನ ಶಿಲ್ಪಗಳಿವೆ, ಮೇಲಿನ ಸಾಲಿನಲ್ಲಿ ದೊಡ್ಡ ಗಾತ್ರದ ಹೂವುಗಳು ಸುಂದರವಾಗಿ ಕೆತ್ತನೆಗೊಂಡಿವೆ, ಇದರ ಕೆಳಗೆ ತೋರಣದ ಪಟ್ಟಿಗೆ ಗಂಟೆಗಳನ್ನು ಹಾಕಿದ್ದಾರೆ, ದೇವರನ್ನು ಕೂರಿಸುವ ಪೀಠದಲ್ಲಿ ರೋಲಿಂಗ್ ಮಾಡಿದ ಆರು ಕಂಬಗಳಿವೆ, ಕಂಬಗಳ ಮೇಲೆ ಹಲಗೆಯಿಂದ ಮುಚ್ಚಿದ್ದು ಇದರ ಮೇಲೆ ಡೂಮು ಇಟ್ಟು ರತೋತ್ಸವದ ಸಮಯದಲ್ಲಿ ಅಲಂಕಾರ ಮಾಡುತ್ತಾರೆ, ರಥವು ತುಂಬಾ ಸುಂದರವಾಗಿ ನೋಡುಗರ ಮನಸ್ಸಿಗೆ ಸಂತಸ ನೀಡುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಎನ್.ಎಸ್. ಹನುಮಂತರಾವ್(ಮಾಜಿ ಶ್ಯಾನುಭೋಗರು) ------ ಗ್ರಾಮಸ್ಥರು,

2). ಜಿ. ಎ. ಭೀಮಣ್ಣ ------ ಗ್ರಾಮಸ್ಥರು

33/1). ನಾಗಗೊಂಡನ ಹಳ್ಳಿ, ಚಿಲುಮೆ ಸ್ವಾಮಿ, ರಥ:

ನಾಗಗೊಂಡನಹಳ್ಳಿ ಗ್ರಾಮದಿಂದ ಮೂರು ಕಿಲೋಮೀಟರ್ ದೂರದ ದಕ್ಷಿಣ ದಿಕ್ಕಿಗೆ ಪವಾಡ ಪುರುಷ ಚಿಲುಮೆಸ್ವಾಮಿಯ ದೇವಸ್ಥಾನ ಹಾಗೂ ಈಶ್ವರ ದೇವಸ್ಥಾನಗಳಿವೆ, ಚಿಲುಮೆ ಸ್ವಾಮಿ ಎನ್ನುವ ಪವಾಡ ಪುರುಷ ವಿಜಯ ನಗರದಿಂದ ಬಂದು ಈ ಪ್ರದೇಶದ ವೇದಾವತಿ ನದಿ ತೀರದ ದಡದಲ್ಲಿ ಐತಿಹಾಸಿಕ ಈಶ್ವರ ದೇವಸ್ಥಾನ ಇರುವ ಜಾಗದಲ್ಲಿ ಈಶ್ವರನ ಪೂಜೆಯನ್ನು ಮಾಡಿಕೊಂಡು ನೆಲೆಸಿದ್ದರು, ಇವರಿಗೆ ಗ್ರಾಮದ ದನ ಕಾಯುವವರು ಪ್ರತಿದಿನ ಹಾಲು ಕೊಡುತ್ತಿದ್ದರಂತೆ, ಇದಕ್ಕೆ ಪ್ರತಿಯಾಗಿ ಚಿಲುಮೆ ಸ್ವಾಮಿಯವರು ಜಾನುವಾರುಗಳಿಗೆ ಮತ್ತು ಮನುಷ್ಯರಿಗೆ, ಯಾವುದೇ ಖಾಯಿಲೆ ಬಂದರೂ ಗಿಡಮೂಲಿಕೆಗಳಿಂದ ಮತ್ತು ಪವಾಡದಿಂದ ವಾಸಿಮಾಡುತ್ತಿದ್ದರು, ಪವಾಡದಿಂದ ಮರಳನ್ನು ಧಾನ್ಯಗಳಾಗಿ ಮಾಡಿ ದನ ಕಾಯುವವರಿಗೆ ತಿನ್ನಲು ಕೊಟ್ಟು ಚಿಲುಮೆ ತೋಡಿ ನೀರನ್ನು ತೀರ್ಥ, ಔಷಧವಾಗಿ ಮಾಡಿಕೊಡುತ್ತಿದ್ದರಂತೆ, ಹೀಗೆ ಗ್ರಾಮದ ಭಕ್ತರಿಗೂ ಸ್ವಾಮಿಗೂ ಒಡನಾಟ ಬೆಳೆಯಿತು, ಇಂತಹ ಸ್ವಾಮೀಜಿ ಕೆಲವು ದಿನಗಳ ತರುವಾಯ ಅದೇ ಜಾಗದಲ್ಲಿ ಜೀವಂತ ಸಮಾಧಿಯಾದರಂತೆ ನಂತರ ಭಕ್ತರು ಅವರಿಗೆ ದೇವಸ್ಥಾನವನ್ನು ಕಟ್ಟಿ ಪೂಜಿಸುತ್ತಿದ್ದಾರೆ, ಜೊತೆಗೆ ರಥೋತ್ಸವವನ್ನು ಪ್ರತಿವರ್ಷ ಜನವರಿ ಅಥವಾ ಪೆಬ್ರವರಿ ತಿಂಗಳಲ್ಲಿ ಬರುವ ದಶಮಿಯ ಸಮಯದಲ್ಲಿ ಮಾಡುತ್ತಾರೆ, ಈ ಸಮಯದಲ್ಲಿ ದನಗಳ ಜಾತ್ರೆಯೂ ನಡೆಯುತ್ತದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಜಾಜೂರು, ನಾಗಗೊಂಡನಹಳ್ಳಿ, ಹಾಲಿಗೊಂಡನಹಳ್ಳಿ, ಹರವಿಗೊಂಡನಹಳ್ಳಿ ಈ ನಾಲ್ಕೂ ಹಳ್ಳಿಗಳ ಭಕ್ತರು ಸೇರಿ ದೇವಸ್ಥಾನ ಕಮಿಟಿಯನ್ನು ಮಾಡಿದ್ದು ಈ ಕಮಿಟಿಯ ಉಸ್ತುವಾರಿಯಲ್ಲಿ ಜಾತ್ರೆಯನ್ನು ಮಾಡುತ್ತಾರೆ, ಮೊದಲು ಎಂಟು ದಿನಗಳು ನಡೆಯುತ್ತಿತ್ತು, ಈಗ ಆರು ದಿನಗಳು ನಡೆಯುತ್ತೆ, ಮೊದಲ ದಿನ ಜಾಜೂರು ಗ್ರಾಮದ ಲಿಂಗಾಯ್ತ ಸಮುದಾಯದ ಪೂಜಾರವರ ಮನೆಯಿಂದ ಪಲ್ಲಕ್ಕಿಯಲ್ಲಿ ದೇವರನ್ನು ತಂದು ವೇದಾವತಿ ನದಿಯಲ್ಲಿ ಗಂಗಾ ಪೂಜೆ ಮಾಡಿ, ನಾಗಗೊಂಡನಹಳ್ಳಿ ನದಿಯ ದಡದಲ್ಲಿ ಇರುವ ದೇವಸ್ಥಾನದಲ್ಲಿ ಕೂರಿಸುತ್ತಾರೆ, 2ನೇ ದಿನ ರುದ್ರಾಭಿಷೇಕ, 3ನೇ ದಿನ ರಥೋತ್ಸವ, ರಥೋತ್ಸವದ ಸಮಯದಲ್ಲಿ ವಿವಿಧ ವಾದ್ಯಗಳು, ಡೋಲು, ಡಮರುಗ, ಕರಡಿ ಚಾಮಾಳ, ನಂದಿಕೋಲು ಕುಣಿತ, ವೀರಗಾಸೆ ಕುಣಿತ ಇರುತ್ತದೆ, ರಥಕ್ಕೆ ನೀರಿನಲ್ಲಿ ನೆನೆ ಹಾಕಿದ ಧಾನ್ಯಗಳನ್ನು ತೂರುತ್ತಾರೆ, ದೇವಸ್ಥಾನದ ಒಳಗೂ ನೆನೆಹಾಕಿದ ಹಸಿಕಾಳನ್ನು ಮಾತ್ರ ಎಡೆ ಹಾಕಿ ನೈವೇದ್ಯ ಮಾಡುತ್ತಾರೆ, ಬೇಯಿಸಿದ ಯಾವುದೇ ಆಹಾರವನ್ನು ದೇವಸ್ಥಾನದ ಒಳಗೆ ತೆಗೆದುಕೊಂಡು ಹೋಗುವುದಿಲ್ಲ, 4ನೇ ದಿನ ಹೂವಿನ ಪಲ್ಲಕ್ಕಿ ಉತ್ಸವ, 5ನೇ ದಿನ ವಿಶೇಷ ಪೂಜೆ, ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, 6ನೇ ದಿನ ಓಕುಳಿ ಹಾಗೂ ಮಹಾ ಮಂಗಳಾರುತಿ, ಇದಾದ ಮೇಲೆ ದೇವರನ್ನು ಪಲ್ಲಕ್ಕಿಯಲ್ಲಿ ಜಾಜೂರು ಗ್ರಾಮದ ಚಲುಮೆನಾರು ವಂಶದವರ ಮನೆಯಲ್ಲಿ ಇಡುತ್ತಾರೆ.

ನಾಲ್ಕು ಕಲ್ಲಿನ ಗಾಲಿಯ ರಥವಿದು, ನಾಲ್ಕು ಮೂಲೆಗಳಲ್ಲಿ ಕೆಳಗಡೆ ಸಾಲಿನಲ್ಲಿ ಆನೆಗಳ ಕೆತ್ತನೆ. ಇದರ ಮೇಲೆ ಮೂಲೆಯಲ್ಲಿ ಎರಡು ಕಾಲಿನಲ್ಲಿ ನಿಂತ ಸಿಂಹದ ಕೆತ್ತನೆ ಇದೆ, ರಥದ ಮುಂಭಾಗದಲ್ಲಿ ಅಡ್ಡಲಾಗಿ ಹಾಕಿರುವ ಅಗಲವಾದ ತೊಲೆಯಲ್ಲಿ ಗಣೇಶನ ಕೆತ್ತನೆ. ಇದರ ಮೇಲಿನ ಸಾಲಿನ ಒಂದು ಮೂಲೆಯಲ್ಲಿ ಕೈಮುಗಿದಕೊಂಡು ನಿಂತಿರುವ ಮನುಷ್ಯನ ಕೆತ್ತನೆ, ಇನ್ನೊಂದು ಮೂಲೆಯಲ್ಲಿ ಓಡುತ್ತಿರುವ ಮನುಷ್ಯ, ಮತ್ತೊಂದು ಮೂಲೆಯಲ್ಲಿ ತನ್ನ ತೊಡೆಯ ಮೇಲೆ ಎರಡೂ ಕೈಗಳನ್ನು ಇಟ್ಟುಕೊಂಡು ಕುಬ್ಜನಾಗಿ ನಿಂತಿರುವ ಕೆತ್ತನೆ, ಮೊಗದೊಂದು ಮೂಲೆಯಲ್ಲಿ ಎರಡೂ ಕೈಗಳನ್ನು ಮೇಲಕ್ಕೆತ್ತಿ ನಿಂತಿರುವ ಮನುಷ್ಯ ಕೆತ್ತನೆ ಇದೆ, ಈ ನಾಲ್ಕು ಆಕಾರದ ಮನುಷ್ಯನ ಕೆತ್ತನೆಯನ್ನು ಗಮನಿಸಿದರೆ. ಸಾಧಾರಣ

ಉಡುಗೆಯನ್ನು ತೊಟ್ಟು ದೇವತಾ ಕಾರ್ಯದಲ್ಲಿ ತೊಡಗಿರುವಂತೆ ತೋರುತ್ತದೆ, ಇವುಗಳ ಪಕ್ಕದಲ್ಲಿ ಅರ್ಧ ಅಡಿ ಎತ್ತರದ ಕಂಬಗಳನ್ನು ಅಳವಡಿಸಿದ್ದಾರೆ, ಇದರ ಮೇಲೆ ದೇವರನ್ನು ಕೂರಿಸುವ ಪೀಠವಿದೆ.

ರಥವನ್ನು ಮಾಡಿಸಿ ಸುಮಾರು 60ವರ್ಷವಾಗಿದೆಯಂತೆ, ಆಂಧ್ರದ ಶಿಲ್ಪಿಗಳು ರಥವನ್ನು ಮಾಡಿದ್ದರಂತೆ, 18ಅಡಿ ಎತ್ತರವಾಗಿರುವ ರಥವು ಒಂದೇ ತರಹದ ಮರದಿಂದ ಮಾಡಿದ್ದಾಗಿದ್ದು ಸಾಧಾರಣ ಶೈಲಿಯಲ್ಲಿದೆ, ಒಟ್ಟು 12 ಶಿಲ್ಪಗಳ ಕೆತ್ತನೆ ಮಾತ್ರ ಇದ್ದು, ಶಿಲ್ಪಗಳೂ ಸಹ ಸಾಧಾರಣವಾಗಿವೆ, ಕುಸುರಿ ಕೆತ್ತನೆ ಇರುವುದಿಲ್ಲ, ಕಪ್ಪು ಬಣ್ಣವನ್ನು ರಥಕ್ಕೆ ಬಳಸಿದ್ದು, ಮರದಿಂದಲೇ ನಿರ್ಮಾಣ ಮಾಡಿದ್ದಾಗಿದೆ, ರಥಕ್ಕೆ ಜಾತ್ರೆಯ ಸಮಯದಲ್ಲಿ ವಿವಿಧ ಬಣ್ಣದ ಬಟ್ಟೆಗಳು, ಪಟಗಳಿಂದ, ಬಾವುಟಗಳಿಂದ ಹಾಗೂ ಹೂವುಗಳಿಂದ ಅಲಂಕಾರ ಮಾಡುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಓಬಳೇಶಪ್ಪ S/O ಹನುಮಂತಪ್ಪ, ನಾಗಗೊಂಡನಹಳ್ಳಿ ----- ಗ್ರಾಮಸ್ಥರು,

2). ಬೊಮ್ಮಯ್ಯ, ಜಾಜೂರು ----- ಗ್ರಾಮಸ್ಥರು

3). ತಿಪ್ಪೇಸ್ವಾಮಿ, ಹಾಲಿಗೊಂಡನಹಳ್ಳಿ ----- ಗ್ರಾಮಸ್ಥರು,

4). ರಾಮಚಂದ್ರಪ್ಪ, ಹರವಿಗೊಂಡನಹಳ್ಳಿ ----- ಗ್ರಾಮಸ್ಥರು

5). ಸಿದ್ದಲಿಂಗಪ್ಪ S/O ತಿಪ್ಪೇಸ್ವಾಮಿ ------- ಪೂಜಾರ್, ಮೊ : 9980990743.

34). ಕಾಮ ಸಮುದ್ರ, ನಾಗೇಶ್‌ತಾತನ ರಥ:

ನಿಡಗಲ್ಲು ಪ್ರಾಂತ್ಯದ ಪಾಳೆಯಗಾರ ಕಾಮರಾಜ ಕಟ್ಟಿಸಿದ ಕೆರೆಯ ಕಾರಣದಿಂದ ಕಾಮರಾಜನ ಕೆರೆ, ಕಾಮರಾಜನ ಸಮುದ್ರ ಎಂಬ ಹೆಸರುಗಳಿಂದ ಕರೆಯುತ್ತಾರೆ.

ನಾಗೇಶ್ ತಾತನ ಮಠ, ಮೈಲಾರಲಿಂಗೇಶ್ವರ, ಪಾತಲಿಂಗೇಶ್ವರ, ಕರಿಯಣ್ಣ, ಬೀರಲಿಂಗೇಶ್ವರ, ಸಿದ್ದಪ್ಪ, ತಿಮ್ಮಪ್ಪ, ಪೆದ್ದಮ್ಮ, ಆಂಜನೇಯ, ಲಕ್ಷ್ಮಿ, ವೀರಭದ್ರ, ವೀರ ನರಸಿಂಹ ಸ್ವಾಮಿ, ಗರುಡ ದೇವರು, ಈಶ್ವರ ದೇವರುಗಳು ಗ್ರಾಮದಲ್ಲಿವೆ, ಪ್ರತಿವರ್ಷ ಶಿವರಾತ್ರಿಯಲ್ಲಿ ನಾಗೇಶ್ ತಾತ ದೇವರಿಗೆ ವಿಶೇಷವಾದ ಜಾತ್ರೆ, ರತೋತ್ಸವ, ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಈ ಸಂದರ್ಭದಲ್ಲಿ ಹೂವಿನ ಅಲಂಕಾರ ಹಾಗೂ ವಿವಿಧ ವಾದ್ಯಗಳಿಂದ ಮೆರವಣಿಗೆ ನಡೆಯುತ್ತದೆ, ಪಾತಲಿಂಗೇಶ್ವರ, ಕರಿಯಣ್ಣ, ಬೀರಲಿಂಗೇಶ್ವರ, ಸಿದ್ದಪ್ಪ, ತಿಮ್ಮಪ್ಪ, ಪೆದ್ದಮ್ಮ, ಆಂಜನೇಯ ದೇವರುಗಳಿಗೆ ದಸರಾ ಮಹೋತ್ಸವ, ಹೊಂಬು ಹೊಡೆಯುವ ಕಾರ್ಯಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಶಿವರಾತ್ರಿಯಲ್ಲಿ ರಥೋತ್ಸವ ನಡೆಯುತ್ತದೆ, ಕೂನಬೇವು ಗ್ರಾಮದ ಸಂಪ್ರದಾಯ ಶಿಲ್ಪಿಗಳು ರಥವನ್ನು ಮಾಡಿದ್ದಾರೆ, ಗ್ರಾಮದ ಪ್ರತಿ ಮನೆಗಳಿಂದ, ನೌಕರರಿಂದ ಹಣವನ್ನು ರಥದ ನಿರ್ಮಾಣಕ್ಕೆ ಸಂಗ್ರಹಿಸಿದ್ದಾರೆ, 24-02-2009ರಲ್ಲಿ ನೂತನ ರಥವನ್ನು ಮಾಡಿಸಿದ್ದಾರೆ, ಶಿಲ್ಪಿಗಳಿಗೆ ತೊಂಬತ್ತೈದು ಸಾವಿರ (95,000-00)ಸಂಭಾವನೆಯನ್ನು ಕೊಟ್ಟಿದ್ದು, 8ತಿಂಗಳುಗಳ ಕಾಲ ರಥವನ್ನು ನಿರ್ಮಾಣ ಮಾಡಿದ್ದಾರೆ, ಕಬ್ಬಿಣದ ಪಟ್ಟಿಗಳು, ಸಲಾಕೆಗಳಿಂದ ಮಾಡಿದ ಡೂಮು, ಇತರೆ ಖರ್ಚು ಸೇರಿ ಒಟ್ಟು 7,00000-00(ಏಳು ಲಕ್ಷ)ವಾಗಿದೆ, ರಥಕ್ಕೆ ಜಾಲಿ, ತೇಗ, ಹೊನ್ನೆ, ಬೀಟೆ ಮರಗಳನ್ನು ಬಳಸಲಾಗಿದ್ದು ರಥದ ಒಟ್ಟು ಎತ್ತರ 25ಅಡಿ, ಈ ರಥವು 5ಅಂತಸ್ತಿನ ಸಾಧಾರಣವಾದ ಉಬ್ಬು ಕೆತ್ತನೆಯ ಚೌಕಾಕಾರದಲ್ಲಿ ನಿರ್ಮಾಣವಾಗಿದ್ದು, ದೇವರ ಪೀಠವು ಎಂಟು ಕಂಬಗಳ ಎಂಟು ಮುಖಗಳಿಂದ ರಚಿತವಾಗಿದೆ, ಇದರ ನಂತರದಲ್ಲಿ ಕಳಸವನ್ನು ಇಡಲು ಚೌಕಾಕಾರದ ರಚನೆ ಇದ್ದು ಇಲ್ಲೂ ಸರಳ ಹಾಗೂ ಸುಲಭ ಕೆತ್ತನೆಗಳಿವೆ, ತೊಲೆಗಳ ಮಧ್ಯದಲ್ಲಿ ಚಕ್ರದ ಕೆತ್ತನೆ ಇದೆ, ನಂತರದಲ್ಲಿ ಜಿಂಕೆ ಹಾಗೂ ಬಳ್ಳಿಯ ಸಾದಾ ಕೆತ್ತನೆ ಇದೆ, ಇದರ ಮೇಲಿನ ಸಾಲಿನಲ್ಲಿ ಸ್ಥಳೀಯ

ದೇವರಾದ ನಾಗೇಶ್ ತಾತ, ಜಯ, ವಿಜಯರು, ನಂದಿ ಶಿವನಲಿಂಗ, ವಿಷ್ಣು, ಆಂಜನೇಯ, ಸರಸ್ವತಿ, ತಿಪ್ಪೇಸ್ವಾಮಿ, ತಪಸ್ಸಿನಲ್ಲಿರುವ ಋಷಿಮುನಿ, ಕರಿಬಸಜ್ಜ, ನಾಟ್ಯ ಸರಸ್ವತಿ, ನಟರಾಜ, ಆನೆ ನಂದಿಯ ಕಾಳಗ, ಗಣಪತಿ, ನಗ್ನ ಕೆತ್ತನೆಗಳು, ಆನೆ, ಹೂವಿನ ಕೆತ್ತನೆ ಇದೆ, ಕಂಬಗಳ ಬದಲಿಗೆ ಈ ರಥದಲ್ಲಿ ಆನೆಯ ಸೊಂಡಿಲಿನ ಆಕಾರದಲ್ಲಿ ಮರದ ಕೊಳವೆಗಳಿವೆ, ಎರಡನೇ ಅಂತಸ್ತಿನ ನಾಲ್ಕು ಮೂಲೆಗಳಲ್ಲಿ ಸಾಧಾರಣ ಸಿಂಹದ ಕೆತ್ತನೆ ಇದೆ, ಮೂರನೇ ಅಂತಸ್ತಿನ ಮೂಲೆಗಳಲ್ಲಿ ಹಿಂದಿ ಭಾಷೆಯ ಓಂ ಅಕ್ಷರವಿದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಒಂದು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ರಥೋತ್ಸವಕ್ಕೆ ಹತ್ತಿರದ ಹಳ್ಳಿಗಳಿಂದಲೂ ಭಕ್ತಾದಿಗಳು ಬರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆ ಇದಾಗಿದ್ದು, ಮೊದಲ ದಿನ ಶಿವರಾತ್ರಿ ಹಬ್ಬ ಆಚರಣೆ, ಜಾಗರಣೆ, ಎರಡನೇ ದಿನ ರಥೋತ್ಸವ, ಮೂರನೇ ದಿನ ಹೂವಿನ ಪಲ್ಲಕ್ಕಿ ಉತ್ಸವ, ಅನ್ನಸಂತರ್ಪಣೆ ಕಾರ್ಯ ಮಾಡುತ್ತಾರೆ.

ರಥಕ್ಕೆ ಬಲಿಬಾನ ಹಾಕಿದ ಮೇಲೆ ರಥವು ಊರಾಚೆ ಇರುವ ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿಕೊಂಡು ಬರುತ್ತದೆ, ರಥದ ಮುಂದೆ ಕರಡಿ ಚಮಾಳ, ಡೋಲು, ನಂದಿ ಕೋಲಿನ ಕುಣಿತ, ಕೀಲು ಕುದುರೆ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಬಾಲರಾಜ್ ------ ಗ್ರಾಮಸ್ಥರು,

2). ಮಹಲಿಂಗಪ್ಪ ------ ಗ್ರಾಮಸ್ಥರು

3). ಕರೇಗೌಡ ------- ಗ್ರಾಮಸ್ಥರು.

4). ರಾಮಮೂರ್ತಿ ------ ಗ್ರಾಮಸ್ಥರು,

5). ತಿಪ್ಪೇಸ್ವಾಮಿ ------ ಗ್ರಾಮಸ್ಥರು

6). ಗೋವಿಂದಪ್ಪ ------- ಗ್ರಾಮಸ್ಥರು.

7). ನಾಗರಾಜ್ -------- ಗ್ರಾಮಸ್ಥರು. ಮೊ:9591646401, 9945464226.

35). ಕಾಲುವೆಹಳ್ಳಿ, ಬಂಡೆ ಬಸವೇಶ್ವರನ ರಥ:

ಗೋಸಿಕೆರೆ ಪ್ರಾಂತ್ಯದಲ್ಲಿದ್ದ ಕಾಳಚಾರಿಯು ಪಾಳೆಯಗಾರರಿಗೆ ಮತ್ತು ಇತರೆ ಜನರಿಗೂ ಅನುಕೂಲವಾಗುವಂತೆ ಗರಣಿಹಳ್ಳದಿಂದ ಈಗಿರುವ ಜನವಸತಿ ಪ್ರದೇಶದವರೆಗೂ ಕಾಲುವೆ ತೆಗಿಸಿ ಅನುಕೂಲ ಮಾಡಿಕೊಟ್ಟನಂತೆ, ನಂತರದಲ್ಲಿ ಕಾಲುವೆಯ ಪ್ರದೇಶದಲ್ಲಿ ಜನವಸತಿಯಾಗಿದ್ದು ಅದಕ್ಕೆ ಕಾಲುವೆಹಳ್ಳಿ ಎಂದು ಕರೆಯುತ್ತಿದ್ದಾರೆ.

ಗ್ರಾಮದಲ್ಲಿ ಬಂಡೆ ಬಸವೇಶ್ವರ, ಪೀರ್ಲ ದೇವರು, ನೀಲ ಕಂಠೇಶ್ವರ, ಮುಕ್ಕಣ್ಣೇಶ್ವರ, ಏಳು ಆಂಜನೇಯ ದೇವರುಗಳಿವೆ, ಕಾಳಿಕಾದೇವಿ, ಮಾರಮ್ಮ, ಗಾದ್ರಿಪಾಲನಾಯಕ, ಎಲ್ಲಮ್ಮ, ಜುಂಜಪ್ಪ, ತಿಮ್ಮಪ್ಪ, ಬೈಲಾಂಜನೇಯ, ದುರ್ಗಮ್ಮ, ಪೆನ್ನೋಬಳ ದೇವರು, ಕೊಲ್ಲಾಪುರದಮ್ಮ, ಚೌಡಮ್ಮ, ದೇವಸ್ಥಾನಗಳಿವೆ, ಬಂಡೆ ಬಸವೇಶ್ವರ ಕಾರ್ತಿಕೋತ್ಸವವನ್ನು ಮಾಡುತ್ತಾರೆ ಈ ಸಮಯದಲ್ಲಿ ರಥೋತ್ಸವ ನಡೆಯುತ್ತದೆ, ಎಲ್ಲಾ ಸಮುದಾಯದವರು ಸೇರಿ ಆಚರಣೆ ಮಾಡುತ್ತಾರೆ, ಪಲ್ಲಕ್ಕಿ ಉತ್ಸವ, ಆರತಿ ಬೆಳಗುವ ಪದ್ಧತಿ ಇದೆ, ಪೀರ್ಲ ದೇವರ ಹಬ್ಬದಂದು ಎಲ್ಲಾ ಸಮುದಾಯದವರು ಕೊಂಡ ಆಚರಣೆಯನ್ನು ಮಾಡುತ್ತಾರೆ, ಮಾರಮ್ಮ ದೇವಿಗೆ ಬಲಿ, ಹರಕೆ ಪದ್ಧತಿಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಅನುರಾಧ ನಕ್ಷದ ಸಮಯದಲ್ಲಿ ಬಂಡೆ ಬಸವೇಶ್ವರ ದೇವರ ರಥೋತ್ಸವ ನಡೆಯುತ್ತದೆ, ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಅಜ್ಜಿಹಳ್ಳಿ ಗ್ರಾಮದ ಸಂಪ್ರದಾಯ ಶಿಲ್ಪಿಗಳಾದ ರಾಮಲಿಂಗಾ ಚಾರ್ಯರು, ಲೋಹಿತಾ ಚಾರ್ಯರು, ಲೀಲಾಧರ

ಮೂರ್ತಿ ಮತ್ತು ಇವರ ಸಹೋದರರು ಸೇರಿ ರಥವನ್ನು ಮಾಡಿದ್ದಾರೆ, ರಥವನ್ನು ನಿರ್ಮಾಣ ಮಾಡಲು ಈ ಗ್ರಾಮದ ಪ್ರತಿ ಮನೆಗಳಿಂದ ಅವರ ಆರ್ಥಿಕ ಅನುಕೂಲತೆಗೆ ತಕ್ಕಂತೆ ಹಣವನ್ನು ನೀಡಿದ್ದಾರೆ, ನೌಕರರು, ಭಕ್ತರುಗಳು ಹಣ ಹಾಗೂ ಹಲವು ಬಗೆಯ ಮರಗಳನ್ನು ಕೊಟ್ಟಿದ್ದಾರೆ, ಸಾಧಾರಣ ಶೈಲಿಯ ಹಳೆಯ ರಥವು ಇದ್ದು ಗ್ರಾಮದ ಭಕ್ತರೆಲ್ಲಾ ಹೊಸ ರಥವನ್ನು ಮಾಡಿಸಲು ತೀರ್ಮಾನಿಸಿ 2013ರಲ್ಲಿ ಹೊಸ ರಥವನ್ನು ಮಾಡಿಸಿದ್ದಾರೆ, 6ತಿಂಗಳುಗಳ ಕಾಲ ಶಿಲ್ಪಿಗಳು ಕೆತ್ತನೆ ಕೆಲಸವನ್ನು ಮಾಡಿದ್ದಾರೆ, ರಥವನ್ನು ಮಾಡಿದ ಶಿಲ್ಪಿಗಳಿಗೆ 5,05001(ಐದು ಲಕ್ಷದ ಐದು ಸಾವಿರದ ಒಂದು)ರೂಪಾಯಿಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಕಬ್ಬಿಣದ ಪಟ್ಟಿಗಳಿಂದ(ಸಲಾಕೆಗಳಿಂದ) ಮಾಡಿದ ಡೂಮು, ಕಳಸ ಹಾಗೂ ರಥಕ್ಕೆ ಬೇಕಾದ ಇತರೆ ವಸ್ತುಗಳ ಖರ್ಚು, ದಾನವಾಗಿ ಕೊಟ್ಟ ಮರ ಮಟ್ಟುಗಳನ್ನು ಬಿಟ್ಟು ಬೇರೆ ಕಡೆಯಿಂದ ಖರೀದಿ ಮಾಡಿ ತಂದ ಮರಗಳ ಖರ್ಚು ಸೇರಿ, 16,00000–00(ಹದಿನಾರು ಲಕ್ಷ)ರೂಗಳು ಹೊಸ ರಥವನ್ನು ಮಾಡಿಸಿದ ಒಟ್ಟು ಖರ್ಚು.

ನೂತನ ರಥಕ್ಕೆ ಕರೇ ಜಾಲಿ, ಬಾಗಿಮರ(ಬಿಲ್ವಮರ), ಬೇವು, ತೇಗ, ಹೊನ್ನೆ ಮರಗಳನ್ನು ಬಳಸಲಾಗಿದೆ, ಕರೇ ಜಾಲಿ ಮರದಿಂದ ಹಲಗೆಗಳು, ಬಿಲ್ವ(ಬಾಗಿ)ಮರದಿಂದ ಗಾಲಿಗಳು, ಬೇವು, ತೇಗ ಹಾಗೂ ಹೊನ್ನೆ ಮರಗಳಿಂದ ಕೆಲವು ಕುಸುರಿ ಕೆತ್ತನೆ, ಶಿಲ್ಪಗಳು ಮತ್ತು ರಥದ ವಿವಿಧ ಭಾಗಗಳಿಗೆ ಬಳಸಲಾಗಿದೆ, ಗಾಲಿಯಿಂದ ಕಳಸದ ವರೆವಿಗೂ ಸೇರಿ ಒಟ್ಟು 31ಅಡಿ ಎತ್ತರವಿದೆ, ಅಚ್ಚಿನ ಮೇಲೆ ಹಾಕಿರುವ ನಾಲ್ಕು ತೊಲೆಗಳ ಕೊನೆಯಲ್ಲಿ ಓಡುತ್ತಿರುವ ಆನೆಗಳು, ಆನೆಗಳ ಕೆಳಗೆ ಹೆಡೆ ಬಿಚ್ಚಿರುವ ಸರ್ಪದ ಕೆತ್ತನೆ ಮೋಹಕವಾಗಿದೆ, ಎರಡು ಆನೆಗಳ ಮಧ್ಯದಲ್ಲಿ ಹಂಸ ಪಕ್ಷಿಯ ಕೆತ್ತನೆ ಜನರ ಮನಸ್ಸನ್ನು ಸೆಳೆಯುತ್ತದೆ, ತೊಲೆಗಳ ನಂತರ ಪಟ್ಟಿಗಳು ಆಕರ್ಷಣೀಯ ಕೆತ್ತನೆಯಿಂದ ಕೂಡಿದೆ, ಇದರ ನಂತರ ಎಂಟು ಮುಖಗಳಿಂದ ರಥವನ್ನು ಮಾಡಿದ್ದು, ಎಂಟು ಮುಖಗಳಲ್ಲಿ ಜೋಡಿ ಕಂಬಗಳ ಮಧ್ಯದಲ್ಲಿ ಒಂದರಂತೆ ವಿವಿಧ ರೀತಿಯ ದೇವರುಗಳ ಶಿಲ್ಪಗಳು ಹಾಗೂ ಪೀಠದ ಕೆಳಗೆ ಕೆತ್ತನೆ ಗೊಂಡಿರುವ ಶಿಲ್ಪಗಳು ನೋಡುಗರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿವೆ, ಗಣೇಶ, ಲಕ್ಷ್ಮಿ, ಸರಸ್ವತಿ, ಆಂಜನೇಯ, ಇಂದ್ರ, ತಿಪ್ಪೇರುದ್ರಸ್ವಾಮಿ, ಶಿವ, ದೇವಿ, ನಟರಾಜ, ನ್ರತ್ಯಗಾರರು, ವಾದ್ಯಗಾರರು, ನವಗ್ರಹಗಳು, ರಾಶಿಗಳ ದೇವತೆಗಳು, ವಿಷ್ಣು ಹಾಗೂ ಶಿವನ ವಿವಿಧ ಅವತಾರಗಳ ಕೆತ್ತನೆ ಮನೋಹರವಾಗಿವೆ, ಜೊತೆಗೆ ಭಕ್ತಿಯ ಸೆಲೆ ಹುಟ್ಟಿಸುತ್ತವೆ, ದೇವರ ಪೀಠವು ಎಂಟು ಕಂಬಗಳಿಂದ ಕೂಡಿದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಐದು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ರಥೋತ್ಸವಕ್ಕೆ ಹತ್ತಿರದ ಹಳ್ಳಿಗಳಿಂದಲೂ, ಆಂದ್ರ ರಾಜ್ಯದಲ್ಲಿ ಈ ದೇವರಿಗೆ ನಡೆದುಕೊಳ್ಳುವ ಭಕ್ತರು ಇದ್ದು ಅವರು ಜಾತ್ರೋತ್ಸವದ ಸಮಯಕ್ಕೆ ಬರುತ್ತಾರೆ, ಮೂರು ದಿನಗಳು ನಡೆಯುವ ಅದ್ದೂರಿ ರಥೋತ್ಸವದ ಜಾತ್ರೆ ಇದಾಗಿದ್ದು, ಮೊದಲ ದಿನ ಗಂಗಾ ಪೂಜೆ, ಎರಡನೇ ದಿನ ಅಭಿಷೇಕ, ಪಲ್ಲಕ್ಕಿ ಉತ್ಸವ, ಮೆರವಣಿಗೆ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ, ವಿವಿಧ ಕ್ರೀಡೆಗಳು, ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ, **ಜೋಡು ಎತ್ತುಗಳಿಂದ ಕಲ್ಲು ಎಳೆಯುವ ಸ್ಪರ್ಧೆ ವಿಶೇಷವಾಗಿರುತ್ತವೆ, ಈ ಸ್ಪರ್ಧೆಗೆ ಸುತ್ತಲ ಊರುಗಳಿಂದಲೂ ಜೋಡೆತ್ತುಗಳು ಭಾಗವಹಿಸುತ್ತವೆ.**

ರಥಕ್ಕೆ ಬಲಿಬಾನ ಹಾಕಿ ಗ್ರಾಮದ ಕೆಲವಾರು ಸಮುದಾಯದವರಿಂದ ಪೂಜೆ ಮಾಡಿಸಿ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿಕೊಂಡು ಬರುತ್ತದೆ, ರಥದ ಮುಂದೆ ಕರಡಿ ಚಮಾಳ, ಡೋಲು, ನಂದಿ ಕೋಲಿನ ಕುಣಿತ, ಕೀಲುಕುದುರೆ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ರಂಗಸ್ವಾಮಿ S/O ತಿಮ್ಮಯ್ಯ ----- ಗ್ರಾಮಸ್ಥರು

2). ಬೋರಣ್ಣ ----- ಗ್ರಾಮಸ್ಥರು
3). ಭೂತಣ್ಣ ------ ಗ್ರಾಮಸ್ಥರು.
4). ತಿಮ್ಮಣ್ಣ ----- ಗ್ರಾಮಸ್ಥರು
5). ಗಾದ್ರಿ ಪಾಲಯ್ಯ ----- ಗ್ರಾಮಸ್ಥರು
6). ಶ್ರೀನಿವಾಸ ------ ಗ್ರಾಮಸ್ಥರು.
7). ಜಿ.ಆರ್. ತಿಮ್ಮಣ್ಣ ------ ಗ್ರಾಮಸ್ಥರು.
ಮೊ:9900964938.

36). ಮತ್ಸಮುದ್ರ, ಆಂಜನೇಯನ ರಥ:

ಆಂಜನೇಯನ ಬೆವರ ಹನಿ ಇಲ್ಲಿಯ ಕೆರೆ(ಸಮುದ್ರ)ಯಲ್ಲಿರುವ ಮೀನಿನ ಬಾಯಿಗೆ ಬಿದ್ದು ಆ ಮೀನಿನ ಹೊಟ್ಟೆಯಲ್ಲಿ ಮಚ್ಚೆ ಹನುಮ ಜನಿಸಿದನಂತೆ, ಹಾಗಾಗಿ ಇಲ್ಲಿನ ಊರಿಗೆ ಮಚ್ಚೆಸಮುದ್ರ ಎಂದು ಕರೆಯುತ್ತಿದ್ದು ಕ್ರಮೇಣ ಮತ್ಸಮುದ್ರ ಎಂದು ಕರೆಯುತ್ತಿದ್ದಾರೆ, ಜನರು ಮತ್ತೊಂದು ಕಾರಣವನ್ನು ಕೊಡುತ್ತಾರೆ, ಕೆರೆಯ ಸಮೀಪ ಮತ್ತಿಯ ಮರ ಇದ್ದು, ಈ ಪ್ರದೇಶದಲ್ಲಿ ಆದ ಊರಿಗೆ ಮತ್ತಿ ಸಮುದ್ರ ಎಂದು ಕರೆಯುತ್ತಿದ್ದರು, ಕಾಲಾನಂತರ ಮತ್ಸಮುದ್ರ ಎಂದಾಗಿದೆ.

ಗ್ರಾಮದಲ್ಲಿ ರುದ್ರನ ಪಾದಬಂಡೆ, ಮಂಗದೋಣಿ, ಮತ್ಸ್ಯ ಆಂಜನೇಯ, ಮಾರಮ್ಮ ದೇವಸ್ಥಾನಗಳಿದ್ದು, ಪಂಚಲಿಂಗಳನ್ನು ಒಳಗೊಂಡ ಪ್ರತಿಮೆ ಇದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಆಂಜನೇಯನ ರಥೋತ್ಸವವನ್ನು ಮತ್ತು ಕಾರ್ತಿಕೋತ್ಸವವನ್ನು ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಮಾಡುತ್ತಾರೆ, ಈ ಸಮಯದಲ್ಲಿ ಪಲ್ಲಕ್ಕಿ ಉತ್ಸವ, ಉಟ್ಲ ಪರಿಷೆ, ವಿನೋದ ವಸಂತೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ, ಮಾರಮ್ಮನ ಹಬ್ಬದಲ್ಲಿ ಹರಕೆ, ಬಲಿ ಪದ್ಧತಿಗಳನ್ನು ಮಾಡುತ್ತಾರೆ, **ಉಟ್ಲ ಪರೀಷೆ:**-ಉಟ್ಲ ಪರಿಷೆ ಎಂದರೆ ದಪ್ಪನೆಯ, ನುಣುಪಾದ ಮತ್ತು ನೇರವಾದ ಕಂಬವನ್ನು ನೆಲದ ಮೇಲೆ ನಿಲ್ಲಿಸಿರುತ್ತಾರೆ, ಈ ಕಂಬಕ್ಕೆ ಕೆಸರು, ಜೇಡಿಮಣ್ಣನ್ನು ಸವರಿರುತ್ತಾರೆ ಮತ್ತು ಲೋಳೆ ರಸ, ಹರಳೆಣ್ಣೆಯನ್ನು ಹಚ್ಚಿರುತ್ತಾರೆ, ಜಾರುತ್ತಿರುವ ಇಂತಹ ಕಂಬವನ್ನು ನಾಯಕ ಮತ್ತು ಗೊಲ್ಲರ ಸಮುದಾಯದವರು ಮಾತ್ರ ಹತ್ತುವ ಅವಕಾಶ ಹಾಗೂ ಸಂಪ್ರದಾಯವಾಗಿದೆ, ಇದು ದೇವರ ಕಂಬವಾಗಿರುತ್ತದೆ, ಕಂಬವನ್ನು ಹತ್ತುತ್ತ ಮೇಲಿನ ತುದಿಯನ್ನು ಮುಟ್ಟಬೇಕು ಅಂತಹವರಿಗೆ ದೇವಸ್ಥಾನದಿಂದ, ಗ್ರಾಮದಿಂದ ಬಹುಮಾನ ಇರುತ್ತದೆ, ಎರಡು ಸಮುದಾಯದಲ್ಲಿ 6ಜನರ ಎರಡು ಗುಂಪುಗಳಾಗಿ ಮಾಡಿ ಈ ಉಟ್ಲಕಂಬವನ್ನು ಹತ್ತಲು ಬಿಡಲಾಗುತ್ತದೆ, ಒಂದೊಂದು ತಂಡಕ್ಕೆ ಮೂರು ವರ್ಷಗಳ ಕಾಲ ಕಂಬವನ್ನು ಹತ್ತಲು ಪ್ರಥಮಸ್ಥಾನ ನೀಡಲಾಗುತ್ತದೆ, ಇದು ಮನರಂಜನೆ ಜೊತೆಗೆ ಸಾಹಸದ ಕ್ರೀಡೆಯಾಗಿರುತ್ತದೆ.

ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಗ್ರಾಮದ ಸಂಪ್ರದಾಯ ಶಿಲ್ಪಿಗಳು ರಥವನ್ನು ಮಾಡಿದ್ದಾರೆ, ರಥದ ನಿರ್ಮಾಣಕ್ಕೆ ಗ್ರಾಮದ ಎಲ್ಲಾ ಸಮುದಾಯದವರು ಹಣವನ್ನು ನೀಡಿದ್ದಾರೆ, ಇತರೆ ಭಕ್ತರು ಹಣ ಹಾಗೂ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ, 7ತಿಂಗಳುಗಳ ಕಾಲ ಶಿಲ್ಪಿಗಳು ರಥದ ಕೆಲಸವನ್ನು ಮಾಡಿದ್ದಾರೆ, ಶಿಲ್ಪಿಗಳಿಗೆ 85,000-00(ಎಂಬತ್ತೈದು ಸಾವಿರ)ರೂಪಾಯಿಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ಹೊಸ ರಥಕ್ಕೆ ಜಾಲಿ, ಬೇವು, ಹೊನ್ನೆ ಮರಗಳನ್ನು ಬಳಸಲಾಗಿದೆ, ರಥದ ಒಟ್ಟು ಎತ್ತರ 25ಅಡಿ ಇದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಎರಡು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೋತ್ಸವಕ್ಕೆ ಹತ್ತಿರದ ಹಳ್ಳಿಗಳಿಂದಲೂ ಭಕ್ತರು ಬರುತ್ತಾರೆ, ಮೊದಲ ದಿನ

ಗಂಗಾ ಪೂಜೆ, ರಥದ ಅಲಂಕಾರ, ಎರಡನೇ ದಿನ ಅಭಿಷೇಕ, ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ, ರಥಕ್ಕೆ ಎಡೆಯನ್ನು ಹಾಕಿ ಗ್ರಾಮದ ಹನ್ನೆರಡು ಕೈವಾಡಸ್ಥರು ಪೂಜೆ ಮಾಡಿದ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಸಲ್ಲಿಸಿ ವಾಪಾಸ್ಸು ಬರುತ್ತದೆ, ರಥದ ಮುಂದೆ ಕರಡಿ ಚಮಾಳ, ಡೋಲು, ನಂದಿ ಕೋಲಿನ ಕುಣಿತ, ಆಧುನಿಕ ವಾದ್ಯಗಳು ಇರುತ್ತವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಸುಧೇಂದ್ರಪ್ಪ (ಬ್ರಹ್ಮಣರು) ------ ಪಾಜಾರ್,

2). ಪ್ರಕಾಶ್------ ಗ್ರಾಮಸ್ಥರು

37). ಹರವಿ ಗೊಂಡನಹಳ್ಳಿ, ತಿಪ್ಪೇರುದ್ರ ಸ್ವಾಮಿರಥ:

ಮುಸ್ಲಿಂರವರ ದಬ್ಬಾಳಿಕೆಯಿಂದ ತಪ್ಪಿಸಿಕೊಂಡು ಬಂದ ಬಸುರಿ ಹೆಣ್ಣೊಬ್ಬಳು ಈ ಪ್ರದೇಶದಲ್ಲಿ ಅವಿತುಕೊಂಡು ಇಲ್ಲಿನವರ ಆಶ್ರಯದಲ್ಲಿದ್ದಳು, ಈಕೆಗೆ ಜನಿಸಿದ ಅವಳಿ ಜವಳಿ ಗಂಡು ಮಕ್ಕಳು ಇಲ್ಲಿ ವಾಸಿಸುತ್ತಿದ್ದು ಕಸವಿಗೊಂಡ ಹಾಗೂ ಹರವಿಗೊಂಡ ಎಂಬ ಹೆಸರುಗಳಿಂದ ಇಲ್ಲಿನ ಜನರ ರಕ್ಷಣೆಗೆ ಕಂಕಣ ಬದ್ಧರಾಗಿ ಶ್ರಮಿಸಿದರು, ಇವರ ಕಾಲಾನಂತರ ಕಸವಿಗೊಂಡನ ಹೆಸರಿಗೆ ಕಸವಿಗೊಂಡನಹಳ್ಳಿ, ಹರವಿಗೊಂಡನ ಹೆಸರಿಗೆ ಹರವಿಗೊಂಡನಹಳ್ಳಿ ಎಂದು ಎರಡು ಊರುಗಳಿಗೆ ಹೆಸರಿಟ್ಟಿದ್ದಾರೆ.

ಗ್ರಾಮದಲ್ಲಿ ತಿಪ್ಪೇರುದ್ರಸ್ವಾಮಿ, ಕೊಲ್ಲಾಪುರದಮ್ಮ, ಆಂಜನೇಯ, ತಿಮ್ಮಪ್ಪ ದೇವಸ್ಥಾನಗಳಿವೆ, ಪ್ರತೀ ವರ್ಷ ಕಾರ್ತಿಕ ಮಾಸದಲ್ಲಿ ತಿಪ್ಪೇರುದ್ರಸ್ವಾಮಿಯ ತೇರು, ಪಲ್ಲಕ್ಕಿ ಉತ್ಸವ ನಡೆಯುತ್ತದೆ, ನಾಗಗೊಂಡನಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಚಲುಮೆ ಸ್ವಾಮಿ ದೇವರಿಗೆ ಈ ಊರಿನ ಎಲ್ಲಾ ಸಮುದಾಯದವರು ನಡೆದುಕೊಳ್ಳುತ್ತಾರೆ, ಇಲ್ಲಿನ ಭಕ್ತರೆಲ್ಲಾ ಸೇರಿ ಪೆಬ್ರವರಿ ತಿಂಗಳಲ್ಲಿ ಚಲುಮೆಸ್ವಾಮಿ ಜಾತ್ರೆ ಮಾಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಗ್ರಾಮದಲ್ಲಿ ನೆಲೆಸಿರುವ ತಿಪ್ಪೇರುದ್ರ ಸ್ವಾಮಿ ದೇವರ ಜಾತ್ರೆ ಮತ್ತು ಕಾರ್ತಿಕೋತ್ಸವವನ್ನು ರಥ ಎಳೆಯುವುದರ ಮುಖಾಂತರ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಮಾಡುತ್ತಾರೆ, ಈ ಸಮಯದಲ್ಲಿ ಪಲ್ಲಕ್ಕಿ ಉತ್ಸವವೂ ನಡೆಯುತ್ತದೆ, ಇದು ಹಳೆಯ ರಥವಾಗಿದ್ದು 18ಅಡಿಗಳ ಎತ್ತರವಿದೆ.

ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ನಡೆಯುವ ರಥೋತ್ಸವಕ್ಕೆ ಸಾವಿರಾರು ಜನ ಸೇರುತ್ತಾರೆ, ಮೂರು ದಿನಗಳು ರಥೋತ್ಸವ ನಡೆಯುತ್ತದೆ, ಮೊದಲ ದಿನ ವೇದಾವತಿ ನದಿಯಲ್ಲಿ ಗಂಗಾ ಪೂಜೆ, ರಥದ ಅಲಂಕಾರ, ಎರಡನೇ ದಿನ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ, ರಥಕ್ಕೆ ಬಲಿಬಾನ ಹಾಕಿ ಪೂಜೆ ಮಾಡಿದ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಬರುತ್ತದೆ, ರಥದ ಮುಂದೆ ಕರಡಿ ಮಜಲು, ಡೋಲು, ನಂದಿ ಕೋಲಿನ ಕುಣಿತ ಹಾಗೂ ಆಧುನಿಕ ವಾದ್ಯಗಳು ಇರುತ್ತವೆ, ರಥೋತ್ಸವದ ಸಮಯದಲ್ಲಿ ಕೊಬ್ಬರಿಯನ್ನು ಸುಡುವುದು ವಿಶೇಷವಾಗಿರುತ್ತದೆ, ಅರ್ಧ ಸುಟ್ಟ ಕೊಬ್ಬರಿಯನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪೇಸ್ವಾಮಿ ------ ಗ್ರಾಮಸ್ಥರು,

2). ಮಂಜಣ್ಣ------ ಗ್ರಾಮಸ್ಥರು

38). ಜುಂಜರಗುಂಟೆ, ಆಂಜನೇಯನ ರಥ:

ಜುಂಜರು ಎಂಬ ಸಮುದಾಯದವರು ಬೇರೆ ಕಡೆಯಿಂದ ವಲಸೆ ಬಂದು ನೀರಿನ ಕುಂಟೆ ಇರುವ ಈ ಜಾಗದಲ್ಲಿ ನೆಲೆಸಿದ್ದರಿಂದ ಈ ಪ್ರದೇಶಕ್ಕೆ ಜುಂಜರಗುಂಟೆ ಎಂಬ ಹೆಸರಾಯಿತು.

ಗ್ರಾಮದಲ್ಲಿ ಆಂಜನೇಯ, ಮಾರಿಕಾಂಬ, ಕಟ್ಟೆಮಾರಕ್ಕ, ಮಾರಮ್ಮ, ಅಜ್ಜಯ್ಯ, ಬಸವಣ್ಣ, ಹಾಳೂರು ಹನುಮಂತರಾಯ ದೇವಸ್ಥಾನಗಳಿವೆ, ಡಿಸೆಂಬರ್ ತಿಂಗಳಲ್ಲಿ ಆಂಜನೇಯಸ್ವಾಮಿ ಕಾರ್ತಿಕೋತ್ಸವವನ್ನು ರಥೋತ್ಸವದ ಮುಖಾಂತರ ಆಚರಣೆ ಮಾಡುತ್ತಾರೆ, ಮಾರಮ್ಮ ದೇವಿಗೆ ಹರಕೆ, ಬಲಿ ಪದ್ಧತಿಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಆಂಜನೇಯನ ರಥೋತ್ಸವವು ಮೂರು ದಿನಗಳು ನಡೆಯುತ್ತೆ, ಮೊದಲ ದಿನ ಗಂಗಾ ಪೂಜೆ, ನಂತರ ರಥದ ಅಲಂಕಾರ, 2ನೇ ದಿನ ಪಲ್ಲಕ್ಕಿ ಉತ್ಸವ, ರಥೋತ್ಸವ, 3ನೇ ದಿನ ಓಕುಳಿ ಕಾರ್ಯ ನಡೆಯುತ್ತದೆ, ರಥೋತ್ಸವದ ದಿನ ಪಲ್ಲಕ್ಕಿಯಲ್ಲಿ ದೇವರನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರಣಿಗೆ ಮಾಡಿ ನಂತರ ಅಲಂಕಾರಗೊಂಡಿರುವ ರಥದಲ್ಲಿ ಕೂರಿಸುತ್ತಾರೆ, ನಂತರ ಎಡೆಹಾಕಿ ಪೂಜೆ ಸಲ್ಲಿಸಿದ ಮೇಲೆ ಪಾದಗಟ್ಟೆಯವರೆಗೆ ಹೋಗಿ ಬರುತ್ತದೆ, ರಥೋತ್ಸವದ ಸಮಯದಲ್ಲಿ ವಿವಿಧ ವಾದ್ಯಗಳು, ಡೋಲು, ನಂದಿಕೋಲು ಕುಣಿತ ಇರುತ್ತದೆ.

ನಾಲ್ಕು ಕಲ್ಲಿನ ಗಾಲಿಯ ರಥ ಇದಾಗಿದ್ದು, 22ಅಡಿ ಎತ್ತರವಿದೆ, ಜಾಲಿಮರದಿಂದ ಮಾಡಿದ ಈ ರಥಕ್ಕೆ ವಿವಿಧ ಬಣ್ಣಗಳ ಬಟ್ಟೆಗಳು, ಪಟಗಳಿಂದ, ಬಾವುಟಗಳಿಂದ ಹಾಗೂ ಹೂವುಗಳಿಂದ ಅಲಂಕಾರ ಮಾಡುತ್ತಾರೆ, ರಥೋತ್ಸವಕ್ಕೆ ಪಕ್ಕದ ಊರುಗಳಿಂದ ಭಕ್ತರು ಬರುತ್ತಾರೆ.

39). ತಪ್ಪಗೊಂಡನ ಹಳ್ಳಿ, ಆಂಜನೇಯನ ರಥ:

ಆಂದ್ರ ಗಡಿಭಾಗ ಶ್ರೀಶೈಲದ ಅರಣ್ಯ ಕಡೆಯಿಂದ ಬಂದು ಈ ಪ್ರದೇಶದಲ್ಲಿ ನೆಲೆನಿಂತ ತಪ್ಪಗೊಂಡ ಎನ್ನುವ ವ್ಯಕ್ತಿ ಅಥವಾ ಸಮುದಾಯದಿಂದ ಹಳ್ಳಿಗೆ ಈ ಹೆಸರು ಬಂದಿರಬಹುದು.

ಗ್ರಾಮದಲ್ಲಿ ನೆಲೆಸಿರುವ ದೇವರುಗಳಲ್ಲಿ ಆಂಜನೇಯ, ಮಾರಮ್ಮ, ಪೆನ್ನೋಬಳ ನರಸಿಂಹಸ್ವಾಮಿ, ರಂಗಸ್ವಾಮಿ, ಜುಂಜಪ್ಪ ದೇವರುಗಳಿದ್ದು, ಪ್ರತೀ ವರ್ಷ ಕಾರ್ತಿಕ ಮಾಸದಲ್ಲಿ ಆಂಜನೇಯ ದೇವರಿಗೆ ರಥೋತ್ಸವವನ್ನು ಮತ್ತು ಕಾರ್ತಿಕೋತ್ಸವವನ್ನು ಮಾಡುತ್ತಾರೆ, ಮಾರಮ್ಮ ದೇವಿಗೆ ಹಬ್ಬದಂದು ಆರತಿ ಹರಕೆ, ಬಲಿ ಕಾರ್ಯಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ನಡೆಯುವ ಆಂಜನೇಯನ ರಥೋತ್ಸವದಲ್ಲಿ ಸಾವಿರಕ್ಕೂ ಹೆಚ್ಚಿನ ಜನ ಪಾಲ್ಗೊಳ್ಳುತ್ತಾರೆ, ಹತ್ತಿರದ ಊರುಗಳಿಂದಲೂ ಜನರು ಬರುತ್ತಾರೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಗಂಗಾ ಪೂಜೆ, ದೀಪೋತ್ಸವ, ಎರಡನೇ ದಿನ ಅಭಿಷೇಕ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ತಿಪ್ಪಣ್ಣ ------ ಗ್ರಾಮಸ್ಥರು

2). ನಾಗರಾಜ್ ------ ಗ್ರಾಮಸ್ಥರು

40). ಕಾಪರ ಹಳ್ಳಿ, ಕಾಟಮಹಲಿಂಗೇಶ್ವರನ ತೇರು:

ಊರಿನ ಪೂರ್ವದ ಹೆಸರು ಕಾಪರಮಾರನಹಳ್ಳಿ, ಕಾಪರಿಮಾರ ಎಂಬ ವ್ಯಕ್ತಿ ಕಮ್ಮಾರಿಕೆ ಕೆಲಸ ಮಾಡಿಕೊಂಡಿದ್ದು ಕಾಲಾ ನಂತರ ಊರಿಗೆ ಈತನ ಹೆಸರಿನಿಂದ ಕರೆಯುತ್ತಿದ್ದಾರೆ.

ಕಾಟಂಲಿಂಗೇಶ್ವರ, ಆಂಜನೇಯ, ದೇವಿ, ಕೊಲ್ಲಾಪುರದಮ್ಮ, ತಿಮ್ಮಪ್ಪ, ಚಿತ್ರದೇವರು, ಗೌರಸಮುದ್ರ ಮಾರಮ್ಮ, ಭೂತಪ್ಪ, ಭಂಡಾರದಮ್ಮ ಗ್ರಾಮದ ದೇವರುಗಳಾಗಿವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಊರಿನಲ್ಲಿ ನೆಲೆಸಿರುವ ಗೌರಸಮುದ್ರ ಮಾರಮ್ಮ ದೇವರಿಗೆ ಪ್ರತಿ ವರ್ಷ ಹರಕೆ ಬಲಿ ನಡೆಯುತ್ತದೆ, ಕಾಟಂಲಿಂಗೇಶ್ವರ ದೇವರಿಗೆ ಮೈಸೂರು ದಸರಾ ನಡೆಯುವ ಸಮಯದಲ್ಲಿ ಭಾನುವಾರದಿಂದ ಗುರುವಾರದವರೆಗೆ 5ದಿನಗಳು ಅಂದರೆ ಭಾನುವಾರದಿಂದ ಗುರುವಾರದವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ ಜಾತ್ರೆ ನಡೆಯುತ್ತದೆ, ಮೊದಲನೇ ದಿನ ಭಾನುವಾರ ಊರಿನ ಎಲ್ಲರೂ ಉಪವಾಸದಿಂದ ದೇವರ ಪೂಜೆ ಮಾಡುತ್ತಾರೆ, ದೇವರ ಒಳ ಮಠದಲ್ಲಿ ಪಟ್ಟಾಭಿಷೇಕ, ಭಕ್ತಾದಿಗಳ ಮನೆಯಲ್ಲಿ ದಾಸೋಹ, 2ನೇ ದಿನ ಸೋಮವಾರ ಪೆಟ್ಟಿಗೆ ದೇವರ ಉತ್ಸವ, ಮತ್ತು ರಥೋತ್ಸವ, ಗುಡ್ಡದ ಪೂಜೆ, ದೊಡ್ಡ ಬೇವಿನ ಮರದ ಪೂಜೆ, 3ನೇ ದಿನ ಮಂಗಳವಾರ ಪಲ್ಲಕ್ಕಿ ಉತ್ಸವ, ಕಾಡು ಕಾಯುವ ಮರಕ್ಕೆ ದೇವರು ಹೋಗುವುದು, ಮುತ್ತೈದೆಯರಿಂದ ಹಿಟ್ಟಿನ ಆರುತಿ, 4ನೇ ದಿನ ಬುಧವಾರ ಉಂಡೆ ಮಂಡೆ, ಉರುಳು ಸೇವೆ, ಅನ್ನ ಸಂತರ್ಪಣೆ, 5ನೇ ದಿನ ಗುರುವಾರ ಹೊಂಬು ಹೊಡೆಯುವ ಕಾರ್ಯಗಳು ನಡೆಯುತ್ತವೆ.

ಪ್ರತಿವರ್ಷ ಯುಗಾದಿ ಹಬ್ಬದ ನಂತರ ಬರುವ ಹಂಪೆ ಹುಣ್ಣಿಮೆ ಸಮಯದಲ್ಲಿ ರಥೋತ್ಸವ ನಡೆಯುತ್ತದೆ, ಮೊದಲು ಉಚ್ಚಯ ಇದ್ದು 2014ರಲ್ಲಿ ಹೊಸದಾಗಿ ಲೋಹದ(ಮೆಟಲ್) ರಥವನ್ನು ಮಾಡಿಸಿದ್ದಾರೆ, ಚಕ್ರದಿಂದ ಹಿಡಿದು ಪೂರ್ತಿಯಾಗಿ ಎಲ್ಲಾ ಭಾಗವೂ ಲೋಹದಿಂದಲೇ ಮಾಡಿದ್ದಾರೆ, ಸಾಧಾರಣ ಶೈಲಿಯಲ್ಲಿರುವ ಈ ರಥದಲ್ಲಿ ನಾಲ್ಕು ಮೂಲೆಗಳಲ್ಲಿ ಮಲಗಿರುವ ನಂದಿಯ ಲೋಹದ ಶಿಲ್ಪಗಳಿವೆ, ರಥದ ನಾಲ್ಕು ಕಡೆಗಳಲ್ಲಿ ನೃತ್ಯಗಾರರು, ವಾದ್ಯನುಡಿಸುತ್ತಾ ನೃತ್ಯಮಾಡುತ್ತಿರುವವರ ಉಬ್ಬು ಚಿತ್ರಗಳು, ಇವುಗಳ ಮೇಲೆ ಕೆಳಗೆ ಎಲೆಬಳ್ಳಿಯ ಕುಸುರಿ ಕೆತ್ತನೆಯನ್ನು ಲೋಹದಿಂದಲೇ ಮಾಡಿ, ಬಣ್ಣದಿಂದ ಅಲಂಕಾರ ಮಾಡಿದ್ದಾರೆ, ರಥದ ಮುಂಭಾಗ ಶಿವಪಾರ್ವತಿಯರ ಸೌಮ್ಯ ಮೂರ್ತಿಗಳಿವೆ, ಊರಿನ ಎಲ್ಲಾ ಮನೆಗಳಿಂದಲೂ ರಥದ ನಿರ್ಮಾಣಕ್ಕೆ ಆರ್ಥಿಕ ಸಹಾಯ ಮಾಡಿದ್ದಾರೆ, ಒಟ್ಟು ಮೂರು ಲಕ್ಷದ ಅರವತ್ತು ಸಾವಿರ ರೂಗಳಾಗಿದೆ ರಥದ ಖರ್ಚು.

ಪ್ರತಿವರ್ಷ ನಡೆಯುವ ರಥೋತ್ಸವ ಹಾಗೂ ಅಂಬಿನೋತ್ಸವಕ್ಕೆ ಸುಮಾರು ಎಂಟು ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಕಾಟಮಹಲಿಂಗೇಶ್ವರನ ಜಾತ್ರೆಗೆ ಹತ್ತಿರದ ಹಳ್ಳಿಗಳಿಂದಲೂ, ದೂರದ ಊರುಗಳಿಂದಲೂ ಭಕ್ತರು ಬರುತ್ತಾರೆ, ರಥಕ್ಕೆ ಬಲಿಬಾನ ಹಾಕಿ ಗ್ರಾಮದ ಕೆಲವಾರು ಸಮುದಾಯದವರಿಂದ ಪೂಜೆ ಮಾಡಿಸಿದ ನಂತರ ರಥವು ಗುಡ್ಡದ ಪೂಜೆಗೆ ಹಾಗೂ ದೊಡ್ಡ ಬೇವಿನ ಮರದ ಪೂಜೆಗೆ ಹೋಗಿ ಅಲ್ಲಿ ಪೂಜೆ ಮುಗಿಸಿಕೊಂಡು ಊರಿನ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡಿ ನಂತರ ದೇವಸ್ಥಾನಕ್ಕೆ ವಾಪಾಸ್ಸು ಬರುತ್ತದೆ, ರಥದ ಮುಂದೆ ಕರಡಿ ಚಮಾಳ, ಡೋಲು, ನಂದಿ ಕೋಲಿನ ಕುಣಿತ, ಕೀಲುಕುದುರೆ ಕುಣಿತ, ಗೊಂಬೆ ಕುಣಿತ, ವೀರಗಾಸೆ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ನಿಜಲಿಂಗಪ್ಪ(ಶಿಕ್ಷಕರು) S/O ಸಣ್ಣಪ್ಪ ----- ಗ್ರಾಮಸ್ಥರು

2). ಎಸ್.ಬಿ. ಮಹಲಿಂಗಪ್ಪ S/O ಚಿತ್ತಪ್ಪ ----- ಗ್ರಾಮಸ್ಥರು

3). ಶಂಕರಲಿಂಗಪ್ಪ ------ ಅರ್ಚಕರು,

4). ಬಿ.ಎನ್. ಮಹಲಿಂಗಪ್ಪ S/O ನಿಂಗಪ್ಪ ----- ಗ್ರಾಮಸ್ಥರು

41). ಬೆಳಗೆರೆ, ಲಕ್ಷ್ಮಿ ರಂಗನಾಥ ದೇವರ ರಥ:

ಪೂರ್ವದಲ್ಲಿ ಜೈನ ದೊರೆಯಾದ ಬೆಳ್ಳಿಯಪ್ಪ ಎಂಬುವರು ಇಲ್ಲಿ ಆಳ್ವಿಕೆ ನೆಡೆಸುತ್ತಿದ್ದು ಇವರ ಹೆಸರಿನಿಂದ ಬೆಳಗೆರೆ ಎಂಬ ಹೆಸರು ಬಂದಿರಬಹುದಾಗಿದೆ.

ಊರಿನಲ್ಲಿ ಈಶ್ವರ, ತಿಮ್ಮಪ್ಪ, ವೀರ ಚಿಕ್ಕಣ್ಣ, ಕಾಟಂಲಿಂಗೇಶ್ವರ, ಹನುಮಂತರಾಯ, ಮಾರಮ್ಮ, ಮೈಲಾರಲಿಂಗೇಶ್ವರ, ಕೊಲ್ಲಾಪುರದಮ್ಮ ರಂಗನಾಥ ಸ್ವಾಮಿ ದೇವಸ್ಥಾನಗಳಿವೆ, ಪ್ರತೀ ವರ್ಷ ರಂಗನಾಥ ಸ್ವಾಮಿ ಜಾತ್ರೆ ಬಹಳ ಅದ್ದೂರಿಯಾಗಿ ನಡೆಯುತ್ತದೆ, ಜಾತ್ರೆಯ ದಿನದಂದು ತೇರು, ಪಲ್ಲಕ್ಕಿ ಉತ್ಸವಗಳು ನಡೆಯುತ್ತವೆ, ಮಾರಮ್ಮನ ಹಬ್ಬ ಮಾಡಿದಾಗ ಬಲಿ ಹರಕೆ ಪದ್ಧತಿಗಳಿರುತ್ತವೆ.

ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ಕೊಟ್ಟವರಲ್ಲಿ ಚಳ್ಳಕೆರೆ ತಾಲ್ಲೂಕಿನ ಎರಡು ಗ್ರಾಮಗಳಾದ ತಳಕು ಮನೆತನ ಮತ್ತು ಬೆಳಗೆರೆ ಮನೆತನಗಳು, ಬೆಳಗೆರೆಯಲ್ಲಿ ಇಲ್ಲಿನ ಸಾಹಿತಿಗಳು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ವಿದ್ಯಾಧಾನ ಮಾಡಿದ್ದಾರೆ, ರಾಜ್ಯ ಮಟ್ಟದ ಪತ್ರ ಕರ್ತರಾದ ಹಾಯ್ ಬೆಂಗಳೂರು ಪತ್ರಿಕೆಯ ರವಿಬೆಳಗೆರೆಯವರ ತಾಯಿ ಇದೇ ಊರಿನವರು.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಯುಗಾದಿ ಹಬ್ಬದ ನಂತರ ಹಂಪೆ ಹುಣ್ಣಿಮೆಯ ಸಮಯದಲ್ಲಿ ಗ್ರಾಮದಲ್ಲಿ ನೆಲೆಸಿರುವ ಲಕ್ಷ್ಮಿರಂಗನಾಥ ಸ್ವಾಮಿಯ ರಥೋತ್ಸವವು ನಡೆಯುತ್ತದೆ, ದಾವಣಗೆರೆಯ ಸಂಪ್ರದಾಯ ಶಿಲ್ಪಿಗಳಾದ ಮಂಜುನಾಥ್ ಮತ್ತು ಬೆಳಗೆರೆ ಗ್ರಾಮದ ಮನ್ಮಚಾರ್ ಹಾಗೂ ಇವರ ಜೊತೆ 10ಜನ ಸಹಾಯಕ ಶಿಲ್ಪಿಗಳು ಸೇರಿ ರಥವನ್ನು 1995ರಲ್ಲಿ ಮಾಡಿದ್ದಾರೆ, ರಥದ ನಿರ್ಮಾಣಕ್ಕೆ ಗ್ರಾಮದ ಎಲ್ಲಾ ಮನೆಗಳಿಂದ ಹಣವನ್ನು ನೀಡಿದ್ದಾರೆ, ನೌಕರರು, ಬೇರೆ ಊರಿನ ಭಕ್ತರು ಹಣ ಹಾಗೂ ಹಲವು ಬಗೆಯ ಮರಗಳನ್ನು ಕೊಟ್ಟಿದ್ದಾರೆ, ಸಾಧಾರಣ ಶೈಲಿಯ ಹಳೆಯ ರಥವು ಇದಾಗಿದ್ದು, ರಥದಲ್ಲಿ ಯಾವುದೇ ಕುಸುರಿ ಕೆತ್ತನೆ ಹಾಗೂ ಶಿಲ್ಪಗಳ ಕೆತ್ತನೆ ಇಲ್ಲ, 4ತಿಂಗಳುಗಳ ಕಾಲ ರಥವನ್ನು ಮಾಡಿದ ಶಿಲ್ಪಿಗಳಿಗೆ 50,000-00(ಐವತ್ತು ಸಾವಿರ)ರೂಪಾಯಿಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ನಾಲ್ಕು ಕಲ್ಲಿನ ಗಾಲಿಗಳು, ಮರದ ತೊಲೆಗಳು, ಅಡ್ಡಪಟ್ಟಿಗಳು, ಕಳಸ ಹಾಗೂ ರಥಕ್ಕೆ ಬೇಕಾದ ಇತರೆ ವಸ್ತುಗಳ ಖರ್ಚು, ಭಕ್ತಾದಿಗಳು ಕೊಟ್ಟ ಮರಗಳನ್ನು ಬಿಟ್ಟು ಕೆಲವು ಮರಗಳನ್ನು ಖರೀದಿ ಮಾಡಲಾಗಿದೆ, ಈ ಎಲ್ಲಾ ಖರ್ಚು ಸೇರಿ 1,90,000-00(ಒಂದು ಲಕ್ಷದ ತೊಂಬತ್ತು ಸಾವಿರ)ರೂಗಳು.

ರಥಕ್ಕೆ ಸಾಗುವಾನಿ, ಕರೇ ಜಾಲಿ, ತೇಗ, ಹೊನ್ನೆ, ಬೀಟೆ, ನಂದಿ ಮರಗಳನ್ನು ಬಳಸಲಾಗಿದೆ, ಕರೇ ಜಾಲಿ ಮರದಿಂದ ಗಾಲಿಗಳು, ಉಳಿದ ಮರಗಳಿಂದ ರಥದ ವಿವಿಧ ಭಾಗಗಳನ್ನು ಮಾಡಿದ್ದಾರೆ, ಒಟ್ಟು ರಥದ ಎತ್ತರ 18ಅಡಿ ಇದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಮೂರು ಸಾವಿರ ಜನ ಸೇರುತ್ತಾರೆ, ರಥೋತ್ಸವಕ್ಕೆ ಹತ್ತಿರದ ಹಳ್ಳಿಗಳಿಂದಲೂ, ಪಾವಗಡ ತಾಲ್ಲೂಕು, ಮಡಕ ಶಿರಾ ತಾಲ್ಲೂಕು, ತುಮಕೂರು, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ತಾಲ್ಲೂಕು ಮುಂತಾದ ಕಡೆಗಳಿಂದ ಭಕ್ತರು ಬರುತ್ತಾರೆ, ಮೂರು ದಿನಗಳು ನಡೆಯುವ ಅದ್ದೂರಿ ರಥೋತ್ಸವದಲ್ಲಿ ಮೊದಲ ದಿನ ಗಂಗಾ ಪೂಜೆ, ದೇವರ ಕಂಕಣಧಾರಣೆ, ಎರಡನೇ ದಿನ ಉಸಿ, ಅಭಿಷೇಕ, ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ, ಮೂರನೇ ದಿನ ದೇವರ ಮಧುವೆ, ಕಲ್ಯಾಣೋತ್ಸವ(ಲಕ್ಷ್ಮಿ ರಂಗನಾಥರ ಮಧುವೆ)ಮಾಡುತ್ತಾರೆ, ಕಲ್ಯಾಣೋತ್ಸವದ ನಂತರ ವಿಶೇಷವಾಗಿ ಲಕ್ಷ್ಮಿ ರಂಗನಾಥರ ಮಾತುಕತೆ ನಡೆಯುತ್ತದೆ, ರಥಕ್ಕೆ ಬಲಿಬಾನ ಹಾಕಿ ಪೂಜೆ ಮಾಡಿಸಿದ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿ ವಾಪಾಸ್ಸು ಬರುತ್ತದೆ, ಸಂಜೆ

ಅನ್ನಸಂತರ್ಪಣೆ ನಡೆಯುತ್ತದೆ, ರಥದ ಮುಂದೆ ಕರಡಿ ಚಮಾಳ, ಡೋಲು, ಡಮರುಗ, ಕೀಲುಕುದುರೆ ಕುಣಿತ, ನಂದಿ ಕೋಲಿನ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ರಾಜಣ್ಣ(ರಾಜೀವಲೋಚನ) ------- ಗ್ರಾಮಸ್ಥರು

2). ರಂಗಸ್ವಾಮಿ S/O ತಿಮ್ಮಯ್ಯ ------ ಗ್ರಾಮಸ್ಥರು

2). ಬೋರಣ್ಣ ------ ಗ್ರಾಮಸ್ಥರು

3). ಭೂತಣ್ಣ ------- ಗ್ರಾಮಸ್ಥರು.

4). ತಿಮ್ಮಣ್ಣ ------ ಗ್ರಾಮಸ್ಥರು

42). ಓಬಳಾಪುರ (ಕೋಟೆ ಓಬಳಾಪುರ), ಲಕ್ಷ್ಮಿರಂಗನಾಥನ ರಥ:

ಓಬಳ ನರಸಿಂಹಸ್ವಾಮಿ ದೇವರು ಇಲ್ಲಿ ನೆಲೆಸಿರುವ ಕಾರಣದಿಂದ ಊರಿಗೆ ಓಬಳಾಪುರ ಎಂಬ ಹೆಸರು ಬಂದಿದೆ, ತಿಮ್ಮಣ್ಣ ನಾಯಕನ ಕೋಟೆ ಗ್ರಾಮದ ಸಮೀಪ ಊರು ಇರುವ ಕಾರಣದಿಂದ ಕೋಟೆ ಓಬಳಾಪುರ ಎಂದೂ ಕರೆಯುತ್ತಿದ್ದಾರೆ.

ಲಕ್ಷ್ಮೀನರಸಿಂಹಸ್ವಾಮಿ, ಮಾರಮ್ಮದೇವಿ, ಈಶ್ವರ, ಮಂಜುನಾಥ ಹಾಗೂ ಆಂಜನೇಯ ದೇವಸ್ಥಾನಗಳಿವೆ, ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ಜಾತ್ರೆ ಹಾಗೂ ರಥೋತ್ಸವ ಮಾಡುತ್ತಾರೆ, ಮಾರಮ್ಮದೇವಿಗೆ ಬಲಿ ಹರಕೆ ಪದ್ಧತಿಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪೂರ್ವದಲ್ಲಿ ಪ್ರತಿವರ್ಷ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ, (ಶೂನ್ಯ ಮಾಸ)ದಲ್ಲಿ ಲಕ್ಷ್ಮಿನರಸಿಂಹ ಸ್ವಾಮಿ ರಥೋತ್ಸವವು ನಡೆಯುತ್ತದೆ, ಈ ರಥೋತ್ಸವಕ್ಕೆ ಒಂದು ಸಾವಿರದ ಐದು ನೂರು ಜನ ಸೇರುತ್ತಾರೆ, ನಾಯಕನಹಟ್ಟಿ ಗ್ರಾಮದ ಸಂಪ್ರದಾಯ ಶಿಲ್ಪಿಗಳಾದ ತಿಪ್ಪೇಸ್ವಾಮಿಯ ತಂದೆ ಹಾಗೂ ಇವರ ಜೊತೆ 6ಜನ ಸಹಾಯಕ ಶಿಲ್ಪಿಗಳು ಸೇರಿ 2009ರಲ್ಲಿ ಹೊಸ ರಥವನ್ನು ಮಾಡಿದ್ದಾರೆ, ರಥದ ನಿರ್ಮಾಣಕ್ಕೆ ಗ್ರಾಮದ ಎಲ್ಲಾ ಮನೆಗಳಿಂದ ಭಕ್ತರು, ನೌಕರರು, ಹಣ ಮತ್ತು ವಿವಿಧ ಮರಗಳನ್ನು ಕೊಟ್ಟಿದ್ದಾರೆ, 7ತಿಂಗಳುಗಳ ಕಾಲ ರಥವನ್ನು ಮಾಡಿದ್ದಾರೆ, ಹೊಸ ರಥವನ್ನು ಕೆತ್ತನೆ ಮಾಡಿದ ಶಿಲ್ಪಿಗಳಿಗೆ 1,65,000-00(ಒಂದು ಲಕ್ಷದ ಅರವತ್ತೈದು ಸಾವಿರ)ರೂಪಾಯಿಗಳ ಸಂಭಾವನೆಯನ್ನು ಕೊಟ್ಟಿದ್ದಾರೆ, ನಾಲ್ಕು ಗಾಲಿಗಳು, ಮರದ ತೊಲೆಗಳು, ಅಡ್ಡಪಟ್ಟಿಗಳು, ಕಳಸ, ಕಬ್ಬಿಣದ ಪಟ್ಟಿಗಳಿಂದ ಮಾಡಿದ ಡೂಮುಗಳನ್ನು ಒಳಗೊಂಡಿದೆ, ಅಚ್ಚಿನ ಮೇಲೆ ಅಡ್ಡಲಾಗಿ ಹಾಕಿರುವ ನಾಲ್ಕು ತೊಲೆಗಳ ತುದಿಯಲ್ಲಿ ಸೌಮ್ಯರೂಪದ ಆನೆಗಳ ಕೆತ್ತನೆ, ಇದರ ಮೇಲೆ ಇರುವ ಪಟ್ಟಿಯಲ್ಲಿ ಹೂಬಳ್ಳಿಯ ಕುಸುರಿ ಕೆತ್ತನೆ, ಜೋಡಿ ಆನೆಗಳ ಕೆತ್ತನೆ, ಇದರ ಮೇಲಿನ ಸಾಲಿನಲ್ಲಿ ಜೋಡಿ ಕಂಬಗಳ ಮಧ್ಯದಲ್ಲಿ ಒಂದೊಂದು ಶಿಲ್ಪಗಳಿವೆ, ಇವುಗಳಲ್ಲಿ ತಿರುಪತಿ ತಿಮ್ಮಪ್ಪ, ಅಯ್ಯಪ್ಪಸ್ವಾಮಿ, ಕಮಲದ ಹೂವಿನ ಮೇಲೆ ಕುಳಿತಿರುವ ಲಕ್ಷ್ಮಿ, ಮೊಣಕಾಲೂರಿ ಕೈಮುಗಿದು ಕುಳಿತಿರುವ ಆಂಜನೇಯ, ಎಂಟು ಕೈಗಳ ದೇವಿ, ಸರಸ್ವತಿ, ಗಣೇಶ, ಕೊಳಲು ಊದುತ್ತ ನಿಂತಿರುವ ಶ್ರೀಕೃಷ್ಣ, ಲಕ್ಷ್ಮಿ, ಸರಸ್ವತಿ, ಆಂಜನೆಯ, ಗಣೇಶ, ದೇವಿ ಹಾಗೂ ಅಯ್ಯಪ್ಪ ಸ್ವಾಮಿಯ ಶಿಲ್ಪಗಳನ್ನು ಎರಡೆರಡು ಕಡೆ ಕೆತ್ತನೆ ಮಾಡಿದ್ದಾರೆ, ಇದರ ಮೇಲಿನ ಒಂದೂವರೆ ಅಡಿ ಅಗಲದ ಹಲಗೆಯಲ್ಲಿ ಸುಂದರವಾದ ಹೂವು ಹಾಗೂ ಬಳ್ಳಿಗಳ ಕೆತ್ತನೆ ಇದೆ, ಈ ಪಟ್ಟಿಯ ಕೆಳಗೆ ಕೆಳ ಮುಖವಾಗಿ ಮರದ ಕುಪ್ಪುಗಳು, ಸಣ್ಣ ಗಂಟೆಗಳು ರಥಕ್ಕೆ ಮತ್ತಷ್ಟು ಆಕರ್ಷಣೆಯನ್ನು ನೀಡಿದೆ, ನಾಲ್ಕು ಮೂಲೆಗಳಲ್ಲಿ ಎರಡು ಕಾಲಿನಲ್ಲಿ ನಿಂತಿರುವ ಸಿಂಹದ ಶಿಲ್ಪಗಳು ರಥದ ಸೌಂದರ್ಯವನ್ನು ಹೆಚ್ಚಿಸಿವೆ, ದೇವರನ್ನು ಕೂರಿಸುವ ಪೀಠವು ಚಿಕ್ಕದಾದ ಸುತ್ತಳತೆಯುಳ್ಳ

16ಕಂಬಗಳಿಂದ ರಚಿತವಾಗಿದ್ದು, ದೇವರನ್ನು ಕೂರಿಸಿ ಎಷ್ಟೇ ಅಲಂಕಾರ ಮಾಡಿದರೂ ಬೇಕಾದಷ್ಟು ಜಾಗವಿರುತ್ತದೆ.

ರಥಕ್ಕೆ ಕರೇ ಜಾಲಿ ಹಾಗೂ ಬೇವು ಮರಗಳನ್ನು ಬಳಸಿದ್ದಾರೆ, ರಥದ ಒಟ್ಟು ಎತ್ತರ 18ಅಡಿ ಇದೆ. ಹೊಸ ರಥವನ್ನು ಮಾಡಿಸಿದಮೇಲೆ ಮೊದಲು ಮಾಡುತ್ತಿದ್ದ ಸಮಯವನ್ನು ಬಿಟ್ಟು ಈಗ ಫೆಬ್ರವರಿ ತಿಂಗಳಲ್ಲಿ ರಥೋತ್ಸವವನ್ನು ಮಾಡುತ್ತಾರೆ, ಹತ್ತಿರದ ಹಳ್ಳಿಗಳಿಂದಲೂ ಜನ ಬರುತ್ತಾರೆ, ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ರಥೋತ್ಸವ, ಎರಡನೇ ದಿನ ಕುಂಬಾಭಿಷೇಕ, ಮೂರನೇ ದಿನ ಆರಾಧನೆ, ಗುಗ್ಗರಿ ಹಂಚುವುದು, ಊರ ಮುಂದಿನ ಬಯಲಿನಲ್ಲಿ ರಥಕ್ಕೆ ಅಲಂಕಾರ ಮಾಡಿ ದೇವರನ್ನು ಪಲ್ಲಕ್ಕಿಯಲ್ಲಿ ತಂದು ರಥಕ್ಕೆ ಬಲಿಬಾನ ಹಾಕಿ ಪೂಜೆ ಮಾಡಿಸಿದ ನಂತರ ರಥವು ಊರಾಚೆ ಇರುವ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದವರೆವಿಗೂ ಹೋಗಿ ಅಲ್ಲಿ ಪೂಜೆಯನ್ನು ಮುಗಿಸಿಕೊಂಡು ಬರುತ್ತದೆ, ಊರಾಚೆಯ ದೇವಸ್ಥಾನಕ್ಕೆ ರಥವು ಹೋದಾಗ ಅಲ್ಲಿಗೆ ಬಂದಿರುವ ಭಕ್ತಾದಿಗಳಿಗೆ ಪಾನಕ, ಗುಗ್ಗರಿ ಪ್ರಸಾದವನ್ನು ಹಂಚುತ್ತಾರೆ, ರಥೋತ್ಸವದ ಮುಂದೆ ಕರಡಿ ಚಮಾಳ, ಡೋಲು, ಉರುಮೆ(ವಾಲಗ), ಕೀಲುಕುದುರೆ ಕುಣಿತ, ನಂದಿ ಕೋಲಿನ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಮಂಜುನಾಥ S/O ಓಬಣ್ಣ ----- ಗ್ರಾಮಸ್ಥರು

2). ವೇಮಣ್ಣ ----- ಗ್ರಾಮಸ್ಥರು

3). ತಿಪ್ಪಜ್ಜ S/O ಅಹೋಬಳಪ್ಪ ------ ಗ್ರಾಮಸ್ಥರು.

43). ಕೋಡಿಹಳ್ಳಿ, ಚೌಡಮ್ಮ ದೇವರ ರಥ:

ಕೆರೆಕೋಡಿಯ ಪಕ್ಕದಲ್ಲಿ ಜನವಸತಿಯಾದ ಸ್ಥಳವೇ ಕೋಡಿಹಳ್ಳಿಯಾಗಿರಬಹುದು, ಗ್ರಾಮದಲ್ಲಿ ಚೌಡಮ್ಮ, ಆಂಜನೇಯ ದೇವಸ್ಥಾನಗಳಿದ್ದು ಮನ್ನೆಕೋಟೆ ಗ್ರಾಮದ ದೇವರಿಗೂ ಈ ಊರಿನವರು ನಡೆದುಕೊಳ್ಳುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ (ಕಾರ್ತಿಕದಲ್ಲಿ) ನಡೆಯುವ ಚೌಡಮ್ಮ ದೇವರ ಥೋತ್ಸವಕ್ಕೆ ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ರಥಕ್ಕೆ ಕರೇ ಜಾಲಿ ಮತ್ತು ಬೇವು ಮರಗಳನ್ನು ಬಳಸಿದ್ದು ಸಾಧಾರಣ ಶೈಲಿಯ ರಥವಾಗಿದೆ, ರಥದ ಒಟ್ಟು ಎತ್ತರ 18ಅಡಿ ಇದೆ.

ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ದೇವಸ್ಥಾನದಲ್ಲಿ ವಿಶೇಷ ಪೂಜೆ, ದೀಪೋತ್ಸವ, ಎರಡನೇ ದಿನ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ. ರಥಕ್ಕೆ ಅಲಂಕಾರ ಮಾಡಿ ಬಲಿಬಾನ ಹಾಕಿ ಪೂಜೆ ಮಾಡಿ, ರಥವು ಊರಾಚೆ ಇರುವ ಪಾದಗಟ್ಟೆಯ ವರೆಗೂ ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿ ವಾಪಾಸ್ಸು ಬರುತ್ತದೆ, ರಥೋತ್ಸವ ನಡೆಯುವಾಗ ಕರಡಿ ಚಮಾಳ, ಉರುಮೆ ಮುಂತಾದ ವಾದ್ಯಗಳು ಇರುತ್ತವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಚಂದ್ರಣ್ಣ ----- ಗ್ರಾಮಸ್ಥರು

2). ತಿಪ್ಪೇರುದ್ರಪ್ಪ ----- ಗ್ರಾಮಸ್ಥರು

3). ತಿಪ್ಪೇಸ್ವಾಮಿ ------ ಗ್ರಾಮಸ್ಥರು

44). ವಡೇರಹಳ್ಳಿ, ಬಸವಣ್ಣನ ತೇರು:

ಒಡೆಯರು ಅಂದರೆ ಹಳ್ಳಿಯಲ್ಲಿ ಬಡಜನರಿಗೆ ಸಹಕಾರಿಗಳಾಗಿರುವವರು, ಹಳ್ಳಿಯ ಆಳ್ವಿಕೆಯನ್ನು ಮಾಡುವವರಿಗೆ ಒಡೆಯರು ಎಂದು ಕರೆಯುತ್ತಾರೆ, ಒಡೆಯರು ಇರುವ ಹಳ್ಳಿಯನ್ನು ಒಡೆಯುರ ಹಳ್ಳಿ ಎಂದು ಕರೆಯುತ್ತಿದ್ದು, ಕ್ರಮೇಣ ವಡೇರಹಳ್ಳಿಯಾಗಿದೆಯೆಂದು ಶಾಲೆಯಲ್ಲಿರುವ ಪುಸ್ತಕದಲ್ಲಿ ದಾಖಲಿಸಿದ್ದಾರೆ, ಮತ್ತೊಂದು ಪ್ರಕಾರ ಮೊದಲು ಹೆಚ್ಚು ಉಷ್ಣಾಂಶ ಇರುತ್ತಿದ್ದು, ಗ್ರಾಮೀಣ ಬಾಷೆಯಲ್ಲಿ ಉಷ್ಣಕ್ಕೆ ಮತ್ತೊಂದು ಹೆಸರು "ವಡೆ" "ಗಮ್ಮ" ಎನ್ನುತ್ತಾರೆ, ಉಷ್ಣಾಂಶ ಹೆಚ್ಚು ಇದ್ದುದರಿಂದ ಅಧಿಕ ವಡೆಯುಳ್ಳ ಹಳ್ಳಿ ವಡೇರಹಳ್ಳಿಯಾಗಿದೆ ಎಂಬುದು ಮತ್ತೊಂದು ಕಾರಣವಾಗಿದೆ.

ರಾಜರ ಕಾಲದಲ್ಲಿ ಸ್ಥಾಪಿತವಾದ ಊರಾಚೆ ಪಶ್ಚಿಮಕ್ಕೆ ಹತ್ತು ಅಡಿ ಎತ್ತರದ ಏಕ ಶಿಲೆಯಲ್ಲಿರುವ ಬಯಲು ನಂದಿ(ಬಸವಣ್ಣನ)ಮೂರ್ತಿ ಇದೆ, ಗ್ರಾಮದಲ್ಲಿ ಕುರ್ಕೆ ಈರಣ್ಣ, ಅಕ್ಕಲಮ್ಮ, ಬಸವಣ್ಣ, ಹನುಮಂತರಾಯ, ಮಾರಮ್ಮ, ಓಬಳದೇವರ ದೇವಸ್ಥಾನಗಳಿವೆ, ಡಿಸೆಂಬರ್ ತಿಂಗಳಲ್ಲಿ ಬಸವಣ್ಣ ದೇವರಿಗೆ ರಥೋತ್ಸವ ಮಾಡುತ್ತಾರೆ, ಸೆಪ್ಟೆಂಬರ್ ತಿಂಗಳಲ್ಲಿ ಮಾಡುವ ಮಾರಮ್ಮ ದೇವಿಯ ಜಾತ್ರೆಯಲ್ಲಿ ಕೋಲಾಟ, ಭಜನೆ, ಗೀಗೀಪದ, ಡೊಳ್ಳು ಕುಣಿತ, ವೀರಗಾಸೆ, ಮುಂತಾದ ಜನಪದ ಮತ್ತು ಸಾಂಸ್ಕೃತಿಕ ಕಾರ್ಯಗಳು, ಬಲಿ, ಹರಕೆ ನಡೆಯುತ್ತದೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಬಸವಣ್ಣನ ರಥೋತ್ಸವ ನಡೆಯುತ್ತದೆ, ಸಾಧಾರಣ ಶೈಲಿಯ ರಥವಾಗಿದ್ದು ಒಟ್ಟು 18ಅಡಿ ಎತ್ತರವಿದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸುಮಾರು ಸಾವಿರಾರು ಜನ ಸೇರುತ್ತಾರೆ, ಒಂದೇ ದಿನ ನಡೆಯುವ ರಥೋತ್ಸವವಿದು, ಊರೊಳಗಿನಿಂದ ತೇರು ಹೊರಟು ಊರಾಚೆ ಇರುವ ಏಕ ಶಿಲಾ ಬಸವಣ್ಣನ ದೇವಸ್ಥಾನದವರೆವಿಗೂ ಹೋಗಿ ಅಲ್ಲಿ ಪೂಜೆಯನ್ನು ಮಾಡಿಸಿಕೊಂಡು ಬರುತ್ತದೆ, ರಥದ ಮುಂದೆ ಕರಡಿ ಚಮಾಳ, ಡೋಲು, ನಂದಿ ಕೋಲಿನ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1).ಈಶ್ವರ S/O ಕೆಂಗೋಬಯ್ಯ ------ ಗ್ರಾಮಸ್ಥರು.

2).ಹನುಮಂತರಾಯ ------ ಗ್ರಾಮಸ್ಥರು.

45). ಚಿಕ್ಕಹಳ್ಳಿ, ಕರಿಬಸವೇಶ್ವರ ದೇವರ ರಥ:

ದೊಡ್ಡ ಗ್ರಾಮವಾದ ಹಿರೇಹಳ್ಳಿ ಊರಿನ ಪಕ್ಕದಲ್ಲಿ ಹೊಸದಾಗಿ ಆದ ಸಣ್ಣ ಹಳ್ಳಿಯನ್ನು ಚಿಕ್ಕಹಳ್ಳಿ ಎಂದು ಕರೆಯುತ್ತಿದ್ದಾರೆ, ಗ್ರಾಮ ದೇವರುಗಳಾಗಿ ಕರಿಬಸವೇಶ್ವರ, ಮಾರಮ್ಮ, ಕದರಿನರಸಿಂಹ, ಮೈಲಾರಲಿಂಗೇಶ್ವರ, ಕೊಲ್ಲಾಪುರದಮ್ಮ, ದುರ್ಗಮ್ಮ ದೇವಸ್ಥಾನಗಳಿವೆ, ಮಾರಮ್ಮನ ಹಬ್ಬದಂದು ಬಲಿ, ಹರಕೆ ಪದ್ಧತಿಗಳು ನಡೆಯುತ್ತವೆ, ಕಾರ್ತಿಕೋತ್ಸವದಂದು ಕೋಲಾಟ, ಭಜನೆ, ಸೋಬಾನೆ, ಪದಗಳನ್ನು ಹಾಡುತ್ತಾರೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಡಿಸೆಂಬರ್(ಕಾರ್ತಿಕ) ಮಾಸದಲ್ಲಿ ಕರಿಬಸವೇಶ್ವರ ದೇವರ ಕಾರ್ತಿಕೋತ್ಸವವನ್ನು ಹಾಗೂ ರಥೋತ್ಸವವನ್ನು ಮಾಡುತ್ತಾರೆ, ಮತ್ತು ಇದೇ ಸಮಯದಲ್ಲಿ ಪಲ್ಲಕ್ಕಿ ಉತ್ಸವ, ಮೆರವಣಿಗೆ ನಡೆಯುತ್ತದೆ, ಈ ಕಾರ್ಯಕ್ಕೆ ಊರಿನ ಎಲ್ಲಾ ಸಮುದಾಯದವರು ಭಾಗವಹಿಸುತ್ತಾರೆ.

ಸಾಧಾರಣ ಶೈಲಿಯ ರಥ ಇದಾಗಿದ್ದು ಇದೇ ಗ್ರಾಮದ ಸಂಪ್ರದಾಯ ಶಿಲ್ಪಿಗಳು ಬೇರೆ ಊರಿನ ನುರಿತ ಶಿಲ್ಪಿಗಳ ಮಾರ್ಗದರ್ಶನ ಹಾಗೂ ಸಹಕಾರದೊಂದಿಗೆ ರಥವನ್ನು ಮಾಡಿದ್ದಾರೆ, ರಥದ ನಿರ್ಮಾಣಕ್ಕೆ ಗ್ರಾಮದ ಎಲ್ಲಾ ಸಮುದಾಯದವರು ಹಣ ಹಾಗೂ ಮರಗಳನ್ನು ದಾನವಾಗಿ ಕೊಟ್ಟಿದ್ದಾರೆ,

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಹತ್ತಿರದ ಹಳ್ಳಿಗಳಿಂದಲೂ ಜಾತ್ರೋತ್ಸವದ ಸಮಯಕ್ಕೆ ಬರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ ಮೊದಲ ದಿನ ಗಂಗಾ ಪೂಜೆ, ರಥದ ಅಲಂಕಾರ, ಎರಡನೇ ದಿನ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಕರಿಯಣ್ಣ ----- ಗ್ರಾಮಸರು

2). ತಿಪ್ಪೇಸ್ವಾಮಿ ----- ಗ್ರಾಮಸ್ಥರು

3). ತಿಪ್ಪೇರುದ್ರಣ್ಣ ------ ಗ್ರಾಮಸ್ಥರು

46). ಚನ್ನಮ್ಮನಾಗತಿಹಳ್ಳಿ, ಚಂದ್ರಮೌಳೇಶ್ವರ(ವೀರಭದ್ರ)ನ ರಥ:

ಚಿತ್ರದುರ್ಗದ ಪಾಳೆಯಗಾರರ ಹತ್ತಿರ ಸಂಬಂಧಿಯಾಗಿದ್ದ ಚನ್ನಮ್ಮನಾಗತಿಯು ಊರಿನ ಅಭಿವೃದ್ಧಿಗಾಗಿ ಇಲ್ಲಿ ಕೆರೆಯನ್ನು ಕಟ್ಟಿಸಿ ಕೆರೆಯ ಪಕ್ಕದಲ್ಲಿ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿದ್ದರಿಂದ ಚನ್ನಮ್ಮನಾಗತಿಹಳ್ಳಿ ಎಂಬ ಹೆಸರು ಪಡೆದಿರುವುದಾಗಿದೆ, ಕಾಡುಗೊಲ್ಲರ ಕಳ್ಳೆಮುಳ್ಳಿನ ಕ್ಯಾತಪ್ಪನ ಪರಿಷೆ ವಿಶೇಷವಾಗಿ ಈ ಗ್ರಾಮದಲ್ಲಿ ನಡೆಯುತ್ತದೆ.

ಬುಡಕಟ್ಟಿನ 13ಗುಡಿಕಟ್ಟಿನವರು ಕ್ಯಾತಪ್ಪನ ಜಾತ್ರೆ ಪ್ರಾರಂಭವಾಗಿ (ದೇವರಿಗೆ ಕಂಕಣ ಕಟ್ಟಿದ) ದಿನದಿಂದ ಜಾತ್ರೆ ಮುಗಿಯುವವರೆಗೂ ಊರಿನ ಹೊರಗೆ ಹಾಕಿದ ಹುರುಳಿ ಹಾಗೂ ನವಣೆಯನ್ನು ಊರೊಳಗೆ ತರುವುದಿಲ್ಲ ಮತ್ತು ಯಾರೂ ಈ ಧಾನ್ಯಗಳನ್ನು ಬಳಸುವುದಿಲ್ಲ, ಕೊನೆಯ ದಿನ ಹುರುಳಿ ಬತ್ತ ಬಿಡುವ ಮೂಲಕ ಜಾತ್ರೆ ಮುಗಿಯುತ್ತದೆ, ಚನ್ನಮ್ಮನಾಗತಿಹಳ್ಳಿ ಊರಿಗೆ ಹತ್ತಿರ ಇರುವ ವಸಲು ದಿನ್ನೆಗೆ (ಜಾತ್ರೆ ನಡೆಯುವ ಸ್ಥಳ), ಇಲ್ಲಿಗೆ ಬಂದ (ಚನ್ನಮ್ಮನಾಗತಿಹಳ್ಳಿಯ ಕ್ಯಾತೇದೇವರ ಬಳಿ) ಬಂಜಿಗೆರೆ ವೀರಣ್ಣ, ಈರಬಡಕ್ಕ, ಐಗಾರ್ಲಹಳ್ಳಿ ತಾಳಿದೇವರು, ಬತವಿನ ದೇವರು, ಅಕ್ಕಮ್ಮನ ಬಂಡೆ ಹತ್ತಿರ ಮಜ್ಜನ ಬಾವಿಯಲ್ಲಿ ಗಂಗಾ ಪೂಜೆ ಮಾಡಿಕೊಂಡು, ಬಾರೆ ಕಳ್ಳೆಯಿಂದ ನಿರ್ಮಾಣವಾದ ವಸಲು ದಿನ್ನೆಯ ದೇವಸ್ಥಾನದಲ್ಲಿ ಪ್ರತಿಷ್ಠಾಪನೆಗೊಳ್ಳುತ್ತವೆ, 3ದಿನ ಅನೇಕ ವಿಧಿವಿಧಾನಗಳ ಮೂಲಕ ಎಲ್ಲಾ ದೇವರುಗಳಿಗೆ ಪೂಜೆ ಸಲ್ಲಿಸುತ್ತಾರೆ, ಕುಟ್ಟಿದ ನವಣೆಯಿಂದ ಎಡೆ ಹಾಕುವುದು ವಿಶೇಷ ಆಚರಣೆ.

ಕ್ಯಾತಪ್ಪನ ಜಾತ್ರೆಯಲ್ಲಿ ಮುಖ್ಯವಾಗಿ ಬಾರೆಕಳ್ಳೆಯ ಗುಡಿಯನ್ನು ಹತ್ತಿ ಕಳಸ ಕೀಳುವುದು ವಿಶೇಷ ಆಕರ್ಷಣೆಯಾಗಿರುತ್ತದೆ, ಎರಡೇ ನಿಮಿಷದಲ್ಲಿ 20ಅಡಿಗಳ ಎತ್ತರಕ್ಕೆ ಹಾಕಿರುವ ಬಾರೆ ಕಳ್ಳೆಯ ಮುಳ್ಳಿನ ರಾಶಿಯ ಮೇಲೆ ಇಟ್ಟಿರುವ ಕಳಸವನ್ನು ಬರೀ ಮೈಯಲ್ಲಿ ಕೀಳುವ ಪದ್ದತಿ ಇದೆ, ಗುಡಿಕಟ್ಟಿಗೆ ಸೇರಿದ 5ಜನ ಈರಗಾರರು ಉಪವಾಸವಿದ್ದು ಬರೀ ಮೈಯಲ್ಲಿ ಒಣಗಿದ ಬಾರೇ ಮರದ ಮುಳ್ಳಿನ ರಾಶಿಯ ಮೇಲೆ ಹತ್ತುತ್ತಾ ಹೋಗಿ ಮುಳ್ಳು ರಾಶಿಯ ಮೇಲೆ ಇಟ್ಟಿರುವ ಕಳಸ ಕೀಳುತ್ತಾರೆ.

ಬುಡಕಟ್ಟು ಜನಾಂಗಕ್ಕೆ ಸೇರಿದವರು ಇಂತಹ ಸಾಹಸ ಮಾಡುತ್ತಾರೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಡದ ಬುಡಕಟ್ಟು ಜನ ಇಂದಿಗೂ ಜಾನುವಾರುಗಳನ್ನು ಸಾಕುತ್ತ, ಜಾನುವಾರುಗಳಿಗೂ, ಅವರ ವಾಸದ ಮನೆಗೂ ಮತ್ತು ಪೂಜಿಸುವ ದೇವರಿಗೂ ಮುಳ್ಳು ಹಾಗೂ ಹುಲ್ಲು ಕಡ್ಡಿಗಳಿಂದ ಗುಡಿಗಳನ್ನು ನಿರ್ಮಿಸಿಕೊಳ್ಳುತ್ತಾರೆ, ಬುಡಕಟ್ಟಿನ ರಕ್ಷಣೆಗಾಗಿ ಮಡಿಮೈಲಿಗೆಯ ಸಾಂಪ್ರದಾಯವನ್ನು ಬಿಡದೆ ಹಟ್ಟಿಗಳಿಗೆ ಕಳ್ಳೆಹಾಕುವ ಪದ್ದತಿ ಇವರಲ್ಲಿದೆ.

ಮೂಲಸ್ಥಳಕ್ಕೆ ಹಿಂತಿರುಗುವ ದೇವರುಗಳು ಜಾತ್ರೆಯ ಪ್ರಧಾನಘಟ್ಟವಾದ ಕಳಶ ಕೀಳುವವರೆಗೂ ವಸಲು ದಿನ್ನೆಯಲ್ಲಿ ಮುಳ್ಳಿನ ಗುಡಿಯಲ್ಲಿ ನೆಲೆಸಿದ್ದು, ನಂತರ ಅನೇಕ ವಿಧದ ಪೂಜೆಗಳನ್ನು ಮುಗಿಸಿಕೊಂಡು ನಂತರ ಕಳಶ ಕಿತ್ತ ಮೇಲೆ ತಮ್ಮ ತಮ್ಮ ಮೂಲ ಸ್ಥಾನಗಳಿಗೆ ಹೋಗುತ್ತವೆ.

ಹುರುಳಿಬತ ಬಿಡುವಕಾರ್ಯ: ಜಾತ್ರೆಯ ಕೊನೆದಿನ ಗುಡಿಕಟ್ಟಿಗೆ ಸೇರಿದ ಎಲ್ಲಾ ಅಣ್ಣತಮ್ಮಂದಿರು ದೇವಸ್ಥಾನದ ಬಳಿ ಹುರುಳಿ ಬೇಯಿಸಿ ಒನಕೆಯಿಂದ ಕುಟ್ಟಿ ಭಕ್ತಾಧಿಗಳಿಗೆ ಬಡಿಸುತ್ತ ದೇವರಿಗೆ ಕಟ್ಟಿದ ಕಂಕಣ ಬಿಚ್ಚುವ ಮೂಲಕ ಒಂದು ತಿಂಗಳ ಕಾಲ ನಡೆಯುವ ಜಾತ್ರೆಗೆ ಅಂತಿಮ ತೆರೆ ಎಳೆಯಲಾಗುತ್ತದೆ.

ಚನ್ನಮ್ಮನಾಗತಿಹಳ್ಳಿ ಗ್ರಾಮದಲ್ಲಿ ಗಣೇಶ, ಕೊಲ್ಲಾಪುರದಮ್ಮ, ಪಾತಲಿಂಗೇಶ್ವರ, ದುರ್ಗಮ್ಮ, ಕ್ಯಾತಪ್ಪ, ಮಾರಮ್ಮ, ಹನುಮಂತರಾಯ, ಬಸವಣ್ಣ, ವೀರಭದ್ರಸ್ವಾಮಿ(ಚಂದ್ರ ಮೌಳೇಶ್ವರ), ಪೆನ್ನೋಬಳೇಶ್ವರ ದೇವಸ್ಥಾನಗಳಿವೆ, ಮೊಹರಂ ಹಬ್ಬ ವಿಶೇಷವಾಗಿದ್ದು ಹಿಂದೂ ಮುಸ್ಲಿಂರು ಸೇರಿ ಆಚರಿಸುತ್ತಾರೆ, ವೀರಭದ್ರಸ್ವಾಮಿಯ ತೇರು ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಕೊಲ್ಲಾಪುರದಮ್ಮನ ಜಾತ್ರೆ ಪ್ರತೀ 12ವರ್ಷಕ್ಕೊಮ್ಮೆ ನಡೆಯುತ್ತದೆ, ಓಕಳಿ, ಬಲಿ, ಹರಕೆ, ಆರತಿ, ಬೇವಿನಸೀರೆ ಆಚರಣೆಗಳು ಇರುತ್ತವೆ, ಮೊಹರಾಂ ಹಬ್ಬದಲ್ಲಿ ಕೆಂಡ ತುಳಿಯುವ ಪದ್ದತಿ ನಡೆಯುತ್ತದೆ, ದುರ್ಗಮ್ಮದೇವಿಯ ಜಾತ್ರೆಯಲ್ಲಿ ಬಾಯಿಗೆ ಬೀಗ ಹಾಕಿಕೊಳ್ಳುವ ಆಚರಣೆ ಇದೆ,

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ವೀರಭದ್ರ ಸ್ವಾಮಿ(ಚಂದ್ರ ಮೌಳೇಶ್ವರ) ದೇವರ ರಥೋತ್ಸವವನ್ನು ಮತ್ತು ಕಾರ್ತಿಕೋತ್ಸವವನ್ನು ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಮಾಡುತ್ತಾರೆ, ಈ ಸಮಯದಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಮರದಿಂದ ಮಾಡಿದ ಸಾಧಾರಣ ಶೈಲಿಯ ಮರದ ಹಳೇ ತೇರು ಇದ್ದು ಶಿಥಿಲವಾಗಿತ್ತು, ಈ ಕಾರಣಕ್ಕೆ ಊರವರೆಲ್ಲಾ ಸೇರಿ ಕಬ್ಬಿಣ ಹಾಗೂ ಇತರೆ ಲೋಹದಿಂದ ತೇರನ್ನು ಮಾಡಿಸಿದ್ದಾರೆ, ಗಾಲಿಯಿಂದ ಹಿಡಿದು ಕಳಸದವರೆಗೆ ಒಟ್ಟು 30ಅಡಿ ಎತ್ತರದ ರಥ ಇದಾಗಿದೆ.

ಪ್ರತಿವರ್ಷ ನಡೆಯುವ ರಥೋತ್ಸವಕ್ಕೆ ಸಾವಿರಕ್ಕೂ ಹೆಚ್ಚಿನ ಜನ ಸೇರುತ್ತಾರೆ, ಮೂರು ದಿನಗಳು ನಡೆಯುವ ಜಾತ್ರೆಯಲ್ಲಿ ಮೊದಲ ದಿನ ದೇವರ ಅಭಿಷೇಕ, ರಥದ ಅಲಂಕಾರ, ಎರಡನೇ ದಿನ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವ, ಮೂರನೇ ದಿನ ಓಕುಳಿ ಕಾರ್ಯ, ರಥಕ್ಕೆ ಎಡೆಯನ್ನು ಹಾಕಿದ ನಂತರ ವಿಶೇಷ ಪೂಜೆ ನಡೆಯುತ್ತದೆ, ಇದಾದ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮುಗಿಸಿಕೊಂಡು ಬರುತ್ತದೆ, ರಥದ ಮುಂದೆ ಕರಡಿ ಚಮಾಳ, ನಂದಿ ಕೋಲಿನ ಕುಣಿತ, ಆಧುನಿಕ ವಾದ್ಯಗಳು ಇರುತ್ತವೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ನಾಗರಾಜ್ ಬಿನ್ ಬುಜ್ಜಾರಪ್ಪ ----- ಗ್ರಾಮಸ್ಥರು

2). ವೀರೇಶ್ ಬಿನ್ ಪಾಪಯ್ಯ ----- ಪೂಜಾರ್

47). ತಿಪ್ಪರೆಡ್ಡಿಹಳ್ಳಿ, ಆಂಜನೇಯನ ರಥ:

ತಿಪ್ಪಾರೆಡ್ಡಿ ಎನ್ನುವ ವ್ಯಕ್ತಿಯೊಬ್ಬನಿಂದ ಊರಿಗೆ ಈ ಹೆಸರು ಬಂದಿರುವುದಾಗಿದೆ, ಊರಿನಲ್ಲಿ ಆಂಜನೇಯ, ಕೊಲ್ಲಾಪುರದಮ್ಮ, ದುರ್ಗಮ್ಮ, ಓಬಳನರಸಿಂಹ, ಭೈರವೇಶ್ವರ (ಸರ್ಪವಕ್ಕಲಿಗ), ಪೀರ್ಲ ದೇವರುಗಳಿವೆ, ಪೀರ್ಲ ದೇವಸ್ಥಾನದಲ್ಲಿ ಕೊಂಡ ಆಚರಣೆ ನಡೆಯುತ್ತದೆ, ಮುಸ್ಲಿಮರ ಮಸೀದಿ, ದರ್ಗಾ ಇದೆ, ರಾಧಸ್ವಾಮಿ ಆಶ್ರಮ, ನಾಗಿರೆಡ್ಡಿ ತಾತನ ಆಶ್ರಮಗಳಿವೆ.

ಮಾರ್ಚ್ ತಿಂಗಳಲ್ಲಿ(ಚೈತ್ರಮಾಸದಲ್ಲಿ) ಆಂಜನೇಯನ ರಥೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ನಡೆಯುತ್ತದೆ, ಗ್ರಾಮದಲ್ಲೂ 'ಉಟ್ಲ ಪರಿಸೆ' ಆಚರಣೆಯಿದೆ, ಉದ್ದನೆಯ ಕಂಬ ನೆಟ್ಟು ಮೇಲೊಬ್ಬ

ವ್ಯಕ್ತಿಯನ್ನು ಕೂರಿಸಿ ಲೋಳೆಸರದ ರಸವನ್ನು ಹಾಕುತ್ತಿರುತ್ತಾರೆ, ಭಕ್ತರು ಜಾರುತ್ತಿರುವ ಕಂಬವನ್ನು ಹತ್ತಿ ಗುರಿ ಮುಟ್ಟಿದರೆ ಜಯಶೀಲರಾದಂತೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಆಂಜನೇಯನ ರಥೋತ್ಸವವನ್ನು ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಮಾಡುತ್ತಾರೆ, ರಥೋತ್ಸವಕ್ಕೆ ಎರಡು ಸಾವಿರ ಜನ ಸೇರುತ್ತಾರೆ, ತುಂಬಾ ಹಳೆಯ ರಥ ಇದಾಗಿದ್ದು ನಾಲ್ಕು ಗಾಲಿಗಳು, ಮರದ ತೊಲೆಗಳು, ಅಡ್ಡಪಟ್ಟಿಗಳು, ಕಳಸ, ಕಬ್ಬಿಣದ ಪಟ್ಟಿಗಳಿಂದ ಮಾಡಿದ ಡೂಮುಗಳನ್ನು ಒಳಗೊಂಡಿದೆ, ರಥದ ಒಟ್ಟು ಎತ್ತರ 21ಅಡಿ ಇದೆ.

ಮೂರು ದಿನಗಳು ನಡೆಯುವ ರಥೋತ್ಸವದಲ್ಲಿ ಮೊದಲ ದಿನ ಅಭಿಷೇಕ, ದೀಪಾರಾಧನೆ, ಎರಡನೇ ದಿನ ರತೋತ್ಸವ, ಮೂರನೇ ದಿನ ಓಕುಳಿ ಕಾರ್ಯ ನಡೆಯುತ್ತದೆ, ರಥಕ್ಕೆ ಅಲಂಕಾರ ಮಾಡಿ ದೇವಸ್ಥಾನದಿಂದ ದೇವರನ್ನು ಪಲ್ಲಕ್ಕಿಯಲ್ಲಿ ತಂದು ರಥದಲ್ಲಿ ಕೂರಿಸುತ್ತಾರೆ, ರಥಕ್ಕೆ ಬಲಿಬಾನ ಹಾಕಿ ಪೂಜೆ ಮುಗಿದ ನಂತರ ರಥವು ಪಾದಗಟ್ಟೆಯವರೆಗೆ ಹೋಗಿ ಅಲ್ಲಿ ಪೂಜೆಯನ್ನು ಮುಗಿಸಿಕೊಂಡು ಬರುತ್ತದೆ, ರಥೋತ್ಸವದ ಮುಂದೆ ಕರಡಿ ಚಮಾಳ, ಡೋಲು, ಉರುಮೆ, ನಂದಿ ಕೋಲಿನ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ರಾಜಣ್ಣ ------ ಗ್ರಾಮಸ್ಥರು

2). ಚಂದ್ರಣ್ಣ ------ ಗ್ರಾಮಸ್ಥರು

3). ರಂಗಪ್ಪ ------- ಅರ್ಚಕರು,

48). ಪರಶುರಾಮಪುರ ಮಹದೇವಪುರ(ಪಿ.ಮಹದೇವಪುರ), ಆಂಜನೇಯನ ರಥ:

ರಾಯದುರ್ಗದ ಪಾಳೆಯಗಾರರಿಗೆ ಸೇರಿದ್ದ ಈ ಊರನ್ನು ಚಿತ್ರದುರ್ಗದ ಪಾಳೆಯಗಾರರು (1744–47)ರಲ್ಲಿ ವಶಪಡಿಸಿಕೊಂಡ ಮೇಲೆ ಗ್ರಾಮದ ಪೂರ್ವ ಹೆಸರು ಮಂಗಪೋಟಿ ಎಂದಿದ್ದು, ಕೆಲವು ಊರುಗಳ ಹೆಸರುಗಳನ್ನು ಚಿತ್ರದುರ್ಗದ ಪಾಳೆಯಗಾರರು ಬದಲಿಸಿದಂತೆ ಈ ಊರಿನ ಹೆಸರನ್ನೂ ಮಹದೇವಪುರವೆಂದು ಬದಲಿಸಿದ್ದಾರೆ, ಇದರ ಬಗ್ಗೆ ಚಿತ್ರದುರ್ಗದ ಪಾಳೆಯಗಾರರ ದಾಖಲೆಗೆಳಲ್ಲಿ ಇದೆ.

ಆಂಜನೇಯ, ವೀರಭದ್ರಸ್ವಾಮಿ, ಗಣೇಶ, ಭೀರಪ್ಪ, ಚನ್ನಕೇಶವಸ್ವಾಮಿ, ರಂಗಪ್ಪ, ಯಲ್ಲಮ್ಮ, ಚೌಡೇಶ್ವರಿ, ಕೊಲ್ಲಾಪುರದಮ್ಮ, ಬಸವಣ್ಣನ ದೇವಸ್ಥಾನಗಳಿವೆ, ಅಲ್ಲೀಫೀರ್ ಆಶ್ರಮವೂ ಇದೆ, ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಶ್ರೀರಾಮನವಮಿ ಹಬ್ಬದಲ್ಲಿ ರಥೋತ್ಸವ ನಡೆಯುತ್ತದೆ, ಮೂರು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಮೊದಲನೆಯ ದಿನ ಅಭಿಷೇಕ, ದೀಪಾಲಂಕಾರ, ಎರಡನೆಯ ದಿನ ತೇರು, ಪಲ್ಲಕ್ಕಿ ಉತ್ಸವ, ಮೂರನೆ ದಿನ ಓಕುಳಿ ಕಾರ್ಯ ನಡೆದರೆ, ಮಾರಮ್ಮ ಹಬ್ಬದಲ್ಲಿ ಬೇವಿನಸೀರೆ, ಬಲಿ, ಹರಕೆ ಪದ್ಧತಿಗಳು ನಡೆಯುತ್ತವೆ.

ರಥ ಶಿಲ್ಪದ ವಿವರಣೆ ಹಾಗೂ ರಥೋತ್ಸವ: ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಬರುವ ಶ್ರೀರಾಮ ನವಮಿಯಲ್ಲಿ ಆಂಜನೇಯ ಮತ್ತು ರಾಮ ದೇವರ ರಥೋತ್ಸವವು ನಡೆಯುತ್ತದೆ, ರಥೋತ್ಸವಕ್ಕೆ ಸಾವಿರಕ್ಕೂ ಅಧಿಕ ಜನ ಸೇರುತ್ತಾರೆ.

ತುಂಬಾ ಹಳೆಯ ರಥವಾಗಿದ್ದು 31ಅಡಿ ಎತ್ತರವಾಗಿದೆ, ರಥದಲ್ಲಿ ಗಣೇಶ, ಲಕ್ಷ್ಮಿ, ಸರಸ್ವತಿ, ಶನಿಮಹದೇವ, ದೇವಿ, ಶಿವ ಪಾರ್ವತಿ, ಶ್ರೀರಾಮ, ಸೀತಾದೇವಿ, ರಾಮ, ಲಕ್ಷ್ಮಣ, ಆಂಜನೇಯ, ಶ್ರೀ ಕೃಷ್ಣ ಮುಂತಾದ ಮೂರ್ತಿಗಳನ್ನು ಕೆತ್ತನೆ ಮಾಡಿದ್ದಾರೆ, ಅಲಂಕಾರ ಮಾಡಿದ ರಥದಲ್ಲಿ ದೇವರನ್ನು ಕೂರಿಸಿ ರಥಕ್ಕೆ ವಿಶೇಷ ಪೂಜೆ ಮಾಡಿಸಿದ ನಂತರ ರಥವು ಊರಿನ ಪ್ರಮುಖ ಬೀದಿಯಲ್ಲಿ ಸಾಗುತ್ತದೆ, ಇದಕ್ಕೆ

ಪಾದಗಟ್ಟೆ ಇರುವುದಿಲ್ಲ, ರಥೋತ್ಸವದ ಮುಂದೆ ಕರಡಿ ಚಮಾಳ, ಡೋಲು, ಉರುಮೆ ವಾದ್ಯ, ನಂದಿ ಕೋಲಿನ ಕುಣಿತ ಇರುತ್ತದೆ.

ರಥದ ನಿರ್ಮಾಣ ಹಾಗೂ ರಥೋತ್ಸವದ ಬಗ್ಗೆ ಮಾಹಿತಿಯನ್ನು ಕೊಟ್ಟ ಸದರಿ ಗ್ರಾಮದವರು:

1). ಸೋಮಶೇಖರ ರೆಡ್ಡಿ S/O ಸಣ್ಣಹನುಮಂತ ರೆಡ್ಡಿ ----- ಗ್ರಾಮಸ್ಥರು

2). ನಾಗರಾಜ ರಾವ್(ಶಿಕ್ಷಕರು) ----- ಗ್ರಾಮಸ್ಥರು

3). ಸಿ. ವೀರಣ್ಣ S/O ಚನ್ನಪ್ಪ ------ ಗ್ರಾಮಸ್ಥರು.


ಮೊ: 9449743853.



ಸಂಪ್ರದಾಯ ಶಿಲ್ಪಿಗಳಿಂದ ನಿರ್ಮಾಣಗೊಳ್ಳುತ್ತಿರುವ ಸೂರನಹಳ್ಳಿ ಗ್ರಾಮದ–ಆಂಜನೇಯ ದೇವಾಲಯದ ದ್ವಾರಬಾಗಿಲು:



ಪಗಡಲಬಂಡೆ ಬಸವಣ್ಣನ ರಥದ ಮನೆ:



ರಾಮಜೋಗಿಹಳ್ಳಿ ಮಾರಮ್ಮ ದೇವಸ್ಥಾನದ ಬಾಗಿಲಿಗೆ ಅಳವಡಿಸಿರುವ ಲೋಹದ ಕವಚ:

3. ಚಿತ್ರದುರ್ಗ ಜಿಲ್ಲೆಯ ಸಂಪ್ರದಾಯ ಶಿಲ್ಪಕಲಾವಿದರ ವಿವರ:

ಕಾಳಾಚಾರ್: ಇವರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನವರು, ಗ್ರಾಮಾಂತರ ಮಟ್ಟದಿಂದ ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲೂ ಹೆಸರು ಗಳಿಸಿರುತ್ತಾರೆ, ಸಂಪ್ರದಾಯ ಶಿಲ್ಪಕಲೆಯಲ್ಲಿ ನಿರತರಾಗಿದ್ದಾರೆ, ಇವರು ಕೆತ್ತನೆಮಾಡಿದ ದೇವರ ಮೂರ್ತಿಗಳು ದೊಡ್ಡ ದೊಡ್ಡ ದೇವಾಲಯಗಳಲ್ಲಿ ಪ್ರತಿಷ್ಠಾಪನೆಗೊಂಡು ಪೂಜೆ ಪಡೆದುಕೊಳ್ಳುತ್ತಿವೆ, ಇವರ ಶಿಲ್ಪಕೆಲೆಯ ಸಾಧನೆಯನ್ನು ಮೆಚ್ಚಿಕೊಂಡು ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ, ಕರ್ನಾಟಕ ಸರ್ಕಾರವೂ ಇವರ ಸಾಧನೆಯನ್ನು ಗುರುತಿಸಿ ರಾಜ್ಯ ಪ್ರಶಸ್ತಿಯನ್ನು ನೀಡಿದೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯೂ ಸಹ ಇವರಿಗೆ ಪ್ರಶಸ್ತಿಯನ್ನ ಕೊಟ್ಟಿದೆ, ಇವರ ಮಗನಾದ ಬಾಬುಚರಣ್ ಎನ್ನವವರು ತಂದೆಯಿಂದ ಬಂದಿರುವ ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿಕೊಂಡಿದ್ದಾರೆ.

ತೀರ್ಥಾಚಾರ್: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ತುಪ್ಪದಹಳ್ಳಿ ಗ್ರಾಮದವರಾಗಿದ್ದು ಸಂಪ್ರದಾಯ ಶಿಲ್ಪಕಲೆಯಲ್ಲಿ ನಿಪುಣರಾಗಿದ್ದಾರೆ, ತಮ್ಮ ಶಿಲ್ಪಕಲಾ ಚಾತುರ್ಯದಿಂದ ಚಿತ್ರದುರ್ಗ ಜಿಲ್ಲಾದ್ಯಂತ ಹೆಸರುಗಳಿಸಿರುವುದಲ್ಲದೆ ಹೊರ ರಾಜ್ಯಗಳಲ್ಲೂ ತಮ್ಮ ಶಿಲ್ಪಕಲಾ ಕೆತ್ತನೆಯ ಕಾರ್ಯ ಮಾಡಿದ್ದಾರೆ, ಬೆಂಗಳೂರಿನಲ್ಲಿರುವ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಹಾಲಿ ಸದಸ್ಯರಾಗಿದ್ದಾರೆ, ರಥ ನಿರ್ಮಾಣವನ್ನೂ ಮಾಡುತ್ತಾರೆ, ಹಲವಾರು ಕಲಾ ಶಿಬಿರಗಳು, ತರಬೇತಿ ಕೇಂದ್ರಗಳು ಮತ್ತು ಶಿಲ್ಪಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಶೇಖರಪ್ಪ: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ಹೊರಕೆರೆ ದೇವರ ಪುರದವರು, ಹುಟ್ಟು ಸಂಪ್ರದಾಯ ಶಿಲ್ಪಕಲಾವಿದರು, ಮಣ್ಣಿನ ಮಾಧ್ಯಮದಿಂದ ಶಿಲ್ಪಕಲೆಯನ್ನು ತನ್ನ ಕುಟುಂಬದ ಸಹಕಾರದೊಂದಿಗೆ ಮುಂದುವರಿಸಿಕೊಂಡು ಬಂದಿದ್ದಾರೆ, ಮಣ್ಣಿನಿಂದ ಕಲಾಕೃತಿಗಳು, ಗೃಹೋಪಯೋಗಿ ಮಣ್ಣಿನ ಪಾತ್ರೆಗಳು, ದೇವರ ಮೂರ್ತಿಗಳು ಮುಂತಾದ ಕಲೆಯನ್ನು ಮಾಡುತ್ತಿದ್ದಾರೆ.

ಮಂಜುನಾಥಾ ಚಾರಿ: ಚಿತ್ರದುರ್ಗ ಜಿಲ್ಲೆ ಮತ್ತು ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ ಕೂನಬೇವು ಗ್ರಾಮದಲ್ಲಿ ವಾಸವಾಗಿದ್ದಾರೆ, ಇವರ ಕೆಲವಾರು ಶಿಲ್ಪ ಕಲಾಕೃತಿಗಳು ಜನರ ಮೆಚ್ಚುಗೆ ಪಡೆದಿವೆ, ಮೂರು ವಿಧದ ಮಾಧ್ಯಮದಿಂದ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

ನರಸಿಂಹ ರಾಜು: ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ವ್ಯಾಪ್ತಿಯ ಆಲೂರು ಗ್ರಾಮದವರು, ತಮ್ಮ ಸ್ವಂತ ಊರಿನಲ್ಲಿ ಇದ್ದುಕೊಂಡು ಹಿಂದಿನಿಂದ ಬಂದಿರುವ ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

ರಾಘವೇಂದ್ರ: ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದಲ್ಲಿ ವಾಸವಾಗಿದ್ದಾರೆ, ಇವರ ಶಿಲ್ಪಕಲೆ ಮನೋಹರವಾಗಿರುತ್ತದೆ, ತಮ್ಮನ್ನು ಶಿಲ್ಪಕಲೆಗೆ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ಕೃಷ್ಣ: ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರದವರು, ಸದ್ಯದಲ್ಲಿ ಬೆಂಗಳೂರಿನಲ್ಲಿ ವಾಸವಾಗಿದ್ದು ತಮ್ಮ ಶಿಲ್ಪಕಲೆಯನ್ನು ಬೆಂಗಳೂರಿನಲ್ಲಿಯೇ ಮುಂದುವರಿಸುತ್ತಿದ್ದಾರೆ, ಮೂರ್ನಾಲ್ಕು ಮಾಧ್ಯಮದಲ್ಲಿ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

ರಾಜು: ಚಿತ್ರದುರ್ಗ ನಗರದ ಕೆಳಗೋಟೆಯಲ್ಲಿ ವಾಸವಾಗಿರುವ ಇವರು ಶಿಲ್ಪಕಲೆಯನ್ನು ತುಂಬಾ ಆಸಕ್ತಿಯಿಂದ ಕಲಿತು ಈಗ ಮನೋಜ್ಞವಾಗಿ ತಮ್ಮ ಗೆಳೆಯರ ಜೊತೆಯಲ್ಲಿ ಕಲಿಯುತ್ತಲೇ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ಹಲವಾರು ಸುಂದರ ಶಿಲ್ಪಕಲಾ ಕೃತಿಗಳು ಇವರ ಕೈಯಿಂದ ಕೆತ್ತನೆಗೊಂಡಿವೆ.

ಶಾಂತಕುಮಾರ್: ಚಿತ್ರದುರ್ಗ ನಗರದ ಐ.ಆರ್.ಡಿ.ಪಿ. ಲೇಔಟ್‌ನಲ್ಲಿ ವಾಸವಾಗಿದ್ದು ಶಿಲ್ಪಕಲೆಯನ್ನು ಜೀವನೋಪಾಯಕ್ಕೆ ಮಾಡುತ್ತಿದ್ದಾರೆ.

ಡಿ.ಟಿ.ರಮೇಶ್(ರಾಮು): ಚಿತ್ರದುರ್ಗ ನಗರದ ಕೆಳಗೋಟೆಯಲ್ಲಿ ವಾಸವಾಗಿರುವ ಇವರು ಆರ್ಟಿಸ್ಟ್ ರಾಮು ಎಂದೇ ಪ್ರಸಿದ್ಧರಾಗಿದ್ದಾರೆ, ಚಿತ್ರಕಲೆ, ಶಿಲ್ಪಕಲೆ ಎರಡರಲ್ಲೂ ಪ್ರೌಢಿಮೆ ಉಳ್ಳವರು ಸಿಮೆಂಟ್, ಫೈಬರ್, ಪಿಓಪಿ, ಕಂಚು ಮುಂತಾದ ಮಾಧ್ಯಮಗಳಲ್ಲಿ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

ದಿ|| ಪುಟ್ಟಾಚಾರ್: ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯ ಜೆ.ಎನ್. ಕೋಟೆಯ ವಾಸಿಗಳಾಗಿದ್ದ ಇವರು, ಸಂಪ್ರದಾಯ ಶಿಲ್ಪ ಕಲಾವಿದರು, ಹಳ್ಳಿಯಲ್ಲಿದ್ದುಕೊಂಡೆ ತಮ್ಮ ಕೆಲಸವನ್ನು ಮಾಡುತ್ತಾ ಜೀವನವನ್ನು ನಡೆಸುತ್ತಿದ್ದರು.

ಕೆ. ರಾಘವೇಂದ್ರ: ಚಿತ್ರದುರ್ಗದ ನೆಹರು ನಗರದಲ್ಲಿ ವಾಸಿಸುತ್ತಿದ್ದು ಶಿಲ್ಪಕಲೆಯಲ್ಲಿ ಸಾಧನೆ ಮಾಡಬೇಕೆಂಬ ಅಭಿಲಾಷೆ ಉಳ್ಳವರು.

ಬೋರಯ್ಯ: ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಬುಡ್ನಹಟ್ಟಿ ಗ್ರಾಮದವರು, ಸಂಪ್ರದಾಯ ಶಿಲ್ಪಕಲೆಯಲ್ಲಿ ನಿಂತರವಾಗಿ ತೊಡಗಿಕೊಂಡಿದ್ದಾರೆ, ಈಗ ಬೆಂಗಳೂರಿನಲ್ಲಿ ತಮ್ಮ ಮಕ್ಕಳೊಂದಿಗೆ ವಾಸವಾಗಿದ್ದಾರೆ.

ಸುರೇಶಾಚಾರ್: ಚಿತ್ರದುರ್ಗ ನಗರದ ಕಾಳಿಕಾಂಬ ದೇವಸ್ಥಾನ ಸಮೀಪದ ಶಿಲ್ಪಲೋಕ ಎಂಬ ಮನೆಯಲ್ಲಿ ವಾಸವಾಗಿದ್ದಾರೆ, ದೇವಸ್ಥಾನದ ಅರ್ಚಕರೂ ಆಗಿದ್ದು ಶಿಲ್ಪಕಲಾ ಕೃತಿಗಳನ್ನು ರಚಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ಹೆಚ್ಚಾಗಿ ಕಲ್ಲಿನ ಮಾಧ್ಯಮದಿಂದ ದೇವರ ಮೂರ್ತಿಗಳನ್ನು ಮಾಡುತ್ತಾರೆ, ಕೃಷ್ಣಶಿಲೆ ಇವರ ಕೆತ್ತನೆಗೆ ಇಷ್ಟವಾದ ಕಲ್ಲು, ಸುಮಾರು ಗ್ರಾಮಗಳ ದೇವಸ್ಥಾನಗಳಲ್ಲಿ ಇವರು ಕೆತ್ತನೆ ಮಾಡಿರುವ ಮೂರ್ತಿಗಳು ಪ್ರತಿಷ್ಠಾಪನೆಗೊಂಡು ಪೂಜೆಗೊಳ್ಳುತ್ತಿವೆ, ಇವರ ಶಿಲ್ಪಕಲಾ ಪ್ರೌಢಿಮೆಗೆ ಅನೇಕ ಪುರಸ್ಕಾರಗಳು ಲಭಿಸಿವೆ.

ಮಲ್ಲಿಕಾರ್ಜುನ್: ಚಿತ್ರದುರ್ಗ ನಗರದ ಕರುವಿನ ಕಟ್ಟೆ ಸರ್ಕಲ್ ಬಳಿ ವಾಸವಾಗಿದ್ದು ತಮ್ಮ ಸಂಪ್ರದಾಯ ಶಿಲ್ಪಕಲೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ನಾಗರಾಜ್: ಚಳ್ಳಕೆರೆ ತಾಲ್ಲೂಕು ಸಿದ್ದಾಪುರ ಗ್ರಾಮದ ವಾಸಿಯಾಗಿದ್ದು, ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದಾರೆ, ಮರ, ಕಲ್ಲು ಮಾಧ್ಯಮಗಳಿಂದ ಶಿಲ್ಪಕಲೆ ಹಾಗೂ ರಥದ ನಿರ್ಮಾಣವನ್ನು ಮಾಡುತ್ತಿದ್ದಾರೆ.

ರುದ್ರಚಾರ್: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಟಿ.ನುಲೇನೂರು ಗ್ರಾಮದಲ್ಲಿ ವಾಸವಾಗಿರುವ ಇವರು ಸಂಪ್ರದಾಯವಾಗಿ ಬಂದಿರುವ ಶಿಲ್ಪ ಕೆತ್ತನೆ ಮಾಡುತ್ತಿದ್ದಾರೆ.

ನಾಗರಾಜಾಚಾರ್: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ಶಿವಗಂಗ ಎಂಬಲ್ಲಿ ವಾಸವಾಗಿದ್ದು ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದಾರೆ, ರಥಕ್ಕೆ ಬೇಕಾದ ಮೂರ್ತಿಗಳ ಕೆತ್ತನೆ, ಹಳೆಯ ರಥಗಳ ರಿಪೇರಿ ಕೆಲಸ ಮತ್ತು ಹೊಸದಾಗಿ ರಥಗಳನ್ನು ಮಾಡುತ್ತಾರೆ.

ಕುಮಾರ್: ಚಿತ್ರದುರ್ಗದ ವಾಸಿಯಾಗಿರುವ ಇವರು ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿಕೊಂಡಿದ್ದು, ಈಗ ಲೋಹಗಳ ಮಾಧ್ಯಮದ ಶಿಲ್ಪ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ರಾಮಚಾರ್: ಚಿತ್ರದುರ್ಗ ನಗರದ ಮಾರುತಿ ನಗರದಲ್ಲಿ ವಾಸವಾಗಿದ್ದು ಸಂಪ್ರದಾಯ ಶಿಲ್ಪಕೆತ್ತನೆಯಲ್ಲಿ ತೊಡಗಿದ್ದಾರೆ.

ಡಿ.ಎನ್.ಮಂಜುನಾಥಾಚಾರ್: ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಕೋನಸಾಗರ ಗ್ರಾಮದವರಾಗಿದ್ದು ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿಕೊಂಡಿದ್ದಾರೆ, ಮರ ಮಾಧ್ಯಮದಿಂದ ಕಲಾತ್ಮಕವಾದ ಮೂರ್ತಿಗಳು ಬೇಕಾದ ಕಲಾಕೃತಿಗಳನ್ನು ಮಾಡುತ್ತಾರೆ.

ನಾಗೇಶ್: ಚಿತ್ರದುರ್ಗ ನಗರದ ಕೆಳಗೋಟೆಯಲ್ಲಿ ವಾಸವಾಗಿರುವ ಇವರು ಹಿಂದಿನಿಂದಲೂ ಬಂದಿರುವ ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ನಿರತರಾಗಿದ್ದಾರೆ, ಸಿಮೆಂಟ್ ಮಾಧ್ಯಮವನ್ನು ಬಳಸಿ ವಿವಿಧ ಮೂರ್ತಿಗಳು, ಇತರೆ ಕಲಾಕೃತಿಗಳನ್ನು ಮಾಡುತ್ತಿದ್ದಾರೆ.

ದಿ:ಸಣ್ಣಪಾಲಯ್ಯ: ಚಿತ್ರದುರ್ಗ ನಗರದ ಕೆಳಗೋಟೆಯಲ್ಲಿ ವಾಸವಾಗಿರುವ ಇವರು ಅತಿ ಚಿಕ್ಕವಯಸ್ಸಿನಲ್ಲಿಯೇ ತಮ್ಮ ತಂದೆಯವರು ಮಾಡುತ್ತಿದ್ದ ಕಲೆಯನ್ನು ಕಲಿತು ಸಂಪ್ರದಾಯ ಶಿಲ್ಪಕಲಾವಿದರಾಗಿದ್ದು ಸಿಮೆಂಟ್ ಮಾಧ್ಯಮದಿಂದ ಶಿಲ್ಪಕಲೆಯನ್ನು ಮಾಡುತ್ತಿದ್ದರು.

ನಂಜಪ್ಪಾಚಾರ್: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ವಾಸವಾಗಿದ್ದು, ರಥದ ನಿರ್ಮಾಣ, ಲೋಹದ ಮಾಧ್ಯಮದಿಂದ ಶಿಲ್ಪಕಲೆಯನ್ನು ಮಾಡುತ್ತಿದ್ದರು.

ದಿ॥ಖಗರಾಜಾಚಾರ್: ಚಿತ್ರದುರ್ಗ ಜಿಲ್ಲೆಯ ಜಂಪಣ್ಣ ನಾಯಕನ ಕೋಟೆ ಗ್ರಾಮದವರಾಗಿದ್ದು, ಸಂಪ್ರದಾಯ ಶಿಲ್ಪಕಲಾವಿದರಾಗಿದ್ದರು, ಜೊತೆಗೆ ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದರು.

ಚಿತ್ರಗಾರ್ ದಿ॥ತಿಪ್ಪೇರುದ್ರಪ್ಪ: ಚಳ್ಳಕೆರೆ ನಗರದ ವಾಸಿಯಾಗಿದ್ದ ಇವರು ಸಂಪ್ರದಾಯ ಶಿಲ್ಪಕಲಾವಿದರು, ಮೂಲತಃ ನಾಯಕನ ಹಟ್ಟಿ ಇವರ ತವರೂರು, ಬಹಳ ಚಿಕ್ಕ ವಯಸ್ಸಿನಿಂದಲೇ ತಮ್ಮ ತಂದೆಯವರೊಂದಿಗೆ ಚಳ್ಳಕೆರೆ ನಗರಕ್ಕೆ ಬಂದು ಲೋಹ ಮಾಧ್ಯಮದಿಂದ ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದರು.

ಚಿತ್ರಾಗಾರ ಬಾಬಣ್ಣ: ಚಳ್ಳಕೆರೆ ಪಟ್ಟಣದ ವೀರಭದ್ರ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ವಾಸವಾಗಿದ್ದು ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದಾರೆ, ಲೋಹ, ಮರ, ಮಣ್ಣು ಮತ್ತು ಬಟ್ಟೆ ಮಾಧ್ಯಮಗಳಿಂದ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

ತಿಪ್ಪೇಸ್ವಾಮಿ: ಚಳ್ಳಕೆರೆ ನಗರದಲ್ಲಿ ವಾಸವಾಗಿದ್ದು ಲೋಹ, ಮಣ್ಣು, ಬಟ್ಟೆಯ ಮಾಧ್ಯಮದಿಂದ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ.

ನಾಗರಾಜಾಚಾರ್: ಚಳ್ಳಕೆರೆ ತಾಲ್ಲೂಕು ಸಿದ್ದಾಪುರ ಗ್ರಾಮದ ಇವರು ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ಲೋಹ, ಮಣ್ಣು, ಹಾಗೂ ಮರದ ಮಾಧ್ಯಮದಿಂದ ಮನೆಯ ಬಾಗಿಲು, ಕಿಟಕಿ, ಮಂಚ ಮುಂತಾದ ಸಾಮಾನುಗಳನ್ನು ಕಲಾತ್ಮಕ ಕೆತ್ತನೆಗಳಿಂದ ಮಾಡುತ್ತಿದ್ದಾರೆ.

ರತ್ನಾಚಾರ್: ಚಳ್ಳಕೆರೆ ಪಟ್ಟಣದ ಹಳೇ ಟೌನ್‌ನಲ್ಲಿ ವಾಸವಿದ್ದ ಇವರು ಲೋಹ, ಮಣ್ಣಿನಿಂದ ಮೂರ್ತಿಗಳನ್ನು ಮಾಡುತ್ತಿದ್ದರು, ಇವರ ತಂದೆಯವರ ಜೊತೆಯಲ್ಲಿ ಚಿಕ್ಕ ವಯಸ್ಸಿನಿಂದಲೇ ಮಣ್ಣಿನ ಮೂರ್ತಿಗಳನ್ನು ಮಾಡುವುದನ್ನು ಕಲಿತಿದ್ದರು.

ದಿ॥ಕರಿಯಪ್ಪ: ನಾಯಕನಹಟ್ಟಿಯಲ್ಲಿ ವಾಸವಾಗಿದ್ದ ಇವರು ಸಂಪ್ರದಾಯ ಶಿಲ್ಪಕಲಾವಿದರು, ತಮ್ಮ ಸಂಪೂರ್ಣ ಜೀವನವನ್ನು ಕಲೆಗಾಗಿ ಸವೆಸಿದವರು, ಈಗ ಇವರ ಮಕ್ಕಳು ಚಳ್ಳಕೆರೆ ನಗರದಲ್ಲಿ ವಾಸವಾಗಿದ್ದು ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದಾರೆ.

ನಾಗರಾಜ್: ಚಿತ್ರದುರ್ಗದ ಕರುವಿನ ಕಟ್ಟೆ ಬಡಾವಣೆಯಲ್ಲಿ ವಾಸವಾಗಿರುವ ಇವರು ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದಾರೆ, ಮರದ ಕೆತ್ತನೆ, ಮನೆ, ದೇವಸ್ಥಾನ ಮುಂತಾದೆಡೆಗಳಲ್ಲಿ ನಿರ್ಮಿಸಿಬಹುದಾದ ಮರದ ಅಲಂಕಾರಿಕಾ ಬಾಗಿಲು, ಕಿಟಕಿ, ತೊಲೆ ಮುಂತಾದ ಕಲಾ ವಸ್ತುಗಳನ್ನು ಮಾಡುತ್ತಾರೆ. ಇದಲ್ಲದೆ ಮಣ್ಣಿನ ಮಾಧ್ಯಮದಿಂದ ವಿವಿಧ ಮೂರ್ತಿಗಳನ್ನು ಮಾಡುತ್ತಾರೆ. ಇವರು ಮಾಡಿದ ಗೌರಿ, ಗಣೇಶನ ಮೂರ್ತಿಗಳು ವಿದೇಶದಲ್ಲಿ ಪೂಜೆಗೊಳ್ಳುತ್ತಿವೆ.

ಬ್ರಹ್ಮಾನಂದ ಸ್ವಾಮಿ: ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ ಜೆ.ಎನ್.ಕೋಟೆ ಗ್ರಾಮದಲ್ಲಿ ವಾಸವಾಗಿದ್ದು, ತಮ್ಮ ಕುಂಟುಂಬದ ಕೊಡುಗೆಯಾಗಿ ಬಂದಿರುವ ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿದ್ದಾರೆ, ಚಿತ್ರದುರ್ಗ ಜಿಲ್ಲೆ, ಹೊರಗಿನ ಜಿಲ್ಲೆಯ ದೇವಸ್ಥಾನಗಳಲ್ಲೂ ಇವರು ಮಾಡಿರುವ ಸಿಮೆಂಟ್ ಮಾಧ್ಯಮದ ಶಿಲ್ಪಗಳಿವೆ.

ಚಿಕ್ಕಣ್ಣಾ ಚಾರ್: ಚಳ್ಳಕೆರೆ ತಾಲ್ಲೂಕು ಸಿದ್ಧಾಪುರ ಗ್ರಾಮದ ವಾಸಿಯಾಗಿರುವ ಇವರು ತಮ್ಮ ತಂದೆ ಹಾಗೂ ತಾಯಿಯವರಿಂದ ಬಳುವಳಿಯಾಗಿ ಬಂದಿರುವ ಸಂಪ್ರದಾಯ ಶಿಲ್ಪಕಲೆಯನ್ನು ಮುಂದುವರೆಸುತ್ತಿದ್ದಾರೆ, ಮರ, ಕಲ್ಲು, ರಟ್ಟು, ಅನುಪಯುಕ್ತ ವಸ್ತುಗಳು, ಮಣ್ಣು ಮುಂತಾದ ಮಾಧ್ಯಮಗಳಿಂದ ಶಿಲ್ಪಕಲಾಕೃತಿಗಳನ್ನು ಮಾಡುವುದರ ಜೊತೆಗೆ ಕಲಾ ತಂಡವನ್ನೂ ಕಟ್ಟಿಕೊಂಡು ಜಾನಪದ ಕಲೆಯನ್ನು ಉಳಿಸುವಲ್ಲಿ ಶ್ರಮಿಸುತ್ತಿದ್ದಾರೆ.

ರವೀಂದ್ರಾಚಾರ್: ಚಳ್ಳಕೆರೆ ನಗರದಲ್ಲಿ ವಾಸಿಯಾಗಿದ್ದು, ತಮ್ಮ ಕುಟುಂಬದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ ಶಿಲ್ಪಕಲೆಯನ್ನು ಮಾಡುತ್ತಿದ್ದಾರೆ, ಮರ, ರಟ್ಟು, ಮಣ್ಣು ಮುಂತಾದ ಮಾಧ್ಯಮಗಳಿಂದ ಶಿಲ್ಪಕಲಾಕೃತಿಗಳನ್ನು ಮಾಡುವುದರ ಜೊತೆಗೆ ಹಳೆಯ ಮೂರ್ತಿಗಳಗೆ ಸುಂದರವಾಗಿ ಬಣ್ಣವನ್ನು ಹಾಕಿಕೊಡುತ್ತಾರೆ.

ಭೀಮಾಚಾರ್: ಚಳ್ಳಕೆರೆ ನಗರದ ವಾಸಿಯಾಗಿದ್ದರು, ಇಂದು ಇವರು ಇಲ್ಲದಿದ್ದರೂ ಇವರು ಮಾಡುತ್ತಿದ್ದ ಕಲೆಯನ್ನು ಇವರ ಕುಟುಂಬದವರು ನಡೆಸಿಕೊಂಡು ಹೋಗುತ್ತಿದ್ದಾರೆ, ಮರ, ಮಣ್ಣು ಮಾಧ್ಯಮಗಳಿಂದ ಶಿಲ್ಪಕಲೆಯನ್ನು ಮಾಡುವುದರ ಜೊತೆಗೆ ದೇವರುಗಳಿಗೆ ಪುಣ್ಯೋಜನೆ ಮಡುತ್ತಿದ್ದರು.

ಗಿರೀಶಾಚಾರ್: ಚಳ್ಳಕೆರೆ ನಗರದ ವಾಸಿಯಾಗಿದ್ದು ಕಬ್ಬಿಣ, ಕಲ್ಲು, ಮರ ಮಾಧ್ಯಮದಿಂದ ಶಿಲ್ಪಕಲೆ ಹಾಗೂ ಇತರೆ ಎಲ್ಲಾ ರೀತಿಯ ಕೆತ್ತನೆ ಕೆಲಸವನ್ನು ಮಾಡುತ್ತಾರೆ, ಇದಲ್ಲದೆ ಸಂಗೀತ, ನಾಟಕ ಕಲಾವಿದರೂ ಕೂಡ, ಇದೆಲ್ಲದರ ಜೊತೆಗೆ ಚಿಕ್ಕ ಮಕ್ಕಳಿಗೆ ಬಾಲಗ್ರಹ ಯಂತ್ರಗಳನ್ನು ಹಾಕುತ್ತಾರೆ.

ಪರಾಮರ್ಶನ ಗ್ರಂಥಗಳು:

1). ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ: ಡಾ॥ ಎನ್.ಎಸ್. ಮಹಂತೇಶ.

2). ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು: ಡಾ॥ ಬಿ. ಸುರೇಶ.

3). ವಿಶ್ವಕರ್ಮ ಶಿಲ್ಪ ಶಾಸ್ತ್ರಂ.

4). ಕಲಾ ಚರಿತ್ರೆ : ಅಶೋಕ ಟಿ.ಅಕ್ಕಿ

5). ದಿನ ಪತ್ರಿಕೆಗಳು

6). ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ: ಡಾ॥ಸಾಣೀಕೆರೆ ಸಣ್ಣೋಬಯ್ಯ.

7). ಆರನೇ ಆರ್ಥಿಕ ಗಣತಿ ಕೈಪಿಡಿ:

8). ಚಿತ್ರದುರ್ಗ ಜಿಲ್ಲಾ ದರ್ಶಿನ: ಟಿ. ಗಿರಿಜ

9). ಹಿರಿಯೂರು ತಾಲ್ಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು: ವಿಧ್ಯಾಶ್ರೀ ಎಸ್.ಹೆಚ್.

10). ಗ್ರಾಮ ಚರಿತ್ರೆ ಕೋಶ(ಚಳ್ಳಕೆರೆ ತಾಲ್ಲೂಕು): ಸಾಣೀಕೆರೆರಘು, (ಅಪ್ರಕಟಿತ)

ಪರಾಮರ್ಶನ ಗ್ರಂಥಗಳು:

1). ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ: ಡಾ" ಎನ್.ಎಸ್. ಮಹಂತೇಶ.

2). ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು: ಡಾ" ಜಿ. ಸುರೇಶ.

3). ವಿಶ್ವಕರ್ಮ ಶಿಲ್ಪ ಶಾಸ್ತ್ರಂ.

4). ಕಲಾ ಚರಿತ್ರೆ : ಅಶೋಕ ಟಿ.ಅಕ್ಕಿ

5). ದಿನ ಪತ್ರಿಕೆಗಳು

6). ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ: ಡಾ"ಸಾಣೀಕೆರೆ ಸಣ್ಣೋಬಯ್ಯ

7). ಆರನೇ ಆರ್ಥಿಕ ಗಣತಿ ಕೈಪಿಡಿ:

8). ಚಿತ್ರದುರ್ಗ ಜಿಲ್ಲಾ ದರ್ಶನ: ಟಿ. ಗಿರಿಜ

9). ಹಿರಿಯೂರು ತಾಲ್ಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು: ವಿಧ್ಯಾಶ್ರೀ ಎಸ್.ಹೆಚ್.

10). ಚಳ್ಳಕೆರೆ ತಾಲ್ಲೂಕು ದರ್ಶನ: ಸಾಣೀಕೆರೆರಘು, (ಅಪ್ರಕಟಿತ)

ಪ್ರಾದೇಶಿಕ ಪದಗಳ ಅರ್ಥಸೂಚಿ:

ಪರ್ಣ್ಯೋಜನೆ: ದೇವರ ಮೂರ್ತಿಗಳಿಗೆ ಮಾಡುವ ವಿಶೇಷ ಪೂಜೆ,

ಕರಡಿ ಚಮಾಳ: ವಾದ್ಯ,

ಬಲಿಬಾನ: ಮೊಸರು, ಅನ್ನ ಹಾಗೂ ಬಾಳೆ ಹಣ್ಣು ಮಿಶ್ರಣದ ದೇವರಿಗೆ ಅರ್ಪಿಸುವ ನೈವೇದ್ಯ,

ಪಾದಗಟ್ಟೆ: ದೇವರ ಪಾದಗಳು ಅಥವಾ ದೇವರ ವಸ್ತುಗಳು ಇದ್ದು ದೇವರ ಜಾತ್ರೆ, ರಥೋತ್ಸವದ ಸಮಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಸ್ಥಳ,

ಬಾಲಗ್ರಹ: ಚಿಕ್ಕ ಮಕ್ಕಳಿಗೆ ಬರುವ ಗ್ರಹ ದೋಷ,

ಮಂಗಪೋಟಿ: ಗ್ರಾಮದ ಹೆಸರು,

ಉಟ್ಲ ಪರ್ಸೆ: ದೇವರ ಜಾತ್ರೆ ಸಮಯದಲ್ಲಿ ಮಾಡುವ ವಿಶೇಷ ಪ್ರದರ್ಶನ,

ಕ್ಯಾತಪ್ಪ: ದೇವರು ಅಥವಾ ಮನುಷ್ಯರಿಗೆ ಇಡುವ ಹೆಸರು,

ಪರ್ಸೆ: ಜಾತ್ರೆ,

ವಡೆ: ಅತಿ ಉಷ್ಣಕ್ಕೆ ಗ್ರಾಮೀಣ ಭಾಷೆಯಲ್ಲಿ ಬಳಸುವ ಪದ,

ಗಮ್ಮ: ಬಿಸಿ(ಸಕೆ),

ಉಸಿ: ಬಿಡುವಿಲ್ಲದ ಜಾತ್ರೆ ಕಾರ್ಯಕ್ರಮಗಳ ಮಧ್ಯದಲ್ಲಿ ಕಾರ್ಯಕ್ರಮಗಳಿಲ್ಲದ ದಿನ,

ಎಡೆ: ದೇವರ ನೈವೇದ್ಯದ ಮತ್ತೊಂದು ಹೆಸರು,

ಕಸವಿಗೊಂಡ-ಹರವಿಗೊಂಡ: ಗ್ರಾಮಗಳ ಹೆಸರು,

ಕೈವಾಡಸ್ಥರು: ವಿವಿಧ ಕಸುಬಿನವರು,

ಎಡಿಗೆ ಜಾತ್ರೆ: ದೇವರ ವಿಶೇಷ ಆಚರಣೆ-ಗ್ರಾಮೀಣರ ವಿಶೇಷ ಹಬ್ಬ,

ಬಲ್ಪ: ಗೋಡೆಯ ಮೇಲಿನ ಕೊನೆಯ ತುದಿ,

ಬುರ್ಜಿ: ಕೋಟೆಯ ಮಧ್ಯದಲ್ಲಿ ಇರುವ ಚೌಕಾಕಾರದ ಗೋಡೆ- ಕಾವಲು ಕಾಯುತ್ತಿರುವವರ ಜಾಗ,

ಗಗ್ಗರ: ಕಾಲಿಗೆ ಮತ್ತು ನಂದಿಕೋಲಿಗೆ ಹಾಕುವ ದೊಡ್ಡ ಗಾತ್ರದ ಗೆಜ್ಜೆ.

ಚಳ್ಳಕೆರೆ ತಾಲ್ಲೂಕು ಮರ ಮಾಧ್ಯಮದಿಂದ ನಿರ್ಮಾಣ ಮಾಡಿರುವ ರಥಗಳ ಭಾವಚಿತ್ರಗಳು:



ಹೊಟ್ಟೆಪ್ಪನಹಳ್ಳಿ ಗ್ರಾಮದ ಉಜ್ಜನಿ ಸಿದ್ದೇಶ್ವರ ದೇವರ ರಥ:



ಹೊಟ್ಟೆಪ್ಪನಹಳ್ಳಿ ಗ್ರಾಮದ ಉಜ್ಜನಿ ಸಿದ್ದೇಶ್ವರ ರಥ– ಶಿವಲಿಂಗದ ಮುಂದೆ ಜೋಡಿ ನಂದಿಗಳ ಕೆತ್ತನೆ:



ಹೊಟ್ಟೆಪ್ಪನಹಳ್ಳಿ ಗ್ರಾಮದವರಿಂದ ಸಂಶೋಧಕರು ಮಾಹಿತಿಯನ್ನು ಸಂಗ್ರಹಿಸುತ್ತಿರುವದು:



ನಾಯಕನಹಟ್ಟಿ ತಿಪ್ಪೇಸ್ವಾಮಿಯ ದೊಡ್ಡ ರಥದಲ್ಲಿನ ಕೆತ್ತನೆಯ ನೋಟ:



ನಾಯಕನಹಟ್ಟಿ ತಿಪ್ಪೇಸ್ವಾಮಿಯ ಹಳೆಯ ರಥದ ಗಾಲಿಗಳು:



ತಿಪ್ಪೇಸ್ವಾಮಿ ಹಳೆಯ ರಥದ ಗಾಲಿಗಳು: (ಉಚ್ಚಯ)ಗಾಲಿಗಳು:





ತಿಪ್ಪೇಸ್ವಾಮಿ ರಥದ ಬೃಹತ್ ಪಂಚ ಗಾಲಿಗಳು:

ನಾಯಕನ ಹಟ್ಟಿ ತಿಪ್ಪೇಸ್ವಾಮಿಯ ಪಂಚಗಾಲಿ ರಥ:-
(ಬಿಸಿಲು, ಮಳೆಗಾಳಿಯಿಂದ ರಕ್ಷಣೆಗಾಗಿ ತೆಂಗಿನ ಗರಿಯಿಂದ ಮುಚ್ಚಿದ್ದಾರೆ.)



ನೇರ್ಲಗುಂಟೆ ಗ್ರಾಮದ ಆಂಜನೇಯ ದೇವರ ರಥ: ಕುಸುರಿ ಕೆತ್ತನೆ ಹಾಗೂ ನವಗ್ರಹ, 12ರಾಶಿ ಶಿಲ್ಪಗಳ ಕೆತ್ತನೆ ಇದೆ:





ನೇರ್ಲಗುಂಟೆ ಆಂಜನೇಯ ದೇವರರಥೋತ್ಸವಕ್ಕೆ ಅಲಂಕಾರಗೋಳ್ಳುತ್ತಿರುವ ಕಲ್ಲಿನ ಗಾಲಿಗಳ ರಥ ಹಾಗೂ ಉಚ್ಚಯ:



ನೇರ್ಲಗುಂಟೆ ಗ್ರಾಮದ ಆಂಜನೇಯ ದೇವರ ರಥ ಕುಸುರಿ ಕೆತ್ತನೆ ಹಾಗೂ ನವಗ್ರಹ, 12ರಾಶಿ ಶಿಲ್ಪಗಳ ಕೆತ್ತನೆ:



ಹೊಟ್ಟೆಪ್ಪನಹಳ್ಳಿ ಗ್ರಾಮದ ಸಿದ್ದೇಶ್ವರನ ರಥದ ಮೂಲೆಯ ನೋಟ:



ನೇರ್ಲಗುಂಟೆ ಗ್ರಾಮದವರಿಂದ ಮಾಹಿತಿ ಸಂಗ್ರಹ:

ರಾಮಜೋಗಿಹಳ್ಳಿ ಗ್ರಾಮದವರಿಂದ ಮಾಹಿತಿ ಸಂಗ್ರಹ:





ರಾಮಜೋಗಿಹಳ್ಳಿ ಗ್ರಾಮದ ಆಂಜನೇಯ ದೇವರ ರಥದ ಮುಂಭಾಗದ ನೋಟ:



ರಾಮಜೋಗಿಹಳ್ಳಿ ಗ್ರಾಮದ ಆಂಜನೇಯ ದೇವರ ರಥದ ಮುಂಭಾಗ ಹಾಗೂ ಪಕ್ಕದ ನೋಟ:



ರಥದ ಮುಂಭಾಗದ ತೊಲೆಗಳ ಅಂಚಿನಲ್ಲಿ ಕೆತನೆಗೊಂಡಿರುವ ನಂದಿ ಹಾಗೂ ಸಿಂಹ:



ರಾಮಜೋಗಿಹಳ್ಳಿ ಗ್ರಾಮದ ಆಂಜನೇಯ ದೇವರ ಉಚ್ಚಯ:



ಮದುರೆ ಗ್ರಾಮದ ಮಲ್ಲಿಕಾರ್ಜುನ ಸ್ವಾಮಿ(ಮಲ್ಲೇಶ್ವ ರ) ದೇವರ ರಥ:



ಮದುರೆ ಮಲ್ಲೇಶ್ವರನ ರಥ ಎಳೆಯುವ ತೆಂಗಿನ ಹಗ್ಗ:



ರಥದ ಮೇಲೆ ಇಡುವ ಕಬ್ಬಿಣದ ಪಟ್ಟಿ(ಸಲಾಕೆ)ಗಳಿಂದ ಮಾಡಿದ ಡೂಮು:



ಮದುರೆ ಗಾಮ್ರದವರಿಂದ ರಥದ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿರುವುದು:



ಮದುರೆ ಮಲ್ಲೇಶ್ವರ ದೇವರ ಉಚ್ಚಯ:



ಕುರುಡಿಹಳ್ಳಿ ಆಂಜನೇಯ ದೇವರ ರಥದ ಮುಂಭಾಗ, ರಾಮ,ಲಕ್ಷ್ಮಣ,ಸೀತಾದೇವಿ ಶಿಲ್ಪಗಳ ಕೆತ್ತನೆ:



ಕುರುಡಿಹಳ್ಳಿ ಆಂಜನೇಯನ ರಥ:



ಎನ್.ಗೌರೀಪುರದ ಉಮಾ ಮಹೇಶ್ವರನ ರಥದ ಕಲ್ಲಿನ ಗಾಲಿಗಳು:



ಎನ್.ಗೌರೀಪುರದ ಉಮಾ ಮಹೇಶ್ವರ ದೇವರ ರಥದಲ್ಲಿ ಕೆತ್ತನೆಗೊಂಡಿರುವ ಶಿಲ್ಪಗಳು: ತಿಪ್ಪೇರುದ್ರಸ್ವಾಮಿ, ಬಾಲಗ್ರಹ, ಸುಬ್ರಮಣ್ಯ ಹಾಗೂ ಕುದುರೆಗಳ ಸಾಲು:



ಎನ್. ಗೌರೀಪುರ ಗ್ರಾಮದ ಉಮಾ ಮಹೇಶ್ವರ ದೇವರ ರಥದ ತೊಲೆಗಳ ತುದಿಯಲ್ಲಿ ಕೆತ್ತನೆಗೊಂಡಿರುವ ಆನೆಗಳ ಶಿಲ್ಪಗಳು:



ಎನ್.ಗೌರೀಪುರ ದೇವಸ್ಥಾನದ ಸಮಿತಿಯವರಿಂದ ಮಾಹಿತಿ ಸಂಗ್ರಹ:

ಚಳ್ಳಕೆರೆ ವೀರಭದ್ರಸ್ವಾಮಿ ದೇವರ ಕಲ್ಲಿನ ಗಾಲಿಯ ರಥ:





ಚಳ್ಳಕೆರೆ ವೀರಭದ್ರಸ್ವಾಮಿ ದೇವರ ರಥ:



ಚಳ್ಳಕೆರೆ ಶ್ರೀ ರಾಮ ದೇವರ ರಥ:



ತಿಮ್ಮಪ್ಪಯ್ಯನಹಳ್ಳಿ ಕರಿಬಸವೇಶ್ವರ ದೇವರ ರಥ:



ಎನ್.ಮಹದೇವಪುರ ಗ್ರಾಮದ ಮಹಲಿಂಗೆಶ್ವರನ ಕಲ್ಲಿನ–
ಗಾಲಿಯ ರಥ:



ಎನ್.ಮಹದೇವಪುರದ ಮಹಲಿಂಗೇಶ್ವರನ ರಥಕ್ಕೆ
ಹಾಕಿರುವ ತೊಲೆಗಳ ಅಂಚಿನಲ್ಲಿ ಆನೆಗಳ ಕೆತ್ತನೆ:



ಚೌಡಮ್ಮನಹಳ್ಳಿ ಕಾವಲು (ಎತ್ತನಹಟ್ಟಿ) ರಥೋತ್ಸವಕ್ಕೆ–
ಸಿದ್ಧವಾಗುತ್ತಿರುವ ಚೌಡಮ್ಮ ದೇವರ ರಥ:



ರಥೋತ್ಸವದ ಸಮಯದಲ್ಲಿ ನಂದಿಕೋಲಿನ ಕುಣಿತಕ್ಕೆ
ಸಿದ್ದವಾಗಿರುವ ನಂದಿಕೋಲುಗಳು:



ಗಜ್ಜುಗಾನಹಳ್ಳಿ ಗ್ರಾಮದ ಬಸವೇಶ್ವರ ದೇವರ ರಥ:



ಚಿಕ್ಕಹಳ್ಳಿ ಗ್ರಾಮದ ಕರಿಬಸವೇಶ್ವರ ದೇವರ ತೇರು:



ಮಲ್ಲೂರಹಳ್ಳಿ ಕೊಲ್ಲಾಪುರದಮ್ಮನ ಕಲ್ಲಿನ ಗಾಲಿಗಳ ರಥ, ಆನೆಗಳು, ಕುದುರೆಗಳ ಕೆತ್ತನೆ ಇದೆ:



ಮಲ್ಲೂರಹಳ್ಳಿ ಕೊಲ್ಲಾಪುರದಮ್ಮನ ರಥದಲ್ಲಿ ಆನೆಗಳು, ಶನಿದೇವ, ಗಣೇಶ, ಗಜಲಕ್ಷ್ಮಿ ಹಾಗೂ ಕುಸುರಿ ಕೆತ್ತನೆ :



ಹಿರೇಹಳ್ಳಿ ಚಿಂತಾಮಣೇಶ್ವರ ರಥ, ಶಿವ ಪಾರ್ವತಿ ಕೆತ್ತನೆ ನೋಟ:



ಹಿರೇಹಳ್ಳಿ ಚಿಂತಾಮಣೇಶ್ವರ ರಥದಲ್ಲಿನ ಸಿಂಹದ ಕೆತ್ತನೆ :



ರಥದ ತೊಲೆಯ ಮೇಲಿನ ಕುಸುರಿ ಹಾಗೂ ನಗ್ನ ಕೆತ್ತನೆ:



ರಥದಲ್ಲಿ ಇಡುವ ಕಬ್ಬಿಣದ ಡೂಮು:





ದುಗ್ಗಾವರ ಲಕ್ಷ್ಮಿರಂಗನಾಥನ ರಥದ ಮರದ ಗಾಲಿಗಳು, ತೊಲೆಗಳ ತುದಿಯಲ್ಲಿ ಕೆತ್ತನೆಗೊಂಡಿರುವ ಸಾಧಾರಣ ಶೈಲಿಆನೆಗಳು:



ದುಗ್ಗಾವರದ ಗ್ರಾಮದ ಲಕ್ಷ್ಮಿರಂಗನಾಥ ದೇವರ ರಥ:



ದುಗ್ಗಾವರ ಗ್ರಾಮದ ಲಕ್ಷ್ಮಿರಂಗನಾಥ ದೇವರ ರಥ:



ತಳಕು ಗ್ರಾಮದ ವೀರಭದ್ರ ದೇವರ ಸಾಧಾರಣ ಕೆತ್ತನೆಯ ರಥ:



ಮನ್ನೇಕೋಟೆ ಗ್ರಾಮದ ರೇವಣಸಿದ್ದೇಶ್ವರ ದೇವರ ರಥ:



ಬಂಜಗೆರೆ ಆಂಜನೇಯ ದೇವರ ರಥ:



ಬೇಡರೆಡ್ಡಿಹಳ್ಳಿ ಬಸವಣ್ಣ ದೇವರ ಉಚ್ಚಯ:



ರಥಗಳ ಮೇಲೆ ಇಡುವ ಕಬ್ಬಿಣದ ಡೂಮು:



ದೇವರೆಡ್ಡಿಹಳ್ಳಿ ಗ್ರಾಮದ ಆಂಜನೇಯ ಸ್ವಾಮಿ ಮರದ ಗಾಲಿ ರಥ:



ಹೊನ್ನುರು ಆಂಜನೇಯ ದೇವರ ಮರದ ಗಾಲಿ ರಥ:



ಮಲ್ಲಸಮುದ್ರ ಗ್ರಾಮದ ಬಸವಣ್ಣ ದೇವರ ರಥ:




ಮಲ್ಲಸಮುದ್ರ ಗ್ರಾಮದ ಬಸವಣ್ಣ ದೇವರ ಕಲ್ಲಿನ ಗಾಲಿ ರಥ:



ಹನುಮಂತನಹಳ್ಳಿ ಗ್ರಾಮದ ಆಂಜನೇಯನ ರಥದ ಕುಸುರಿ ಕೆತ್ತನೆ:



ಹನುಮಂತನಹಳ್ಳಿ ಆಂಜನೇಯನ ಮರದ ಗಾಲಿ ರಥ:



ಕಾಲುವೆಹಳ್ಳಿ ಗ್ರಾಮದ ಬಂಡೆ ಬಸವೇಶ್ವರ ದೇವರ ರಥ:




ನಾಗಗೊಂಡನಹಳ್ಳಿ ಆಂಜನೇಯ ದೇವರ ರಥ:



ನಾಗಗೊಂಡನಹಳ್ಳಿ ಆಂಜನೇಯ ದೇವರ ರಥದ ಕುಸುರಿ ಕೆತ್ತನೆ:



ನಾಗಗೊಂಡನಹಳ್ಳಿ ಚಿಲುಮೆ ಸ್ವಾಮಿ ಹಾಗೂ ಈಶ್ವರ ದೇವರುಗಳ ಪಲ್ಲಕ್ಕಿಗಳು:



ನಾಗಗೊಂಡನಹಳ್ಳಿ ಆಂಜನೇಯನ ಹಳೆಯ ರಥದ ಕಲ್ಲಿನ ಗಾಲಿಗಳು:



ನಾಗಗೊಂಡನಹಳ್ಳಿ ಚಿಲುಮೆಸ್ವಾಮಿ ರಥ:



ರಥೋತ್ಸವದಲ್ಲಿನ ಕುಣಿತದ ನಂದಿಕೋಲುಗಳು:



ದೇವರ ಉತ್ಸವಗಳಲ್ಲಿ ಬಳಸುವ ಛತ್ರಿಗಳು:



ನಂದಿಕೋಲನ್ನು ಧರಿಸ ಕುಣಿಯುತ್ತಿರುವುದು:



ಕಾಮಸಮುದ್ರ ನಾಗೇಶ್ ತಾತನ ರಥ:



ಮತ್ತಸಮುದ್ರ ಗ್ರಾಮದ ಆಂಜನೇಯನ ರಥ:



ಪಗಡಲಬಂಡೆ ಗ್ರಾಮದ ಬಸವಣ್ಣನ ರಥ:



ಪಗಡಲಬಂಡೆ ಗ್ರಾಮದ ಬಸವಣ್ಣನ ರಥ ಹಾಗೂ ಕುಸುರಿ ಕೆತ್ತನೆ:



ಪಗಡಲಬಂಡೆ ಗ್ರಾಮದ ಬಸವಣ್ಣನ ರಥದಲ್ಲಿರುವ ನಗ್ನ ಕೆತ್ತನೆಗಳು:



ಚೌಳೂರು ಗ್ರಾಮದ ವೀರಭದ್ರಸ್ವಾಮಿ ಕಲ್ಲಿನ ಗಾಲಿಯ ರಥ:



ಸೂರನಹಳ್ಳಿ ಗ್ರಾಮದ ಆಂಜನೇಯನ ರಥ:



ಸೂರನಹಳ್ಳಿ ಗ್ರಾಮದ ಆಂಜನೇಯನ ರಥದಲ್ಲಿನ ಕುಸುರಿ ಕೆತ್ತನೆ ಹಾಗೂ ಶಿಲ್ಪಗಳು:



ಓಬಳಾಪುರ(ಕೋಟೆ ಓಬಳಾಪುರ) ಗ್ರಾಮದ ರಥ:



ರತದಲ್ಲಿ ಕೆತ್ತನೆಗೊಂಡಿರುವ ನೋಟ:




ಬೆಳಗೆರೆ ಲಕ್ಷ್ಮಿರಂಗನಾಥನ ಕಲ್ಲಿನ ಗಾಲಿ ರಥ:



ಕಾಪರಹಳ್ಳಿ ಕಾಟಮಹಲಿಂಗೇಶ್ವರನ ಲೋಹದ ತೇರು:



ಕಾಪರಹಳ್ಳಿ ಕಾಟಮಹಲಿಂಗೇಶ್ವರನ ಲೋಹದ ತೇರು:



ಕಾಟಮಹಲಿಂಗೇಶ್ವರನ ಹಳೇ ಉಚ್ಚಯದ ಗಾಲಿಗಳು:



ಸಂಪ್ರದಾಯ ಶಿಲ್ಪಿ ಶೇಖರಪ್ಪ ಮಣ್ಣಿನ ಶಿಲ್ಪಗಳನ್ನು ಸಹಾಯಕರ ಜೊತೆಗೆ ಮಾಡುತ್ತಿರುವುದು:





ಮರ ಮಾಧ್ಯಮದಲ್ಲಿ ಮಾಡಿರುವ ಸೋಮಗಳು (ಮುಖವಾಡಗಳು):



ಕಾಪರಹಳ್ಳಿ ಗ್ರಾಮದ ಕಾಟಮಹಲಿಂಗೇಶ್ವರ ದೇವರ ಪಲ್ಲಕ್ಕಿ:


ಚೌಳೂರು ಗ್ರಾಮದ ವೀರಭದ್ರ ದೇವರ ಪಲ್ಲಕ್ಕಿ:


ನಾಯಕನಹಟ್ಟಿ ಈಶ್ವರನ ಉಚ್ಚಯ:


ಹೀರೇಹಳ್ಳಿ ಚಿಂತಾಮಣೇಶ್ವರನ ಹಳೆಯ ತೇರು:

ಬೆಳಗೆರೆ ಗ್ರಾಮದ ಐತಿಹಾಸಿಕ ರಂಗನಾಥ ದೇವಾಲಯದ ಮೇಲಿನ ಗಾರೆ ಮಾಧ್ಯಮದ ಶಿಲ್ಪಗಳು:





ಕಲ್ಲಿನಿಂದ ನಿರ್ಮಿಸಿರುವ ಸಾಣೇಕೆರೆ
ಕರಿಯಮ್ಮ ದೇವಾಲಯ,
ಶಿಖರ ಹಾಗೂ ಸಿಮೆಂಟ್
ಮಾಧ್ಯಮದಿಂದ
ಮಾಡಿರುವ ಶಿಲ್ಪಗಳು,
ಸಂಪ್ರದಾಯ ಶಿಲ್ಪಿ:
ಸೊಂಡೇಕೆರೆ ಲೋಕೇಶ್

****



ಚಿತ್ರದುರ್ಗ ಜಿಲ್ಲೆ ಸಂಪ್ರದಾಯ ಶಿಲ್ಪಕಲೆ:
ಚಳ್ಳಕೆರೆ ತಾಲ್ಲೂಕಿನ ಮರ ಮಾಧ್ಯಮದ ರಥ ಶಿಲ್ಪಗಳನ್ನು ಅನುಲಕ್ಷಿಸಿ.

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸಿದ ಫೆಲೋಷಿಪ್ ಪ್ರಬಂಧ)



ಸಂಶೋಧಕರ:
ಸಾಣೇಕೆರೆರಘು

ಮಾರ್ಗದರ್ಶಕರು
ಡಾ: ಎಸ್.ಸಿ.ಪಾಟೀ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಕನ್ನಡ ಭವನ, ಚಾಲುಕ್ಯ ವಿಭಾಗ, ಜೆ.ಸಿ.ರಸ್ತೆ,
ಬೆಂಗಳೂರು-560002.
ಮಾರ್ಚ್-2017